TIGHT BINDING

UNIVERSAL
LIBRARY
OU_202125
UNIVERSAL
LIBRARY

ಶ್ರೀ:

ವ್ಯಾಸಮಹರ್ಷಿಪ್ರಣೀತ

ಶ್ರೀ ಮಹಾಭಾರತವು.

ವಿರಾಟಪರ್ವವು.

ಕರ್ಣಾಟಕ ವಚನವು.

ಪಂಡಿತ ದೇವನಶಿಖಾಮಣಿ ಅಳಸಿಂಗರಾಚಾರ್ಯ ವಿರಚಿತವು.



ಸತ್ಯಬೋಧನ ಪುಸ್ತಕ ಭಂಡಾರ
ಪ್ರಕಾಶಕರು: ಬೆಂಗಳೂರು ನಗರ.
ಕರ್ಣಾಟಕ ಡಿಪೊ,
ನಂಬ್ರ 7, ತೇರಡಿಬೀದಿ, ತಿರುವಲ್ಲಿಕ್ಕೇಣಿ, ಮದ್ರಾಸು.


1931

ಎಂ. ಎಸ್. ರಾವ್ ಎಂಡ್ ಕಂಪೆನಿ

CHECKED. 1951
All Rights Reserved
CHECKED 1956
Checked 1965

ಕಾಪಿರೈಟ್, ೧೯೩೧–ಈ ಪುಸ್ತಕದ ಸರ್ವಸ್ವಾತಂತ್ರ್ಯವೂ ಇದರ ಪ್ರಕಾಶಕರಿಗೆ ಸೇರಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲಿ, ಅಥವಾ ಇದರ ಯಾವುದಾದರೂ ಭಾಗವನ್ನಾಗಲಿ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಬಾಧ್ಯತೆಯಿರದು. ಈ ಪುಸ್ತಕದೊಳಗಿನ ಭಾವಗಳನ್ನಾಗಲಿ, ಪದಗಳನ್ನಾಗಲಿ, ಚಿತ್ರಪಟಗಳನ್ನಾಗಲಿ ಇತರರು ಕಾಪೀಮಾಡಿದಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವುದು. ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕಾಪೀರೈಟನ್ನು ಉಲ್ಲಂಘಿಸಿದವರು, ನಷ್ಟದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ.

ವಿಜ್ಞಾಪನೆ.




ಸಂಸ್ಕೃತ ಮೂಲಗ್ರಂಥವನ್ನು ಸರಿಯಾಗಿ ಅನುಸರಿಸಿ, ಶ್ರೀಮದ್ರಾಮಾಯಣ, ಭಾಗವತ, ಭಾರತಗಳೆಂಬೀ ಮೂರು ಗ್ರಂಥಗಳನ್ನೂ ಕನ್ನಡಕ್ಕೆ ಪರಿವರ್ತಿಸಬೇಕೆಂಬುದೇ ನನ್ನ ಪ್ರಥಮ ಸಂಕಲ್ಪವು. ಅದರಂತೆ, ಭಗವದನುಗ್ರಹದಿಂದಲೂ, ಜನರಿಂದ ಸರ್ವತೋಮುಖವಾಗಿ ಒದಗಿಬಂದ ಪ್ರೋತ್ಸಾಹದಿಂದಲೂ, ಮೊದಲಿನ ಗ್ರಂಥಗಳೆರಡೂ ಪೂರ್ಣವಾದುವು. ಅದೇ ಪ್ರಯತ್ನವು ಅನುಸ್ಯೂತವಾಗಿ ನಡೆದು ಬಂದಿದ್ದರೆ, ಇಷ್ಟರೊಳಗಾಗಿ ಭಾರತದಲ್ಲಿ ಅನೇಕ ಪರ್ವಗಳು ಹೊರಗೆ ಬರಬಹುದಾಗಿದ್ದಿತು. ರಾಮಾಯಣ ಭಾಗವತಗಳ ಪುನರ್ಮುದ್ರಣಗಳಿಂದಲೂ, ಇತರ ಕಾರ್ಯಗೌರವದಿಂದಲೂ, ಅದಕ್ಕೆ ಅವಕಾಶವಿಲ್ಲದೆ ಇದುವರೆಗೆ ಕಾಲವಿಳಂಬವಾಯಿತು.

ಈ ಮಹಾಭಾರತದ ಮೇಲ್ಮೈಯನ್ನು ಕುರಿತು ಇಲ್ಲಿ ನಾನು ಹೆಚ್ಚೇನೂ ಹೇಳಬೇಕಾಗಿಲ್ಲ. "ಭಾರತಃ ಪಂಚಮೋ ವೇದಃ" ಎಂಬಂತೆ ಇದು ಐದನೆಯ ವೇದವೆನಿಸಿದೆ. "ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನತತ್ ಕ್ವಚಿತ್" ಎಂಬಂತೆ, ಈ ಮಹಾಭಾರತದಲ್ಲಿ ಹೇಳದ ವಿಷಯಗಳು ಬೇರೆಲ್ಲಿಯೂ ಇರಲಾರವು. ಆಗಾಗ ಮಹಾಭಾರತಕಥೆಯನ್ನು ಕೇಳಿದುದರಿಂದುಂಟಾದ ಮನಃಪರಿಪಾಕವೇ ಶಿವಾಜಿಗೆ ದೊಡ್ಡದೆಂದು ಚಕ್ರಾಧಿಪತ್ಯವನ್ನು ಸ್ಥಾಪಿಸಬೇಕೆಂಬ ವೀರ್ಯೋತ್ಸಾಹವನ್ನು ಹುಟ್ಟಿಸಲು ಕಾರಣವಾಯಿತು.

ಇಂತಹ ಅಮೂಲ್ಯಗ್ರಂಥವೆನಿಸಿದ ಸಂಸ್ಕೃತ ಮಹಾಭಾರತದಲ್ಲಿರುವ ಸಂಪೂರ್ಣರಸಾನುಭವವು, ಸಾಮಾನ್ಯವಾಗಿ ಕನ್ನಡವನ್ನೋದಬಲ್ಲ ಹೆಂಗಸರು, ಮಕ್ಕಳು, ಮೊದಲಾಗಿ, ಎಲ್ಲರಿಗೂ ಸುಲಭಗ್ರಾಹ್ಯವಾಗುವಂತೆ ಈಗ ಪ್ರತ್ಯೇಕಸಂಚಿಕೆಗಳಾಗಿ ಪ್ರಕಟಿಸಲಾರಂಭಿಸಿದೆ. ಎರಡು ಅಥವಾ ಮೂರು ತಿಂಗಳಿಗೆ ಒಂದು ಸಂಚಿಕೆಯಂತೆ ಹೊರಡಿಸುವುದಾಗಿ ಉದ್ದೇಶಿಸಿದೆ.

ಶ್ರೀಮದ್ರಾಮಾಯಣದಲ್ಲಿ ಸುಂದರಕಾಂಡದಂತೆ ಮಹಾಭಾರತದಲ್ಲಿ ವಿರಾಟಪರ್ವವು ಬರೆಯುವವರಿಗೂ, ಓದುವವರಿಗೂ, ಶ್ರೇಯಸ್ಕರವೆನಿಸಿರುವುದರಿಂದ, ಈಗ ವಿರಾಟಪರ್ವವನ್ನೇ ಮೊದಲನೆಯ ಸಂಚಿಕೆಯನ್ನಾಗಿ ಆರಂಭಿಸಿದೆ. ಆಸ್ತಿಕರೂ ಮತ್ತು ಭಾಷಾಭಿಮಾನಿಗಳೂ ಈ ಕಾರ್ಯಕ್ಕೆ ಪ್ರೋತ್ಸಾಹಕೊಟ್ಟಷ್ಟೂ, ಗ್ರಂಥವು ಬೇಗನೆ ಪೂರ್ತಿಯಾಗಲು ಸೌಕರ್ಯವನ್ನು ಕಲ್ಪಿಸಿದಂತಾಗುವುದು.

ಗ್ರಂಥಕರ್ತ.



ವಿಷಯಾನುಕ್ರಮಣಿಕೆ.

ಪುಟ

ಪಾಂಡವಪ್ರವೇಶಪರ್ವವು.

೧. ಯುಧಿಷ್ಠಿರನು ಮೃಗಾಪಹೃತವಾದ ಅರಣಿಪಾತ್ರವನ್ನು ತಂದು ಬ್ರಾಹ್ಮಣನಿಗೆ ಒಪ್ಪಿಸಿ, ಧೌಮ್ಯನೊಡನೆ ಅಜ್ಞಾತವಾಸಕ್ಕಾಗಿ ಮಂತ್ರಾಲೋಚನೆ ಮಾಡಿದುದು ೧

೨. ಧರ್ಮರಾಜನು ವಿರಾಟನಗರದಲ್ಲಿ ಅಜ್ಞಾತವಾಸವನ್ನು ನಡೆಸುವುದಾಗಿ ತೀರ್ಮಾನಿಸಿ, ತಾನು ಯತಿವೇಷದಿಂದ ಅಲ್ಲಿರುವುದಾಗಿ ತಿಳಿಸಿದುದು ೭

೩. ಭೀಮನು ಅಡಿಗೆಯವನ ವೇಷದಿಂದಲೂ, ಅರ್ಜುನನು ನಪುಂಸಕ ವೇಷದಿಂದಲೂ ವಿರಾಟನಲ್ಲಿರುವುದಾಗಿ ಹೇಳಿದುದು . . ೧೧

೪. ನಕುಲಸಹದೇವರೂ, ದ್ರೌಪದಿಯೂ ತಮ್ಮತಮ್ಮ ನಿರ್ಣಯಗಳನ್ನು ತಿಳಿಸಿದುದು ೧೭

೫. ಧರ್ಮರಾಜನು ತನ್ನೊಡನೆ ಬಂದಿದ್ದ ಇಂದ್ರಸೇನಾದಿಗಳನ್ನು ಬೇರೆಬೇರೆ ಕಡೆಗಳಿಗೆ ಹೋಗುವಂತೆ ಸೂಚಿಸಿದುದು. ರಾಜಸನ್ನಿಧಿಯಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಕುರಿತು ಪಾಂಡವರಿಗೆ ಧೌಮ್ಯನ ಬುದ್ಧಿವಾದಗಳು ೨೨

೬. ಪಾಂಡವರು ವಿರಾಟನಗರದ ಸಮೀಪಕ್ಕೆ ಬಂದುದು . . ೩೧

೭. ಪಾಂಡವರು ವಿರಾಟನಗರದ ಹೊರಗಿನ ಶ್ಮಶಾನಕ್ಕೆ ಸಮೀಪವಾಗಿದ್ದ ಬನ್ನಿಯ ಮರದಲ್ಲಿ ತಮ್ಮ ಆಯುಧಗಳನ್ನು ಮರೆಸಿಟ್ಟುದು . ೩೪

೮. ವಿರಾಟನಗರಪ್ರವೇಶಕ್ಕೆ ಮೊದಲು ಧರ್ಮರಾಜನು ದುರ್ಗಾಸ್ತುತಿಯನ್ನು ಮಾಡಿದುದು ೪೦

೯. ಯುಧಿಷ್ಠಿರನು ಸನ್ಯಾಸಿವೇಷದಿಂದ ವಿರಾಟನ ಬಳಿಗೆ ಬಂದುದು . ೪೪

೧೦. ಅಡಿಗೆಯವನ ವೇಷದಿಂದ ಬಂದ ಭೀಮನನ್ನು ವಿರಾಟನು ತನ್ನ ಪಾಕಶಾಲೆಯ ಅಧಿಕಾರಕ್ಕೆ ನಿಯಮಿಸಿದುದು . . ೪೮

೧೧. ಅರ್ಜುನನು ನಪುಂಸಕವೇಷದಿಂದ ವಿರಾಟನ ಸಭೆಗೆ ಬಂದುದು. ವಿರಾಟನು ತನ್ನ ಕುಮಾರಿಗೆ ನಾಟ್ಯಾಚಾರ್ಯನಾಗಿರುವಂತೆ ನಿಯಮಿಸಿದುದು ೫೬

೧೨. ನಕುಲನು ವಿರಾಟನಲ್ಲಿಗೆ ಬಂದು, ಅಶ್ವಪಾಲಕನಾಗಿ ಸೇರಿದುದು . ೬೦

೧೩. ಗೋಪಾಲವೇಷದಿಂದ ತನ್ನಲ್ಲಿಗೆ ಬಂದ ಸಹದೇವನನ್ನು ವಿರಾಟನು ತನ್ನ ಗೋವುಗಳ ರಕ್ಷಣೆಗಾಗಿ ನಿಯಮಿಸಿದುದು . . ೬೨

೧೪. ದ್ರೌಪದಿಯು ಸೈರಂಧ್ರಿಯ ವೇಷದಿಂದ ಸುದೇಷ್ಣೆಯಬಳಿಗೆ ಬಂದು ಸೇರಿದುದು ೬೬

ಸಮಯಪಾಲನ ಪರ್ವವು.

೧೫. ಪಾಂಡವರು ತಮ್ಮ ತಮ್ಮ ಕಾರ್ಯಗಳಿಂದ ವಿರಾಟನನ್ನು ಸಂತೋಷಗೊಸಿದುದು. ಭೀಮನು ಮಹಾಮಲ್ಲನೆಂಬ ಜಟ್ಟಿಯನ್ನು ಕೊಂದುದು ೭೫

ಕೀಚಕವಧ ಪರ್ವವು.

೧೬. ದ್ರೌಪದಿಯು ತನ್ನನ್ನು ಕಾಮಿಸಿದ ಕೀಚಕನನ್ನು ಕ್ರೂರವಾಕ್ಯಗಳಿಂದ ಧಿಕ್ಕರಿಸಿದುದು ೮೨

೧೭. ದ್ರೌಪದಿಯು ಕೀಚಕನನ್ನು ಕಠಿನವಾಕ್ಯಗಳಿಂದ ನಿಂದಿಸಿ ನಿರಾಕರಿಸಿದುದು ೮೬

೧೮. ಕೀಚಕನ ನಿರ್ಬಂಧಕ್ಕಾಗಿ ಸುದೇಷ್ಣೆಯು ಮಧುವನ್ನು ತರುವ ವ್ಯಾಜದಿಂದ ದ್ರೌಪದಿಯನ್ನು ಅವನ ಮನೆಗೆ ಕಳುಹಿಸಿದುದು . ೮೮

೧೯. ದ್ರೌಪದಿಯು ಸೂರ್ಯಾದಿದೇವತೆಗಳನ್ನು ಪ್ರಾರ್ಥಿಸಿದುದು. ಕೀಚಕನು ದ್ರೌಪದಿಯನ್ನು ಕಾಲಿಂದೊದೆದಾಗ, ಸೂರ್ಯದೂತನೊಬ್ಬನು ಬಂದು ಕೀಚಕನನ್ನು ಹೊಡೆದು ನೆಲಕ್ಕೆ ಕೆಡಹಿದುದು. ಧರ್ಮರಾಜನು ಕೀಚಕನನ್ನು ಕೊಲ್ಲಬೇಕೆಂದಿದ್ದ ಭೀಮನನ್ನು ಸಂಜ್ಞೆಯಿಂದ ನಿವಾರಿಸಿದುದು . . . ೯೫

೨೦. ಕೀಚಕನನ್ನು ದಂಡಿಸದಿದ್ದುದಕ್ಕಾಗಿ ವಿರಾಟನನ್ನು ದ್ರೌಪದಿಯು ನಿಂದಿಸಿದುದು. ವಿರಾಟನು ಸಮಾಧಾನವನ್ನು ಹೇಳಿದುದು. ಯುಧಿಷ್ಠಿರನು (ಕಂಕಸನ್ಯಾಸಿಯು) ದ್ರೌಪದಿಯನ್ನು ಸಮಾಶ್ವಾಸಿಸಿದುದು. ೧೦೧

೨೧. ಕೀಚಕನ ಉತ್ಪತ್ತಿ ಮೊದಲಾದ ವೃತ್ತಾಂತಗಳು . . ೧೧೧

೨೨. ಕೀಚಕನನ್ನು ಕೊಲ್ಲಿಸಬೇಕೆಂದು ದ್ರೌಪದಿಯು ಅಡಿಗೆಯ ಮನೆಯಲ್ಲಿದ್ದ ಭೀಮಸೇನನ ಬಳಿಗೆ ಹೋಗಿ ತನ್ನ ದುಃಖವನ್ನು ಹೇಳಿಕೊಂಡುದು ೧೧೫

೨೩. ದ್ರೌಪದಿಯು ಭೀಮನಿಗೆ ತನ್ನ ಹಿಂದಿನ ವೈಭವಗಳನ್ನು ನೆನಪಿಗೆ ತಂದು, ಕೀಚಕನನ್ನು ಕೊಲ್ಲುವುದಕ್ಕಾಗಿ ಪ್ರೋತ್ಸಾಹಗೊಳಿಸಿದುದು . ೧೨೮

೨೪. ದ್ರೌಪದಿಗೂ, ಭೀಮನಿಗೂ ನಡೆದ ಸಂವಾದಗಳು. ಭೀಮನು ಕೀಚಕನನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಿ ಅದಕ್ಕೆ ಉಪಾಯವನ್ನು ಹೇಳಿದುದು ೧೩೨

೨೫. ಭೀಮನ ಸೂಚನೆಯಂತೆ ದ್ರೌಪದಿಯು ಕೀಚಕನನ್ನು ಒಂದು ಸಂಕೇತ ಸ್ಥಳಕ್ಕೆ ಬರುವಹಾಗೆ ಹೇಳಿ ಭೀಮನಿಗೆ ಆ ಸಂಗತಿಯನ್ನು ತಿಳಿಸಿದುದು. ೧೩೮

೨೬. ಕೀಚಕನು ಬರುವುದಕ್ಕೆ ಮುಂದಾಗಿಯೇ ಭೀಮನು ನಾಟ್ಯಶಾಲೆಗೆ ಬಂದು, ಅಲ್ಲಿನ ಹಾಸಿಗೆಯಮೇಲೆ ಮಲಗಿದ್ದುದು. ದ್ರೌಪದಿಯೆಂದು ಕೀಚಕನು ಭೀಮನ ಮೈಯನ್ನು ಮುಟ್ಟಿ ಮಾತಾಡಿಸಿದುದು. ಭೀಮನು ಕೀಚಕನನ್ನು ಹಿಡಿದು ಕೊಂದುದು. ಉಪಕೀಚಕರು ಅಲ್ಲಿಗೆ ಬಂದುದು . . . ೧೪೪

೨೭. ಕೀಚಕನ ವಧದಿಂದ ಕೋಪಗೊಂಡ ಉಪಕೀಚಕರು ಕೀಚಕನ ಮೃತ ಶರೀರದೊಡನೆ ಶವವಾಹನದಲ್ಲಿ ದ್ರೌಪದಿಯನ್ನೇರಿಸಿ, ಶ್ಮಶಾನಕ್ಕೆ ಸಾಗಿಸುತ್ತಿರುವಾಗ ಅವಳ ಆಕ್ರಂದನವನ್ನು ಕೇಳಿ ಭೀಮನು ಬಂದು ಉಪಕೀಚಕರನ್ನು ಕೊಂದುದು. . . ೧೪೯

೨೮. ಪುರಜನರು ಉಪಕೀಚಕರ ವಧವನ್ನು ವಿರಾಟನಿಗೆ ತಿಳಿಸಿ, ಸೈರಂಧ್ರಿಯನ್ನು ಪಟ್ಟಣದಿಂದ ಹೊರಡಿಸಲು ಪ್ರೇರಿಸಿದುದು. ಈ ರಾಜಾಜ್ಞೆಯನ್ನು ಸುದೇಷ್ಣೆಯು ದ್ರೌಪದಿಗೆ ಹೇಳಲು, ದ್ರೌಪದಿಯು ಒಂದು ತಿಂಗಳ ಅವಧಿಯನ್ನು ಕೇಳಿಕೊಂಡುದು . . ೧೫೬

ಗೋಗ್ರಹಣಪರ್ವವು.

೨೯. ಪಾಂಡವರನ್ನು ಕಂಡುಹಿಡಿಯುವುದಕ್ಕಾಗಿ ಹೊರಟ ದುರ್ಯೋಧನನ ಚಾರರು ವಿರಾಟನಗರದಲ್ಲಿ ನಡೆದ ಕೀಚಕವಧವನ್ನು ದುರ್ಯೋಧನನಿಗೆ ತಿಳಿಸಿದುದು . . . ೧೬೩

೩೦. ಪಾಂಡವರನ್ನು ಕಂಡುಹಿಡಿಯುವುದಕ್ಕಾಗಿ ದುರ್ಯೋಧನಾದಿಗಳ ಆ
ಲೋಚನೆ ೧೬೭

೩೧. ಕರ್ಣದುಶ್ಶಾಸನರ ಮಾತನ್ನು ಖಂಡಿಸಿ, ದ್ರೋಣಭೀಷ್ಮರಿಬ್ಬರೂ ಪಾಂಡ
ವರ ಗುಣಗಳನ್ನೆತ್ತಿ ಹೇಳಿ, ಅವರಿಗೆ ಅಂತಹ ಅಪಾಯವೇನೂ
ಬಾರದೆಂದೂ, ಅವರೊಡನೆ ಈಗಲೂ ಸಂಧಿಮಾಡಿಕೊಳ್ಳುವುದು
ಉಚಿತವೆಂದೂ ದುರ್ಯೋಧನನಿಗೆ ಬುದ್ಧಿವಾದ ಹೇಳಿದುದು . ೧೬೯

೩೨. ದುರ್ಯೋಧನನಿಗೆ ಕೃಪನ ಬುದ್ಧಿವಾದಗಳು. ಕೀಚಕವಧ ವೃತ್ತಾಂತ
ದಿಂದ ಪಾಂಡವರು ವಿರಾಟನಗರದಲ್ಲಿಯೇ ಇರಬೇಕೆಂದೂಹಿಸಿ,
ದುರ್ಯೋಧನನು ಗೋವುಗಳನ್ನು ಸೆರೆಹಿಡಿಯುವುದಕ್ಕಾಗಿ ವಿರಾಟ
ನಗರಕ್ಕೆ ಸುಶರ್ಮನನ್ನು ಕಳುಹಿಸಿದುದು . . ೧೭೫

೩೩. ಸುಶರ್ಮನು ಗೋವುಗಳನ್ನು ಹಿಡಿದ ವೃತ್ತಾಂತವನ್ನು ಗೋಪಾಲಕರು
ವಿರಾಟನಿಗೆ ತಿಳಿಸಿದುದು. ವಿರಾಟನು ಯುದ್ಧಕ್ಕಾಗಿ ಹೊರಟುದು.
ಯುಧಿಷ್ಠಿರರಾಜ್ಞೆಯಿಂದ ಅವನ ಸಹಾಯಕ್ಕಾಗಿ ಪಾಂಡವರು ಅವ
ನನ್ನು ಹಿಂಬಾಲಿಸಿದುದು . . . ೧೮೨

೩೪. ವಿರಾಟನ ಮತ್ತು ಸುಶರ್ಮನ ಸೈನ್ಯಗಳಿಗೆ ಯುದ್ಧವು. ಯುಧಿಷ್ಠಿ
ರಾದಿಗಳಿಂದ ಹತವಾದ ಸೈನ್ಯಗಳ ಸಂಖ್ಯೆ. ವಿರಾಟ ಸುಶರ್ಮರ
ಯುದ್ಧವು ೧೮೮

೩೫. ಸುಶರ್ಮನು ಯುದ್ಧದಲ್ಲಿ ವಿರಾಟನನ್ನು ಸೆರೆಹಿಡಿದುದು. ಯುಧಿಷ್ಠಿ
ರನ ಸೂಚನೆಯಮೇಲೆ ಭೀಮನು ವಿರಾಟನನ್ನು ಬಿಡಿಸಿ ಸುಶರ್ಮ
ನನ್ನು ಸೆರೆಹಿಡಿದುದು. ಯುಧಿಷ್ಠಿರನು ಕರುಣೆಯಿಂದ ಸುಶರ್ಮ
ನನ್ನು ಬಿಡಿಸಿ ಕಳುಹಿಸಿದುದು . . ೧೯೧

೩೬. ಯುಧಿಷ್ಠಿರನ ಪ್ರೇರಣೆಯಿಂದ ವಿರಾಟನ ದೂತರು ನಗರದಲ್ಲಿ ತಮ್ಮ
ಜಯವನ್ನು ಸಾರಿದುದು . . . ೧೯೮

೩೭. ದುರ್ಯೋಧನನು ಭೀಷ್ಮಾದಿಗಳೊಡನೆ ವಿರಾಟ ನಗರದ ಉತ್ತರಭಾಗಕ್ಕೆ
ಬಂದು, ಅಲ್ಲಿ ಗೋವುಗಳನ್ನು ಹಿಡಿದುಕೊಳ್ಳಲು, ಹಸುಗಳನ್ನು
ಕಾಯುತಿದ್ದ ಗೋಪಾಲನೊಬ್ಬನು, ವಿರಾಟಪುತ್ರನಾದ ಉತ್ತರನ
ಬಳಿಗೆ ಬಂದು ಆ ವೃತ್ತಾಂತವನ್ನು ತಿಳಿಸಿ ಮೊರೆಯಿಟ್ಟುದು . ೨೦೧

೩೮. ರಣಭೀರುವಾದ ಉತ್ತರನು, ತನಗೆ ಸರಿಯಾದ ಸಾರಥಿಯಿಲ್ಲದೆ ಯುದ್ಧ
ಕ್ಕೆ ಹೋಗಲು ಅಡ್ಡಿಯಾಗಿದೆಯೆಂದು ನೆವಹೇಳಲು, ದ್ರೌಪದಿಯು

ಅರ್ಜುನನ ಸಂಜ್ಞೆಯಮೇಲೆ, ಬೃಹನ್ನಳೆಯು ಸಾರಥ್ಯದಲ್ಲಿ ನಿಪುಣೆಯೆಂದು ಸೂಚಿಸಿದುದು. ತಂಗಿಯಾದ ಉತ್ತರೆಯ ಮೂಲಕವಾಗಿ ಉತ್ತರನು ಬೃಹನ್ನಳೆಯನ್ನು ಸಾರಥ್ಯಕ್ಕೆ ನಿಯಮಿಸಿಕೊಂಡುದು ೨೦೩

೩೯. ಉತ್ತರನು ಕೌರವಸೈನ್ಯವನ್ನು ಕಂಡು ಭಯಪಟ್ಟು ರಥದಿಂದ ದುಮುಕಿ ಓಡಿದುದು. ಅರ್ಜುನನು ಅವನನ್ನು ಬೆನ್ನಟ್ಟಿ ಹಿಡಿದು ತಂದುದು. ಅರ್ಜುನನ ವೇಷವನ್ನು ನೋಡಿ ಕೌರವರ ಸಂದೇಹವು ೨೧೩

೪೦. ಅರ್ಜುನನ ನಿರ್ಬಂಧದಿಂದ ಉತ್ತರನು ಬನ್ನಿಯಮರದ ಮೇಲೇರಿ ಆಯುಧಗಳನ್ನು ತೆಗೆದುಕೊಟ್ಟುದು . . ೨೨೩

೪೧. ಆ ಆಯುಧಗಳನ್ನು ನೋಡಿ ವಿಸ್ಮಿತನಾದ ಉತ್ತರನು, ಆ ಒಂದೊಂದು ಧನುಸ್ಸನ್ನು ತೆಗೆದು, ಅದು ಯಾರು ಯಾರ ಆಯುಧವೆಂದು ಪ್ರಶ್ನೆ ಮಾಡಿದುದು ೨೨೯

೪೨. ಅರ್ಜುನನು ತನ್ನ ಮತ್ತು ತನ್ನ ಸಹೋದರರ ಆಯುಧಗಳನ್ನೆಲ್ಲ ಪ್ರತ್ಯೇಕವಾಗಿ ಉತ್ತರನಿಗೆ ತೋರಿಸಿದುದು . . ೨೩೨

೪೩. ಅರ್ಜುನನು ಉತ್ತರನಿಗೆ ತನ್ನ ನಿಜಸ್ಥಿತಿಯನ್ನು ತಿಳಿಸಿ, ತಾನೇ ಅರ್ಜುನನೆಂದೂ, ಕಂಕವಲಲಾದಿಗಳು ತನ್ನ ಸಹೋದರರೆಂದೂ ಹೇಳಿದುದು. ಉತ್ತರನ ನಂಬಿಕೆಗಾಗಿ ತನ್ನ ದಶನಾಮಗಳನ್ನು ತಿಳಿಸಿದುದು ೨೩೫

೪೪. ಉತ್ತರನು ಬೃಹನ್ನಳೆಯನ್ನು ಅರ್ಜುನನೆಂದು ತಿಳಿದಮೇಲೆ, ತಾನು ಅಜ್ಞಾನದಿಂದ ಅವನಲ್ಲಿ ಮಾಡಿದ ಅಪರಾಧಕ್ಕಾಗಿ ಮನ್ನಣೆಯನ್ನು ಬೇಡಿದುದು. ಅರ್ಜುನನು ತನ್ನ ನಪುಂಸಕತ್ವಪ್ರಾಪ್ತಿಗೆ ಕಾರಣವನ್ನು ತಿಳಿಸಿದುದು . . . ೨೪೧

೪೫. ಅರ್ಜುನನು ಯುದ್ಧಪ್ರಯಾಣಕಾಲದಲ್ಲಿ ಉತ್ತರನ ಸಿಂಹಧ್ವಜವನ್ನು ರಥದಿಂದಿಳಿಸಿ, ತನ್ನ ವಾನರಧ್ವಜವನ್ನೇರಿಸಿದುದು. ತನ್ನ ಶಂಖಧ್ವನಿಗೆ ಭಯಪಟ್ಟು ಮೂರ್ಛಿತನಾದ ಉತ್ತರನಿಗೆ ಧೈರ್ಯಹೇಳಿ ಮುಂದೆ ಹೊರಟುದು . . . ೨೪೮

೪೬. ಈ ಶಂಖಧ್ವನಿ ಮೊದಲಾದುವುಗಳನ್ನು ಕೇಳಿ, ದ್ರೋಣನು ಅವನು ಅರ್ಜುನನೆಂದೇ ನಿಶ್ಚಯಿಸಿಕೊಂಡು, ಅದನ್ನು ದುರ್ಯೋಧನನಿಗೆ ತಿ

ಳಿಸಿ, ತಮ್ಮ ಮುಂದೆ ಕಾಣುತ್ತಿದ್ದ ದುರ್ನಿಮಿತ್ತಗಳನ್ನೂ ಅವನಿಗೆ ತೋರಿಸಿದುದು ೨೫೧

೪೭. ದ್ರೋಣನ ಮಾತಿನಿಂದ ಅರ್ಜುನನೆಂಬುದನ್ನು ತಿಳಿದು ಕೌರವಸೈನ್ಯವೆಲ್ಲವೂ ಯುದ್ಧೋತ್ಸಾಹವನ್ನು ಬಿಟ್ಟು ಚಿಂತಾಕುಲವಾಗಿ ಸುಮ್ಮನಿರುವುದನ್ನು ನೋಡಿ, ದುರ್ಯೋಧನನು ದ್ರೋಣನನ್ನು ನಿರಾಕರಿಸಿ, ಸೈನ್ಯವನ್ನು ಯುದ್ಧಕ್ಕೆ ಪ್ರೋತ್ಸಾಹಿಸಿದುದು . . ೨೫೩

೪೮. ಕರ್ಣನು ಆತ್ಮಶ್ಲಾಘನಪೂರ್ವಕವಾಗಿ ಅರ್ಜುನನನ್ನು ನಿರಾಕರಿಸಿ, ಸಲ್ಲದ ಪ್ರತಿಜ್ಞೆಯನ್ನು ಮಾಡಿದುದು . . ೨೫೭

೪೯. ಕೃಪನು ಅರ್ಜುನನನ್ನು ಪ್ರಶಂಸೆಮಾಡಿ, ಕರ್ಣನನ್ನು ನಿಂದಿಸಿದುದು. ತಮ್ಮಲ್ಲಿ ಯಾವನಿಗೂ ಏಕಾಕಿಯಾಗಿ ಅರ್ಜುನನ್ನು ಇದಿರಿಸುವುದು ಸಾಧ್ಯವಲ್ಲವೆಂದು ನಿಶ್ಚಯಿಸಿ, ಎಲ್ಲರೂ ಒಟ್ಟಾಗಿ ಯುದ್ಧಕ್ಕೆ ನಿಲ್ಲುವಂತೆ ನಿರ್ಧರಿಸಿದುದು . . . ೨೬೧

೫೦. ಕೃಪನು ತನ್ನನ್ನು ಧಿಕ್ಕರಿಸಿದುದಕ್ಕಾಗಿ ಕರ್ಣನು ಅವನನ್ನು ನಿಂದಿಸಿದುದು. ಕೃಪನ ನಿಂದೆಯನ್ನು ಕೇಳಲಾರದೆ, ಅಶ್ವತ್ಥಾಮನು ಕರ್ಣದುರ್ಯೋಧನರಿಬ್ಬರನ್ನೂ ನಿಂದಿಸಿದುದು . . ೨೬೪

೫೧. ಭೀಷ್ಮನು ಕೋಪಗೊಂಡ ಅಶ್ವತ್ಥಾಮನಿಗೆ ಸಮಾಧಾನವನ್ನು ಹೇಳಿದುದು. ದುರ್ಯೋಧನ ಕರ್ಣರಿಬ್ಬರೂ ಭೀಷ್ಮನ ಮಾತಿಗಾಗಿ ಕೃಪ ದ್ರೋಣರಲ್ಲಿ ಕ್ಷಮೆಯನ್ನು ಬೇಡಿದುದು . . ೨೭೦

೫೨. ಭೀಷ್ಮನು ದುರ್ಯೋಧನನಿಗೆ ಪಾಂಡವರ ಅಜ್ಞಾತವಾಸದ ಕಾಲಾವಧಿಯು ತೀರಿಹೋಯಿತೆಂದು ತಿಳಿಸಿ, ಪಾಂಡವರೊಡನೆ ಸಂಧಿಮಾಡಿಕೊಳ್ಳುವುದಕ್ಕಾಗಿ ಪ್ರೇರಿಸಿದುದು. ದುರ್ಯೋಧನನು ಸಮ್ಮತಿಸದಿರಲು, ಅವನನ್ನು ಗೋವುಗಳೊಡನೆ ಹೊರಡುವಂತೆ ಹೇಳಿ, ದ್ರೋಣಾದಿಗಳೊಡನೆ ತಾನು ಯುದ್ಧಕ್ಕೆ ಮುಂದಾದುದು . ೨೭೩

೫೩. ಇಂದ್ರನು ಕುರುಪಾಂಡವರ ಈ ಯುದ್ಧವನ್ನು ನೋಡಬೇಕೆಂದು ದೇವಗಣಗಳೊಡನೆ ಸುದರ್ಶನವೆಂಬ ವಿಮಾನವನ್ನೇರಿ ಬಂದುದು . ೨೭೭

೫೪. ಅರ್ಜುನನು ಸೇನಾಮಧ್ಯದಲ್ಲಿ ದುರ್ಯೋಧನನಿಲ್ಲದುದನ್ನು ನೋಡಿ ಅವನನ್ನು ಕಂಡುಹಿಡಿಯುವುದಕ್ಕಾಗಿ ಉತ್ತರನಿಗೆ ರಥವನ್ನು ಬಿಡುವಂತೆ ಹೇಳಿದುದು. ಎರಡು ಬಾಣಗಳ ಮೂಲಕವಾಗಿ ದ್ರೋಣಾದಿಗಳ ಪಾದಕ್ಕೆ ನಮಸ್ಕರಿಸಿ, ಕುಶಲಪ್ರಶ್ನೆಯನ್ನೂ ಮಾಡಿದುದು ೨೮೯

೫೫. ಅರ್ಜುನನು ಗೋವುಗಳನ್ನು ದುರ್ಯೋಧನನು ಅಟ್ಟಿಕೊಂಡು ಹೋಗಿರ
ಬೇಕೆಂಬ ಸಂಶಯದಿಂದ ಪಸುಗಳಿದ್ದಕಡೆಗೆ ರಥವನ್ನು ಬಿಟ್ಟು
ದು. ಭೀಷ್ಮನು ಅರ್ಜುನನನ್ನು ಬೆನ್ನಟ್ಟಿದುದು. ಅರ್ಜುನನು ಸೈ
ನ್ಯಗಳನ್ನು ಹೊಡೆದಟ್ಟಿ ಗೋವುಗಳನ್ನು ಹಿಂತಿರುಗಿಸಿದುದು . ೨೮೧

೫೬. ಅರ್ಜುನನು ಉತ್ತರನಿಗೆ ದ್ರೋಣ ಕರ್ಣಾದಿಗಳ ಧ್ವಜದಲ್ಲಿರುವ ಅಸಾ
ಧಾರಣ ಚಿಹ್ನಗಳನ್ನು ತೋರಿಸಿ, ಅವರವರ ಹೆಸರನ್ನು ತಿಳಿಸಿ
ದುದು ೨೮೬

೫೭. ಅರ್ಜುನನಿಗೆ ಭೀಷ್ಮದ್ರೋಣಾದಿಗಳೊಡನೆ ಯುದ್ಧವು. ಕರ್ಣನು ಅರ್ಜು
ನನಿಂದ ಪರಾಜಿತನಾದುದು . . . ೨೮೯

೫೮. ಅರ್ಜುನನು ವಿಕರ್ಣಾದಿಗಳನ್ನೊಡಿಸಿ, ಕರ್ಣನ ತಮ್ಮನನ್ನು ಕೊಂದು
ದು. ಕರ್ಣನು ಪರಾಜಿತನಾಗಿ ರಣರಂಗವನ್ನು ಬಿಟ್ಟುಹೋದುದು ೨೯೫

೫೯. ದ್ರೋಣಾಚಾರ್ಯನ ಯುದ್ಧವು. ಅರ್ಜುನನ ಬಾಣದಿಂಪ ದ್ರೋಣನಿಗೆ ಗಾ
ಯವಾದುದನ್ನು ನೋಡಿ, ಅಶ್ವತ್ಥಾಮನು ಅರ್ಜುನನನ್ನು ದಿರಿಸಿದು
ದು. ಈ ಸಮಯದಲ್ಲಿ ದ್ರೋಣನು ಯುದ್ಧರಂಗವನ್ನು ಬಿಟ್ಟು
ಹೋದುದು ೩೦೩

೬೦. ಅಶ್ವತ್ಥಾಮನ ಪರಾಜಯವು . . . ೩೧೨

೬೧. ಅರ್ಜುನನಿಗೆ ಏಕಕಾಲದಲ್ಲಿ ದ್ರೋಣಾದಿಗಳೆಲ್ಲರೊಡನೆ ಯುದ್ಧವು . ೩೧೪

೬೨. ಭೀಷ್ಮಾರ್ಜುನರು ಯುದ್ಧಕ್ಕಿದಿರಾದುದನ್ನು ನೋಡಿ ದೇವತೆಗಳು ಅವ
ರನ್ನು ಕೊಂಡಾಡಿದುದು . . . ೩೧೯

೬೩. ಭೀಷ್ಮ ಪರಾಜಯವು ೩೨೨

೬೪. ಅರ್ಜುನನು ದ್ರೋಣನೇ ಮೊದಲಾದ ಐದು ಮಂದಿ ರಥಿಕರನ್ನು ಇದಿರಿ
ಸಿದುದು ೩೨೬

೬೫. ಅರ್ಜುನನು ಉತ್ತರನಿಗೆ ತನ್ನ ಪರಾಕ್ರಮವನ್ನು ತಿಳಿಸಿ ಧೈರ್ಯವನ್ನು ಹೇ
ಳುತ್ತ, ಭೀಷ್ಮಾದಿಗಳಿರುವ ಸ್ಥಳಕ್ಕೆ ರಥವನ್ನು ಬಿಡುವಂತೆ ಪ್ರೇ
ತ್ಸಾಹಿಸಿದುದು. ದುಶ್ಶಾಸನಾದಿಗಳನ್ನು ಜಯಿಸಿ ಭೀಷ್ಮನೊಡನೆ
ತಿರುಗಿ ಯುದ್ಧಕ್ಕೆ ನಿಂತುದು . . . ೩೨೯

೬೬. ಅರ್ಜುನನು ಭೀತಿಗೊಂಡ ಉತ್ತರನಿಗೆ ಅಗಾಗ ಧೈರ್ಯವನ್ನು ಹೇಳುತ್ತ,
ದುರ್ಯೋಧನನಿದ್ದಲ್ಲಿಗೆ ರಥವನ್ನು ಬಿಡುವಂತೆ ಹೇಳಿದುದು. ದು

ರ್ಯೋಧನನು ಬಾಣಪ್ರಹಾರದಿಂದ ನೊಂದು ಓಡಿಹೋಗುವಾಗ, ಅರ್ಜುನನು ಅವನನ್ನು ಮೂದಲಿಸಿ, ಹಾಸ್ಯಮಾಡಿ ಕರೆದುದು . ೩೩೪

೬೭. ಅರ್ಜುನನು ಮಾಡಿದ ಹಾಸ್ಯಕ್ಕಾಗಿ ದುರ್ಯೋಧನನು ಹಿಂತಿರುಗಿ ಯುದ್ಧಕ್ಕೆ ನಿಂತುದು. ಅವನ ರಕ್ಷಣೆಗಾಗಿ ಬಂದ ಭೀಷ್ಮಾದಿಗಳೊಡನೆ ಅರ್ಜುನನು ಬಹಳ ಹೊತ್ತು ಯುದ್ಧಮಾಡಿ ಕೊನೆಗೆ ಸಮ್ಮೋಹನಾಸ್ತ್ರವನ್ನು ಬಿಟ್ಟುದು. ಉತ್ತರನು ಮೋಹಿತರಾಗಿ ಮಲಗಿದ್ದ ದ್ರೋಣಾದಿಗಳ ವಸ್ತ್ರವನ್ನು ತಂದುದು . . ೩೪೦

೬೮. ಅರ್ಜುನನು ತಾವು ಪಾಂಡವರೆಂಬುದನ್ನು ಊರಿನಲ್ಲಿ ತಿಳಿಸಬಾರದೆಂದು ಉತ್ತರನಿಗೆ ಹೇಳಿ, ತಿರುಗಿ ತನ್ನ ಆಯುಧಗಳನ್ನು ಬನ್ನಿಯಮರದಲ್ಲಿಯೇ ಇರಿಸಿ, ಮೊದಲಿದ್ದ ಬೃಹನ್ನಳಾವೇಷದಿಂದ ಸಾರಥ್ಯಕ್ಕೆ ನಿಂತುದು. ಅರ್ಜುನನ ಮಾತಿನಮೇಲೆ ಉತ್ತರನು ಪಟ್ಟಣದಲ್ಲಿ ತನ್ನ ಜಯವನ್ನು ಸಾರುವುದಕ್ಕಾಗಿ ದೂತರನ್ನು ಕಳುಹಿಸಿದುದು ೩೪೬

೬೯. ಅತ್ತಲಾಗಿ ಸುಶರ್ಮನೊಡನೆ ಹೋಗಿದ್ದ ವಿರಾಟನು, ಜಯಶೀಲನಾಗಿ ನಾಲ್ಕುಮಂದಿ ಪಾಂಡವರೊಡನೆ ಹಿಂತಿರುಗಿ ಬಂದುದು. ಉತ್ತರನು ಕೌರವರೊಡನೆ ಉತ್ತರದಿಕ್ಕಿನಲ್ಲಿ ಯುದ್ಧಕ್ಕೆ ಹೋದುದನ್ನು ಕೇಳಿ ಭಯಪಟ್ಟು, ಅವನ ಸಹಾಯಕ್ಕಾಗಿ ಸೇನೆಗಳನ್ನು ಕಳುಹಿಸಿದುದು. ಇಷ್ಟರಲ್ಲಿ ದೂತರು ಬಂದು ಉತ್ತರನ ಜಯವನ್ನು ವಿರಾಟನಿಗೆ ತಿಳಿಸಿದುದು . . . ೩೪೯

೭೦. ಉತ್ತರನ ಜಯವನ್ನು ಕೇಳಿದ ಸಂತೋಷಕ್ಕಾಗಿ ವಿರಾಟನು ಕಂಕನೊಡನೆ ಪಗಡೆಯನ್ನಾರಂಭಿಸಿದುದು. ವಿರಾಟನು ಉತ್ತರನನ್ನು ಹೊಗಳುತಿದ್ದಾಗ, ಬೃಹನ್ನಳೆಯನ್ನು ಪ್ರಶಂಸೆಮಾಡಿದ ಧರ್ಮರಾಜನನ್ನು ವಿರಾಟನು ದಾಳದಿಂದ ಹೊಡೆದುದು. ಸೈರಂಧ್ರಿಯು ಧರ್ಮರಾಜನ ಗಾಯವನ್ನು ಒತ್ತಿ ಹಿಡಿದುದು . . ೩೫೩

೭೧. ಯುದ್ಧವನ್ನು ನೋಡಬೇಕೆಂದು ಬಂದಿದ್ದ ದೇವತೆಗಳೆಲ್ಲರೂ ಅರ್ಜುನನನ್ನು ಸ್ತೋತ್ರಮಾಡುತ್ತಾ ಸ್ವರ್ಗಕ್ಕೆ ಹಿಂತಿರುಗಿದುದು. ಉತ್ತರನು ಮಹೋತ್ಸವದೊಡನೆ ಪುರಪ್ರವೇಶಮಾಡಿದುದು . ೩೫೮

೭೨. ಉತ್ತರನು ತಂದೆತಾಯಿಗಳನ್ನು ನಮಸ್ಕರಿಸಿದುದು. ಯುಧಿಷ್ಠಿರನ ಗಾಯವನ್ನು ನೋಡಿ ಭಯಪಟ್ಟ ಉತ್ತರನ ಪ್ರೇರಣೆಯಿಂದ, ವಿರಾಟನು ಧರ್ಮರಾಜನ ಮನ್ನಣೆಯನ್ನು ಬೇಡಿದುದು. ಉತ್ತರನೇ

ಜಯಿಸಿದನೆಂದು ತಿಳಿದು, ವಿರಾಟನು ಅವನನ್ನು ಪ್ರಶಂಸೆಮಾಡಿದುದು. ಅದಕ್ಕೆ ಉತ್ತರನು ಹೇಳಿದ ಸಮಾಧಾನಗಳು . ೧೬೨

೭೩. ಭೀಮಾರ್ಜುನಾದಿಗಳು ಆ ರಾತ್ರಿ ಧರ್ಮರಾಜನ ಬಳಿಗೆ ಬಂದುದು. ಯುಧಿಷ್ಠಿರನು ಎಂದಿನಂತೆ ಸಂತೋಷದಿಂದ ಮಾತಾಡಿಸದಿದ್ದುದನ್ನು ನೋಡಿ, ಅರ್ಜುನನು ಭೀಮನನ್ನು ಪ್ರಶ್ನೆ ಮಾಡಿದಾಗ, ಯುಧಿಷ್ಠಿರನು ಕಾರಣವನ್ನು ತಿಳಿಸಿದುದು. ಭೀಮಾರ್ಜುನರು ವಿರಾಟನನ್ನು ಕೊಲ್ಲುವುದಕ್ಕೆ ಯತ್ನಿಸಲು, ಧರ್ಮರಾಜನು ಅವರನ್ನು ತಡೆದುದು ೧೬೯

ವೈವಾಹಿಕ ಪರ್ವವು.

೭೪. ಯುದ್ಧವಾದ ಮರುದಿನದ ಬೆಳಗ್ಗೆ, ಪಾಂಡವರು ರಾಜಯೋಗ್ಯಗಳಾದ ಅಲಂಕಾರಗಳಿಂದ ವಿರಾಟನ ಸಿಂಹಾಸನವನ್ನೇರಿ ಕುಳಿತುದು. ವಿರಾಟನು ಬಂದು ನೋಡಿ ಅವರನ್ನು ಆಕ್ಷೇಪಿಸಿದುದು. ಅರ್ಜುನನು ಧರ್ಮರಾಜನ ಗುಣಾತಿಶಯವನ್ನು ಕೊಂಡಾಡಿ, ಅವನೇ ರಾಜಾಸನವನ್ನೇರುವುದಕ್ಕೆ ಅರ್ಹನೆಂದು ತಿಳಿಸಿದುದು . . ೧೭೨

೭೫. ವಿರಾಟನು ಪ್ರಶ್ನೆಮಾಡಿದುದರ ಮೇಲೆ ಅರ್ಜುನನು ವಲಲ ಮೊದಲಾದವರೇ ಭೀಮಾದಿಗಳೆಂದು ಹೇಳಿದುದು. ಉತ್ತರನು ಪಾಂಡವರ ಹೆಸರುಗಳನ್ನೂ, ಲಕ್ಷಣಗಳನ್ನೂ ತಂದೆಗೆ ತಿಳಿಸಿ, ಅರ್ಜುನನ ಪರಾಕ್ರಮವನ್ನು ವರ್ಣಿಸಿದುದು. ವಿರಾಟನು ಪ್ರಣಾಮಪೂರ್ವಕವಾಗಿ ಅಪರಾಧಕ್ಷಾಪಣವನ್ನು ಬೇಡಿದುದು . . ೧೭೫

೭೬. ಉತ್ತರನು ಯುಧಿಷ್ಠಿರಾದಿಗಳಿಂದ ತಮಗಾದ ಉಪಕಾರಗಳನ್ನು ತಿಳಿಸಿ, ಆ ಕೃತಜ್ಞತೆಗಾಗಿ ಉತ್ತರೆಯನ್ನು ಅರ್ಜುನನಿಗೆ ವಿವಾಹಮಾಡಿಕೊಡಬೇಕೆಂದು ತಂದೆಗೆ ಹೇಳಿದುದು. ವಿರಾಟನು ಕ್ಷಮೆಯನ್ನು ಬೇಡಿದಮೇಲೆ ಧರ್ಮರಾಜನು ಅಭಯವನ್ನು ಕೊಟ್ಟುದು . ೧೭೯

೭೭. ವಿರಾಟನು ತನ್ನ ಮಗಳಾದ ಉತ್ತರೆಯನ್ನು ಅರ್ಜುನನಿಗೆ ಕೊಡಲುದ್ಯೋಗಿಸಿದಾಗ ಅರ್ಜುನನು ತನ್ನ ಸೊಸೆಯನ್ನಾಗಿ ಅವಳನ್ನು ಪರಿಗ್ರಹಿಸುವಂತೆ ಹೇಳಿದುದು. ದುರ್ಯೋಧನನು ಪಾಂಡವರಿಗೆ ದೂತಮುಖವಾಗಿ ಅಜ್ಞಾತವಾಸಕ್ಕೆ ಮೊದಲೇ ತಮ್ಮ ಕಣ್ಣಿಗೆ ಬಿದ್ದುದರಿಂದ ತಿರುಗಿ ಕಾಡಿಗೆ ಹೋಗಬೇಕೆಂದು ಹೇಳಕಳುಹಿಸಿದುದು.

ಭೀಷ್ಮನು ಈ ಸಂದೇಹವನ್ನು ಪರಿಹರಿಸುವನೆಂದು ಧರ್ಮರಾಜನು ಹೇಳಿಕಳುಹಿಸಿದುದು . . . ೩೮೧

೭೮. ಅಜ್ಞಾತವಾಸವು ಮುಗಿದಮೇಲೆ ಪಾಂಡವರು ಉಪಪ್ಲಾವ್ಯನಗರಕ್ಕೆ ಬಂದುದು. ಪಾಂಡವರ ಆಹ್ವಾನದ ಮೇಲೆ ಬಲರಾಮಕೃಷ್ಣರಿಬ್ಬರೂ ಸುಭದ್ರೆಯನ್ನೂ, ಅಭಿಮನ್ಯುವನ್ನೂ ಕರೆದುಕೊಂಡು, ಉಪಪ್ಲಾವ್ಯಕ್ಕೆ ಬಂದುದು. ದ್ರುಪದಾದಿಗಳು ಉಪಪಾಂಡವರೊಡನೆ ಬಂದು ಸೇರಿದುದು. ಅಭಿಮನ್ಯುವಿಗೂ ಉತ್ತರೆಗೂ ವಿವಾಹವು. ೩೮೬

ಪಟಗಳ ಪಟ್ಟಿ.

೧. ಪಂಚಪಾಂಡವರೂ, ದ್ರೌಪದಿಯೂ ಅಜ್ಞಾತವಾಸಕ್ಕಾಗಿ ವೇಷಾಂತರಗಳಿಂದ ವಿರಾಟನಗರಕ್ಕೆ ಹೋದುದು. ೪೫

೨ ವಿರಾಟಸಭೆಗೆ ಓಡಿಬಂದ ದ್ರೌಪದಿಯನ್ನು ಬೆನ್ನಟ್ಟಿ ಬಂದು ಕೀಚಕನು ಕಾಲಿಂದೊದೆಯುತಿದ್ದಾಗ, ಸೂರ್ಯದೂತನು ಹಿಂದಿನಿಂದ ಕೀಚಕನನ್ನೆಳೆದುಹಾಕಿದುದು. ಆಗಲೇ ಕೀಚಕನನ್ನು ಕೊಲ್ಲುವುದಕ್ಕೆ ಯತ್ನಿಸಿದ ಭೀಮನಿಗೆ ಧರ್ಮರಾಜನು ಸನ್ನೆ ಮಾಡಿ ತಡೆದುದು. ೬೭

೩. ಕೌರವಸೈನ್ಯವನ್ನು ಕಂಡಮಾತ್ರದಿಂದಲೇ ಭಯಪಟ್ಟು, ರಥದಿಂದ ಧುಮುಕಿ ಓಡಿಹೋಗುತ್ತಿದ್ದ ಉತ್ತರನನ್ನು ಬೃಹನ್ನಳಾರೂಪದಿಂದಿದ್ದ ಅರ್ಜುನನು ಬೆನ್ನಟ್ಟಿ ಹಿಡಿದು ಕರೆತಂದುದು. ೨೨೦

೪. ಪಾಂಡವರು ಅಜ್ಞಾತವಾಸಕ್ಕೆ ಹೋಗುವ ಮೊದಲು, ಒಂದು ಹೆಣದ ಆಕಾರಕ್ಕೆ ಬನ್ನಿಯಮರದಮೇಲೆ ಕಟ್ಟಿ ಹೋಗಿದ್ದ ಆಯುಧಗಳನ್ನು ಉತ್ತರನು ತೆಗೆದುಕೊಟ್ಟುದು. ೨೨೮

೫. ಅಭಿಮನ್ಯುವಿಗೂ, ಉತ್ತರೆಗೂ ವಿವಾಹವು. ೨೮೬

ಪೂರ್ವಪೀಠಿಕೆ

ದುರ್ಯೋಧನನು ಹೂಡಿದ ಕಪಟದ್ಯೂತದಲ್ಲಿ ಪಾಂಡವರು ತಮ್ಮ ಸರ್ವಸ್ವವನ್ನೂ ಸೋತು, ಹನ್ನೆರಡು ವರ್ಷಗಳ ವನವಾಸವನ್ನೂ, ಆ ಮೇಲೆ ಒಂದು ವರ್ಷದ ಅಜ್ಞಾತವಾಸವನ್ನೂ ಮಾಡಬೇಕಾಯಿತು. ವನವಾಸದ ಕಾಲಾವಧಿಯು ಮುಗಿಯುತ್ತಾ ಬಂದಾಗ, ಅವರು ಆಹಿತಾಗ್ನಿಗಳಾದ ಕೆಲವು ಬ್ರಾಹ್ಮಣರ ಆಶ್ರಮಗಳ ಸವಿಾಪದಲ್ಲಿ ಇರುತಿದ್ದರು. ಆ ಬ್ರಾಹ್ಮಣರು ಸಂಧ್ಯಾಸ್ನಾನಕ್ಕಾಗಿ ಹೋಗಿದ್ದಾಗ, ಅವರ ಅಗ್ನಿಕಾರ್ಯಕ್ಕೆ ಮುಖ್ಯ ಸಾಧನವಾಗಿದ್ದ ಅರಣಿಕಾಷ್ಠವನ್ನು ಒಂದು ಜಿಂಕೆಯು ಹೊತ್ತು ಕೊಂಡು ಓಡಿಹೋಯಿತು. ಬ್ರಾಹ್ಮಣರ ಮೊರೆಯನ್ನು ಕೇಳಿ ಪಾಂಡವರು ಆ ಜಿಂಕೆಯನ್ನು ಬೆನ್ನಟ್ಟಿ ಹಿಡಿದು ಅರಣಿಯನ್ನು ತಂದರು. ಈ ಪ್ರಯತ್ನದಲ್ಲಿ ಅವರಿಗೆ ಬಹಳ ದಣಿವಾಯಿತು. ದಾಹಶಾಂತಿಗಾಗಿ ನೀರನ್ನು ತರಬೇಕೆಂದು ನಕುಲನು ಸವಿಾಪದಲ್ಲಿದ್ದ ಒಂದು ಕೊಳಕ್ಕೆ ಹೋಗಿ ನೀರನ್ನು ಕುಡಿಯುವಷ್ಟರಲ್ಲಿ, ಒಬ್ಬ ಯಕ್ಷನು ಬಂದು, ತಾನು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಹೊರತು ಆ ಕೊಳದ ನೀರನ್ನು ಕುಡಿಯಬಾರದೆಂದು ತಡೆದನು. ಆ ಮಾತನ್ನು ಲಕ್ಷ್ಯಮಾಡದೆ ನೀರನ್ನು ಕುಡಿದುದರಿಂದ, ಅವನು ಅಲ್ಲಿಯೇ ಮೂರ್ಛಿತನಾಗಿ ಬಿದ್ದನು. ಆಮೇಲೆ ಕ್ರಮವಾಗಿ ಭೀಮಾರ್ಜುನಾದಿಗಳೂ ಅಲ್ಲಿಗೆ ಬಂದು ಅದೇ ಗತಿಯನ್ನು ಹೊಂದಿದರು. ಕೊನೆಗೆ ಧರ್ಮರಾಜನು ಬಂದು, ಆ ಯಕ್ಷನ ಪ್ರಶ್ನೆಗಳಿಗೆಲ್ಲ ಸಮಾಧಾನವನ್ನು ಹೇಳಿದನು. ಆಗ ಆ ಯಕ್ಷನು, ತಾನೇ ಅವನ ತಂದೆಯಾದ ಯಮಧರ್ಮರಾಜನೆಂದು ತನ್ನ ನಿಜಸ್ವರೂಪವನ್ನು ತೋರಿಸಿ, ಮುಂದೆ ಅಜ್ಞಾತವಾಸದಲ್ಲಿ ಪಾಂಡವರ ನಿಜಸ್ಥಿತಿಯು ತಿಳಿಯದಿರಲೆಂದೂ, ಅವರಿಗೆ ಕ್ಷೇಮವುಂಟಾಗಲೆಂದೂ, ಅನೇಕ ವರಗಳನ್ನು ಕೊಟ್ಟು ಅದೃಶ್ಯನಾದನು. ಈ ಕಥೆಯಿಂದ ಅರಣ್ಯಪರ್ವವು ಮುಗಿದು, ಆಮೇಲೆ ವಿರಾಟಪರ್ವವು ಆರಂಭವಾಗುವುದು.





ಶ್ರೀ ಮಹಾಭಾರತವು

ವಿರಾಟಪರ್ವವು

ಪಾಂಡವಪ್ರವೇಶಪರ್ವವು

ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥

ಯುಧಿಷ್ಠಿರನು ಮೃಗಾಪಹೃತವಾದ ಅರಣೀಪಾತ್ರವನ್ನು ತಂದು ಬ್ರಾಹ್ಮಣನಿಗೆ ಒಪ್ಪಿಸಿ, ಧೌಮ್ಯನೊಡನೆ ಅಜ್ಞಾತವಾಸಕ್ಕಾಗಿ ಮಂತ್ರಾಲೋಚನೆ ಮಾಡಿದುದು.

ಜನಮೇಜಯಮಹಾರಾಜನು ವೈಶಂಪಾಯನಮಹರ್ಷಿಯನ್ನು ಕುರಿತು "ಓ ಬ್ರಹ್ಮರ್ಷೀ! ನನ್ನ ಮುತ್ತಾತಂದಿರು ದುರ್ಯೋಧನನ ಭಯದಿಂದ ಪೀಡಿತರಾಗಿ, ವಿರಾಟನಗರದಲ್ಲಿ ಯಾರಿಗೂ ತಿಳಿಯದಂತೆ ಅಜ್ಞಾತವಾಸದಲ್ಲಿದ್ದುದು ಹೇಗೆ? ಪತಿವ್ರತೆಯೂ, ಮಹಾಭಾಗ್ಯವತಿಯೂ, ಯಾವಾಗಲೂ ಸುಖಭಾಗಿನಿಯೂ ಆಗಿದ್ದ ಆ ದ್ರೌಪದಿಯು, ಅಜ್ಞಾತವಾಸಕಾಲವನ್ನು ದುಃಖದಿಂದ ಹೇಗೆ ಕಳೆದಳು? ಮತ್ತು ಆ ಬ್ರಾಹ್ಮಣೋತ್ತಮರೆಲ್ಲ, ಸೂತರೊಡನೆಯೂ, ಅಡಿಗೆಯವರೊಡನೆಯೂ ಪರಿಚಾರಕರಾಗಿ ಕಲೆತು ಅಜ್ಞಾತವಾಸವನ್ನು ಕಳೆದುದು ಹೇಗೆ?" ಎಂದು ಕೇಳಿದನು. ಅದಕ್ಕೆ ವೈಶಂಪಾಯನಮುನಿಯು "ಓ ರಾಜೇಂದ್ರಾ! ಕೇಳು! ಧರ್ಮಾತ್ಮನಾದ

ಯುಧಿಷ್ಠಿರನು, * ಹಿಂದೆ ಹೇಳಿದಂತೆ ವರಗಳನ್ನು ಪಡೆದು, ಅಲ್ಲಿಂದ ಆಶ್ರಮಕ್ಕೆ ಬಂದು, ಅಲ್ಲಿದ್ದ ಬ್ರಾಹ್ಮಣರಿಗೆ ತನ್ನ ವೃತ್ತಾಂತವನ್ನೆಲ್ಲ ತಿಳಿಸಿದನು. ಹಾಗೆ ತಿಳಿಸಿದಮೇಲೆ (ಮೃಗದಿಂದ ಅಪಹರಿಸಲ್ಪಟ್ಟಿದ್ದ) ಅರಣಿಸಹಿತವಾದ ಆ ಪಾತ್ರೆಯನ್ನು ಬ್ರಾಹ್ಮಣನ ವಶಕ್ಕೆ ಒಪ್ಪಿಸಿದನು. ಆಮೇಲೆ ಕುಂತೀಪುತ್ರನಾದ ಮತ್ತು ದೃಢವ್ರತನಾದ ಆ ಯುಧಿಷ್ಠಿರರಾಜನು, ತನ್ನ ತಮ್ಮಂದಿರೆಲ್ಲರನ್ನೂ ಸವಿಾಪಕ್ಕೆ ಕರೆಸಿಕೊಂಡು ಹೀಗೆಂದು ಹೇಳುವನು. "ಎಲೈ ಸಹೋದರರೆ! ನಾವು ರಾಜ್ಯವನ್ನು ಬಿಟ್ಟು ಬಂದು ಹನ್ನೆರಡು ವರ್ಷಗಳಾದುವು. ದುರ್ಯೋಧನನು ಕಪಟದಿಂದ ನಮ್ಮ ರಾಜ್ಯಭಾಗವನ್ನೆಲ್ಲ ಅಪಹರಿಸಿ, ನಮ್ಮನ್ನು ಸರ್ವವಿಧದಿಂದಲೂ ಕೇವಲ ದರಿದ್ರರನ್ನಾಗಿ ಮಾಡಿರುವನು. ಕಳೆದ ಹನ್ನೆರಡುವರ್ಷಗಳ ಕಾಲವನ್ನೂ ನಾವು ಕಾಡಿನಲ್ಲಿಯೇ ಕಳೆದುದಾಯಿತು. ಇನ್ನು ಮುಂದಿನ ಒಂದು ವರ್ಷವನ್ನು ನಾವು ಯಾರಿಗೂ ತಿಳಿಯದಂತೆ ಮೈ ಮರೆಸಿಕೊಂಡು ಅಜ್ಞಾತವಾಸದಿಂದ ಕಳೆಯಬೇಕಾಗಿದೆ" ಎಂದನು.

ಓ ಜನಮೇಜಯರಾಜಾ! ಸತ್ಯಪರಾಕ್ರಮಿಗಳಾದ ಪಾಂಡವರೆಲ್ಲರೂ ಹೀಗೆ ಧರ್ಮರಾಜನಿಂದ ನಿಯಮಿಸಲ್ಪಟ್ಟವರಾಗಿ, ಅದರಂತೆ ಹದಿಮೂರನೆಯದಾದ ಒಂದುವರ್ಷ ಕಾಲವನ್ನು ಯಾರಿಗೂ ತಿಳಿಯದಂತೆ ಅಜ್ಞಾತವಾಸದಲ್ಲಿ ಕಳೆಯಬೇಕೆಂದು ನಿಶ್ಚಯಿಸಿಕೊಂಡರು. ಆಗ ಅಲ್ಲಿ ತಮ್ಮನ್ನು ಸುತ್ತಿಮುತ್ತಿ, ವಿದ್ವಾಂಸರೂ, ವ್ರತನಿಷ್ಠರೂ, ಮಹಾತಪಸ್ವಿಗಳೂ †ಸ್ನಾತಕರೂ ಆದ ಅನೇಕಬ್ರಾಹ್ಮಣಶ್ರೇಷ್ಠರು ನೆರೆದಿರುವುದನ್ನು ನೋಡಿ, ಅವರೆಲ್ಲರೂ ತಮಗೆ ವನವಾಸಕಾಲದಲ್ಲಿ ಅನೇಕ ಸಹಾಯಗಳನ್ನು ಮಾಡಿ

---

* ಇದರ ಹಿಂದಿನ ಆರಣ್ಯಪರ್ವದ ಕೊನೆಯಲ್ಲಿ ಈ ವರಪ್ರಸ್ತಾವವುಂಟು. ಆ ಪೂರ್ವಕಥೆಯನ್ನು ಈ ಪುಸ್ತಕದ ಉಪೋದ್ಘಾತದಲ್ಲಿ ಸಂಗ್ರಹವಾಗಿ ಕೊಟ್ಟಿದೆ.

† ಸ್ನಾತಕರೆಂದರೆ, ಗುರುಕುಲವಾಸದಲ್ಲಿದ್ದು ವೇದಾಧ್ಯಯನವನ್ನೂ, ಪ್ರಾಜಾಪತ್ಯಾದಿ ವ್ರತಗಳನ್ನೂ ಪೂರ್ಣಮಾಡಿ, ಸ್ನಾನಮಾಡಿದವರೆಂದರ್ಥವು. ಇವರಲ್ಲಿ ಅಧ್ಯಯನವನ್ನು ಮಾತ್ರ ಮುಗಿಸಿದವರು ವಿದ್ಯಾಸ್ನಾತಕರು. ವ್ರತಗಳನ್ನು ಮಾತ್ರ ಮುಗಿಸಿದವರು ವ್ರತಸ್ನಾತಕರು. ಎರಡನ್ನೂ ಸಾಂಗವಾಗಿ ಮುಗಿಸಿದವರು ಉಭಯಸ್ನಾತಕರೆಂದು ಮೂರು ವಿಧವುಂಟು.

ತಮ್ಮಲ್ಲಿ ಬಹಳ ವಿಶ್ವಾಸವನ್ನು ತೋರಿಸುತಿದ್ದವರಾದುದರಿಂದ, ಅಜ್ಞಾತ ವಾಸಕ್ಕಾಗಿ ಅವರ ಅನುಮತಿಯನ್ನು ಪಡೆಯಲು, ಮಹಾತ್ಮರಾದ ಆ ಬ್ರಾಹ್ಮಣರ ಮುಂದೆ ಐದುಮಂದಿ ಪಾಂಡವರೂ ಕೈಜೋಡಿಸಿ ನಿಂತು ಹೀಗೆಂದು ವಿಜ್ಞಾಪಿಸುವರು.

"ಓ ಬ್ರಾಹ್ಮಣೋತ್ತಮರೇ! ಧೃತರಾಷ್ಟ್ರಪುತ್ರರು ಕಪಟದಿಂದ ನಮ್ಮ ರಾಜ್ಯವನ್ನೆಲ್ಲ ಅಪಹರಿಸಿಕೊಂಡು, ನಮ್ಮನ್ನು ಸರ್ವವಿಧದಿಂದಲೂ ಹೀಗೆ ದರಿದ್ರರನ್ನಾಗಿ ಮಾಡಿರುವ ವಿಚಾರವೆಲ್ಲವೂ ನಿಮಗೆ ತಿಳಿದುದೇ! ಅದಕ್ಕಾಗಿ ನಾವು ಕಳೆದ ಹನ್ನೆರಡುವರ್ಷಗಳ ಕಾಲವನ್ನು ವನವಾಸದಲ್ಲಿ ಕಳೆದೆವು. ಆಗ ನೀವೂ ನಮ್ಮ ಸಂಗಡಲೇ ಇದ್ದವರಾದುದರಿಂದ, ಕಾಡಿನಲ್ಲಿ ಸಿಕ್ಕಿದ ಆಹಾರಗಳನ್ನು ತಿಂದು, ಎಷ್ಟು ಕಷ್ಟದಿಂದ ನಾವು ಕಾಲವನ್ನು ಕಳೆಯುತಿದ್ದೆವೆಂಬುದನ್ನು ನೀವೂ ಚೆನ್ನಾಗಿ ಬಲ್ಲಿರಿ. ಇನ್ನು ಹದಿಮೂರನೆಯದಾದ ಒಂದು ವರ್ಷವನ್ನು ನಾವು ಅಜ್ಞಾತವಾಸದಲ್ಲಿ ಕಳೆಯಬೇಕಾಗಿದೆ. ಅದುದರಿಂದ, ನಾವು ಎಲ್ಲಿಯಾದರೂ ತಲೆಮರೆಸಿಕೊಂಡು ಇನ್ನೊಂದುವರ್ಷಕಾಲವನ್ನು ಕಳೆಯುವುದಕ್ಕಾಗಿ ಹೋಗುವೆವು. ಇದಕ್ಕಾಗಿ ನಿಮ್ಮೆಲ್ಲರ ಅನುಮತಿಯನ್ನು ಬೇಡುವೆವು.

ದುರ್ಯೋಧನನಾದರೋ ಪರಮ ದುಶ್ಶೀಲನು. ಕರ್ಣನೂ, ಶಕುನಿಯೂ ಅದೇ ಸ್ವಭಾವವುಳ್ಳವರು. ಈ ಮೂವರೂ ನಮ್ಮಲ್ಲಿ ಅತ್ಯಂತಿಕವಾದ ವೈರವನ್ನಿಟ್ಟಿರುವರು. ನಮ್ಮ ರಹಸ್ಯವೇನಾದರೂ ಅವರಿಗೆ ತಿಳಿದುಬಿಟ್ಟರೆ, ಬಹಳ ಕೆಡುಕನ್ನು ಮಾಡುವರು. ಅವರು ಈಗಾಗಲೇ ಗೂಢಚಾರರನ್ನು ನಿಯಮಿಸಿರುವರು. ತಮ್ಮ ಸ್ವಜನರ ಪ್ರವರ್ತನೆಗಳಲ್ಲಿಕೂಡ ಕಣ್ಣಿಟ್ಟಿರುವರು. ಆ ದುರಾತ್ಮರ ವಿಷಯದಲ್ಲಿ ಯಾವನುತಾನೇ ನಂಬಿಕೆಯನ್ನಿಡಬಹುದು? ಓ ಮಹಾತ್ಮರೆ! ಮೊದಲಿನಂತೆ ನಾವು ನಮ್ಮ ರಾಜ್ಯದಲ್ಲಿ ನೆಲೆಗೊಂಡು, ನಮ್ಮ ರಾಷ್ಟ್ರಗಳೊಳಗೆಲ್ಲ ಅಲ್ಲಲ್ಲಿರುವ ನಿಮ್ಮಂತಹ ಮಹಾತ್ಮರಾದ ಬ್ರಾಹ್ಮಣರೊಡನೆ ಕಲೆತು, ಸಂತೋಷಿಸುವ ಕಾಲವು ತಿರುಗಿ ಬಂದೀತೆ?" ಎಂದು ಹೇಳಿ, ಮಹಾಶುದ್ಧಾತ್ಮನೂ, ಧರ್ಮಪುತ್ರನೂ ಆದ ಆ ಯುಧಿಷ್ಠಿರನು, ಕಣ್ಣೀರನ್ನು ಬಿಡುತ್ತ, ಗದ್ಗದಕಂಠವುಳ್ಳ

ವನಾಗಿ, ಕೊನೆಗೆ ದುಃಖಾವೇಶದಿಂದ ಪ್ರಜ್ಞೆತಪ್ಪಿದಂತಾದನು. ಆಗ ಅಲ್ಲಿದ್ದ ಬ್ರಾಹ್ಮಣರೂ, ಅವನ ಸಹೋದರರೂ ಮುಂದೆ ಬಂದು ಅವನನ್ನು ಸಮಾಧಾನಗೊಳಿಸಿದರು. ಆಮೇಲೆ ಧರ್ಮಪುತ್ರನು, ಮೆಲ್ಲಗೆ ಮೂರ್ಛೆತಿಳಿದೆದ್ದು, ತುಂಬಿದ ಕಣ್ಣೀರಿನೊಡನೆ ಅಲ್ಲಿ ತನ್ನ ಮುಂದಿದ್ದ ಧರ್ಮಜ್ಞನಾದ ಧೌಮ್ಯ ಮಹರ್ಷಿಯನ್ನು ಚೆನ್ನಾಗಿ ದೃಷ್ಟಿಸಿ ನೋಡಿದನು. ಆಗ ಧೌಮ್ಯನು ಅಲ್ಲಿದ್ದ ಇತರ ಬ್ರಾಹ್ಮಣರೊಡನೆ ಧರ್ಮರಾಜನಿಗೂ, ಅವನ ತಮ್ಮಂದಿರಿಗೂ ಸಮಾಧಾನೋಕ್ತಿಗಳನ್ನು ಹೇಳಿ, ಕಾಲೋಚಿತವಾದ ಹಲವು ಬುದ್ಧಿವಾದಗಳನ್ನು ಧರ್ಮರಾಜನಿಗೆ ಹೇಳತೊಡಗಿದನು. "ಓ ರಾಜೇಂದ್ರಾ! ನೀನು ಅನೇಕ ವಿಷಯಗಳನ್ನು ಬಲ್ಲವನು. ಜಿತೇಂದ್ರಿಯನು. ಸತ್ಯಸಂಧನು. ಮನಸ್ಸನ್ನು ಜಯಿಸಬಲ್ಲವನು. ಇಂತಹ ಧೀರಸ್ವಭಾವವುಳ್ಳವರು, ತಮಗೆ ಏನಾದರೂ ಇಂತಹ ವಿಪತ್ತು ಬಂದಾಗ, ಹೀಗೆ ಧೈರ್ಯವನ್ನು ನೀಗಿ ಮರುಗಲಾರರು. ಕಷ್ಟವೆಂಬುದು ದೇವತೆಗಳಿಗೂ ತಪ್ಪಿದುದಲ್ಲ. ಮಹಾತ್ಮರಾದ ಆ ದೇವತೆಗಳಲ್ಲಿಯೇ ಅನೇಕರು ಶತ್ರುಜಯಕ್ಕಾಗಿ ಒಮ್ಮೊಮ್ಮೆ ಅಲ್ಲಲ್ಲಿ ತಲೆಮರೆಸಿಕೊಂಡು ಕಾಲವನ್ನು ಕಳೆದಿರುವರು. ಹಿಂದೆ ದಿತಿಯ ಪುತ್ರರು ಸ್ವರ್ಗರಾಜ್ಯವನ್ನಾಕ್ರಮಿಸಿಕೊಂಡಿದ್ದಾಗ, ದೇವರಾಜನು ಬಹಳ ದುಃಖಿತನಾಗಿದ್ದು, ಬ್ರಹ್ಮನನ್ನು ಮೆಚ್ಚಿಸಿ, ಅವನ ಅನುಗ್ರಹವನ್ನು ಪಡೆಯುವುದಕ್ಕಾಗಿ ಬ್ರಾಹ್ಮಣವೇಷದಿಂದ ನಿಷಧದೇಶಕ್ಕೆ ಹೋಗಿ, ಅಲ್ಲಿ ಗಿರಿಪ್ರಸ್ಥವೆಂಬ ನಗರದಲ್ಲಿ ಯಾರಿಗೂ ತಿಳಿಯದೆ ತಲೆಮರೆಸಿಕೊಂಡಿದ್ದು, ಶತ್ರುನಿಗ್ರಹಕ್ಕೆ ಬೇಕಾದ ಪ್ರಯತ್ನಗಳನ್ನು ನಡೆಸಿದನಲ್ಲವೆ? ಕೊನೆಗೆ ಅವನು ಬ್ರಹ್ಮಾನುಗ್ರಹದಿಂದ, ಮಹಾಬಲಾಢ್ಯರಾದ ದೈತ್ಯರೆಲ್ಲರನ್ನೂ ಜಯಿಸಿ, ತಿರುಗಿ ತನ್ನ ರಾಜ್ಯವನ್ನು ಪಡೆದು ಆಳಿದನಲ್ಲವೆ?. ಮಹಾವಿಷ್ಣುವೂ ಕೂಡ ಹಿಂದೊಮ್ಮೆ ಗರ್ಭದಲ್ಲಿರುವಾಗಲೇ ದೈತ್ಯರನ್ನು ಕೊಲ್ಲಬೇಕೆಂದುದ್ದೇಶಿಸಿ, ಅದಕ್ಕಾಗಿ ದಿತಿದೇವಿಯ ಬಳಿಯಲ್ಲಿದ್ದು ಸಮಯನಿರೀಕ್ಷಣೆ ಮಾಡಬೇಕಾದುದರಿಂದ, ಆಶ್ರಮಗಿರಿಗೆ ಹೋಗಿ, ಅಲ್ಲಿ ಬಹುಕಾಲದವರೆಗೆ ಯಾರಿಗೂ ತಿಳಿಯದಂತೆ ವಾಸಮಾಡುತಿದ್ದನು. ಮಹಾವಿಷ್ಣುವು ಬಹಳ ಕುಳ್ಳನಾದ ಒಬ್ಬ ಬ್ರಹ್ಮಚಾರಿಯಂತೆ ವೇಷವನ್ನು ಮರೆಸಿಕೊಂಡು, ಬಲಿಚಕ್ರವರ್ತಿಯ ಬಳಿಗೆ ಹೋಗಿ, ತನ್ನ ಮೂರಡಿಗಳಿಂದ ಆ ಬಲಿಯ

ರಾಜ್ಯವನ್ನೆಲ್ಲ ಕಿತ್ತುಕೊಂಡ ವಿಚಾರವನ್ನು ನೀನೂ ಕೇಳಿಬಲ್ಲೆಯಷ್ಟೆ? ಔರ್ವನೆಂಬ ಬ್ರಹ್ಮರ್ಷಿಯು, ಯಾರಿಗೂ ತಿಳಿಯದಂತೆ ತೊಡೆಯಲ್ಲಿ ಮರೆಸಿಕೊಂಡಿದ್ದು, ಲೋಕಗಳಲ್ಲಿ ಏನೇನು ಕೆಲಸಗಳನ್ನು ಮಾಡಿದನೋ ಅವೆಲ್ಲವನ್ನೂ ನೀನು ಕೇಳಿರುವೆ? ಸರ್ವಾಂತರ್ಯಾಮಿಯೆನಿಸಿದ್ದರೂ ಮಹಾವಿಷ್ಣುವು, ವೃತ್ರನನ್ನು ಕೊಲ್ಲುವುದಕ್ಕಾಗಿ ಇಂದ್ರನ ವಜ್ರಾಯುಧದಲ್ಲಿ ಮೈಮರೆಸಿಕೊಂಡಿದ್ದು ಹೇಗೆ ಕಾರ್ಯಸಾಧನೆಯನ್ನು ಮಾಡಿದನೋ ಅದನ್ನೂ ನೀನು ಕೇಳಿರುವೆ. ಅಗ್ನಿಯು ದೇವತೆಗಳ ಕಾರ್ಯಕ್ಕಾಗಿ ನೀರಿನಲ್ಲಿ ಮರೆಸಿಕೊಂಡಿದ್ದು ಕಾರ್ಯವನ್ನು ಸಾಧಿಸಿದನೆಂಬುದನ್ನು ನೀನು ಕೇಳಿಲ್ಲವೆ? ಉತ್ತಮ ತೇಜಸ್ಸುಳ್ಳ ಸೂರ್ಯದೇವನೂ ಕೂಡ, ಭೂಮಿಯಲ್ಲಿ ಅನೇಕ ವರ್ಷಗಳವರೆಗೆ ಮರೆಸಿಕೊಂಡಿದ್ದು ಹೇಗೆ ಶತ್ರುಗಳನ್ನು ಜಯಿಸಿದನೆಂಬುದೂ ನಿನಗೆ ತಿಳಿದ ಸಂಗತಿಯೇ. ಮತ್ತೊಮ್ಮೆ ಮಹಾವಿಷ್ಣುವು ದಶರಥನ ಮನೆಯಲ್ಲಿ ತನ್ನ ಸ್ವರೂಪವನ್ನು ಮರೆಸಿಕೊಂಡಿದ್ದು, ಭಯಂಕರವಾದ ತನ್ನ ಸಾಹಸದಿಂದ ದಶಕಂಠನಾದ ರಾವಣನನ್ನು ಹೇಗೆ ವಧಿಸಿದನೆಂಬುದನ್ನೂ ನೀನು ಕೇಳಿರುವೆ. ಹೀಗೆಯೇ ಮಹಾಮಹಿಮೆಯುಳ್ಳವರೆಲ್ಲರೂ ಅಲ್ಲಲ್ಲಿ ಸಮಯೋಚಿತವಾಗಿ ತಮ್ಮ ಸ್ವರೂಪವನ್ನು ಮರೆಸಿಕೊಂಡು, ಪ್ರಬಲರಾದ ತಮ್ಮ ಶತ್ರುಗಳನ್ನು ಜಯಿಸಿದರಲ್ಲವೆ? ಈಗ ನೀನೂ ಹಾಗೆಯೇ ಸ್ವಲ್ಪ ಕಾಲದವರೆಗೆ ಯಾರಿಗೂ ತಿಳಿಯದಂತಿದ್ದರೆ, ಮುಂದೆ ಶತ್ರುಗಳನ್ನು ಜಯಿಸುವೆ'' ಎಂದನು.

ಎಲೈ! ಜನಮೇಜಯ ರಾಜೇಂದ್ರನೇ! ಕೇಳು. ಧೌಮ್ಯನು ಹೇಳಿದ ಮಾತುಗಳಿಂದ ಧರ್ಮಜ್ಞನಾದ ಯುಧಿಷ್ಠಿರನ ಮನಸ್ಸಿಗೆ ಸಮಾಧಾನವೂ ಸಂತೋಷವೂ ಉಂಟಾಯಿತು. ದುಃಖವನ್ನು ನೀಗಿ ಶಾಂತಚಿತ್ತನಾಗಿದ್ದನು. ಇಷ್ಟರಲ್ಲಿ ಮಹಾಬಾಹುವೂ, ಮಹಾಬಲಾಢ್ಯನೂ ಆದ ಭೀಮಸೇನನು, ಅಣ್ಣನಾದ ಯುಧಿಷ್ಠಿರನನ್ನುಕುರಿತು ಅವನಿಗೆ ಉತ್ಸಾಹಜನಕವಾದ ವಾಕ್ಯದಿಂದ ಹೀಗೆಂದು ಹೇಳುವನು, ''ಅಣ್ಣಾ! ನೀನೇನೂ ಚಿಂತಿಸಬೇಕಾದುದಿಲ್ಲ. ಇದೋ! ನೋಡು! ಅರ್ಜುನನು ಗಾಂಡೀವವೆಂಬ ಮಹಾಧನುಸ್ಸನ್ನು ಹಿಡಿದವನಾಗಿದ್ದರೂ, ಇದುವರೆಗೆ ತನ್ನ ಯಾವುದೊಂದು ಸಾಹಸವನ್ನಾದರೂ ತೋರಿಸದೆ, ಧರ್ಮಾರ್ಥಗಳಿಗೆ ಲೋಪವು

ಬರಬಾರದೆಂಬ ಬುದ್ಧಿಯಿಂದ ಸುಮ್ಮನಿರುವನು. ನಕುಲಸಹದೇವರೂ ಕೂಡ ಭಯಂಕರ ಪರಾಕ್ರಮವುಳ್ಳವರಾಗಿ, ಶತ್ರುಗಳನ್ನು ಧ್ವಂಸಮಾಡ ವುದರಲ್ಲಿ ಸಮರ್ಥರಾಗಿದ್ದರೂ, ನಮ್ಮಿಂದ ನಿವಾರಿಸಲ್ಪಟ್ಟು ಸುಮ್ಮನಿರು ವರು. ನಾವು ಯಾರೂ ನೀನು ನಿಯಮಿಸಿದ ದಾರಿಯನ್ನು ಬಿಟ್ಟು ಎಂದಿ ಗೂ ಹೋಗತಕ್ಕವರಲ್ಲ. ಆದುದರಿಂದ, ನೀನು ಶೀಘ್ರದಲ್ಲಿಯೇ ಮುಂದೆ ನಡೆಸಬೇಕಾದುದೆಲ್ಲವನ್ನೂ ನಿಯಮಿಸು. ಶೀಘ್ರದಲ್ಲಿ ನಾವು ಶತ್ರುಗಳನ್ನು ಜಯಿಸುವೆವು" ಎಂದನು. ಭೀಮನು ಹೇಳಿದ ಈ ಮಾತನ್ನು ಕೇಳಿದ ಮೇಲೆ ಧರ್ಮರಾಜನು, ವಿದ್ವಾಂಸರೂ, ದೃಢವ್ರತರೂ ಮಹಾತಪಸ್ವಿಗಳೂ ಆದ ಬ್ರಾಹ್ಮಣರೊಡನೆ ಸುಖೋಪವಿಷ್ಟನಾಗಿದ್ದು, ತನ್ನಲ್ಲಿ ಅಸಾಧಾರ ಣ ವಿಶ್ವಾಸದಿಂದ ವನವಾಸಕಾಲದಲ್ಲಿ ತನಗೆ ಸಹಾಯಕರಾಗಿದ್ದ ಆ ಬ್ರಾಹ್ಮ ಣೋತ್ತಮರಿಂದ, ಮುಂದಿನ ಅಜ್ಞಾತವಾಸಕ್ಕೆ ಅನುಜ್ಞೆಯನ್ನು ಪಡೆಯು ವುದಕ್ಕಾಗಿ, ಅವರೆಲ್ಲರನ್ನೂ ನೋಡಿ ಅಂಜಲಿಪೂರ್ವಕವಾಗಿ ಹೀಗೆಂದು ವಿಜ್ಞಾಪಿಸುವನು. "ಪೂಜ್ಯರೆ! ಧೃತರಾಷ್ಟ್ರಪುತ್ರರು ನಮ್ಮ ರಾಜ್ಯವ ನ್ನೆಲ್ಲ ಕೆತ್ತುಕೊಂಡು, ನಮ್ಮನ್ನು ನಿರ್ಗತಿಕರನ್ನಾಗಿ ಮಾಡಿದುದು ನಿಮಗೆ ತಿಳಿದೇ ಇದೆ. ಇದುವರೆಗೆ ಹನ್ನೆರಡು ವರ್ಷಗಳ ಕಾಲವನ್ನು ನಾವು ಕಾಡಿನಲ್ಲಿದ್ದು ಎಷ್ಟೋ ಕಷ್ಟದಿಂದ ಕಳೆದೆವು. ಉಳಿದ ಒಂದು ವರ್ಷವನ್ನು ಎಲ್ಲಿಯಾದರೂ ತಲೆಮರೆಸಿಕೊಂಡು ಅಜ್ಞಾತವಾಸದಿಂದ ಕಳೆಯಬೇಕಾ ಗಿದೆ. ಅದಕ್ಕಾಗಿ ನೀವೆಲ್ಲ ನಮಗೆ ಅನುಮತಿಯನ್ನು ಕೊಟ್ಟು ಕಳುಹಿಸ ಬೇಕು" ಎಂದನು. ಆಗ ಬ್ರಾಹ್ಮಣೋತ್ತಮರೆಲ್ಲರೂ ಧರ್ಮರಾಜಾದಿಗ ಳನ್ನು ಉತ್ತಮಾಶೀರ್ವಾದಗಳಿಂದ ಅನುಗ್ರಹಿಸಿ, ಅವರ ಅನುಮತಿಯನ್ನು ಪಡೆದು, ತಮ್ಮತಮ್ಮ ಸ್ಥಾನಗಳಿಗೆ ಹೊರಡಲುದ್ಯುಕ್ತರಾದರು. ವೇದವಿತ್ತು ಗಳೂ, ಕುಲಪ್ರಧಾನರೂ, ಜಿತೇಂದ್ರಿಯರೂ ಆದ ಆ ಮಹರ್ಷಿಗಳೆಲ್ಲರೂ ಆಶೀರ್ವಾದಗಳನ್ನು ಹೇಳಿ ಹೊರಡುವಾಗ, ತಿರುಗಿ ಮತ್ತೊಮ್ಮೆ ಬಂದು ನೋಡುವುದಾಗಿ ತಮ್ಮ ಉದ್ದೇಶವನ್ನು ಸೂಚಿಸಿದರು. ಹಾಗೆಯೇ ಈ ಪಾಂಡವರ ಸಹಾಯಕ್ಕಾಗಿ ಬಂದಿದ್ದ, ಭೃತ್ಯರು, ದೂತರು, ಶಿಲ್ಪಿಗಳು, ಪರಿಚಾರಕರು ಮುಂತಾದವರೆಲ್ಲರೂ ಪಾಂಡವರ ಅನುಜ್ಞೆಯನ್ನು ಪಡೆ ದು, ತಿರುಗಿ ಬಂದು ಅವರನ್ನು ನೋಡಬೇಕೆಂಬ ಅಭಿಲಾಷೆಯೊಡನೆ

ಅಲ್ಲಿಂದ ಹೊರಟರು. ಆಮೇಲೆ ಆ ಐದು ಮಂದಿ ಪಾಂಡವರೂ ದ್ರೌಪದಿಯನ್ನು ಕರೆದುಕೊಂಡು, ಧೌಮ್ಯರೊಡನೆ ಕಲೆತು ತಂವಿದ್ದ ಸ್ಥಳದಿಂದ ಒಂದು ಹರದಾರಿಯ ದೂರದವರೆಗೆ ಪ್ರಯಾಣಮಾಡಿದರು. ಆ ಪಾಂಡವರಲ್ಲಿ ಒಬ್ಬೊಬ್ಬರೂ ಪ್ರತ್ಯೇಕವಾಗಿ ಶಾಸ್ತ್ರಗಳನ್ನೋದಿ ಬಲ್ಲವರು. ಒಬ್ಬೊಬ್ಬರೂ ಮಂತ್ರಾಲೋಚನೆಯಲ್ಲಿ ನಿಪುಣರು. ಸಂಧಿವಿಗ್ರಹಾದಿ ರಾಜನೀತಿತತ್ವಗಳನ್ನು ಚೆನ್ನಾಗಿ ಅರಿತವರು. ಇಂತಹ ಪುರುಷಶ್ರೇಷ್ಠರಾದ ಆ ಸಹೋದರರೈವರೂ ಪತ್ನೀಸಮೇತರಾಗಿ, ಮರುದಿನದಿಂದ ಹಿಡಿದು ಅಜ್ಞಾತವಾಸವನ್ನು ನಡೆಸುವ ಉದ್ದೇಶದಿಂದ, ಮುಂದಿನ ಕಾರ್ಯಾಲೋಚನೆಗಾಗಿ ಕುಳಿತರು.

ಮೊದಲನೆಯ ಅಧ್ಯಾಯವು.

ಧರ್ಮರಾಜನು ವಿರಾಟನಗರದಲ್ಲಿ ಅಜ್ಞಾತವಾಸವನ್ನು ನಡೆಸುವುದಾಗಿ ತೀರ್ಮಾನಿಸಿ, ತಾನು ಯತಿವೇಷದಿಂದ ಅಲ್ಲಿರುವುದಾಗಿ ತಿಳಿಸಿದುದು.

ವೈಶಂಪಾಯನನು ಜನಮೇಜಯನನ್ನು ಕುರಿತು, "ರಾಜಾ ಕೇಳು! ಸತ್ಯಸಂಧರೂ, ಉದಾರಮನಸ್ಸುಳ್ಳವರೂ ಆದ ಪಾಂಡವರು, ತಮ್ಮ ವನವಾಸಕಾಲವನ್ನು ಕಳೆದಮೇಲೆ, ಮುಂದಿನ ಕಾರ್ಯವನ್ನು ಕುರಿತು ತಿರುಗಿ ಧೌಮ್ಯರೊಡನೆ ಆಲೋಚಿಸತೊಡಗಿದರು. ಆಗ ಕುಂತೀಪುತ್ರನಾದ ಯುಧಿಷ್ಠಿರನು, ತನ್ನ ತಮ್ಮಂದಿರನ್ನೂ, ದ್ರೌಪದಿಯನ್ನೂ, ಧೌಮ್ಯರನ್ನೂ ನೋಡಿ ಹೀಗೆಂದು ಹೇಳುವನು "ನಾವು ರಾಜ್ಯವನ್ನಗಲಿ ಬಂದು ಈಗ್ಗೆ ಹನ್ನೆರಡು ವರ್ಷಗಳಾದುವು. ಹದಿಮೂರನೆಯ ವರ್ಷವು ಆರಂಭವಾಯಿತು. ಈ ಒಂದು ವರ್ಷವನ್ನು ಕಳೆಯುವುದೇ ನಮಗೆ ಬಹಳ ಕಷ್ಟತರವಾಗಿದೆ. ಆದುದರಿಂದ, ಓ ಅರ್ಜುನಾ! ಈ ಮುಂದಿನ ವರ್ಷದಲ್ಲಿ ನಮ್ಮ ವಾಸಕ್ಕೆ ಅನುಕೂಲವಾದ ಸ್ಥಳವೊಂದನ್ನು ಆಲೋಚಿಸಿ ನೋಡು. ಈಗ ಹದಿಮೂರನೆಯ ವರ್ಷವು ಬಂದುಬಿಟ್ಟಿತು. ನಾವು ಎಲ್ಲಿ ವಾಸಮಾಡಬಹುದು? ನಾವೆಲ್ಲರೂ ಒಂದಾಗಿ ಸೇರಿಯೇ ದ್ರೌಪದಿಯೊಡನೆ ಆ ಧೃತ

ರಾಷ್ಟ್ರಪುತ್ರರಿಗೆ ತಿಳಿಯದಂತೆ ಈ ಒಂದು ವರ್ಷಕಾಲವನ್ನು ಕಳೆಯಬೇಕು" ಎಂದನು. ಆದಕ್ಕಾ ಅರ್ಜುನನು "ಮಹಾರಾಜಾ! ಭರತಕುಲೋತ್ತಮಾ! ಆ ಧರ್ಮದೇವತೆಯ ವರಪ್ರಸಾದದಿಂದ ನಾವು ಬೇರೆ ಜನರಿಗೆ ತಿಳಿಯದಂತೆ ವಾಸಮಾಡಬಹುದಲ್ಲವೆ? ಸುರಕ್ಷಿತಗಳಾಗಿಯೂ, ರಮಣೀಯಗಳಾಗಿಯೂ ಇರುವ ಕೆಲವುದೇಶಗಳ ಹೆಸರನ್ನು ನಾನು ತಿಳಿಸುವೆನು. ಅವುಗಳಲ್ಲಿ ನಿನಗೆ ಯುಕ್ತವಾಗಿ ತೋರಿದ ಯಾವುದಾದರೂ ಒಂದು ಸ್ಥಳವನ್ನು ನೀನೇ ನಿಶ್ಚಯಿಸು. ನಮ್ಮ ಕುರುದೇಶಗಳ ಸುತ್ತುಮುತ್ತಿನಲ್ಲಿ ಅತಿರಮಣೀಯಗಳಾದ ಎಷ್ಟೋ ದೇಶಗಳುಂಟು. ಪಾಂಚಾಲ ದೇಶಗಳುಂಟು. ಮತ್ಸ್ಯದೇಶಗಳುಂಟು. ಹಾಗೆಯೇ ಸಾಲ್ವ, ವೈದೇಹ, ಬಾಹ್ಲಿಕ, ದಶಾರ್ಣ, ಶೂರಸೇನ, ಕಳಿಂಗ, ಮಾಗಧವೇ ಮೊದಲಾಗಿ ಹಲವು ದೇಶಗಳಿವೆ. ಅವುಗಳಲ್ಲಿ ವಿರಾಟನ ಪಟ್ಟಣವು, ಅತ್ಯಂತ ರಮಣೀಯವಾಗಿ, ಜನಸಮೃದ್ಧವಾಗಿ, ಯಾವಾಗಲೂ ಸುಭಿಕ್ಷವಾಗಿ, ಐಶ್ವರ್ಯದಿಂದಲೂ ಬಹಳ ಮೇಲೆನಿಸಿಕೊಂಡಿರುವುದಾಗಿ ಕೇಳಿರುವೆನು. ಅದರಂತೆಯೇ ಇನ್ನೂ ಬೇರೆಬೇರೆ ಎಷ್ಟೋ ರಾಷ್ಟ್ರಗಳುಂಟೆಂದೂ ಕೇಳುವೆವು. ಅವುಗಳಲ್ಲಿ ನಿನಗೆ ಸಮ್ಮತವಾದ ದೇಶಕ್ಕೆ ನಾವೆಲ್ಲರೂ ಹೋಗಿ ವಾಸಮಾಡುವೆವು. ಅಣ್ಣಾ! ಮೇಲೆ ಹೇಳಿದ ದೇಶಗಳಲ್ಲಿ ನಿನಗೆ ಯಾವುದು ವಾಸಯೋಗ್ಯವೆಂದು ತೋರುವುದು? ನಾವು ರಾಜ್ಯಭ್ರಷ್ಟರಾಗಿ ಬಂದೆವೆಂದು ಈಗ ನೀನು ಮನಸ್ಸಿನಲ್ಲಿ ವ್ಯಸನಕ್ಕೆ ಅವಕಾಶಕೊಡಬಾರದು. ಮುಂದಿನ ಆಲೋಚನೆಯನ್ನು ಮಾಡಬೇಕು" ಎಂದನು. ಆದಕ್ಕಾ ಧರ್ಮರಾಜನು "ಎಲೆ ವತ್ಸಾ! ಮಹಾಬಾಹೂ! ನೀನು ಹೇಳಿದುದೇನೋ ವಾಸ್ತವವೇ! ಮಹಾಮಹಿಮನೂ, ಸರ್ವಭೂತೇಶ್ವರನೂ, ನಮಗೆ ಪ್ರಭುವೂ ಆದ ಆ ಧರ್ಮದೇವನು ಹೇಳಿದಂತೆಯೇ ನಡೆಯುವುದರಲ್ಲಿ ಸಂದೇಹವಿಲ್ಲ. ಅದು ತಪ್ಪಲಾರದು. ಆದರೆ, ಈಗ ನಾವೆಲ್ಲರೂ ಒಂದಾಗಿ ಕಲೆತು, ಚೆನ್ನಾಗಿ ಆಲೋಚಿಸಿ, ನಮ್ಮ ಅಜ್ಞಾತವಾಸಕ್ಕಾಗಿ, ರಮಣೀಯವಾಗಿಯೂ, ಕ್ಷೇಮಕರವಾಗಿಯೂ, ಯಾವ ವಿಧದಲ್ಲಿಯೂ ನಿರ್ಭಯವಾಗಿಯೂ ಇರುವ ಒಂದು ಸ್ಥಳವನ್ನು ನಿರ್ಧರಿಸಿಟ್ಟುಕೊಳ್ಳಬೇಕಾದುದವಶ್ಯವಲ್ಲವೆ? ವತ್ಸ ಅರ್ಜುನಾ! ನೀನು ಹೇಳಿದಂತೆ ಮತ್ಸ್ಯದೇಶಾಧಿಪತಿಯಾದ ವಿರಾ

ಟನು ಬಹಳ ಬಲಾಢ್ಯನು. ಅಲ್ಲದೆ ಅವನಿಗೆ ಪಾಂಡವರಲ್ಲಿ ಸಹಜವಾದ ಪ್ರೇಮವುಂಟು. ಮತ್ತು ಅವನು ಧರ್ಮಶೀಲನು. ಉದಾರಸ್ವಭಾವವುಳ್ಳವನು. ವಯೋವೃದ್ಧನು. ಸಾಧುಜನಪ್ರಿಯನು. ಗುಣಾಢ್ಯನು. ಲೋಕಪ್ರಸಿದ್ಧವಾದ ಖ್ಯಾತಿಯುಳ್ಳವನು. ದೃಢಭಕ್ತಿಯುಳ್ಳವನು. ಜಿತೇಂದ್ರಿಯನು. ಆದುದರಿಂದ ಓ ಪಾರ್ಥಾ! ಆ ಮತ್ಸ್ಯರಾಜನ ಆಶ್ರಯದಲ್ಲಿರುವುದೇ ಉತ್ತಮವೆಂದು ನನಗೆ ತೋರುವುದು. ನಿಮ್ಮೆಲ್ಲರಿಗೂ ಸಮ್ಮತವಾದರೆ, ನಾವೆಲ್ಲರೂ ಈ ಮುಂದಿನ ಹನ್ನೆರಡು ತಿಂಗಳ ಕಾಲವನ್ನು ಆ ವಿರಾಟನಗರದಲ್ಲಿ, ಆ ರಾಜನ ಸೇವೆಯನ್ನು ಮಾಡುತ್ತ ಕಳೆಯಬಹುದು. ಆದರೆ ನಮ್ಮಲ್ಲಿ ಯಾರುಯಾರು ಎಂತಹ ವೃತ್ತಿಗಳನ್ನವಲಂಬಿಸಿ, ಆ ರಾಜನ ಸೇವೆಯಲ್ಲಿರಬಹುದೋ, ಅದನ್ನೂ ಈಗಲೇ ನಿಶ್ಚಯಿಸಬೇಕು. ಆದುದರಿಂದ, ನಿಮ್ಮಲ್ಲಿ ಯಾರುಯಾರು ಯಾವಯಾವ ಕೆಲಸವನ್ನು ಮಾಡಬಲ್ಲರೆಂಬುದನ್ನು ತಿಳಿಸಿರಿ'' ಎಂದನು. ಆಗ ಅರ್ಜುನನು "ಅಣ್ಣಾ! ನಮ್ಮ ವಿಚಾರವು ಹಾಗಿರಲಿ! ಮಹಾರಾಜನಾದ ನೀನು ಆ ವಿರಾಟನಗರದಲ್ಲಿ ಯಾವ ವಿಧವಾದ ಕಾರ್ಯದಿಂದ ಅವನ ಸೇವೆಯನ್ನು ಮಾಡಬಹುದೋ ಅದನ್ನು ಮೊದಲು ತಿಳಿಸು. ಅಣ್ಣಾ! ನೀನಾದರೋ ನಿಷ್ಕಪಟವಾದ ವೃತ್ತಿಯಿಂದಲೇ ಯಾವಾಗಲೂ ಇರತಕ್ಕವನು. ಧರ್ಮಮಾರ್ಗದಲ್ಲಿಯೇ ದೃಢವಾಗಿ ನೆಲೆಸಿದವನು. ಅಸೂಯಾದಿ ದುರ್ಗುಣಗಳಿಲ್ಲದವನು. ಯಾವಾಗಲೂ ಸತ್ಯವನ್ನೇ ನುಡಿಯತಕ್ಕವನು. ಯಜ್ಞಗಳನ್ನು ನಡೆಸಿದವನು. ಕ್ರೋಧ ಲೋಭಗಳನ್ನು ಜಯಿಸಿದವನು. ಕೇವಲ ಮೃದುಸ್ವಭಾವವುಳ್ಳವನು. ಉದಾರಬುದ್ಧಿಯುಳ್ಳವನು. ಅಕಾರ್ಯಗಳಿಗೆ ನಾಚುವ ಸ್ವಭಾವವುಳ್ಳವನು. ಧಾರ್ಮಿಕನು. ಸತ್ಯಪರಾಕ್ರಮನು. ಮೊದಲೇ ತಪಸ್ಸಿನಿಂದ ಕಂದಿದ ದೇಹವುಳ್ಳ ನೀನು, ಆ ರಾಜನಲ್ಲಿ ಯಾವ ಬಗೆಯ ಸೇವಾಕಾರ್ಯವನ್ನು ತಾನೇ ಮಾಡಬಹುದು? ಕಾರ್ಯಗಳಲ್ಲಿ ಕಪಟವಾಗಿಯಾಗಲಿ, ಕ್ರೂರವಾಗಿಯಾಗಲಿ ವರ್ತಿಸುವುದು ನಿನ್ನ ಸುಸ್ವಭಾವಕ್ಕೆ ವಿರುದ್ಧವು. ಹೀಗಿರುವಾಗ ನೀನು ಆ ರಾಜನಲ್ಲಿ ಯಾವ ಕೆಲಸವನ್ನು ಮಾಡಬಹುದು? ಮಹಾರಾಜಾ! ಪಾಪಬುದ್ಧಿಯುಳ್ಳವರಿಗೆ ಯೋಗ್ಯವಾದ ಯಾವ ಕಷ್ಟಾನುಭವಕ್ಕೂ ನೀನು ಅರ್ಹನಲ್ಲ. ಹೀಗಿರುವಾಗ ನಿನಗೆ ಬಂದೊದಗಿರುವ

ಇಂತಹ ಮಹಾಘೋರವಾದ ಕಷ್ಟದಶೆಯಿಂದ ನೀನು ಉತ್ತೀರ್ಣನಾಗುವುದು ಹೇಗೆ?" ಎಂದನು. ಅರ್ಜುನನು ಹೇಳಿದ ಮಾತನ್ನು ಕೇಳಿ ಧರ್ಮರಾಜನು "ಅರ್ಜುನಾ! ವಿರಾಟನಲ್ಲಿ ನಾನು ಮಾಡುವ ಕಾರ್ಯವೇನೆಂಬುದನ್ನು ತಿಳಿಸುವೆನು ಕೇಳು! ಮತ್ಸ್ಯದೇಶಕ್ಕೆ ಆನಂದಕರನಾದ ಆ ರಾಜನಲ್ಲಿಗೆ ಹೋಗಿ, ಅವನ ಸಭಾನಾಯಕನಾಗಿರಬೇಕೆಂಬುದು ನನ್ನ ಉದ್ದೇಶವು. ನಾನು ಅಶ್ವವಿದ್ಯೆಯನ್ನು ಕಲಿತಿರುವೆನು. ಪಗಡೆಯಾಟವನ್ನೂ ಚೆನ್ನಾಗಿ ಆಡಬಲ್ಲೆನು. "ನನ್ನ ಹೆಸರು ಕಂಕ" ನೆಂದು ಹೇಳಿಕೊಂಡು ಅವನ ಆಶ್ರಯವನ್ನು ಪಡೆಯುವೆನು. ವತ್ಸ ಪಾರ್ಥಾ! ನನ್ನಲ್ಲಿ ಚಿನ್ನ ಬೆಳ್ಳಿಗಳಿಂದಲೂ, ಸ್ಫಟಿಕ ವೈಡೂರ್ಯಗಳಿಂದಲೂ, ದಂತದಿಂದಲೂ ನಿರ್ಮಿತಗಳಾದ ಕಪ್ಪು ಮತ್ತು ಕೆಂಪು ಬಣ್ಣದ ನಾನಾಬಗೆಯ ಚಾರಿಗಳುಂಟು ಅವು ಬಹಳ ಅಂದವಾಗಿ, ಒಳ್ಳೇ ಕಾಂತಿವಿಶಿಷ್ಟಗಳಾಗಿ, ಮೇಲೆ ಮೇಲೆ ನೋಡಬೇಕೆಂಬ ಆಶೆಯನ್ನು ಹುಟ್ಟಿಸುವಂತಿರುವುವು. ಅರಸನ ಮತ್ತು ಗೋವಿನ ಗುರುತುಳ್ಳ ಮಂಗಳಕರಗಳಾದ ಆ ಚಾರಿಗಳನ್ನು ಹಾಸುವೆನು. ಅಲ್ಲದೆ, ವತ್ಸ ಅರ್ಜುನಾ! ಬಣ್ಣದಲ್ಲಿ ಕೆಂಪಾಗಿ, ಮರಕತರತ್ನಖಚಿತವಾಗಿಯೂ, ಅಂದವಾಗಿಯೂ, ನೋಡುವವರಿಗೆ ಆನಂದಕರವಾಗಿಯೂ, ಒಳ್ಳೇ ಸಮರ್ಥರಾದ ಶಿಲ್ಪಿಗಳಿಂದ ನಿರ್ಮಿತಗಳಾಗಿಯೂ ಇರುವ ಪಗಡೇಕಾಯಿಗಳೂ ನನ್ನಲ್ಲಿವೆ. ತತ್ಕಾಲಕ್ಕೆ ಅವೇ ನನ್ನ ಭಾಗಕ್ಕೆ ಧನದಂತಿವೆ. ಆ ಕಾಯಿಗಳನ್ನು ಕೈಯಿಂದ ಮುಟ್ಟಿದರೂ, ಮನುಷ್ಯರ ಮನಸ್ಸಿಗೆ ಒಂದು ಬಗೆಯ ಹರ್ಷವುಂಟಾಗುವುದು. ಹಳ್ಳತಿಟ್ಟಿಲ್ಲದೆ ಸಮವಾಗಿಯೂ, ಧೂಳಿಲ್ಲದೆ ಶುದ್ಧವಾಗಿಯೂ ಇರುವ ಸ್ಥಳದಲ್ಲಿ ಚಾರಿಗಳನ್ನು ಹಾಸಿ, ದಾಳಗಳನ್ನುರುಳಿಸುತ್ತಿರುವುದೇ ನನಗೆ ಒಂದು ವಿನೋದವಾದ ಕಾಲಕ್ಷೇಪವೆನಿಸುವುದು. ಇದಲ್ಲದೆ ನಾನು, ಕಂಕನೆಂಬ ಸನ್ಯಾಸಿಯಾಗಿ ವಿರಾಟನ ಸಭೆಯಲ್ಲಿ ಸೇರಿದಾಗ, ಜ್ಯೋತಿಷ್ಯದಲ್ಲಿಯೂ, ಪಕ್ಷಿಶಕುನಗಳಲ್ಲಿಯೂ, ಇತರ ನಿಮಿತ್ತ (ಶಕುನ) ಶಾಸ್ತ್ರದಲ್ಲಿಯೂ, ಪಗಡೆಯಾಟದಲ್ಲಿಯೂ, ನಾನು ಹಿಂದೆ ಕ್ರಮವಾಗಿ ಓದಿದ ಬ್ರಹ್ಮಜ್ಞಾನಬೋಧಕವಾದ ವೇದದಲ್ಲಿಯೂ, ಎಲ್ಲಾ ವೇದಾಂಗಗಳಲ್ಲಿಯೂ, ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳಲ್ಲಿಯೂ, ನೀತಿಶಾಸ್ತ್ರಗಳಲ್ಲಿಯೂ ಪಾರಂಗತನಂತೆ ತೋರಿಸಿಕೊಂಡು,

ಆಯಾ ವಿಷಯಗಳಲ್ಲಿ ಅವನು ನನ್ನನ್ನು ಕೇಳಬಹುದಾದ ಪ್ರಶ್ನೆಗಳಿಗೆಲ್ಲಾ ಅವನ ಮನಸ್ಸಿಗೆ ತೃಪ್ತಿಕರವಾದ ಉತ್ತರಗಳನ್ನು ಕೊಟ್ಟು ಅವನನ್ನು ಸಂತೋಷಗೊಳಿಸಬಲ್ಲೆನು. ಆ ರಾಜನು ನನ್ನ ಪೂರ್ವಚರಿತ್ರೆಗಳನ್ನು ಕುರಿತು ಕೇಳಿದಪಕ್ಷದಲ್ಲಿ "ಪೂರ್ವದಲ್ಲಿ ನಾನು ಯುಧಿಷ್ಠಿರನಿಗೆ ಪ್ರಾಣಕ್ಕೆ ಸಮನಾದ ಸ್ನೇಹಿತನಾಗಿದ್ದೆ" ನೆಂದು ಹೇಳುವೆನು. ಈ ರೀತಿಯಾಗಿ ನಿಜಸ್ವರೂಪವನ್ನು ಮರೆಸಿಕೊಂಡು, ವಿರಾಟನಗರದಲ್ಲಿ ಸದಾ ಎಚ್ಚರದಿಂದ ನಿಯತಕಾಲವನ್ನು ಕಳೆಯಬೇಕೆಂಬುದು ನನ್ನ ತೀರ್ಮಾನವು. ಈ ನನ್ನ ಉದ್ದೇಶವನ್ನು ನಿಮಗೆ ತಿಳಿಸಿರುವೆನು" ಎಂದನು.

ಇದು ಎರಡನೆಯ ಅಧ್ಯಾಯವು.

ಭೀಮನು ಅಡಿಗೆಯವನ ವೇಷದಿಂದಲೂ, ಅರ್ಜುನನು ನಪುಂಸಕ ವೇಷದಿಂದಲೂ ವಿರಾಟನಲ್ಲಿರುವುದಾಗಿ ಹೇಳಿದುದು.

ಎಲೈ ಜನಮೇಜಯರಾಜೇಂದ್ರಾ! ಕೇಳು! ಹೀಗೆ ಧರ್ಮಪುತ್ರನು ತನ್ನ ತೀರ್ಮಾನವನ್ನು ತಿಳಿಸಿ, ಭೀಮನ ಕಡೆಗೆ ತಿರುಗಿ ನೋಡಿದನು. ಅವನ ಮೇಲೆ ದೃಷ್ಟಿಯು ಬಿದ್ದೊಡನೆಯೇ, ಧರ್ಮರಾಜನಿಗೆ ಕಣ್ಣುಗಳಲ್ಲಿ ನೀರು ತುಳುಕುತಿತ್ತು. ಬಿಸಿಬಿಸಿಯಾಗಿ ನಿಟ್ಟುಸಿರನ್ನು ಬಿಟ್ಟು "ವತ್ಸ ಭೀಮಸೇನ! ಮತ್ಸ್ಯರಾಷ್ಟ್ರದಲ್ಲಿ ನೀನು ಹೇಗೆ ಕಾಲವನ್ನು ಕಳೆಯಬಲ್ಲೆ? ಅಲ್ಲಿ ನೀನು ಮಾಡಬೇಕೆಂದಿರುವ ಕೆಲಸವೆಂತದು? ಓ ವತ್ಸಾ! ಅರಿಂದಮಾ! ಹಿಂದೆ ನೀನು ಗಂಧಮಾದನಪರ್ವತದಲ್ಲಿ, ಕೋಪಾವೇಶದಿಂದ ನಿನ್ನನ್ನಿದಿರಿಸಿದ ಯಕ್ಷರನ್ನೂ, ಕೆಂಡದಂತೆ ಉರಿಯುವ ಕಣ್ಣುಳ್ಳ ರಾಕ್ಷಸರನ್ನೂ ನಿನ್ನ ನಿಜಪರಾಕ್ರಮದಿಂದ ಕೊಂದು, ಪಾಂಚಾಲಕನ್ಯಕೆಯಾದ ದ್ರೌಪದಿಗೆ ಅಲ್ಲಿನ ತಾವರೆಹೂಗಳನ್ನು ಅಸಂಖ್ಯಾತವಾಗಿ ತಂದುಕೊಟ್ಟಿಯಲ್ಲವೆ! ರಾಕ್ಷಸರಾಜನೂ, ಮಹಾ ಭಯಂಕರನೂ, ಮನುಷ್ಯಭಕ್ಷಕನೂ ಆದ ಬಕಾಸುರನನ್ನು ನೀನು ಒಬ್ಬ ಬ್ರಾಹ್ಮಣನಿಗಾಗಿ ಕೊಂದುಕೆಡಹಿದೆ. ಆಗಿನಿಂದ ಏಕಚಕ್ರನಗರವೇ ನಿನ್ನಿಂದ ನಿರ್ಭಯವಾಗಿ ಕ್ಷೇಮದಿಂ

ದಿರುವಂತಾಯಿತು. ಮಹಾವೀರ್ಯವುಳ್ಳ ಹಿಡಿಂಬನನ್ನೂ, ಕಿಮ್ಮೀರನೆಂಬ ರಾಕ್ಷಸರನ್ನೂ ಕೊಂದು, ಆ ಕಾಡುಗಳನ್ನು ನೀನು ನಿಷ್ಕಂಟಕವಾಗಿ ಮಾಡಿದೆ. ಜಟಾಸುರವಧದಿಂದ ನೀನು ದ್ರೌಪದಿಯ ಮಹಾವಿಪತ್ತನ್ನು ನೀಗಿಸಿದೆಯಲ್ಲದೆ, ನಮ್ಮನ್ನೂ ಮರಣದಿಂದ ತಪ್ಪಿಸಿದೆ. ಇಂತಹ ಮಹಾ ವೀರ್ಯಸಂಪನ್ನನಾದ ನೀನು, ಆ ವಿರಾಟನಗರದಲ್ಲಿ ಹೇಗೆತಾನೇ ಸೇವಾಕಾರ್ಯವನ್ನು ಮಾಡಿ ಜೀವಿಸಬಲ್ಲೆ? ವತ್ಸ ವೃಕೋದರಾ! ನೀನಾದರೋ ಕೋಪಸ್ವಭಾವವುಳ್ಳವನು. ಮಹಾಬಲಾಢ್ಯನು. ಇಂತಹ ನೀನು ಕೇವಲ ದುರ್ಬಲನಾದ ಆ ವಿರಾಟನ ನಗರದಲ್ಲಿ ಹೇಗೆ ಸೇವೆಮಾಡಿಕೊಂಡಿರಬಲ್ಲೆ" ಎಂದನು. ಅದಕ್ಕಾ ಭೀಮನು, "ಓ ನರೇಂದ್ರಾ! ನಾನು ವಲಲನೆಂಬ ಹೆಸರಿನಿಂದ ವಿರಾಟನಲ್ಲಿ ಅಡಿಗೆಯವನಾಗಿರಬೇಕೆಂದು ಉದ್ದೇಶಿಸುವೆನು. ಒಳ್ಳೆಯ ರುಚಿರುಚಿಯಾದ ಬಗೆಬಗೆಯ ರಸಗಳನ್ನೂ, ತೊವ್ವೆಗಳನ್ನೂ ನಾನು ಮಾಡಬಲ್ಲೆನು. ಅಡಿಗೆಯ ಕಾರ್ಯದಲ್ಲಿ ನನಗೆ ನೈಪುಣ್ಯವುಂಟು. ಇದಕ್ಕೆ ಮೊದಲು ವಿರಾಟನು ಒಳ್ಳೆಯ ಸುಶಿಕ್ಷಿತರಾದ ಅಡಿಗೆಯವರಿಂದ ಮಾಡಿಸಿದ ಯಾವಯಾವ ಬಗೆಯ ವ್ಯಂಜನಗಳುಂಟೋ, ಅವುಗಳನ್ನೂ ರುಚಿಯಲ್ಲಿ ವಿಾರಿಸುವಹಾಗೆ ಪದಾರ್ಥಗಳನ್ನು ಮಾಡಿ ಬಡಿಸಿ, ಆ ರಾಜನ ಮನಸ್ಸನ್ನು ಸಂತೋಷಪಡಿಸಬಲ್ಲೆನು. ಆ ರಾಜನು ಇದುವರೆಗೆ ಹಿಂದೆ ಯಾವಾಗಲೂ ತಿಂದು ಕಾಣದ ರಸವತ್ತಾದ ಮತ್ತು ಗುಣಯುಕ್ತವಾದ ಅನ್ನಪಾನಾದಿಗಳನ್ನು ಒದಗಿಸಬಲ್ಲೆನು. ನನ್ನ ಅಡಿಗೆಯ ರುಚಿಯನ್ನು ಒಂದಾವರ್ತಿ ಸವಿನೋಡಿದರೆ, ಮತ್ಸ್ಯರಾಜನು ನನ್ನಲ್ಲಿ ಅಸಾಧಾರಣಪ್ರೀತಿಯನ್ನಿಡುವನು. ಅಣ್ಣಾ! ಇದು ಮಾತ್ರವಲ್ಲ. ಅಡಿಗೆಗೆ ಬೇಕಾದ ಸೌದೆಗಾಗಿ ನೂರಾರು ಮರಗಳನ್ನು ಕಿತ್ತು, ಒಂದೇ ಹೊರೆಯಾಗಿ ಹೊತ್ತು ತರುವೆನು. ಆ ವಿರಾಟನು ನಾನು ಮಾಡತಕ್ಕ ಈ ಅದ್ಭುತಕಾರ್ಯಗಳನ್ನು ನೋಡಿದರೆ, ಎಂದಿಗೂ ನನ್ನನ್ನು ಅಲಕ್ಷ್ಯಮಾಡಲಾರನು. ಅಣ್ಣಾ! ಮತ್ತೊಂದು ಸಂಗತಿಯುಂಟು. ಇದುವರೆಗೆ ಯಾರಿಗೂ ಸೋಲದೆ ಆ ವಿರಾಟನ ಆಸ್ಥಾನದಲ್ಲಿದ್ದುಕೊಂಡು ಎಂತವರಿಗೂ ತಾವು ದುರ್ಜಯರೆಂಬ ನಂಬಿಕೆಯನ್ನು ರಾಜನಿಗೆ ಹುಟ್ಟಿಸಿ ಅವನನ್ನಾಶ್ರಯಿಸಿ ಜೀವಿಸುತ್ತಿರುವ ಜಟ್ಟಗಳೆಲ್ಲರನ್ನೂ ಜಯಿಸಿ, ಅವನನ್ನು ಸಂತೋಷಗೊಳಿಸಬಲ್ಲೆನು. ಆದರೆ,

ನಾನು ಆ ಜಟ್ಟಿಗಳೊಡನೆ ಯುದ್ಧಮಾಡಿದರೂ, ಅವರಲ್ಲಿ ಯಾರನ್ನೂ ಕೊಲ್ಲುವುದಿಲ್ಲ. ಅವರನ್ನು ಬಲವಾಗಿ ನೋಯಿಸಿ ಜೀವಸಹಿತವಾಗಿ ಬಿಟ್ಟು ಬಿಡುವೆನು. ಅವರು ಹಿಂದೆ ತೋರಿಸಿದ ಪರಾಕ್ರಮದ ಹೆಮ್ಮೆಯೆಲ್ಲವನ್ನೂ ಮುರಿಯುವೆನು. ಇದಲ್ಲದೆ ಮಹಾವೃಷಭವಾಗಲಿ, ದೊಡ್ಡ ಕೋಣ ನಾಗಲಿ, ಅರುವತ್ತು ವರ್ಷದ ಮದದಾನೆಯಾಗಲಿ, ಸಿಂಹ, ಹುಲಿ, ಮುಂ ತಾದ ಕ್ರೂರಮೃಗಗಳೇ ಆಗಲಿ ನನ್ನಿದಿರಿಗೆ ಬಂದರೆ, ಒಂದೇ ಸಲಕ್ಕೆ ಅವು ಗಳನ್ನು ನಿರ್ಭಯವಾಗಿ ಹಿಡಿದು ನಿಗ್ರಹಿಸುವೆನು. ಇದರಲ್ಲಿ ಸಂದೇಹವೇ ಇಲ್ಲ. ಬೇರೊಬ್ಬರ ಕೈಗೆ ಅಡಗದ ಸರ್ಪವಿಷದಂತೆ ಕ್ರೂರಸ್ವಭಾವವುಳ್ಳ ಎಂತಹ ಪ್ರಾಣಿಗಳನ್ನಾದರೂ ನಾನು ವಿರಾಟರಾಜನ ಕಣ್ಣಿದಿರಾಗಿಯೇ ಕೈಯಿಂದ ಕಟ್ಟಿ ಹಿಡಿಯಬಲ್ಲೆನು. ಆ ವಿರಾಟರಾಜನ ಪಾಕಶಾಲೆಯಲ್ಲಿ ಅಡಿಗೆಮಾಡುವವರೂ, ಮಾಂಸವನ್ನು ಪಕ್ವಮಾಡುವವರೂ, ಯಾರುಯಾ ರುಂಟೋ ಅವರೆಲ್ಲರನ್ನೂ ನಾನು ನನ್ನ ಕಾರ್ಯಚಾತುರ್ಯದಿಂದ ಸಂತೋಷಗೊಳಿಸಬಲ್ಲೆನು. ಯಾರಾದರೂ ನನ್ನನ್ನು ನೀನು ಯಾರೆಂದು ಕೇಳಿದಪಕ್ಷದಲ್ಲಿ, ಧರ್ಮಪುತ್ರನಾದ ಯುಧಿಷ್ಠಿರನಲ್ಲಿ ನಾನು ಆಡಿಗೆಯವ ನಾಗಿದ್ದು, ತೊವ್ವೆ ಮುಂತಾದ ಭಕ್ಷ್ಯಭೋಜ್ಯಗಳನ್ನು ಮಾಡಿ ಬಡಿಸುವು ದರೊಡನೆ, ಮದದಿಂದ ಕೊಬ್ಬಿದ ಗೂಳಿಗಳನ್ನು ಕಟ್ಟಿ ಹಿಡಿದು ಸ್ವಾಧೀ ನಕ್ಕೆ ತರುವುದು, ಮಲ್ಲಯುದ್ಧಗಳನ್ನು ಮಾಡುವುದು, ಹೀಗೆ ಹಲವು ಬಗೆಯ ಕಾರ್ಯಗಳನ್ನು ಮಾಡುತಿದ್ದೆ''ನೆಂದು ಹೇಳುವೆನು. ಅಣ್ಣಾ ! ನನ್ನ ವಿಚಾರವಾಗಿ ನೀವೊಬ್ಬರೂ ಚಿಂತಿಸಬೇಕಾದುದಿಲ್ಲ. ನನ್ನನ್ನು ನಾನೇ ಕಾಪಾಡಿಕೊಳ್ಳುತ್ತ ಎಚ್ಚರದಿಂದ ನಡೆದುಕೊಳ್ಳುವೆನು. ವಿರಾಟನಗರದಲ್ಲಿ ಬೇರೆ ಯಾರಿಗೂ ತಿಳಿಯದಂತೆ, ನಾನು ಆ ರಾಜನ ಬಳಿಯಲ್ಲಿ ಹೀಗಿರುವು ದಾಗಿ ನಿಶ್ಚಯಿಸಿರುವೆನು'' ಎಂದನು. ಆಮೇಲೆ ಧರ್ಮರಾಜನು ತಿರುಗಿ ಭೀಮನನ್ನು ಕುರಿತು ''ವತ್ಸ ಭೀಮಾ! ನಿನ್ನ ಸಂಗತಿಯಿರಲಿ! ಮಹಾ ಧನುರ್ಧಾರಿಯಾದ ಈ ಅರ್ಜುನನು ಆ ವಿರಾಟನಗರದಲ್ಲಿ ಹೇಗೆ ವರ್ತಿಸು ವನೋ ತಿಳಿಯಲಿಲ್ಲ. ಹಿಂದೆ ಅಗ್ನಿದೇವನು ಬ್ರಾಹ್ಮಣವೇಷದಿಂದ ಬಂದು, ತಾನು ಬಹಳ ಹಸಿದಿರುವುದಾಗಿಯೂ, ತನಗೆ ಬೇಕಾದ ಭೋಜನಸಮೃದ್ಧಿ ಯುಳ್ಳ ಖಾಂಡವವನವನ್ನು ತನ್ನ ಆಹಾರಕ್ಕಾಗಿ ಬಿಡಿಸಿಕೊಡಬೇಕೆಂದೂ,

ದೈನ್ಯದಿಂದ ಬೇಡಿಕೊಂಡಾಗ, ಮಹಾಯಶಸ್ವಿಯೂ, ಧರ್ಮಾತ್ಮನೂ ಆದ ಈತನು, ಆ ಅಗ್ನಿದೇವನಿಗೆ "ಹಾಗೆಯೇ ಆಗಲಿ" ಎಂದು ಅಭಯವನ್ನು ಕೊಟ್ಟು, ರಥಮಾತ್ರಸಹಾಯನಾಗಿ ಇಂದ್ರನನ್ನು ಜಯಿಸಿ, ಅನೇಕ ಸರ್ಪಗಳನ್ನೂ, ರಾಕ್ಷಸರನ್ನೂ ಕೊಂದು ತನ್ನ ಪ್ರತಿಜ್ಞೆಯನ್ನು ಈಡೇರಿಸಿದನು. ದೇವಮನುಷ್ಯರನ್ನೆಲ್ಲ ಏಕರಥನಾಗಿ ಜಯಿಸಿದ ಮಹಾವೀರಾಗ್ರೇಸರನಾದ ಈ ಅರ್ಜುನನು ವಿರಾಟನಗರದಲ್ಲಿ ಮಾಡಬೇಕೆಂದಿರುವ ಕಾರ್ಯದ ರೀತಿಯೇನು? ವೃಕೋದರಾ! ಸರ್ಪದಂತೆ ಕ್ರೂರಸ್ಪರ್ಶವುಳ್ಳ ಈ ಅರ್ಜುನನಾದರೋ ಸಾಮಾನ್ಯನಲ್ಲ. ಸರ್ಪಗಳಲ್ಲಿ ವಾಸುಕಿಯೂ, ಹಾವುಗಳಲ್ಲಿ ದೃಷ್ಟಿವಿಷವುಳ್ಳ ಹಾವುಗಳೂ, ತೇಜಸ್ವಿಗಳಲ್ಲಿ ಅಗ್ನಿಯೂ, ನದಿಗಳಲ್ಲಿ (ಜಲಾಶ್ರಯಗಳಲ್ಲಿ) ಸಮುದ್ರವೂ, ಪರ್ವತಗಳಲ್ಲಿ ಹಿಮವಂತವೂ, ದೇವತೆಗಳಲ್ಲಿ ಮಹೇಂದ್ರನೂ, ದಾನವರಲ್ಲಿ ಬಲಿಚಕ್ರವರ್ತಿಯೂ, ದಿಗ್ಗಜಗಳಲ್ಲಿ ಸುಪ್ರತೀಕವೂ, ನೊಗಕ್ಕೆ ಸೇರಿಸಲು ಯೋಗ್ಯವಾದ ವಾಹನಗಳಲ್ಲಿ ಕುದುರೆಗಳೂ, ಯಕ್ಷರಲ್ಲಿ ಕುಬೇರನೂ, ಮೃಗಗಳಲ್ಲಿ ಸಿಂಹವೂ, ರಾಕ್ಷಸರಲ್ಲಿ ದಶಗ್ರೀವ (ರಾವಣ) ನೂ, ದೈತ್ಯರಲ್ಲಿ ಶಂಬರನೂ, ರುದ್ರರಲ್ಲಿ ಕಾಪಾಲಿಯೂ, ಬಲಾಢ್ಯರಲ್ಲಿ ವಿಷ್ಣುವೂ, ಸರ್ಪಗಳಲ್ಲಿ ರೋಷಾಸೂಯೆಗಳಿಂದ ಕೂಡಿದ ತಕ್ಷಕನೂ, ಪಕ್ಷಿಗಳಲ್ಲಿ ತನ್ನ ಬಲದಿಂದಲೂ ನೇಗದಿಂದಲೂ ವಾಯುವನ್ನೂ ಕೀಳ್ಮಾಡತಕ್ಕ ಗರುತ್ಮಂತನೂ, ತಪಿಸುವ ಶಕ್ತಿಯುಳ್ಳ ವಸ್ತುಗಳಲ್ಲಿ ಸೂರ್ಯನೂ, ಪ್ರಜೆಗಳಲ್ಲಿ ಬ್ರಾಹ್ಮಣನೂ, ಮಡುಗಳಲ್ಲಿ ಪಾತಾಳವೂ, ಗರ್ಜಿಸತಕ್ಕವುಗಳಲ್ಲಿ ಪರ್ಜನ್ಯನೂ, ಆಯುಧಗಳಲ್ಲಿ ವಜ್ರಾಯುಧವೂ, ಗೋವುಗಳಲ್ಲಿ ಕೊಬ್ಬಿದ ಮಹಾವೃಷಭವೂ, ನಾಗಗಳಲ್ಲಿ ಧೃತರಾಷ್ಟ್ರವೂ, ಆನೆಗಳಲ್ಲಿ ಐರಾವತವೂ, ಪ್ರಿಯವಸ್ತುಗಳಲ್ಲಿ ಸುಪುತ್ರನೂ, ಸುಹೃತ್ತುಗಳಲ್ಲಿ ಶೀಲವತಿಯಾದ ಪತ್ನಿಯೂ, ಪರ್ವತಗಳಲ್ಲಿ ಮಹಾಮೇರುವೂ, ದೇವಸಮೂಹದಲ್ಲಿ ಮಹಾವಿಷ್ಣುವೂ, ಗ್ರಹಗಳಲ್ಲಿ ಚಂದ್ರನೂ, ತಟಾಕಗಳಲ್ಲಿ ಮಾನಸಸರೋವರವೂ, ತಮ್ಮತಮ್ಮ ಜಾತಿಯಲ್ಲಿ ಮೇಲೆನಿಸಿರುವಂತೆ, ಯುವಕನಾದ ಈ ಅರ್ಜುನನು ಎಲ್ಲಾ ಧನುರ್ಧಾರಿಗಳಲ್ಲಿ ತಾನೇ ಮೇಲೆಸಿಕೊಂಡಿರುವನು. ಈ ಅರ್ಜುನನು ದೇವೇಂದ್ರನಿಗಾಗಲಿ, ಸಾಕ್ಷಾದ್ವಾಸುದೇವನಿಗಾಗಲಿ ಕಡಿಮೆಯಾದವನಲ್ಲ. ದೇವೇಂದ್ರನ ಗೃಹದಲ್ಲಿ ಇವನು

ಐದುವರ್ಷಗಳ ಕಾಲದವರೆಗೆ ವಾಸಮಾಡಿ ಬಂದವನು. ಸಮಸ್ತ ಶಸ್ತ್ರಧಾರಿಗಳಿಗೂ ಮೇಲೆನಿಸಿದ ಈತನು, ಬ್ರಹ್ಮಚರ್ಯೆಯನ್ನು ಹಿಡಿದು ದೃಢವ್ರತವುಳ್ಳವನಾಗಿ, ಮಹಾವೇಗವುಳ್ಳವಾಗಿಯೂ, ಸೂಕ್ಷ್ಮಗಳಾಗಿಯೂ, ವಿಚಿತ್ರಗಳಾಗಿಯೂ, ಅಮೋಘಗಳಾಗಿಯೂ ಇರುವ ಅಸ್ತ್ರಗಳನ್ನೂ ಪಡೆದು ಬಂದಿರುವನು. ಮತ್ತು ಇವನು ಸರ್ವವಿಷಯಗಳನ್ನೂ ಬಲ್ಲವನು. ಸರ್ವಜನಪ್ರಿಯನು. ವಾಗ್ಮಿಗಳಲ್ಲಿ ಮೇಲೆನಿಸಿದವನು. ಈತನು ಇಂದ್ರನಿಂದ ಅನೇಕಾಸ್ತ್ರಗಳನ್ನು ಪಡೆದು, ಅವನಿಂದ ಅನುಜ್ಞಾಪ್ತನಾಗಿ ತಿರುಗಿ ಭೂಮಿಗೆ ಬಂದವನು. ವತ್ಸ ಭೀಮಾ! ಹೆಚ್ಚೇಕೆ? ಪಾಂಡುಪುತ್ರರಾದ ನಮ್ಮೆಲ್ಲರ ಕ್ಷೇಮಕ್ಕಾಗಿಯೂ, ಧೃತರಾಷ್ಟ್ರಪುತ್ರರಾದ ಕೌರವರ ವಿನಾಶಕ್ಕಾಗಿಯೂ ಈ ಲೋಕದಲ್ಲಿ ಜನಿಸಿದ ಹನ್ನೆರಡನೆಯ ರುದ್ರನೆಂದೂ, ಹದಿಮೂರನೆಯ ಆದಿತ್ಯನೆಂದೂ, ಒಂಭತ್ತನೆಯ ವಸುವೆಂದೂ, ಎಂಟನೆಯ ಕುಲಪರ್ವತವೆಂದೂ ನಾನು ಇವನನ್ನು ಭಾವಿಸಿರುವೆನು. ಇವನ ಎಡಬಲದ ತೋಳುಗಳೆರಡೂ ಒಂದೇ ಅಳತೆಯುಳ್ಳವುಗಳಾಗಿ, ದೀರ್ಘವಾಗಿ, ಮಹಾವೃಷಭದ ಮುಂಗಾಲುಗಳಿಗೆ ಸಮಾನಗಳಾಗಿ, ಜ್ಯಾಘಾತದಿಂದ (ಬಿಲ್ಲಿನ ಹೆದೆಯ ಪೆಟ್ಟಿನಿಂದ) ಜಿಡ್ಡುಗಟ್ಟಿದ ಗುರುತುಗಳನ್ನೊಳಕೊಂಡು, ಉಬ್ಬಿ ದಪ್ಪನಾಗಿಯೂ, ದೊಡ್ಡ ಬಾಗಿಲಗುಳಿಗೆ ಸಮಾನವಾಗಿಯೂ, ಆನೆಯ ಸೊಂಡಿಲಂತೆ ದುಂಡಾಗಿ, ಅಂಗುಲಿತ್ರಾಣಗಳನ್ನು (ಕೈಗೌಸಣಿಗೆ) ಧರಿಸಲು ಯೋಗ್ಯವಾಗಿಯೂ, ಮೃದುವಾದ ಮತ್ತು ಕೆಂಪಾದ ಅಂಗೈಗಳಿಂದ ಮಂಗಳಕರವಾಗಿ ಶೋಭಿಸುತ್ತಿರುವುವು. ಮತ್ತು ಶ್ಯಾಮಲವಾದ ಮೈ ಬಣ್ಣದಿಂದಲೂ, ಯೌವನ ವಯಸ್ಸಿನಿಂದಲೂ, ಸುರುಳಿಗಟ್ಟಿದ ತಲೆಕೂದಲುಗಳಿಂದಲೂ ದರ್ಶನೀಯವಾದ ಸುಂದರಾಕೃತಿಯುಳ್ಳವನಾಗಿ, ಗಾಂಡೀವಧಾರಿಯೆಂದೂ, ಶ್ವೇತಾಶ್ವನೆಂದೂ, ಕಿರೀಟಿಯೆಂದೂ, ವಾನರಧ್ವಜನೆಂದೂ ಪ್ರಖ್ಯಾತಿಗೊಂಡ ಈ ಕುಮಾರನು, ಆ ವಿರಾಟನ ಬಳಯಲ್ಲಿ ಯಾವ ವೇಷವನ್ನು ಧರಿಸಿ, ಯಾವ ವೃತ್ತಿಯನ್ನವಲಂಬಿಸಿ, ಯಾವ ಕಾರ್ಯಗಳನ್ನು ಮಾಡುತ್ತ, ಹೇಗೆ ನಡೆದುಕೊಳ್ಳುವನೋ ಕಾಣೆನು. ಭೀಭತ್ಸುವೆಂದೂ, ಭಯಂಕರ ಧನುರ್ಧಾರಿಯೆಂದೂ ಲೋಕವಿದಿತನಾದ ನಮ್ಮ ಈ ಅರ್ಜುನನು, ಯಾವ ಕಾರ್ಯದಿಂದ ವಿರಾಟನನ್ನು ಮೆಚ್ಚಿಸುತ್ತ,

ನಿಯತಕಾಲವನ್ನು ಕಳೆಯಬಹುದು?'' ಎಂದನು. ಆಗ ಅರ್ಜುನನು ಅಣ್ಣಾ! ನೀನು ಹೇಳಿದುದೆಲ್ಲ ನಿಜವೇ! ಜ್ಯಾಘಾತಗಳಿಂದಲೂ, ಆಗಾಗ ತೋಳನ್ನು ತಟ್ಟುವುದರಿಂದಲೂ, ಪಟ್ಟುಗಟ್ಟಿದ ಈ ನನ್ನ ತೋಳಿನ ಗುರು ರುತುಗಳನ್ನು, ಬೇರೊಬ್ಬರ ಕಣ್ಣಿಗೆ ಕಾಣದಂತೆ ಮರೆಸಿಡಬೇಕಾದರೆ, ನಾನು ಯಾವಾಗಲೂ ಕಂಚುಕವನ್ನು (ರವಿಕೆಯನ್ನು) ತೊಟ್ಟುಕೊಂಡೇ ಇರಬೇಕಲ್ಲದೆ ಬೇರೆವಿಧದಿಂದ ಅವುಗಳನ್ನು ಮರೆಸಿಡಲು ಸಾಧ್ಯವಿಲ್ಲ. ಹಾಗೆ ನಾನು ಹೆಂಗಸಂತೆ ರವಿಕೆಯನ್ನು ತೊಟ್ಟುಕೊಳ್ಳುವುದು ಹೀನಕಾರ್ಯವಾಗಿದ್ದರೂ, ಕಾರ್ಯಸಾಧನೆಗಾಗಿ ನಾನು ಹಾಗೆ ಮಾಡಿಯೇ ತೀರಬೇಕು. ಜ್ಯಾಘಾತದಿಂದ ಅಲ್ಲಲ್ಲಿ ವಿಶಾಲವಾದ ಗುರುತುಗಳುಳ್ಳ ಈ ನನ್ನ ಉಬ್ಬಿದ ಭುಜಗಳನ್ನು ಮರೆಸಿಡುವುದಕ್ಕೆ ಬೇರೆ ಉಪಾಯವಿಲ್ಲ. ಸ್ತ್ರೀವೇಷಕ್ಕೆ ತಕ್ಕಂತೆ ಕೈಯಲ್ಲಿ ಎರಡು ಶಂಖದ ಬಳೆಗಳನ್ನೂ, ಕಿವಿಯಲ್ಲಿ ತೂಗಾಡುವ ಎರಡು ಕುಂಡಲಗಳನ್ನೂ ತೊಟ್ಟುಕೊಂಡು, ತಲೆಯ ಕೂದಲನ್ನು ಜಡೆಹಾಕಿ ಹೆಣೆದು ಹಿಂದೆ ತೂಗುಬಿಟ್ಟು, ನನ್ನ ಹೆಸರು ಬೃಹನ್ನಳೆಯೆಂದು ಹೇಳಿಕೊಂಡು ಆ ರಾಜನ ಬಳಿಗೆ ಹೋಗುವೆನು. ಮತ್ತು ಅಲ್ಲಿ ನಾನು ಸ್ತ್ರೀಯರ ಸ್ವಭಾವಕ್ಕೆ ತಕ್ಕಂತೆ, ಆಗಾಗ ಕಥೆಗಳನ್ನು ಹೇಳುತ್ತ, ಪ್ರಜೆಗಳ ನಡತೆಗಳನ್ನೆಲ್ಲ ಹಲವು ಬಗೆಯ ಪರಿಹಾಸಗಳಿಂದ ಉದ್ಘಾಟಿಸಿ ತೋರಿಸುತ್ತ, ವಿರಾಟ ರಾಜನಿಗೂ, ಅವನ ಅಂತಃಪುರದ ಸ್ತ್ರೀಯರಿಗೂ ಸಂತೋಷವನ್ನುಂಟುಮಾಡುತ್ತಿರುವೆನು. ಇದಲ್ಲದೆ ಆ ರಾಜನ ಅಂತಃಪುರ ಸ್ತ್ರೀಯರಿಗೆ ನೃತ್ಯ, ಗೀತ ವಾದ್ಯಾದಿಗಳನ್ನೂ ವಿವಿಧ ರೀತಿಯಲ್ಲಿ ಕಲಿಸಿಕೊಡುವೆನು. ರಾಜೇಂದ್ರಾ! ಹೀಗೆ ನಾನು ಆ ವಿರಾಟನಗರಿಯಲ್ಲಿ ಸ್ತ್ರೀಸ್ವಭಾವಕ್ಕನುಗುಣವಾದ ನೃತ್ತಗೀತಾದಿಗಳಿಂದಲೂ, ಮಾತುಕತೆಗಳಿಂದಲೂ, ಹೇಗೋ ನನ್ನ ರೂಪವನ್ನು ಉಪಾಯದಿಂದ ಮರೆಸಿಕೊಂಡು ಕಾಲವನ್ನು ಕಳೆಯಬಲ್ಲೆನು. ಯಾರಾದರೂ ನನ್ನ ಪೂರ್ವೋತ್ತರಗಳನ್ನು ಕೇಳಿದ ಪಕ್ಷದಲ್ಲಿ, ನಾನು ಯುಧಿಷ್ಠಿರನ ಗೃಹದಲ್ಲಿ ದ್ರೌಪದಿಗೆ ಪರಿಚಾರಿಕೆಯಾಗಿದ್ದೆನೆಂದೂ, ಧರ್ಮರಾಜನ ಪ್ರೀತಿಗೆ ನಾನು ಪಾತ್ರನಾಗಿದ್ದೆನೆಂದೂ ಹೇಳುವೆನು. ಅಣ್ಣಾ! ಇದಲ್ಲದೆ ಮತ್ತೊಂದು ರಹಸ್ಯವನ್ನು ತಿಳಿಸುವೆನು. ಕೇಳು. ಊರ್ವಶಿಯ ಶಾಪದಿಂದ ನನಗೆ ನಪುಂಸಕತ್ವವು ಪ್ರಾಪ್ತವಾಗಿದೆ.

ಈ ಹದಿಮೂರನೆಯ ವರ್ಷದ ಕೊನೆಯಲ್ಲಿ ಆ ಶಾಪದಿಂದ ನನಗೆ ಬಿಡುಗಡೆಯಾಗುವಂತೆ ಇಂದ್ರನು ಅನುಗ್ರಹಿಸಿರುವನು. ಆದುದರಿಂದ ಆ ಶಾಪ ಕಾಲವನ್ನು ದಾಟುವುದಕ್ಕೆ ಇದೊಂದು ಒಳ್ಳೇ ಸಂದರ್ಭವೂ ಏರ್ಪಟ್ಟಿದೆ. ಅಂತಹ ಸ್ತ್ರೀವೇಷದಿಂದಿರಬೇಕೆಂಬುದೇ ನನ್ನ ತೀರ್ಮಾನವು. ಹಿಂದೆ ನಳರಾಜನು ಹೇಗೋ ಹಾಗೆ, ಈ ವಿಧವಾಗಿ ನಾನು ಕೃತ್ರಿಮವೇಷದಿಂದ ಸ್ವರೂಪವನ್ನು ಮರೆಸಿಕೊಂಡು, ವಿರಾಟನಗರದಲ್ಲಿ ಈ ಒಂದು ವರ್ಷ ಕಾಲವನ್ನು ವಿನೋದದಿಂದ ಸುಖವಾಗಿಯೇ ಕಳೆಯುವೆನು'' ಎಂದನು. ಆಗ ಧರ್ಮರಾಜನು ವ್ಯಸನದಿಂದ ''ಆಹಾ! ಎಂತಹ ವಿಪರೀತವಿದು? ಕೀರ್ತಿಪರಾಕ್ರಮಗಳಲ್ಲಿ ಸಾಕ್ಷಾನ್ಮಹಾವಿಷ್ಣುವಿಗೆ ಸಮಾನನಾಗಿ, ಭರತ ಕುಲೋತ್ತಮನೆನಿಸಿಕೊಂಡು, ವಜ್ರಸಮಾನವಾದ ದೃಢಮುಷ್ಟಿಯುಳ್ಳ ಈ ಅರ್ಜುನನು ಕೂಡ, ಮಹಾಮೇರುಪರ್ವತವು ಮೈಮರೆಸಿಕೊಂಡಂತೆ, ತಾನು ಷಂಡನೆಂದು ಹೇಳಿಕೊಳ್ಳುತ್ತ ವಿರಾಟನಗರದಲ್ಲಿ ತಲೆಮರೆಸಿಕೊಂಡಿರುವೆನೆಂದು ಹೀಗೆ ಶಪಥಮಾಡಿದುದು ಒಂದು ಮಹಾಪಾಪದ ಫಲವಲ್ಲವೆ?'' ಎಂದನು.

ಇದು ಮೂರನೆಯ ಅಧ್ಯಾಯವು.

ನಕುಲಸಹದೇವರೂ, ದ್ರೌಪದಿಯೂ ತಮ್ಮ ತಮ್ಮ ನಿರ್ಣಯಗಳನ್ನು ತಿಳಿಸಿದುದು.

ಜನಮೇಜಯರಾಜಾ ಕೇಳು! ಪುರುಷಶ್ರೇಷ್ಠನಾಗಿ, ಧಾರ್ಮಿಕರಲ್ಲಿ ಮೇಲೆನಿಸಿದ ಅರ್ಜುನನು ಹೀಗೆಂದು ಹೇಳಿ ಸುಮ್ಮನಾಗಲು, ತಿರುಗಿ ಯುಧಿಷ್ಠಿರನು ಬೇರೊಬ್ಬ ತಮ್ಮನಾದ ನಕುಲನನ್ನು ದೃಷ್ಟಿಸಿ, ''ಈ ನಕುಲನು ವಿರಾಟನ ಬಳಿಯಲ್ಲಿ ಯಾವ ಕಾರ್ಯಗಳನ್ನು ಮಾಡುತ್ತ ಹೇಗೆ ವರ್ತಿಸಬಲ್ಲನು? ಈತನೋ ಸುಕುಮಾರವಾದ ಶರೀರವುಳ್ಳವನು. ಯಾವಾಗಲೂ ಸುಖದಲ್ಲಿಯೇ ಬಳೆದವನೇ ಹೊರತು ದುಃಖಾರ್ಹನಲ್ಲ. ಶೂರನು. ನೋಡುವುದಕ್ಕೆ ಅಂದವಾದ ರೂಪವುಳ್ಳವನು. ಇನ್ನೂ ಬಾಲಕನು.

ಯಾವಾಗಲೂ ಮೋಹದಿಂದ ಬೆಳೆಸಲ್ಪಟ್ಟವನು. ಇಂತವನೂ ಈಗ ಇತರ ರಾಜನಲ್ಲಿ ಸೇವಾವೃತ್ತಿಯೆಂಬ ಕಷ್ಟಕಾರ್ಯಕ್ಕೆ ಮೈಗೊಟ್ಟು ಹೇಗೆ ಸಹಿಸಿ ಕೊಂಡಿರಬಲ್ಲನೋ ಕಾಣೆನು. ವತ್ಸ ನಕುಲಾ! ವಿರಾಟನ ನಗರದಲ್ಲಿ ನೀನು ಮಾಡಬೇಕೆಂದಿರುವ ಕಾರ್ಯವೆಂತದು? ನಿರ್ಣಯಿಸಿ ಹೇಳು'' ಎಂದನು. ಆಗ ನಕುಲನು ''ವಿರಾಟನಲ್ಲಿ ಅಶ್ವಾಧ್ಯಕ್ಷನಾಗಿರಬೇಕೆಂಬುದು ನನ್ನ ಉದ್ದೇಶವು. ಆ ಕಾರ್ಯವು ನನಗೆ ಬಹಳ ಪ್ರಿಯವಾಗಿಯೂ ಇರುವುದು. ದಾಮಗ್ರಂಥಿಯೆಂಬ ಹೆಸರನ್ನಿಟ್ಟುಕೊಂಡು, ಅಶ್ವಗಳನ್ನು ಹಿಡಿದು ಕಟ್ಟುವ ಕಾರ್ಯಗಳನ್ನು ನೋಡಿಕೊಳ್ಳುವೆನು. ನಾನು ಈ ಕೆಲಸಮಾಡಿದರೂ, ಜನರು ಯಾರೂ ನನ್ನನ್ನು ಎಂದಿಗೂ ಅಪಮಾನ ಗೊಳಿಸಲಾರರು. ಅಶ್ವಶಿಕ್ಷಣದಲ್ಲಿಯೂ, ಕುದುರೆಗಳ ರೋಗಚಿಕಿತ್ಸೆಯ ಲ್ಲಿಯೂ ನನಗೆ ನೈಪುಣ್ಯವುಂಟು. ಇದಲ್ಲದೆ, ನಿನಗೆ ಹೇಗೋ ಹಾಗೆ ನನಗೂ ಕುದುರೆಗಳನ್ನು ಕಂಡರೆ ಪ್ರೀತಿಯು ಹೆಚ್ಚು. ಕುದುರೆಯ ಮರಿಗ ಳಾಗಲಿ, ಹೆಣ್ಣುಕುದುರೆಗಳಾಗಲಿ, ನನಗೆ ವಶವಾಗದೆ ವಿಾರಿಹೋಗಲಾ ರವು. ಎಷ್ಟೇ ದುಷ್ಟಾಶ್ವಗಳಾಗಿದ್ದರೂ ನನ್ನಲ್ಲಿಗೆ ಬಂದಮೇಲೆ, ಮೇಲೇರಿ ಹೋಗುವುದಕ್ಕಾಗಲಿ, ಬಂಡಿಗಳಿಗೆ ಹೂಡುವುದಕ್ಕಾಗಲಿ ತಮ್ಮ ದೌಷ್ಟ್ಯ ವನ್ನು ತೋರಿಸಲಾರವು. ಆ ವಿರಾಟನಗರದಲ್ಲಿ ಯಾರಾದರೂ ನನ್ನ ಪೂರ್ವೋತ್ತರಗಳನ್ನು ಕೇಳಿದಪಕ್ಷದಲ್ಲಿ, '' ನಾನು ಹಿಂದೆ ಪಾಂಡವರ ಬಳ ಯಲ್ಲಿ ಅಶ್ವಾಧ್ಯಕ್ಷನಾಗಿದ್ದೆ''ನೆಂದು ಹೇಳುತ್ತ, ನನ್ನ ನಿಜಸ್ಥಿತಿಯು ಯಾರಿಗೂ ತಿಳಿಯದಂತೆ ನಡೆದುಕೊಳ್ಳುವೆನು. ಇದೇ ನನ್ನ ತೀರ್ಮಾ ನವು'' ಎಂದನು. ನಕುಲನು ಹೇಳಿದ ಈ ಮಾತನ್ನು ಕೇಳಿದಮೇಲೆ ಧರ್ಮರಾಜನು, ಸಹದೇವನಕಡೆಗೆ ತಿರುಗಿ '' ಇನ್ನು ಈತನ ಸಂಗತಿ ಯೇನು? ಈತನೋ ಬುದ್ಧಿಯಲ್ಲಿ ಬೃಹಸ್ಪತಿಗೆ ಸಮಾನನು. ನೀತಿ ಯಲ್ಲಿ ಶುಕ್ರನಿಗೆ ಸಾಟಿಯಾದವನು. ದಾರಿತಪ್ಪಿ ಹೋಗದೆ ಯಾವಾಗಲೂ ಸನ್ಮಾರ್ಗದಲ್ಲಿಯೇ ನಡೆಯತಕ್ಕವನು. ಒಳ್ಳೇ ಸುಶಿಕ್ಷಿತನು. ಸತ್ಕಾರ್ಯ ದಲ್ಲಿಯೇ ನೆಲೆಗೊಂಡವನು. ರಾಜತಂತ್ರಗಳನ್ನೆಲ್ಲ ಬಲ್ಲವನು. ರಾಜ್ಯ ತಂತ್ರನಿಪುಣರಾರೂ ಇವನಲ್ಲಿ ಲವಮಾತ್ರವಾದರೂ ತಪ್ಪನ್ನು ಕಂಡು ಹಿಡಿಯಲಾರರು. ಮತ್ತು ಇವನು ಒಳ್ಳೇ ರಾಜನೀತಿಗಳನ್ನೂ ತಿಳಿದವನು!

ಶೂರನು! ಸಕಲ ಮಂತ್ರಾಲೋಚನೆಗಳಲ್ಲಿಯೂ ಸಮರ್ಥನು. ಇವನು ನಮ್ಮ ತಾಯಿಯಾದ ಕುಂತಿಗೆ ಸವತಿಯ ಮಗನಾಗಿದ್ದರೂ, ಅವಳಿಗೆ ನಮಗಿಂತಲೂ ಪ್ರಿಯತಮನಾದ ಪುತ್ರನಂತಿರುವನು. ಇಂತವನು ವಿರಾಟನಲ್ಲಿ ಯಾವಕಾರ್ಯವನ್ನು ಮಾಡುತ್ತಿರಬಹುದು? ವತ್ಸ ಸಹದೇವಾ! ನೀನು ವಿರಾಟನಗರದಲ್ಲಿ ಯಾರಿಗೂ ತಿಳಿಯದಂತೆ ಹೇಗೆ ಕೆಲಸಮಾಡುತ್ತಿರಬಲ್ಲೆ" ಎಂದನು. ಅದಕ್ಕಾ ಸಹದೇವನು "ಅಣ್ಣಾ! ವಿರಾಟನಲ್ಲಿ ಪಶುಪಾಲಕನಾಗಿರಬೇಕೆಂಬುದು ನನ್ನ ಕೋರಿಕೆ! ಪಶುಗಳನ್ನು ಮೇಯಿಸುವುದು, ಅವುಗಳ ಹಾಲನ್ನು ಕರೆಯುವುದು, ಅವುಗಳನ್ನು ಪೋಷಿಸುವುದು, ಈ ಕಾರ್ಯಗಳೊಳಗೆಲ್ಲ ನನಗೆ ನೈಪುಣ್ಯವುಂಟು. ನನ್ನ ಹೆಸರು ತಂತ್ರೀಪಾಲನೆಂದು ಹೇಳಿಕೊಳ್ಳುವೆನು. ಮಹಾರಾಜಾ! ನಾನು ಈ ಕಾರ್ಯವನ್ನು ಕೈಕೊಂಡಪಕ್ಷದಲ್ಲಿ, ವಿರಾಟನಗರದಲ್ಲಿ ಗೋವುಗಳೆಲ್ಲ ರೋಗಾದಿಗಳಿಲ್ಲದೆ, ಪುಷ್ಟಿಯುಳ್ಳವುಗಳಾಗುವುವು. ಅವುಗಳ ಸಂಖ್ಯೆಯೂ ಅಭಿವೃದ್ಧಿಹೊಂದುವುದು. ಮತ್ತು ಅವು ಸಮೃದ್ಧಿಯಾಗಿ ಹಾಲು ಕೊಡುವುವು. ಹೆಚ್ಚು ಕರುಗಳನ್ನು ಹಾಕುವುವು. ಹಸುಗಳೆಲ್ಲವೂ ಒಳ್ಳೇ ಬಲಾಢ್ಯಗಳಾಗಿ, ಚೆನ್ನಾಗಿ ಪೋಷಣೆಯನ್ನು ಹೊಂದಿ, ಜ್ವರಾದಿದೋಷಗಳೊಂದೂ ಮೈಗೆ ತಟ್ಟದಂತಾಗುವುದು. ನನ್ನ ವಶಕ್ಕೆ ಬಂದ ಗೋವುಗಳಿಗೆ ಚೋರಭಯವಾಗಲಿ, ರೋಗಭಯವಾಗಲಿ, ವ್ಯಾಘ್ರಭಯವಾಗಲಿ ಇಲ್ಲದಂತೆ, ಅವು ಮಂದೆಗಳಲ್ಲಿ ಉಲ್ಲಾಸದಿಂದ ಒಂದಾಗಿ ಸೇರಿ ನಿಶ್ಚಿಂತವಾಗಿರುವುವು. ನನಗೂ ಗೋವುಗಳನ್ನು ಸಾಕುವುದರಲ್ಲಿ ಅಧಿಕಪ್ರೀತಿಯುಂಟು. ನನಗೆ ಆ ಕಾರ್ಯದಲ್ಲಿ ನೈಪುಣ್ಯವುಂಟು. ಅಣ್ಣಾ! ನೀನು ಕೂಡ ಮೊದಲು ನನ್ನನ್ನು ಯಾವಾಗಲೂ ಈ ಗೋರಕ್ಷಣಕಾರ್ಯದಲ್ಲಿಯೇ ನಿಯಮಿಸುತ್ತಿದ್ದೆಯಲ್ಲವೆ? ಅಂದಿನಿಂದಲೇ ನನಗೆ ಆ ಕಾರ್ಯದಲ್ಲಿ ಒಳ್ಳೇ ಅನುಭವವುಂಟಾಗಿದೆ. ಪಶುಗಳಿಗಿರಬೇಕಾದ ಒಳ್ಳೇ ಲಕ್ಷಣಗಳನ್ನೂ, ಅವುಗಳ ಸ್ವಭಾವಗಳನ್ನೂ, ಇನ್ನೂ ಅವುಗಳಿಗೆ ಸಂಬಂಧಪಟ್ಟ ಎಲ್ಲಾ ಸಂಗತಿಗಳನ್ನೂ ನಾನು ಚೆನ್ನಾಗಿ ಬಲ್ಲೆನು. ಇದಲ್ಲದೆ, ಮತ್ತೊಂದು ವಿಶೇಷವುಂಟು. ಯಾವ ಹೋರಿಯಮೂತ್ರವನ್ನು ಮೂಸಿದಮಾತ್ರಕ್ಕೇ ಗೊಡ್ಡುಹಸುಗಳು ಕೂಡ ಗರ್ಭವನ್ನು ಹೊಂದಿ, ಕರುಗಳನ್ನೀಯುವುವೋ,

ಅಂತಹ ಶುಭಲಕ್ಷಣವುಳ್ಳ ಹೋರಿಗಳನ್ನೂ ನಾನು ಬಲ್ಲೆನು. ಹೀಗೆ ನನಗೆ ಆ ಕಾರ್ಯದಲ್ಲಿ ನೈಪುಣ್ಯವೂ, ಪ್ರೀತಿಯೂ ಇರುವುದರಿಂದ, ನಾನು ಅದೇ ಕಾರ್ಯದಿಂದ ರಾಜನನ್ನು ಸಂತೋಷಗೊಳಿಸುವೆನು. ನೀನು ಚಿಂತಿಸಬೇಕಾದುದಿಲ್ಲ. ನನ್ನನ್ನು ಬೇರೆ ಯಾವನೂ ಕಂಡುಹಿಡಿಯ ಲಾರನು. ನನ್ನ ಈ ತೀರ್ಮಾನವು ನಿನಗೂ ಸಮ್ಮತವಾಗಿರಬಹುದು. ಇದೇ ನನ್ನ ಸಂಕಲ್ಪವು'' ಎಂದನು.

ಆಮೇಲೆ ಧರ್ಮರಾಜನು ದ್ರೌಪದಿಯನ್ನು ನೋಡಿ ''ಇನ್ನು ಈ ದ್ರೌಪದಿಯು ಅಲ್ಲಿ ಮಾಡಬೇಕೆಂದಿರುವ ಕಾರ್ಯವೇನು? ಇವಳಾದರೋ ಬೇರೆ ಸ್ತ್ರೀಯರಂತೆ ಯಾವ ಮನೆಗೆಲಸವನ್ನೂ ಮಾಡಿದವಳಲ್ಲ. ಹುಟ್ಟಿದುದು ಮೊದಲು, ಇವಳು, ಹೂ, ಗಂಧ, ಒಡವೆ, ಆಲಂಕಾರಗಳು, ವಿವಿಧ ವಸ್ತ್ರಗಳು, ಇವುಗಳನ್ನುಹೊರತು ಬೇರೊಂದನ್ನೂ ಕಂಡವಳಲ್ಲ. ಪತಿ ವ್ರತೆಯೂ, ಭಾಗ್ಯವತಿಯೂ ಆದ ಈಕೆಯು ಅಲ್ಲಿ ಹೇಗೆ ವರ್ತಿಸಬೇಕೋ ತಿಳಿಯಲಿಲ್ಲ. ಇವಳಾದರೋ ನಮ್ಮೆಲ್ಲರಿಗೂ ಪ್ರಾಣಕ್ಕಿಂತಲೂ ಪ್ರಿಯ ತಮಳು. ಇವಳಲ್ಲಿ ನಮಗೆ ಪತ್ನಿಯೆಂಬ ಮೋಹವು ಮಾತ್ರವಲ್ಲ. ಇವಳು ನಮಗೆ ತಾಯಿಯಂತೆ ಶ್ರದ್ಧೆಯಿಂದ ಪೋಷಿಸಲ್ಪಡಬೇಕಾದವಳು. ಜ್ಯೇಷ್ಠ ಸಹೋದರಿಯಂತೆ ಗೌರವಿಸಲ್ಪಡಬೇಕಾದವಳು. ಸುಕುಮಾರ ದೇಹವುಳ್ಳ ವಳು. ಒಳ್ಳೇ ಸೌಶೀಲ್ಯವತಿ! ರಾಜಕುಮಾರಿ! ಮಹಾ ಯಶಸ್ವಿನಿ! ಮಂಗಳ ಸ್ವರೂಪಿಣಿಯಾದ ಇಂತವಳು, ಆ ವಿರಾಟಗೃಹದಲ್ಲಿ ತನ್ನ ಸತೀತ್ವವನ್ನು ಕಾಪಾಡಿಕೊಂಡು ಹೇಗೆ ವಾಸಮಾಡುವಳೋ ಕಾಣೆನು'' ಎಂದನು. ಅದಕ್ಕೆ ದ್ರೌಪದಿಯು ''ನಾಥಾ! ನನಗಾಗಿ ನೀನು ಚಿಂತಿಸ ಬೇಡ! ನನ್ನ ಭಾಗದಲ್ಲಿ ನಿನಗೇನೂ ಯೋಚನೆಯಿಲ್ಲದಂತೆ ನಾನು ಅಲ್ಲಿ ವಾಸಮಾಡಬಲ್ಲೆನು. ನಾನು ಯಾರೆಂದಾಗಲಿ, ನಾನು ಮಾಡುವ ಕಾರ್ಯ ವೇನೆಂಬುದಾಗಲಿ ಯಾರಿಗೂ ತಿಳಿಯದಂತೆ ನಾನು ಅಲ್ಲಿರಬಲ್ಲೆನು. ನಾನು ಹೇಗೆ ವರ್ತಿಸುವೆನೆಂಬುದನ್ನು ತಿಳಿಸುವೆನು'' ಕೇಳು.

ಓ ಕ್ಷತ್ರಿಯಕುಲೋತ್ತಮಾ! ನಿನಗೆ ಮಂಗಳವಾಗಲಿ! ಉತ್ತಮ ಕುಲದಲ್ಲಿ ಹುಟ್ಟಿದವಳಾದರೂ ನಾನು, ಸೈರಂಧ್ರಿಯೆಂಬ ಹೆಸರಿನಿಂದ, ಪರ

ಗೃಹವಾಸವೆಂಬ ವ್ರತವನ್ನನುಷ್ಠಿಸುತ್ತ, ಆ ವಿರಾಟನ ಮನೆಯಲ್ಲಿರಬೇಕೆಂದು ಉದ್ದೇಶಿಸಿರುವೆನು. ಸೈರಂಧ್ರಿಯರು ರಾಣಿವಾಸದಲ್ಲಿ ರಾಜಸ್ತ್ರೀಯರಿಗೆ ಪರಿಚಾರಿಕೆಯರಾಗಿ ಪರಗೃಹದಲ್ಲಿದ್ದರೂ ಸುರಕ್ಷಿತವಾಗಿರುವುದುಂಟು. ಇಂತಹ ಸ್ತ್ರೀಯರು ಒಬ್ಬನೇ ಪತಿಯನ್ನು ನಂಬಿದವರೆಂದೂ ಲೋಕಕ್ಕೆ ನಂಬಿಕೆಯುಂಟು. ಈಗ ನಾನು ಆದೇ ರೀತಿಯನ್ನವಲಂಬಿಸಿ, ವಿರಾಟನ ಅಂತಃಪುರದ ಹೆಂಗಸರಿಗೆ ತಲೆಬಾಚಿ ಜಡೆಹಾಕುವುದರಲ್ಲಿ ನನ್ನ ಕೌಶಲ್ಯವನ್ನು ತೋರಿಸುವೆನು. ಇದಲ್ಲದೆ ಪುರುಷರು ಮನೆಯಲ್ಲಲ್ಲದಿದ್ದಾಗ, ಅವರ ಹೆಂಡತಿಯರಿಗೆ ಜತೆಯಾಗಿದ್ದು, ಪ್ರಿಯವಾಕ್ಯಗಳಿಂದ ಆಗಾಗ ಸಮಾಧಾನಗೊಳಿಸುತ್ತಲೂ ಇರುವೆನು. ನೀನು ಎಲ್ಲಿಯವಳೆಂದು ರಾಜನು ನನ್ನನ್ನು ಕೇಳಿದರೆ, ನಾನು ಯುಧಿಷ್ಠಿರನ ಮನೆಯಲ್ಲಿ ಪರಿಚಾರಕಿಯಾಗಿದ್ದವಳೆಂದು ಹೇಳುವೆನು. ನನ್ನ ಸ್ವರೂಪವನ್ನು ಮರೆಸಿಕೊಂಡು, ರಾಜಗೃಹದಲ್ಲಿ ನನ್ನನ್ನು ಪೋಷಿಸುವುದು ಅವರಿಗೆ ಕಷ್ಟವಾಗಿ ತೋರದಂತೆ ನಾನು ಅಲ್ಲಿರಬಲ್ಲೆನು. ನನ್ನ ವ್ರತದಿಂದಲೇ ನಾನು ಆತ್ಮರಕ್ಷಣೆಯನ್ನು ಮಾಡಿಕೊಂಡು, ಯಶಸ್ವಿನಿಯಾದ ಸುದೇಷ್ಣೆಯೆಂಬ ವಿರಾಟನ ಪತ್ನಿಯನ್ನು ನನ್ನ ಸೇವೆಯಿಂದ ಸಂತೋಷಪಡಿಸುವೆನು. ಅವಳು ನನ್ನನ್ನು ಪ್ರೀತಿಯಿಂದ ರಕ್ಷಿಸುವಳು. ಆದಕ್ಕಾಗಿ ನೀನು ಚಿಂತಿಸಬೇಡ. ಮತ್ತು ನಾನು ಅಲ್ಲಿರುವಾಗ ನನ್ನ ನಿಜಸ್ಥಿತಿಯನ್ನು ಮರೆಸಿಕೊಂಡಿದ್ದರೂ, ನಿಮ್ಮ ರಕ್ಷಣೆಗೆ ಒಳಪಟ್ಟಿರುವೆನು. ಇದೇ ನನ್ನ ತೀರ್ಮಾನವು'' ಎಂದಳು. ಆಗ ಯುಧಿಷ್ಠಿರನು ''ಓ! ಮಂಗಳಾಂಗಿ! ದುರಾತ್ಮರೂ, ಪಾಪಿಗಳೂ ಆದ ನಮ್ಮ ಶತ್ರುಗಳು ನಮ್ಮನ್ನು ಕಂಡುಹಿಡಿದು, ತಿರುಗಿ ನಮ್ಮನ್ನು ಕಷ್ಟಕ್ಕೆ ಗುರಿಮಾಡಿ, ತಾವು ನೆಮ್ಮದಿಯಾಗಿ ಕ್ಷೇಮದಿಂದಿರುವುದಕ್ಕೆ ಅವಕಾಶಕೊಡದಂತೆ ವರ್ತಿಸಬೇಕು. ನೀನು ಸತ್ಕುಲದಲ್ಲಿ ಹುಟ್ಟಿದುದಕ್ಕೆ ತಕ್ಕಂತೆ ಶುಭಕರವಾದ ಮಾತನ್ನೇ ಆಡಿದೆ. ಪತಿವ್ರತೆಯೂ, ಶೀಲವತಿಯೂ ಆದ ನೀನು ಯಾವ ಪಾಪವನ್ನೂ ಕಂಡವಳಲ್ಲವೆಂಬುದನ್ನು ನಾನು ಬಲ್ಲೆನು'' ಎಂದನು.

ಇದು ನಾಲ್ಕನೆಯ ಅಧ್ಯಾಯವು.

ಧರ್ಮರಾಜನು ತಮ್ಮೊಡನೆ ಬಂದಿದ್ದ ಇಂದ್ರಸೇನಾದಿಗಳನ್ನು
ಬೇರೆಬೇರೆ ಕಡೆಗಳಿಗೆ ಹೋಗುವಂತೆ ಸೂಚಿಸಿದುದು.
ರಾಜಸನ್ನಿಧಿಯಲ್ಲಿ ಹೇಗೆ ವರ್ತಿಸಬೇಕೆಂಬು
ದನ್ನು ಕುರಿತು ಪಾಂಡವರಿಗೆ ಧೌಮ್ಯನ
ಬುದ್ಧಿವಾದಗಳು.

ಆಮೇಲೆ ಧರ್ಮರಾಜನು ಸಹೋದರರನ್ನು ಕುರಿತು "ನೀವು ಈಗ ಹೇಳಿದಂತೆಯೇ ನಿಮ್ಮನಿಮ್ಮ ನಿಶ್ಚಿತಕಾರ್ಯಗಳನ್ನು ನಡೆಸಿರಿ. ನಾನು ನನ್ನ ಸ್ವಬುದ್ಧಿಯಿಂದ ನಿಶ್ಚಯಿಸಿದ ಮತ್ತೊಂದು ಸಂಗತಿಯನ್ನು ಹೇಳುವೆನು. ನಮ್ಮ ಪುರೋಹಿತರಾದ ಧೌಮ್ಯರು, ದ್ರುಪದರಾಜನಗರದಲ್ಲಿ ನಮ್ಮ ಸೂತರೊಡನೆಯೂ, ಅಡಿಗೆಯವರೊಡನೆಯೂ ಸೇರಿ ಅಗ್ನಿಹೋತ್ರವನ್ನು ರಕ್ಷಿಸುತ್ತಿರಲಿ! ಈ ಇಂದ್ರಸೇನಾದಿಗಳು ರಥವನ್ನು ತೆಗೆದುಕೊಂಡು ಶೀಘ್ರದಲ್ಲಿಯೇ ದ್ವಾರಕೆಗೆ ಹೋಗುವುದೊಳ್ಳೆಯದೆಂದು ತೋರುವುದು. ದ್ರೌಪದಿಯ ಪರಿಚಾರಿಕೆಯರಾದ ಈ ಸ್ತ್ರೀಯರೆಲ್ಲರೂ ತಮ್ಮ ಸೂತರೊಡನೆಯೂ, ಅಡಿಗೆಯವರೊಡನೆಯೂ ಪಾಂಚಾಲದೇಶಕ್ಕೆ ಹೋಗಿ ಅಲ್ಲಿರಲಿ! ಅಲ್ಲಿ ಯಾರಾದರೂ ಇವರನ್ನು ಪಾಂಡವರೆಲ್ಲಿರುವರೆಂದು ಕೇಳಿದರೆ, "ಮಹಾತ್ಮರಾದ ಆ ಪಾಂಡವರೆಲ್ಲರೂ ಅರ್ಧರಾತ್ರಿಯಲ್ಲಿ ನಮ್ಮನ್ನೂ, ಭಿಕ್ಷಾಶನರಾದ ಬಾಹ್ಮಣರನ್ನೂ ಬಿಟ್ಟು, ದ್ವೈತವನದಿಂದ ಹೊರಟುಹೋದವರು ಎಲ್ಲಿಗೆ ಹೋದರೋ ತಿಳಿಯಲಿಲ್ಲ" ವೆಂದು ಹೇಳಬೇಕು ಎಂದನು. ಹೀಗೆ ಪಾಂಡವರೆಲ್ಲರೂ ತಾವುತಾವು ವಿರಾಟನಗರದಲ್ಲಿ ಮಾಡತಕ್ಕ ಕಾರ್ಯಗಳನ್ನು ತಿಳಿಸಿ, ಒಬ್ಬರನ್ನೊಬ್ಬರು ಬೀಳ್ಕೊಂಡು, ಆಮೇಲೆ ಧೌಮ್ಯನ ಅನುಮತಿಯನ್ನು ಕೇಳಿದಾಗ, ಸಮಸ್ತಧರ್ಮಗಳನ್ನೂ ಬಲ್ಲ ಪಾಂಡವರನ್ನು ಕುರಿತು ಹೀಗೆಂದು ಉಪದೇಶಿಸತೊಡಗಿದನು.

"ರಾಜೇಂದ್ರಾ! ಲೋಕದ ನಡೆವಳಿಕೆಗಳೆಲ್ಲ ಯಾವ ವಿಧವಾಗಿವೆಯೆಂಬುದನ್ನು ನೀವು ಚೆನ್ನಾಗಿ ಬಲ್ಲಿರಿ! ಹಾಗಿದ್ದರೂ, ಆಪ್ತರಾದವರು ತಮಗಿರುವ ಸ್ನೇಹದಿಂದ, ತಮಗೆ ತಿಳಿದುದನ್ನು ತಿಳಿಸದೆ ಬಿಡಬಾರದು. ಈಗ ನಾನೂ ನಿಮಗೆ ಕೆಲವು ಸಂಗತಿಗಳನ್ನು ಹೇಳಬೇಕೆಂದಿರುವೆನು.

ಓ ರಾಜಕುಮಾರರೇ! ಪರರಾಜ್ಯಕ್ಕೆ ಹೋಗಿ ಅಲ್ಲಿನ ರಾಜಗೃಹದಲ್ಲಿ ಸೇರತಕ್ಕವರು, ಹೇಗೆ ನಿರಪಾಯವಾಗಿರಬೇಕೋ ಆ ಮಾರ್ಗವನ್ನು ಈಗ ನಿಮಗೆ ತಿಳಿಸಬೇಕೆಂಬುದು ನನ್ನ ಉದ್ದೇಶವು. ಕುರುವಂಶದಲ್ಲಿ ಹುಟ್ಟಿ ಲೋಕಪೂಜ್ಯರೆನಿಸಿಕೊಂಡ ನಿಮ್ಮಂಥವರಿಗೆ, ಒಂದುವರ್ಷ ಕಾಲದವರೆಗೆ ಪರಾಧೀನರಾಗಿ ಮಾನವನ್ನು ಬಿಟ್ಟು ಗುಪ್ತವಾಗಿ ವಾಸಮಾಡುವುದೇನೋ ಬಹಳ ಕಷ್ಟಕಾರ್ಯವೇ! ಆದುದರಿಂದ, ನೀವು ಅಲ್ಲಿ ವರ್ತಿಸಬೇಕಾದ ರೀತಿಯನ್ನು ನನಗೆ ತಿಳಿದಮಟ್ಟಿಗೆ ಹೇಳುವೆನು ಕೇಳಿರಿ! ರಾಜಸನ್ನಿಧಿಗೆ ಹೋಗುವಾಗ, ಮೊದಲು ಅನುಜ್ಞೆಯನ್ನು ಪಡೆದೇ ಒಳಗೆ ಹೋಗಿ ರಾಜನನ್ನು ನೋಡಬೇಕು. ರಾಜನ ಸ್ವಂತವಸ್ತುಗಳಲ್ಲಿ ಆಶ್ರಿತರು ಆಸೆಯನ್ನಿಡಬಾರದು. ರಾಜನು ತಾನಾಗಿ ಕೇಳಿದಹೊರತು ಅವನಿಗೆ ನೀತಿಗಳನ್ನು ಹೇಳಲು ಬಾಯಿತ್ತಬಾರದು. ಮೌನದಿಂದಲೇ ರಾಜನ ಸೇವೆಯನ್ನು ಮಾಡುತ್ತಿರಬೇಕು. ಸಮಯದಲ್ಲಿ ಅವನನ್ನು ಸ್ತೋತ್ರಮಾಡುತ್ತಿರಬೇಕು. ಆದರೆ, ನಾವು ಹೇಳುವ ಮಾತುಗಳು ಅಬದ್ಧವೆಂದು ರಾಜನಿಗೆ ತೋರಿದರೆ, ಅವನಿಗೆ ನಮ್ಮಲ್ಲಿ ನಂಬಿಕೆಯು ತಪ್ಪಿಹೋಗುವುದು. ಸುಳ್ಳಾಡುವ ಮಂತ್ರಿಗಳು ರಾಜನಿಂದ ಅವಮಾನಿತರಾಗುವರು. ಅತ್ಯಲ್ಪ ಕಾರ್ಯವನ್ನಾದರೂ ರಾಜನಿಗೆ ತಿಳಿಸಿಯೇ ಮಾಡಬೇಕು. ರಾಜರ ಬಳಿಯಲ್ಲಿ ಈ ನಿಯಮಗಳಿಂದ ನಡೆಯತಕ್ಕವರಿಗೆ ಏನೂ ಹಾನಿಯಿರದು. ಓ ಪಾಂಡುಕುಮಾರಾ! ರಾಜರನ್ನು ಸಾಮಾನ್ಯಪುರುಷರೆಂದು ಭಾವಿಸಬಾರದು. ಸಮಸ್ತಪ್ರಾಣಿಗಳನ್ನೂ ಆಹಾರಾದಿಗಳಿಂದ ಪೋಷಿಸತಕ್ಕವನೂ, ಸಮಸ್ತ ಶಾಸ್ತ್ರಸಂಪನ್ನನೂ ಆದ ರಾಜನನ್ನು ಪುರುಷರೂಪದಿಂದಿರುವ ಅಗ್ನಿಯೆಂದೇ ತಿಳಿಯಬೇಕು. ರಾಜಾಶ್ರಯದಲ್ಲಿರತಕ್ಕವನು ನಿರ್ದೋಷಿಯಾಗಿ ಹೇಗೆ ವರ್ತಿಸಬೇಕೋ ಅದನ್ನು ನೀವು ಚೆನ್ನಾಗಿ ತಿಳಿದಿರಬೇಕು. ಕ್ಷತ್ರಿಯನೂ, ಸರ್ಪವೂ, ಬಹುಶ್ರುತನಾದ ಬ್ರಾಹ್ಮಣನೂ, ನೋಡುವುದಕ್ಕೆ ಕೈಲಾಗದ ಅಶಕ್ತರಂತೆ ಕಂಡುಬಂದರೂ ಬುದ್ಧಿವಂತನಾದವನು ಅವರನ್ನು ಅಲಕ್ಷ್ಯವಾಗಿ ಕಾಣಬಾರದು. ಇವರು ಅವಮಾನಿಸಲ್ಪಟ್ಟರೆ ನಿಮಿಷಮಾತ್ರದಲ್ಲಿ ನಹಿಸಿಬಿಡುವರು. ಆದುದರಿಂದ ರಾಜನನ್ನು ಯಾವಾಗಲೂ ಗೌರವಿಸುತ್ತಿರಬೇಕಾದುದೇ ಬುದ್ಧಿಶಾಲಿಗಳ ಮಾರ್ಗವು.

ರಾಜಸನ್ನಿಧಿಯಲ್ಲಿದ್ದು ಅವನಿಗೆ ಪ್ರಿಯನಾದ ಪುರುಷನು ಯಾವ ಸಂದರ್ಭದಲ್ಲಿಯೂ ತನ್ನ ಹದ್ದನ್ನು ಮೀರಿ ನಡೆಯಬಾರದು. ವಿದ್ವಾಂಸರು ಲೋಕದಲ್ಲಿ ಅವರವರಿಗೆ ತಕ್ಕ ವ್ಯವಹಾರವೇ ಮರ್ಯಾದೆಯೆಂದು ಹೇಳುವರು. ಅಂತಹ ಮರ್ಯಾದೆಯನ್ನು ಮೀರಿ ನಡೆದವನು ಮಗನಾಗಲಿ, ಮೊಮ್ಮಗನಾಗಲಿ, ಒಡಹುಟ್ಟಿದವನಾಗಲಿ ಅಂತವರನ್ನು ರಾಜರು ಆದರಿಸಲಾರರು. ಒಬ್ಬನು ರಾಜನ ಪ್ರೀತಿಗೆ ಪಾತ್ರನಾಗಿ, ಒಂದು ದೊಡ್ಡ ಅಧಿಕಾರಸ್ಥಾನವನ್ನು ಪಡೆದು ಐಶ್ವರ್ಯವಂತನಾಗಿದ್ದರೂ, ತನ್ನ ಸ್ಥಿತಿಯೆಷ್ಟೆಂಬುದನ್ನು ಆಲೋಚಿಸಿ, ಆದನ್ನು ಮೀರಿ ಹೋಗದೆ ಇತರ ವಿಷಯಗಳಲ್ಲಿ ತನ್ನನ್ನು ಹುಟ್ಟುಕುರುಡನಂತೆ ತಿಳಿದುಕೊಂಡಿರಬೇಕು. ರಾಜಸೇವೆಯಲ್ಲಿರತಕ್ಕವನು ಧೈರ್ಯಶಾಲಿಯಾಗಿ, ಯಾವಾಗಲೂ ರಾಜದ್ವಾರವನ್ನೇ ಕಣ್ಣಿಟ್ಟು ಕಾಯುತ್ತಿರಬೇಕು. ಆದರೆ, ರಾಜನಲ್ಲಿ ಎಂದಿಗೂ ಪೂರ್ಣವಾದ ನಂಬಿಕೆಯನ್ನಿಡಬಾರದು. ಮತ್ತೊಬ್ಬರು ಆಕ್ಷೇಪಪಡದೆ ಇರತಕ್ಕ ಸ್ಥಾನವನ್ನೇ ಆಶ್ರಯಿಸಬೇಕು. ರಾಜಗೃಹದಲ್ಲಿ ವಾಸಮಾಡತಕ್ಕ ಪುರುಷನು, ತಾನು ಯಾವ ಆಸನವನ್ನು ಆಶ್ರಯಿಸಿದರೆ ತನಗಿಂತಲೂ ಬಲಾಢ್ಯರಾದ ಬೇರೆಯವರಿಗೆ ಮನಸ್ಸು ನೋಯಲಾರದೋ, ಅಂತಹ ಸ್ಥಾನವನ್ನೇ ಅಪೇಕ್ಷಿಸಬೇಕು. ಮತ್ತು ರಾಜಗೃಹದಲ್ಲಿ ವಾಸಮಾಡುವವನು, ತಾನು ಯಾವ ಸ್ಥಳದಲ್ಲಿ ಹೇಗೆ ಕುಳಿತರೆ ಬೇರೊಬ್ಬರಿಗೆ ತಾನು ಹದ್ದು ಮೀರಿ ಹೋದನೆಂಬ ಸಂದೇಹವು ಹುಟ್ಟುವುದೋ ಅಂತಹ ಸ್ಥಳದಲ್ಲಿಯಾಗಲಿ, ಆ ರೀತಿಯಲ್ಲಿಯಾಗಲಿ ಎಂದಿಗೂ ಕುಳ್ಳಿರಬಾರದು. ತನಗೆ ಯೋಗ್ಯವಾದ ಸ್ಥಳದಲ್ಲಿ ತನ್ನ ಇಷ್ಟಾನುಸಾರವಾಗಿರಬಹುದು. ಅಥವಾ ರಾಜನ ಸಮೀಪದಲ್ಲಿ ಯಾವಾಗಲೂ ನಿಂತೇ ಇರಬಹುದು. ರಾಜಸಭೆಯಲ್ಲಿ ಮತ್ತೊಬ್ಬನ ಆಸನವನ್ನು ಎಂದಿಗೂ ಅಪೇಕ್ಷಿಸಬಾರದು. ಮತ್ತೊಬ್ಬರ ಆಸನದಲ್ಲಿ ಕುಳಿತರೆ, ಅವನ ಭೃತ್ಯರು ಅಂತವನನ್ನು ಸಭೆಯಿಂದೆಳೆದು ಹಾಕುವರು. ಮತ್ತು ಅಂತವನು ಶತ್ರುಗಳಿಂದ ಹಾಸ್ಯಮಾಡಲ್ಪಡುವನು. ಹಣಕ್ಕಾಗಿ ರಾಜರಲ್ಲಿ ಸೇವೆಮಾಡುವ ಭೃತ್ಯರು, ಎಂದಿಗೂ ರಾಜನಿಗಿದಿರಾಗಿ ಮುಂಭಾಗದಲ್ಲಿರುವ ಆಸನದಲ್ಲಿ ಕುಳ್ಳಿರಬಾರದೆಂಬುದು ನೀತಿಜ್ಞರ ಅಭಿಪ್ರಾಯವು. ಬುದ್ಧಿಶಾಲಿಯಾದವನು, ತನ್ನ ಪ್ರಭುವಿನ ಎಡ

ಪಕ್ಕದಲ್ಲಿಯಾಗಲಿ, ಬಲಪಕ್ಕದಲ್ಲಿಯಾಗಲಿ ವಿನಯದಿಂದ ನಿಂತಿರಬೇಕೇ ಹೊರತು, ತನ್ನ ಪ್ರಭುವಿಗೆ ಸರಿಯಾಗಿ ಅವನ ಮುಂದೆಯಾಗಲಿ, ಬೆನ್ನ ಹಿಂದೆಯಾಗಲಿ ನಿಲ್ಲಬಾರದು. ರಾಜನ ಹಿಂಭಾಗವು ಶಸ್ತ್ರಧಾರಿಗಳಾದ ಅಂಗರಕ್ಷಕರಿಗಾಗಿಯೇ ನಿರ್ಧೀತಸ್ಥಳವಾಗಿದೆ. ತನ್ನ ತಾಯಿಯ ವಂಶದಲ್ಲಿಯಾಗಲಿ, ತಂದೆಯವಂಶದಲ್ಲಿಯಾಗಲಿ ಪ್ರಖ್ಯಾತರಾದ ಹಿರಿಯರ ಹೆಸರನ್ನೂ, ಅವರ ಒಳ್ಳೆಯ ನಡತೆಗಳನ್ನೂ ಹೇಳಿಕೊಂಡು, ಆ ಮೂಲಕವಾಗಿ ಇತರಜನರ ಮನಸ್ಸನ್ನು ತನ್ನ ಕಡೆಗೆ ಆಕರ್ಷಿಸುವಂತೆ ಮಾಡಬೇಕು. ರಾಜನಿಂದ ಸತ್ಕಾರಗಳನ್ನು ಹೊಂದತಕ್ಕವನು, ತಾನೂ ಅವನಿಗೆ ತಕ್ಕಂತೆ ಪ್ರತಿಸತ್ಕಾರಗಳನ್ನು ತೋರಿಸುತ್ತಿರಬೇಕು. ಹಾಗೆ ಮಾಡದವನನ್ನು ರಾಜನು, ಗುರುವು ಸೋಮಾರಿಗಳಾದ ಶಿಷ್ಯರನ್ನು ಹೇಗೋ ಹಾಗೆ ನಿರಾಕರಿಸಿಬಿಡುವನು. ರಾಜಗೃಹದಲ್ಲಿರತಕ್ಕವನು ತನಗೆ ರಾಜನಲ್ಲಿ ವಿಶೇಷ ಪ್ರೀತಿಯುಂಟೆಂಬ ಸ್ವಾತಂತ್ರ್ಯದಿಂದ, ರಾಜನ ವಾಹನಗಳಲ್ಲಿಯಾಗಲಿ, ಅವನು ಮಲಗುವ ಮಂಚದಲ್ಲಿಯಾಗಲಿ ಅವನ ಆಸನದಲ್ಲಿಯಾಗಲಿ, ರಥದಲ್ಲಿಯಾಗಲಿ ಕುಳ್ಳಿರಬಾರದು. ಜೀವನಕ್ಕಾಗಿ ಮನೆ ಮಠಗಳನ್ನು ತೊರೆದುಬಂದರೂ, ಯಾವನು ಅವುಗಳ ಚಿಂತೆಯನ್ನು ಬಿಟ್ಟು, ತನ್ನ ಕೃತ್ಯಗಳನ್ನು ಮರೆಯದೆ, ತನ್ನ ಪುರೋವೃದ್ಧಿಯಲ್ಲಿ ದೃಷ್ಟಿಯಿಟ್ಟು, ಸೋಮಾರಿತನವಿಲ್ಲದೆ, ಮನಸ್ಸನ್ನು ನಿಗ್ರಹಿಸಿ, ಹಸಿವು ಬಾಯಾರಿಕೆಗಳು ಬಾಧಿಸುತ್ತಿದ್ದರೂ ಕೊರಗದೆ, ಕಷ್ಟಪಟ್ಟೇ ಸುಖವನ್ನು ಸಂಪಾದಿಸಬೇಕೆಂಬ ಬುದ್ಧಿಯಿಂದ ಕೆಲಸಮಾಡಬಲ್ಲನೋ, ಅಂತವನೇ ರಾಜಗೃಹಗಳಲ್ಲಿ ವಾಸಮಾಡಲು ಅರ್ಹನು. ರಾಜನು ಬೇರೊಬ್ಬರಿಗೆ ಒಂದು ಕಾರ್ಯವನ್ನು ನಿಯಮಿಸಿದರೂ, 'ನಾನೇ ಆ ಕೆಲಸವನ್ನು ಮಾಡುವೆ' ನೆಂದು ತಾನಾಗಿ ಧೈರ್ಯದಿಂದ ಮುಂದೆ ಬಿದ್ದು ಬಂದು, ಬಾಯಿಮಾತ್ರಕ್ಕಾದರೂ ಹೇಳುವನೋ, ಅಂತವನೇ ರಾಜಸೇವೆಯಲ್ಲಿ ಜಯಹೊಂದುವನು. ರಾಜನು ಒಂದು ಕಾರ್ಯವನ್ನು ನಿಯಮಿಸಿದೊಡನೆ, ಯಾವನು ಹಿಂದು ಮುಂದು ನೋಡದೆ, ಬಿಸಿಲು, ಚಳಿ, ಗಾಳಿ, ಹಗಲು ರಾತ್ರಿಯೆಂದೆಣಿಸದೆ, ಕಾರ್ಯವನ್ನು ಸಾಧಿಸುವನೋ, ಅವನೇ ರಾಜನ ಬಳಿಯಲ್ಲಿ ಸಿದ್ಧಿಯನ್ನು ಹೊಂದಬಲ್ಲನು.— ಸೇವಕನು, ರಾಜಾಸ್ಥಾನದಲ್ಲಿ ಪ್ರಬಲರಾದ ಮಂತ್ರಿಗಳ

ನ್ನು ಅವಮಾನಗೊಳಿಸಬಾರದು. ತನಗೆ ಲಭಿಸಿದ ಗೌರವಕ್ಕಾಗಿ ಹಿಗ್ಗ ಬಾರದು. ಅವಮಾನಕ್ಕಾಗಿ ದುಃಖಿಸಬಾರದು. ಋಜುಬುದ್ಧಿಯಿಂದಲೂ, ಮೃದುಸ್ವಭಾವದಿಂದಲೂ ಕೂಡಿ, ಸತ್ಯಸಂಧನಾಗಿರತಕ್ಕವನೇ ರಾಜಸಾನ್ನಿಧ್ಯದಲ್ಲಿ ಸ್ವಕಾರ್ಯಸಿದ್ಧಿಯನ್ನು ಹೊಂದತಕ್ಕವನು. ರಾಜಸಮೀಪದಲ್ಲಿ ರತಕ್ಕವನು ಲಾಭಕ್ಕಾಗಿ ಉಬ್ಬಬಾರದು. ಸಂಕಟದಲ್ಲಿ ಕುಂದಬಾರದು. ಸುಖದುಃಖಗಳಲ್ಲಿ ಮುಳ್ಳಿನ ತ್ರಾಸಿನಂತೆ ಸಮನಾಗಿರಬಲ್ಲವನೇ ಅಂತಹ ಸ್ಥಳಗಳಲ್ಲಿರುವುದಕ್ಕೆ ಯೋಗ್ಯನು. ರಾಜಾಸ್ಥಾನದಲ್ಲಿರತಕ್ಕವನು ಅತ್ಯಾಶೆಯಿಲ್ಲದವನಾಗಿ, ಧೈರ್ಯಶಾಲಿಯಾಗಿ, ನೆರಳಿನಂತೆ ರಾಜನನ್ನು ಅನುವರ್ತಿಸತಕ್ಕವನಾಗಿಯೂ ಇರಬೇಕು. ಮತ್ತು ಇತಿಹಾಸ ಪುರಾಣಗಳನ್ನೋದಿ, ಒಳ್ಳೆಯ ಕಥೆಗಳನ್ನು ಹೇಳುವುದರಲ್ಲಿ ಕುಶಲನಾಗಿ, ಉದಾರಿಯಾಗಿ, ಸತ್ಯಸಂಧನಾಗಿರಬೇಕು. ರಾಜನು ತನ್ನೊಡನೆ ಹೇಳಿದ ರಹಸ್ಯಗಳನ್ನು ಬೇರೆಯವರಲ್ಲಿ ಹೇಳಬಾರದು. ರಾಜನಿಗೆ ಯಾವನಲ್ಲಿ ಅಸೂಯೆಯುಂಟೆಂದು ತೋರುವುದೋ, ಅಂತವನೊಡನೆ ಮಾತಾಡಬಾರದು. ರಾಜಕಾರ್ಯದಲ್ಲಿ ನಿಯಮಿಸಲ್ಪಟ್ಟವನು ಬೇರೆಯವರ ಹಣಕ್ಕೆ ಆಸೆಪಡಬಾರದು. ಹಾಗೆ ಆಸೆಪಟ್ಟು ಲಂಚವನ್ನು ತೆಗೆಯುವವನು ಸೆರೆಮನೆಯನ್ನೋ, ಕೊನೆಗೆ ಮರಣವನ್ನೋ ಹೊಂದುವುದು ನಿಶ್ಚಯವು. ತನಗಿಂತಲೂ ಹೀನನಾದವನೊಬ್ಬನನ್ನು ರಾಜನು ಪ್ರೀತಿಸಿ ಅವನನ್ನು ಮೇಲಕ್ಕೆತಂದರೆ, ಅದಕ್ಕಾಗಿ ವ್ಯಸನಪಟ್ಟು ಆ ದೋಷವನ್ನೆತ್ತಿ ಹೇಳಿ ಮತ್ತೊಬ್ಬರೊಡನೆ ದೂರಬಾರದು. ಕೆಲವು ಸಂದರ್ಭಗಳಲ್ಲಿ ರಾಜನು ಬುದ್ಧಿವಂತನಾದವನನ್ನು ಬಿಟ್ಟು, ಕೇವಲ ಹೀನನಾದವನನ್ನು ನಿಯಮಿಸುವುದುಂಟು. ರಾಜರ ಸ್ವಭಾವವೇ ಇದು. ಅದಕ್ಕಾಗಿ ಅತೃಪ್ತಿಪಡಬಾರದು. ರಾಜಪತ್ನಿಯರಲ್ಲಿ ಸ್ನೇಹವನ್ನೂ ಬೆಳೆಸಬಾರದು. ಆ ಸ್ತ್ರೀಯರನ್ನು ನೋಡಿಕೊಳ್ಳತಕ್ಕ ಕಾರ್ಯವನ್ನೇ ಕೈಕೊಳ್ಳಬಾರದು. ರಾಜನು ತನ್ನ ಸ್ತ್ರೀಯರಬಳಿ ನಿಂತಿರತಕ್ಕ ಸೇವಕನ ವಿಷಯದಲ್ಲಿ ಸಂದೇಹಪಡುವನು. ಆ ಸ್ಥಿತಿಯನ್ನು ಕಣ್ಣಿಂದ ನೋಡಿದಾಗಲೇ ಅವನ ಬುದ್ಧಿಯು ಕದಲುವುದು. ಅಂತಹ ಸಂದೇಹವು ಹುಟ್ಟಿದೊಡನೆಯೇ ಕ್ರೋಧವಶನಾಗಿ, ರಾಜನು ಆ ಸೇವಕನ ಪ್ರಾಣವನ್ನು ತೊಲಗಿಸುವುದೇ ಮೇಲೆಂದು

ಭಾವಿಸುವುದು ನಿಶ್ಚಯವು. ಮತ್ತು ರಾಜಾಸ್ಥಾನದಲ್ಲಿರುವವನು ಅರಮನೆಯಲ್ಲಿರುವ ವಸ್ತುಗಳು ಎಷ್ಟೇ ಸಂತೋಷಕರವಾಗಿದ್ದರೂ, ಅವುಗಳಲ್ಲಿ ತಾನು ಅಧಿಕಾದರವನ್ನು ತೋರಿಸಬಾರದು. ಅಂತಹ ವಸ್ತುಗಳನ್ನು ಕುರಿತು ರಾಜನ ಮುಂದೆ ಹೊಗಳುತ್ತಿರಬೇಕು. ಬುದ್ಧಿಹೀನರು, ಒಮ್ಮೊಮ್ಮೆ ಸಂತೋಷಾತಿಶಯದಿಂದ ಇಷ್ಟಬಂದಹಾಗೆ ಆಡುವುದುಂಟು. ಇದಕ್ಕಾಗಿಯೇ ಅರಸನು ಅಂತಃಪುರದಲ್ಲಿರುವ ಅಂತಹ ಸೇವಕರ ನಡತೆಯನ್ನು ಯಾವಾಗಲೂ ಕಣ್ಣಿಟ್ಟು ಕಾದಿರುವನು. ಇದಲ್ಲದೆ, ಅಂತಃಪುರದಲ್ಲಿರುವ ಸೇವಕನು ನಿಷ್ಕಪಟವಾಗಿ ವರ್ತಿಸುತ್ತಿದ್ದರೆ, ಅಲ್ಲಿನ ಸ್ತ್ರೀಯರುಮಾತ್ರವಲ್ಲದೆ, ನಪುಂಸಕರೂ ಕೂಡ, ಅವನನ್ನು ಲಕ್ಷ್ಯಮಾಡರು. ಆದುದರಿಂದ ರಾಜಾಂತಃಪುರದಲ್ಲಿರುವ ಭೃತ್ಯರು ಗಂಭೀರಸ್ವಭಾವದಿಂದ ತಮ್ಮ ಸಂತೋಷಗಳನ್ನು ತಮ್ಮೊಳಗೇ ಅಡಗಿಸಿಟ್ಟುಕೊಂಡು, ಅಲ್ಲಿ ನಡೆಯತಕ್ಕ ಸಂಗತಿಗಳನ್ನು ಹೊರಗೆ ಬಿಡದೆ ರಹಸ್ಯವನ್ನು ಕಾಪಾಡುತ್ತಿರಬೇಕು. ಘನವಾದ ಮಂತ್ರಾಲೋಚನೆಗಳು ರಹಸ್ಯವಾಗಿದ್ದಷ್ಟೂ ಅದರಿಂದ ಹೇಗೆ ಕ್ಷೇಮವುಂಟೋ, ಅಂತಃಪುರವೃತ್ತಾಂತಗಳೂ ಹಾಗೆಯೇ. ಅವು ಹೊರಗಿನವರ ಕಿವಿಗೆ ಬಿಳುವುದರಿಂದ ಕ್ಷೇಮಕ್ಕೆ ಕುಂದಕವನ್ನು ತರುವುದು. ರಾಜಾಶ್ರಯದಲ್ಲಿರುವ ಭೃತ್ಯರಲ್ಲಿ ಅಂತರಂಗದ ಭೃತ್ಯರೆಂದೂ, ಬಹಿರಂಗದ ಭೃತ್ಯರೆಂದೂ ಎರಡು ಬಗೆಯುಂಟು. ಅವರಿಬ್ಬರಲ್ಲಿ ಅಂತರಂಗದ ಭೃತ್ಯರ ವರ್ತನೆಗಳೆಂತವು? ಬಹಿರಂಗದವರ ವರ್ತನೆಯೆಂತದು? ಇಬ್ಬರಿಗೂ ಉಭಯಸಾಧಾರಣವಾದ ಪ್ರವರ್ತನೆಗಳೆಂತವು? ಎಂಬುದನ್ನು ತಿಳಿಸುವೆನು ಕೇಳು. ಅಂತರಂಗದವನೇ ಆಗಲಿ, ಬಹಿರಂಗದವನೇ ಆಗಲಿ, ಭೃತ್ಯನಾದವನು ರಾಜಸ್ತ್ರೀಯರ ವಿಚಾರವನ್ನು ಯಾವಾಗಲೂ ಮನಸ್ಸಿನಲ್ಲಿಯೂ ಚಿಂತಿಸಬಾರದು. ಅಂತಹ ಭೃತ್ಯನಿಗೆ ರಾಜನಿಂದ ಮಹಾಭಯವುಂಟು. ರಾಜನಿಗೆ ತನ್ನಲ್ಲಿ ಬಹಳ ಪ್ರೀತಿಯಿರುವಂತೆ ತಿಳಿದುಬಂದರೂ, ರಾಜನಲ್ಲದವನು ರಾಜಯೋಗ್ಯವಾದ ಉತ್ತಮ ರತ್ನಗಳನ್ನು ಪಯೋಗಿಸಿ ರಾಜನಂತೆ ಮೆರೆಯಬಾರದು. ಹಾಗೆ ಉಪಯೋಗಿಸಿದಪಕ್ಷದಲ್ಲಿ ಅಂತವನನ್ನು ರಾಜನು ಪ್ರಾಣದಿಂದುಳಿಸಲಾರನು. ಆದುದರಿಂದ, ತನ್ನ ಪುರೋವೃದ್ಧಿಯನ್ನು ಕೋರತಕ್ಕ ಬುದ್ಧಿಶಾಲಿಯಾದ ಪುರುಷನು

ತನ್ನ ಸುಖೋಪಭೋಗಗಳನ್ನು ಹೊರಕ್ಕೆ ಪ್ರಕಾಶಗೊಳಿಸದಂತೆಯೇ ಸುಖಗಳನ್ನನುಭವಿಸುತ್ತಿರಬೇಕು. ಭೋಗಗಳಲ್ಲಿ ತನಗೆ ಸಮಾನವಾಗಿ ಮೆರೆಯುತ್ತಿರುವ ಪುರುಷನನ್ನು ರಾಜನು ತನ್ನ ಕೋಪಕ್ಕೆ ಗುರಿಮಾಡದೆ ಬಿಡನು. ರಾಜನ ಕುಮಾರರಲ್ಲಿ ಯಾರೊಡನೆಯೂ, ಯಾವಕಾರಣದಿಂದಲೂ ಅತಿಸ್ನೇಹವನ್ನು ತೋರಿಸುತ್ತಿರಬಾರದು. ಮತ್ತು ರಾಜನಿಂದ ಅವಮಾನಿತನಾದವನನ್ನೂ, ಅಪ್ರಯೋಜಕನನ್ನೂ, ರಾಜನ ಶತ್ರುವನ್ನೂ ಸವಿಾಪಕ್ಕೆ ಸೇರಿಸದೆ ದೂರದಲ್ಲಿಯೇ ನಿವಾರಿಸಬೇಕು. ಈ ನಾಲ್ಕು ಬಗೆಯ ಜನರಲ್ಲಿ ಸ್ನೇಹಮಾಡಿದರೆ, ಅಂತಹ ಸೇವಕನಲ್ಲಿ ರಾಜನ ಪ್ರೀತಿಕಾರಣವೂ ಭಿನ್ನವಾಗಿ ಒಡೆದುಹೋಗುವುದು. ಇಂತಹ ಹೀನಜನರಿಗಿಂತಲೂ ಬೇರೆಯಾಗಿ, ಇದಕ್ಕೆ ಭಿನ್ನವಾದ ಸ್ಥಿತಿಯಲ್ಲಿರುವ ಜನರೊಡನೆ ಸ್ನೇಹವನ್ನು ಮಾಡಬಹುದು. ಅಂತವರೊಡನೆ ಯಾವಾಗಲೂ ಯಾವ ವಿಧದಿಂದಲೂ ವಿರೋಧವನ್ನು ಬೆಳೆಸಬಾರದು. ರಾಜನ ಬಂಧುಗಳೊಡನೆಯೂ, ಬಲಾಢ್ಯರೊಡನೆಯೂ ಸಹವಾಸವನ್ನು ಬೆಳೆಸಬೇಕು. ಅಂತವರೊಡನೆ ವಿರೋಧವನ್ನು ಬೆಳೆಸಬಾರದು. ಬಲಹೀನನಾದ ಮನುಷ್ಯನು ಈ ಮೇಲೆ ಹೇಳಿದ ಎರಡು ಬಗೆಯ ಮನುಷ್ಯರೊಡನೆ ವಿರೋಧವನ್ನು ಸಂಪಾದಿಸಿದರೆ, ಅದರಿಂದ ಮೊದಲು ರಾಜನ ಪ್ರೀತಿಕಾರಣವು ಕಿತ್ತುಹೋಗುವುದು. ಆಮೇಲೆ ರಾಜನಿಂದ ಭಯವೂ ಏರ್ಪಡುವುದು. ರಾಜಸಾನ್ನಿಧ್ಯದಲ್ಲಿ ಉದ್ಧತ ವೇಷವನ್ನಾಗಲಿ, ಕಪಟವೇಷವನ್ನಾಗಲಿ, ಮುಖ್ಯವಾಗಿ ರಾಜವೇಷವನ್ನಾಗಲಿ ಧರಿಸತಕ್ಕವರು ವೃದ್ಧಿಗೆ ಬರಲಾರರು. ರಾಜವೇಷವನ್ನು ಬಿಟ್ಟು ಬೇರೆ ವೇಷಗಳನ್ನು ಧರಿಸತಕ್ಕವರು ಬಂಧುಗಳ ಪರಿಹಾಸಕ್ಕೆ ಈಡಾಗುವರು. ಪುಂಸ್ತ್ವವಿಲ್ಲದ ಪುರುಷರೊಡನೆಯೂ, ಸ್ತ್ರೀಯರೊಡನೆಯೂ, ಸ್ತ್ರೀಯರನ್ನೇ ನೋಡುವ ಸ್ವಭಾವವುಳ್ಳವರೊಡನೆಯೂ, ಸಾಧ್ಯವಾದಮಟ್ಟಿಗೆ, ಯಾವಾಗಲೂ, ಎಲ್ಲಿಯೂ, ಯಾವಕಾರಣದಿಂದಲೂ, ಸಂಭಾಷಣವನ್ನೇ ಮಾಡದಿರಬೇಕು. ಬುದ್ಧಿಯಿಲ್ಲದೆ ಅಂತವರೊಡನೆ ಸಂಭಾಷಿಸತಕ್ಕ ಮನುಷ್ಯನು, ಗೃಧ್ರವು ಮಾಂಸವನ್ನು ಹಾರಿಸಿಕೊಂಡು ಹೋದಂತೆ ತನ್ನ ಭಾಗ್ಯವನ್ನು ಕಳೆದುಕೊಳ್ಳುವನು. ತಕ್ಕ ಕಾರಣವಿಲ್ಲದೆ ಕಪಟ ಕಾರಣಗಳಿಂದ ರಾಜಸತ್ಕಾರಗಳನ್ನು ಪಡೆದವರೊ

ಡನೆಯೂ, ಸಾಮಂತರಾಜರ ದೂತರೊಡನೆಯೂ ಸೇರಬಾರದು. ರಾಜನ ನ್ನಿಧಿಯಲ್ಲಿರತಕ್ಕವನು ಬುದ್ಧಿಶಾಲಿಯಾಗಿದ್ದರೆ, ರಾಜಾನುಮತಿಯಿಲ್ಲದೆ ಇನ್ನೊಬ್ಬರ ಸ್ಥಳವನ್ನು ಆಕ್ರಮಿಸಬಾರದು. ರಾಜನ ಮುಂದೆ ಆತ್ಮಸ್ತುತಿ ಮಾಡಿಕೊಳ್ಳಬಾರದು. ಇಂತಹ ಆತ್ಮಸ್ತುತಿಯು ಕೇವಲ ದರಿದ್ರರಿಗೂ ಅತೃಪ್ತಿಯನ್ನುಂಟುಮಾಡುವುದು. ಹಣದಾಸೆಯಿಂದ ಯಾವಳಾದರೂ ಹೆಂಗಸೊಬ್ಬಳು ರಾಜನನ್ನು ಸೇರಿದ್ದರೆ, ರಾಜಸೇವಕರು ಅಂತವಳನ್ನು ಮನ ಸ್ಸಿನಿಂದಲೂ ಎಣಿಸಬಾರದು. ಅಂತವಳನ್ನು ಆಶೆಪಟ್ಟು ನೋಡುವವನಿಗೆ ಕೇಡು ತಪ್ಪದು. ರಾಜಾಶ್ರಯದಲ್ಲಿರತಕ್ಕವನು ರಾಜಸಾನ್ನಿಧ್ಯದಲ್ಲಿ ಉಗು ಳಬಾರದು, ಸೀನಬಾರದು, ಆಪಾನವಾಯುವನ್ನು ಸಡಿಲಿಸಬಾರದು. ತಡೆ ಯುವುದಕ್ಕಾಗದ ಸಂದರ್ಭಗಳಲ್ಲಿ ಬೇರೆಯವರಿಗೆ ತಿಳಿಯದಂತೆ ಅದನ್ನು ಮೆಲ್ಲಗೆ ಮಾಡಬೇಕು. ಪರಿಹಾಸಸಂದರ್ಭಗಳಲ್ಲಿಯೂ ರಾಜನ ಮುಂದೆ ನಗಬಾರದು. ಹಾಗೆ ನಗುವುದು ಬುದ್ಧಿಹೀನರ ಸ್ವಭಾವವೆಂದು ಭಾವಿಸಲ್ಪ ಡುವುದು. ರಾಜಾನುಗ್ರಹದಿಂದ ಉಂಟಾಗುವ ನಗೆಯನ್ನು ಮೃದುವಾಗಿ ಹೊರಕ್ಕೆ ಕಾಣಿಸಬೇಕು. ರಾಜನ ಮುಂದೆ ರಪ್ಪೆ ಹೊಡೆಯುವುದು, ಹುಬ್ಬು ಕುಣಿಯಿಸುವುದು, ಕೈಯಾಡಿಸುವುದು, ರಾಜನು ಮಾತಾಡುವಾಗ ಆಕ್ಷೇಪಿಸುವುದು, ಅಡ್ಡಲಾಗಿ ನೋಡುವುದು, ದೊಡ್ಡದಾಗಿ ಆಕಳಿಸುವುದು, ಇಂತಹ ಕಾರ್ಯಗಳೊಂದನ್ನೂ ಮಾಡಬಾರದು. ನೋಡುವಾಗ ನೆಟ್ಟಗೆ ದೃಷ್ಟಿಯನ್ನಿಟ್ಟು ನೋಡಬೇಕು. ಅಂಗುಷ್ಠದಿಂದ ನೆಲವನ್ನು ಕೆರೆಯ ಬಾರದು. ರಾಜನ ಮುಂದೆ ಅವನಿಗೆ ಹಿತರೂ, ಇಷ್ಟರೂ ಆದವರು ಬೇರೆ ಯವರಿಂದ ಹೊಗಳಲ್ಪಟ್ಟರೂ, ನಿಂದಿಸಲ್ಪಟ್ಟರೂ, ತಾನು ಹೊಗಳಲೂ ಬಾರದು, ನಿಂದಿಸಲೂ ಬಾರದು. ರಾಜನಿಗೆ ಪ್ರಿಯಜನರೂ, ಹಿತಜನರೂ ನೋಡುತ್ತಿರುವಾಗಲೂ, ಅವರು ಹೇಳಿದ ಮಾತುಗಳನ್ನು ಕೇಳುವಾಗಲೂ ಅಮೃತದಂತೆ ಸವಿಮಾತಿನಿಂದ ಅವರನ್ನು ಉಬ್ಬಿಸಬೇಕು. ರಾಜನಿಗೆ ಪ್ರತಿಕೂಲವಾಗಿ ವರ್ತಿಸತಕ್ಕವನು ಅವನಿಗೆ ಪುತ್ರನಾಗಿರಲಿ, ಸಹೋದರ ನಾಗಿರಲಿ, ಪ್ರಾಣಕ್ಕೆ ಸಮಾನನಾಗಿರಲಿ ಕ್ಷೇಮವನ್ನು ಹೊಂದಲಾರನು. ಬುದ್ಧಿಶಾಲಿಯಾದವನು ರಾಜನನ್ನು ಸದ್ವರ್ತನದಿಂದಲೂ, ಸಾಹಸದಿಂ ದಲೂ, ನಾನಾಬಗೆಯ ಸದಾಚಾರದಿಂದಲೂ ಸಂತೋಷಗೊಳಿಸುತ್ತಿರ

ಬೇಕು. ಸ್ನಾನಮಾಡುವುದೂ, ಮಡಿಬಟ್ಟೆಗಳನ್ನುಡುವುದೂ, ಶಾರೀರಕ ಶುದ್ಧಿಯೆನಿಸುವುವು. ಅಲ್ಪವಸ್ತುಗಳಲ್ಲಿ ಆಸೆಯನ್ನಿಡದಿರುವುದು ಎರಡನೆಯ ದಾದ ಮಾನಸಶುದ್ಧಿಯೆನಿಸುವುದು. ರಾಜನೆಂದೂ, ಭೋಜನೆಂದೂ, ವಿರಾಟ್ಟೆಂದೂ, ಸಮ್ರಾಟ್ಟೆಂದೂ, ಕ್ಷತ್ರಿಯ, ಭೂಪತಿ, ನೃಪಾದಿ ಶಬ್ದಗಳಿಂದಲೂ ಯಾವನು ಸ್ತುತಿಸಲ್ಪಡುವನೋ ಅಂಥವನು ಯಾರಿಗೆತಾನೇ ಪೂಜ್ಯಾರ್ಹನಾಗುವುದಿಲ್ಲ. ಆದುದರಿಂದ ಬುದ್ಧಿವಂತನೂ, ಭಕ್ತಿಯುಳ್ಳವನೂ, ಸತ್ಯಸಂಧನೂ, ಜಿತೇಂದ್ರಿಯನೂ, ಧೈರ್ಯವಂತನೂ ಆದವನೇ ರಾಜರಲ್ಲಿ ಆಶ್ರಯವನ್ನು ಹೊಂದಲರ್ಹನು. ಯಾವರಾಜನು ಕೃತಜ್ಞನೂ, ಪ್ರಾಜ್ಞನೂ, ಅಲ್ಪಸ್ವಭಾವವಿಲ್ಲದವನೂ, ದೃಢವಾದ ಸ್ನೇಮವುಳ್ಳವನೂ, ಮುಂದೆ ಮುಂದೆ ಅಭಿವೃದ್ಧಿ ಹೊಂದತಕ್ಕವನೂ ಆಗಿದ್ದು, ತತ್ಕಾಲದಲ್ಲಿಯೂ ಒಳ್ಳೆಯ ಸ್ಥಿತಿಯಲ್ಲಿರುವನೋ, ಅಂತಹ ರಾಜನನ್ನೇ ಆಶ್ರಯಿಸಬೇಕು.

ಓ ಕುಂತೀಕುಮಾರಾ! ರಾಜಸೇವಕರು ಹೇಗೆ ಮುಂದೆ ಕ್ಷೇಮವನ್ನು ಹೊಂದಬಹುದೋ ಅಂತಹ ಸದಾಚಾರಗಳನ್ನೆಲ್ಲ ನಿಮಗೆ ಹೇಳಿದೆನು. ಈ ಒಂದು ವರ್ಷಕಾಲದವರೆಗೆ ನೀವು ಇದೇ ಮಾರ್ಗದಲ್ಲಿ ವರ್ತಿಸುತ್ತಿರಬೇಕು. ಅದಕ್ಕೆಮೇಲೆ ನಿಮ್ಮ ದೇಶವನ್ನು ಸೇರಿ ನಿಮ್ಮ ಇಷ್ಟಾನುಸಾರವಾಗಿರಬಹುದು'' ಎಂದನು. ಆಗ ಪಾಂಡವರು ತಮ್ಮ ತಂದೆಗೆ ಸಮಾನನಾದ ಆ ಧೌಮ್ಯನನ್ನು ನಮಸ್ಕರಿಸಿ, ''ನಿಮ್ಮ ಆಜ್ಞೆಯಂತೆಯೇ ನಡೆಯುವೆ''ವೆಂದು ಹೇಳಿ, ಸಂತೋಷದಿಂದ ಹೊರಡಲು ಸಿದ್ಧರಾದರು. ಬ್ರಾಹ್ಮಣೋತ್ತಮನಾದ ಧೌಮ್ಯನು, ಅವರ ಪ್ರಯಾಣಮಂಗಳಕ್ಕಾಗಿಯೂ, ರಾಜ್ಯಲಾಭಕ್ಕಾಗಿಯೂ, ವಿಜಯವೀರ್ಯಾದಿಗಳಿಗಾಗಿಯೂ ಕೆಲವು ಮಂತ್ರಗಳನ್ನು ಜಪಿಸಿ, ಆಶೀರ್ವಚನಗಳನ್ನು ಹೇಳಿ, ''ಕುಮಾರರೆ! ನಿಮಗೆ ಕ್ಷೇಮವಾಗಲಿ! ಮಾರ್ಗವು ಮಂಗಳಕರವಾಗಲಿ! ನೀವು ವಿರಾಟನಗರದಿಂದ ಹಿಂತಿರುಗಿ ಬಂದಮೇಲೆ ತಿರುಗಿ ನೋಡುವೆನು'' ಎಂದನು. ಧೌಮ್ಯನ ಈ ಮಾತನ್ನು ಕೇಳಿ ಯುಧಿಷ್ಠಿರಾದಿ ಪಾಂಡವರು ಸಂತುಷ್ಟರಾಗಿ ಪ್ರಯಾಣವನ್ನು ಬೆಳೆಸಿದರು.

ಇದು ಐದನೆಯ ಅಧ್ಯಾಯವು.

ಪಾಂಡವರು ವಿರಾಟನಗರದ ಸಮೀಪಕ್ಕೆ ಬಂದುದು.

"ಜನಮೇಜಯ ರಾಜೇಂದ್ರಾ! ಕೇಳು! ಆ ಪಾಂಡವರೆಲ್ಲರೂ ಅಗ್ನಿಯನ್ನೂ, ಪುರೋಹಿತನಾದ ಧೌಮ್ಯನನ್ನೂ ಪ್ರದಕ್ಷಿಣಮಾಡಿ ನಮಸ್ಕರಿಸಿ, ಅಲ್ಲಿಂದ ಪ್ರಯಾಣಮಾಡತೊಡಗಿದರು. ಆಗ ಧರ್ಮರಾಜನು ತಿರುಗಿ ಧೌಮ್ಯನನ್ನು ನೋಡಿ "ಓ ಬ್ರಾಹ್ಮಣೋತ್ತಮಾ! ತಮ್ಮ ಆಜ್ಞೆಯನ್ನು ಕೈಕೊಂಡೆವು. ನಿಮಗೆ ಮಂಗಳವಾಗಲಿ! ನಮ್ಮ ತಾಯಿಯಾದ ಕುಂತಿ, ಮತ್ತು ಕೀರ್ತಿಮಂತನಾದ ನನ್ನ ತಂದೆ, ಇವರೊಬ್ಬರು ಹೊರತು (ನಮ್ಮ ತಾಯಿತಂದೆಗಳಲ್ಲದೆ) ಬೇರೆ ಯಾರೂ ನಿಮ್ಮಂತೆ ನಮ್ಮ ಕ್ಷೇಮಚಿಂತಕರಾಗಿ ಹಿತೋಪದೇಶವನ್ನು ಮಾಡುವವರಿಲ್ಲ. ಇನ್ನು ಮುಂದೆ ನಾವು ಈ ಕಷ್ಟದಿಂದ ದಾಟುವುದಕ್ಕೂ, ಅಜ್ಞಾತವಾಸಕ್ಕೆ ಹೊರಡುವುದಕ್ಕೂ, ಮುಂದೆ ನಮ್ಮ ಕ್ಷೇಮಕ್ಕೂ, ನಾವು ನಡೆಸಬೇಕಾದ ಕಾರ್ಯವನ್ನು ತಿಳಿಸಬೇಕು" ಎನಲು, ಧೌಮ್ಯನು ಅವರ ಪ್ರಯಾಣಕಾಲದಲ್ಲಿ, ಮಂತ್ರದಿಂದಲೂ, ಹವಿಸ್ಸುಗಳಿಂದಲೂ ಪರಿಪೂತವಾದ ಅಗ್ನಿಯನ್ನು ಹುತಮಾಡಿ, ಸಕಲವಿಘ್ನನಿವಾರಕಗಳಾಗಿಯೂ, ಸರ್ವ ಕಾರ್ಯ ಸಿದ್ಧಿಕರಗಳಾಗಿಯೂ ಇರುವ ಮಂತ್ರಗಳನ್ನು ಜಪಿಸಿದನು. ಆಮೇಲೆ ಮಹಾರಥರಾದ ಆ ಪಾಂಡವರೆಲ್ಲರೂ ದ್ರೌಪದಿಯನ್ನು ಮುಂದಿಟ್ಟುಕೊಂಡು, ಧೌಮ್ಯನನ್ನೂ ಕರೆದುಕೊಂಡು, ತಮ್ಮತಮ್ಮ ಆಯುಧಗಳನ್ನು ಹಿಡಿದು, ವನದಿಂದ ವನಕ್ಕೆ ಪ್ರಯಾಣಮಾಡಿ ಹೋಗುತ್ತಿದ್ದರು. ಆ ವೀರರು ಕತ್ತಿಯನ್ನು ಸೊಂಟಕ್ಕೆ ಕಟ್ಟಿಕೊಂಡು, ಬಿಲ್ಲುಬಾಣಗಳನ್ನೂ, ಬತ್ತಳಿಕೆಗಳನ್ನೂ ಧರಿಸಿ, ಕಾಮ್ಯಕ ವನವನ್ನು ದಾಟಿ, ದಶಾರ್ಣದೇಶದ ಉತ್ತರಕ್ಕೂ, ಪಾಂಚಾಲದೇಶದ ದಕ್ಷಿಣಕ್ಕೂ, ಯಕೃಲ್ಲೋಮ ಶೂರಸೇನಗಳೆಂಬ ಎರಡು ದೇಶಗಳ ನಡುಮಾರ್ಗವಾಗಿ ಹೊರಟು, ಯಮುನಾನದಿಯ ಬಳಿಗೆ ಬಂದರು. ಆ ವೀರರು ಕಾಲುನಡೆಯಿಂದಲೇ ಯಮುನಾನದಿಯ ದಕ್ಷಿಣತೀರವನ್ನು ಸೇರಿ, ಅಲ್ಲಿಂದ ಪಶ್ಚಿಮಾಭಿಮುಖವಾಗಿ ತಿರುಗಿ, ಕಾಡಿಂದ ಕಾಡಿಗೆ ಪ್ರವೇಶಿಸುತ್ತಾ ಪ್ರಯಾಣಮಾಡಿದರು. ಮಹಾಧನುಷ್ಮಂತರಾದ ಆ ಪಾಂಡವರು ಹೀಗೆ ವನಮಾರ್ಗವಾಗಿ ಪ್ರಯಾಣಮಾಡುವಾಗ, ಅಲ್ಲಲ್ಲಿ ರಮಣೀಯಗಳಾದ

ವನದುರ್ಗಗಳಲ್ಲಿಯೂ, ಅಂದವಾದ ಸಣ್ಣ ತಟಾಕಗಳಲ್ಲಿಯೂ, ನದೀ ಸಂಗಮಸ್ಥಾನಗಳಲ್ಲಿಯೂ ಸ್ವಲ್ಪ ಹೊತ್ತು ತಂಗಿ, ವಿಶ್ರಾಂತಿಯನ್ನು ತೆಗೆದು ಕೊಳ್ಳುವರು! ಅಲ್ಲಲ್ಲಿ ನಾನಾಬಗೆಯ ಬಳ್ಳಿಗಳಿಂದಾವೃತವಾಗಿ, ಪುಷ್ಪಸಮೃದ್ಧಿಯಿಂದ ಮನೋಹರಗಳಾಗಿ, ಸುಗಂಧವಿಶಿಷ್ಟಗಳಾಗಿರುವ ವಿವಿಧಾಕಾರವುಳ್ಳ ವೃಕ್ಷಗಳ ಸೊಗಸನ್ನು ನೋಡುವರು! ಆ ಮರಗಳಲ್ಲಿರುವ ಪುಷ್ಪಗಳ ಮತ್ತು ಫಲಗಳ ಸುಗಂಧವನ್ನಾಘ್ರಾಣಿಸುವರು! ಅಲ್ಲಲ್ಲಿ ತಂಗಿ ಮುಂದೆ ಪ್ರಯಾಣಮಾಡುವರು! ಮಹಾಧನುರ್ಧಾರಿಗಳೂ, ಬಲಾಢ್ಯರೂ ಆದ ಆ ಪಾಂಡವರು, ಅಲ್ಲಲ್ಲಿ ಕಾಡುಮೃಗಗಳನ್ನು ಭೇದಿಸುವರು! ಯಾರಾದರೂ "ನೀವು ಯಾರೆ"ಂದು ಕೇಳಿದಾಗ, ತಾವು ಬೇಡರೆಂದು ಹೇಳಿಕೊಳ್ಳುವರು. ಹೀಗೆ ಹನ್ನೆರಡು ವರ್ಷಗಳು ಪೂರ್ಣವಾಗುವವರೆಗೆ ವನವಾಸದಲ್ಲಿದ್ದು, ಕೊನೆಗೆ ಮತ್ಸ್ಯರಾಜನ ಪಟ್ಟಣವನ್ನು ಪ್ರವೇಶಿಸಿದರು. ಪುರೋಹಿತನಾದ ಧೌಮ್ಯನು ಅವರನ್ನು ಬಿಟ್ಟು ಹಿಂತಿರುಗಿ, ಒಂದಾನೊಂದು ಆಶ್ರಮದಲ್ಲಿ ಗುಪ್ತವಾಗಿ ಅಗ್ನಿಹೋತ್ರವನ್ನು ರಕ್ಷಿಸಿಕೊಂಡಿದ್ದನು. ಮಹಾತ್ಮರಾದ ಪಾಂಡವರು ಅತ್ತಲಾಗಿ ಅಜ್ಞಾತವಾಸಕ್ಕಾಗಿ ಹೊರಟ ಮೇಲೆ, ಅವರ ಸಂಗಡಿಗರಾಗಿದ್ದ ಇಂದ್ರಸೇನಾದಿಗಳು ಧರ್ಮರಾಜನು ಸೂಚಿಸಿದಂತೆ ದ್ವಾರಕೆಗೆ ಸೇರಿ, ಅವರ ರಥಗಳನ್ನೂ, ರಥಾಶ್ವಗಳನ್ನೂ ಕಾಪಾಡುತ್ತ, ತಮ್ಮ ಸ್ವರೂಪವನ್ನು ಮರೆಸಿಕೊಂಡು ಗುಪ್ತವಾಗಿ ಸುಖದಿಂದಿರುತ್ತಿದ್ದರು. ಇತ್ತಲಾಗಿ ಪಾಂಡವರು ವಿರಾಟನಗರವನ್ನು ಸೇರಿದ ಮೇಲೆ, ದ್ರೌಪದಿಯು ಧರ್ಮರಾಜನನ್ನು ಕುರಿತು "ನಾಥಾ! ಇದೋ! ಇತ್ತಲಾಗಿ ವಿಶಾಲವಾದ ಬಯಲುಗಳಲ್ಲಿ ದನಗಳ ಮಂದೆಯಿರುವ ಸ್ಥಳಕ್ಕೆ ಹೋಗುವ ಸಣ್ಣ ಕಾಲುದಾರಿಯು ಕಾಣಿಸುವುದು. ಗ್ರಾಮಗಳಿಗೂ, ನಗರಗಳಿಗೂ ಸೇರಿದಂತೆ ಹೂತೋಟಗಳಲ್ಲಿರುವ ಮರಗಳನ್ನು ನೋಡು. ವಿರಾಟನ ರಾಜಧಾನಿಯು ಇನ್ನು ಸ್ವಲ್ಪ ದೂರದಲ್ಲಿರುವಂತೆ ತೋರುವುದು. ನನಗೆ ಮಾರ್ಗಾಯಾಸವು ಅಧಿಕವಾಗಿರುವುದರಿಂದ, ಇಲ್ಲಿಯೇ ಒಂದು ರಾತ್ರಿ ತಂಗಿದ್ದು, ಆಮೇಲೆ ಮುಂದೆ ಹೋಗುವೆವು" ಎಂದಳು. ಆಗ ಧರ್ಮರಾಜನು ನಕುಲನನ್ನು ನೋಡಿ "ವತ್ಸಾ! ಮಾದ್ರೀನಂದನಾ! ಕಮಲದಳಾಯತಾಕ್ಷಿಯಾದ ಈ ದ್ರೌಪದಿಯನ್ನು ನೀನು ಸ್ವಲ್ಪ ಹೊತ್ತಿನವರೆಗೆ

ತೋಳುಗಳಿಂದೆತ್ತಿಕೊಂಡು ನಡೆ. ಇನ್ನೇನು! ಇನ್ನು ಸ್ವಲ್ಪ ದೂರದೊಳಗಾಗಿ ವಿರಾಟನಗರವು ಸಮೀಪಿಸುವುದು. ನಾವು ಅಲ್ಲಿಗೆ ಸೇರಿಬಿಟ್ಟರೆ ನೆಮ್ಮದಿಯಿಂದಿರಬಹುದು. ಕಾಡುಗಳನ್ನೆಲ್ಲ ದಾಟಿ ಬಂದುಬಿಟ್ಟೆವು'' ಎಂದನು. ಅದಕ್ಕಾ ನಕುಲನು ''ಅಣ್ಣಾ! ಇದಕ್ಕೆ ಮುಂಚೆ ಬೆಳಗಿನಹೊತ್ತೆಲ್ಲಾ ನಾನು ಬೇಟೆಯಾಡಿ ಮೃಗಗಳನ್ನು ಕೊಂದು ಬಹಳ ಆಯಾಸಗೊಂಡಿರುವೆನು. ಕಾಡಿನಲ್ಲಿ ಬಹುದೂರಕ್ಕೆ ಸುತ್ತಿರುವೆನು. ಮೃಗಗಳನ್ನು ಬೆನ್ನಟ್ಟಿ ವೇಗದಿಂದೋಡಿದೆನಲ್ಲದೆ, ಹಳ್ಳತಿಟ್ಟುಗಳಿಂದ ಬಹಳ ದುರ್ಗಮವಾದ ಕಾಡುಗಳಲ್ಲಿ ಬಹುದೂರಕ್ಕೆ ಬಿಸಿಲಲ್ಲಿ ನಡೆದು ಶ್ರಮಪಟ್ಟಿರುವೆನು. ಆದುದರಿಂದ ಈಗ ನಾನು ಇವಳನ್ನೆತ್ತಿಕೊಂಡು ಹೋಗಲು ಅಶಕ್ತನಾಗಿರುವೆನು'' ಎಂದನು. ಆಗ ಧರ್ಮರಾಜನು ಸಹದೇವನನ್ನು ಕರೆದು ''ವತ್ಸ! ನೀನಾದರೂ ಈ ದ್ರೌಪದಿಯನ್ನು ಸ್ವಲ್ಪದೂರದವರೆಗೆ ಎತ್ತಿಕೊಂಡು ನಡೆ. ವಿರಾಟನಗರಿಗೆ ಸೇರಿಬಿಡುವೆವು'' ಎನಲು, ಸಹದೇವನು ''ಅಣ್ಣಾ! ನಾನೂ ಹಸಿವು ಬಾಯಾರಿಕೆಗಳಿಂದ ತಪಿಸುತ್ತಿರುವೆನು. ನಾನು ಬಹಳವಾಗಿ ದಣಿದಿರುವುದರಿಂದ, ಇವಳನ್ನೆತ್ತಿಕೊಂಡು ಹೋಗಲು ನನಗೆ ಸಾಧ್ಯವಿಲ್ಲ. ನಿನಗೆ ಶುಭವಾಗಲಿ! ನನ್ನನ್ನು ಮನ್ನಿಸು'' ಎಂದನು. ಆಗ ಧರ್ಮರಾಜನು ''ಅರ್ಜುನಾ! ವೀರಸಿಂಹನೆನಿಸಿರುವ ನೀನಾದರೂ ರಾಜಕುಮಾರಿಯೂ, ಸುಕುಮಾರಿಯೂ ಆದ ಈ ದ್ರೌಪದಿಯನ್ನು, ಭುಜಗಳಿಂದೆತ್ತಿಕೊಂಡು, ಸ್ವಲ್ಪ ದೂರದವರೆಗೆ ನಡೆಯುವೆಯಾ? ನಾವು ರಾಜಧಾನಿಗೆ ಹೋಗಿ ಸೇರಿಬಿಡುವೆವು. ಇನ್ನು ವನವಾಸದ ಕಷ್ಟವು ನಮ್ಮನ್ನು ಬಿಟ್ಟಹಾಗಿದೆ'' ಎಂದನು. ಅರ್ಜುನನು ಅಣ್ಣನ ಆಜ್ಞೆಗೆ ವಿಧೇಯನಾಗಿ ಸಂತೋಷದಿಂದ ಮುಂದೆ ಬಂದು, ಪ್ರಿಯದರ್ಶನೆಯಾದ ಆ ಪಾಂಚಾಲರಾಜಕುಮಾರಿಯನ್ನು ತೋಳುಗಳಿಂದೆತ್ತಿಕೊಂಡನು. ಜಟಾವಲ್ಕಲಗಳನ್ನು ಧರಿಸಿ ಜಿತೇಂದ್ರಿಯನಾದ ಆ ಅರ್ಜುನನು, ಧನುರ್ಬಾಣಗಳಿಂದಲೂ, ಬತ್ತಳಿಕೆಯಿಂದಲೂ ಶೋಭಿತನಾಗಿ, ದ್ರೌಪದಿಯನ್ನು ಭುಜದಮೇಲೇರಿಸಿಟ್ಟುಕೊಂಡೇ ದಾರಿ ನಡೆದು, ವಿರಾಟರಾಜಧಾನಿಯ ಸಮೀಪಕ್ಕೆ ತಂದಿಳಿಸಿದನು.

ಇದು ಆರನೆಯ ಅಧ್ಯಾಯವು.

ಪಾಂಡವರು ವಿರಾಟನಗರದ ಹೊರಗಿನ ಶ್ಮಶಾನಕ್ಕೆ ಸಮೀಪವಾಗಿದ್ದ ಬನ್ನಿಯ ಮರದಲ್ಲಿ ತಮ್ಮ ಆಯುಧಗಳನ್ನು ಮರೆಸಿಟ್ಟುದು.

ಪಾಂಡವರು ವಿರಾಟನಗರಿಯ ಸಮೀಪಕ್ಕೆ ಬಂದಮೇಲೆ, ಧರ್ಮರಾಜನು ಅರ್ಜುನನನ್ನು ನೋಡಿ "ಪರಂತಪಾ! ಈ ನಮ್ಮ ಆಯುಧಗಳನ್ನೆಲ್ಲ ಎಲ್ಲಿಯಾದರೂ ಇಟ್ಟು ಹೋಗಬೇಕಲ್ಲವೆ? ಇವುಗಳನ್ನು ರಹಸ್ಯವಾಗಿ ಮತ್ತು ಸುರಕ್ಷಿತವಾಗಿಡುವುದೆಲ್ಲಿ? ನಾವು ಆಯುಧಸಹಿತವಾಗಿಯೇ ಪುರಪ್ರವೇಶವನ್ನು ಮಾಡಿದಪಕ್ಷದಲ್ಲಿ, ಈ ಪುರವಾಸಿಗಳಿಗೆ ಇಲ್ಲದ ಭಯವನ್ನು ನಾವೇ ಹುಟ್ಟಿಸಿದಂತಾಗುವುದರಲ್ಲಿ ಸಂದೇಹವಿಲ್ಲ. ಇದಲ್ಲದೆ ಲೋಕತ್ರಯದಲ್ಲಿಯೂ ಪ್ರಖ್ಯಾತಿಗೊಂಡ ಈ ನಿನ್ನ ಗಾಂಡೀವವನ್ನು ನೀನು ಸಂಗಡ ತೆಗೆದುಕೊಂಡುಹೋದಲ್ಲಿ, ದುರ್ಯೋಧನನಿಗೆ ನಮ್ಮ ಸಂಗತಿಯು ತಿಳಿಯದೆ ಹೇಗುವುದೆ? ನಾವು ಈ ಧನುಸ್ಸಿನೊಡನೆ ಹೋಗಿ ಪಟ್ಟಣದಲ್ಲಿ ಜನಗಳ ಮುಂದೆ ಸಂಚರಿಸುತ್ತಿದ್ದರೆ, ಜನರು ನಮ್ಮನ್ನು ಒಡನೆಯೇ ಗುರುತುಹಿಡಿಯುವುದರಲ್ಲಿ ಸಂದೇಹವಿಲ್ಲ. ಅಜ್ಞಾತವಾಸ ಕಾಲಕ್ಕೆ ಮೊದಲು ನಮ್ಮಲ್ಲಿ ಒಬ್ಬನ ಗುರುತು ಸಿಕ್ಕಿದರೂ ತಿರುಗಿ ನಾವು ಹನ್ನೆರಡುವರ್ಷ ವನವಾಸದಲ್ಲಿರಬೇಕಾಗುವುದು. ಆದುದರಿಂದ ಈ ನಮ್ಮ ಆಯುಧಗಳೆಲ್ಲವನ್ನೂ ಎಲ್ಲಿಯಾದರೂ ಬಚ್ಚಿಟ್ಟು ಪುರಪ್ರವೇಶವನ್ನು ಮಾಡುವುದು ಒಳ್ಳೆಯದು" ಎಂದನು. ಅಜಾತಶತ್ರುವಾದ ಧರ್ಮರಾಜನ ಮಾತನ್ನು ಕೇಳಿ, ಮಹಾಯಶಸ್ವಿಯೂ, ಶತ್ರುನಾಶಕನೂ ಆದ ಅರ್ಜುನನು ಹೀಗೆಂದು ಹೇಳುವನು. "ಓ ನರಶ್ರೇಷ್ಠಾ! ಇದೋ! ಈ ವನದಲ್ಲಿ ಒಂದು ದೊಡ್ಡ ಬನ್ನೀಮರವು ಕಾಣಿಸುವುದು ನೋಡು. ಅದರ ಕೊಂಬೆಗಳು ಭಯಂಕರವಾಗಿ ಹರಡಿರುವುವು. ಶ್ಮಶಾನಕ್ಕೆ ಸಮೀಪವಾಗಿ, ಸಂಚಾರಮಾರ್ಗವನ್ನು ಬಿಟ್ಟು ಒಂದು ಕಡೆಗಾಗಿರುವುದರಿಂದ, ಅದರ ಬಳಿಗೆ ಜನಗಳು ಹೋಗುವ ಸಂಭವವಿಲ್ಲ. ಬಹಳ ವಿಶಾಲವಾಗಿ ಹರಡಿದ ಕೊಂಬೆಗಳುಳ್ಳ ಈ ಮರದಮೇಲೆ ಕಾಗೆಗಳು ವಿಶೇಷವಾಗಿ ಸೇರಿಕೊಂಡಿರುವುವು. ಇದರ ಅಡಿಮರವು ಬಹಳ ದಪ್ಪನಾಗಿ ಉಬ್ಬಿ ಬೆಳೆದಿರುವುದರಿಂದ, ಏರು

ವುದೂ ಕಷ್ಟವೆಂದು ತೋರುತ್ತಿದೆ. ಈ ಶ್ಮಶಾನಕ್ಕೆ ಸಮೀಪದಲ್ಲಿ ಸುತ್ತು ಮುತ್ತಲೂ ವಿಶೇಷವಾಗಿ ಮನೆಗಳೂ ಕಾಣುವುದಿಲ್ಲ. ಆದುದರಿಂದ ಈ ಮರದಮೇಲೆ ನಮ್ಮ ಆಯುಧಗಳನ್ನು ಬಚ್ಚಿಟ್ಟು ಪಟ್ಟಣದೊಳಗೆ ಪ್ರವೇಶಿಸುವೆವು. ಇದರ ಸುತ್ತುಮುತ್ತಿನಲ್ಲಿ ಜನಗಳಾರೂ ಸಂಚರಿಸುವಹಾಗಿಲ್ಲ. ಆದುದರಿಂದ, ನಮ್ಮೆಲ್ಲರ ಆಯುಧಗಳನ್ನು ಒಂದು ಮನುಷ್ಯಾಕಾರಕ್ಕೆ ಜೋಡಿಸಿ ಅದರಮೇಲೆ ಚರ್ಮ, ಕೂದಲು, ಅಸ್ಥಿ ಮುಂತಾದುವುಗಳಿಂದ ಮುಚ್ಚಿದಹಾಗೆ ಮಾಡಿ, ಬಿಲ್ಲಿನ ನಾಣುಗಳಿಂದ ಬಿಗಿದು ಕಟ್ಟಿ, ತಾನಾಗಿ ಈ ಮರದ ಕೊಂಬೆಗೆ ಉರುಲುಹಾಕಿಕೊಂಡ ಒಬ್ಬ ಮನುಷ್ಯನ ಶವದಂತೆ ಕಾಣಿಸಿ ಇದಕ್ಕೆ ತೂಗುಬಿಡುವೆವು. ಹೀಗೆ ಮಾಡಿಟ್ಟರೆ, ಕಾಡಿನಲ್ಲಿ ಸಂಚರಿಸುವ ಮನುಷ್ಯರು ಯಾರೂ ಈ ಮರದ ಹತ್ತಿರಕ್ಕೆ ಬರಲಾರರು. ಇದರೊಳಗೆ ಆಯುಧಗಳನ್ನು ಬಚ್ಚಿಟ್ಟಿರುವ ಸಂಗತಿಯೂ ಬೇರೊಬ್ಬರಿಗೆ ತಿಳಿಯಲಾರದು'' ಎಂದನು. ಧನಂಜಯನು ಹೀಗೆಂದು ಹೇಳಿ, ಶಸ್ತ್ರಗಳನ್ನಿಡುವುದಕ್ಕಾಗಿ ಯತ್ನಿಸಿದಾಗ, ಪಂಚಪರ್ವತಗಳಿಗೆ ಸಮಾನರಾದ ಆ ಪಂಚಪಾಂಡವರೂ ತಮ್ಮತಮ್ಮ ಮಹಾಯುಧಗಳನ್ನೂ, ಬತ್ತಳಿಕೆಗಳನ್ನೂ, ಉಜ್ವಲಕಾಂತಿಯುಳ್ಳ ಖಡ್ಗಗಳನ್ನೂ ತಂದು ಒಂದಾಗಿ ಸೇರಿಸಿಟ್ಟರು. ಆಗ ಯುಧಿಷ್ಠಿರನು ಸಹದೇವನನ್ನು ಕರೆದು ''ವತ್ಸ! ಸಹದೇವಾ! ಎಲೈ ವೀರನೆ! ನೀನು ಈ ಮರವನ್ನೇರಿ ಈ ಆಯುಧಗಳನ್ನೆಲ್ಲ ಅದರ ಮೇಲೆ ಕಟ್ಟಿಡಬೇಕು'' ಎಂದು ಹೇಳಿ, ಅರ್ಜುನನನ್ನು ಕರೆದು, ಆಯುಧಗಳನ್ನೆಲ್ಲ ಎತ್ತಿಕೊಡುವಂತೆ ಹೇಳಿದನು. ಆಗ ಅರ್ಜುನನು ಹಿಂದೆ ತಾನು ಯಾವ ಧನುಸ್ಸಿನಿಂದ ದೇವ, ಮನುಷ್ಯ, ಪಿಶಾಚ, ನಾಗ, ರಾಕ್ಷಸರನ್ನೂ, ನಿವಾತಕವಚರನ್ನೂ, ಪೌಲೋಮರನ್ನೂ, ದುರ್ಜಯರಾದ ಕಾಲಕೇಯರನ್ನೂ ಜಯಿಸಿ, ರಥಮಾತ್ರ ಸಹಾಯನಾಗಿ ನಿಗ್ರಹಿಸಿದನೋ, ಐಶ್ವರ್ಯದಿಂದ ಪ್ರಬಲವೆನಿಸಿದ ಇನ್ನೂ ಬೇರೆ ಅನೇಕದೇಶಗಳನ್ನು ಜಯಿಸಿದನೋ, ಶತ್ರುಭಯಂಕರವೂ, ಮಹಾಘೋರವೂ ಆದ ಆ ಗಾಂಡೀವವೆಂಬ ಬಿಲ್ಲನ್ನು ನಾಣೇಳಿಸಿದನು: ಆಮೇಲೆ ಮಹಾತೇಜಸ್ವಿಯಾದ ಯುಧಿಷ್ಠಿರನು, ಯಾವ ತನ್ನ ಧನುಸ್ಸಿನಿಂದ ಕುರುಕ್ಷೇತ್ರವನ್ನು ಕಾಪಾಡಿದನೋ, ಯಾವುದು ಸರ್ವಲೋಕವನ್ನೂ ವಶಗೊಳಿಸತಕ್ಕ ಪ್ರಭಾವ

ವುಳ್ಳುದೋ, ಯಾವುದು ದೈತ್ಯರಾಕ್ಷಸರಿಗೆ ಭಯೋತ್ಪಾದಕವಾಗಿದ್ದಿತೋ, ಸರ್ಪದೇಹಕ್ಕೆ ಸಮಾನಾಕಾರವಾಗಿ, ಸುವರ್ಣರತ್ನಾಲಂಕೃತವಾಗಿದ್ದ ಅಂತಹ ಬಾಗಿದ ತನ್ನ ಧನುಶ್ರೇಷ್ಠವನ್ನು ನೆಟ್ಟಗೆ ನೀಡಿಸಿ, ಮರದ ಮೇಲೆ ಕಟ್ಟಡುವುದಕ್ಕಾಗಿ ಎಳೆದು ಕಟ್ಟಿದ್ದ ನಾಣನ್ನು ಸಡಿಲಿಸಿದನು.

ಆಮೇಲೆ ಭೀಮಸೇನನು, ಹಿಂದೆ ಯಾವ ಧನುಸ್ಸಿನಿಂದ ಯುದ್ಧದಲ್ಲಿ ಪಾಂಚಾಲರನ್ನು ಜಯಿಸಿದನೋ, ದಿಗ್ವಿಜಯಕಾಲದಲ್ಲಿ ತಾನು ಏಕಾಕಿಯಾಗಿ ಯಾವ ಒಂದೇ ಧನುಸ್ಸಿನಿಂದ ಅನೇಕ ವೈರಿಗಳನ್ನು ನಿಗ್ರಹಿಸಿದನೋ, ಯಾವ ಧನುಸ್ಸಿನ ಮೌರ್ವೀಧ್ವನಿಯು ಕಿವಿಗೆ ಬಿದ್ದಮಾತ್ರಕ್ಕೆ ಪರ್ವತಭೇದನದಿಂದಲೂ, ಸಿಡಿಲಿನ ಬಡಿತದಿಂದಲೂ ಉಂಟಾದ ಪರುಷ ಧ್ವನಿಯಂತೆ, ಶತ್ರುಗಳು ಭಯಪಟ್ಟೋಡುತ್ತಿದ್ದರೋ, ಯಾವುದರಿಂದ ಸಿಂಧುರಾಜನನ್ನು ಜಯಿಸಿ, ಗಂಧಮಾದನ ಪರ್ವತದಲ್ಲಿ ತನ್ನಮೇಲೆ ಕೋಪದಿಂದಿದಿರುಬಿದ್ದವರನ್ನು ನಿಗ್ರಹಿಸಿ, ದಿವ್ಯವಾದ ಸೌಗಂಧಿಕ ಪುಷ್ಪವನ್ನು ಸಾಧಿಸಿ ತಂದನೋ, ಯಾವುದರಿಂದ ಹಿಂದೆ ತ್ರಿಗರ್ತರನ್ನು ಜಯಿಸಿ ತ್ರಿಗರ್ತರಾಜನನ್ನು ಹಿಡಿದುತಂದನೋ, ವಜ್ರಾಯುಧಕ್ಕೆ ಸಮಾನಸ್ಪರ್ಶವುಳ್ಳ ಸುವರ್ಣವಜ್ರಾಲಂಕೃತವಾದ ಆ ತನ್ನ ಧನುಸ್ಸಿನ ನಾಣನ್ನು ಕಳಚಿದನು. ಆಮೇಲೆ ಧರ್ಮರಾಜನು ನಕುಲನನ್ನು ಕರೆದು, ವತ್ಸಾ ! ನೀನು ಯುದ್ಧದಲ್ಲಿ ಯಾವ ಧನುಸ್ಸಿನಿಂದ ಅನೇಕ ಶತ್ರುಗಳನ್ನು ಜಯಿಸಲು ಉತ್ಸಾಹಗೊಂಡಿರುವೆಯೋ, ಇದುವರೆಗೆ ಯಾವುದರ ಬಲದಿಂದ ಅನೇಕ ರಾಜ್ಯಗಳನ್ನು ಜಯಿಸಿದೆಯೋ ಅಂತಹ ಮಹಾಮಹಿಮೆಯುಳ್ಳದಾಗಿ, ವಿಷ್ಣುಧನುಸ್ಸಿಗೂ, ಗಾಂಡೀವಕ್ಕೂ, ದೇವೇಂದ್ರನ ವಜ್ರಾಯುಧಕ್ಕೂ ಸಮಾನವಾಗಿ, ಸುವರ್ಣಚಿತ್ರಿತವಾಗಿ, ಸಾರವತ್ತಾಗಿ, ನಿನ್ನ ವೀರ್ಯಕ್ಕೆ ಉಚಿತವಾಗಿಯೂ ಇರುವ ಈ ನಿನ್ನ ಬಿಲ್ಲಿನ ನಾಣನ್ನು ಸಡಿಲಿಸಿ, ಈ ಮರದಮೇಲೆ ಬಚ್ಚಿಡುವುದಕ್ಕಾಗಿ ತಂದುಕೊಡು" ಎಂದನು. ಜನಮೇಜಯ ರಾಜೇಂದ್ರಾ ಕೇಳು! ಧರ್ಮರಾಜನು ಈ ಮಾತನ್ನು ಹೇಳಿದೊಡನೆ, ಮಹಾಬಾಹುವೂ, ಮಿತಭಾಷಿಯೂ, ಕೆಂಪಾದ ಮುಖವರ್ಣವುಳ್ಳವನೂ, ಕುಲರೂಪಗಳಲ್ಲಿ ತನಗೆ ಭೇದೊಬ್ಬರು ಸಮಾನವಿಲ್ಲದುದರಿಂ

ದಲೇ ನಕುಲನೆಂದು ಹೆಸರುಗೊಂಡವನೂ ಆದ ಆ ಮಾದ್ರೀಪುತ್ರನು, ಹಿಂದೆ ಯಾವುದರಿಂದ ತಾನು ಪಶ್ಚಿಮದಿಕ್ಕನ್ನು ಜಯಿಸಿದ್ದನೋ ಅಂತಹ ಧನುಸ್ಸನ್ನು ತಾಣಿಳಿಸಿ ತಂದುಕೊಟ್ಟನು. ಆಮೇಲೆ ಧರ್ಮರಾಜನು ಸಹದೇವನನ್ನು ನೋಡಿ "ವತ್ಸ ಸಹದೇವಾ! ಕಳಿಂಗರನ್ನೂ, ದಕ್ಷಿಣದೇಶದವರನ್ನೂ, ಮಾಗಧರನ್ನೂ ಯಾವ ಧನುಸ್ಸಿನಿಂದ ನೀನು ಯುದ್ಧದಲ್ಲಿ ದಹಿಸಿದೆಯೋ, ಆ ನಿನ್ನ ಧನುಸ್ಸನ್ನು ಮರದಮೇಲಿಡುವುದಕ್ಕಾಗಿ ತಾಣಿಳಿಸಿ ತೆಗೆದುಕೊಂಡು ಬಾ" ಎನಲು, ಸಹದೇವನು ಒಡನೆಯೇ ತನ್ನ ಧನುಸ್ಸಿಗೆ ಕಟ್ಟಿದ ತಾಣಿನ್ನು ಬಿಚ್ಚಿತಂದನು. ಆಮೇಲೆ ಆ ಪಾಂಡವರೆಲ್ಲರೂ ಚಿನ್ನದ ಹಿಡಿಗಳುಳ್ಳ ತಮ್ಮ ಖಡ್ಗಗಳನ್ನೂ, ತಾನಾಬಗೆಯ ಬಾಣಗಳನ್ನೂ, ಬತ್ತಳಿಕೆಗಳನ್ನೂ, ಆಯುಧಗಳನ್ನೂ, ಗದೆಗಳನ್ನೂ, ಸಣ್ಣ ಕತ್ತಿಗಳನ್ನೂ ಒಂದಾಗಿ ಸೇರಿಸಿ ಕಟ್ಟಿದರು. ಆಗ ಧರ್ಮರಾಜನು ಸಹದೇವನನ್ನು ಕುರಿತು "ವತ್ಸ! ಸಹದೇವ! ನೀನು ಈ ಬನ್ನಿಯ ಮರವನ್ನೇರಿ, ಈ ನಮ್ಮ ಆಯುಧಗಳನ್ನೆಲ್ಲ ಅದರ ಮೇಲಿಡು. ಇದೋ! ಈ ಸಮಿಾಪದಲ್ಲಿ ಗೋಜಾತಿಯ ಮೃಗವೊಂದು ಪ್ರಾಣವನ್ನು ನೀಗಿ ಅಜೇತನವಾಗಿ ಬಿದ್ದಿದೆ. ಈ ಮೃಗವನ್ನು ಕತ್ತರಿಸಿ ಅದರ ಚರ್ಮವನ್ನು ಸುಲಿದುತೆಗೆದು, ಅದರಿಂದ ಈ ನಮ್ಮ ಆಯುಧಗಳೆಲ್ಲವನ್ನೂ ಸುತ್ತಿಡು" ಎಂದನು. ಅದರಂತೆಯೇ ಸಹದೇವನು ಬನ್ನಿಯ ಮರವನ್ನೇರಿ, ಬಹುಶೀಘ್ರವಾಗಿ ಬಿಲ್ಲುಗಳನ್ನು ಆ ಮರಕ್ಕೆ ಕಟ್ಟಿ, ಪಶುವಿನ ಚರ್ಮದಿಂದ ಸುತ್ತಿ ಕಟ್ಟಿದನು. ಚಳಿ, ಗಾಳಿ, ಮಳೆಗಳಿಂದಾಗಲಿ, ಬಿಸಿಲಿನಿಂದಾಗಲಿ, ಆ ಆಯುಧಗಳೊಂದೂ ಕೆಟ್ಟುಹೋಗಬಾರದೆಂದು ಅವುಗಳನ್ನು ಬಹಳ ಎಚ್ಚರಿಕೆಯಿಂದ ಬಾರಿಬಾರಿಗೂ ಚೆನ್ನಾಗಿ ಸುತ್ತಿ ಚರ್ಮದಿಂದ ಮುಚ್ಚಿಟ್ಟನು. ದೊಡ್ಡ ಮಳೆ ಬಂದಾಗಲೂ ಆಯುಧಗಳಿಗೆ ಎಲ್ಲೆಲ್ಲಿ ಇರಿಸಲುನೀರು ತಗುಲಬಹುದೆಂದು ಸಂದೇಹವು ತೋರಿತೋ, ಆ ಸ್ಥಳಗಳನ್ನೆಲ್ಲ ಬಲವಾಗಿ ಹಗ್ಗದಿಂದ ಚೆನ್ನಾಗಿ ಬಿಗಿದು ಕಟ್ಟಿದನು. ಆಮೇಲೆ ಪಾಂಡವರು ಪ್ರಾಯೋಪವೇಶದಿಂದ ಒಣಗಿ, ಕೇವಲ ಚರ್ಮವೂ, ಅಸ್ಥಿಯೂ, ನರಗಳೂ ಮಾತ್ರವುಳ್ಳ ಒಬ್ಬ ಉಂಛವೃತ್ತಿಯವನ (ತಿರುಪೆಯವನ) ಮೃತಶರೀರವು ಸಮಿಾಪದಲ್ಲಿರುವುದನ್ನು ಕಂಡು, ಅದನ್ನು ತಂದು ಆ ಆಯುಧದ ಕಟ್ಟಿನ ಮುಂಗಡೆಗೆ ಬಿಗಿದಿಟ್ಟರು.

ಉಪಾಯಕುಶಲರಾದ ಪಾಂಡವರು ಹೀಗೆ ಮಾಡಿದಮೇಲೆ, ಉತ್ಸಾಹದಿಂದ ತಮ್ಮೊಳಗೆ ತಾವು, ಈ ವನದಲ್ಲಿ ತಿರುಗಾಡತಕ್ಕ ಮನುಷ್ಯರು, "ಮೇಲೆ ಮುಚ್ಚಿರುವ ಈ ಹೆಣದ ದುರ್ಗಂಧದಿಂದಲೇ ಈ ಶಮೀವೃಕ್ಷದಲ್ಲಿ ಯಾವುದೋ ಹೆಣವಿರಬೇಕೆಂದು ತಿಳಿದು ಅದರ ಸಮೀಪಕ್ಕೂ ಬಾರದೆ ದೂರದಿಂದಲೇ ಸರಿಯುವರು" ಎಂದು ಮಾತಾಡಿಕೊಳ್ಳುತ್ತಿದ್ದರು. ಆಮೇಲೆ ಯುಧಿಷ್ಠಿರನು ಸಹದೇವನನ್ನು ಕುರಿತು "ವತ್ಸಾ! ಧೀಮಂತಾ! ಈ ಬ್ರಾಹ್ಮಣ ಶರೀರವನ್ನು ಸೇರಿಸಿ ಹಗ್ಗದಿಂದ ಬಿಗಿದು, ಈ ಮರದಮೇಲೆ, ವಿಶಾಲವಾಗಿಯೂ ಬುಡದಲ್ಲಿ ದೃಢವಾಗಿಯೂ ನಿನಗೆ ಕಂಡುಬರುವ ಕೊಂಬೆಗಳಲ್ಲಿ ಕಟ್ಟಿ ಬಾ" ಎಂದನು. ಅದರಂತೆಯೇ ಸಹದೇವನು ಆ ಶವವನ್ನು ಕಟ್ಟಿಬಂದನು. ಆಮೇಲೆ ಧರ್ಮರಾಜನು ಸ್ನಾನಮಾಡಿ ಶುಚಿಯಾಗಿ ಬಂದು, ಚತುರ್ಮುಖ ಬ್ರಹ್ಮನನ್ನೂ, ವರಪ್ರದನಾದ ದೇವೇಂದ್ರನನ್ನೂ, ಕುಬೇರನನ್ನೂ, ವರುಣನನ್ನೂ, ವಾಯುವನ್ನೂ, ರುದ್ರನನ್ನೂ, ಯಮನನ್ನೂ, ವಿಷ್ಣುವನ್ನೂ, ಚಂದ್ರಸೂರ್ಯರನ್ನೂ, ಧರ್ಮದೇವತೆಯನ್ನೂ, ಭೂಮಿ, ಅಂತರಿಕ್ಷ, ದಿಕ್ಕು, ವಿದಿಕ್ಕುಗಳನ್ನೂ, ವಸುಗಳನ್ನೂ, ಮರುತ್ತುಗಳನ್ನೂ, ಅತಿತೇಜಸ್ವಿಯಾದ ಅಗ್ನಿದೇವನನ್ನೂ ಮನಸ್ಸಿನಿಂದಲೇ ಧ್ಯಾನಿಸಿ ನಮಸ್ಕರಿಸುತ್ತ "ಈ ಲೋಕದಲ್ಲಿ ರಾತ್ರಿಯೂ, ಹಗಲೂ ಸಂಚರಿಸತಕ್ಕ ಒಳ್ಳೇ ವ್ರತವುಳ್ಳ ಯಾವಯಾವ ಭೂತಗಳುಂಟೋ ಅವೆಲ್ಲಕ್ಕೂ ನಮಸ್ಕರಿಸಿ, ಅವರಲ್ಲಿ ಶರಣಾಗತನಾಗಿ ಪ್ರಾರ್ಥಿಸಿಕೊಳ್ಳುವೆನು. ಇದೋ! ಈಗ ನಾವು ಮಹಾಬಲವುಳ್ಳ ಈ ನಮ್ಮ ಆಯುಧಗಳೆಲ್ಲವನ್ನೂ, ಶ್ಮಶಾನವಾಸಿಯಾದ ಮಹಾದೇವನಲ್ಲಿಯೂ, ವಾಯುದೇವನಲ್ಲಿಯೂ, ಪರ್ವತಸಹಿತಗಳಾದ ಈ ವನಸ್ಪತಿಗಳಲ್ಲಿಯೂ ನ್ಯಾಸರೂಪವಾಗಿಡುವೆವು. ಚಂದ್ರ, ಸೂರ್ಯರ ಬಳಿಯಲ್ಲಿ ಇವೆಲ್ಲವನ್ನೂ ನಾನು ನ್ಯಾಸರೂಪವಾಗಿ ಇಟ್ಟಿರುವೆನು. ನಮ್ಮ ಈ ಹದಿಮೂರನೆಯ ವರ್ಷದ ಅಜ್ಞಾತವಾಸವು ಕಳೆದಮೇಲೆ, ನಾವು ತಿರುಗಿ ಬಂದು ಕೇಳಿದಾಗ ಇವುಗಳನ್ನು ನನ್ನ ವಶಕ್ಕಾಗಲಿ, ಅಥವಾ ಅರ್ಜುನನ ವಶಕ್ಕಾಗಲಿ ಹಿಂತಿರುಗಿ ಒಪ್ಪಿಸಿಕೊಡಬೇಕು. ಭೀಮನು ಬಂದು ಕೇಳಿದರೆಮಾತ್ರ ಇವುಗಳನ್ನು ಕೊಡಬಾರದು. ಏಕೆಂದರೆ, ವೃಕೋದರನಾದ ಭೀಮನು ಕೋಪಸ್ವಭಾವವುಳ್ಳ

ವನು. ಧೃತರಾಷ್ಟ್ರಪುತ್ರರಲ್ಲಿ ನಿತ್ಯಕೋಪವುಳ್ಳ ಈ ಭೀಮನು, ಆ ಕೋಪಾವೇಶದಿಂದ ಹಿಂದುಮುಂದನ್ನಾಲೋಚಿಸದೆ, ನಮ್ಮ ಸಂಕೇತಕಾಲವು ಮುಗಿಯುವುದಕ್ಕೆ ಮೊದಲೇ ಆ ಕೌರವರಮೇಲೆ ಬಿದ್ದು ಹೊಡೆಯಬಹುದು. ಆಗ ನಾವು ತಿರುಗಿ ವನವಾಸವನ್ನು ಅನುಭವಿಸಬೇಕಾಗುವುದು. ಹೇಗೋ ಸಹಿಸಿಕೊಂಡು ನಮ್ಮ ಸಂಕೇತಕಾಲವನ್ನು ನಾವು ಕಳೆದುಬಿಟ್ಟರೆ, ಆಮೇಲೆ ಕೌರವರನ್ನು ಧ್ವಂಸಮಾಡಬಹುದು. ನಾವು ಹೀಗೆ ತಾಳ್ಮೆಯಿಂದ ನಡೆದಾಗಲೇ ನಮಗೆ ಧರ್ಮಕಾಮಾರ್ಥಗಳೂ, ಕೀರ್ತಿಯೂ, ಖ್ಯಾತಿಯೂ ಕೈಗೂಡಿಬರುವುವು. ಈಗ ಇವೆಲ್ಲವೂ ಪಾಂಡವರೆಲ್ಲರ ಜೀವಿತದೊಡನೆ ನನ್ನ ಅಧೀನವಾಗಿವೆ. ಇದರಲ್ಲಿ ಸಂದೇಹವಿಲ್ಲ'' ಎಂದನು.

ಆಮೇಲೆ ಆ ಸಹೋದರರೆಲ್ಲರೂ ದೇವತೆಗಳಿಗೆ ನಮಸ್ಕರಿಸಿ, ಆ ಬನ್ನಿಯಮರವನ್ನು ಪ್ರದಕ್ಷಿಣವಾಗಿ ಸುತ್ತಿ ಬಂದು, ಎಲ್ಲರೂ ಒಂದಾಗಿ ವಿರಾಟನಗರಪ್ರವೇಶಕ್ಕಾಗಿ ಸನ್ನದ್ಧರಾಗಿ ಹೊರಟರು. ಅವರು ಹೊರಟುಬರುವಾಗ ದಾರಿಯಲ್ಲಿ ದನಗಳನ್ನು ಕಾಪಾಡುವ ಗೊಲ್ಲರಿಂದ ಹಿಡಿದು, ಕುರಿಗಳನ್ನು ಮೇಯಿಸುವ ಕುರುಬರವರೆಗೆ, ಕೃಷಿಜೀವಿಗಳಾದ ಒಕ್ಕಲಿಗರಲ್ಲಿ ಯಾವನಾದರೊಬ್ಬನು ಅಕಸ್ಮಾತ್ತಾಗಿ ತಮ್ಮನ್ನು ಸಂಧಿಸಿದರೆ, ಅವನೊಡನೆ ಸಂಭಾಷಣ ಮಾಡುವಾಗ, ಆಗಾಗ ಆ ಬನ್ನಿಯಮರವನ್ನು ಅವನಿಗೆ ತೋರಿಸುತ್ತ ''ಬಹುಕಾಲ ಬದುಕಿದ ನಮ್ಮ ತಾಯಿಯು, ಈಗಲೇ, ಅವಳ ನೂರೆಂಭತ್ತನೆಯ ವಯಸ್ಸಿನಲ್ಲಿ, ಇದೋ! ಈ ಸಮೀಪದ ಕಾಡಿನಲ್ಲಿ ಮೃತ್ಯುವಶಳಾದಳು. ಆದರೆ, ನಮ್ಮ ಕುಲಧರ್ಮವನ್ನನುಸರಿಸಿ ಇವಳಿಗೆ ನಾವು ಅಗ್ನಿಸಂಸ್ಕಾರವನ್ನು ಮಾಡಲಿಲ್ಲ. ನಮ್ಮ ಕುಲಧರ್ಮವೇ ಈ ವಿಧವಾದುದು'' ಎಂದು ಹೇಳುತ್ತಿದ್ದರು. ಇದಲ್ಲದೆ, ಆ ಪಾಂಡವರು ದಾರಿ ನಡೆಯುತ್ತಿರುವಾಗ, ಹರ್ಷಯುಕ್ತರಾಗಿ, ದಿಕ್ಕುಗಳೆಲ್ಲವೂ ಮೊಳಗುವಂತೆ ಉಚ್ಚಧ್ವನಿಯಿಂದ, ''ಬಹುಕಾಲದಿಂದ ದುಃಖಕ್ಕೊಳಗಾಗಿ ಸಂಕಟಪಡುತ್ತಿದ್ದ ನಮ್ಮ ತಾಯಿಯು ಇದೋ! ಈಗಲೇ ಇಲ್ಲಿ ಕಾಲಾಧೀನಳಾದಳು. ಮೃತರಾದವರಿಗೆ ಅಗ್ನಿಸಂಸ್ಕಾರವನ್ನು ಮಾಡದೆ, ಅವರ ಶವವನ್ನು ಹೀಗೆ ಯಾವುದಾದರೂ ಮರದಮೇಲೆ ಕಟ್ಟಿಬಿಡುವುದು ವನಚಾರಿಗಳೂ, ಬೇಡ

ರೂ ಆದ ನಮಗೆ ಹಿರಿಯರ ಕಾಲದಿಂದ ಅನುಸರಿಸಿ ಬಂದ ಕುಲಧರ್ಮವಾಗಿದೆ'' ಎಂಬ ಮಾತುಗಳನ್ನು ಎಲ್ಲರ ಕಿವಿಗೂ ಬಿಳುವಂತೆ ಹೇಳುತ್ತ ಬರುತ್ತಿದ್ದರು. ಎಲ್ಲರೂ ವಿರಾಟನಗರದ್ವಾರಕ್ಕೆ ಬಂದೊಡನೆ, ಭೀಮಾರ್ಜುನರೂ, ನಕುಲ ಸಹದೇವರೂ, ಧರ್ಮರಾಜನೂ, ರಾಜಪತ್ನಿಯಾದ ದ್ರೌಪದಿಯೂ, ಹಿಂದೆ ತಾವುತಾವು ನಿರ್ಣಯಿಸಿಕೊಂಡಿದ್ದಂತೆ ವೇಷಾಂತರಗಳಿಂದ ಮತ್ಸ್ಯರಾಜನ ಬಳಿಯಲ್ಲಿ ಹದಿಮೂರನೆಯ ವರ್ಷಾಂತದವರೆಗೆ ಅಜ್ಞಾತವಾಸದಿಂದಿರುವುದಕ್ಕಾಗಿ ಪುರಪ್ರವೇಶವನ್ನು ಮಾಡಿದರು. ಆಗ ಧರ್ಮರಾಜನು ವಿರಾಟನಗರದಲ್ಲಿ, ತಮ್ಮೊಳಗೆ ಒಬ್ಬರಿಗೊಬ್ಬರು ರಹಸ್ಯವಾಗಿ ಕರೆಯುವುದಕ್ಕಾಗಿ, ಐದು ಮಂದಿಗೂ ಕ್ರಮವಾಗಿ, ಜಯ, ಜಯೇಶ, ವಿಜಯ, ಜಯತ್ಸೇನ, ಜಯದ್ಬಲರೆಂಬ ಸಂಕೇತನಾಮಗಳನ್ನಿಟ್ಟು ''ಏನಾದರೂ ಆಪತ್ತು ಸಂಭವಿಸಿದಾಗ, ನಾವು ಅನ್ಯೋನ್ಯವಾಗಿ ಈ ಸಂಕೇತನಾಮಗಳಿಂದಲೇ ಕರೆಯಬೇಕು'' ಎಂದು ನಿಯಮಿಸಿದನು. ಆಮೇಲೆ ಆ ಪಾಂಡವರೆಲ್ಲರೂ ತಮ್ಮ ಪ್ರತಿಜ್ಞೆಯಂತೆ ಹದಿಮೂರನೆಯ ವರ್ಷದ ಅಜ್ಞಾತವಾಸಕ್ಕಾಗಿ, ಮಹಾ ವೈಭವವುಳ್ಳ ಆ ವಿರಾಟನಗರದೊಳಕ್ಕೆ ಕಾಲಿಟ್ಟರು.

ಇದು ಏಳನೆಯ ಅಧ್ಯಾಯವು.

ವಿರಾಟನಗರಪ್ರವೇಶಕ್ಕೆ ಮೊದಲು ಧರ್ಮರಾಜನು ದುರ್ಗಾಸ್ತುತಿಯನ್ನು ಮಾಡಿದುದು.

ರಮಣೀಯವಾದ ಆ ವಿರಾಟನಗರದೊಳಗೆ ಪ್ರವೇಶಿಸುವ ಮೊದಲು ಯುಧಿಷ್ಠಿರನು ದುರ್ಗಾಸ್ತುತಿಯನ್ನು ಮಾಡತೊಡಗಿದನು. ಶ್ರೀಮನ್ನಾರಾಯಣನಿಗೆ ವಿಶ್ವಾಸಪಾತ್ರಳಾಗಿ, ತ್ರಿಲೋಕೇಶ್ವರಿಯೆನಿಸಿಕೊಂಡ ಯಾವ ದೇವಿಯು, ನಂದಗೋಕುಲದಲ್ಲಿ ಯಶೋದೆಯ ಗರ್ಭದಿಂದ ಹುಟ್ಟಿ, ಲೋಕಕ್ಕೆ ಮಂಗಳಕರೆಯಾಗಿ ಯದುಕುಲವರ್ಧಿನಿಯೆನಿಸಿಕೊಂಡಳೋ ಯಾವಳು ಕಂಸನಿಂದ ಶಿಲಾತಲದಲ್ಲಿ ಅಪ್ಪಳಿಸಲ್ಪಟ್ಟವಳಾಗಿ, ಆಕಾಶಕ್ಕೆ ಹಾರಿ ಕಂಸನನ್ನು ಓಡಿಸಿ ದಾನವರಿಗೆ ಕ್ಷಯಕಾರಿಣಿಯಾದಳೋ! ಶ್ರೀಕೃಷ್ಣ

ನಿಗೆ ಸಹೋದರಿಯಾಗಿ, ದಿವ್ಯಮಾಲಿಕೆಯಿಂದಲಂಕೃತಳಾಗಿ, ದಿವ್ಯ ವಸ್ತ್ರವನ್ನು ಧರಿಸಿ, ಖಡ್ಗ ಖೇಟಕಗಳೆಂಬ ಆಯುಧಗಳನ್ನು ಹಿಡಿದು ಶೋಭಿಸುತ್ತಿದ್ದಳೋ, ಮಂಗಳಸ್ವರೂಪಿಣಿಯಾದ ಯಾವಳು ತನ್ನನ್ನು ಸ್ಮರಿಸತಕ್ಕವರ ಪಾಪಭಾರವನ್ನಿಳಿಸುವುದಕ್ಕಾಗಿ ಕೆಸರಿನಲ್ಲಿ ಸಿಕ್ಕಿದ ದುರ್ಬಲವಾದ ಗೋವನ್ನು ಉದ್ಧರಿಸುವಂತೆ ಆ ಪಾಪದಿಂದುದ್ಧರಿಸುವಳೋ, ಅಂತಹ ದುರ್ಗೆಯನ್ನು ಧರ್ಮರಾಜನು ಮನಸಾ ಧ್ಯಾನಿಸಿ, ತನ್ನ ತಮ್ಮಂದಿರೊಡನೆ ಆ ದೇವಿಯ ಪ್ರತ್ಯಕ್ಷದರ್ಶನವನ್ನಪೇಕ್ಷಿಸಿ, ಬಗೆಬಗೆಯ ಸ್ತೋತ್ರಗಳಿಂದ ಸ್ತುತಿಸತೊಡಗಿದನು. "ವರಪ್ರದೇ! ಹೇ ಕೃಷ್ಣೇ! ಕುಮಾರೀ! ಬಹ್ಮಚಾರಿಣೀ! ನಿನಗೆ ನಮಸ್ಕಾರವು. ಬಾಲಸೂರ್ಯನಿಗೆ ಸಮಾನವಾದ ಆಕೃತಿಯಿಂದಲೂ, ಪೂರ್ಣಚಂದ್ರನಿಗೆಣೆಯಾದ ಮುಖದಿಂದಲೂ, ನಾಲ್ಕು ಭುಜಗಳಿಂದಲೂ, ನಾಲ್ಕು ಮುಖಗಳಿಂದಲೂ ಉಬ್ಬಿದ ಸ್ತನಜಘನಗಳಿಂದಲೂ ಶೋಭಿಸುವ ನಿನಗೆ ನಮಸ್ಕಾರವು. ನವಿಲುಗರಿಯ ಬಳೆಗಳನ್ನೂ, ಕೇಯೂರಾಂಗದಗಳೆಂಬ ತೋಳ್ಬಳೆಗಳನ್ನೂ ಧರಿಸಿದ ನಿನಗೆ ನಮಸ್ಕಾರವು. ನೀನು ಶ್ರೀ ಮಹಾವಿಷ್ಣುವಿನ ಪತ್ನಿಯಾದ ಲಕ್ಷ್ಮೀದೇವಿಯಂತೆ ಪ್ರಕಾಶಿಸುವೆ. ಓ ಗಗನಚಾರಿಣೀ! ನಿನ್ನ ಸ್ವರೂಪವೂ, ನಿನ್ನ ಬ್ರಹ್ಮಚರ್ಯವೂ ಅತ್ಯಂತ ಶುದ್ಧವಾದುದು. ನೀಲಮೇಘದಂತೆ ಶ್ಯಾಮಲವರ್ಣವುಳ್ಳವಳು. ಸಂಕರ್ಷಣದೇವನ ಮುಖದಂತೆ ಮುಖವುಳ್ಳವಳು. ಇಂದ್ರಧ್ವಜದಂತೆ ನೀಡಿದ ಭುಜಗಳುಳ್ಳವಳು. ಬೇರೆಬೇರೆ ಕೈಗಳಲ್ಲಿ ಪಾತ್ರವನ್ನೂ, ತಾವರೆ ಹೂವನ್ನೂ, ಘಂಟೆಯನ್ನೂ, ಪಾಶ ಚಾಪ ಮಹಾಚಕ್ರ ಮೊದಲಾದ ನಾನಾಯುಧಗಳನ್ನೂ ಧರಿಸಿ, ಶುದ್ಧವಾದ ಸ್ತ್ರೀರೂಪದಿಂದಿರುವೆ! ದೇವಿ! ನೀನು ಕುಂಡಲಾಲಂಕೃತಗಳಾದ ಕಿವಿಗಳಿಂದಲೂ, ಚಂದ್ರಸದೃಶ ಮುಖದಿಂದಲೂ ವಿಚಿತ್ರವಾದ ಕಿರೀಟದಿಂದಲೂ, ಅಂದವಾದ ತುರುಬಿನಿಂದಲೂ ಸರ್ಪದೇಹದಂತೆ ಒಪ್ಪುವ ಒಡ್ಯಾಣದಿಂದಲೂ ಪ್ರಕಾಶಿಸುತ್ತಿರುವೆ. ಕಾಂಚೀದಾಮದಿಂದ ಅಲಂಕೃತವಾದ ನಿನ್ನ ಕಟಿಭಾಗವು, ವಾಸುಕಿ ಶರೀರದಿಂದ ಆವೃತವಾದ ಮಂದರಪರ್ವತದಂತೆ ಇರುವುದು. ನವಿಲುಗರಿಗಳಿಂದ ನಿರ್ಮಿತವಾಗಿ ಮೇಲಕ್ಕೆತ್ತಿದ ಧ್ವಜದಿಂದ ಶೋಭಿಸುತ್ತಿರುವೆ. ಕೌಮಾರವ್ರತವನ್ನು ಹಿಡಿದು ದೇವಲೋಕವನ್ನು ಪಾವನಮಾಡಿದೆ. ಆದುದರಿಂದ ನೀನು ದೇವತೆಗಳ

ಸ್ತುತಿಗೂ, ಪೂಜೆಗೂ ಪಾತ್ರಳಾಗಿರುವೆ. ಲೋಕತ್ರಯ ರಕ್ಷಣಕ್ಕಾಗಿ ನೀನು ಮಹಿಷಾಸುರನನ್ನು ಕೊಂದವಳು. ದೇವಿ! ನನ್ನಲ್ಲಿ ಪ್ರಸನ್ನಳಾಗು. ದೇವತೆಗಳಲ್ಲಿ ಮೇಲೆನಿಸಿಕೊಂಡ ನೀನು ನನ್ನಲ್ಲಿ ಕರುಣಿಸು. ನಮಗೆ ಮಂಗಳವನ್ನು ಕೊಡುವಳಾಗು. ದೇವಿ! ನೀನೇ ಜಯಸ್ವರೂಪಿಣಿಯೂ, ವಿಜಯಸ್ವರೂಪಿಣಿಯೂ ಆಗಿದ್ದು, ಯುದ್ಧದಲ್ಲಿ ಜಯವನ್ನು ಕೈಗೂಡಿಸುವೆ! ವರಪ್ರದೆಯಾದ ನೀನು ಈಗ ನಮಗೆ ಜಯವನ್ನು ಕೊಡಬೇಕು. ಓ ಕಾಳೀ! ಓ ಮಹಾಕಾಳೀ! ಮಧುಮಾಂಸಗಳಲ್ಲಿಯೂ, ಪಶುಬಲಿಯಲ್ಲಿಯೂ ಪ್ರೀತಿಯುಳ್ಳ ನಿನಗೆ ಪರ್ವತಶ್ರೇಷ್ಠವಾದ ವಿಂಧ್ಯವು ಶಾಶ್ವತವಾದ ನಿವಾಸಸ್ಥಾನವೆನಿಸಿದೆ. ಸಮಸ್ತ ಭೂತಗಳೂ ನಿನ್ನನ್ನು ಹಿಂಬಾಲಿಸುವುವು. ವರಪ್ರದೆಯಾದ ನೀನು ಇಷ್ಟಬಂದ ಕಡೆಗೆ ಸಂಚರಿಸುವ ಶಕ್ತಿಯುಳ್ಳವಳು. ತಮ್ಮ ಕಷ್ಟನಿವಾರಣಾರ್ಥವಾಗಿ ಯಾವ ಮನುಷ್ಯರು ನಿನ್ನನ್ನು ಸ್ಮರಿಸುವರೋ, ಪ್ರಾತಃಕಾಲದಲ್ಲಿ ಯಾರು ನಿನ್ನನ್ನು ನಮಸ್ಕರಿಸುವರೋ, ಅವರಿಗೆ ಸತ್ಸಂತಾನವಾಗಲಿ, ಸಂಪತ್ತಾಗಲಿ ಯಾವುದೂ ದುರ್ಲಭವಲ್ಲ. ಓ ಭದ್ರಕಾಳೀ! ನೀನು ಪ್ರಾಣಿಗಳನ್ನು ದುರ್ಗಗಳಿಂದ (ದಾಟಬಾರದ ಮಹಾಸಂಕಟಗಳಿಂದ) ದಾಟಿಸತಕ್ಕವಳಾದುದರಿಂದಲೇ ನೀನು ''ದುರ್ಗೆ''ಯೆಂದು ಜನಗಳಿಂದ ಕರೆಯಲ್ಪಡುವೆ. ಮಹಾರಣ್ಯ ಮಧ್ಯದಲ್ಲಿ ಸಿಕ್ಕಿಬಿದ್ದವರನ್ನೂ, ಮಹಾಸಮುದ್ರದಲ್ಲಿ ಮುಳುಗಿದವರನ್ನೂ, ಮಾರ್ಗದಲ್ಲಿ ಕಳ್ಳರ ಕೈಗೆ ಸಿಕ್ಕಿದವರನ್ನೂ ಆ ಮಹಾವಿಪತ್ತುಗಳಿಂದ ಬಿಡಿಸಿ ಕಾಪಾಡತಕ್ಕವಳು ನೀನೇ! ಜಲವನ್ನು ದಾಟುವಾಗಲೂ, ಪರ್ವತಾರಣ್ಯಗಳಲ್ಲಿ ಸಿಕ್ಕಿಬಿದ್ದಾಗಲೂ ಯಾವ ಮನುಷ್ಯರು ನಿನ್ನನ್ನು ಸ್ಮರಿಸುವರೋ ಅವರು ವಿಪತ್ತಿಗೆ ಗುರಿಯಾಗಲಾರರು. ಎಲೆ ದೇವಿ! ನೀನೇ ಕೀರ್ತಿ! ನೀನೇ ಸಂಪತ್ತು! ನೀನೇ ಧೈರ್ಯಲಕ್ಷ್ಮಿ! ಕಾರ್ಯಸಿದ್ಧಿಯೂ ನೀನೇ! ಹ್ರೀ, ವಿದ್ಯೆ, ಸಂತತಿ, ಬುದ್ಧಿ, ಸಂಧ್ಯೆ, ರಾತ್ರಿ, ಪ್ರಭೆ, ನಿದ್ರೆ, ಚಂದ್ರಿಕೆ, ಕಾಂತಿ, ಕ್ಷಮೆ, ದಯೆ, ಇವೆಲ್ಲವೂ ನೀನೇ! ಎಲೈ ದೇವ ಶ್ರೇಷ್ಠಳೇ! ಯಾರು ನಿನ್ನನ್ನು ಪೂಜಿಸುವರೋ, ಅಂತವರ ಬಂಧನವನ್ನೂ, ಮೋಹವನ್ನೂ, ಪುತ್ರನಾಶವನ್ನೂ, ಧನಕ್ಷಯವನ್ನೂ, ವ್ಯಾಧಿಗಳನ್ನೂ, ಅಪಮೃತ್ಯುಗಳನ್ನೂ, ಬೇರೆ ಎಲ್ಲಾ ಭಯಗಳನ್ನೂ ನೀನು

ನೀಗಿಸುವೆ. ಆದುದರಿಂದ ರಾಜ್ಯಭ್ರಷ್ಟನಾದ ನಾನು ಈಗ ನಿನ್ನಲ್ಲಿ ಮರೆ ಹೊಕ್ಕಿರುವೆನು. ನಿನಗೆ ತಲೆಬಾಗಿ ನಮಸ್ಕರಿಸುವೆನು. ಎಲೆ ಸುರೇಶ್ವರಿ! ಓ ಸತ್ಯಸ್ವರೂಪಿಣಿ! ನೀನು ನನ್ನನ್ನು ರಕ್ಷಿಸು. ನಿನ್ನ ಸತ್ಯವನ್ನು ನನ್ನಲ್ಲಿ ತೋರಿಸು. ಓ ಭಕ್ತವತ್ಸಲೆ! ಓ ದುರ್ಗೆ! ನಮಗೆ ರಕ್ಷಕಳಾಗು" ಎಂದು ಸ್ತುತಿಸಿದನು.

ಈ ಸ್ತುತಿವಾಕ್ಯಗಳನ್ನು ಮುಗಿಸಿದೊಡನೆಯೇ ದುರ್ಗೆಯು ಯುಧಿಷ್ಠಿರನ ಮುಂದೆ ತನ್ನ ನಿಜಸ್ವರೂಪದಿಂದ ಪ್ರತ್ಯಕ್ಷಳಾಗಿ, ಅವನ ಸಮೀಪಕ್ಕೆ ಬಂದು "ಓ ಮಹಾಬಾಹೂ! ನನ್ನ ಮಾತನ್ನು ಕೇಳು. ಶೀಘ್ರದಲ್ಲಿಯೇ ನಿನಗೆ ಯುದ್ಧದಲ್ಲಿ ಜಯವುಂಟಾಗುವುದು. ನನ್ನ ಅನುಗ್ರಹದಿಂದ ನೀನು ಇನ್ನು ಸ್ವಲ್ಪಕಾಲದಲ್ಲಿಯೇ ಕೌರವ ಸೇನೆಯನ್ನು ಕೊಂದು ಜಯಶೀಲನಾಗಿ, ದೇಶವನ್ನು ಶತ್ರುಶೂನ್ಯವಾಗಿ ಮಾಡಿ, ತಿರುಗಿ ನೀನು ನಿನ್ನ ಸಹೋದರರೊಡಗೂಡಿ ರಾಜ್ಯವನ್ನನುಭವಿಸುವೆ. ನಿನಗೆ ಸಂಪೂರ್ಣವಾದ ಮನಸ್ಸಂತೋಷವುಂಟಾಗುವುದು. ನನ್ನ ಅನುಗ್ರಹದಿಂದ ನಿನಗೆ ನಿತ್ಯಸೌಖ್ಯವೂ, ನಿತ್ಯಾರೋಗ್ಯವೂ ಉಂಟಾಗುವುದು. ಓ ಪಾಂಡುಕುಮಾರಾ! ಇಷ್ಟುಮಾತ್ರವಲ್ಲ. ಲೋಕದಲ್ಲಿ ಯಾರು ನಿನ್ನಂತೆ ನಿಷ್ಕಪಟವಾಗಿ ನನ್ನನ್ನು ಸ್ತೋತ್ರಮಾಡುವರೋ, ಅವರ ವಿಷಯದಲ್ಲಿಯೂ ನಾನು ಹೀಗೆಯೇ ತೃಪ್ತಳಾಗಿ, ಅವರಿಗೆ ರಾಜ್ಯವನ್ನೂ, ಆಯುಷ್ಯವನ್ನೂ ದೃಢಶರೀರವನ್ನೂ, ಸಂತಾನವನ್ನೂ ಕೊಡುವೆನು. ಈಗ ನೀನು ನನ್ನನ್ನು ಸ್ಮರಿಸಿದ ರೀತಿಯಲ್ಲಿ ಬೇರೆ ಯಾರು ನನ್ನನ್ನು ಸ್ಮರಿಸಿದರೂ, ದೇಶಾಂತರದಲ್ಲಿಯಾಗಲಿ, ನಗರದಲ್ಲಿಯಾಗಲಿ, ಯುದ್ಧರಂಗದಲ್ಲಿಯಾಗಲಿ, ಶತ್ರುಗಳಿಂದ ಸಂಭವಿಸಿದ ಕಷ್ಟದಶೆಯಲ್ಲಿಯಾಗಲಿ, ನಟ್ಟಡವಿಯಲ್ಲಿಯಾಗಲಿ, ದುರ್ಗಗಳಲ್ಲಿಯಾಗಲಿ. ಸಮುದ್ರಮಧ್ಯದಲ್ಲಿಯಾಗಲಿ, ದುರ್ಗಮವಾದ ಪರ್ವತದಲ್ಲಿಯಾಗಲಿ, ಅವರಿಗೆ ದುರ್ಲಭವಾದುದೊಂದೂ ಇರದು. ಎಲೈ ಪಾಂಡುಕುಮಾರರೆ! ಉತ್ತಮವಾದ ಈ ಸ್ತೋತ್ರವನ್ನು ಯಾವನು ಭಕ್ತಿಯಿಂದ ಪಠಿಸುವನೋ, ಅಥವಾ ಕವಿಯಿಂದ ಕೇಳುವನೋ ಅವನಿಗೆ ಸಮಸ್ತ ಕಾರ್ಯಗಳೂ ಸಿದ್ಧಿಸುವುವು. ನನ್ನ ಅನುಗ್ರಹದಿಂದ ವಿರಾಟನಗರದಲ್ಲಿ


ಅಜ್ಞಾತವಾಸದಲ್ಲಿರುವ ನಿಮ್ಮನ್ನು ಕೌರವರಾಗಲಿ, ಆ ನಗರವಾಸಿಗಳಾಗಲಿ, ಇತರರಾಗಲಿ ತಿಳಿಯಲಾರರು'' ಎಂದಳು.

ವರಪ್ರದೆಯಾದ ದುರ್ಗಾದೇವಿಯು ಯುಧಿಷ್ಠಿರನಿಗೆ ಹೀಗೆಂದು ಹೇಳಿ, ಆ ಪಾಂಡವರೆಲ್ಲರಿಗೂ ರಕ್ಷೆಯನ್ನು ಮಾಡಿ ಅಲ್ಲಿಯೇ ಅದೃಶ್ಯಳಾದಳು.

ಇದು ಎಂಟನೆಯ ಅಧ್ಯಾಯವು.

ಯುಧಿಷ್ಠಿರನು ಸನ್ಯಾಸಿವೇಷದಿಂದ ವಿರಾಟನ ಬಳಿಗೆ ಬಂದುದು.

ಆಮೇಲೆ ಪಾಂಡವರು ಶುದ್ಧಜಲವುಳ್ಳದಾಗಿಯೂ, ಶುಭಪ್ರದವಾಗಿಯೂ, ದೋಷರಹಿತವಾಗಿಯೂ ಇರುವ ಗಂಗಾನದಿಯನ್ನು ಕಂಡರು. ಮಹರ್ಷಿ ಗಂಧರ್ವಸೇವಿತವಾಗಿ, ಲೋಕಮನೋಹರವಾದ ಆ ಜಾಹ್ನವೀ ನದಿಯಲ್ಲಿ ಪಾಂಡವರೆಲ್ಲರೂ ಇಳಿದು ಸ್ನಾನಮಾಡಿ, ದೇವರ್ಷಿಪಿತೃಗಳಿಗೆ ತರ್ಪಣವನ್ನು ಮಾಡಿದರು. ಅಲ್ಲಿ ಯುಧಿಷ್ಠಿರನಿಗೆ, ತಂದೆಯಾದ ಯಮಧರ್ಮರಾಜನು ತನಗೆ ಕೊಟ್ಟ ವರವು ನೆನಪಿಗೆ ಬಂದಿತು. ಒಡನೆ ಅವನು ಅಗ್ನಿಕಾರ್ಯವನ್ನೂ, ಜಪಗಳನ್ನೂ ಮುಗಿಸಿ, ಪೂರ್ವಾಭಿಮುಖನಾಗಿ ನಿಂತು ಕೈ ಮುಗಿದು, ತನ್ನ ತಂದೆಯಾದ ಧರ್ಮರಾಜನನ್ನು ಧ್ಯಾನಿಸಿಕೊಂಡು, ಮೆಲ್ಲಗೆ ಹೀಗೆಂದು ಚಿಂತಿಸುವನು. ''ವರಪ್ರದನೂ, ಪ್ರಜಾಧಿಪತಿಯೂ ಆದ ನನ್ನ ತಂದೆ ಯಮಧರ್ಮರಾಜನು, ನನ್ನಲ್ಲಿ ಪ್ರಸನ್ನನಾಗಿ ವರವನ್ನು ಕೊಟ್ಟಿರುವನು. ನನ್ನ ಸಹೋದರರು ದಾಹದಿಂದ ನೀರನ್ನಪೇಕ್ಷಿಸಿದಾಗ, ನನ್ನ ಮಾತಿನಂತೆ ಹೋಗಿ, ಒಂದು ತಟಾಕವನ್ನು ಪ್ರವೇಶಿಸಿದರು. ಆಗ ಅವರು, ಯುದ್ಧದಲ್ಲಿ ವಜ್ರಪಾಣಿಯಾದ ಇಂದ್ರನಿಂದ ದಾನವರು ಹೇಗೋ ಹಾಗೆ, ಒಬ್ಬ ಯಕ್ಷರಾಜನಿಂದ ಆ ಅರಣ್ಯಮಧ್ಯದಲ್ಲಿ ಕೆಳಗೆ ಕೆಡಹಲ್ಪಟ್ಟರು. ಆಗ ನಾನು ಹೋಗಿ, ಅಲ್ಲಿ ಆ ಯಕ್ಷನು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರವನ್ನು ಹೇಳಿ, ನನ್ನ ತಂದೆಯಾದ ಧರ್ಮರಾಜನನ್ನು



೪೫. ಪಂಚಪಾಂಡವರೂ ದ್ರೌಪದಿಯೂ ಅಜ್ಞಾತವಾಸಕ್ಕಾಗಿ ವೇಷಾಂತರಗಳಿಂದ ವಿರಾಟನಗರಕ್ಕೆ ಹೋದುದು.

ಸಂತೋಷಗೊಳಿಸಿದಮೇಲೆ ವರಪ್ರದನಾದ ಆ ಮಹಾತ್ಮನು ನನಗೆ ವರವನ್ನು ಕೊಟ್ಟನು. ಅಲ್ಲದೆ, ಅವನು ಪ್ರೇಮದಿಂದ ನನ್ನನ್ನು ಅಪ್ಪಿಕೊಂಡು "ಓ ಪಾಂಡುನಂದನಾ! ನಿನಗೆ ಬೇಕಾದುದನ್ನು ಕೇಳು ಕೊಡುವೆನು. ಇದೋ! ಅಂತರಿಕ್ಷಗತನಾದ ನನ್ನನ್ನು ನೋಡು" ಎಂದನು. ಆಗ ನಾನು ನನಗೆ ಜನಕನೂ, ಪ್ರಭುವೂ ಆದ ಆತನನ್ನು ನೋಡಿ "ಪ್ರಭೂ! ನನ್ನ ಬುದ್ಧಿಯು ಯಾವಾಗಲೂ ಧರ್ಮದಲ್ಲಿಯೇ ನೆಲೆಸಿರಲಿ! ಈಗಲೇ ಈ ನನ್ನ ತಮ್ಮಂದಿರೆಲ್ಲರೂ ಬದುಕಲಿ! ನಮ್ಮೆಲ್ಲರಿಗೂ ಅಜ್ಞಾತವಾಸಕ್ಕೆ ತಕ್ಕ ರೂಪವುಂಟಾಗಿ, ಅದು ನಿರ್ವಿಘ್ನವಾಗಿ ನಮಗೆ ನಡೆಯುವಂತೆಯೂ ವರವನ್ನು ಕೊಡು. ನಾವು ಕೋರಿದಾಗ, ನಮ್ಮ ಕ್ಷಮೆಗೂ, ಕೀರ್ತಿಗೂ ಭಂಗವಿಲ್ಲದೆ, ನಮ್ಮ ವ್ರತವು ಸತ್ಯವಾಗಿ ನೆರವೇರಬೇಕು" ಎಂದು ಪ್ರಾರ್ಥಿಸಿ ವರಗಳನ್ನು ಪಡೆದೆನು. ನಾನು ಕೇಳಿದ ಆ ವರಗಳೆಲ್ಲವೂ ಈಗ ನಮಗೆ ಸಿದ್ಧಿಸಬೇಕು. ಆ ದೇವಶ್ರೇಷ್ಠನು ಹೇಳಿದುದು ಎಂದಿಗೂ ಸುಳ್ಳಾಗಬಾರದು" ಎಂದು ಹೇಳುತ್ತ, ಯುಧಿಷ್ಠಿರನು ಧರ್ಮದೇವನನ್ನು ಧ್ಯಾನಿಸುತ್ತ ನಿಂತಿದ್ದಾಗಲೇ, ಅವನ ಅನುಗ್ರಹದಿಂದ ಯುಧಿಷ್ಠಿರನಿಗೆ ಮೊದಲಿದ್ದ ರೂಪವು ಮಾರಿ, ಬೇರೊಂದು ಹೊಸರೂಪವು ತಾನಾಗಿ ಉಂಟಾಯಿತು. ಆ ಯುಧಿಷ್ಠಿರನು ಒಳ್ಳೇ ಯೌವನಶಾಲಿಯಾಗಿ, ಕೈಯಲ್ಲಿ ತ್ರಿದಂಡ ಕಮಂಡಲುಗಳನ್ನೂ, ತಲೆಯಲ್ಲಿ ಉಷ್ಣೀಷವನ್ನೂ (ರುಮಾಲು) ಮೈಮೇಲೆ ಕೆಂಪಾದ ಕಾವಿಬಟ್ಟೆಯನ್ನೂ, ತಲೆಯಲ್ಲಿ ಶಿಖೆಯನ್ನೂ, ಬೆರಳುಗಳಲ್ಲಿ ಪವಿತ್ರವನ್ನೂ ಧರಿಸಿದ ಒಬ್ಬ ಬ್ರಾಹ್ಮಣೋತ್ತಮನಂತೆ ಗೋಚರಿಸಿದನು. ನೋಡುವವರಿಗೆ ಇದೊಂದು ಅತ್ಯಾಶ್ಚರ್ಯವಾಗಿ ಕಾಣಿಸಿತು. ಎಲೈ ಜನಮೇಜಯರಾಜನೆ! ಧರ್ಮನಿಷ್ಠರೂ, ಮಹಾತ್ಮರೂ ಆದ ಭೀಮಸೇನಾದಿಗಳಿಗೂ ಕೂಡ, ಇದೇ ವಿಧವಾಗಿ ಒಂದು ಕ್ಷಣಮಾತ್ರದಲ್ಲಿ ಸಹಜವಾದ ಮುಖಲಕ್ಷಣವು ಬದಲಾಯಿಸಿ, ಅಜ್ಞಾತವಾಸಕ್ಕೆ ತಕ್ಕ ವಸ್ತ್ರ ಭೂಷಣ ಮಾಲ್ಯಾದಿಗಳು ಕಾಣಿಸಿದುವು. ಈ ಹೊಸ ರೂಪದಿಂದ ಕೂಡಿದ ಯುಧಿಷ್ಠಿರನು, ಅಥರ್ವಸ್ವರೂಪದಿಂದ ಪ್ರಕಾಶಿಸಿದನು. ಆಗಲೇ ಧರ್ಮರಾಜನು, ವೈಡೂರ್ಯದಿಂದ ಕೆತ್ತಲ್ಪಟ್ಟು ಬಿಳುಪಾದ ಮತ್ತು ಸುವರ್ಣಮಯವಾದ ಸಾರಿಗಳನ್ನು ಬಟ್ಟೆಯಲ್ಲಿ ಸುತ್ತಿಟ್ಟುಕೊಂಡು,

ವಿರಾಟನ ಸಭೆಗೆ ಬಂದನು. ಆಗ ವಿರಾಟನ ವೈಭವವನ್ನು ಕೇಳಬೇಕೆ? ಸಭಾಸ್ಥಾನದಲ್ಲಿ ಕುಳಿತಿದ್ದ ವಿರಾಟನು, ಅಗ್ನಿಯಂತೆ ಮಹಾ ತೇಜಸ್ವಿಯಾಗಿ ಬೆಳಗುತ್ತ, ಕ್ರೂರವಿಷವುಳ್ಳ ಸರ್ಪದಂತೆ, ಇತರರಿಗೆ ದುರಾಸದನಾಗಿರುವನು. ಅನೇಕಜನರು ಸುತ್ತಲೂ ಕೈಕಟ್ಟಿ ನಿಂತಿರುವರು. ವಿಚಿತ್ರಗಳಾದ ನಾನಾಬಗೆಯ ಆಯುಧಗಳನ್ನು ಕೈಯಲ್ಲಿ ಹಿಡಿದ ಅನೇಕಯೋಧರು ಅವನ ಅಂಗರಕ್ಷಕರಾಗಿ ಸುತ್ತಲೂ ನಿಂತಿರುವರು. ಶಿಕ್ಷೆಗಳನ್ನೂ, ಅಕ್ಷರಗಳನ್ನೂ, ಮಂತ್ರಗಳನ್ನೂ ಬಲ್ಲ ಅನೇಕಬ್ರಾಹ್ಮಣರು, ಕೈಕಾಣಿಕೆಗಳನ್ನು ಹಿಡಿದು ನಾಲ್ಕು ಕಡೆಗಳಿಂದಲೂ ಬಂದು ಕಿಕ್ಕಿರಿದು ನಿಂತಿರುವರು. ಅಲ್ಲಲ್ಲಿ ಆನೆಗಳೂ, ಕುದುರೆಗಳೂ, ಆನೆಯ ಮುಖವುಳ್ಳ ಮೃಗಗಳೂ, (ವ್ಯಾಳಿಗಳೂ) ದಟ್ಟವಾಗಿ ನಿಂತಿರುವುವು. ಅಲ್ಲಲ್ಲಿ ಗುಜ್ಜಾರಿಗಳು ಸುತ್ತಲೂ ಓಡಾಡುತ್ತಿರುವರು. ಇಂತಹ ಆಸ್ಥಾನದನಡುವೆ ವಿರಾಟನು, ಎತ್ತರವಾದ ಬಿಳೀತಲೆಪಾಗನ್ನು ಧರಿಸಿ, ವೈಡೂರ್ಯದ ಕುಂಡಲಗಳನ್ನು ಕಿವಿಯಲ್ಲಿಟ್ಟು ಕುಳಿತಿರುವನು. ಆಗ ಯುಧಿಷ್ಠಿರನು, ಸ್ವರ್ಗದಲ್ಲಿ ಇಂದ್ರನನ್ನು ಬೃಹಸ್ಪತಿಯು ಹೇಗೋ ಹಾಗೆ ವಿರಾಟನನ್ನು ಸಮಾಪಿಸಿದನು. ಹೀಗೆ ಬರುತ್ತಿರುವ ಯುಧಿಷ್ಠಿರನನ್ನು ವಿರಾಟನೂ, ಅವನ ಸಭೆಯಲ್ಲಿ ನೆರೆದಿದ್ದ ಅನೇಕಬ್ರಾಹ್ಮಣರೂ ಕುತೂಹಲದಿಂದ ನೋಡುತ್ತಿದ್ದರು. ಆಗ ವಿರಾಟನು "ಎಲೈ ಸಭಾಸದರೆ! ನಮ್ಮ ಸಭೆಗೆ ಪ್ರವೇಶಿಸುತ್ತಿರುವ ಈ ಯುವಕನಾರು? ಇವನನ್ನು ನಿಮ್ಮಲ್ಲಿ ಯಾರಾದರೂ ಇದಕ್ಕೆ ಮೊದಲು ಕಂಡುದುಂಟೇ? ಇವನು ತನ್ನ ಕಾಂತಿಯಿಂದ ಕುಬೇರನನ್ನು ಹೋಲುತ್ತಿರುವನು. ತನ್ನ ರೂಪಾತಿಶಯದಿಂದ ಭೂಮಿಯನ್ನು ಬೆಳಗುವಂತಿರುವನು. ಸಿಂಹದಂತೆಯೂ, ಆನೆಯ ಸಲಗದಂತೆಯೂ ಬರುವ ಈತನು ಸುವರ್ಣಪರ್ವತದಂತೆ ಶೋಭಿಸುತ್ತಿರುವನು. ಇವನು ತೇಜಸ್ಸಿನಿಂದ ಸೂರ್ಯಾಗ್ನಿಗಳಂತೆಯೂ, ಪ್ರಸನ್ನಕಾಂತಿಯಿಂದ ಚಂದ್ರನಕ್ಷತ್ರಗಳೊಡಗೂಡಿದ ಒಂದು ಹೊಸಗ್ರಹದಂತೆಯೂ ತೋರುವನು. ಇವನು ಅಸಾಧಾರಣವಾದ ರಾಜತೇಜಸ್ಸಿನಿಂದ ಬೆಳಗುತ್ತಿದ್ದರೂ, ಇವನ ಹಿಂದೆ ಅನುಚರರಾರೂ ಕಾಣುವುದಿಲ್ಲ. ಪಟ್ಟದಾನೆಯಿಲ್ಲ! ರಾಜಯೋಗ್ಯವಾದ ಶ್ವೇತಚ್ಛತ್ರವಿಲ್ಲ! ಕಿವಿಗಳಲ್ಲಿ ಕುಂಡಲವಿಲ್ಲ! ತೋಳ್ಬಳೆಗಳಿಲ್ಲ! ಕಂಠದಲ್ಲಿ ವಿಚಿ

ತ್ರಮಾಲಿಕೆಗಳಿಲ್ಲ! ನಾಲ್ಕು ಕುದುರೆಗಳನ್ನು ಕಟ್ಟಿ, ವಿಚಿತ್ರಾಲಂಕಾರವುಳ್ಳ ವಿಜಯರಥವಾದರೂ ಇವನ ಹಿಂದೆ ಕಾಣುವುದಿಲ್ಲ. ಆನೆಗೂ, ಹುಲಿಗೂ, ಮಹಾವೃಷಭಕ್ಕೂ ಸಾಟಿಯಾದ ಈತನ ಆಕೃತಿಯಲ್ಲಿ ಕ್ಷತ್ರಿಯಲಕ್ಷಣಗಳಾದರೋ ಸಂಪೂರ್ಣವಾಗಿ ಕಾಣುತ್ತಿವೆ. ಇವನಿಗೆ ರಾಜಯೋಗ್ಯವಾದ ಅಲಂಕಾರಗಳೇನೂ ಇಲ್ಲದಿದ್ದರೂ, ಬಾಲಸೂರ್ಯನಂತೆ ಬೆಳಗುತ್ತಿರುವನು. ಸರ್ವವಿಧದಲ್ಲಿಯೂ ಇವನು ಕ್ಷತ್ರಿಯನಂತೆಯೇ ತೋರುವನು. ಇಂದ್ರಸಮಾನನಾದ ಇವನು, ಚತುಸ್ಸಮುದ್ರಮೇಖಲೆಯಾದ ಸಮಸ್ತ ಭೂಮಿಯನ್ನೂ ಆಳುವುದಕ್ಕೆ ಅರ್ಹನಾಗಿರುವನು. ವಾಸ್ತವದಲ್ಲಿ ಇವನು ಕ್ಷತ್ರಿಯನೇ! ಇವನು ರಾಜ್ಯಾಭಿಷಿಕ್ತನಂತೆಯೂ ನನಗೆ ತೋರುವುದು. ಇವನು ನಮ್ಮಲ್ಲಿ ಯಾವ ಕಾರ್ಯೋದ್ದೇಶದಿಂದ ಬಂದಿದ್ದರೂ, ಅದನ್ನು ಮೊದಲು ನಡೆಸಿಕೊಡಬೇಕಾದುದೇ ನಮ್ಮ ಅವಶ್ಯ ಕರ್ತವ್ಯವು. ಇಂತಹ ಪುರುಷನ ದರ್ಶನವು ನನಗೆ ಅತ್ಯಂತ ಪ್ರಿಯವು. ಇವನು ನನ್ನ ಮಂತ್ರಿಗಳಾದ ಬ್ರಾಹ್ಮಣರಲ್ಲಿಯಾಗಲಿ, ಅತಿಥಿಗಳಲ್ಲಿಯಾಗಲಿ, ಧನಕನಕ ರತ್ನಾದಿಗಳಲ್ಲಿಯಾಗಲಿ, ಪಶುಗಳಲ್ಲಿಯಾಗಲಿ, ನಮ್ಮ ಗೃಹಗಳಲ್ಲಿಯಾಗಲಿ, ತನ್ನ ಸ್ವಂತದಂತೆ, ಯಾವ ತಡೆಯೂ ಇಲ್ಲದೆ ವರ್ತಿಸುತ್ತಿರಲಿ" ಎಂದನು. ತ್ರಿದಂಡ ಕಮಂಡಲುಗಳನ್ನೂ, ಅಂಕುಶವನ್ನೂ, ಕಲ್ಲಿಯನ್ನೂ ಕೈಯಲ್ಲಿ ಹಿಡಿದು, ಅಪೂರ್ವವೇಷದಿಂದ ಸಭಾಪಕ್ಕೆ ಬರುತ್ತಿರುವ ಆ ಯುಧಿಷ್ಠಿರನ ಅಸಾಧಾರಣ ತೇಜಸ್ಸನ್ನು ಕಂಡೊಡನೆ ವಿರಾಟನು, ತಟ್ಟನೆ ತನ್ನ ಆಸನದಿಂದ ಮೇಲೆದ್ದು ನಿಂತನು. ಒಡನೆಯೇ ಬ್ರಾಹ್ಮಣ ವೈಶ್ಯ ಕ್ಷತ್ರಿಯ ಶೂದ್ರರೆಂಬ ನಾಲ್ಕು ವರ್ಣದವರಿಂದಲೂ, ರಾಜರಿಂದಲೂ ತುಂಬಿದ ಆ ರಾಜಸಭೆಯಲ್ಲಿ ಪ್ರತಿಯೊಬ್ಬರೂ, ರಾಹುಮುಖದಿಂದ ಹೊರಗೆಬಂದ ಸೂರ್ಯನಂತೆ ತೇಜಸ್ಸಿನಿಂದ ಜ್ವಲಿಸುತ್ತಿರುವ ಆ ಯುಧಿಷ್ಠಿರನನ್ನು ಕಂಡು ಬೆಜ್ಜರದಿಂದ ಮೇಲೆದ್ದು ನಿಂತರು. ಆಮೇಲೆ ಬ್ರಾಹ್ಮಣವೇಷಧಾರಿಯಾದ ಯುಧಿಷ್ಠಿರನು ಮುಂದೆ ಬಂದು ವಿರಾಟರಾಜನನ್ನು ನೋಡಿ, "ನಿನಗೆ ಜಯವಾಗಲಿ" ಎಂದು ಆಶೀರ್ವದಿಸಿದನು. ಆಗ ವಿರಾಟನು ಯುಧಿಷ್ಠಿರನಿಗೆ ಇದಿರೆದ್ದು ಬಂದು ಕೈಮುಗಿದು ನಮಸ್ಕರಿಸಿ, ಮಧುರಾಕ್ಷರಗಳುಳ್ಳ ಮಾತಿನಿಂದ ಆ ಧರ್ಮರಾಜನನ್ನು ನೋಡಿ ಹೀಗೆಂದು ಹೇಳುವನು.

"ಓ ಮಹಾತ್ಮಾ! ನೀವು ಎಲ್ಲಿಂದ ಬಂದಿರಿ? ಎಲ್ಲಿಗೆ ಹೋಗುವಿರಿ! ನನ್ನಿಂದ ನಿಮಗೇನಾಗಬೇಕು? ನೀವು ನಿಮ್ಮ ಕುಲ, ಗೋತ್ರ, ನಾಮಗಳನ್ನೂ, ನಿಮ್ಮ ದೇಶವಾವುದೆಂಬುದನ್ನೂ, ನಿಮ್ಮ ವಿದ್ಯೆ ಮತ್ತು ಆಚಾರಗಳನ್ನೂ ತಿಳಿಸಬೇಕು. ಸಾಧುಗಳು ಯಾವಾಗಲೂ ಸತ್ಯಸಂಧರೇ! ಅದರಲ್ಲಿಯೂ ನಿಮ್ಮಂತೆ ಸನ್ಯಾಸಿಗಳಾದ ಬ್ರಾಹ್ಮಣರು ಸತ್ಯವನ್ನೇ ನುಡಿಯತಕ್ಕವರು. ನಿಮ್ಮ ಗೌರವಕ್ಕೆ ತಕ್ಕಂತೆಯೇ ನಡೆಸಿಕೊಡಲು ಸಿದ್ಧನಾಗಿರುವೆನು. ನಿಮ್ಮನ್ನು ಯಾವವಿಧದಲ್ಲಿಯೂ ಅವಮಾನಪಡಿಸುವನಲ್ಲ. ನಿಮ್ಮ ಮಾತನ್ನು ಮೀರಿ ನಡೆಯತಕ್ಕವನಲ್ಲ. ಅಗ್ನಿಸಮಾನರಾದ ನಿಮ್ಮಂತಹ ಬಾಹ್ಮಣರನ್ನು ಪೂಜಿಸದೆ ತಿರಸ್ಕರಿಸಿದರೆ, ವಿಷಸರ್ಪಗಳಂತೆ ಅವರು ಕುಲವನ್ನೇ ದಹಿಸಿಬಿಡುವರು. ಬ್ರಾಹ್ಮಣೋತ್ತಮಾ! ಈ ಭೂಮಿಯೆಲ್ಲವನ್ನೂ ನಿಮಗೆ ಕೊಡಲು ಸಿದ್ಧನಾಗಿರುವೆನು. ನನ್ನ ಸೈನ್ಯಗಳನ್ನೂ, ಬೊಕ್ಕಸವನ್ನೂ, ಈ ಪಟ್ಟಣವನ್ನೂ ನಿಮಗಾಗಿ ಬಿಟ್ಟುಕೊಡಲು ಸಿದ್ಧನಾಗಿರುವೆನು. ನೀವು ಯಾವ ರಾಜನ ದೇಶದಿಂದ ಬಂದಿರುವಿರಿ? ಇಲ್ಲಿ ನೀವು ಮಾಡಬೇಕೆಂದಿರುವ ಕಾರ್ಯವೆಂತದು?" ಎಂದನು. ಅದಕ್ಕಾ ಯುಧಿಷ್ಠಿರನು, ಧರ್ಮಕ್ಕೆ ವಿರೋಧವಿಲ್ಲದ ಉತ್ತರವನ್ನು ಮನಸ್ಸಿನಲ್ಲಿ ನಿರ್ಧರಿಸಿಕೊಂಡು, ರಾಜನನ್ನು ನೋಡಿ "ಓ ನೃಪೋತ್ತಮಾ! ಈ ರಾಜಸಭೆಯಲ್ಲಿ ಮಾತಾಡುವುದಕ್ಕೆ ಯಾವನಿಗೆ ತಾನೇ ಧೈರ್ಯವಿದೆ. ಆದರೂ ನನ್ನ ಪ್ರತಿಜ್ಞೆಗೆ ಅನುಗುಣವಾದ ಸತ್ಯವನ್ನೇ ಹೇಳುವೆನು. ನನ್ನ ಕುಲ, ಶೀಲ, ವಿದ್ಯೆ, ಇವುಗಳನ್ನೂ, ನನ್ನ ಕಾರ್ಯಗಳನ್ನೂ, ನನ್ನ ಜನ್ಮವನ್ನೂ, ದೇಶವನ್ನೂ ತಿಳಿಸುವೆನು ಕೇಳು. ಗುರೂಪದೇಶದಿಂದಲೂ, ನಿಯಮದಿಂದಲೂ ನನಗೆ ಈ ವ್ರತವು ಏರ್ಪಟ್ಟಿದೆ. ಕುಲಧರ್ಮವನ್ನನುಸರಿಸುವುದಕ್ಕಾಗಿ ನನ್ನ ಪಿತೃಗಳು ನನಗೆ ಈ ನಿಯಮವನ್ನು ಹೇಳಿರುವರು. ನಾನು ವ್ರತದಿಂದ ದ್ವಿಜನೆನಿಸಿರುವೆನೇಹೊರತು ಜನ್ಮತಃ ದ್ವಿಜನಲ್ಲ. ಆ ವ್ರತಾನುಷ್ಠಾನಕ್ಕಾಗಿ ಕ್ಷೌರವನ್ನು ಮಾಡಿಸಿಕೊಂಡು, ಸನ್ಯಾಸವನ್ನು ಹಿಡಿದು, ತ್ರಿದಂಡಧಾರಿಯಾಗಿರುವೆನು. ಪಂಚಭೂತಗಳಿಂದಾವೃತವಾದ ಈ ನನ್ನ ಮನುಷ್ಯಶರೀರವನ್ನು ನೋಡು! ಪಂಚೇಂದ್ರಿಯಗಳಿಂದ ಕೂಡಿದ ಈ ನನ್ನ ಶರೀರವನ್ನು ನೋಡಿದವರು, ನನಗೆ ಐದು ಮಂದಿ

ಪಿತೃಗಳೆಂದು ಹೇಳಿದುದನ್ನು ನಾನು ಕೇಳಿರುವೆನು. ಆ ಐದುಮಂದಿಯೂ ಮನುಷ್ಯರಾಗಿರುವರೆಂದು ನನಗೆ ತೋರಲಿಲ್ಲ. ನಾನು ಸ್ವಭಾವದಲ್ಲಿ ಆ ಪಿತೃಗಳಿಗೆ ಸಮಾನನೆನಿಸಿಯೂ ಇಲ್ಲ. ಓ ರಾಜೇಂದ್ರಾ! ನಾನು ಒಬ್ಬ ದ್ವಿಜನು. ನನಗೆ ಕಂಕನೆಂದು ಹೆಸರು. ನಿನ್ನ ದೇಶಕ್ಕೆ ಬಂದಿರುವೆನು. ನಾನೊಂದು ವ್ರತದಲ್ಲಿರುವೆನು. ನನ್ನ ಕರ್ಮದಿಂದ ನನಗೆ ಈ ದ್ವಿಜತ್ವವು ಏರ್ಪಟ್ಟಿದೆ. ಜೂಜಾಟದ ಸಂಬಂಧದಿಂದ ನಿರ್ಧನನಾದೆನು. ಈಗ ಸತ್ಯಪ್ರತಿಜ್ಞನಾದ ತಪಸ್ವಿಯಾಗಿ ಸಂಚರಿಸುತ್ತಿರುವೆನು. ನಾನು ಪೂರ್ವದಲ್ಲಿ ಯುಧಿಷ್ಠಿರನಿಗೆ ಪ್ರಾಣಮಿತ್ರನಾಗಿ ಅವನ ಮನೆಯಲ್ಲಿರುತಿದ್ದೆನು. ಅವನ ಶರೀರವೇ ನಾನೆಂದು ತಿಳಿ. ನಾನು ಅವನ ಮನೆಯಲ್ಲಿ ಸುಖವಾಗಿ ವಾಸಮಾಡುತ್ತಿದ್ದೆನಲ್ಲದೆ, ಅವನ ಪಟ್ಟಣಕ್ಕೆ ರಾಜನಂತೆಯೇ ಇದ್ದವನು. ಅವನ ಮನೆಯೊಳಗಿನ ಸ್ತ್ರೀಯರೆಲ್ಲರೂ ನನ್ನ ಆಜ್ಞೆಯಂತೆಯೇ ನಡೆಯುತ್ತಿದ್ದವರು. ನನ್ನ ಪ್ರೀತಿಗಾಗಿ ಅಲ್ಲಿನ ಕುದುರೆಗಳೂ ನನಗೆ ಅಡಗಿದ್ದುವು. ನಾನು ಮೊದಲು ಆತನ ಪಟ್ಟಣದಲ್ಲಿ ಯಾವುದನ್ನು ಮಾಡಿದರೂ, ಅದನ್ನು ಯಾರೂ, ಯಾವಾಗಲೂ, ಯಾವ ವಿಧದಿಂದಲೂ ಬದಲಾಯಿಸಿದುದಿಲ್ಲ. ನಾನು ಅವನಿಗೆ ಸಮಾನವಯಸ್ಕನಾದ ಸ್ನೇಹಿತನಾಗಿದ್ದು, ಆಮೇಲೆ ಏನೋ ಕಷ್ಟದಶೆಯಿಂದ ಭೂಮಿಯನ್ನೆಲ್ಲ ಸಂಚರಿಸಿದೆನು. ಒಂದು ಸ್ಥಳದಲ್ಲಯಾದರೂ ನನಗೆ ಮನಶ್ಶಾಂತಿಯು ಲಭಿಸಲಿಲ್ಲ. ವ್ರತೋಪದೇಶಗಳಿಂದಲೂ, ನಿಯಮನಿಷ್ಠೆಗಳಿಂದಲೂ ನಾನು ದೊಡ್ಡ ಭಾರವನ್ನು ವಹಿಸಿದವನು. ನಾನು *ವ್ಯಾಘ್ರಪಾದನೆಂಬ ಋಷಿಯ ಗೋತ್ರದಲ್ಲಿ ಹುಟ್ಟಿದವನು. ನಾನು ಮೊದಲು ಯುಧಿಷ್ಠಿರನಲ್ಲಿ ಪಡೆಯುತಿದ್ದ ಸೌಖ್ಯವನ್ನೇ ಈಗಲೂ ಹುಡುಕುತ್ತಿರುವೆನು. ನನಗೆ ಆತ್ಮಸಮನಾದ ಆ ಯುಧಿಷ್ಠಿರನ ನಡತೆಯಲ್ಲಿ ಕೃತಜ್ಞಭಾವದಿಂದ ನಿನಗೆ ನಾನು ಇಷ್ಟನ್ನು ಹೇಳಬೇಕಾಯಿತು. ಸನ್ಯಾಸಾಶ್ರಮದಲ್ಲಿರುವ ನನಗೆ ಯುಧಿಷ್ಠಿ

---

*ಹುಲಿಯಂತೆ ಮೇಲೆಬಿದ್ದು ಬರುವುದರಿಂದ ಯಮನಿಗೆ ವ್ಯಾಘ್ರಪಾದನೆಂದು ಹೆಸರುಂಟು. ಅದರಮೇಲೆ ಧರ್ಮರಾಜನು, ತಾನು ವ್ಯಾಘ್ರಪಾದಗೋತ್ರದವನೆಂದು ಹೇಳಿದುದು ಸತ್ಯವೆಂದು ಗ್ರಹಿಸಬೇಕು.

ರನೂ ನೀನೂ ಸಮಾನಗುಣವುಳ್ಳವರೇ. ನನಗೆ ತಾಯಿ, ತಂದೆ, ಬಂಧುಗಳಾರೂ ಇಲ್ಲ. ನನಗೆ ಅಂದವಿಲ್ಲ. ಸುಖವಿಲ್ಲ. ಸಂತತಿಯಿಲ್ಲ. ಈಗ ನನಗೆ ಸುಖದುಃಖಗಳೂ, ರಾಗದ್ವೇಷಗಳೂ, ಗತಾಗತಗಳೂ ಸಮಾನವಾಗಿಯೇ ಇರುವುವು. ಕಾಮದಿಂದಲೂ, ಧನದಿಂದಲೂ ಮುಕ್ತನಾಗಿರುವೆನು. ಈಗ ನಿನ್ನ ಮನೆಯಲ್ಲಿ ವಾಸಕ್ಕಾಗಿ ಬಂದೆನು. ಒಬ್ಬರಿಗೂ ಸಾಧ್ಯವಲ್ಲದ ಕಾರ್ಯವನ್ನು ಮಾಡಬಲ್ಲ ನಾನು ಈಗ ಹಿಡಿದ ವ್ರತವು ಒಂದು ಸಂವತ್ಸರಕ್ಕೆ ಸಮಾಪ್ತವಾಗುವುದು. ಅದುವರೆಗೆ ಇಲ್ಲಿದ್ದು ನಿನ್ನನ್ನು ನನ್ನ ಕಾರ್ಯಗಳಿಂದ ಸಂತೋಷಪಡಿಸಿ, ಆಮೇಲೆ ನನ್ನಿಷ್ಟವಿದ್ದ ಕಡೆಗೆ ಹೊರಟು ಹೋಗುವೆನು. ಅಕ್ಷಕ್ರೀಡೆಗಳಲ್ಲಿ ನನಗೆ ನೈಪುಣ್ಯವುಂಟು. ಪಕ್ಷಿಗಳ ಮತ್ತು ಮೃಗಗಳ ಶಬ್ದಗಳನ್ನೂ ನಾನು ತಿಳಿಯಬಲ್ಲೆನು. ನಾನು ಪರಾಜಿತನಾಗಿ ಬೇರೆ ಗತಿಯಿಲ್ಲದೆ ಸನ್ಯಾಸವನ್ನು ಪರಿಗ್ರಹಿಸಿ ಭಿಕ್ಷುಕನಾಗಿರುವೆನು,'' ಎಂದನು.

ಈ ಮಾತನ್ನು ಕೇಳಿ ವಿರಾಟನು ಸಂತೋಷದಿಂದ ಆ ಸನ್ಯಾಸಿಯನ್ನು ನೋಡಿ, ಶುಭಾಕ್ಷರಗಳುಳ್ಳ ಮೃದುವಾಕ್ಯದಿಂದ, ಆ ಸಭೆಗೆಲ್ಲಾ ಕೇಳುವಂತೆ ಆತನನ್ನು ಕುರಿತು, ''ಓ ಮಹಾತ್ಮಾ! ನಿನ್ನ ಇಷ್ಟವರಗಳನ್ನೆಲ್ಲ ಕೊಡುವೆನು. ನಿನಗಿಷ್ಟವಿದ್ದರೆ ಈ ಮತ್ಸ್ಯದೇಶವನ್ನೇ ನೀನು ಆಳುತ್ತಿರಬಹುದು. ಅಕ್ಷವಿದ್ಯೆಯನ್ನು ತಿಳಿದ ಜೂಜಾಳಿಗಳನ್ನು ಕಂಡರೆ ನನಗೂ ಬಹಳ ಪ್ರಿಯವು. ದ್ಯೂತದಲ್ಲಿ ನಿಪುಣನಾದುದರಿಂದ ನೀನು ನನ್ನ ರಾಜ್ಯಕ್ಕೆ ಅರ್ಹನು. ನೀನು ಚಕ್ರವರ್ತಿಗಳಿಗೆ ಸಮನಾಗಿ ಕಾಣಿಸುವೆ. ಆದುದರಿಂದ ನೀನು ಯಾವಾಗಲೂ ನನ್ನೊಡನೆ ಸಮಾನವಾಗಿಯೇ ವಸ್ತ್ರ, ವಾಹನ, ಭೋಜನಾದಿಗಳನ್ನೂ, ಪುಷ್ಪಾಭರಣಗಳನ್ನೂ, ಆಸನಗಳನ್ನೂ, ಅನುಲೇಪನಗಳನ್ನೂ ಯಥೇಚ್ಛವಾಗಿ ಅನುಭವಿಸುತ್ತಿರಬಹುದು. ನಿನ್ನನ್ನು ಯಾವಾಗಲೂ ನೋಡುತ್ತಿರುವುದೇ ನನಗೆ ಬಹಳ ಪ್ರೀತಿಕರವಾಗಿರುವುದು. ಕಷ್ಟಕ್ಕೆ ಸಿಕ್ಕಿದ ಬ್ರಾಹ್ಮಣೋತ್ತಮರಾಗಲಿ, ಬೇರೆ ಜನರಾಗಲಿ ತಮ್ಮ ಕಷ್ಟನಿವೃತ್ತಿಗಾಗಿ ನಿನ್ನಲ್ಲಿಗೆ ಬಂದರೆ, ನೀನು ಕೋರಿದಂತೆ ಅವರಿಗೆ ನಡೆಸಬೇಕಾದ ಕಾರ್ಯಗಳನ್ನೆಲ್ಲ ನಾನು ನಡೆಸಿಕೊಡುವೆನು. ಇದರಲ್ಲಿ

ಸಂದೇಹವಿಲ್ಲ. ನನ್ನಲ್ಲಿ ನಿನಗೆ ಅಪ್ರಿಯವನ್ನು ಮಾಡತಕ್ಕವರು ಯಾರಿದ್ದರೂ ಅವರನ್ನು ಕಂಡುಹಿಡಿದು, ನನ್ನ ದೇಶದಿಂದಲೇ ಹೊರಡಿಸುವೆನು. ಜಿತೇಂದ್ರಿಯನಾದ ನೀನು ನನ್ನ ಸರ್ವಸ್ವತ್ತುಗಳಿಗೂ ಅಧಿಪತಿಯಾಗಿದ್ದು ಇಲ್ಲಿಯೇ ವಾಸಮಾಡುತ್ತಿರು," ಎಂದನು.

ಆಗ ಯುಧಿಷ್ಠಿರನು "ಇದಕ್ಕಿಂತಲೂ ನನಗೆ ಆಗಬೇಕಾದ ಕೋರಿಕೆಯು ಬೇರೊಂದಿಲ್ಲ. ಜೂಜಿನಲ್ಲಿ ಗೆದ್ದ ವಸ್ತುಗಳಲ್ಲಿ ಸ್ವಲ್ಪವನ್ನಾದರೂ ನಾನು ನನ್ನ ಸ್ವಂತಕ್ಕಾಗಿ ಇಟ್ಟುಕೊಳ್ಳತಕ್ಕವನಲ್ಲ. ನಾನು ಎಂತಹ ಮೃಷ್ಟಾನ್ನಭೋಜನವನ್ನಾದರೂ ಮುಟ್ಟುವವನಲ್ಲ. ಹವಿಸ್ಸನ್ನು ಭುಜಿಸುವೆನು. ರಾತ್ರಿಯಲ್ಲಿ ನೆಲದಮೇಲೆ ಮಲಗುವೆನು. ನಾನೊಂದು ವ್ರತೋಪದೇಶವನ್ನನುಸರಿಸಿ, ದೃಢವಾದ ಪ್ರತಿಜ್ಞೆಯನ್ನು ಮಾಡಿಕೊಂಡಿರುವೆನು. ಯಾವನಮೇಲೆಯೂ ಕೋಪಿಸಬಾರದೆಂಬುದು ನನ್ನ ಮುಖ್ಯ ವ್ರತವು. ಈ ನಿಯಮದಿಂದ ನಾನು ನಿನ್ನಲ್ಲಿ ವಾಸಮಾಡುವುದಕ್ಕೆ ಇಷ್ಟಪಡುವೆನೇ ಹೊರತು, ಬೇರೆ ವಿಧದಿಂದಲ್ಲ. ನೀನು ಈ ವರಗಳನ್ನು ಕೊಟ್ಟರೆ ನಾನು ಧನ್ಯನಾಗುವೆನು," ಎಂದನು.

ಎಲೈ ಜನಮೇಜಯ ರಾಜೇಂದ್ರನೇ! ವಿಷ್ಣುವಿಗೆ ವಜ್ರಪಾಣಿಯಾದ ಇಂದ್ರನೊಡನೆ ಸಮಾಗಮವುಂಟಾದಂತೆ, ವಿರಾಟನಿಗೂ, ಯುಧಿಷ್ಠಿರನಿಗೂ ಹೀಗೆ ಪ್ರಥಮಸಮಾಗಮವುಂಟಾಯಿತು. ಧರ್ಮರಾಜನು ಬಂದು ಆಸನದಲ್ಲಿ ಕುಳಿತಿದ್ದಾಗ, ಅವನ ರೂಪಸಂಪತ್ತನ್ನು ಎಷ್ಟು ನೋಡಿದರೂ ವಿರಾಟನಿಗೆ ತೃಪ್ತಿಯುಂಟಾಗುತ್ತಿರಲಿಲ್ಲ. ಸ್ವರ್ಗವನ್ನು ಇಂದ್ರನು ಹೇಗೋ ಹಾಗೆ ಯುಧಿಷ್ಠಿರನು ರಾಜಸಭೆಯನ್ನಲಂಕರಿಸುತ್ತ, ವಿರಾಟನಿಂದ ವಿಶೇಷ ಸತ್ಕೃತನಾಗಿ ಸುಖದಿಂದಿರುತ್ತಿದ್ದನು. ಅವನ ನಿಜಸ್ಥಿತಿಯನ್ನು ಯಾರೂ ತಿಳಿಯಲಾರದಿದ್ದರು.

ಇದು ಒಂಭತ್ತನೆಯ ಅಧ್ಯಾಯವು.

ಅಡಿಗೆಯವನ ವೇಷದಿಂದ ಬಂದ ಭೀಮನನ್ನು ವಿರಾಟನು ತನ್ನ ಪಾಕಶಾಲೆಯ ಅಧಿಕಾರಕ್ಕೆ ನಿಯಮಿಸಿದುದು.

ಆಮೇಲೆ ಆ ವಿರಾಟಸಭೆಯ ಪಶ್ಚಿಮದ ಕಡೆಯಿಂದ, ಭಯಂಕರವಾದ ಆಕೃತಿಯುಳ್ಳ ಸಿಂಹಪರಾಕ್ರಮಿಯಾದ ಭೀಮನು ಬಂದು, ಅಲ್ಲಿದ್ದವರ ಕಣ್ಣಿಗೆ ಕಾಣಿಸಿಕೊಂಡನು. ಆಗ ಭೀಮನಾದರೋ ಕೈಯಲ್ಲಿ ಒಂದು ಕಡಿಗೋಲನ್ನೂ, ಒಂದು ಸೌಟನ್ನೂ ಹಿಡಿದು, ಜೆನ್ನಾಗಿ ಸಾಣೆಹಿಡಿದ ಎರಡು ಸಣ್ಣ ಕತ್ತಿಗಳನ್ನು ಸೊಂಟಕ್ಕೆ ಸಿಕ್ಕಿಸಿರುವನು. ಪಾನಕ, ರಾಗ, ಷಾಡಬಗಳೆಂಬ ರಸವಿಶೇಷಗಳಲ್ಲಿ ನೆನೆಸಿ, ಜೆನ್ನಾಗಿ ತಿಕ್ಕಿ ನಯಮಾಡಿದ, ಹಸುವಿನ ತೊಗಲನ್ನೂ, ಹಸೀಶುಂಠಿ ಮತ್ತು ಮಾಲಾತೃಣಗಳನ್ನೊಳಕೊಂಡ ಒಂದು ಸಂಪುಟವನ್ನೂ, ಕಬ್ಬಿಣದ ಪಾತ್ರೆಯನ್ನೂ ಹಿಡಿದಿರುವನು. ಗಂಭೀರವಾದ ಆಕೃತಿಯಿಂದ ಕೂಡಿ, ಲೋಕವನ್ನೆಲ್ಲ ಬೆಳಗುವ ಸೂರ್ಯನಂತೆ ಉತ್ತಮತೇಜಸ್ಸಿನಿಂದ ಪ್ರಕಾಶಿಸುವನು. ಗಿರಿರಾಜನಂತೆ ಬಲವುಳ್ಳ ಆ ಭೀಮನು, ಮೈಮೇಲೆ ಕಪ್ಪಾದ ಬಟ್ಟೆಯನ್ನುಟ್ಟು, ಮುಂದೆ ಬಂದು ವಿರಾಟನ ಬಳಿಯಲ್ಲಿ ನಿಂತನು. ಆನೆಯ ಸಲಗದಂತಿರುವ ಆ ಭೀಮನು ಸಭಾಮಧ್ಯದಲ್ಲಿ ಬಂದು ನಿಂತಾಗ, ರಾತ್ರಿಯನ್ನು ಚಂದ್ರನು ಹೇಗೋ ಹಾಗೆ ಆ ಸಭಾಂಗಣವೆಲ್ಲವನ್ನೂ ಬೆಳಗುತ್ತಿದ್ದನು. ಇಂದ್ರಾನುಜನಾದ ಉಪೇಂದ್ರನನ್ನೂ, ಯಮದೇವನನ್ನೂ, ದಿಕ್ಪಾಲರಿಗೆಲ್ಲ ಒಡೆಯನಾದ ಶ್ರೀಹರಿಯನ್ನೂ ಹೋಲುತ್ತ, ಬಾಲಸೂರ್ಯನಂತೆ ವರ್ಚಸ್ವಿಯಾಗಿ ಬರುತ್ತಿದ್ದ ಭೀಮನನ್ನು ಕಂಡಾಗಲೇ, ವಿರಾಟನ ಮನಸ್ಸಿಗೆ ಒಂದು ವಿಧವಾದ ಭಯವೂ, ಕಳವಳವೂ ಉಂಟಾಯಿತು. ನಾಲ್ಕು ಕಡೆಗಳಿಗೂ ತಿರುಗಿ ತಿರುಗಿ ನೋಡುತ್ತ ಬೆಜ್ಜರಗೊಂಡಿದ್ದನು. ಶತ್ರುಸೈನ್ಯಗಳನ್ನು ಧ್ವಂಸಮಾಡತಕ್ಕ ಮಹಾಪರಾಕ್ರಮಿಯೂ, ರಾಜಕುಮಾರನೂ ಆದ ಆ ಭೀಮನು, ಮೈಮೇಲೆ ಒಂದೇ ಬಟ್ಟೆಯನ್ನುಟ್ಟು, ಸಭಾಮಧ್ಯಕ್ಕೆ ಬರುತ್ತಿರುವುದನ್ನು ಸ್ವಲ್ಪ ದೂರದಿಂದ ಕಂಡಾಗಲೇ ವಿರಾಟನ ಮನಸ್ಸು ತಬ್ಬಿಬ್ಬಾಯಿತು. ಅಲ್ಲಿದ್ದ ಜನರೆಲ್ಲರೂ ಭಯಗ್ರಸ್ತರಾಗಿ ಮೆಲ್ಲಮೆಲ್ಲಗೆ ಹಿಂಜರಿದು ನಾನಾಕಡೆಗೆ ಸರಿಯುತ್ತಿದ್ದರು.

ಆಗ ವಿರಾಟನು ಚಿಂತೆಯಿಂದ ನಿಟ್ಟುಸಿರು ಬಿಡುತ್ತ ಸಭಾಸದರನ್ನು ನೋಡಿ, "ಓ ಮಹಾಜನರೇ! ಅದೋ! ಅಲ್ಲಿ ಗಜರಾಜನಿಗೆ ಸಾಟಿಯಾದ ಒಬ್ಬ ಯೌವನಶಾಲಿಯು ಈ ನಮ್ಮ ಸಭೆಗಿದಿರಾಗಿ ಬರುತ್ತಿರುವನು. ಅವನು ಯಾರು? ಇದಕ್ಕೆ ಮೊದಲು ನಿಮ್ಮಲ್ಲಿ ಯಾರಾದರೂ ಇವನನ್ನು ನೋಡಿದವರುಂಟೆ? ವಿಶಾಲವಾದ ಎದೆ! ಉಬ್ಬಿದ ಹೆಗಲು! ಸಿಂಹದಂತೆಯೂ, ಹುಲಿಯಂತೆಯೂ ಗಂಭೀರವಾದ ನಡೆ! ಸಿಂಹದಂತೆ ದೇಹಶಕ್ತಿ! ಇವುಗಳಿಂದೊಪ್ಪುತ್ತ, ದಿವ್ಯಪುರುಷನಂತೆ ಕಾಣಿಸುತ್ತಿರುವ ಈತನು ಯಾರಾಗಿರಬಹುದು? ಸುವರ್ಣಗಿರಿಯಂತೆ ಕಾಂತಿಯುಕ್ತನಾಗಿ, ರಾಜತೇಜಸ್ಸಿನಿಂದ ಬೆಳಗುತ್ತಿರುವ ಇವನೂ ಒಬ್ಬ ರಾಜನಂತೆಯೇ ಕಾಣಿಸುತ್ತಿರುವನು. ಇವನು ವಾಸ್ತವದಲ್ಲಿ ಕ್ಷತ್ರಿಯನೇ ಆಗಿರಬೇಕು. ಇವನು ಸಾಕ್ಷಾನ್ಮಹೇಂದ್ರನಿಗೆ ಸಮನಾಗಿರುವನು. ರೂಪದಲ್ಲಿಯೂ ಅಸಮಾನನು. ಈ ಭೂಮಿಯನ್ನು ಇಂದ್ರನಂತೆ ಚೆನ್ನಾಗಿ ಪಾಲಿಸಬಲ್ಲವನು. ಇವನು ರಾಜನಲ್ಲದೇ ಇರಲಾರನೆಂದು ನನಗೆ ತೋರಿದೆ. ಐಶ್ವರ್ಯದಿಂದ ಭ್ರಷ್ಟನಾದ ನಹುಷಪುತ್ರನಂತೆ, ಇವನೂ ಐಶ್ವರ್ಯವನ್ನು ಕಳೆದುಕೊಂಡ ಒಬ್ಬ ರಾಜನೇ ಆಗಿರಬೇಕು," ಎಂದನು.

ವಿರಾಟನು ಹೀಗೆ ತರ್ಕಿಸುತ್ತಿರುವಾಗಲೇ, ಭೀಮನು ಆ ಸಭೆಯ ಮುಂದೆ ಬಂದು, ರಾಜನಿಗೆ ಜಯಶಬ್ದವನ್ನು ಹೇಳಿ, ಆಮೇಲೆ ಸಭಾಧ್ಯಕ್ಷರನ್ನೂ, ಇತರ ಸಭಿಕರನ್ನೂ ಕುಶಲಪ್ರಶ್ನೆಗಳಿಂದ ಸಂತೋಷಗೊಳಿಸಿದನು. ಆಮೇಲೆ ಭೀಮನು ವಿರಾಟರಾಜನಿಗೆ ಮೇಲಿಮೇಲೆ ತನ್ನಲ್ಲಿ ಪ್ರೇಮವು ಹೆಚ್ಚುವಂತಿರುವ ಮೃದುವಾಕ್ಯಗಳಿಂದ ಅವನನ್ನು ಕುರಿತು "ಓ ಶತ್ರುಸೂದನಾ! ಜೀವನಾರ್ಥವಾಗಿ ನಾನು ನಿನ್ನಲ್ಲಿಗೆ ಬಂದೆನು. ನೀನು ಲೋಕಕ್ಕೆಲ್ಲಾ ಮೇಲಾದ ಆಶ್ರಯನೆನಿಸಿರುವೆ. ರಾಜಾ! ನಾನು ಶೂದ್ರನು. ನಾಲ್ಕನೆಯ ವರ್ಣ (ಅಕ್ಷರ) ದವನು. ಗುರುಪದೇಶವನ್ನನುಸರಿಸಿ ಪರಿಚಾರಕ ವೃತ್ತಿಯನ್ನವಲಂಬಿಸಿರುವೆನು. ಒಳ್ಳೇ ತೊವ್ವೆಗಳನ್ನೂ, ಉತ್ತಮವಾದ ರಸಗಳನ್ನೂ ಪಾಕಮಾಡುವ ವಿದ್ಯೆಯು ನನಗೆ ಚೆನ್ನಾಗಿ ತಿಳಿಯುವುದು. ಒಳ್ಳೇ ಭಕ್ಷಣಗಳನ್ನೂ, ಮಾಂಸಗಳನ್ನೂ, ಹಣ್ಣು

ಗಳಿಂದ ಮಾಡಬಹುದಾದ ಅನೇಕ ರಸಾಯನಗಳನ್ನೂ ಪಾಕಮಾಡುವೆನು. ಪಾಕಶಾಲೆಯ ಕೆಲಸದಲ್ಲಿ ನನಗೆ ಸಮಾನನಾದವನೇ ಇಲ್ಲವೆಂದು ತಿಳಿ'' ಎಂದನು. ಆಗ ವಿರಾಟನು ಸಂತೋಷದಿಂದ ಭೀಮನನ್ನು ನೋಡಿ, ಪ್ರಿಯವಾಗಿಯೂ, ಗಂಭೀರವಾಗಿಯೂ ಇರುವ ಮಾತುಗಳಿಂದ ವಿನಯ ಪೂರ್ವಕವಾಗಿ ಹೀಗೆಂದು ಹೇಳುವನು. ''ಎಲೈ! ನೀನಾದರೋ ಕುಬೇರ ನಂತೆಯೂ, ಇಂದ್ರನಂತೆಯೂ, ಸೂರ್ಯನಂತೆಯೂ ಪ್ರಕಾಶಿಸುತ್ತಿರುವೆ. ನಿನ್ನಲ್ಲಿ ಯಾವ ವಿಧವಾದ ಶೂದ್ರತ್ವವೂ ಕಾಣಬರುವುದಿಲ್ಲ. ಅಗ್ನಿಗೂ, ಸರ್ಪಕ್ಕೂ ಸಮಾನವಾದ ತೇಜಸ್ಸುಳ್ಳ ನಿನಗೆ, ಅಡಿಗೆಯ ಮನೆಯಲ್ಲಿ ನಡೆಸ ಬೇಕಾದ ವೃತ್ತಿಯು ಯೋಗ್ಯವಾಗಿ ಕಾಣುವುದಿಲ್ಲ. ಗರುಡಗಂಧರ್ವ ನಾಗರಿಗೆ ಸಮಾನನಾದ ನೀನು ಅಡಿಗೆಯವನಾಗಿರಲು ಯೋಗ್ಯನಲ್ಲ. ಆದುದರಿಂದ, ಇನ್ನುಮೇಲೆ ನೀನು ನನ್ನ ಸೈನ್ಯಕ್ಕೆಲ್ಲ ಅಧಿಪತಿಯಾಗಿರು. ನನ್ನ ರಥಗಳನ್ನೂ, ಧ್ವಜಗಳನ್ನೂ ನೀನೇ ತೆಗೆದುಕೊಂಡು, ನನ್ನ ಆನೆಯ ಸೈನ್ಯಕ್ಕೆ ನಿಯಾನುಕನಾಗು. ಈ ಭೂಮಿಯನ್ನೇ ಪಾಲಿಸುವ ಅರ್ಹತೆಯುಳ್ಳ ನಿನಗೆ ಅಡಿಗೆಯ ಕಾರ್ಯವು ಉಚಿತವಲ್ಲ'' ಎಂದನು.

ಅದಕ್ಕಾ ಭೀಮನು ''ರಾಜೇಂದ್ರಾ! ನಾನು ನಾಲ್ಕನೆಯ ವರ್ಣದವನು. ನಿನ್ನಿಂದ ಅಂತಹ ಪದವಿಯನ್ನು ಪಡೆಯಲು ನಾನು ಅರ್ಹನಲ್ಲ. ನಾನು ಜಾತಿಯಲ್ಲಿ ಶೂದ್ರನು. ನನಗೆ ವಲಲನೆಂದು ಹೆಸರು. ಜೀವನಾರ್ಥಿಯಾಗಿ ನಿನ್ನ ದೇಶಕ್ಕೆ ಬಂದೆನು. ನಾನು ಪೂರ್ವದಲ್ಲಿ ಯುಧಿಷ್ಠಿರನ ಅಡಿಗೆಯ ಮನೆಯಲ್ಲಿದ್ದೆನು. ಅವನು ನನಗೆ ಬೇಕಾದ ಹಾಗೆ ಅನ್ನಪಾನಗಳನ್ನು ಕೊಡುತ್ತಿದ್ದನು. ಅವನ ಅಡಿಗೆಯವರಿಗೆಲ್ಲ ನಾನೇ ಪ್ರಧಾನನೆನಿಸಿದ್ದೆನು. ಹೀಗಿದ್ದರೂ ನೀನು ನನ್ನನ್ನು ಅಂಗೀಕರಿಸದೆ ಹೋದಪಕ್ಷದಲ್ಲಿ, ನಾನು ಬಂದ ದಾರಿಯನ್ನು ಹಿಡಿದು ಇಲ್ಲಿಂದ ಹೊರಟು ಹೋಗುವೆನು. ಅನ್ನವನ್ನು ಪಕ್ವಮಾಡುವ ಕೆಲಸಕ್ಕೆ ನೀನು ನನ್ನನ್ನು ನಿಯಮಿಸಿಕೊಂಡರೆ, ನಾನು ಅಡಿಗೆಯವನಾಗಿ ನಿನ್ನಲ್ಲಿರುವೆನು. ಇದಲ್ಲದೆ, ಓ ರಾಜೇಂದ್ರಾ! ಬಲದಲ್ಲಿ ನನಗೆ ಸಮಾನನು ಬೇರೊಬ್ಬನಿಲ್ಲ. ಬಾಹುಯುದ್ಧದಲ್ಲಿ ನನಗೆ ಯಾವಾಗಲೂ ಪ್ರಿಯವುಂಟು. ಆನೆಗಳನ್ನೂ,

ಸಿಂಹಗಳನ್ನೂ ಇದಿರಿಸಿ, ನಾನು ಅವುಗಳೊಡನೆ ಹೋರಾಡಬಲ್ಲೆನು. ಆ ಕಾರ್ಯದಲ್ಲಿ ನಿನಗೆ ಸದಾ ಸಂತೋಷವನ್ನುಂಟುಮಾಡುತ್ತಿರುವೆನು. ಬೇರೆ ವಿಧವಾದ ಕಾರ್ಯಕ್ಕೆ ಶಕ್ತಿಯಿಲ್ಲದೆ, ನೀಚಕಾರ್ಯವನ್ನು ಮಾಡತಕ್ಕ ನನ್ನಂತವರನ್ನು ನೀನು ಸೇನಾಧಿಪತ್ಯಕ್ಕಿಟ್ಟರೂ ನಾವು ಆ ವಿಚಾರದಲ್ಲಿ ದುರ್ಬಲರೆಂದೇ ತಿಳಿ. ನಮಗೆ ತಕ್ಕ ವೃತ್ತಿಯಾವುದೋ ಅದರಲ್ಲಿಯೇ ನಾವು ತೃಪ್ತರಾಗಿರತಕ್ಕವರು. ನಿನಗೆ ಇಷ್ಟವಿದ್ದರೆ ನನ್ನನ್ನು ಅಡಿಗೆಯ ಕೆಲಸಕ್ಕೆ ನಿಯಮಿಸು. ಬಲವೀರ್ಯಗಳಿಂದ ಕೊಬ್ಬಿದ ಎಂತಹ ಜಟ್ಟಿಗಳನ್ನು ನನಗಿದಿರಾಗಿ ಬಿಟ್ಟರೂ, ಅಂತವರೊಡನೆ ಯುದ್ಧಮಾಡಿ ಜಯಿಸಿ, ನಾನು ನಿನ್ನನ್ನು ಸಂತೋಷಗೊಳಿಸುವೆನು,'' ಎಂದನು.

ಇದನ್ನು ಕೇಳಿ ವಿರಾಟನು ತಿರುಗಿ ಭೀಮನನ್ನು ಕುರಿತು ''ನೀನು ಎಷ್ಟು ವಿಧವಾಗಿ ಹೇಳಿದರೂ, ಈಗ ನೀನು ಅಪೇಕ್ಷಿಸುವ ಕೆಲಸವೇನೋ ನಿನಗೆ ಯೋಗ್ಯವೆಂದು ನನಗೆ ತೋರುವುದಿಲ್ಲ. ಸಮುದ್ರಾಂತವಾದ ಸಮಸ್ತ ಭೂಮಿಯನ್ನೂ ಪಾಲಿಸುವುದಕ್ಕೆ ನೀನು ಅರ್ಹನು. ಅಷ್ಟೇಕೆ? ಮೂರು ಲೋಕಗಳನ್ನೂ ಪಾಲಿಸಬಲ್ಲ ಪ್ರಭಾವವು ನಿನ್ನಲ್ಲಿ ಕಾಣುತ್ತಿದೆ. ಈಗ ನೀನು ಸಾಕ್ಷಾದ್ವಿಷ್ಣುವಿನಂತೆ ನನ್ನ ಕಣ್ಣಿಗೆ ಪ್ರಕಾಶಿಸುತ್ತಿರುವೆ. ಹಾಗಿದ್ದರೂ, ನಿನ್ನ ಇಷ್ಟಕ್ಕೆ ನಾನು ವಿರೋಧವಾಗಿ ಹೇಳಲಾರೆನು. ನಿನ್ನ ಕೋರಿಕೆಯಂತೆಯೇ ನನ್ನ ಅಡಿಗೆಯ ಮನೆಯಲ್ಲಿ ನೀನು ಮುಂದಾಳಾಗಿರು. ಈಗಲೂ ಅಲ್ಲಿ ನನ್ನಿಂದ ಸತ್ಕೃತರಾದ ಅನೇಕ ಜನರಿರುವರು. ನಿನ್ನನ್ನು ಅವರೆಲ್ಲರಿಗೂ ಅಧಿಕಾರಿಯನ್ನಾಗಿ ಮಾಡುವೆನು,'' ಎಂದನು.

ಹೀಗೆ ವಿರಾಟನ ಆಜ್ಞೆಯಿಂದ ಭೀಮನು ಅವನ ಪಾಕಶಾಲೆಯ ಅಧಿಕಾರವನ್ನು ಪಡೆದು, ರಾಜನ ಪ್ರೀತಿಗೆ ಪಾತ್ರನಾಗಿ, ಅಲ್ಲಿ ವಾಸಮಾಡುತ್ತಿದ್ದನು. ಅವನ ನಿಜಸ್ಥಿತಿಯನ್ನು ಬೇರೆ ಯಾರೂ ತಿಳಿಯಲಾರದಿದ್ದರು. ಆ ಪಾಕಶಾಲೆಯಲ್ಲಿ ಅವನ ಕೈಕೆಳಗಿನ ಭೃತ್ಯರುಕೂಡ ಅವನು ಯಾರೆಂಬುದನ್ನು ತಿಳಿಯಲಾರದೆ ಹೋದರು.

ಇದು ಹತ್ತನೆಯ ಅಧ್ಯಾಯವು.

ಅರ್ಜುನನು ನಪುಂಸಕವೇಷದಿಂದ ವಿರಾಟನ ಸಭೆಗೆ
ಬಂದುದು. ವಿರಾಟನು ಅವನನ್ನು ತನ್ನ
ಕುಮಾರಿಗೆ ನಾಟ್ಯಾಚಾರ್ಯನಾಗಿರು
ವಂತೆ ನಿಯಮಿಸಿದುದು.

ಆಮೇಲೆ, ಒಳ್ಳೇ ಮೈ ಬಣ್ಣವುಳ್ಳ ಬೇರೊಬ್ಬ ಯುವಕನು, ಸ್ತ್ರೀವೇಷ ಧಾರಿಯಾಗಿ, ಚೆನ್ನಾಗಿ ದೇಹಾಲಂಕರಣಮಾಡಿಕೊಂಡು ವಿರಾಟನ ಸಭಾ ಸ್ಥಾನದಮುಂದೆ ಕಾಣಿಸಿಕೊಂಡನು. ಅವನಿಗೆ ಎರಡು ಕಿವಿಗಳಲ್ಲಿಯೂ ಹವಳದ ಕುಂಡಲಗಳು. ಕೈಗಳಲ್ಲಿ ತೂಗಾಡುತ್ತಿರುವ ಶಂಖದ ಬಳೆಗಳು, ಮೈಮೇಲೆ ಕೆಂಪು ಮತ್ತು ಕಪ್ಪು ಬಣ್ಣದ ಎರಡು ವಸ್ತ್ರಗಳು! ಅಂದವಾದ ಮೈಕಟ್ಟು! ಮುಖದಲ್ಲಿ ಶುಕ್ರ ಬೃಹಸ್ಪತಿಗಳಂತೆ ಒಪ್ಪುವ ದಿವ್ಯ ತೇಜಸ್ಸು! ಉದ್ದವಾಗಿ ಮತ್ತು ದಟ್ಟವಾಗಿ ಬೆನ್ನಮೇಲೆ ಕೆದರಿದ ತಲೆಕೂದಲು, ಉಬ್ಬಿದ ಹೆಗಲು, ಮದದಾನೆಯಂತೆ ಗಂಭೀರವಾದ ನಡೆ, ಇಂತಹ ರೂಪಾತಿಶಯವುಳ್ಳ ಆ ಅರ್ಜುನನು, ನೆಲವನ್ನು ಜಗ್ಗಿಸುವ ನಡೆಯಿಂದ ವಿರಾಟನ ಸಭೆಯನ್ನು ಪ್ರವೇಶಿಸಿ, ವಿರಾಟನ ಬಳಿಗೆ ಬಂದಾಗ, ತನ್ನ ನಪುಂಸಕ ವೇಷದಿಂದ ನೋಡುವವರ ಕಣ್ಣಿಗೆ ಗ್ರಹಣಹಿಡಿದ ಪೂರ್ಣಚಂದ್ರನಂತೆ, ಒಪ್ಪಿಯೂ, ಒಪ್ಪದಂತೆಯೂ ಕಾಣಿಸಿದನು. ದೇವೇಂದ್ರಪುತ್ರನಾದುದರಿಂದ, ದೇವೇಂದ್ರನಂತೆ ದಿವ್ಯ ತೇಜಸ್ಸುಳ್ಳವನೂ, ಶತ್ರುನಿಗ್ರಾಹಕನೂ ಆದ ಆ ಅರ್ಜುನನು, ಕಪಟವಲ್ಲದ ಸಹಜವಾದ ವೇಷದಿಂದ ತನ್ನ ನಿಜ ಸ್ಥಿತಿಯನ್ನು ಮರೆಸಿಕೊಂಡು, ಮದದಾನೆಯಂತೆ ಧೀರವಾದ ನಡೆಯಿಂದ ಸಭಾಸ್ಥಾನಕ್ಕೆ ಬಂದು ನಿಂತನು.

ಇವನನ್ನು ಕಂಡೊಡನೆ ವಿರಾಟರಾಜನು ವಿಸ್ಮಿತನಾಗಿ, ತನ್ನ ಸಮೀಪದಲ್ಲಿದ್ದವರನ್ನು ನೋಡಿ "ಈ ಹೊಸ ಮನುಷ್ಯನಾವನು? ಇದುವರೆಗೆ ಇವನ ವಿಷಯವನ್ನು ನಾನು ಕಂಡುಕೇಳಿದಂತಿಲ್ಲವಲ್ಲ?" ಎಂದು ಪ್ರಶ್ನೆ ಮಾಡಿದನು. ಆಲ್ಲಿದ್ದವರಾರೂ, ಅವನು ತಮಗೆ ತಿಳಿದವನೆಂದು ಹೇಳಲಿಲ್ಲ. ಆಗ ರಾಜನು ವಿಸ್ಮಯಗೊಂಡವನಾಗಿ, ಅಲ್ಲಿದ್ದವರನ್ನು ಕುರಿತು "ಮಹಾ ಗಜದಂತಿರುವ ಠೀವಿ! ಸಿಂಹದಂತೆ ನಡೆ! ವೃಷಭದ ಕಣ್ಣಿನಂತಿರುವ ಕಣ್ಣು,

ದೇವಕುಮಾರನಂತೆ ಉಗ್ರ ತೇಜಸ್ಸು, ಉಬ್ಬಿದ ಹೆಗಲು, ನೀಡಿದ ತೋಳುಗಳು, ಬಂಗಾರದಂತಿರುವ ದೇಹಛಾಯೆ, ಇವುಗಳಿಂದ ಶೋಭಿಸುತ್ತ ನಮ್ಮ ನಗರಕ್ಕೆ ಬಂದಿರುವ ಈ ಮನುಷ್ಯನಾವನು? ಇವನನ್ನು ನೋಡಿದರೆ, ಇವನೇನು ಇಂದ್ರಕುಮಾರನೋ, ಬ್ರಹ್ಮಪುತ್ರನೋ, ಅಥವಾ ಸಾಕ್ಷಾತ್ ಬ್ರಹ್ಮದೇವನೇ ಈತನೋ, ಇಲ್ಲವೇ ಇವನು ಪಾರ್ವತೀಕುಮಾರನಾದ ಕುಮಾರಸ್ವಾಮಿಯೋ, ಕುಬೇರಪುತ್ರನಾದ ನಳಕೂಬರನೋ, ಎಂಬ ಸಂದೇಹವು ನನಗೆ ಉಂಟಾಗುತ್ತಿರುವುದು" ಎಂದನು.

ಇಂದ್ರಸಮಾನನಾದ ಅರ್ಜುನನು, ಆ ಸಭೆಯವರೆಲ್ಲರೂ ನೋಡುತ್ತಿರುವಹಾಗೆಯೇ ಸಭಾಮಧ್ಯದಲ್ಲಿ ಮುಂದೆ ಬಂದು, ವಿರಾಟರಾಜನನ್ನು ಸಮೀಪಿಸಿ "ಓ ರಾಜೇಂದ್ರಾ! ನಾನೊಬ್ಬ ನರ್ತಕಿ! ನನಗೆ ಬೃಹನ್ನಳೆಯೆಂದು ಹೆಸರು. ಹೆಂಗಸರಿಗೆ ಜಡೆಹೆಣೆಯುವುದು, ಅಂದವಾಗಿ ಕೆವಿಯೋಲೆಗಳನ್ನಿಡುವುದು, ಹೂಮಾಲೆಗಳನ್ನು ಕಟ್ಟುವುದು, ಉಡಿಗೆಗಳನ್ನುಡಿಸುವುದು, ಸ್ನಾನಮಾಡಿಸುವುದು, ಕನ್ನಡಿಗಳನ್ನು ತೊಡೆಯುವುದು, ಈ ಕಾರ್ಯಗಳನ್ನೆಲ್ಲ ನಾನು ಮಾಡಬಲ್ಲೆನು. ತಿಲಕಗಳನ್ನಿಡುವುದರಲ್ಲಿ ನನಗೆ ವಿಶೇಷ ನೈಪುಣ್ಯವುಂಟು. ನಪುಂಸಕರಿಗೂ, ಬಾಲಿಕೆಯರಿಗೂ, ಇನ್ನೂ ಇತರ ಜನರಿಗೂ ನರ್ತನವನ್ನು ಕಲಿಸುವುದರಲ್ಲಿಯೂ, ಇತರ ವಿದ್ಯಾಭ್ಯಾಸವನ್ನು ಮಾಡಿಸುವುದರಲ್ಲಿಯೂ ನನಗೆ ಸಾಮರ್ಥ್ಯವುಂಟು. ಜಡೆಗೆ ವಿಚಿತ್ರವಾಗಿ ಹೂಗಳನ್ನು ಮುಡಿಸುವುದರಲ್ಲಿಯೂ ನನಗೆ ನೈಪುಣ್ಯವುಂಟು. ಆ ವಿಷಯದಲ್ಲಿ ಯಾವ ಸ್ತ್ರೀಯರೂ ನನಗಿಂತಲೂ ನಿಪುಣರಾಗಿರಲಾರರು" ಎಂದನು. ಅದನ್ನು ಕೇಳಿ ವಿರಾಟನು ಆಶ್ಚರ್ಯಗೊಂಡವನಾಗಿ, ಉನ್ನತವಾದ ಗಂಭೀರಾಕೃತಿಯುಳ್ಳ ಆ ವ್ಯಕ್ತಿಯನ್ನು ನೋಡಿ "ನಿನ್ನ ಆಕಾರವಿಶೇಷಕ್ಕೆ ಹೀನವಾದ ಈ ವೇಷವೇನೋ ಅನುರೂಪವಾಗಿ ತೋರಲಿಲ್ಲ. ರಾಜಸಿಂಹದಂತೆ ತೋರುವ ನಿನಗೆ ಈ ನಪುಂಸಕತ್ವವು ಯೋಗ್ಯವಾಗಿಲ್ಲ. ನಿನ್ನ ದೇಹವು ಮಂಗಳಕರವಾದ ವೇಷಭೂಷಣಗಳಿಂದೊಪ್ಪುವ ಭೂತಾಧಿಪತಿಯ ದೇಹದಂತೆಯೂ, ಮೇಘಾವೃತವಾದ ಗಗನದಲ್ಲಿ ಮೋಡಗಳಿಂದ ಮರೆಸಲ್ಪಟ್ಟ ಸೂರ್ಯನಂತೆಯೂ ಕಾಣಿಸುತ್ತಿರು

ವುದು. ನೀನು ಬಿಲ್ಲನ್ನು ಹಿಡಿದಾಗಲೇ ದುಂಡಗೆ ಉಬ್ಬಿ ಉದ್ದವಾದ ಈ ನಿನ್ನ ತೋಳುಗಳೆರಡಕ್ಕೂ ಅಧಿಕ ಶೋಭಾಸ್ಪದವಾಗುವುದು. ಆದುದರಿಂದ ನೀನು ನಿನ್ನ ಆಕೃತಿಗೆ ಯೋಗ್ಯವಾದ ಧನುಸ್ಸನ್ನು ಧರಿಸಿ, ಇಲ್ಲಿಯೇ ಸ್ಥಿರವಾಗಿ ನಿಂತು, ಈ ನನ್ನ ಪಟ್ಟಣವನ್ನೂ, ದೇಶವನ್ನೂ ನಿರಪಾಯವಾಗಿ ರಕ್ಷಿಸುತ್ತಿರು. ನನಗೆ ಯಾವ ವಿಧದಿಂದ ಯೋಚಿಸಿದರೂ ನಿನ್ನಲ್ಲಿ ನಪುಂಸಕತ್ವವೇ ಕಾಣುವುದಿಲ್ಲ. ನೀನು ಈ ನನ್ನ ಮತ್ಸ್ಯದೇಶವನ್ನು ಶೀಘ್ರದಲ್ಲಿಯೇ ಪುರೋವೃದ್ಧಿಗೆ ತಂದು ರಕ್ಷಿಸಬಲ್ಲವನೆಂದು ನನಗೆ ನಂಬಿಕೆಯುಂಟು. ನಾನು ನಿಜವನ್ನೇ ಹೇಳುವೆನೆಂದು ತಿಳಿ. ನಾನು ಈ ರಾಜ್ಯವನ್ನೇ ನಿನಗೆ ಒಪ್ಪಿಸಿಕೊಡುವೆನು'' ಎಂದನು. ಇದರಮೇಲೆ ಅರ್ಜುನನು ಏನು ಮಾಡುವನೋ ಎಂದು ತಿಳಿಯುವುದಕ್ಕಾಗಿ, ವಿರಾಟನು ತನ್ನ ಆಯುಧಶಾಲೆಯಿಂದ, ವಿವಿಧವರ್ಣವುಳ್ಳವುಗಳಾಗಿಯೂ, ಉದ್ದವಾಗಿಯೂ ದೃಢವಾಗಿಯೂ, ನಾಣೇರಿಸಿ ಸಿದ್ಧವಾಗಿಯೂ ಇದ್ದ ಅನೇಕ ಧನುಸ್ಸುಗಳನ್ನು ತರಿಸಿ, ಅವನ ಮುಂದೆ ಇರಿಸಿದನು. ಆಗ ಅರ್ಜುನನು ರಾಜನನ್ನು ನೋಡಿ ''ಓ ಪ್ರಭೂ! ನಾನು ಇಂತಹ ಧನುಸ್ಸುಗಳನ್ನು ಯಾವಾಗಲೂ ಎತ್ತಿದವನಲ್ಲ. ಇಂತಹ ಬಿಲ್ಲುಗಳನ್ನು ನಾನು ಹಿಂದೆ ಯಾವಾಗಲೂ ನೋಡಿದವನೂ ಅಲ್ಲ. ನನ್ನಂತವರು ಇಂತಹ ಬಿಲ್ಲನ್ನು ಕೈಯಲ್ಲಿ ಹಿಡಿದುದನ್ನೂ ನಾನು ಕಂಡಿಲ್ಲ. ಈ ಬಿಲ್ಲುಬಾಣಗಳೆಲ್ಲವೂ ನನಗೇಕೆ? ನಾನು ಕುಣಿಯುವೆನು! ಹಾಡುವೆನು! ವಾದ್ಯಗಳನ್ನು ನುಡಿಸುವೆನು! ನಟುವ ತನದಲ್ಲಿ ನನಗೆ ವಿಶೇಷ ಪಾಂಡಿತ್ಯವುಂಟು. ಆದುದರಿಂದ ಆ ಕಾರ್ಯದಲ್ಲಿ ನನ್ನನ್ನು ನಿಯೋಗಿಸು. ನಿನ್ನ ಮಗಳಾದ ಉತ್ತರೆಗೆ ನರ್ತನವನ್ನು ಕಲಿಸುವ ಕಾರ್ಯಕ್ಕೆ ನನ್ನನ್ನು ನಿಯಮಿಸು. ಆದನ್ನು ನಾನು ಅವಳಿಗೆ ಚೆನ್ನಾಗಿ ಕಲಿಸಿಕೊಡುವೆನು'' ಎಂದು ಬಹಳ ದೀನಭಾವವನ್ನು ತೋರಿಸುವ ಮಾತುಗಳನ್ನಾಡಿದನು. ಆಗ ವಿರಾಟರಾಜನು ''ಓ ಬೃಹನ್ನಳೆ! ನೀನು ಕೇಳಿದಂತೆಯೇ ನಡೆಸಿಕೊಡುವೆನು. ನೀನು ನನ್ನ ರಾಣಿವಾಸದಲ್ಲಿದ್ದು, ನನ್ನ ಕುಮಾರಿಗೂ, ಅವಳಿಗೆ ಸಮಾನಸ್ಕಂಧರಾದ ಇತರ ಕನ್ಯೆಯರಿಗೂ ನರ್ತನವನ್ನು ಕಲಿಸುತ್ತಿರು'' ಎಂದು ಹೇಳಿ, ಆಗಲೇ ತನ್ನ ಮಗಳನ್ನು ಅಲ್ಲಿಗೆ ಕರೆತರಿಸಿ, ಸಂತೋಷಪೂರ್ವಕವಾಗಿ ಅವಳನ್ನು

ಕುರಿತು "ವತ್ಸೆ! ಬೃಹನ್ನಳೆಯೆಂಬ ಈಕೆಯನ್ನು ನಿನ್ನ ಪ್ರಿಯಸಖಿಯನ್ನಾಗಿ ಭಾವಿಸಿ, ನಿನ್ನಲ್ಲಿರಿಸಿಕೊಳ್ಳುವಳಾಗು. ಕುಮಾರೀ! ಇವಳಲ್ಲಿ ಯಾವಾಗಲೂ ನೀನು ಒಳ್ಳೇ ಪ್ರೀತಿಯನ್ನು ತೋರಿಸುತ್ತ, ನಿನ್ನ ಪ್ರಾಣಕ್ಕೆ ಸಮವಾಗಿ ಇವಳನ್ನು ಭಾವಿಸು. ಇವಳಿಗೆ ಬೇಕುಬೇಕಾದ ಭಕ್ಷ್ಯಭೋಜ್ಯಗಳನ್ನೂ, ವಸ್ತ್ರಾಭರಣಗಳನ್ನೂ ಕೊಟ್ಟು ಆದರಿಸುತ್ತಿರು. ಇವಳಿಗೆ ರಾಣಿವಾಸದ ಜನದಲ್ಲಿ ಎಲ್ಲಿಯೂ ಅಡ್ಡಿಯಿಲ್ಲದಂತೆ ಸಂಚರಿಸುವ ಸ್ವಾತಂತ್ರ್ಯವನ್ನು ಕೊಡು. ದುಷ್ಕುಲದಲ್ಲಿ ಹುಟ್ಟಿದವರಿಗೆ ಇಂತಹ ರೂಪವಿರಲಾರದು. ಇಂತಹ ಸ್ತ್ರೀಯರ ನಡತೆಯು ಎಂದಿಗೂ ತಪ್ಪುದಾರಿಗೆ ತಿರುಗಲಾರದು" ಎಂದನು.

ಆಮೇಲೆ ರಾಜನು ತನ್ನ ಅನೇಕಮಂತ್ರಿಗಳೊಡನೆ ಆಲೋಚಿಸಿದನು. ಆ ಅರ್ಜುನನ ದೇಹವನ್ನು ಸ್ತ್ರೀಯರ ಮೂಲಕ ಪರೀಕ್ಷೆ ಮಾಡಿಸಿದನು. ಅವನು ನಿಜವಾದ ನಪುಂಸಕನೆಂಬ ನಂಬಿಕೆಯುಂಟಾದಮೇಲೆ ಅವನನ್ನು ಕನ್ಯಾಂತಃಪುರಕ್ಕೆ ಕಳುಹಿಸಿಕೊಟ್ಟನು. ಅರ್ಜುನನೂ ಕೂಡ ರಾಣಿವಾಸದಲ್ಲಿ ಸೇರಿ, ಹಾಡುಗಳನ್ನು ಹಾಡುವುದು, ವಾದ್ಯಗಳನ್ನು ನುಡಿಸುವುದು ಈ ಮುಂತಾದ ವಿದ್ಯೆಗಳನ್ನು ವಿರಾಟನ ಮಗಳಿಗೆ ಕಲಿಸುತ್ತಿದ್ದನು. ಹಾಗೆಯೇ ಆ ಉತ್ತರೆಯ ಸಖಿಯರಿಗೂ, ಪರಿಚಾರಿಕೆಯರಿಗೂ ಗಾನ ನೃತ್ಯಾದಿಗಳನ್ನು ಕಲಿಸುತ್ತ, ಉತ್ತರೆಯ ವಿಶೇಷಪ್ರೀತಿಗೆ ಪಾತ್ರನಾದನು. ಹೀಗೆ ಅರ್ಜುನನು ತನ್ನ ಚಾತುರ್ಯದಿಂದ ರಾಣಿವಾಸವನ್ನೆಲ್ಲ ಮೆಚ್ಚಿಸುತ್ತ ಅಲ್ಲಿಯೇ ವಾಸಮಾಡುತ್ತಿದ್ದನು. ಅರ್ಜುನನು ಹಾಗೆ ರಾಣಿವಾಸದಲ್ಲಿ ಕಲೆತಿದ್ದರೂ, ಅಲ್ಲಿನವರಿಗಾಗಲಿ, ಹೊರಗಿನವರಿಗಾಗಲಿ, ಆತನ ನಿಜಸ್ವರೂಪವು ಇಂತದೆಂದು ತಿಳಿಯದಿದ್ದಿತು.

ಇದು ಹನ್ನೊಂದನೆಯ ಅಧ್ಯಾಯವು.

*

ನಕುಲನು ವಿರಾಟನಲ್ಲಿಗೆ ಬಂದು, ಅಶ್ವಪಾಲಕನಾಗಿ ಸೇರಿದುದು.

ಆಮೇಲೆ ವಿರಾಟನು ತನ್ನ ಕುದುರೆಗಳನ್ನು ನೋಡುತ್ತಿರುವ ಸಮಯಕ್ಕೆ ಸರಿಯಾಗಿ, ಪಾಂಡುಪುತ್ರರಲ್ಲಿ ಮತ್ತೊಬ್ಬನು ಅಲ್ಲಿಗೆ ಬಂದನು. ಅವನು ಬರುತ್ತಿರುವಾಗಲೇ ಜನರೆಲ್ಲರೂ ಅವನನ್ನು ಮೇಘದ ಮರೆಯಿಂದ ಹೊರಗೆ ಬಂದ ಚಂದ್ರನನ್ನು ಹೇಗೋ ಹಾಗೆ ಸಂತೋಷದಿಂದ ನೋಡುತಿದ್ದರು. ಆಗ ನಕುಲನು ಮುಂದೆ ಬಂದು, ಅಲ್ಲಲ್ಲಿದ್ದ ಕುದುರೆಗಳನ್ನೆಲ್ಲ ಗಮನಿಸಿ ನೋಡಲಾರಂಭಿಸಿದನು. ಆಮೇಲೆ ವಿರಾಟನು ಆತನನ್ನು ದೃಷ್ಟಿಸಿನೋಡಿ, ತನ್ನ ಸಮೀಪದಲ್ಲಿ ನೆರೆದಿದ್ದ ತನ್ನ ಕಡೆಯವರನ್ನು ಕುರಿತು "ನಮ್ಮ ಕಡೆಗೆ ಬರುತ್ತಿರುವ ಈತನಾರು? ಇವನನ್ನು ಇದಕ್ಕೆ ಮೊದಲು ನೀವು ಯಾರಾದರೂ ಬಲ್ಲಿರೇನು? ಇವನನ್ನು ನೋಡಿದರೆ ನನಗೆ ಇವನಲ್ಲಿ ಪ್ರೀತಿ ಹುಟ್ಟುವುದು. ಇವನ ದರ್ಶನವೇ ನನಗೊಂದು ಉಲ್ಲಾಸವನ್ನುಂಟುಮಾಡುತ್ತಿದೆ. ನಿಮ್ಮಲ್ಲಿ ಯಾರಾದರೂ ಇವನ ವಿಷಯವನ್ನು ತಿಳಿದವರಾಗಿದ್ದರೆ ಹೇಳಿರಿ. ಇವನಾದರೋ ಆಗಾಗ ನಮ್ಮ ಕುದುರೆಗಳನ್ನು ಬಹಳವಾಗಿ ಗಮನಿಸಿ ನೋಡುತ್ತಿರುವನು. ಇದರಿಂದ ಇವನಿಗೆ ಕುದುರೆಗಳ ಸ್ವಭಾವವನ್ನು ಪರೀಕ್ಷಿಸಿ ತಿಳಿಯುವುದರಲ್ಲಿ ನೈಪುಣ್ಯವುಂಟೆಂದು ತೋರುವುದು. ಈಗಲೇ ಅವನನ್ನು ನನ್ನ ಬಳಿಗೆ ಕರೆದುಕೊಂಡು ಬನ್ನಿರಿ. ಈ ವೀರನು, ಯಾವನೋ ದೇವಾಂಶಪುರುಷನಂತೆ ಕಾಣಿಸುತ್ತಿರುವನು" ಹೀಗೆಂದು ವಿರಾಟನು ಆಲೋಚನೆಮಾಡುತ್ತಿರುವಾಗಲೇ, ನಕುಲನು ಬೇಗನೆ ಅಲ್ಲಿ ನೆರೆದಿದ್ದ ಸಭೆಯನಡುವೆ ಬಂದು ನಿಂತು, ರಾಜನಿಗೆ ನಮಸ್ಕರಿಸಿ "ರಾಜೇಂದ್ರಾ! ನಾನು ಜೀವನಾರ್ಥವಾಗಿ ನಿನ್ನಲ್ಲಿ ವೇತನವನ್ನೂ, ಭೋಜನವನ್ನೂ ಅಪೇಕ್ಷಿಸಿ, ಬಂದವನು. ನಿನ್ನ ಕುದುರೆಗಳನ್ನು ಕಟ್ಟುವ ಕೆಲಸವನ್ನು ನಾನು ನೋಡಿಕೊಳ್ಳುವೆನು. ನನ್ನನ್ನು ನೀನು ಪೋಷಿಸಬೇಕು. ನಿನಗೆ ಇಷ್ಟವಿದ್ದಪಕ್ಷದಲ್ಲಿ ನಿನ್ನ ಕುದುರೆಗಳಿಗೆಲ್ಲ ನನ್ನನ್ನು ಅಧಿಕಾರಿಯನ್ನಾಗಿಯೂ ಮಾಡಬಹುದು" ಎಂದನು. ಅದಕ್ಕಾಗಿ ವಿರಾಟನು "ಅಯ್ಯಾ! ನೀನು ಜೀವನಕ್ಕಾಗಿ ಚಿಂತಿಸಬೇಕಾದುದಿಲ್ಲ!

ನಿನಗೆ ಬೇಕಾದ ವಾಹನಗಳನ್ನೂ, ಧನವನ್ನೂ, ವೇತನವನ್ನೂ ನಾನು ಕೊಡುವೆನು. ಆದರೆ, ಕುದುರೆಯವನಾಗಿರುವುದಕ್ಕೆ ನೀನು ಅರ್ಹನಲ್ಲ ನೆಂದು ನನಗೆ ತೋರುತ್ತಿದೆ. ನೀನು ಎಲ್ಲಿಂದ ಬಂದವನು? ಯಾರ ಕಡೆ ವನು? ನೀನು ಇಲ್ಲಿಗೆ ಹೇಗೆ ಬಂದು ಸೇರಿದೆ? ನಿನಗೆ ತಿಳಿದ ಶಿಲ್ಪವಿದ್ಯೆ ಯೆಂತದು? ಹೇಳು'' ಎಂದನು. ಅದಕ್ಕಾ ನಕುಲನು ''ರಾಜೇಂದ್ರಾ! ಐದು ಮಂದಿ ಪಾಂಡುಕುಮಾರರಲ್ಲಿ ರಾಜನಾದ ಯುಧಿಷ್ಠಿರನೆಂಬವನು ಹಿರಿಯನು. ಆತನು ನನಗೆ ಪೂರ್ವದಲ್ಲಿ ಕುದುರೆಗಳನ್ನು ನೋಡಿಕೊಳ್ಳುವ ಅಧಿಕಾರವನ್ನು ಕೊಟ್ಟಿದ್ದನು. ನಾನು ಕುದುರೆಗಳ ಸ್ವಭಾವವನ್ನು ತಿಳಿ ಯಬಲ್ಲವನು. ಕುದುರೆಗಳಿಗೆ ನಡೆಗಳನ್ನು ಕಲಿಸುವುದು, ದುಷ್ಟಾಶ್ವಗ ಳನ್ನು ಅಡಗಿಸಿ ಸ್ವಾಧೀನಕ್ಕೆ ತರುವುದು, ಕುದುರೆಗಳಿಗೆ ಬೇಕಾದ ಎಲ್ಲಾ ಬಗೆಯ ಚಿಕಿತ್ಸೆಗಳನ್ನು ಮಾಡುವುದು, ಈ ವಿದ್ಯೆಗಳೊಳಗೆಲ್ಲ ನನಗೆ ನೈಪು ಣ್ಯವುಂಟು. ನನ್ನಲ್ಲಿಗೆ ಬಂದ ಕುದುರೆಗಳಾವುವೂ ಭಯಪಡವು. ಎಂತಹ ಹೆಣ್ಣು ಕುದುರೆಯಾದರೂ ನನ್ನಲ್ಲಿ ದೌಷ್ಟ್ಯವನ್ನು ತೋರಿಸಲಾರದು. ಇನ್ನು ಗಂಡು ಕುದುರೆಗಳು ನನಗೆ ವಶವಾಗುವುವೆಂಬುದನ್ನು ಹೇಳಬೇಕಾ ದುದೇನು? ನನ್ನ ಶಕ್ತಿಯನ್ನು ತಿಳಿದೇ ಯುಧಿಷ್ಠಿರನು ಗ್ರಂಥಿಕನೆಂದು ನನಗೆ ಹೆಸರಿಟ್ಟು ಕರೆಯುತಿದ್ದನು. ದೇವೇಂದ್ರನಿಗೆ ಮಾತಲಿಯೂ, ದಶ ರಥನಿಗೆ ಸುಮಂತ್ರನೂ, ಜಮದಗ್ನಿಪುತ್ರನಾದ ಪರಶುರಾಮನಿಗೆ ಸುಮ ಹನೂ ಹೇಗೋ ಹಾಗೆ, ನಾನು ನಿನಗೆ ಸಾರಥಿಯಾಗಿದ್ದು ನಿನ್ನ ಕುದುರೆ ಗಳನ್ನು ಶಿಕ್ಷಿಸುವೆನು. ಮಹಾರಾಜಾ! ಯುಧಿಷ್ಠಿರರಾಜನಲ್ಲಿ ನಾನು ನೂರು, ಸಾವಿರ, ಲಕ್ಷ ಮತ್ತು ಕೋಟಿ ಸಂಖ್ಯೆಯುಳ್ಳ ಕುದುರೆಗಳಿಗೆ ಪಾಲ ಕನಾಗಿದ್ದೆನು'' ಎಂದನು. ಅದನ್ನು ಕೇಳಿ ವಿರಾಟನು ನಕುಲನನ್ನು ಕುರಿತು ''ಹಾಗಿದ್ದರೆ, ನನ್ನಲ್ಲಿ ಅಲ್ಪಸ್ವಲ್ಪ ವಾಹನಗಳೂ, ಸೇನಾಶ್ವಗಳೂ ಯಾವುವುಂಟೋ ಅವೆಲ್ಲಕ್ಕೂ ನೀನು ಪಾಲಕನಾಗಿರು. ಮತ್ತು ನನ್ನಲ್ಲಿ ರುವ ಅಶ್ವಾರೋಹಿಗಳೂ, ಸಾರಥಿಗಳೂ ನಿನ್ನ ಅಧೀನದಲ್ಲಿರಲಿ! ನಿನ್ನನ್ನು ನೋಡಿದರೆ ದೇವತೆಯಂತೆ ಕಾಣುವೆ. ನಿನ್ನ ಇಷ್ಟದಂತೆಯೇ ನಡೆಸು ವೆನು. ಇನ್ನೂ ನಿನಗೆ ಬೇಕಾದ ಕೋರಿಕೆಗಳನ್ನು ತಿಳಿಸು. ರಾಜಲಕ್ಷಣ ವುಳ್ಳ ನಿನಗೆ ಈ ಕುದುರೆಯ ಕೆಲಸವೇನೋ ನನಗೆ ಉಚಿತವಾಗಿ ತೋರು

ವುದಿಲ್ಲ. ನಿನ್ನ ದರ್ಶನವು ಆ ಯುಧಿಷ್ಠಿರನ ದರ್ಶನದಂತೆ ನನಗೆ ಪ್ರಿಯವನ್ನುಂಟುಮಾಡುತ್ತಿದೆ. ನಿರ್ದೋಷಿಗಳಾದ ಆ ಪಾಂಡವರೆಲ್ಲರೂ, ನಿನ್ನಂತಹ ತಮ್ಮ ಭೃತ್ಯವರ್ಗವೆಲ್ಲವನ್ನೂ ತೊರೆದು, ಯಾವ ಕಾಡಿನಲ್ಲಿ ಹೇಗೆ ಅಲೆಯುತ್ತಿರುವರೋ ಕಾಣೆನು. ಅವರು ಹೇಗೆ ಸುಖದಿಂದಿರುವರೋ ತಿಳಿಯಲಿಲ್ಲ'' ಎಂದನು. ಗಂಧರ್ವರಾಜನಂತೆ ಪ್ರಕಾಶಿಸುತ್ತ, ಯೌವನ ವಯಸ್ಸುಳ್ಳ ಆ ನಕುಲನನ್ನು ವಿರಾಟನು ಹೀಗೆ ಬಹಳ ಸಂತೋಷಪೂರ್ವಕವಾಗಿ ಆದರಿಸಲು, ನಕುಲನು ಅವನಲ್ಲಿ ಸೇರಿ ಸಂತೋಷದಿಂದಿರುತಿದ್ದನು. ಅಜ್ಞಾತವಾಸಕಾಲವು ತೀರುವವರೆಗೆ, ಯಾರೂ, ಯಾವ ವಿಧದಿಂದಲೂ ಅವನ ನಿಜಸ್ಥಿತಿಯನ್ನು ತಿಳಿಯಲಾರದೆಹೋದರು.

ಇದು ಹನ್ನೆರಡನೆಯ ಅಧ್ಯಾಯವು.

ಗೋಪಾಲವೇಷದಿಂದ ತನ್ನಲ್ಲಿಗೆ ಬಂದ ಸಹದೇವನನ್ನು ವಿರಾಟನು ತನ್ನ ಗೋವುಗಳ ರಕ್ಷಣೆಗಾಗಿ ನಿಯಮಿಸಿದುದು.

ಆಮೇಲೆ ಚಂದ್ರನಂತೆಯೂ, ಯಾಗದಲ್ಲಿ ಹುತವಾದ ಅಗ್ನಿಯಂತೆಯೂ ತೋರುವ ಅತಿ ಸುಂದರಾಕಾರವುಳ್ಳ ಮತ್ತೊಬ್ಬನು ಆಗಲೇ ಉದಿಸಿಬಂದ ಸೂರ್ಯನಂತೆ ಬೆಳಗುತ್ತ ಮುಂದೆ ಬಂದು ನಿಂತನು. ತನ್ನ ಕಡೆಗೆ ಬರುತ್ತಿರುವಾಗಲೇ ವಿರಾಟರಾಜನ ದೃಷ್ಟಿಯು ಅವನ ಮೇಲೆ ಬಿದ್ದಿತು. ಅತ್ಯಂತ ಮನೋಹರಾಕಾರವುಳ್ಳವನೂ, ತರುಣವಯಸ್ಕನೂ, ಶತ್ರುನಿಗ್ರಹಸಮರ್ಥನೂ ಆದ ಆ ಹೊಸ ಮನುಷ್ಯನು, ಮೇಘದ ಮರೆಯಿಂದ ಹೊರಬಿದ್ದ ಚಂದ್ರನಂತೆ ಬರುವುದನ್ನು ಸಭಿಕರೆಲ್ಲರೂ ನೋಡಿದರು. ಅವನಿಗೆ ಕೈಯಲ್ಲಿ ಪ್ರಮಾಣಕ್ಕೆ ತಕ್ಕ ಚಾಟಿ! ಅಂದವಾದ ಆಕೃತಿ, ಬೆನ್ನಿನಲ್ಲಿ ಕಟ್ಟಿದ ಸಣ್ಣ ಮತ್ತು ದೊಡ್ಡ ಹಗ್ಗಗಳು, ಉದ್ದವಾದ ಹಲವು ಜೌರಿಗಳಿಂದ ಜೆನ್ನಾಗಿ ಸೇರಿಸಿ ಹೆಣೆದ ಬಿಲ್ಲಿನ ನಾಣು, ಮತ್ತು ದೊಡ್ಡ ತಂತಿ, ಇವುಗಳೊಡನೆ ಅವನು ಮುಂದೆ ಬಂದು ವಿರಾಟರಾಜನನ್ನು ನೋಡಿ "ರಾಜೇಂದ್ರಾ!

ನನ್ನನ್ನು ನೀನು ನಿನ್ನ ಗೋವುಗಳಿಗೆ ಅಧಿಕಾರಿಯನ್ನಾಗಿ ಮಾಡು. ನಾನು ಅವುಗಳನ್ನು ಕಾಪಾಡುವೆನು. ನಾನು ಗೊಲ್ಲರ ಕೆಲಸದಲ್ಲಿ ನೈಪುಣ್ಯವುಳ್ಳವನು. ಅವು ನನ್ನಿಂದ ಚೆನ್ನಾಗಿ ಪೋಷಿಸಲ್ಪಟ್ಟು ಸುಖನಿದ್ರೆಯುಳ್ಳವುಗಳಾಗಿರಲಿ. ನಿನ್ನ ಪಶುಗಳು ನನ್ನ ಪೋಷಣೆಯಲ್ಲಿದ್ದರೆ, ಅವುಗಳಿಗೆ ಕಾಡುಮೃಗಗಳಿಂದಾಗಲಿ, ರೋಗದಿಂದಾಗಲಿ, ಕಾಡುಗಿಚ್ಚಿನಿಂದಾಗಲಿ, ಕಳ್ಳರಿಂದಾಗಲಿ ಸ್ವಲ್ಪಮಾತ್ರವೂ ಭೀತಿಯಿರದು. ಓ ನರೇಂದ್ರಾ! ನಿನ್ನ ಗೋವುಗಳು ನನ್ನ ವಶದಲ್ಲಿದ್ದರೆ, ಸಮೃದ್ಧವಾದ ಹಾಲನ್ನು ಕರೆಯತಕ್ಕವುಗಳಾಗಿ, ಯಾವ ರೋಗವೂ ಇಲ್ಲದಂತೆ ಸುಖದಿಂದಿರುವುವು. ನಿನ್ನ ಗೋಧನವು ಸಂಖ್ಯೆಯಲ್ಲಿ ಅಭಿವೃದ್ಧಿ ಹೊಂದಿ ಪುಷ್ಟಿಯುಳ್ಳವುಗಳಾಗುವುವು'' ಎಂದನು. ಆಗ ವಿರಾಟನು ಮಾದ್ರೀಪುತ್ರನಾದ ಸಹದೇವನ ಈ ಮಾತನ್ನು ಕೇಳಿ, ಅವನ ಆಕೃತಿಯನ್ನು ಚೆನ್ನಾಗಿ ದೃಷ್ಟಿಸಿ ನೋಡಿ ಸಂತುಷ್ಟಹೃದಯನಾಗಿ ಅವನನ್ನು ಕುರಿತು ''ಓ ವೀರಾಗ್ರಣೀ! ನಿನ್ನಲ್ಲಿ ಗೊಲ್ಲತನವೇನೂ ನನಗೆ ತೋರುವುದಿಲ್ಲ. ದೃಢವಾದ ನಿನ್ನ ದೇಹವು ಕ್ಷತ್ರಿಯದೇಹದಂತೆಯೂ, ಉತ್ತಮವಂಶದಲ್ಲಿ ಜನಿಸಿದಂತೆಯೂ ತೋರುವುದು. ನಿನ್ನ ಆಕೃತಿಯನ್ನು ನೋಡಿದರೆ ನೀನು ಪಾಂಡಿತ್ಯವಿಲ್ಲದವನಂತೆ ತೋರುವುದಿಲ್ಲ. ನೀನು ಈ ರಾಜ್ಯದಲ್ಲಿ ಮಂತ್ರಿಸ್ಥಾನವನ್ನು ವಹಿಸಿ ನನಗೆ ಮಂತ್ರಾಲೋಚನೆಗಳನ್ನು ತಿಳಿಸುವ ಸಚಿವನಾಗಿರು. ಬೃಹಸ್ಪತಿಯು ಇಂದ್ರನನ್ನೂ, ಇತರ ದೇವತೆಗಳನ್ನೂ ಹೇಗೋ ಹಾಗೆ, ನನ್ನನ್ನೂ, ನನಗೆ ಒಳಪಟ್ಟ ಇತರ ರಾಜರನ್ನೂ ಪಾಲಿಸುತ್ತಿರು. ನೀನು ನನ್ನ ಸೈನ್ಯಗಳಿಗೆಲ್ಲ ಪಾಲಕನಾಗಿರು. ನಿನಗೆ ತಕ್ಕ ಖಡ್ಗವನ್ನು ಕೊಡುವೆನು. ನನ್ನ ಸೇನಾರಕ್ಷಣಭಾರವನ್ನು ವಹಿಸಿ, ಸೈನ್ಯಕ್ಕೆಲ್ಲ ನಿನೇ ಅಧಿಪತಿಯಾಗಿರು. ಇದೋ! ಈ ಬಿಲ್ಲನ್ನು ಗ್ರಹಿಸು'' ಎಂದು ಉತ್ಸಾಹಜನಕವಾದ ವಾಕ್ಯದಿಂದ ಸಮಾಧಾನಪಡಿಸಿದನು. ಇದನ್ನು ಕೇಳಿ ಮಹಾಬುದ್ಧಿಶಾಲಿಯಾದ ಆ ಸಹದೇವನು ರಾಜನನ್ನು ಹೊಗಳಿ, ಕೈಮುಗಿದು ''ಓ ರಾಜೇಂದ್ರಾ! ನಾನು ಹೇಳುವ ಸಾರವಾದ ವಾಕ್ಯವನ್ನು ಕೇಳು. ನಾನು ಕೆಲಸಗಾರನು. ಜಾತಿವಿಶೇಷದಿಂದ ನಾನು ದೋಷವುಳ್ಳವನು. ರಾಜನೀತಿಗಳಲ್ಲಿ ನಿನಗೆ ಆಲೋಚನೆಯನ್ನು ಹೇಳುವುದಕ್ಕೆ ಈಗ ನನಗೆ ಸಾಮರ್ಥ್ಯವೆಲ್ಲಿಯದು? ನಾನು ಇನ್ನೂ

ಬಾಲನು. ಇದಲ್ಲದೆ ನಾವು ನಮ್ಮ ವೃತ್ತಿಯಿಂದಲೇ ತೃಪ್ತರಾಗಿರತಕ್ಕವರು. ಆದುದರಿಂದ ಗೋವುಗಳ ರಕ್ಷಣಕಾರ್ಯವನ್ನೇ ನನಗೆ ನಿಯಮಿಸು. ನಾನು ವೈಶ್ಯನು. ನನ್ನನ್ನು ಅರಿಷ್ಟನೇಮಿಯೆಂದು ಕರೆಯುವರು. ಇದಕ್ಕೆ ಮೊದಲು ನಾನು ಕುರುಶ್ರೇಷ್ಠರಾದ ಪಾಂಡವರಲ್ಲಿ ಗೋರಕ್ಷಣದ ಅಧಿಕಾರದಲ್ಲಿಯೇ ಇದ್ದವನು. ಈಗ ಪಾಂಡವರು ಹೋದ ಸ್ಥಳವನ್ನು ತಿಳಿಯದೆ ನಿನ್ನಲ್ಲಿ ಕೆಲಸಕ್ಕೆ ಸೇರುವ ಉದ್ದೇಶದಿಂದ ಇಲ್ಲಿ ಬಂದೆನು. ಓ ಪ್ರಭೂ! ಇದುಹೊರತು ಬೇರೆ ವೃತ್ತಿಯಿಂದ ಬದುಕುವುದಕ್ಕೆ ನನಗೆ ಶಕ್ಯವಿಲ್ಲ. ನಿನ್ನನ್ನು ಬಿಟ್ಟು ಬೇರೊಬ್ಬರನ್ನು ಸೇವಿಸುವುದಕ್ಕೆ ನನಗೆ ಪ್ರಿಯವೂ ಇಲ್ಲ'' ಎಂದನು. ಅದಕ್ಕಾ ವಿರಾಟನು, ''ಓ ಶತ್ರುಸೂದನಾ! ನೀನು ಎಷ್ಟೇ ಹೇಳಿದರೂ ನನಗೆ ನಂಬಿಕೆ ಹುಟ್ಟದು. ನೀನು ಬ್ರಾಹ್ಮಣನೇ? ಅಥವಾ ಕ್ಷತ್ರಿಯನೇ? ಸಮುದ್ರಾಂತವಾದ ಭೂಮಿಯನ್ನು ಪರಿಪಾಲಿಸತಕ್ಕ ರಾಜನಿಗೆ ತಕ್ಕ ರೂಪವು ನಿನ್ನಲ್ಲಿ ಕಾಣುವುದು. ವಾಸ್ತವವನ್ನು ತಿಳಿಸು. ನಿನಗೆ ಈ ಗೊಲ್ಲತನವು ಯೋಗ್ಯವಾಗಿ ಕಾಣುವುದಿಲ್ಲ. ನೀನು ಯಾವ ರಾಜ್ಯದಿಂದ ಇಲ್ಲಿಗೆ ಬಂದಿರುವೆ? ನಿನಗೆ ತಿಳಿದಿರುವ ಶಿಲ್ಪವಾವುದು? ನನ್ನಲ್ಲಿ ನೀನು ಯಾವರೀತಿಯಿಂದ ವಾಸಮಾಡಬೇಕೆಂದಿರುವೆ? ನಿನಗೆ ಬೇಕಾದ ವೇತನವೆಷ್ಟು?'' ಎಂದನು. ಅದಕ್ಕಾ ಸಹದೇವನು ''ಎಲೈ ರಾಜೇಂದ್ರನೆ! ಪಂಚ ಪಾಂಡವರಲ್ಲಿ ಯುಧಿಷ್ಠಿರನೆಂಬವನು ಹಿರಿಯವನು. ಅವನಲ್ಲಿ ಎಂಟು ಲಕ್ಷ ಪಶುವರ್ಗಗಳು ನೂರಾರುಸಂಖ್ಯೆಯಿಂದಿರುವುವು. ಇವಲ್ಲದೆ ಹತ್ತು ಸಹಸ್ರ ಬೇರೆ ಗೋವುಗಳೂ, ಅದಕ್ಕೆ ದ್ವಿಗುಣವಾಗಿ ಮತ್ತೆ ಬೇರೆ ಗೋವರ್ಗಗಳೂ, ಪ್ರತ್ಯೇಕವಾಗಿರುವುವು. ಅವಕ್ಕೆಲ್ಲಾ ನಾನು ಪಾಲಕನಾಗಿದ್ದವನು. ನನ್ನನ್ನು ತಂತ್ರೀಪಾಲನೆಂದು ಕರೆಯುವರು. ನಾನಿದ್ದ ಸ್ಥಳಕ್ಕೆ ಸುತ್ತಲೂ ಹತ್ತು ಯೋಜನಗಳ ದೂರದವರೆಗೆ, ಪಶುಗಳ ವಿಷಯವಾಗಿ ಹಿಂದೆ ನಡೆದ, ಈಗ ನಡೆಯುತ್ತಿರುವ, ಮತ್ತು ಮುಂದೆ ನಡೆಯುವ ವಿಚಾರಗಳಲ್ಲಿ ನನಗೆ ತಿಳಿಯದುದೊಂದಾದರೂ ಇರದು. ಮಹಾತ್ಮನಾದ ಆ ಯುಧಿಷ್ಠಿರನ ಗುಣಗಳನ್ನು ನಾನು ಚೆನ್ನಾಗಿ ತಿಳಿದವನು. ಅವನನ್ನು ನಾನು ಸಂಪೂರ್ಣವಾಗಿ ಮೆಚ್ಚಿಸಿರುವೆನು. ನಾನು ಅಲ್ಲಿ ರಕ್ಷಿಸುತ್ತಿದ್ದ ಪಶು

ಗಳನ್ನು ಅಷ್ಟಿಷ್ಟೆಂದು ಲೆಕ್ಕಮಾಡಿ ತಿಳಿಯಲು ಸಾಧ್ಯವಲ್ಲ. ನನ್ನಿಂದ ರಕ್ಷಿಸಲ್ಪಟ್ಟ ಆ ಪಶುಗಳೆಲ್ಲವೂ ಚೆನ್ನಾಗಿ ಬೆಳೆದು, ಸಮೃದ್ಧವಾದ ಹಾಲನ್ನು ಕೊಡುತ್ತ, ವಿಶೇಷವಾಗಿ ಕರುಗಳನ್ನು ಹಾಕಿ ಬಹಳ ಸಾಧುಗಳಾಗಿದ್ದುವು. ನನ್ನ ರಕ್ಷಣೆಯಲ್ಲಿ ಪಶುಗಳು ಬಹು ಬೇಗನೆ ಹೆಚ್ಚುವುವು. ಅವುಗಳಿಗೆ ಅಲ್ಲಿ ಯಾವ ರೋಗವೂ ಕಾಣಿಸದು. ಗೋರಕ್ಷಣಕ್ಕೆ ಬೇಕಾದ ಬೇರೆ ಬೇರೆ ಉಪಾಯಗಳಿಂದ ನಾನು ಅವುಗಳ ಮರ್ಮವನ್ನೆಲ್ಲ ತಿಳಿದಿರುವೆನು. ಇದೇ ನನ್ನಲ್ಲಿರುವ ಶಿಲ್ಪವಿದ್ಯೆ. ರಾಜೇಂದ್ರಾ! ಮತ್ತೊಂದು ವಿಶೇಷವನ್ನು ಹೇಳುವೆನು ಕೇಳು. ಯಾವ ಹೋರಿಯ ಮೂತ್ರವನ್ನು ಆಘ್ರಾಣಿಸಿದ ಮಾತ್ರಕ್ಕೆ ಗೊಡ್ಡು ಹಸುವೂ ಕೂಡ ಕರುಗಳನ್ನು ಈಯುವುದೋ, ಅಂತಹ ಉತ್ತಮಲಕ್ಷಣವುಳ್ಳ ಹೋರಿಗಳನ್ನು ನಾನು ಬಲ್ಲೆನು" ಎಂದನು.

ಆಗ ವಿರಾಟನು ಸಂತೋಷದಿಂದ ಸಹದೇವನನ್ನು ನೋಡಿ "ಓ ಶುಭಾಂಗನೇ! ಈ ನೀಚಕಾರ್ಯವನ್ನು ನಿಯಮಿಸುವುದಕ್ಕೆ ನನಗೇನೋ ಸಮ್ಮತವಿಲ್ಲ. ನನ್ನ ಗೋವುಗಳನ್ನು ಮಾತ್ರವಲ್ಲ. ಈ ಸಮಸ್ತ ಭೂಮಂಡಲವನ್ನೇ ನೀನು ಪಾಲಿಸಲು ಸಮರ್ಥನು. ಹಾಗಿದ್ದರೂ, ನಿನಗೆ ಇಷ್ಟವಿದ್ದಪಕ್ಷದಲ್ಲಿ ನನ್ನ ಪಶುಗಳನ್ನೂ, ಪಶುಪಾಲಕರನ್ನೂ ನಿನ್ನ ವಶಕ್ಕೊಪ್ಪಿಸುವೆನು. ಅವುಗಳನ್ನು ನೀನು ರಕ್ಷಿಸುತ್ತಿರು. ನನ್ನಲ್ಲಿ ಬೇರೆಬೇರೆ ಲಕ್ಷೋಪಲಕ್ಷ ಸಂಖ್ಯೆಯ ಗೋವುಗಳಿರುವುವು. ಅವೆಲ್ಲವನ್ನೂ ಇದು ಮೊದಲು ನಿನ್ನ ವಶಮಾಡಿರುವೆನು" ಎಂದನು. ಹೀಗೆ ವಿರಾಟನಿಂದ ಅನುಮತಿಸಲ್ಪಟ್ಟ ಸಹದೇವನು, ಆ ರಾಜನ ಇಷ್ಟಾನುಸಾರವಾಗಿ ಪಶುಪಾಲಕ ವೃತ್ತಿಯನ್ನಾರಂಭಿಸಿ, ಅಸ್ತಗಿರಿಯಲ್ಲಿ ಪ್ರವೇಶಿಸಿದ ಸೂರ್ಯನಂತೆ ಸ್ವರೂಪವನ್ನು ಮರೆಸಿಕೊಂಡು ಅಜ್ಞಾತವಾಸವನ್ನು ಮಾಡುತ್ತಿದ್ದನು. ಹೀಗೆ ಅಕ್ಷಯಪರಾಕ್ರಮವುಳ್ಳ ಆ ಪಾಂಡವರು ಮುಂದೆ ಸಮುದ್ರಾಂತವಾದ ಸಮಸ್ತ ಭೂಮಿಯನ್ನೂ ಸಾಧಿಸುವ ಉದ್ದೇಶವುಳ್ಳವರಾಗಿ, ತಮ್ಮ ಪ್ರತಿಜ್ಞೆಯನ್ನು ವಿಾರದಂತೆ ಅಜ್ಞಾತ ವಾಸವನ್ನು ಕಳೆಯುತ್ತಿದ್ದರು.

ಇದು ಹದಿಮೂರನೆಯ ಅಧ್ಯಾಯವು.

ದ್ರೌಪದಿಯು ಸೈರಂಧ್ರೀವೇಷದಿಂದ ಸುದೇಷ್ಣೆಯ ಬಳಗೆ ಬಂದು ಸೇರಿದುದು.

ಆಮೇಲೆ, ಅಂದವಾದ ಕುರುಳುಗಳಿಂದಲೂ, ದರ್ಶನೀಯವಾದ ರೂಪದಿಂದಲೂ, ಶುದ್ಧವಾದ ಮಂದಹಾಸದಿಂದಲೂ, ಉಬ್ಬಿ ದುಂಡಗಿರುವ ಸ್ತನಗಳಿಂದಲೂ, ಮಂಗಳಾಕಾರದಿಂದಲೂ, ಕರೀ ಕಣ್ಣ್ಣಾಲೆಗಳಿಂದಲೂ, ಶ್ಯಾಮಲವರ್ಣದಿಂದಲೂ, ಕೃಷ್ಣೆಯೆಂಬ ಹೆಸರಿನಿಂದಲೂ ಒಪ್ಪುತ್ತಿರುವ ದ್ರೌಪದಿಯು, ಉದ್ದಕ್ಕೆ ಜೋಲಾಡುತ್ತಿದ್ದ ಮೃದುವಾದ ತನ್ನ ತಲೆ ಕೂದಲುಗಳನ್ನು ಮೇಲಕ್ಕೆತ್ತಿ ಮಡಿಸಿ, ತನ್ನ ಭುಜದಮೇಲೆ ಬಲಗಡೆಗೆ ಬಿಟ್ಟುಕೊಂಡು, ಬಹಳವಾಗಿ ಮಾಸಿದ ದೊಡ್ಡ ದೊಂದು ಸೀರೆಯನ್ನುಟ್ಟು, ಸೈರಂಧ್ರೀವೇಷದಿಂದ ವಿರಾಟನಗರಕ್ಕೆ ಪ್ರವೇಶಿಸಿ, ಬಹಳ ಕಷ್ಟಕ್ಕೀಡಾದವಳಂತೆ ದೈನ್ಯಭಾವವನ್ನು ತೋರಿಸುತ್ತ, ರಾಜಸ್ಥಾನದ ಕಡೆಗೆ ಬರುತಿದ್ದಳು. ಅಲ್ಲಲ್ಲಿ ಅವಳನ್ನು ಕಂಡ ಸ್ತ್ರೀಪುರುಷರೆಲ್ಲರೂ ನಾನಾ ದಿಕ್ಕುಗಳಿಂದ ಓಡಿಬಂದು, ಅವಳ ರೂಪವನ್ನು ನೋಡಿ ವಿಸ್ಮಿತರಾಗಿ "ಅಮ್ಮಾ! ನೀನು ಯಾರು? ನೀನು ಇಲ್ಲಿ ಮಾಡಬೇಕೆಂದಿರುವ ಕಾರ್ಯವೇನು?" ಎಂದು ಪ್ರಶ್ನೆಮಾಡುತ್ತಿದ್ದರು. ಆಗ ದ್ರೌಪದಿಯು ಅವರನ್ನು ಕುರಿತು "ಓ ಜನಗಳಿರಾ! ನಾನು ಸೈರಂಧ್ರಿ! (ಇತರರ ಮನೆಯಲ್ಲಿ ವೇತನಕ್ಕಾಗಿ ಕೆಲಸಮಾಡತಕ್ಕವಳು) ಆ ಕೆಲಸವನ್ನು ಕೋರಿಯೇ ಇಲ್ಲಿಗೆ ಬಂದಿರುವೆನು. ನನ್ನನ್ನು ಕಾಪಾಡುವವರಿಗೆ ನಾನು ಊಳಿಗವನ್ನು (ಸೇವೆಯನ್ನು) ಮಾಡಲುದ್ದೇಶಿಸುವೆನು" ಎಂದಳು. ಆದರೆ, ಆ ದ್ರೌಪದಿಯ ಅಸಾಧಾರಣರೂಪವನ್ನೂ, ವೇಷವನ್ನೂ, ಅವಳ ಮೃದು ಗಂಭೀರವಾದ ಮಾತುಗಳನ್ನೂ ಕೇಳಿದಾಗ, ಜನರಲ್ಲಿ ಯಾರೂ ಅವಳು ಜೀವನಾರ್ಥವಾಗಿ ಕೆಲಸವನ್ನು ಹುಡುಕುತ್ತ ಬಂದವಳೆಂದು ನಂಬಲೇ ಇಲ್ಲ. ಇದೇ ಸಮಯದಲ್ಲಿ ಕೇಕಯರಾಜಪುತ್ರಿಯೂ, ವಿರಾಟನ ಪ್ರಿಯಪತ್ನಿಯೂ ಆದ ಸುದೇಷ್ಣೆಯು, ತನ್ನ ಅರಮನೆಯ ಉಪ್ಪರಿಗೆಯಮೇಲೆ ನಿಂತು ಅತ್ತಿತ್ತ ನೋಡುತ್ತಿರುವಾಗ, ಅಕಸ್ಮಾತ್ತಾಗಿ ಈ ದ್ರೌಪದಿಯನ್ನು ಕಂಡಳು. ಅಪೂರ್ವ ರೂಪಾತಿಶಯದಿಂದ ಶೋಭಿಸುತ್ತ, ಅಸಹಾಯಳಾಗಿ ಒಂದೇ ಸೀರೆ

ಯನ್ನುಟ್ಟು ಬರುತ್ತಿರುವ ಆ ಸ್ತ್ರೀವ್ಯಕ್ತಿಯನ್ನೂ, ಅನೇಕ ಸ್ತ್ರೀಪುರುಷರು ಅವಳನ್ನು ಸುತ್ತಿಮುತ್ತಿ ನೆರೆದು ನಿಂತು ನೋಡುತ್ತಿರುವುದನ್ನೂ ಕಂಡು, ಆ ರಾಜಪತ್ನಿಗೆ ಅವಳಲ್ಲಿ ಕನಿಕರವೂ, ಅವಳು ಯಾರೆಂದು ತಿಳಿಯಬೇಕೆಂಬ ಕುತೂಹಲವೂ ಉಂಟಾಯಿತು. ಆಗ ರಾಣಿಯು ತನ್ನ ಸಮೀಪದಲ್ಲಿದ್ದ ಸ್ತ್ರೀಯರನ್ನೂ, ತನ್ನಂತೆಯೇ ಆ ಹೊಸವ್ಯಕ್ತಿಯಾರೆಂದು ವಿಚಾರಿಸಬೇಕೆಂಬ ಆತುರದಿಂದಿದ್ದ ಕೆಲವು ವೃದ್ಧಸ್ತ್ರೀಯರನ್ನೂ ಕರೆದು, "ಈಗಲೇ ನೀವು ಅಲ್ಲಿಗೆ ಹೋಗಿ, ಆ ಹೆಂಗಸನ್ನು ಸುತ್ತಿಮುತ್ತಿ ನಿಂತಿರುವ ಜನರನ್ನು ತೊಲಗಿಸಿ, ಆಕೆಯನ್ನು ಇಲ್ಲಿಗೆ ಕರೆದುಕೊಂಡು ಬನ್ನಿರಿ. ಆ ಸಾಧ್ವಿಯನ್ನು ಕಂಡುದು ಮೊದಲು ನನ್ನ ಮನಸ್ಸು ಅವಳಲ್ಲಿ ಕನಿಕರದಿಂದ ಕಳವಳಿಸುತ್ತಿರುವುದು. ನಿಮಗೆ ಸಮ್ಮತವಾದರೆ, ನೀವು ಈಗಲೇ ಅವಳನ್ನು ಇಲ್ಲಿಗೆ ಕರೆತಂದು ನನಗೆ ತೋರಿಸಬೇಕು" ಎಂದಳು.

ಒಡನೆಯೇ ಆ ಸ್ತ್ರೀಯರು, ದ್ರೌಪದಿಯ ಬಳಿಗೆ ಬಂದು, ಅವಳನ್ನು ಆ ಜನರ ಗುಂಪಿನಿಂದ ಹೊರಕ್ಕೆ ಕರೆತಂದು, ಅವಳನ್ನು ಕುರಿತು ಮೃದು ಮಧುರವಾದ ವಾಕ್ಯದಿಂದ "ಅಮ್ಮಾ! ನಮ್ಮ ಮಹಾರಾಣಿಯಾದ ಸುದೇಷ್ಣಾದೇವಿಯು ನಿನ್ನನ್ನು ನೋಡಬೇಕೆಂದು ಕೋರಿ, ನಿನ್ನನ್ನು ಕರೆತರುವುದಕ್ಕಾಗಿ ನಮ್ಮನ್ನು ಕಳುಹಿಸಿದಳು. ಅದೋ! ಅವಳು ಆ ಉಪ್ಪರಿಗೆಯ ಮೇಲೆ ನಿಂತು ನಿರೀಕ್ಷಿಸುತ್ತಿರುವಳು. ನಿನಗೆ ಇಷ್ಟವಿದ್ದರೆ ಈಗಲೇ ನಮ್ಮೊಡನೆ ಬರಬಹುದು. ನಿನ್ನನ್ನು ನಾವು ಆ ರಾಣಿಯ ಬಳಿಗೆ ಸುರಕ್ಷಿತವಾಗಿ ಕರೆದುಕೊಂಡು ಹೋಗುವೆವು" ಎಂದರು. ಈ ಮಾತನ್ನು ಕೇಳಿ ಚತುರೆಯಾದ ಆ ದ್ರೌಪದಿಯು, ತನ್ನ ಇಷ್ಟವು ಕೈಗೂಡಿತೆಂದು ತನ್ನೊಳಗೆ ತಾನು ಸಂತೋಷಪಡುತ್ತ, ಆಗಲೇ ಅರಮನೆಯಲ್ಲಿ ರಾಜಪತ್ನಿಯಾದ ಸುದೇಷ್ಣೆಯು ನಿಂತಿದ್ದ ಕಡೆಗೆ ಹೊರಟಳು. ಆಗ ದ್ರೌಪದಿಯು ಉದ್ದವಾಗಿಯೂ, ಮೃದುವಾಗಿಯೂ, ಅಂದವಾಗಿಯೂ, ತುದಿಯಲ್ಲಿ ಸೂಕ್ಷ್ಮವಾಗಿ ಬಾಗಿದಂತೆಯೂ, ಕಪ್ಪಾಗಿಯೂ ಇರುವ ತನ್ನ ತಲೆಕೂದಲುಗಳನ್ನು ಸೇರಿಸಿ, ಮಡಿಸಿ, ತನ್ನ ಬಲಪಾರ್ಶ್ವಕ್ಕೆ ಬಿಟ್ಟುಕೊಂಡು, ನಡುಗುತ್ತಿರುವ ಕೋಮಲಲತೆಯಂತೆ ಲಜ್ಜಾನಮ್ರಳಾಗಿ, ವಿರಾಟನ ಅಂತಃ

ಪುರವನ್ನು ಪ್ರವೇಶಿಸಿದಳು. ಸರ್ವಲಕ್ಷಣ ಸಂಪನ್ನೆಯೂ, ಉಬ್ಬಿದ ನಿತಂಬವುಳ್ಳವಳೂ ಆದ ಆ ದ್ರೌಪದಿಯು ಮುಂದೆ ಹೋಗಿ, ಅಲ್ಲಿ ರತ್ನಾಸ್ತರಣದಿಂದ ಕೂಡಿದ ಚಿನ್ನದ ಪೀಠದಮೇಲೆ ಕುಳಿತಿದ್ದ ರಾಜಪತ್ನಿಯನ್ನು ಕಂಡಳು. ಆಗ ವಿರಾಟನ ರಾಣಿಯಾದ ಸುಧೇಷ್ಣೆಯಾದರೋ, ಕೆಂಪಾದ ನವಿರು ಸೀರೆಯನ್ನುಟ್ಟು, ಮೇಘದೊಳಗಿನ ಮಿಂಚಿನಂತೆ ಬೆಳಗುತ್ತಿರುವಳು. ನವರತ್ನಖಚಿತಗಳಾದ ಅನೇಕಾಭರಣಗಳಿಂದ ಅಲಂಕೃತೆಯಾಗಿ, ಅನೇಕ ವರ್ಣಶೋಭೆಗಳಿಂದ ವಿಚಿತ್ರವಾಗಿ ತೋರುವಳು. ಅಂದವಾದ ಹುಬ್ಬು! ನುಣುಪಾದ ತಲೆಕೂದಲು! ಉಬ್ಬಿದ ನಿತಂಬಗಳು! ಇವುಗಳಿಂದ ಸೊಗಸುಬೀರುತ್ತಿರುವಳು. ಹಲವು ಮಂದಿ ಕುಳ್ಳರೂ, ಗುಜ್ಜಾರಿಗಳೂ, ಅವಳ ಸುತ್ತಲೂ ಸೇವೆಗಾಗಿ ಸಿದ್ಧರಾಗಿ ನೆರೆದು ನಿಂತಿರುವರು. ಅನೇಕ ವಿಧ ಪುಷ್ಪೋಪಹಾರಗಳಿಂದ ಶೋಭಿತವಾದ ಯಜ್ಞವೇದಿಕೆಯಂತೆ, ಸರ್ವಾಲಂಕಾರಭೂಷಿತೆಯಾಗಿ, ಅನೇಕ ರಾಜಕುಮಾರಿಯರಿಂದ ಪರಿವೇಷ್ಟಿತೆಯಾಗಿರುವಳು. ದ್ರೌಪದಿಯು ಅಲ್ಲಗೆ ಬಂದೊಡನೆ, ಅಲ್ಲಿದ್ದ ಸ್ತ್ರೀಯರೆಲ್ಲರೂ ಅವಳ ಸ್ಥಿತಿಯನ್ನು ಕಂಡು ಕನಿಕರಗೊಂಡು, ತಟ್ಟನೆ ತಮ್ಮತಮ್ಮ ಆಸನಗಳಿಂದ ಮೇಲೆದ್ದುಬಂದು, ನಾಲ್ಕು ಕಡೆಗಳಲ್ಲಿಯೂ ಆಕೆಯನ್ನು ಸುತ್ತಿಮುತ್ತಿ ನಿಂತು, ದೇವಲೋಕದಿಂದಿಳಿದು ಬಂದ ದೇವೇಂದ್ರಪತ್ನಿಯಂತೆ ರೂಪಾತಿಶಯದಿಂದ ಬೆಳಗುತಿದ್ದ ಆಕೆಯನ್ನು ವಿಸ್ಮಯದಿಂದ ನೋಡುತಿದ್ದರು. ಆಗ ದ್ರೌಪದಿಯ ರೂಪಾತಿಶಯವನ್ನು ಕೇಳಬೇಕೆ? ಉಳ್ಳಡಗಿದಂತಿರುವ ಕಣಕಾಲುಗಳು! ಅಂದವಾಗಿ ಉಬ್ಬಿದ ತೊಡೆ! ಶ್ಯಾಮಲವರ್ಣದ ದೇಹಕಾಂತಿ! ಕೆಂಪಗೆ ವಿಶಾಲವಾದ ಕಣ್ಣು! ಅತ್ಯಂತ ನಿರ್ದುಷ್ಟವಾದ ಎಲ್ಲಾ ದೇಹಾವಯವಗಳು! ಸ್ವಲ್ಪ ಬಾಗಿದಂತಿರುವ ಮೈ! ಅಂದವಾದ ನಡು! ಬಹಳ ಕುಳ್ಳೂ ಅಲ್ಲದೆ, ಬಹಳ ಎತ್ತರವೂ ಅಲ್ಲದೆ, ನಡುತರವಾದ ಆಕೃತಿ, ದಟ್ಟವಾಗಿ ಬೆಳೆದ ಹಸುರುಹುಲ್ಲಿನ ಮೈದಾನದಲ್ಲಡುವ ಹೆಣ್ಣುಜಿಂಕೆಯಂತೆ ಕಾಣುವಳು. ಅಂದವಾದ ಕುರುಳುಗಳಿಂದಲೂ, ಜಿಂಕೆಯ ಕಣ್ಣಿನಂತಿರುವ ಕಣ್ಣುಗಳಿಂದಲೂ ಕೂಡಿದ ಆ ಸುಂದರಿಯು, ಬೆದರಿದ ಹುಲ್ಲೆಯಂತೆಯೂ, ತನ್ನ ಗುಂಪಿನಿಂದ ತಪ್ಪಿಬಂದ ಹೆಣ್ಣಾನೆಯಂತೆಯೂ ಕಾಣಿಸುವಳು. ಸಾಕ್ಷಾಲ್ಲಕ್ಷ್ಮೀದೇವಿಯಂತೆಯೂ,

ಯಶಸ್ವಿನಿಯಾದ ವಿದ್ಯಾದೇವತೆಯಂತೆಯೂ, ನಕ್ಷತ್ರಗಳಲ್ಲಿ ರೋಹಿಣಿ ಯಂತೆಯೂ, ಜ್ವಲಿಸುವ ಅಗ್ನಿಶಿಖೆಯಂತೆಯೂ, ರುದ್ರಪತ್ನಿಯರಲ್ಲಿ ಪಾರ್ವ ತಿಯಂತೆಯೂ, ಸಮುದ್ರವೇಲೆಯಂತೆಯೂ, ನಾಗಕನ್ಯೆಯರಲ್ಲಿ ಸುಲಭೆ ಯಂತೆಯೂ, ಮೃಗಿಗಳಲ್ಲಿ ಕಿನ್ನರಿಯಂತೆಯೂ ಶೋಭಿಸುವಳು. ಗಂಗೆ ಯಂತೆ ಶುದ್ಧಾತ್ಮಳೂ, ಶರತ್ಕಾಲದ ರಾತ್ರಿಯಂತೆ ಪ್ರಸನ್ನಳೂ, ಅನಿರ್ವ ರ್ಣ್ಯವಾದ ಗುಣರೂಪವುಳ್ಳವಳೂ, ಇಲಾದೇವಿಯಂತೆ ಕೀರ್ತಿಮತಿಯೂ, ಸಾವಿತ್ರಿಯಂತೆ ಬೇರೊಬ್ಬರಿಗೆ ತಿರಸ್ಕರಿಸಲು ಸಾಧ್ಯವಿಲ್ಲದವಳೂ, ಮುಖದಲ್ಲಿ ಬ್ರಹ್ಮತೇಜಸ್ಸಿನಿಂದ ಬೆಳಗುವವಳೂ, ಸೀತೆಯಂತೆ ಸತೀಮಣಿಯೂ, ಅರುಂ ಧತಿಯಂತೆ ಶುದ್ಧಿಯೂ ಆದ ಆ ದ್ರೌಪದಿಯನ್ನು ಕಂಡು ಸುದೇಷ್ಣೆಯು ಆಶ್ಚರ್ಯದಿಂದ ಅರಳಿದ ಮುಖವುಳ್ಳವಳಾಗಿ ಹೀಗೆಂದು ಪ್ರಶ್ನೆಮಾಡುವಳು. "ನಿರ್ದುಷ್ಟವಾದ ಆಕಾರವುಳ್ಳ ಎಲೆ ಭದ್ರೆ! ನೀನು ಯಾರು? ಎಲ್ಲಿಂದ ಬಂದವಳು? ನೀನು ಯಾರಿಗೆ ಸಂಬಂಧಪಟ್ಟವಳು? ನಿನಗೆ ನನ್ನಿಂದ ಆಗ ಬೇಕಾದ ಕಾರ್ಯವೇನು? ಉಳ್ಳಡಗಿದಂತೆ ಗೂಢವಾದ ಕಣಕಾಲುಗಳೂ, ಒಂದಕ್ಕೊಂದು ಹೆಚ್ಚು ಕಡಿಮೆಯಿಲ್ಲದೆ ಸಮವಾದ ತೊಡೆಗಳೂ, (ಹೊಕ್ಕು ಳು, ಕಂಠಧ್ವನಿ, ಬುದ್ಧಿಯೆಂಬೀ) ಮೂರರಲ್ಲಿ ಗಾಂಭೀರ್ಯವೂ, (ನಿತಂಬ, ಜಘನ, ಸ್ತನಗಳೆಂಬೀ) ಆರರಲ್ಲಿ ಔನ್ನತ್ಯವೂ, ಕೆಂಪಾದ ಅಂಗೈ, ಅಂಗಾ ಲು, ಕಡೆಗಣ್ಣು, ಉಗುರು, ಕಪೋಲಗಳೆಂಬೀ ಐದರಲ್ಲಿ ನುಣುಪೂ ಉಳ್ಳ ವಳಾಗಿ, ಹಂಸದಂತೆ ಗದ್ಗದಸ್ವರದಿಂದ ಮಾತಾಡುತ್ತಿರುವೆ. ಅಂದವಾದ ಮುಂಗುರುಳುಗಳು! ಇಂಪಾದ ಕಂಠಧ್ವನಿ! ಶ್ಯಾಮಲವಾದ ದೇಹಕಾಂತಿ, ಉಬ್ಬಿದ ಸ್ತನನಿತಂಬಗಳು, ತುಂಬಿದ ರೆಪ್ಪೆಗಳುಳ್ಳ ಕಣ್ಣುಗಳು! ತೊಂಡೆಯ ಹಣ್ಣಿನಂತಿರುವ ತುಟಿ! ಸಣ್ಣ ನಡು! ಶಂಖದಂತಿರುವ ಕೊರಲು! ಉಳ್ಳಡ ಗಿದ ನರಗಳು! ಪೂರ್ಣಚಂದ್ರನನ್ನು ಹೋಲುವ ಮುಖದ ಸೊಗಸು! ಇವು ಗಳಿಂದ ಶೋಭಿಸುವ ನೀನು ದಾನವಸ್ತ್ರೀಯೆ? ಕಿನ್ನರಿಯೆ? ಗಂಧರ್ವ ಸ್ತ್ರೀಯೆ? ವನದೇವತೆಯೇ? ಅಪ್ಸರಸಿಯೇ? ನಾಗಕನ್ಯಕೆಯೇ? ಇಪ್ಪ ತ್ತೇಳು ತಾರೆಗಳಲ್ಲಿ ನೀನೊಬ್ಬಳೇ? ನೀನು ಯಾರೆಂಬುದನ್ನು ತಿಳಿಸು. ಅಥವಾ ನೀನು ಅಲಂಬುಸೆಯೇ? ಮಿಶ್ರಕೇಶಿಯೇ? ಪುಂಡರೀಕೆಯೇ? ಮಾಲಿನಿಯೇ? ಯಾರೆಂಬುದನ್ನು ಹೇಳು. ಶುಭಲಕ್ಷಣಗಳಿಂದ ಕೂಡಿದ

ಕಾಶ್ಮೀರದೇಶದ ಹೆಣ್ಣುಕುದುರೆಯಂತೆ ತೋರುವ ನೀನು ಯಾರು? ನೀನೇನು ಇಂದ್ರಪತ್ನಿಯೋ? ರುದ್ರಪತ್ನಿಯೋ? ಸ್ವಧಾದೇವಿಯೋ? ಅಥವಾ ಮನ್ಮಥಪತ್ನಿಯಾದ ರತಿಯೋ? ದೇವತೆಗಳಲ್ಲಿ ಎಣೆಯಿಲ್ಲದ ಪ್ರಖ್ಯಾತಿಹೊಂದಿದ ಸ್ತ್ರೀಯರಲ್ಲಿ ನೀನು ಯಾರು? ಇಲ್ಲಿಗೇಕೆ ಬಂದೆ? ನಿನ್ನ ರೂಪವು ಆಭರಣಗಳಿಂದೂ ಇಲ್ಲದೆಯೇ ಶೋಭಿಸುತ್ತಿರುವುದು. ಲೋಕ ಕರ್ತನಾದ ಬ್ರಹ್ಮನು ನಿನ್ನ ರೂಪವನ್ನು ಸೃಷ್ಟಿಸಿದಮೇಲೆ ತೃಪ್ತನಾಗಿ, ಬೇರೆ ಸ್ತ್ರೀರೂಪದ ಸೃಷ್ಟಿಕಾರ್ಯದಿಂದ ನಿವೃತ್ತನಾಗಿರಬೇಕೆಂದು ನನಗೆ ತೋರುವುದು. ಸ್ತ್ರೀಯರಿಗಾದರೂ ಕೂಡ ನಿನ್ನ ರೂಪವನ್ನು ನೋಡಿ ತೃಪ್ತಿಯಿರದು. ಇನ್ನು ಪುರುಷರಿಗೆ ಹೇಳಬೇಕಾದುದೇನು? ಸುತ್ತಲೂ ಚಿಗುರುಗಳಿಂದಲೂ, ಹೂಗಳಿಂದಲೂ, ಹೂಗೊಂಚಲುಗಳಿಂದಲೂ ಅವರಿಸಲ್ಪಟ್ಟ ವನದೇವತೆಗಳಾದರೂ, ನಿನ್ನನ್ನು ಕಂಡಾಗ, ನಿನ್ನ ರೂಪಸಂಪತ್ತಿಗೆ ಮರುಳಾಗಿ, ನಟ್ಟ ಕಣ್ಣುಗಳಿಂದ ನಿನ್ನನ್ನೇ ನೋಡುತ್ತಿರುವರು. ನಮ್ಮ ಅಂತಃಪುರದ ಸ್ತ್ರೀಯರಲ್ಲದೆ, ಇಲ್ಲಿನ ಮೃಗಪಕ್ಷಿಗಳು ಮೊದಲಾದ ಪ್ರಾಣಿವರ್ಗಗಳಿಲ್ಲವೂ ಕೂಡ ಆಶ್ಚರ್ಯದಿಂದ ನಿನ್ನನ್ನು ನೋಡುತ್ತಿರುವುವು. ನಿನ್ನಂತಹ ಸುಂದರಾಂಗಿಯನ್ನು ಮೂರು ಲೋಕಗಳಲ್ಲಿಯೂ ಇದುವರೆಗೆ ನಾವು ಕಂಡುದೂ ಇಲ್ಲ! ಕೇಳಿಯೂ ಇಲ್ಲ! ನಿನ್ನ ಕಣ್ಣಿನಿಂದಲೇ ನಿನ್ನ ಶುಭಾಕಾರವು ವ್ಯಕ್ತವಾಗುತ್ತಿರುವುದು. ನೀನು ಯಾರೆಂಬುದನ್ನು ತಿಳಿಸು'' ಎಂದು ಕೇಳಿದಳು.

ಅದಕ್ಕಾ ದ್ರೌಪದಿಯು ಸುಧೇಷ್ಣೆಯನ್ನು ಕುರಿತು ''ದೇವಿ! ನಾನು ಗಂಧರ್ವಸ್ತ್ರೀಯೂ ಅಲ್ಲ! ಯಕ್ಷಿಯೂ ಅಲ್ಲ! ಕಿನ್ನರಿಯೂ ಅಲ್ಲ! ನಾನು ಸಾಮಾನ್ಯಳಾದ ಒಬ್ಬ ಸೈರಂಧ್ರಿ. ಕಾಡಿನಲ್ಲಿ ಸಿಕ್ಕಿದ ಹಣ್ಣು ಗಡ್ಡೆಗಳನ್ನು ತಿಂದು ಜೀವಿಸತಕ್ಕವಳು. ನನ್ನ ಪತಿಗಳ ಕಣ್ಣಿಗೆ ಬೀರೊಬ್ಬ ಪುರುಷನು ಯಾವುದೋ ಒಂದು ಕಾರಣಕ್ಕಾಗಿ, ನನ್ನ ತುರುಬಿಗೆ ಕೈಯಿಟ್ಟುದರಿಂದ, ನಾನು ಭಯಪಟ್ಟು ಕಾಡಿಗೆ ಹೊರಟುಹೋದೆನು. ನನಗೆ ಮನೆಮಠಗಳೊಂದೂ ಇಲ್ಲ. ಕಳೆದ ಹನ್ನೆರಡು ವರ್ಷಗಳಿಂದ ಕಾಡಿನಲ್ಲಿಯೇ ಅಲೆದಾಡುತ್ತ, ಅಲ್ಲಿ ಸಿಕ್ಕಿದ ಹಣ್ಣು ಗಡ್ಡೆಗಳನ್ನೇ ತಿಂದು ಜೀವಿ

ಸುತ್ತಿದ್ದೆನು. ಈಗ ನಿನ್ನಲ್ಲಿಗೆ ಬಂದು ಸೇರಿದೆನು. ನಾನು ಚೆನ್ನಾಗಿ ಜಡೆ ಹಾಕಬಲ್ಲೆನು. ವಿಚಿತ್ರಗಳಾದ ಮಣಿಗಳನ್ನು ಕಟ್ಟಬಲ್ಲೆನು. ಮಲ್ಲಿಗೆ, ತಾವರೆ, ನೈದಿಲೆ ಮುಂತಾದ ಹೂಗಳಿಂದ ಮಾಲೆಯನ್ನು ಕಟ್ಟಬಲ್ಲೆನು. ಕಸ್ತೂರಿಯಿಂದಲೂ, ಸಾದುವಿನಿಂದಲೂ ಮಕರಿಕಾಪತ್ರಗಳನ್ನು ಬರೆಯುವೆನು. ಒಳ್ಳೆಯ ಗಂಧವನ್ನರೆಯುವುದು, ವಿಚಿತ್ರವಾದ ಮಾಲೆಯನ್ನು ಕಟ್ಟುವುದು, ಈ ೫ಕಾರ್ಯಗಳಲ್ಲಿ ನನಗೆ ನೈಪುಣ್ಯವುಂಟು. ನಾನು ಇದಕ್ಕೆ ಮೊದಲು ಶ್ರೀಕೃಷ್ಣನ ಪ್ರಿಯಪತ್ನಿಯಾದ ಸತ್ಯಭಾಮೆಯಲ್ಲಿಯೂ, ಪಾಂಡವಪತ್ನಿಯಾದ ದ್ರೌಪದಿಯಲ್ಲಿಯೂ ಕೆಲಸಮಾಡಿ, ಅವರನ್ನು ಸಂತೋಷಗೊಳಿಸಿರುವೆನು. ದ್ರೌಪದಿಯು ನನ್ನ ಕಾರ್ಯಕ್ಕೆ ಮೆಚ್ಚಿ ನನಗೆ ಬೇಕಾದ ವಸ್ತುಗಳನ್ನು ಕೊಟ್ಟು ಸಂತೋಷಗೊಳಿಸುತ್ತಿದ್ದಳು. ಆ ದ್ರೌಪದಿಯೇ ತಾನಾಗಿ ನನಗೆ "ಮಾಲಿನಿ" ಯೆಂಬ ಹೆಸರನ್ನಿಟ್ಟಳು. ಕಮಲದಳಾಯತಾಕ್ಷಿಯಾದ ಆಕೆಯು ನನಗೆ ಪ್ರಾಣಸಖಿ. ನಾನು ಈಗ ನಿನ್ನಲ್ಲಿ ಕೆಲಸವನ್ನು ಕೋರಿ ಬಂದವಳಾದರೂ, ಬಹುಕಾಲದವರೆಗೆ ಒಂದೇ ಕಡೆಯಲ್ಲಿ ಸ್ಥಿರವಾಗಿ ನಿಲ್ಲಲಾರೆನು. ಇದು ನನ್ನ ವ್ರತವು. ಹಾಗಿರಬೇಕಾದುದೇ ನನ್ನ ಕುಲಧರ್ಮವು. ದೇವಿ! ನಮ್ಮ ಧನವನ್ನಾಗಲಿ, ದೇಶವನ್ನಾಗಲಿ, ಮೈನೆರೆಲಿನ ಬಟ್ಟೆಯನ್ನಾಗಲಿ ಯಾವನಾದರೂ ಕಿತ್ತುಕೊಂಡರೂ ನಾವು ಕೋಪಿಸಬಾರದು! ಏಕೆಂದರೆ, ನಮ್ಮ ಗುರುವು ಅಂತಹ (ಕೋಪ) ಸ್ವಭಾವವನ್ನು ಸಹಿಸಲಾರನು. ಆದುದರಿಂದ ಅದೇ ಸ್ವಭಾವವುಳ್ಳ ನಾನು ಆ ಪತಿಯನ್ನು ಕುರಿತ ದುಃಖದಿಂದ ಬೆಂದ ಮೈಯುಳ್ಳವಳಾಗಿ, ಪತಿಗೆ ಸಮಾನವಾದ ವ್ರತವನ್ನೇ ಹಿಡಿದು, ಕಾಡುಗಳನ್ನೂ, ದುರ್ಗಗಳನ್ನೂ, ಪುಣ್ಯತೀರ್ಥಗಳನ್ನೂ, ಸರೋವರಗಳನ್ನೂ, ರಮ್ಯವಾದ ಹಲವು ಪರ್ವತಪ್ರಾಂತಗಳನ್ನೂ, ಸಮುದ್ರಗಾಮಿಗಳಾದ ನದಿಗಳನ್ನೂ, ದುರ್ಗಮವಾದ ಭೂಭಾಗಗಳನ್ನೂ ಸುತ್ತುತ್ತ, ಸಂಜೆಯಾದ ಕಡೆಯಲ್ಲ ತಂಗುವೆನು. ನನ್ನ ಪತಿಗಳು ದೇಶಸಂಚಾರಮಾಡುತ್ತಿರುವಾಗ, ವೀರಪತ್ನಿಯಾದ ನಾನು ದೈವವಶದಿಂದ ನನ್ನ ಮಕ್ಕಳಿಂದ ಅಗಲಿಸಲ್ಪಟ್ಟು, ಗಂಧಮಾಧನಪರ್ವತಕ್ಕೆ ಹೋದೆನು. ಅಮ್ಮಾ! ಅಲ್ಲಿ ನಿನ್ನ ಮತ್ತು ನಿನ್ನ ಪತಿಯ ಗುಣಾತಿಶಯಗಳು ನನ್ನ ಕಿವಿಗೆ ಬಿದ್ದುವು. ಅಲ್ಲಿದ್ದ ಬ್ರಾಹ್ಮಣರಮೂಲಕವಾಗಿ ನಿಮ್ಮ ಮಹಿಮೆಯನ್ನು ಕೇಳಿ, ಅಲ್ಲಿಂದಲೇ ನೆಟ್ಟ

ಗೆ ಇಲ್ಲಿಗೆ ಬಂದೆನು. ನಿನ್ನ ಸೇವೆಯಲ್ಲಿರಬೇಕೆಂಬುದು ನನ್ನ ಕೋರಿಕೆ! ಯಮಧರ್ಮರಾಜನೂ, ವಾಯುವೂ, ಇಂದ್ರನೂ, ಇಬ್ಬರು ಅಶ್ವಿನೀದೇವತೆಗಳೂ ನನ್ನ ಗುರುಗಳು. ಅವರ ಅನುಗ್ರಹಬಲದಿಂದ ಲೋಕದಲ್ಲಿ ಬೇರೆ ಯಾವ ಪುರುಷನೂ ನನ್ನನ್ನು ಅವಮಾನಿಸಲು ಶಕ್ತನಾಗಲಾರನು'' ಎಂದು ಹೇಳಿ, ದ್ರೌಪದಿಯು ಸುದೇಷ್ಣೆಯ ಮುಂದೆ ಕೈ ಜೋಡಿಸಿ ನಿಂತಿದ್ದಳು. ಆಗ ಸುದೇಷ್ಣೆಯು ನಾರೀಶಿರೋಮಣಿಯಾದ ದ್ರೌಪದಿಯನ್ನು ನೋಡಿ ಆಶ್ಚರ್ಯಪರವಶಳಾಗಿ, ಆಕೆಯನ್ನು ಕುರಿತು "ಭದ್ರೆ! ನಾನು ನಿನ್ನನ್ನು ನನ್ನಲ್ಲಿಟ್ಟುಕೊಂಡು ಪೋಷಿಸಲಾರೆನು. ರಾಜನು ನಿನ್ನನ್ನು ನೋಡಿದಪಕ್ಷದಲ್ಲಿ, ಖಂಡಿತವಾಗಿಯೂ ನಿನ್ನ ರೂಪಕ್ಕೆ ಮರುಳಾಗಿ, ಪಾಪಬುದ್ಧಿಯನ್ನು ಮಾಡುವನೆಂದು ನನಗೆ ದೊಡ್ಡ ಸಂದೇಹವುಂಟಾಗಿದೆ. ಆದುದರಿಂದ, ನನ್ನ ಅಂತಃಪುರದಲ್ಲಿರುವುದಕ್ಕೆ ನೀನು ತಕ್ಕವಳಲ್ಲವೆಂದು ನನಗೆ ತೋರಿದೆ. ಎಲೆ ಸುಶ್ರೋಣಿ! ನಿನ್ನನ್ನು ಅಂಗೀಕರಿಸುವುದರಲ್ಲಿ ಇಂತಹ ದೋಷವಿದೆ. ಇದರಮೇಲೆ ನಿನ್ನ ಅಭಿಪ್ರಾಯವೇನು ಹೇಳು! ಅರಮನೆಯಲ್ಲಿ, ಮತ್ತು ನನ್ನ ರಾಣಿವಾಸದಲ್ಲಿರತಕ್ಕ ಎಲ್ಲಾ ಸ್ತ್ರೀಯರೂ ನಿನ್ನೊಬ್ಬಳನ್ನೇ ಆತ್ಯಾಶ್ಚರ್ಯದಿಂದ ನೋಡುತ್ತಿರುವರು. ಅಷ್ಟೇಕೆ? ಈ ನಮ್ಮ ಮನೆಯ ಸಮೀಪದಲ್ಲಿರುವ ವೃಕ್ಷಗಳೂ ಕೂಡ ನಿನ್ನನ್ನು ನೋಡಿ ಮರುಳಾದಂತೆ ತಲೆಬಗ್ಗಿಸುತ್ತಿರುವುವು. ಹೀಗಿರುವಾಗ ನಿನ್ನ ರೂಪವು ಯಾವ ಪುರುಷನನ್ನು ತಾನೇ ಮೋಹಗೊಳಿಸದಿರುವುದು? ನಿನ್ನ ರೂಪವು ಅತಿಮಾನುಷವಾದುದು! ಆಶ್ಚರ್ಯಕರವಾದುದು! ತಿರ್ಯಗ್ಜಂತುಗಳು ಕೂಡ ಆಶ್ಚರ್ಯಪಡುವಂತಿರುವ ನಿನ್ನ ರೂಪಕ್ಕೆ ಲೋಕದ ಮನುಷ್ಯರು ಮರಳಾಗುವುದೇನಾಶ್ಚರ್ಯವು? ಎಲೆ ಸುಂದರಾಂಗಿ! ದಿವ್ಯವಾದ ಈ ನಿನ್ನ ದೇಹಸೌಂದರ್ಯವನ್ನು ನೋಡಿದೊಡನೆ ನನ್ನ ಪತಿಯು ನನ್ನನ್ನು ದೃಷ್ಟಿಸಿ ಪೂರ್ಣಮನಸ್ಸಿನಿಂದ ನಿನ್ನನ್ನೇ ಬಯಸುವನು. ಓ ವಿಶಾಲಾಕ್ಷಿ! ಯಾವ ಮನುಷ್ಯನನ್ನು ನೀನು ಸ್ವಲ್ಪ ಪ್ರಸನ್ನದೃಷ್ಟಿಯಿಂದ ನೋಡುವೆಯೋ, ಅವನು ಕಾಮವಶನಾಗುವುದೇ ನಿಶ್ಚಯವು. ನೀನು ಮಂಗಳಸ್ನಾನವನ್ನು ಮಾಡಿ, ಅಲಂಕಾರಗಳನ್ನು ಧರಿಸಿ, ಯಾವನನ್ನು ನೋಡುವೆಯೋ, ಅವನಿಗೆ ಬೇಸರವಾಗಲಿ, ದುಃಖವಾಗಲಿ, ಆಲಸ್ಯವಾಗಲಿ, ಪರ್ಯಾ

ಜಯವಾಗಲಿ, ಕಳವಳವಾಗಲಿ, ಕೋಪತಾಪಗಳಾಗಲಿ ಎಲ್ಲವೂ ಬಿಟ್ಟು ಹೋಗುವುವು. ಇದು ಸುಳ್ಳಲ್ಲ. ಎಲೆ ಭದ್ರೆ! ನೀನು ಚೆನ್ನಾಗಿ ಅಲಂಕರಿಸಿಕೊಂಡು ಯಾವ ಮನುಷ್ಯನನ್ನು ಸೇವಿಸುವೆಯೋ, ಅವನಿಗೆ ಮುಪ್ಪು, ರೋಗ, ಹಸಿವು, ಬಾಯಾರಿಕೆ ಇವೊಂದೂ ಉಂಟಾಗಲಾರದು. ನೀನು ನಿನ್ನ ಎರಡು ತೋಳುಗಳಿಂದ ಯಾವನನ್ನು ಒಂದಾವರ್ತಿ ಬಿಗಿದಪ್ಪುವೆಯೋ, ಅವನು ಸತ್ತವನಾದರೂ ಬದುಕುವನೆಂದೇ ನನ್ನ ಮತವು. ನೀನು ಯಾವನ ಭಾರ್ಯೆಯಾಗಿ ಯಾವನನ್ನು ಆಲಂಗಿಸುವೆಯೋ, ಅಂತಹ ಭಾಗ್ಯಶಾಲಿಯು, ಸರ್ವದೇವತೆಗಳಲ್ಲಿ ದೇವೇಂದ್ರನು ಹೇಗೋ ಹಾಗೆ ಮೇಲೆನಿಸಿಕೊಳ್ಳುವನು. ಎಲೆ ಭದ್ರೆ! ನಿನ್ನನ್ನು ನಾನು ರಾಜಗೃಹದಲ್ಲಿಟ್ಟುಕೊಂಡರೆ, ಮರವನ್ನೇರಿ ಕುಳಿತು ಅದರ ಬುಡವನ್ನು ಕಡಿಯುವ ಮನುಷ್ಯನ ಗತಿಯೇ ನನಗೆ ಬರುವುದು. ಏಡಿಯ ಹೊಟ್ಟೆಯಲ್ಲಿ ಬೆಳೆದ ಗರ್ಭವು ಅದಕ್ಕೇ ಮೃತ್ಯುವಾಗುವಂತೆ, ನಿನ್ನನ್ನು ನನ್ನಲ್ಲಿ ಸೇರಿಸಿಕೊಳ್ಳುವುದು ನನಗೇ ಮೃತ್ಯುಕಾರಣವೆಂದೂ ಭಾವಿಸುವೆನು. ಓ ಸ್ಥೈರಂಧ್ರಿ! ಈಗ ನಾನು ನಿನ್ನನ್ನು ನಿರಾಕರಿಸುವುದರಿಂದ ನಿನ್ನನ್ನು ಅವಮಾನಪಡಿಸಿದೆನೆಂದು ತಿಳಿಯಬೇಡ. ನಿನ್ನನ್ನು ಪ್ರಾರ್ಥಿಸಿ ಕೇಳಿಕೊಳ್ಳುವೆನು. ನನ್ನ ಪತಿಯ ಶೀಲದಲ್ಲಿ ನನಗಿರುವ ಭಯದಿಂದಲೇ, ನಿನ್ನನ್ನು ಸಮೀಪದಲ್ಲಿಟ್ಟುಕೊಳ್ಳುವುದಕ್ಕೆ ನನಗೆ ಸಮ್ಮತವಿಲ್ಲ'' ಎಂದಳು.

ಆಗ ದ್ರೌಪದಿಯು ''ದೇವೀ! ನನ್ನನ್ನು ನಿನ್ನ ಪತಿಯಾದ ವಿರಾಟರಾಜನಾಗಲಿ, ಬೇರೊಬ್ಬ ಮನುಷ್ಯನಾಗಲಿ, ಕೊನೆಗೆ ದೇವ ಗಂಧರ್ವ ಯಕ್ಷರಲ್ಲಿ ಯಾರೇ ಆಗಲಿ ಪಾಪಬುದ್ಧಿಯಿಂದ ಕಣ್ಣೆತ್ತಿ ನೋಡುವುದಕ್ಕೂ ಶಕ್ತರಲ್ಲವೆಂದು ತಿಳಿ. ಸತ್ಕುಲಪ್ರಸೂತರೂ, ಸುವ್ರತರೂ, ದೇವಾಂಶದಿಂದ ಹುಟ್ಟಿದವರೂ, ಸೂರ್ಯಾಗ್ನಿಗಳಿಗೆ ಸಮಾನತೇಜಸ್ಸುಳ್ಳವರೂ ಆದ ಐದು ಮಂದಿ ಗಂಧರ್ವರು ನನ್ನನ್ನು ಸದಾ ರಕ್ಷಿಸುತ್ತಿರುವರು. ದುಶ್ಶೀಲನಾದ ಯಾವನಾದರೂ ಒಬ್ಬನು ಪಾಪಬುದ್ಧಿಯಿಂದ ನನ್ನನ್ನು ಮುಟ್ಟಿದರೆ, ಆ ರಾತ್ರಿಯೇ ಅವನು ಒನಕೆಗಳ ಪೆಟ್ಟಿನಿಂದ ಹತನಾಗಿ ಸಾಯುವನು. ಪಾಪಬುದ್ಧಿಯಿಂದ ನನ್ನನ್ನು ಯಾವನಾದರೂ ಮಾತಾಡಿಸುವುದಕ್ಕೆ ಬಂದರೂ

ಕೂಡ, ಅವನಿಗೆ ನೂರಾರುಮಂದಿ ನಂಟರಿದ್ದರೂ, ಸಾವಿರಬಂಧುಗಳಿದ್ದರೂ ಸಾವಿರಾರು ಕೋಟಿ ಬಂಧುಮಿತ್ರಸಹಾಯಕರಿದ್ದರೂ, ಅವನು ನಿನ್ನ ಕಣ್ಣೆದಿರಾಗಿಯೇ ಸಾಯುವುದನ್ನು ನೀನು ನೋಡುವೆ. ಅಂತವನನ್ನು ದೇವ ದಾನವ ಪನ್ನಗರಲ್ಲಿ ಯಾರೇ ಆದರೂ ನನ್ನ ಪತಿಗಳಾದ ಗಂಧರ್ವರಾಜರಿಂದ ತಪ್ಪಿಸಿ ಕಾಪಾಡಲಾರರು. ಇದಕ್ಕೆ ಸಂದೇಹವಿಲ್ಲ. ಓ ಸುದೇಷ್ಣೆ! ನನ್ನ ಮಾತಿನಲ್ಲಿ ನಂಬಿಕೆಯನ್ನಿಡು. ನಿನ್ನ ಸ್ವಂತ ಜನದಲ್ಲಿಯಾಗಲಿ, ಬಂಧುಜನದಲ್ಲಿಯಾಗಲಿ ನನ್ನನ್ನು ಯಾರೂ ಕಣ್ಣೆತ್ತಿ ನೋಡುವುದಕ್ಕೆ ಶಕ್ತರಲ್ಲ. ನನ್ನ ನಡತೆಯೂ ಅಂತದಲ್ಲ. ಯಾವನು ನನಗೆ ತನ್ನ ಎಂಜಲನ್ನು ಕೊಡುವುದಕ್ಕಾಗಲಿ, ನನ್ನಿಂದ ತನ್ನ ಕಾಲುಗಳನ್ನು ತೊಳೆಸುವುದಕ್ಕಾಗಲಿ ಆಶೆಪಡುವುದಿಲ್ಲವೋ, ಅಂತವನ ಸಮೀಪದಲ್ಲಿ ನಾನಿದ್ದರೆಮಾತ್ರ ನನ್ನ ಪತಿಗಳಾದ ಗಂಧರ್ವರು ಅದನ್ನೊಪ್ಪುವರು. ಬೇರೆ ಸಾಮಾನ್ಯವಾದ ಪ್ರಾಕೃತಸ್ತ್ರೀಯರನ್ನು ಹೇಗೋ ಹಾಗೆ ನನ್ನನ್ನು ಯಾವ ಪುರುಷನು ಕೈಯಿಂದ ಮುಟ್ಟುವನೋ, ಅವನಿಗೆ ಆ ರಾತ್ರಿಯೇ ಈ ಶರೀರವು ಹೋಗಿ ಅವನು ಬೇರೆ ಶರೀರದಲ್ಲಿ ಪ್ರವೇಶಿಸಬೇಕಾಗುವುದೆಂದು ತಿಳಿ. ಅಂಗನಾಮಣಿ! ನನ್ನನ್ನು ನನ್ನ ಪಾತಿವ್ರತ್ಯದಿಂದ ತಪ್ಪಿಸುವುದಕ್ಕೆ ಯಾರಿಗೂ ಸಾಧ್ಯವಲ್ಲ. ದುಷ್ಟನಿಗ್ರಹಸಮರ್ಥರಾದ ಐದು ಮಂದಿ ಗಂಧರ್ವರು ನನಗೆ ಪತಿಗಳು. ಅವರಿಂದ ರಕ್ಷಿತಳಾದ ನಾನು ನಿನ್ನಲ್ಲಿದ್ದರೂ ನಿನಗೆ ಯಾವ ಭಯಕ್ಕೂ ಅವಕಾಶವಿಲ್ಲ'' ಎಂದಳು.

ಆಗ ಸುದೇಷ್ಣೆಯು ಸೈರಂಧ್ರಿಯನ್ನು ಕುರಿತು ''ಎಲೆ ಭದ್ರೆ! ನಿನ್ನ ಶೀಲವು ಈ ವಿಧವಾಗಿದ್ದಪಕ್ಷದಲ್ಲಿ ನೀನು ನನ್ನಲ್ಲಿರಬಹುದು. ಇಂತಹ ಶೀಲವತಿಯಾದ ನಿನಗೆ ಯಾವನುತಾನೇ ತನ್ನ ಎಂಜಲನ್ನು ಕೊಡುವನು! ವಿವೇಕಿಯಾದ ಯಾವನುತಾನೇ ಲಕ್ಷ್ಮೀದೇವಿಯಂತಿರುವ ನಿನ್ನ ಕಡೆಗೆ ಕಾಲನ್ನು ನೀಡಬಲ್ಲನು! ಇಂತಹ ಸದಾಚಾರಸಂಪನ್ನೆಯಾಗಿ, ದೇವತೆಗಳ ರಕ್ಷಣೆಯಲ್ಲಿರುವ ನಿನ್ನನ್ನು ಸಮಸ್ತ ಪ್ರಾಣಿಗಳೂ ಕೂಡ, ಬ್ರಾಹ್ಮಣರು ಸಾವಿತ್ರಿಯನ್ನು ಹೇಗೋ ಹಾಗೆ ಗೌರವದಿಂದ ರಕ್ಷಿಸಬೇಕಾಗಿದೆ. ದೇವತೆಯಂತೆ ಪೂಜ್ಯಳಾಗಿ, ಉತ್ತಮ ತೇಜಸ್ಸಿನಿಂದ ಕೂಡಿದ ನೀನು ನನ್ನಲ್ಲಿ

ಸಂತೋಷದಿಂದಿರಬಹುದು. ನನಗೆ ನಿನ್ನಲ್ಲಿ ಅಸಾಧಾರಣಪ್ರೀತಿಯುಂಟಾಗಿದೆ. ಇಲ್ಲಿ ನಿನಗೆ ಬೇಕಾದ ಅಭೀಷ್ಟಗಳನ್ನು ಪಡೆಯುತ್ತ, ನಿಶ್ಚಿಂತೆಯಾಗಿ ವಾಸಮಾಡುತ್ತಿರು" ಎಂದಳು. ಸುದೇಷ್ಣೆಯ ಈ ಮಾತನ್ನು ಕೇಳಿದಮೇಲೆ ದ್ರೌಪದಿಯು ಸಂತೋಷದಿಂದ ನಗುಮುಖವುಳ್ಳವಳಾಗಿ, ಮನಸ್ಸಿನಲ್ಲಿ ಶಂಕೆಯನ್ನು ಬಿಟ್ಟು ಅಂತಃಪುರವನ್ನು ಪ್ರವೇಶಿಸಿ ಸುಖದಿಂದಿದ್ದಳು.

ಓ ಜನಮೇಜಯರಾಜನೆ! ಅನೇಕ ಪರಿಚಾರಕಿಯರಿಂದ ಸೇವೆಮಾಡಿಸಿಕೊಳ್ಳತಕ್ಕ ದ್ರೌಪದಿಯು, ಸುದೇಷ್ಣೆಗೆ ಸೇವೆಮಾಡುತ್ತ ಕಷ್ಟದಿಂದ ಕಾಲವನ್ನು ಕಳೆಯುತ್ತಿದ್ದಳು. ಹೀಗೆ ಪಂಚಪಾಂಡವರೂ, ದ್ರೌಪದಿಯೂ ಬೂದಿಮುಚ್ಚಿದ ಕೆಂಡದಂತೆ ತಮ್ಮ ತೇಜಸ್ಸನ್ನು ಮರೆಸಿಕೊಂಡು, ವಿರಾಟನಗರದಲ್ಲಿ ಸೇರಿ ತಾಳ್ಮೆಯಿಂದ ತಮ್ಮ ಅಜ್ಞಾತವಾಸವನ್ನು ಕಳೆಯತೊಡಗಿದರು.

ಇದು ಹದಿನಾಲ್ಕನೆಯ ಅಧ್ಯಾಯವು.

ಇಲ್ಲಿಗೆ ಪಾಂಡವಪ್ರವೇಶಪರ್ವವು ಸಮಾಪ್ತವು.

ಸಮಯಪಾಲನಪರ್ವವು.

ಪಾಂಡವರು ತಮ್ಮತಮ್ಮ ಕಾರ್ಯಗಳಿಂದ ವಿರಾಟನನ್ನು ಸಂತೋಷಗೊಳಿಸಿದುದು. ಭೀಮನು ಮಹಾಮಲ್ಲನೆಂಬ ಜಟ್ಟಿಯನ್ನು ಕೊಂದುದು.

ಜನಮೇಜಯನು ವೈಶಂಪಾಯನನನ್ನು ಕುರಿತು "ಓ ಮಹರ್ಷೀ! ಸತ್ಯಪರಾಕ್ರಮಿಗಳೂ, ಪುರುಷಶ್ರೇಷ್ಠರೂ ಆದ ಪಾಂಡವರು ವಿರಾಟನಗರದಲ್ಲಿದ್ದಾಗ ನಡೆಸುತ್ತಿದ್ದ ಕಾರ್ಯಕ್ರಮವೇನು?" ಎಂದು ಕೇಳಲು, ವೈಶಂಪಾಯನನು ಆ ರಾಜನನ್ನು ಕುರಿತು "ರಾಜೇಂದ್ರಾ! ಕುರುವಂಶಜರಾದ ಪಾಂಡವರು, ತಮ್ಮ ರೂಪವನ್ನು ಮರೆಸಿಕೊಂಡು, ವಿರಾಟರಾಜನಲ್ಲಿ ಸೇವೆಮಾಡುತ್ತಿದ್ದಾಗ ನಡೆಸಿದ ಕಾರ್ಯಗಳಾವುವೆಂಬುದನ್ನು ತಿಳಿಸುವೆನು

ಕೇಳು. ಯುಧಿಷ್ಠಿರನು ವಿರಾಟಸಭೆಯಲ್ಲಿ ಸಭಾಧ್ಯಕ್ಷನೆನಿಸಿಕೊಂಡು, ಅಲ್ಲಿದ್ದ ಸಮಸ್ತ ಸಭ್ಯರಿಗೂ, ವಿರಾಟರಾಜನಿಗೂ, ಅವನ ಮಕ್ಕಳೆಲ್ಲರಿಗೂ ಪ್ರೀತಿಪಾತ್ರನಾದನು. ಪಗಡೆಯಾಟದ ಮರ್ಮವನ್ನು ಚೆನ್ನಾಗಿ ತಿಳಿದಿದ್ದ ಆ ಧರ್ಮರಾಜನು, ಬಲೆಯಿಂದ ಪಕ್ಷಿಗಳನ್ನು ಹೇಗೋ ಹಾಗೆ, ಎಲ್ಲರನ್ನೂ ತನ್ನ ದ್ಯೂತನೈಪುಣ್ಯದಿಂದ ವಶಪಡಿಸಿಕೊಂಡು, ವಿರಾಟನೇ ಮೊದಲಾದವರನ್ನು ತನ್ನೊಡನೆ ಆಗಾಗ ಆಟವಾಡುವಹಾಗೆ ಮಾಡಿಕೊಂಡನು. ಮತ್ತು ಈ ಜೂಜಾಟದಲ್ಲಿ ಅವರವರಿಂದ ಸಮೃದ್ಧವಾಗಿ ಹಣವನ್ನು ಗೆದ್ದು, ವಿರಾಟನಿಗೆ ತಿಳಿಯದಂತೆ ತನ್ನ ತಮ್ಮಂದಿರಿಗೆ ಅದನ್ನು ಯಥೇಷ್ಟವಾಗಿ ಹಂಚಿಕೊಡುತ್ತಿದ್ದನು. ಭೀಮಸೇನನಾದರೋ ಮಾಂಸಪದಾರ್ಥಗಳನ್ನೂ, ನಾನಾತರದ ಭಕ್ಷ್ಯಗಳನ್ನೂ ತಯಾರಿಸಿ, ವಿರಾಟನಿಗೆ ಬಡಿಸುತ್ತ, ಆ ರಾಜನು ಮಿಗಿಸಿಬಿಟ್ಟ ಆಹಾರವಸ್ತುಗಳನ್ನೆಲ್ಲ ವಿಕ್ರಯಿಸುವಂತೆ ನಟಿಸಿ, ಅವುಗಳನ್ನು ತನ್ನ ಸಹೋದರರೆಲ್ಲರಿಗೂ ಹಂಚುತ್ತಿದ್ದನು. ಅರ್ಜುನನು ಅಂತಃಪುರದಲ್ಲಿದ್ದುಕೊಂಡು, ಅಲ್ಲಿ ರಾಜಸ್ತ್ರೀಯರಿಂದ ತನಗೆ ಲಭಿಸಿದ ಹಳೆಯ ವಸ್ತ್ರಗಳನ್ನೆಲ್ಲ ವಿಕ್ರಯಮಾಡುವ ನೆವದಿಂದ ಅವುಗಳನ್ನು ತನ್ನ ಸಹೋದರರಿಗೆ ಕೊಡುತ್ತಿದ್ದನು. ನಕುಲನು ಕುದುರೆಗಳ ಚಿಕಿತ್ಸಾದಿ ಕಾರ್ಯಗಳಲ್ಲಿ ತನಗಿರುವ ನೈಪುಣ್ಯದಿಂದ ರಾಜನನ್ನು ಮೆಚ್ಚಿಸಿ, ಆಗಾಗ ಅವನಿಂದ ಪಾರಿತೋಷಿಕವಾಗಿ ತಾನು ಪಡೆದ ಧನವನ್ನೆಲ್ಲ ತನ್ನ ಇತರ ಸಹೋದರರಿಗೆ ಕೊಡುತ್ತಿದ್ದನು. ಸಹದೇವನು ಗೊಲ್ಲರವೇಷದಿಂದ ವಿರಾಟನ ಗೋಶಾಲೆಯಲ್ಲಿದ್ದುಕೊಂಡು, ಅಲ್ಲಿ ಹಾಲು, ತುಪ್ಪ, ಮೊಸರು, ಬೆಣ್ಣೆ ಮುಂತಾದುವುಗಳನ್ನೆಲ್ಲ ಸಂಗ್ರಹಿಸಿ, ತನ್ನ ಸಹೋದರರಿಗೆ ಕೊಡುತ್ತಿದ್ದನು. ಸೈರಂಧ್ರಿಯಾಗಿದ್ದ ದ್ರೌಪದಿಯಾದರೋ, ತಾನು ಕಷ್ಟದಶೆಯಲ್ಲಿದ್ದರೂ, ತನ್ನ ಪತಿಗಳಾದ ಆ ಪಾಂಡವಸಹೋದರರೈವರನ್ನೂ ತಾನು ಆಗಾಗ ಕಣ್ಣಾರೆ ನೋಡಿ, ಮನಸ್ಸಿಗೆ ಸಮಾಧಾನ ತಂದುಕೊಳ್ಳುತ್ತಾ, ಬೇರೊಬ್ಬರಿಗೆ ತನ್ನ ನಿಜಸ್ಥಿತಿಯು ತಿಳಿಯದಂತೆ ನಡೆದುಕೊಳ್ಳುತ್ತಿದ್ದಳು. ಹೀಗೆ ಆ ಪಾಂಡವರೈವರೂ ತಮ್ಮ ಪತ್ನಿಯೊಡನೆ, ಒಬ್ಬರಿಗೊಬ್ಬರು ತಮ್ಮಿಂದಾದಷ್ಟು ಉಪಕರಿಸುತ್ತ, ಗರ್ಭವಾಸದಲ್ಲಿರುವಂತೆ ಬಹಳ ಕಷ್ಟದಿಂದ ವಿರಾಟನಗರದಲ್ಲಿ ವಾಸಿಸುತ್ತಿದ್ದರು. ಆದರೆ, ಅನವರತವೂ ಆ

ಪಾಂಡವರಿಗೆ ಮನಸ್ಸಿನಲ್ಲಿ ದುರ್ಯೋಧನನ ಭಯವು ಮಾತ್ರ ಬಿಡಲಿಲ್ಲ. ಆ ಭಯದಿಂದ ಕೊರಗುತ್ತ, ದ್ರೌಪದಿಯನ್ನು ಎಚ್ಚರಿಕೆಯಿಂದ ನೋಡಿ ಕೊಂಡು ಅಜ್ಞಾತವಾಸದಲ್ಲಿರುತ್ತಿದ್ದರು. ಹೀಗೆ ಮೂರು ತಿಂಗಳು ಕಳೆದ ಮೇಲೆ, ನಾಲ್ಕನೆಯ ತಿಂಗಳಲ್ಲಿ, ಆ ವಿರಾಟನಗರದಲ್ಲಿ ಸರ್ವಜನರಿಗೂ ಉತ್ಸಾಹಕರವಾದ ಶಂಕರನ ಜಾತ್ರೆಯೊಂದು ಆರಂಭಿಸಿತು. ಆ ಮಹೋತ್ಸವದಲ್ಲಿ ಜಟ್ಟಿಕಾಳಗವು ನಡೆಯುವುದುಂಟು. ಇದಕ್ಕಾಗಿ ನಾನಾದಿಕ್ಕುಗಳಿಂದ ಮಹಾಬಲಾಢ್ಯರಾದ ಜಟ್ಟಿಗಳು ಸಾವಿರಾರು ಸಂಖ್ಯೆಯಿಂದ ವಿರಾಟನಗರಕ್ಕೆ ಬಂದು ಸೇರಿದರು. ಒಬ್ಬೊಬ್ಬರೂ ಬಲವಾದ ಮೈಕಟ್ಟುಳ್ಳವರು! ಕಾಲಕೇಯರೆಂಬ ದೈತ್ಯರಂತೆ ಮಹಾ ಪರಾಕ್ರಮವುಳ್ಳವರು! ಬಲದಿಂದ ಕೊಬ್ಬಿದವರು! ಎಲ್ಲರೂ ರಾಜಸನ್ಮಾನಕ್ಕೆ ಯೋಗ್ಯರಾದವರು. ಸಿಂಹದಂತಿರುವ ಹೆಗಲನ್ನೂ, ನಡುವನ್ನೂ, ಕಂಠವನ್ನೂ ಉಳ್ಳವರು. ಶುದ್ಧಸ್ವಭಾವವುಳ್ಳವರು. ಉದಾರಮನಸ್ಸುಳ್ಳವರು. ಅಲ್ಲದೆ, ಅವರು ಹಿಂದೆ ಅನೇಕಾವರ್ತಿ ರಾಜಸನ್ನಿಧಿಯಲ್ಲಿ ಜಟ್ಟಿಕಾಳಗವನ್ನಾಡಿ ಜಯಹೊಂದಿದ ಮಹಾಶೂರರು. ಈ ಜಟ್ಟಿಗಳಲ್ಲಿ ಎಲ್ಲರಿಗಿಂತಲೂ ಬಲಿಷ್ಠನೂ, ಮತ್ತು ಉನ್ನತಾಕಾರವುಳ್ಳವನೂ ಆದ ಪ್ರಧಾನಮಲ್ಲನೊಬ್ಬನಿದ್ದನು. ಅವನು ಆ ಮಲ್ಲರಂಗದನಡುವೆ ಬಂದು ನಿಂತುಕೊಂಡು, "ತನ್ನೊಡನೆ ಕಾಳಗಕ್ಕೆ ಬರಲು ಇಷ್ಟವುಳ್ಳ ಜಟ್ಟಿಗಳಾರಿದ್ದರೂ ಮುಂದೆ ಬರಬಹು"ದೆಂದು ಕೂಗಿ ಕರೆದನು. ಅವನ ಧೀರಧ್ವನಿ! ಗಂಭೀರವಾದ ನಡೆ! ಅವನು ಆ ರಂಗಸ್ಥಳದಲ್ಲಿ ನಿಂತಿರುವ ಠೀವಿ! ಇವೆಲ್ಲವನ್ನೂ ನೋಡಿ ಅಲ್ಲಿದ್ದ ಬೇರೆ ಜಟ್ಟಿಗಳೆಲ್ಲರೂ ಉತ್ಸಾಹಗುಂದಿ, ಭಯದಿಂದ ತಲೆಯನ್ನು ತಗ್ಗಿಸಿಬಿಟ್ಟರು. ಇವನ ಆಕಾರವನ್ನು ನೋಡಿದೊಡನೆ ಕೆಲವರು ಹಿಂದುಮುಂದುತೋರದೆ ಸ್ತಬ್ಧರಾಗಿ ನಿಂತುಬಿಟ್ಟರು. ಕೆಲವರು ಮುಂದೆ ಬರುವ ಅವಮಾನವನ್ನು ಯೋಚಿಸಿ, ಪ್ರಾಣವನ್ನಾದರೂ ಬಿಡುವುದು ಒಳ್ಳೆಯದೆಂದು ಎಣಿಸಿದರು. ಕೆಲವರು ಭೂಮಿಯೊಳಗೆ ಪ್ರವೇಶಿಸಲೆಳೆಸಿದರು. ಬೇರೆ ಕೆಲವರು ತಮಗೆ ರೆಕ್ಕೆಗಳಿದ್ದರೆ ಆಕಾಶಮಾರ್ಗವಾಗಿ ಹಾರಿ ಅಲ್ಲಿಂದಲೇ ತಲೆತಪ್ಪಿಸಿಕೊಂಡು ಹೋಗಬಹುದೆಂದು ಎಣಿಸಿದರು. ವಿರಾಟನ ಕಡೆಯ ಜಟ್ಟಿಗಳೆಲ್ಲರೂ ಈ ಬಲಿಷ್ಠನ ಆಕೃತಿಯನ್ನೂ, ದೇಹಬಲವನ್ನೂ ನೋಡಿ, ಭಯದಿಂದ ಏನೂ

ತೋರದೆ ಕಣ್ಣು ಕಣ್ಣು ಬಿಡುತ್ತ, ಮುಖದಲ್ಲಿ ಕಳೆಗುಂದಿ, ಕೊಬ್ಬಡಗಿ ಮೌನದಿಂದ ನಿಂತರು. ಆಗ ನಡುವೆ ನಿಂತಿದ್ದ ಮಹಾಮಲ್ಲನು, ಬೇರೆ ಜಟ್ಟಿಗಳೆಲ್ಲರೂ ತನಗೆ ಭಯಪಟ್ಟು ನಿಂತಿರುವುದನ್ನು ನೋಡಿ, ಹೆಮ್ಮೆಯಿಂದ "ಓ ರಾಜಾ! ಕಾಳಗಕ್ಕಾಗಿ ನಿಂತಿರುವ ನಾನು ಯಾರೆಂಬುದನ್ನು ತಿಳಿಸುವೆನು ಕೇಳು. ನಾನು ಈ ಅಖಂಡಭೂಮಂಡಲದಲ್ಲಿರುವ ಸಿಂಹ, ವ್ಯಾಘ್ರ ಸಮೂಹಗಳೊಡನೆ ಆಟವಾಡಿದ ಮಹಾಬಲಶಾಲಿ! ನನ್ನನ್ನು ಮಲ್ಲರಾಜನೆಂದು ಹೇಳುವರು" ಎಂದನು. ಆಗ ವಿರಾಟರಾಜನು ಬಲ ಗರ್ವಿತನಾನ ಆ ಜಟ್ಟಿಯ ಮಾತನ್ನು ಕೇಳಿ, ಅತ್ತಲಾಗಿ ಸುತ್ತಲೂ ಭಯದಿಂದ ನಿಂತಿರುವ ತನ್ನ ಕಡೆಯ ಜಟ್ಟಿಗಳೆಲ್ಲರನ್ನೂ ನೋಡಿ, "ಓ ಜಟ್ಟಿಗಳೇ! ಈತನೊಡನೆ ಹೋರಾಡುವ ಶಕ್ತಿಯುಳ್ಳ ಜಟ್ಟಿಗಳಾರೂ ನಿಮ್ಮಲ್ಲಿಲ್ಲವೇನು?" ಎಂದನು. ಜಟ್ಟಿಗಳಲ್ಲಿ ಯಾರೂ ಪ್ರತ್ಯುತ್ತರವನ್ನು ಕೊಡಲಾರದೆ ಮೌನದಿಂದಿರಲು, ರಾಜನು ಕುಪಿತನಾಗಿ, "ಈ ಜಟ್ಟಿಗಳಿಗೆ ನಾವುಕೊಡುತ್ತಿರುವ ಮಾನ್ಯಗ್ರಾಮಗಳನ್ನೂ, ಇವರಿಗಾಗಿ ಕೊಡುತ್ತಿರುವ ಸಂಬಳಗಳನ್ನೂ ಇನ್ನುಮೇಲೆ ತಪ್ಪಿಸಿಬಿಡಬೇಕು" ಎಂದು ಹೇಳಿದನು. ಆಗ ಸವಿಾಪದಲ್ಲಿದ್ದ ಯುಧಿಷ್ಠಿರನು ವಿರಾಟನನ್ನು ನೋಡಿ, "ಮಹಾರಾಜಾ! ಆತುರಪಡಬೇಡ. ನಮ್ಮಲ್ಲಿ ಇವನೊಡನೆ ಹೋರಾಡಬಲ್ಲ ಬಲಿಷ್ಠನಾದ ಜಟ್ಟಿಯೊಬ್ಬನು ಇರುವಂತಿದೆ. ಹಿಂದೆ ಅವನು ಯುಧಿಷ್ಠಿರನ ಬಳಿಯಲ್ಲಿ ಇದ್ದುದನ್ನು ನಾನು ನೋಡಿದ್ದೆನು. ಆತನೇ ಈಗ ನಮ್ಮ ಅಡಿಗೆಯ ಮನೆಯಲ್ಲಿರುವಂತಿದೆ" ಎಂದನು. ಈ ಮಾತನ್ನು ಕೇಳಿ ವಿರಾಟನು "ಹಾಗಿದ್ದಪಕ್ಷದಲ್ಲಿ ಅವನನ್ನೇ ಇಲ್ಲಿಗೆ ಕರೆಸಿ, ಈ ಜಟ್ಟಿಯೊಡನೆ ಯುದ್ಧಮಾಡುವುದಕ್ಕೆ ನಿಲ್ಲಿಸಿರಿ" ಎಂದು ಎಲ್ಲರಿಗೂ ಕೇಳುವಂತೆ ಹೇಳಿದನು. ಒಡನೆಯೇ ವಿರಾಟನ ಆಜ್ಞೆಯಿಂದ ಆ ಮಲ್ಲರಂಗಕ್ಕೆ ಕರೆಸಲ್ಪಟ್ಟ ಭೀಮಸೇನನು, ಧೈರ್ಯದಿಂದ ವಿರಾಟನ ಮುಂದೆ ಬಂದುನಿಂತು, ರಾಜನನ್ನು ಕುರಿತು "ಓ ರಾಜೇಂದ್ರಾ! ನೀನು ಆಜ್ಞಾಪಿಸಿದಪಕ್ಷದಲ್ಲಿ ಈ ಮಲ್ಲನೊಡನೆ ನಾನು ಹೆಣಗಾಡುವೆನು. ಮಹಾರಾಜಾ! ನಿನ್ನ ಮಹಿಮೆ! ನಿನ್ನ ಐಶ್ವರ್ಯ! ನಿನ್ನ ಶಕ್ತಿ! ನಿನ್ನ ಆಜ್ಞೆ! ಇವುಗಳ ಪ್ರಭಾವದಿಂದಲೇ ನಾನು ಈ ಜಟ್ಟಿಯೊಡನೆ ಹೋರಾಡಲು ಶಕ್ತನಾಗಿರುವೆನು. ನಿನ್ನ ಐಶ್ವರ್ಯಪ್ರಭಾ

ವದಿಂದಲೂ, ಮಹಾದೇವನಲ್ಲಿರುವ ಭಕ್ತಿಯಿಂದಲೂ, ಹಿಂದೆ ಯುಧಿಷ್ಠಿರನಲ್ಲಿದ್ದಾಗ ಅವನಿಂದ ನಾನು ಪಡೆದ ಸನ್ಮಾನಗಳ ನಂಬಿಕೆಯಿಂದಲೂ, ನಾನು ಈ ಜಟ್ಟಿಯನ್ನು ಜಯಿಸಿ, ನೆಲಕ್ಕೆ ಕೆಡಹುವೆನೆಂಬ ಭರವಸೆಯುಂಟು'' ಎಂದನು. ಈ ಮಾತನ್ನು ಕೇಳಿ ಅಲ್ಲಿದ್ದವರೆಲ್ಲರೂ ಮತ್ತಷ್ಟು ಉತ್ಸಾಹಗೊಳಿಸಲು, ಭೀಮನು ತಾನಾಗಿಯೇ ಆ ಮಲ್ಲರಾಜನನ್ನು ರಂಗಮಧ್ಯಕ್ಕೆ ಕರೆಯುತ್ತ, ನೆಲದ ಮಣ್ಣನ್ನು ಎರಡುಕೈಗಳಿಂದಲೂ ತೆಗೆದು ಮೈಗೆ ತೊಡೆದುಕೊಂಡು, ಮದದಾನೆಯಂತೆ ಕಾಳಗಕ್ಕೆ ಸಿದ್ಧನಾಗಿ ನಿಂತನು. ಆಗ ರಾಜನು ಆ ಮಲ್ಲರಾಜನನ್ನು ಕರೆದು, ತನ್ನ ಅಡಿಗೆಯವನಾದ ಆತನೊಡನೆ ಹೋರಾಡುವಂತೆ ಆಜ್ಞೆ ಮಾಡಿದನು. ಆಗ ಭೀಮನು ವಿರಾಟರಾಜನನ್ನು ನೋಡಿ, ರಾಜೇಂದ್ರ ''ನಾನು ಶಕ್ತಿಹೀನನಾಗಿದ್ದರೂ, ನಿನ್ನ ಆಜ್ಞೆಯನ್ನು ಉಲ್ಲಂಘಿಸಬಾರದೆಂಬುದಕ್ಕಾಗಿ ಮುಂದೆಬಂದು ನಿಂತಿರುವೆನು'' ಎಂದು ಕಾಳಗದಲ್ಲಿ ಇಷ್ಟವಿಲ್ಲದವನಂತೆ ನಟಿಸಿದನು. ಆಮೇಲೆ ಪುರುಷಸಿಂಹನಾದ ಆ ಭೀಮನು, ಹುಲಿಯಂತೆ ಸರಿಯುತ್ತ, ವಿರಾಟನ ಮನಸ್ಸಿಗೆ ಸಂತೋಷಹುಟ್ಟುವಂತೆ ರಂಗಮಧ್ಯಕ್ಕೆ ಪ್ರವೇಶಿಸಿದನು. ಅಲ್ಲಿದ್ದ ಜನರೆಲ್ಲರೂ ಕುತೂಹಲದಿಂದ ನೋಡುತ್ತಿರಲು, ನಡುದಟ್ಟಿಯನ್ನು ಬಿಗಿದುಕಟ್ಟಿ, ವೃತ್ರಾಸುರನಿಗೆ ಸಮಾನಾಕಾರವುಳ್ಳವನೂ, ಜಟ್ಟಿಗಳಲ್ಲಿ ಪ್ರಸಿದ್ಧ ಪರಾಕ್ರಮಿಯೂ ಆದ ಜೀಮೂತನೆಂಬ ಆ ಮಲ್ಲರಾಜನನ್ನು ಕಾಳಗಕ್ಕಾಗಿ ಕರೆದನು. ಅವನು ಬಂದು ನಿಂತೊಡನೆ, ಭೀಮನು ಅವನನ್ನು ಕಕ್ಷಭಾಗದಲ್ಲಿ ಹಿಡಿದು ಅಮುಕಿಕೊಂಡು, ಒಂದಾವರ್ತಿ ಸಿಂಹದಂತೆ ಗರ್ಜಿಸಿದನು. ಜಟ್ಟಿಕಾಳಗಕ್ಕೆ ಆರಂಭವಾಯಿತು. ಇಬ್ಬರೂ ಮಹೋತ್ಸಾಹವುಳ್ಳವರು! ಇಬ್ಬರೂ ಭಯಂಕರಪರಾಕ್ರಮವುಳ್ಳವರು! ಅರುವತ್ತು ವರ್ಷದ ಎರಡು ದೊಡ್ಡ ಮದದಾನೆಗಳಂತೆ ಕಾಣುತಿದ್ದ ಆ ವೀರರಿಬ್ಬರೂ ಜಯಿಸಬೇಕೆಂಬ ಹಟದಿಂದ ಮಹೋತ್ಸಾಹಗೊಂಡು ಬಾಹುಯುದ್ಧಕ್ಕೆ ಆರಂಭಿಸಿದರು. ಒಬ್ಬರ ಬಲವನ್ನು ನೋಡಿ ಮತ್ತೊಬ್ಬರಿಗೆ ಯುದ್ಧೋತ್ಸಾಹವು ಮೇಲೆಮೇಲೆ ಹೆಚ್ಚುತ್ತಿದ್ದಿತು. ಒಬ್ಬರನ್ನೊಬ್ಬರು ಹಿಡಿದು ಮೆಟ್ಟುವುದಕ್ಕೆ ಅವಕಾಶವನ್ನು ಹುಡುಕುತಿದ್ದರು. * ಕೃತಪ್ರತಿಕೃತಗಳು,

*ಇಲ್ಲಿ ಕೃತಪ್ರತಿಕೃತಾದಿಗಳೆಲ್ಲ ಜಟ್ಟಿಕಾಳಗದ ವರಿಸೆಗಳೆಂದು ತಿಳಿಯಬೇಕು.


(ಒಬ್ಬರು ಮಾಡಿದುದಕ್ಕೆ ಮತ್ತೊಬ್ಬರು ಪ್ರತಿಮಾಡುವುದು) ವಿಚಿತ್ರವಾದ ತೋಳುಗಳ ಬಿಗಿತಗಳು, ಒಬ್ಬರನ್ನೊಬ್ಬರು ಮೇಲಕ್ಕೆತ್ತಿ ಒಗೆಯುವುದು, ಒಬ್ಬರನ್ನೊಬ್ಬರು ಕೆಳಕ್ಕೆ ತಳ್ಳುವುದು, ಮುಷ್ಟಿಗಳಿಂದ ಹೊಡೆಯುವುದು, ವರಾಹೋದ್ಧೂತ ನಿಸ್ವನಗಳೆಂಬ ಜಟ್ಟಿಯ ವರಿಸೆಗಳನ್ನು ತೋರಿಸುವುದು. ಅಂಗೈಗಳಿಂದ ಅಪ್ಪಳಿಸುವುದು, ವಜ್ರಮುಷ್ಟಿ ಪ್ರಹಾರಗಳು, ಹಾಗೆಯೇ ಪ್ರಸೃಷ್ಟ, ಶಲಾಕಾಪಾತ, ಅಭಿಪಾತ, ನಖಪಾತ, ಪಾದೋದ್ಧೂತ, ಮುಂತಾದ ಯುದ್ಧಕ್ರಮಗಳು, ಮೊಳಕಾಲಿನಿಂದ ಗುದ್ದುವುದು, ತಲೆಗಳಿಂದ ಒಬ್ಬರನ್ನೊಬ್ಬರು ಢಿಕ್ಕಿಕೊಡುವುದು, ಇವೇ ಮುಂತಾಗಿ ನಾನಾ ವಿಧ ಯುದ್ಧಜಾತುರ್ಯಗಳಿಂದ ಹೋರಾಡುತ್ತಿದ್ದರು. ಹೀಗೆ ಅವರಿಬ್ಬರೂ, ಅಲ್ಲಿ ಜಾತ್ರೆಗಾಗಿ ಬಂದು ನೆರೆದಿದ್ದ ದೊಡ್ಡ ಜನಸಮೂಹದ ಮುಂದೆ ಆಯುಧವೇನೂ ಇಲ್ಲದೆ, ಕೇವಲ ಬಾಹುಬಲ, ದೇಹಬಲ, ಮನೋಬಲಗಳಿಂದ ಮಾಡುತ್ತಿದ್ದ ಜಟ್ಟಿಕಾಳಗವು, ನೋಡುವವರಿಗೆಲ್ಲ ಭಯಂಕರವಾಗಿ ತೋರುತ್ತಿತ್ತು. ಮಹಾಬಲಿಷ್ಠರಾದ ಆ ವೀರರಿಬ್ಬರೂ, ವೃತ್ರೇಂದ್ರರಂತೆ ಇದಿರಿಸಿ ನಿಂತು ಯುದ್ಧಮಾಡುವುದನ್ನು ನೋಡಿ, ಜನರೆಲ್ಲರೂ ಆಗಾಗ ನಿಟ್ಟುಸಿರುಗಳಿಂದಲೂ, ಆಗಾಗ ಸಿಂಹನಾದಗಳಿಂದಲೂ, ಮನಸ್ಸಿನ ಅನುತ್ಸಾಹವನ್ನೂ, ಸಂತೋಷವನ್ನೂ ಹೊರಬೀಳಿಸುತ್ತಿದ್ದರು. ಆ ವೀರರಿಬ್ಬರೂ ಪ್ರತ್ಯಾರ್ಷಣ, ಆಕರ್ಷಣ, ಅಭ್ಯಾಕರ್ಷಣ, ವಿಕರ್ಷಣಗಳೆಂಬ ವಿವಿಧ ರೀತಿಗಳಿಂದ ಒಬ್ಬರನ್ನೊಬ್ಬರು ಎಳೆದಾಡುವರು! ಮೊಳಕಾಲುಗಳಿಂದ ಒಬ್ಬರನ್ನೊಬ್ಬರು ಗುದ್ದುವರು! ಪ್ರಬಲವಾದ ಕಂಠಧ್ವನಿಯಿಂದ ಒಬ್ಬರನ್ನೊಬ್ಬರು ಹದರಿಸುವರು! ಉಬ್ಬಿದ ಭುಜಗಳಿಂದಲೂ, ಉದ್ದವಾದ ತೋಳುಗಳಿಂದಲೂ ಕೂಡಿ ಬಾಹುಯುದ್ಧದಲ್ಲಿ ಕುಶಲರಾದ ಆ ವೀರರಿಬ್ಬರೂ, ಬಾಗಿಲಗುಳಿಗಳಂತಿರುವ ತಮ್ಮ ತೋಳುಗಳಿಂದ ಒಬ್ಬರನ್ನೊಬ್ಬರು ಬಿಗಿದು ಹಿಡಿದಿದ್ದರು. ಸ್ವಲ್ಪ ಹೊತ್ತಿನಲ್ಲಿಯೇ ಭೀಮನು ಹೇಗೋ ಆ ಜಟ್ಟಿಯ ತೋಳಿನ ಹಿಡಿತದಿಂದ ತಪ್ಪಿಸಿಕೊಂಡು, ವೇಗದಿಂದ ಮೇಲಕ್ಕೆ ಹಾರಿ, ಆ ಜಟ್ಟಿಯನ್ನು ತಿರುಗಿ ತನ್ನ ಕೌಂಕುಳಲ್ಲಿ ಒತ್ತಿಹಿಡಿದನು. ಆಮೇಲೆ ತನ್ನ ಕೈಯಿಂದ ಆ ಜಟ್ಟಿಯ ಪಾರ್ಶ್ವಭಾಗವನ್ನು ಹಿಡಿದೆತ್ತಿ ನೆಲಕ್ಕೆ ಕೆಡಹಿದನು. ಆಮೇಲೆ ಶತ್ರುಮರ್ದನನಾದ ಭೀಮನು

ಆ ಜಟ್ಟಿಯನ್ನು ಎರಡು ಕೈಗಳಿಂದ ಹಿಡಿದೆತ್ತಿ, ಅವನ ಮುಖಕ್ಕೆದಿರಾಗಿ ಸಿಂಹನಾದವನ್ನು ಮಾಡುತ್ತ, ಹುಲಿಯು ಒಂದು ಆನೆಯನ್ನು ಹೇಗೋ ಹಾಗೆ ಅವನನ್ನು ಎಳೆದಾಡಿದನು. ಮತ್ತು ಮಹಾಬಾಹುವೂ, ಮಹಾ ವೀರ್ಯವುಳ್ಳವನೂ ಆದ ಭೀಮನು, ಆ ಜಟ್ಟಿಯ ದೇಹವನ್ನು ಕೈಯಿಂದೆತ್ತಿಹಿಡಿದು ಗಿರಗಿರನೆ ಸುತ್ತಿಸಿದನು. ಅಲ್ಲಿ ನೆರೆದಿದ್ದ ಮತ್ಸ್ಯದೇಶದ ಜನರೂ, ಇತರ ಮಲ್ಲರುಗಳೂ ಮಹಾಶ್ಚರ್ಯದಿಂದ ನೋಡುತ್ತಿರಲು, ಭೀಮನು ನೂರಾರುಸಾರಿ ಆ ಜೀಮೂತನ ದೇಹವನ್ನು ಹಿಡಿದು ಗಿರಗಿರನೆ ಸುತ್ತಿಸಿ, ಪ್ರಜ್ಞೆತಪ್ಪಿದಮೇಲೆ ಆ ದೇಹವನ್ನು ನೆಲಕ್ಕೆ ಹಾಕಿ ತಿಕ್ಕಿಬಿಟ್ಟನು. ಲೋಕಪ್ರಸಿದ್ಧನಾದ ಆ ಮಲ್ಲರಾಜನು ಭೀಮನಿಂದ ಹತನಾದುದನ್ನು ನೋಡಿ, ವಿರಾಟನೂ, ಅವನ ಬಂಧುಗಳೂ ಪರಮಸಂತೋಷಭರಿತರಾದರು. ಉದಾರಮನಸ್ಸುಳ್ಳ ವಿರಾಟನು, ತನ್ನ ಅಡಿಗೆಯವನೆನಿಸಿದ್ದ ಆ ವಲಲನ ಪರಾಕ್ರಮಕ್ಕೆ ಮೆಚ್ಚಿ, ಧನಾಧಿಪನಾದ ಕುಬೇರನಂತೆ ಸಮೃದ್ಧಿಯಾಗಿ ಧನವನ್ನು ತರಿಸಿ ಆ ಕಾಳಗದ ಮೈದಾನದಲ್ಲಿಯೇ ಬಹುಮಾನಮಾಡಿದನು. ಹೀಗೆಯೇ ಇನ್ನೂ ಅನೇಕಾವರ್ತಿ ಭೀಮನು ಇನ್ನೂ ಬಹುಮಂದಿ ಜಟ್ಟಿಗಳನ್ನು ಕಾಳಗದಲ್ಲಿ ಜಯಿಸಿ, ವಿರಾಟನ ವಿಶೇಷಪ್ರೇಮಕ್ಕೆ ಪಾತ್ರನಾದನು. ಆ ಭೀಮನೊಂದಿಗೆ ಯುದ್ಧಮಾಡತಕ್ಕ ಮನುಷ್ಯರು ಅಲ್ಲಿ ಬೇರೆ ಯಾರೂ ಇಲ್ಲದಿರಲು, ವಿರಾಟನು ವಿನೋದಕ್ಕಾಗಿ ಆನೆ, ಹುಲಿ, ಸಿಂಹಗಳನ್ನು ತಂದು ನಿಲ್ಲಿಸಿ, ಅವುಗಳೊಡನೆ ಹೋರಾಡಿಸುತ್ತಿದ್ದನು. ಅಲ್ಲಿ ಭೀಮನು ವಿರಾಟನಿಂದ ತಾನು ಬಹುಮಾನವಾಗಿ ಪಡೆದ ಧನಕನಕಾದಿಗಳನ್ನೆಲ್ಲ ಅಲ್ಲಿ ನೆರೆದಿದ್ದ ಜನರಿಗೇ ಹಂಚಿಕೊಟ್ಟು ತನ್ನ ಮನೆಗೆ ಹೋದನು. ಅನಂತರದಲ್ಲಿ ಭೀಮನು, ಅಂತಃಪುರದಲ್ಲಿದ್ದ ಸ್ತ್ರೀಯರಮುಂದೆ ವಿರಾಟನ ಆನೆಗಳೊಡನೆಯೂ, ಸಿಂಹಗಳೊಡನೆಯೂ ಹೋರಾಡಿ, ಅವರಿಗೂ ತನ್ನ ಪರಾಕ್ರಮವನ್ನು ತೋರಿಸಿದನು. ಅರ್ಜುನನು ತನ್ನ ಗಾನನರ್ತನಗಳಿಂದ ವಿರಾಟನ ಅಂತಃಪುರ ಸ್ತ್ರೀಯರನ್ನೆಲ್ಲ ಸಂತೋಷಗೊಳಿಸುತ್ತಿದ್ದನು. ಕುದುರೆಗಳನ್ನು ಸ್ವಾಧೀನಪಡಿಸುವುದು, ಅವುಗಳಿಗೆ ಗತಿಭೇದಗಳನ್ನು ಕಲಿಸುವುದು, ತನ್ನಿಂದ ಶಿಕ್ಷಿತವಾದ ಆ ಕುದುರೆಗಳನ್ನೆಲ್ಲ ಕೂಡಿಸಿತಂದು, ವಿರಾಟನಿಗೆ ತನ್ನ ಅಶ್ವಕಲಾ ಚಾತು

ರ್ಯವನ್ನು ತೋರಿಸುವುದು, ಈ ಮುಂತಾದ ವಿದ್ಯೆಗಳಿಂದ ನಕುಲನು ವಿರಾಟನನ್ನು ಸಂತೋಷಗೊಳಿಸುತಿದ್ದನು. ಇದನ್ನು ನೋಡಿ ಪ್ರೀತನಾದ ರಾಜನು ಆಗಾಗ ನಕುಲನಿಗೆ ಬೇಕಾದ ವಸ್ತುಗಳನ್ನು ಸಮೃದ್ಧಿಯಾಗಿ ಕೊಡುತ್ತಿದ್ದನು. ಹಾಗೆಯೇ ಸಹದೇವನೂಕೂಡ ತನ್ನಿಂದ ಶಿಕ್ಷಿತಗಳಾದ ಎತ್ತುಗಳನ್ನು ತಂದು ವಿರಾಟನಿಗೆ ತೋರಿಸಿ, ಅವನಿಂದ ಹೆಚ್ಚು ಧನವನ್ನು ಪಡೆಯುತ್ತಿದ್ದನು. ಮಹಾರಥರಾದ ಆ ಐದುಮಂದಿ ವೀರರೂ ಹೀಗೆ ಕಷ್ಟದಿಂದ ಪರಸೇವೆಯಲ್ಲಿದ್ದುದನ್ನು ನೋಡಿ, ದ್ರೌಪದಿಯು ಸಂಕಟದಿಂದ ಆಗಾಗ ನಿಟ್ಟುಸಿರನ್ನು ಬಿಡುವಳು. ಪುರುಷಶ್ರೇಷ್ಠರಾದ ಆ ಐದುಮಂದಿ ಪಾಂಡವರೂ ಹೀಗೆ ತಮ್ಮ ಸ್ವರೂಪವನ್ನು ಮರೆಸಿಟ್ಟುಕೊಂಡು, ವಿರಾಟರಾಜನ ಸೇವೆಯಲ್ಲಿರುತ್ತಿದ್ದರು.

ಇದು ಹದಿನೈದನೆಯ ಅಧ್ಯಾಯವು.

ಇಲ್ಲಿಗೆ ಸಮಯಪಾಲನ ಪರ್ವವು ಸಮಾಪ್ತವು.



ಕೀಚಕವಧ ಪರ್ವವು.

ದ್ರೌಪದಿಯು ತನ್ನನ್ನು ಕಾಮಿಸಿದ ಕೀಚಕನನ್ನು
ಕ್ರೂರವಾಕ್ಯಗಳಿಂದ ಧಿಕ್ಕರಿಸಿದುದು.

ಜನಮೇಜಯರಾಜೇಂದ್ರನೇ ಕೇಳು! ಮಹಾರಥರಾದ ಪಾಂಡವರು ಹೀಗೆ ವಿರಾಟನಗರನಲ್ಲಿ ಅಜ್ಞಾತವಾಸವನ್ನಾರಂಭಿಸಿ ಹತ್ತು ತಿಂಗಳು ಕಳೆದುಹೋದುವು. ಅನೇಕಪರಿಚಾರಕರಿಂದ ಉಪಚಾರಮಾಡಿಸಿಕೊಳ್ಳುವುದಕ್ಕೆ ಅರ್ಹಳಾದ ದ್ರೌಪದಿಯು, ಸುದೇಷ್ಣೆಯ ಸೇವೆಮಾಡುತ್ತ ಬಹಳ ಕಷ್ಟದಿಂದ ಕಾಲವನ್ನು ಕಳೆಯುತ್ತಿದ್ದಳು. ಅಲ್ಲಿ ಪಾಂಚಾಲಿಯು ಸುದೇಷ್ಣೆಯನ್ನೂ, ಇತರ ರಾಜಸ್ತ್ರೀಯರನ್ನೂ ತನ್ನ ಪರಿಚರ್ಯೆಯಿಂದ ಸಂತೋಷಗೊಳಿಸುತ್ತ, ಆ ರಾಣಿವಾಸದಲ್ಲಿಯೇ ವಾಸಿಸುತ್ತಿದ್ದಳು. ಅವಳು ಅಜ್ಞಾತವಾಸದಲ್ಲಿರಬೇಕಾದ ಒಂದು ವರ್ಷದ ಕಾಲವು ಬಹಳ ಮಟ್ಟಿಗೆ

ಕಳೆಯುತ್ತ ಬಂದಿತು. ಇಷ್ಟರಲ್ಲಿಯೇ ಅಲ್ಲಿ ಒಂದು ವಿಶೇಷವು ನಡೆಯಿತು. ವಿರಾಟನಿಗೆ ಕೀಚಕನೆಂಬೊಬ್ಬ ಸೇನಾಪತಿಯಿದ್ದನು. (ಇವನು ಸುದೇಷ್ಣೆಯ ತಮ್ಮನು.) ಮಹಾಬಲಾಢ್ಯನು. ಈ ಕೀಚಕನು ಒಮ್ಮೆ ಅಕಸ್ಮಾತ್ತಾಗಿ ದ್ರೌಪದಿಯನ್ನು ನೋಡಿಬಿಟ್ಟನು. ದೇವಕನ್ಯೆಯಂತೆಯೂ, ಭೂಮಿಯಲ್ಲಿ ಸಂಚರಿಸುವ ಅಪ್ಸರಸಿಯಂತೆಯೂ ಪರಮ ಸುಂದರಿಯಾದ ಆ ದ್ರೌಪದಿಯನ್ನು ನೋಡಿದೊಡನೆ ಆ ಕೀಚಕನು ಕಾಮಬಾಣಪೀಡಿತನಾಗಿ ಅವಳಮೇಲೆ ಕಣ್ಣಿಟ್ಟನು. ದುರಾತ್ಮನಾದ ಆ ಕೀಚಕನು ದ್ರೌಪದಿಯನ್ನು ಕಂಡುದುಮೊದಲು ಕಾಮತಾಪದಿಂದ ಬೆಂದು ಕೃಶನಾಗಿ, ಸುದೇಷ್ಣೆಯಬಳಿಗೆ ಬಂದು ಹೆಮ್ಮೆಯಿಂದ ನಗುತ್ತ ಹೀಗೆಂದು ಹೇಳುವನು :—" ಈ ಅಂತಃಪುರದಲ್ಲಿ ಇದಕ್ಕೆ ಮೊದಲು ಈ ಸ್ತ್ರೀವ್ಯಕ್ತಿಯನ್ನು ನಾನು ನೋಡಿದುದಿಲ್ಲ. ಈ ಶುಭಾಂಗಿಯಾವಳೋ ತಿಳಿಯದು! ಒಳ್ಳೇ ಸುಗಂಧವುಳ್ಳ ಮದ್ಯವು ತನ್ನ ವಾಸನೆಯಿಂದ ಮನುಷ್ಯನ ಬುದ್ಧಿಗೆ ಮತ್ತುಹಿಡಿಸುವಂತೆ, ಇವಳು ತನ್ನ ರೂಪದಿಂದ ನನ್ನ ಮನಸ್ಸನ್ನು ಬಹಳವಾಗಿ ಮರುಳುಗೊಳಿಸುತ್ತಿರುವಳು. ದೇವಸ್ವರೂಪಿಣಿಯಾಗಿದ್ದು, ನನ್ನ ಮನಸ್ಸನ್ನು ಹೀಗೆ ಆಕರ್ಷಿಸುತ್ತಿರುವ ಈಕೆ ಯಾವಳು? ಯಾರ ಹೆಂಡತಿ? ಎಲ್ಲಿಂದ ಬಂದಿರುವಳು? ಈ ಸಂಗತಿಯನ್ನು ನನಗೆ ತಿಳಿಸಬೇಕು. ಇವಳು ನನ್ನ ಮನಸ್ಸನ್ನು ಕಲಗಿಸಿ, ನನ್ನನ್ನು ತನ್ನ ವಶಮಾಡಿಕೊಂಡಿರುವಳು. ಈ ಮೋಹವನ್ನು ತಪ್ಪಿಸುವುದಕ್ಕೆ ನನಗೆ ಬೇಕಾದ ಔಷಧವೇನೂ ಇಲ್ಲ. ಅಕ್ಕಾ! ಈ ನಿನ್ನ ಪರಿಚಾರಿಕೆಯು ಅಪೂರ್ವ ಸೌಂದರ್ಯವುಳ್ಳವಳು. ಇವಳು ತನ್ನ ಸ್ಥಿತಿಗೆ ಯೋಗ್ಯವಲ್ಲದ ವೃತ್ತಿಯಿಂದ ನಿನ್ನಲ್ಲಿ ಸೇರಿರುವಳು. ಇವಳು ಈ ವೃತ್ತಿಯನ್ನು ಬಿಟ್ಟು ನನ್ನನ್ನೂ, ನನ್ನ ಕಡೆಯ ಸಮಸ್ತಜನರನ್ನೂ ಆಳುತ್ತಿರಲಿ! ಮತ್ತು ಇವಳು, ಅನೇಕ ಗಜಾಶ್ವರಥಗಳಿಂದಲೂ, ಜನಸಮೂಹಗಳಿಂದಲೂ ಸಕಲೈಶ್ವರ್ಯದಿಂದಲೂ, ಪಾನ ಭೋಜನಾದಿ ಸಕಲಸೌಕರ್ಯಗಳಿಂದಲೂ, ತುಂಬಿ ಸುವರ್ಣಮಯವಾದ ಬಹುವಿಧ ಭೂಷಣಗಳಿಂದ ಅಲಂಕೃತವಾದ ನನ್ನ ಗೃಹವನ್ನು ಅಲಂಕರಿಸಲಿ" ಎಂದನು. ಆಮೇಲೆ ಕೀಚಕನು ತನ್ನ ದುರಭಿಪ್ರಾಯಕ್ಕೆ ಸುದೇಷ್ಣೆಯನ್ನು ಹೇಗೋ ಒಪ್ಪಿಸಿ, ಅವಳ

ಅನುಮತಿಯನ್ನು ಪಡೆದು, ದ್ರೌಪದಿಯಿದ್ದ ಕಡೆಗೆ ಬಂದು, ಕಾಡಿನಲ್ಲಿರುವ ಒಂದು ನರಿಯು, ಹೆಣ್ಣುಸಿಂಹವನ್ನು ಕೆಣಕುವುದಕ್ಕೆ ಬಂದಂತೆ, ಆ ರಾಜ ಪುತ್ರಿಯಾದ ದ್ರೌಪದಿಯಮುಂದೆ ನಿಂತು ಹೀಗೆಂದು ಮಾತಾಡಿಸುವನು. "ಶೋಭನಾಂಗೀ! ನೀನು ಯಾರು? ಯಾರ ಕಡೆಯವಳು? ನೀನು ಎಲ್ಲಿಂದ ಈ ವಿರಾಟನಗರಕ್ಕೆ ಬಂದೆ? ವಾಸ್ತವವನ್ನು ತಿಳಿಸು. ನಿನ್ನ ರೂಪವು ಅನ್ಯಾದೃಶವಾದುದು. ನಿನ್ನ ದೇಹಕಾಂತಿಯು ಅಪೂರ್ವವಾದುದು! ನಿನ್ನ ಸೌಕುಮಾರ್ಯವು ಅಸಾಧಾರಣವಾದುದು! ನಿನ್ನ ಮುಖವು ಕಳಂಕವಿಲ್ಲದ ಚಂದ್ರನಂತೆ ಕಾಂತಿಯಿಂದ ಪ್ರಕಾಶಿಸುತ್ತಿರುವುದು! ಎಲೆ ಸುಭ್ರೂ! ನಿನ್ನ ವಿಶಾಲವಾದ ಕಣ್ಣುಗಳು ಕಮಲದಳಗಳಂತೆ ಕಾಣುತ್ತಿರುವುವು. ನಿನ್ನ ಮುದ್ದುಮಾತುಗಳು ಕೋಕಿಲಸ್ವರದಂತೆ ಇಂಪಾಗಿರುವುವು. ನಿನ್ನಂತಹ ರೂಪವತಿಯರನ್ನು ನಾನು ಇದುವರೆಗೆ ಈ ಭೂಮಂಡಲದಲ್ಲಿ ಕಂಡುದಿಲ್ಲ. ಎಲೆ ಸುಶ್ರೋಣಿ! ನೀನು ಕಮಲವಾಸಿನಿಯಾದ ಲಕ್ಷ್ಮಿಯೋ? ಐಶ್ವರ್ಯದೇವತೆಯಾದ ಭೂತಿಯೋ! ಹ್ರಿಯೋ? ಶ್ರೀದೇವಿಯೋ? ಕೀರ್ತಿಯೋ? ಕಾಂತಿಯೋ? ಇವರಲ್ಲ ಯಾರು? ಇಂತಹ ರೂಪಾತಿಶಯದಿಂದ ಶೋಭಿಸುವ ನೀನು ಮನ್ಮಥನ ತೊಡೆಯಲ್ಲ ವಿಹರಿಸುವ ರತಿದೇವಿಯೋ? ನೀನು ಪೂರ್ಣಚಂದ್ರನ ಉತ್ತಮ ಪ್ರಭೆಯಂತೆ ಬೆಳಗುತ್ತಿರುವೆ. ತುಂಬಿದೆವೆಗಳ ನಡುವೆ ಚಂದ್ರಿಕೆಯಂತೆ ಬೆಳಗುತ್ತಿರುವ ಪ್ರಸನ್ನ ದೃಷ್ಟಿಯಿಂದಲೂ, ದಿವ್ಯಕಾಂತಿಯಿಂದಲೂ, ದಿವ್ಯ ಲಾವಣ್ಯದಿಂದಲೂ ಶೋಭಿತವಾಗಿ, ಎಣೆಯಿಲ್ಲದ ಸೌಂದರ್ಯದಿಂದ ಕೂಡಿದ ಈ ನಿನ್ನ ಮುಖಚಂದ್ರನನ್ನು ನೋಡಿದಮೇಲೆ, ಈ ಸಮಸ್ತಜಗತ್ತಿನಲ್ಲಿ ಯಾವ ಪುರುಷನು ತಾನೇ ಮನ್ಮಥವಶನಾಗದಿರುವನು? ಓ ಚಾರುಹಾಸಿನಿ! ಹಾರಾಲಂಕಾರಯೋಗ್ಯಗಳಾಗಿ, ಮಂಗಳಕರಗಳಾಗಿ, ದಿವ್ಯಲಾವಣ್ಯಯುಕ್ತಗಳಾಗಿ, ಉಬ್ಬಿ ದುಂಡಗೆ ಒಂದಕ್ಕೊಂದು ಸೇರಿದಂತೆ ಒತ್ತಾಗಿ, ಕಮಲದ ಮೊಗ್ಗುಗಳಂತಿರುವ ನಿನ್ನ ಸ್ತನಗಳೆರಡೂ ಮನ್ಮಥನ ಚಾಟಿಗಳಂತೆ ನನ್ನನ್ನು ನೋಯಿಸುತ್ತಿರುವುವು. ತ್ರಿವಳಿಗಳಿಂದ ಮನೋಹರವಾಗಿ, ಸ್ತನಭಾರದಿಂದ ಬಗ್ಗಿದ ನಿನ್ನ ಮಧ್ಯಭಾಗವು ಮುಷ್ಟಿಯಲ್ಲಿ ಅಡಗಿಸುವಷ್ಟು ಸಣ್ಣನಾಗಿರುವುದು. ನದೀತೀರದ ಮಳಲ ದಿಣ್ಣೆಯಂತೆ

ರುವ ಈ ನಿನ್ನ ಸುಂದರಜಘನವನ್ನು ನೋಡಿ, ಅಸಾಧ್ಯವಾದ ಕಾಮ ಜ್ವರವು ನನ್ನನ್ನು ಬಾಧಿಸುತ್ತಿರುವುದು. ಎಲೆ ಭಾಮಿನಿ! ನಿನ್ನನ್ನು ಸೇರ ಬೇಕೆಂಬ ಮನಸ್ಸಂಕಲ್ಪದಿಂದ ನನ್ನ ದೇಹದಲ್ಲಿ ಹೆಚ್ಚಿದ ಕಾಮಾಗ್ನಿಯು ಕಾಡುಗಿಚ್ಚಿನಂತೆ ನಿರ್ದಯವಾಗಿ ನನ್ನನ್ನು ಸುಡುತ್ತಿರುವುದು. ನಿನ್ನ ಸಮಾಗಮವೆಂಬ ಮೇಘದಿಂದ, ನಿನ್ನ ಶರೀರಪ್ರದಾನವೆಂಬ ಮಳೆಯನ್ನು ಸುರಿಸಿ, ಉರಿಯುತ್ತಿರುವ ಈ ಅಗ್ನಿಯನ್ನು ನಂದಿಸು. ಎಲೆ ಚಂದ್ರ ಮುಖಿ! ನಿನ್ನ ಸಂಗಮಾಭಿಲಾಷೆಯೆಂಬ ತೀಕ್ಷ್ಣಧಾರೆಗಳಿಂದ ತೀವ್ರವಾದ ಮನ್ಮಥಬಾಣಗಳು ನನ್ನ ಮನಸ್ಸಿಗೆ ಉನ್ಮಾದವನ್ನು ಹುಟ್ಟಿಸಿ, ನಿರ್ದ ಯವಾಗಿ ನನ್ನ ಹೃದಯವನ್ನು ಭೇದಿಸಿಕೊಂಡು ಒಳಹೊಗುತ್ತಿರುವುವು. ಅತಿ ಪ್ರಚಂಡಗಳಾದ ಆ ಉಗ್ರಬಾಣಗಳು ನನಗೆ ಮಿತಿಯಿಲ್ಲದ ಚಿತ್ತ ಭ್ರಮವನ್ನೂ, ಮೋಹವನ್ನೂ ಹೆಚ್ಚಿಸುತ್ತಿರುವುವು. ಆದುದರಿಂದ, ನೀನು ಈಗಲೇ ನಿನ್ನ ದೇಹವನ್ನು ನನಗೊಪ್ಪಿಸಿ, ನಿನ್ನ ಸಮಾಗಮ ಸೌಖ್ಯವನ್ನು ಕೊಟ್ಟು, ನನ್ನನ್ನು ಉದ್ಧರಿಸಬೇಕು. ನೀನು ವಿಚಿತ್ರಪುಷ್ಪ ಮಾಲಿಕೆಗಳಿಂದಲೂ, ವಸ್ತ್ರಗಳಿಂದಲೂ, ಆಭರಣಗಳಿಂದಲೂ ಅಲಂಕೃತಿ ಯಾಗಿ, ನನ್ನನ್ನು ಸೇರಿ ನಿನಗೆ ಬೇಕಾದ ಸುಖಗಳನ್ನನುಭವಿಸು. ಯಾ ವಾಗಲೂ ಸುಖಾರ್ಹಳಾದ ನೀನು, ಆ ಸುಖೋಪಭೋಗಗಳನ್ನೆಲ್ಲ ಬಿಟ್ಟು, ಇಲ್ಲ ಕಷ್ಟದಿಂದ ವಾಸಮಾಡುವುದು ಸರಿಯಲ್ಲ. ಅಮೃತಕ್ಕೆ ಸಮಾನ ವಾದ ಹಲವು ಬಗೆಯ ಪಾನೀಯವಸ್ತುಗಳನ್ನು ಸೇವಿಸುತ್ತ, ನನ್ನೊಡನೆ ರಮಿಸು; ಎಲೆ ಭಾಮಿನಿ! ಲೋಕಾತಿಶಯವಾದ ಈ ನಿನ್ನ ರೂಪವು ಅದನ್ನು ಅನುಭವಿಸತಕ್ಕ ನಾಯಕನಿಲ್ಲದುದರಿಂದ ಕಳೆಗೆಟ್ಟು, ಉತ್ತಮ ಪುಷ್ಪಮಾಲಿಕೆಯು ಆಶೆಯಿಂದ ಮುಡಿಯತಕ್ಕವರಿಲ್ಲದಿದ್ದಾಗ, ವ್ಯರ್ಥವಾಗಿ ಬಾಡಿಹೋಗುವಂತೆ ನಿರರ್ಥಕವಾಗಿರುವುದು. ಎಲೆ ಶೋಭನೆ! ಇದು ವರೆಗೆ ನಾನು ವರಿಸಿದ ಪತ್ನಿಯರೆಲ್ಲರನ್ನೂ ತೊರೆದುಬಿಡುವೆನು. ಅವ ರೆಲ್ಲರನ್ನೂ ನಿನಗೆ ದಾಸಿಯರನ್ನಾಗಿ ಮಾಡುವೆನು. ಹೆಚ್ಚೇಕೆ? ನಾನೂ ನಿನಗೆ ದಾಸನಾಗಿ, ನಿನ್ನ ಆಜ್ಞೆಗೆ ಅಧೀನನಾಗಿರುವೆನು,'' ಎಂದನು.

ಇದು ಹದಿನಾರನೆಯ ಅಧ್ಯಾಯವು.

ದ್ರೌಪದಿಯು ಕೀಚಕನನ್ನು ಕಠಿನವಾಕ್ಯಗಳಿಂದ ನಿಂದಿಸಿ ನಿರಾಕರಿಸಿದುದು.

ದುರಾತ್ಮನಾದ ಕೀಚಕನು ಹೇಳಿದ ವಾಕ್ಯಗಳನ್ನು ಕೇಳಿ ನಿರ್ದುಷ್ಟೆಯಾದ ದ್ರೌಪದಿಯು, ಆ ಕೀಚಕನನ್ನು ನೋಡಿ, ಮೊದಮೊದಲು ಮೃದುವಾಕ್ಯದಿಂದ "ಎಲೈ ಸೂತಪುತ್ರನೆ! ನಾನು ಹೀನಜಾತಿಯಲ್ಲಿ ಹುಟ್ಟಿದ ಊಳಿಗದವಳು. ಉತ್ತಮಕುಲದಲ್ಲಿ ಹುಟ್ಟಿದ ನೀನು ನನ್ನಲ್ಲಿ ಆಶೆಪಡಬಹುದೆ? ನನ್ನ ಸ್ಥಿತಿಯನ್ನು ನೋಡಿ ನಿನ್ನಂಥವರು ಕನಿಕರಪಡಬೇಕು. ನೋಡುವುದಕ್ಕೆ ಅಸಹ್ಯವಾದ ಗೌಡಿಯ ವೇಷದಲ್ಲಿದ್ದು ಕೊಂಡು, ಇತರ ಸ್ತ್ರೀಯರಿಗೆ ಜಡೆಹಾಕಿ ಆದರಿಂದ ಬದುಕುತ್ತಿರುವ ನನ್ನಂತವಳನ್ನು ನೀನು ಕಾಮಿಸಬಹುದೆ? ಅಲ್ಲದೆ ನಾನು ವಿವಾಹಿತಳಾಗಿ ಇನ್ನೊಬ್ಬ ಪುರುಷನ ಪತ್ನಿಯಾಗಿರುವೆನು. ನಿನಗೆ ಈ ದುರುದ್ದೇಶವು ತಕ್ಕುದಲ್ಲ. ನಿನಗೆ ಶುಭವಾಗಲಿ. ಮನುಷ್ಯರಿಗೆ ಅವರವರ ಸ್ವಪತ್ನಿಯರಲ್ಲಿ ಪ್ರೀತಿಯಿರಬೇಕಾದುದು ಸಹಜವು. ಧರ್ಮವನ್ನಾಲೋಚಿಸು. ಪರಸ್ತ್ರೀಯರಲ್ಲಿ ನಿನಗೆ ಯಾವಾಗಲೂ, ಯಾವ ಕಾರಣದಿಂದಲೂ, ಇಂತಹ ದುರಭಿಲಾಷೆಯು ಹುಟ್ಟಬಾರದು. ಅಕಾರ್ಯಗಳಿಗೆ ಹೆದರುವುದೇ ಸತ್ಪುರುಷರ ಧರ್ಮವು. ಇಲ್ಲದ ದುರಾಶೆಗೆ ಒಳಗಾಗಿ, ಪಾಪಕಾರ್ಯದಲ್ಲಿ ಮನಸ್ಸಿಟ್ಟು, ಬುದ್ಧಿಮೋಹದಿಂದ ಪ್ರವರ್ತಿಸುವವನು ಘೋರವಾದ ಭೀತಿಗೂ, ಅಪಕೀರ್ತಿಗೂ ಗುರಿಯಾಗುವನು," ಎಂದಳು. ಇಷ್ಟು ಬುದ್ಧಿವಾದಗಳನ್ನು ಹೇಳಿದರೂ ಕಾಮಮೋಹಿತನಾದ ಆ ಕೀಚಕನು, ಸೈರಂಧ್ರಿಯ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಆ ಕೀಚಕನಾದರೋ ಇಂದ್ರಿಯಗಳನ್ನು ಜಯಿಸಲಾರದವನು. ಪರಸ್ತ್ರೀಯರ ಸಂಸರ್ಗವು ಕೇವಲ ನಿಂದ್ಯವೆಂದೂ, ಆದರಿಂದ ಪ್ರಾಣಾಂತಕರಗಳಾದ ಮಹಾವಿಪತ್ತುಗಳು ಸಂಭವಿಸದೆ ಬಿಡವೆಂದೂ, ಅವನ ಮನಸ್ಸಿಗೆ ತಿಳಿದಿದ್ದರೂ, ದುರ್ಬುದ್ಧಿಯಿಂದ ಆ ಸೈರಂಧ್ರಿಯನ್ನು ನೋಡಿ, "ಎಲೆ ಸುಮುಖೀ! ಎಲೆ ಸುಮಧ್ಯಮೆ! ಎಲೆ ಸುಸ್ಮಿತೇ! ನಿನಗಾಗಿ ಮನ್ಮಥಾವೇಶದಿಂದ ಪೀಡಿತನಾದ ನನ್ನನ್ನು ನಿರಾಕರಿಸುವುದು ಎಷ್ಟುಮಾತ್ರವೂ ನಿನಗೆ ನ್ಯಾಯವಲ್ಲ. ಸರ್ವವಿಧದಲ್ಲಿಯೂ ನಿನಗೆ ವಶ

ನಾಗಿ, ಪ್ರಿಯವಾಕ್ಯಗಳನ್ನು ನುಡಿಯುತ್ತಿರುವ ನನ್ನನ್ನು ಹೀಗೆ ನೀನು ನಿರಾಕರಿಸುತ್ತಿರುವೆ. ಇದಕ್ಕಾಗಿ ಮುಂದೆ ನೀನು ನಿಜವಾಗಿ ಪಶ್ಚಾತ್ತಾಪ ಪಡಬೇಕಾಗುವುದು. ಎಲೆ ಭೀರು! ನಾನಾದರೋ ಈ ರಾಜ್ಯಕ್ಕೆಲ್ಲಾ ಒಡೆಯನು! ಇಲ್ಲಿನ ಪ್ರಜೆಗಳನ್ನೆಲ್ಲ ಅಡಗಿಸಿ ಆಳತಕ್ಕವನು. ಈ ಭೂಮಂಡಲದಲ್ಲಿ ವೀರ್ಯದಲ್ಲಿ ನನಗೆ ಸಮಾನನಿಲ್ಲ! ರೂಪ, ಯೌವನ, ಭೋಗ, ಭಾಗ್ಯಗಳಲ್ಲಿಯೂ, ನನಗೆ ಸಾಟಿಯಾದ ಮನುಷ್ಯನು ಈ ಜಗತ್ತಿನಲ್ಲಿ ಬೇರೊಬ್ಬನಿಲ್ಲ. ಎಲೆ ಕಲ್ಯಾಣಿ! ನನ್ನಲ್ಲಿ ಭೋಗಾರ್ಹಗಳಾದ ಸಮಸ್ತ ವಸ್ತುಗಳೂ ಸಮೃದ್ಧವಾಗಿವೆ. ನೀನು ಎಣೆಯಿಲ್ಲದ ಭೋಗಗಳನ್ನು ಅನುಭವಿಸುವ ಸಂಭವವಿರುವಾಗಲೂ, ಊಳಿಗದ ಕೆಲಸದಿಂದ ಜೀವಿಸಬೇಕೆಂದು ಆಸೆಪಡುವುದೇಕೆ? ಎಲೆ ಶುಭಾನನೆ! ಇದೋ! ಈಗಲೇ ನಾನು ನನ್ನ ರಾಜ್ಯವನ್ನು ನಿನಗೆ ಕೊಟ್ಟರುವೆನು. ಇನ್ನುಮೇಲೆ ಇದಕ್ಕೆ ನೀನೇ ಅಧಿಕಾರಿಣಿ. ನನ್ನನ್ನು ಪ್ರೀತಿಯಿಂದ ಭಜಿಸು. ಬೇಕಾದ ಭೋಗಗಳನ್ನನುಭವಿಸು,'' ಎಂದನು.

ಹೀಗೆ ಕೀಚಕನು ಅನುಚಿತವಾದ ಮಾತುಗಳನ್ನಾಡುವುದನ್ನು ಕೇಳಿ, ಪರಮಪತಿವ್ರತೆಯಾದ ದ್ರೌಪದಿಗೆ ಮೇಲೆಮೇಲೆ ಕೋಪವು ಅಂಕುರಿಸಿತು. ಆಗ ಅವನನ್ನು ನಿಂದಿಸುತ್ತ ''ಎಲೆ ಸೂತಪುತ್ರಾ! ಹೀಗೆ ಬುದ್ಧಿಗೆಟ್ಟು ನಿನ್ನ ಪ್ರಾಣವನ್ನು ಕಳೆದುಕೊಳ್ಳಬೇಡ. ಉಗ್ರಸ್ವರೂಪವುಳ್ಳ ಐದುಮಂದಿ ಪುರುಷರು ನನ್ನನ್ನು ಯಾವಾಗಲೂ ರಕ್ಷಿಸುತ್ತಿರುವರೆಂದು ತಿಳಿ. ನಿನಗೆ ನಾನು ಎಂದಿಗೂ ಲಭ್ಯಳಲ್ಲ. ಐದು ಮಂದಿ ಗಂಧರ್ವರು ನನಗೆ ಪತಿಗಳಾಗಿರುವರು. ಅವರು ಕೋಪಗೊಂಡರೆ, ನಿಮಿಷಮಾತ್ರದಲ್ಲಿ ನಿನ್ನನ್ನು ಕೊಂದುಬಿಡುವರು. ನೀನು ಹೀಗೆ ಪ್ರವರ್ತಿಸಬೇಡ! ವ್ಯರ್ಥವಾಗಿ ಸಾಯಬೇಡ! ಪುರುಷರಾರೂ ಪ್ರವರ್ತಿಸಬಾರದ ದುರ್ಮಾರ್ಗದಲ್ಲಿ ನೀನು ನಡೆಯಲೆಳಸುವೆ. ಬುದ್ಧಿಹೀನನಾದ ಬಾಲಕನೊಬ್ಬನು, ಒಂದು ಜಲಾಶಯದ ದಡದಿಂದ ಮತ್ತೊಂದು ದಡಕ್ಕೆ ಕಾಲಿನಿಂದ ದಾಟಲೆಳಸಿದಂತೆ, ಮಂದಬುದ್ಧಿಯುಳ್ಳ ನೀನು, ಸಾಗದ ಈ ಕಾರ್ಯಕ್ಕೆ ಪ್ರಯತ್ನಿಸುತ್ತಿರುವೆ. ಎಲೆ ಕೀಚಕಾ! ಇಂತಹ ದುಷ್ಕಾರ್ಯದಲ್ಲಿ

ಪ್ರವರ್ತಿಸುವ ನೀನು, ಭೂಮಿಯೊಳಗೆ ಪ್ರವೇಶಿಸಿದರೂ, ಆಕಾಶಕ್ಕೆ ಹಾರಿದರೂ, ಸಮುದ್ರದಿಂದಾಚೆಗೆ ಓಡಿಹೋದರೂ, ಆ ಗಂಧರ್ವರು ನಿನ್ನನ್ನು ಬಿಡಲಾರರು. ಗಗನಸಂಚಾರಶಕ್ತಿಯುಳ್ಳ ಆ ದೇವಕುಮಾರರು, ಎಂತಹ ಶತ್ರುಗಳನ್ನೂ ಕೊಲ್ಲದೆ ಬಿಡುವವರಲ್ಲ. ಮೊದಲೇ ರೋಗಪೀಡಿತನಾದ ಮನುಷ್ಯನೊಬ್ಬನು, ಕಾಳರಾತ್ರಿಯನ್ನು ಕೈಯಿಂದ ಹಿಡಿಯಲೆಳಸಿದಂತೆ, ಈಗ ನೀನು ನನ್ನನ್ನು ನಿರ್ಬಂಧಿಸುತ್ತಿರುವೆ! ತಾಯಿಯ ತೊಡೆಯಲ್ಲಿ ಮಲಗಿದ ಒಂದು ಸಣ್ಣ ಮಗುವು, ಆಕಾಶದ ಚಂದ್ರನನ್ನು ಹಿಡಿಯುವುದಕ್ಕೆ ಆಶೆಪಡುವಂತೆ, ಈಗ ನೀನು ನನ್ನನ್ನು ಕೈಯಿಂದ ಮುಟ್ಟಲೆಳಸುವೆ. ಎಲೆ ಕೀಚಕಾ! ಹೆಚ್ಚೇಕೆ? ಆ ಗಂಧರ್ವರ ಪ್ರಾಣಪ್ರಿಯೆಯಾದ ನನ್ನನ್ನು ನೀನು ಬಯಸಿದರೆ, ಭೂಮಿಯಲ್ಲಿಯಾಗಲಿ, ಸ್ವರ್ಗದಲ್ಲಿಯಾಗಲಿ, ನಿನ್ನನ್ನು ಕಾಪಾಡಬಲ್ಲವನಾರೂ ಇಲ್ಲವೆಂದು ತಿಳಿ. ಮುಖ್ಯವಾಗಿ ನಿನ್ನ ಕ್ಷೇಮವನ್ನು ಚಿಂತಿಸುವಷ್ಟು ಬುದ್ಧಿಯು ನಿನಗಿಲ್ಲವೆಂದು ತೋರುವುದು. ಪರದಾರಗಮನವು ಅನುಚಿತವೆಂಬ ಬುದ್ಧಿಯು ಈಗಲಾದರೂ ನಿನಗೆ ಹುಟ್ಟಿದರೆ ನೀನು ಬದುಕಬಹುದು,” ಎಂದಳು.

ಇದು ಹದಿನೇಳನೆಯ ಅಧ್ಯಾಯವು.

ಕೀಚಕನ ನಿರ್ಬಂಧಕ್ಕಾಗಿ ಸುದೇಷ್ಣೆಯು ಮಧುವನ್ನು ಕರುವ ವ್ಯಾಜದಿಂದ ದ್ರೌಪದಿಯನ್ನು ಅವನ ಮನೆಗೆ ಕಳುಹಿಸಿದುದು.

ಕಾಮಮೋಹಿತನಾದ ಕೀಚಕನು ದ್ರೌಪದಿಯಿಂದ ಹೀಗೆ ತಿರಸ್ಕೃತನಾದಮೇಲೆ, ಅರಮನೆಯನ್ನು ಪ್ರವೇಶಿಸಿ, ತನ್ನ ಸಹೋದರಿಯಾದ ಸುದೇಷ್ಣೆಯ ಬಳಿಗೆ ಬಂದನು. ಬಿರುಗಾಳಿಯಿಂದ ಕಲಗಿದ ಸಮುದ್ರದಂತೆ ಮಿತಿಮೀರಿದ ಕಾಮಾತುರದಿಂದ ಮೋಹಾಕುಲಿತನಾದ ಆ ಕೀಚಕನು, ಸುದೇಷ್ಣೆಯ ಕಾಲುಗಳನ್ನು ಹಿಡಿದು, ತಲೆಯಮೇಲೆ ಕೈ ಜೋಡಿಸಿ, ಅವಳಮುಂದೆ ನಿಂತು, ದುಃಖದಿಂದ ಬಾರಿಬಾರಿಗೂ ನಿಟ್ಟುಸಿರನ್ನು ಬಿಡುತ್ತ, ಅವ್ಯಕ್ತವಾದ ಮೃದುವಾಕ್ಯದಿಂದ, ಗದ್ಗದಸ್ವರದೊಡನೆ ಹೀಗೆಂದು

ಹೇಳುವನು. ''ಸುದೇಷ್ಣೇ! ಆ ಸೈರಂಧ್ರಿಯು ನನ್ನಲ್ಲಿ ಅನುರಾಗವಿಟ್ಟು ನನ್ನನ್ನು ಸೇರುವಂತೆ ಮಾಡಬೇಕಾದ ಭಾರವು ನಿನ್ನದು. ಆ ಕೆಲಸವನ್ನು ಶೀಘ್ರದಲ್ಲಿ ಮಾಡಿದರೆಮಾತ್ರ ನನ್ನ ಪ್ರಾಣವು ಉಳಿಯುವುದು. ಆ ಸುಂದರಿಯು ನನ್ನಲ್ಲಿ ಪ್ರಸನ್ನಚಿತ್ತಳಾಗಿ, ನನ್ನನ್ನು ಸೇರದಿದ್ದರೆ ನಾನು ಯಮಪುರಿಗೆ ಹೋಗುವುದೇ ನಿಶ್ಚಯವು'' ಎಂದನು. ಇದನ್ನು ಕೇಳಿ ಸುದೇಷ್ಣೆಯು, ತನ್ನ ಪ್ರಿಯ ಸಹೋದರನಾದ ಕೀಚಕನನ್ನು ಕೈನೀಡಿ ಸಮೀಪಕ್ಕೆ ಕರೆದು, ಅವನ ಪ್ರಾಣರಕ್ಷಣೆಗಾಗಿ ತಕ್ಕ ಸಮಾಧಾನವಾಕ್ಯಗಳನ್ನು ಹೇಳುತ್ತ ''ಕೀಚಕಾ! ಆ ಸೈರಂಧ್ರಿಯು ನಮ್ಮಲ್ಲಿ ಮರೆಹೊಕ್ಕು ಬಂದವಳು. ಅವಳನ್ನು ನಿರಪಾಯವಾಗಿ ರಕ್ಷಿಸುವುದಾಗಿ ನಾನೂ ಅಭಯವನ್ನು ಕೊಟ್ಟಿರುವೆನು. ಅಲ್ಲದೆ ಅವಳು ಬಹಳ ಶುದ್ಧವಾದ ನಡತೆಯುಳ್ಳವಳು. ನಿನಗೆ ಮಂಗಳವಾಗಲಿ! ನಾನು ಅವಳೊಡನೆ ಅಂತಹ ಅನುಚಿತವಾದ ಮಾತುಗಳನ್ನಾಡಲಾರೆನು. ಆಕೆಯನ್ನು ಬೇರೊಬ್ಬ ಪುರುಷನು ಪಾಪಬುದ್ಧಿಯಿಂದ ಕೈಯಲ್ಲಿ ಮುಟ್ಟುವುದಕ್ಕೂ ಸಾಧ್ಯವಿಲ್ಲ. ಐದುಮಂದಿ ಗಂಧರ್ವರು ಅವಳನ್ನು ಸಂತೋಷಗೊಳಿಸುತ್ತ, ಅವಳಿಗೆ ಅಪಾಯವೇನೂ ಬಾರದಂತೆ ರಕ್ಷಿಸುತ್ತಿರುವರಂತೆ. ಅವಳು ನನ್ನಲ್ಲಿಗೆ ಬಂದಾಗ, ಮೊಟ್ಟಮೊದಲು ಅವಳೇ ನನಗೆ ಈ ಸಂಗತಿಯನ್ನು ತಿಳಿಸಿದಳು. ಆನೆಯ ಸುಂಡಿಲಂತೆ ಅಂದವಾದ ತೊಡೆಯುಳ್ಳ ಆ ಸೈರಂಧ್ರಿಯು ವಾಸ್ತವಾಂಶವನ್ನೇ ನನಗೆ ತಿಳಿಸಿರಬೇಕು. ಮಹಾಪ್ರಭಾವವುಳ್ಳ ಆ ಗಂಧರ್ವರು ಕೋಪಗೊಂಡರೆ, ಪ್ರಾಣವನ್ನೇ ತೆಗೆದುಬಿಡುವರು. ಸಹೋದರಾ! ಆಷ್ಟೇಕೆ? ಒಮ್ಮೆ ಮಹಾರಾಜನೂ ಕೂಡ ಅವಳನ್ನು ನೋಡಿ ಮೋಹಗೊಂಡು ಅವಳಲ್ಲಿ ಆಸೆಪಟ್ಟನು. ನಾನು ಅವನಿಗೆ ಸತ್ಯವಚನಗಳಿಂದ ಸಮಾಧಾನ ಹೇಳಿ, ಅವನ ಪಾಪಬುದ್ಧಿಯನ್ನು ನೀಗಿಸಿದೆನು. ನನ್ನ ಪತಿಯಾದ ರಾಜನು ಇವಳ ರೂಪವನ್ನು ನೋಡಿದುದು ಮೊದಲು, ಅನವರತವೂ ಮನಸ್ಸಿನಲ್ಲಿ ಅವಳನ್ನೇ ಚಿಂತಿಸಿ ಹೊಗಳುತ್ತಿದ್ದನು. ಆದರೆ, ಆಕೆಯ ಪತಿಗಳಾದ ಗಂಧರ್ವರು, ವೈರಿಗಳ ಪ್ರಾಣವನ್ನೇ ತೆಗೆಯತಕ್ಕ ಮಹಾ ಶೂರರೆಂಬುದನ್ನು ಕೇಳಿದಮೇಲೆ, ಅವನು ಈಗ ಆ ಗಂಧರ್ವರ ಭಯದಿಂದ ಅವಳನ್ನು ಮನಸ್ಸಿನಲ್ಲಿಯಾದರೂ ನೆನೆಸುವುದಿಲ್ಲ.

ಆ ಗಂಧರ್ವರಾದರೋ ಮಹಾಪ್ರಭಾವವುಳ್ಳವರು. ಗರುಡನಂತೆಯೂ, ವಾಯುವಿನಂತೆಯೂ ತೇಜೋಬಲವುಳ್ಳವರು. ಅವರು ಕೋಪಗೊಂಡರೆ ಪ್ರಳಯಕಾಲದ ಸೂರ್ಯನಂತೆ, ಮೂರು ಲೋಕಗಳನ್ನೂ ದಹಿಸಿಬಿಡುವರು. ಅವರ ಮಹಾಮಹಿಮೆಯನ್ನೂ, ಬಲವನ್ನೂ ಕುರಿತು ಸೈರಂಧ್ರಿಯು ನನಗೆ ವಿವರವಾಗಿ ಹೇಳಿರುವಳು. ನಿನ್ನಲ್ಲಿ ನನಗಿರುವ ಬಂಧುಸ್ನೇಹದಿಂದ, ನಿನ್ನ ಹಿತಕ್ಕಾಗಿ ಆ ರಹಸ್ಯವನ್ನು ನಿನಗೆ ಈಗ ತಿಳಿಸಬೇಕಾಯಿತು. ಆದುದರಿಂದ ಎಲೈ ಪ್ರಿಯಸಹೋದರನೆ! ನೀನು ಹೊಂದಬಾರದ ದುರ್ಗತಿಗೆ ನನ್ನನ್ನು ಗುರಿಮಾಡಬೇಡ! ಬಲಾಢ್ಯರಾದ ಗಂಧರ್ವರು, ನಿನ್ನ ಕುಲಕ್ಕೂ, ನಿನ್ನ ಐಶ್ವರ್ಯಕ್ಕೂ ದೊಡ್ಡ ಹಾನಿಯನ್ನುಂಟುಮಾಡುವರು. ಆದುದರಿಂದ ನಿನಗೆ ನಿನ್ನ ಪ್ರಾಣಗಳಲ್ಲಿ ಆಸೆಯಿದ್ದರೆ, ನನಗೂ ನೀನು ಪ್ರಿಯವನ್ನುಂಟುಮಾಡುವನಾಗಿದ್ದರೆ, ಅವಳಲ್ಲಿ ಮನಸ್ಸನ್ನಿಡಬೇಡ! ಆ ವಿಚಾರವನ್ನು ಸ್ಮರಿಸಲೂ ಬಾರದು" ಎಂದಳು.

ಈ ಮಾತನ್ನು ಕೇಳಿ ದುಷ್ಟಸ್ವಭಾವವುಳ್ಳ ಆ ಕೀಚಕನು ತಿರುಗಿ ಅವಳನ್ನು ಕುರಿತು "ಅಕ್ಕಾ! ಆ ಸೈರಂಧ್ರಿಗೆ ಬೆಂಬಲವಾಗಿ ನೂರು ಮಂದಿ ಗಂಧರ್ವರಿರಲಿ! ಸಾವಿರ ಮಂದಿಯಿರಲಿ! ಕೊನೆಗೆ ಲಕ್ಷ ಗಂಧರ್ವರಿದ್ದರೂ ನಾನೊಬ್ಬನೇ ಅವರೆಲ್ಲರನ್ನೂ ವಧಿಸಬಲ್ಲೆನು. ಐದುಮಂದಿ ಗಂಧರ್ವರು ನನಗಿದಿರೆ? ಸ್ತ್ರೀಯರಲ್ಲಿರುವ ಒಂದು ಪರಮ ರಹಸ್ಯವನ್ನು ನೀನರಿಯೆ ಅವರು ಹೊರಕ್ಕೆ ಪಾತಿವ್ರತ್ಯ ನಟನವನ್ನು ಮಾಡಬಹುದು. ಒಬ್ಬ ಪುರುಷನು ಒಳ್ಳೇ ಗಂಧವಸ್ತ್ರಾದಿಗಳಿಂದಲಂಕೃತನಾಗಿ ಏಕಾಂತದಲ್ಲಿ ಅವರ ಕಣ್ಣಿಗೆ ಬಿದ್ದರೆ, ಅವನು ಸ್ವಂತಪುತ್ರನಾಗಿರಲಿ, ಪೌತ್ರನಾಗಿರಲಿ, ಸಹೋದರನಾಗಿರಲಿ, ಅವನನ್ನು ಏಕಾಂತದಲ್ಲಿ ಕಂಡಾಗ ಒಳ್ಳೇ ಪತಿವ್ರತೆಯಾಗಿದ್ದ ಸ್ತ್ರೀಯಾಗಿದ್ದರೂ ಅವಳಿಗೆ, ಮನಸ್ಸು ಕದಲಿ, ಕಾಮರಸವು ಸ್ರವಿಸುವುದೆಂದು ನಾನು ಕೇಳಿರುವನು. ಹೀಗಿರುವಾಗ, ಲೋಕಸುಂದರನಾಗಿ, ಒಳ್ಳೇ ತರುಣವಯಸ್ಸುಳ್ಳ ನಾನು, ಸರ್ವಾಭರಣಗಳಿಂದಲಂಕೃತನಾಗಿ, ಮೈತುಂಬ ಗಂಧವನ್ನು ಪೂಸಿಕೊಂಡು, ಮುಂದೆ ನಿಂತರೆ, ಆ ಸೈರಂಧ್ರಿಯು ಕಾಮಪೀಡಿತೆಯಾಗಿ ನನಗೆ ವಶವಾಗುವುದರಲ್ಲಿ

ಸಂದೇಹವೇನಿದೆ? ನಾನು ಇನ್ನೂ ಜೀವದಿಂದಿರಬೇಕೆಂದು ನಿನಗೆ ಇಷ್ಟವಿದ್ದರೆ, ನೀನು ಈಗಲೇ ಅವಳಿಗೆ ನನ್ನ ವಿಷಯವನ್ನು ತಿಳಿಸಿ, ಅವಳನ್ನೊಪ್ಪಿಸಬೇಕು" ಎಂದನು.

ಆ ಮಾತನ್ನು ಕೇಳಿ ಸುದೇಷ್ಣೆಯು ತನ್ನ ಸಹೋದರನ ಬುದ್ಧಿಮೋಹವನ್ನು ಕಂಡು ಏನೊಂದೂ ತೋರದೆ, ದುಃಖದಿಂದ ಕೊರಗುತ್ತ ತನ್ನಲ್ಲ ತಾನು "ಅಯ್ಯೋ! ಇದೇನು ಕಷ್ಟವು? ಅಕಟಾ! ಇದೆಂತಹ ಸಂಕಟವು ಪ್ರಾಪ್ತವಾಯಿತು? ಎಂತಹ ಪಾಪಕಾರ್ಯವಿದು? ಅಯ್ಯೋ! ಇದರಿಂದ ಇವನಿಗೆ ಪಾತಾಳದವರೆಗಿನ ಅಧೋಗತಿಯೇ ನಿಶ್ಚಯವು. ಇವನು ಇನ್ನು ಬಡಬಾಗ್ನಿಯ ಬಾಯಿಗೆ ಬಿದ್ದಹಾಗೆಯೇ!" ಎಂದು ದುಃಖೋದ್ರೇಕದಿಂದ ರೋದಿಸತೊಡಗಿದಳು. ಆಮೇಲೆ ಆ ಕೀಚಕನನ್ನು ಕುರಿತು "ಕೀಚಕಾ! ನಿನ್ನಿಂದ ನನ್ನ ಇತರ ಸಹೋದರರೂ, ಸ್ನೇಹಿತರೂ ನಾಶಹೊಂದುವ ಕಾಲವು ಸಮೀಪಿಸಿತು. ನೀನು ಹೀಗೆ ಕಾಮತಾಪಕ್ಕೀಡಾಗಿ ಸಂಕಟಪಡುವಾಗ ನಾನೇನುಮಾಡಬಲ್ಲೆನು? ನಿನ್ನ ಕ್ಷೇಮವನ್ನೇ ನೀನು ಯೋಚಿಸಿದಹಾಗಿಲ್ಲ. ಕೇವಲ ಕಾಮಕ್ಕೆ ವಶನಾಗಿರುವೆ. ಎಲೌ ಪಾಪಬುದ್ಧಿಯುಳ್ಳವನೆ? ನಿನಗೆ ಕಾಮದಿಂದ ಇಂತಹ ಬುದ್ಧಿಮೋಹವು ಯಾವಾಗ ಉಂಟಾಯಿತೋ, ಆಗಲೇ ನಿನ್ನ ಆಯುಸ್ಸು ತೀರಿತೆಂದು ತಿಳಿ. ಎಲೈ ನರಾಧಮನೆ! ಯಾರೂ ಮಾಡಬಾರದ ಪಾಪಕಾರ್ಯವನ್ನು ನನ್ನಿಂದ ಮಾಡಿಸಲು ಪ್ರಯತ್ನಿಸುವೆಯಲ್ಲ! "ಒಬ್ಬನು ಮಾಡಿದ ಪಾಪಕಾರ್ಯದಿಂದ ಅವನ ಕುಲವೆಲ್ಲ ಕೆಡುವುದು" ಎಂದು ಪೂರ್ವಕಾಲದ ಸಜ್ಜನರು ಹೇಳಿರುವರು. ಇನ್ನು ನಿನಗೆ ಯಮನ ಪಟ್ಟಣವೇ ಗತಿ! ಇದರಲ್ಲಿ ಸಂದೇಹವಿಲ್ಲ. ಈ ನಿನ್ನ ಪಾಪಪ್ರವರ್ತನೆಯಿಂದ, ನಮ್ಮ ಮತ್ಸ್ಯಕುಲವೆಲ್ಲ ನಾಶವಾದಮೇಲೆಯಾದರೂ ನೀನು ನೆಮ್ಮದಿಯಿಂದಿರು. ಇನ್ನು ನೀನು ಹೊರಡು! ಬೇಗನೆ ನಿನ್ನ ಮನೆಗೆಹೋಗಿ ಏನಾದರೂ ಒಂದು ನೆವವನ್ನಿಟ್ಟು, ಒಳ್ಳೇ ಮದ್ಯವನ್ನೂ, ಅನ್ನವನ್ನೂ ಸಿದ್ಧಪಡಿಸಿಡು. ಅವುಗಳನ್ನು ಸಿದ್ಧಪಡಿಸಿದಮೇಲೆ, ನನಗೆ ಹೇಳಿಕಳುಹಿಸು! ಆಗ ನಾನು ಸೈರಂಧ್ರಿಯನ್ನು ಕರೆದು, ಆ ಮಧುವನ್ನೂ, ಅನ್ನವನ್ನೂ ಇಲ್ಲಿಗೆ ತರಿಸುವನೆಮ

ದಿಂದ ಅವಳನ್ನು ನಿನ್ನಲ್ಲಿಗೆ ಕಳುಹಿಸುವೆನು. ಆಗ ನೀನು ಏಕಾಂತವಾದ ಸ್ಥಳದಲ್ಲಿ, ಒಳ್ಳೇ ಮಾತುಗಳಿಂದ ಅವಳನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಯತ್ನಿಸಬಹುದು. ನಿನ್ನ ಮಾತುಗಳನ್ನು ಅವಳು ಸಹನದಿಂದ ಕೇಳುವುದಾದರೆ, ನ್ಯಾಯವಾದ ಮಧುರವಾಕ್ಯಗಳಿಂದಲೇ ಅವಳ ಮನಸ್ಸನ್ನು ನಿನ್ನಕಡೆಗೆ ತಿರುಗಿಸುವ ಪ್ರಯತ್ನವನ್ನು ಮಾಡು. ಸದ್ಯಕ್ಕೆ ನಡೆಸಬಹುದಾದ ಉಪಾಯವೇನೋ ಇಷ್ಟೇ! ಅದರ ಮುಂದಿನ ಸಂಭವಗಳನ್ನು ಕುರಿತು, ನಿನ್ನಲ್ಲಿ ನೀನೇ ಕ್ರಮವಾಗಿ ಆಲೋಚಿಸು" ಎಂದಳು.

ಕಾಲಚೋದಿತನಾದ ಆ ಕೀಚಕನು, ಸುದೇಷ್ಣೆಯು ಈ ಮಾತನ್ನು ಹೇಳಿದೊಡನೆ ತನ್ನಮನೆಗೆ ಹೊರಟು ಬಂದು, ಅಲ್ಲಿ ವಿಧವಿಧವಾದ ಭೋಜನವಸ್ತುಗಳನ್ನೂ, ಮದ್ಯವನ್ನೂ ಅತ್ಯಾತುರದಿಂದ ಸಿದ್ಧಪಡಿಸಿದನು. ಅಡು, ಕುರಿ, ಮೊದಲಾಗಿ ನಾನಾತರದ ಸಣ್ಣ ದೊಡ್ಡ ಮೃಗಗಳ ಮಾಂಸಗಳನ್ನು ಪಕ್ವಮಾಡಿಸಿಟ್ಟನು ಕುಶಲರಾದ ಅಡಿಗೆಯವರಿಂದ ನಾನಾತರದ ಭಕ್ಷ್ಯಗಳನ್ನು ಬೇಯಿಸಿಟ್ಟನು ಅನ್ನಪಾನಗಳನ್ನೆಲ್ಲ ಸಿದ್ಧಗೊಳಿಸಿದನು. ಆ ಮೂಢಾತ್ಮನು ಪಶುವಿನಂತೆ, ತನ್ನ ಕುತ್ತಿಗೆಗೆ ಕಾಲಪಾಶವು ಸುತ್ತಿಕೊಂಡಿರಲು, ತನ್ನ ಮುಂದಿನ ಮೃತ್ಯುವನ್ನು ತಿಳಿಯದೆ, ಸಂಸ್ಕಾರಗಳಿಂದ ಮದ್ಯಗಳನ್ನೂ, ಭಕ್ಷ್ಯಭೋಜ್ಯಗಳನ್ನೂ ಸಿದ್ಧಪಡಿಸಿಟ್ಟು, ಒಡನೆಯೇ ತನ್ನ ಸಹೋದರಿಯಾದ ಸುದೇಷ್ಣೆಯಮನೆಗೆ ಹೊರಟುಬಂದನು. ಅಲ್ಲಿ ಆಕೆಯನ್ನು ಕುರಿತು "ಸುದೇಷ್ಣೆ! ಬಗೆಬಗೆಯ ಮದ್ಯಮಾಂಸಗಳನ್ನೂ, ಭಕ್ಷಣಗಳನ್ನೂ ಸಿದ್ಧಪಡಿಸಿರುವೆನು. ಏನಾದರೂ ನೆವದಿಂದ ಆ ಸೈರಂಧ್ರಿಯನ್ನು ನನ್ನ ಮನೆಯಕಡೆಗೆ ಬರುವಂತೆ ಮಾಡು. ಅವಳನ್ನು ತ್ವರೆಗೊಳಿಸಿ ಬೇಗನೆ ಕಳುಹಿಸು! ನಾನೂ ಈಗಾಗಲೇ ವೃಷಧ್ವಜನಾದ ಮಹಾದೇವನಿಗೆ ಹರಕೆಯನ್ನು ಕಟ್ಟಿ, 'ನನಗೆ ಆ ಸೈರಂಧ್ರಿಯೊಡನೆ ರತಿಯನ್ನಾಗಲಿ, ಅಥವಾ ಮೃತಿಯನ್ನಾಗಲಿ ಕರುಣಿಸಬೇಕೆ'ಂದು ಪ್ರಾರ್ಥಿಸಿಕೊಂಡಿರುವೆನು," ಎಂದನು. ಈ ಮಾತನ್ನು ಕೇಳಿ ಸುದೇಷ್ಣೆಯು ಮನಸ್ಸಂಕಟದಿಂದ ಆ ಕೀಚಕನನ್ನು ದುರದುರನೆ ನೋಡಿ, ನಿಟ್ಟುಸಿರನ್ನು ಬಿಡುತ್ತ "ಕೀಚಕಾ! ನೀನು ಹಿಂತಿರುಗು! ಮನೆಗೆ ಹೋಗು. ನಾನು

ಸೈರಂಧ್ರಿಗೆ, ನಿನ್ನ ಮನೆಯಿಂದ ಮದ್ಯವನ್ನು ತರುವಂತೆ ಹೇಳಿ ಈಗಲೇ ಅಲ್ಲಿಗೆ ಕಳುಹಿಸಿಕೊಡುವೆನು" ಎಂದಳು. ಪಾಪಾತ್ಮನಾದ ಕೀಚಕನು, ಆ ಮಾತನ್ನು ಕೇಳಿ ಅತಿಸಂಭ್ರಮದಿಂದ ಮನಸ್ಸಿನಲ್ಲಿ ಆ ಸೈರಂಧ್ರಿಯನ್ನೇ ಸ್ಮರಿಸುತ್ತಾ ಮನೆಗೆ ಹೊರಟುಬಂದನು.

ಇತ್ತಲಾಗಿ ಸುದೇಷ್ಣೆಯು ಸೈರಂಧ್ರಿಯನ್ನು ಕರೆದು "ಓ ಸೈರಂಧ್ರೀ! ನನ್ನ ಪ್ರಿಯಕ್ಕಾಗಿ ನೀನೊಂದು ಕೆಲಸವನ್ನು ಮಾಡಬೇಕಾಗಿದೆ. ಈಗ ನನಗೆ ಬಹಳ ದಾಹವಾಗಿದೆ. ಈಗಲೇ ನೀನು ನನ್ನ ತಮ್ಮನ ಮನೆಗೆ ಹೋಗಿ ಅಲ್ಲಿಂದ ಮಧುವನ್ನು ತೆಗೆದುಕೊಂಡು ಬಾ!" ಎಂದಳು. ಈ ಮಾತು ಕಿವಿಗೆ ಬಿದ್ದೊಡನೆ ದ್ರೌಪದಿಯು ಭಯದಿಂದ ಬೆಜ್ಜರಬಿದ್ದು, ಮನಸ್ಸಿನಲ್ಲಿ ಕೊರಗುತ್ತಾ, ದೀರ್ಘವಾಗಿ ನಿಟ್ಟುಸಿರನ್ನು ಬಿಟ್ಟು, ರಾಣಿಯನ್ನು ನೋಡಿ "ಅಮ್ಮಾ! ನಾನು ಅಲ್ಲಿಗೆ ಹೋಗಲಾರೆನು. ಕಾಮಾಸಕ್ತನಾದ ಆ ಸೂತಪುತ್ರನು ಇದಕ್ಕೆ ಮೊದಲೇ ನನ್ನನ್ನು ಕಾಮಿಸಿ, ಮಾತಾಡಿಸತೊಡಗಿದನು. ನಾನು ಅತನ ಮನೆಗೆ ಹೋಗಲಾರೆನು. ಅವನು ಲಜ್ಜೆಯಿಲ್ಲದವನು! ನೀನೂ ಇದನ್ನು ತಿಳಿಯದವಳಲ್ಲ. ರಾಜಪುತ್ರೀ! ನಾನು ಮೊದಲು ನಿನ್ನಲ್ಲಿಗೆ ಜೀವನಕ್ಕಾಗಿ ಬಂದಾಗಲೇ, ನನಗೆ ಇತರ ಪುರುಷರ ಸಂದರ್ಶನವು ಕೂಡದೆಂದು ಮೊದಲೇ ನಿನ್ನಿಂದ ಶಪಥಮಾಡಿಸಿಕೊಂಡಿರುವೆನಲ್ಲವೆ? ನಿನ್ನ ತಮ್ಮನಾದ ಕೀಚಕನಾದರೋ ಮಹಾಮೂರ್ಖನು. ಕಾಮಾತುರದಿಂದ ಹುಚ್ಚು ಹಿಡಿದಂತಿರುವನು. ನಾನು ಇಲ್ಲದ್ದಾಗಲೇ ಅವನು ನನ್ನನ್ನು ಅವಮಾನಗೊಳಿಸಲು ಯತ್ನಿಸಿದವನು. ಹೀಗಿರುವಾಗ ನಾನು ಬಂಧುಗಳಾರೂ ಸಹಾಯಕ್ಕಿಲ್ಲದಂತೆ ಏಕಾಕಿನಿಯಾಗಿ ಅವನ ಮನೆಗೆ ಹೋದರೆ, ಅವನು ನನ್ನನ್ನು ನೋಡಿ ಸುಮ್ಮನೆ ಬಿಡುವನೆ? ಮಹಾರಾಜ್ಞೀ? ನಿನ್ನ ಕೈಕೆಳಗೆ ಇನ್ನೂ ಎಷ್ಟೋ ಮಂದಿ ಗೌಡಿಯರಿರುವರು. ಅವರಲ್ಲಿ ಯಾವಳೊಬ್ಬಳನ್ನಾದರೂ ಈ ಕಾರ್ಯಕ್ಕೆ ನಿಯಮಿಸು. ನನ್ನನ್ನು ಮಾನದಿಂದ ನಿನ್ನಲ್ಲಿಟ್ಟುಕೊಂಡು ಕಾಪಾಡಬೇಕಾದ ಕರ್ತವ್ಯವು ನಿನ್ನದು! ದೇವಿ! ಆ ಕೀಚಕನ ಹೆಸರನ್ನೆತ್ತಿದರೂ ನನ್ನ ಮೈ ನಡುಗುವುದು! ನಾನು ಅಲ್ಲಿಗೆ ಸರ್ವಥಾ ಹೋಗಲಾರೆನು. ಬೇರೆ


ವಿನಾದರೂ ಕಾರ್ಯವಿದ್ದರೆ, ಎಂತಹ ಕಷ್ಟದ ಕೆಲಸವಾದರೂ ಅದನ್ನು ಮಾಡಲು ನಾನು ಸಿದ್ಧಳಾಗಿರುವೆನು" ಎಂದು ಪ್ರಾರ್ಥಿಸಿ ಕೇಳಿಕೊಂಡಳು.

ದ್ರೌಪದಿಯ ಮಾತುಗಳನ್ನು ಕೇಳಿ ಸುದೇಷ್ಣೆಯು, ಕೋಪದಿಂದ ಪಾಂಚಾಲಿಯನ್ನು ಕುರಿತು "ಸೈರಂಧ್ರೀ! ನೀನು ಹೋಗಲೇಬೇಕು! ನಾನು ನಿನ್ನನ್ನು ನಿರ್ಬಂಧಿಸುವೆನು. ಆ ಕೀಚಕನ ಮನೆಗೆ ನೀನೇ ಹೋಗಬೇಕು. ಆ ಕಾರ್ಯಕ್ಕೆ ತಕ್ಕ ಬೇರೆ ಪರಿಚಾರಿಕೆಯಾವಳೂ ನನ್ನಲ್ಲಿಲ್ಲ. ನೀನೇ ಹೋಗಿ ಬರಬೇಕು. ಬೇಗನೆ ಹೊರಡು. ಅವಶ್ಯವಾಗಿ ಆ ಕಾರ್ಯಕ್ಕೆ ನೀನೇ ಹೋಗಿ ತೀರಬೇಕು. ಇನ್ನು ಬೇರೆ ಮಾತೆತ್ತ ಬೇಡ! ಬೇಗನೆ ಹೊರಡು! ತ್ವರೆಮಾಡು! ನನಗೆ ಪ್ರಿಯವಾದ ಈ ಕಾರ್ಯವನ್ನು ಬೇಗನೆ ಮುಗಿಸಿ ಬಾ! ನನ್ನ ಸಹೋದರನು ಅಂತಹ ಕೆಟ್ಟ ಸ್ವಭಾವದವನಲ್ಲ. ನೀನೇಕೆ ಸಂದೇಹಪಡುವೆ?" ಎಂದು, ತನಗಿದ್ದ ಅಧಿಕಾರದರ್ಪದಿಂದ ಅವಳನ್ನು ಅದೇ ಕಾರ್ಯಕ್ಕೆ ನಿಯಮಿಸಿದಳು. ಒಡನೆಯೇ ಮುಚ್ಚಳವಿದ್ದ ಒಂದು ಸುವರ್ಣಪಾತ್ರೆಯನ್ನು ತರಿಸಿ, ಸೈರಂಧ್ರಿಯ ಕೈಗೆ ಕೊಟ್ಟು "ಸೈರಂಧ್ರೀ! ಈ ಪಾತ್ರೆಯನ್ನು ತೆಗೆದುಕೊಂಡು ಹೋಗಿ, ಒಳ್ಳೇ ಸುವಾಸನೆಯುಳ್ಳ, ಸುಸಂಸ್ಕೃತವಾದ ಮಧುವನ್ನು ತರಬೇಕು" ಎಂದಳು. ಆಗ ದ್ರೌಪದಿಗೆ ಸುದೇಷ್ಣೆಯ ಮಾತುಗಳಲ್ಲಿ ಶಂಕೆತೋರಿ, ಮೈಯಲ್ಲಿ ನಡುಕ ಹುಟ್ಟಿತು. ಕಣ್ಣುಗಳಲ್ಲಿ ಧಾರೆಧಾರೆಯಾಗಿ ನೀರು ಸುರಿಯಲಾರಂಭಿಸಿತು. ದುಃಖದಿಂದ ರೋದಿಸುತ್ತಾ, ತನ್ನ ಮಾವಂದಿರಾದ ದೇವತೆಗಳನ್ನು ಮನಸಾ ಧ್ಯಾನಿಸಿ, ನಮಸ್ಕರಿಸಿ "ನಾನು ಪಂಚಪಾಂಡವರನ್ನು ಹೊರತು ಬೇರೆ ಪುರುಷನನ್ನು ಕಾಣದವಳೆಂಬುದು ಸತ್ಯವಾದರೆ, ಆ ಸತ್ಯಬಲದಿಂದ, ನನಗೆ ಕೀಚಕನಿಂದ ಅವಮಾನವುಂಟಾಗದಿರಲಿ! ಆ ಐದುಮಂದಿಯನ್ನು ಹೊರತು ಇತರ ಪುರುಷನನ್ನು ನಾನು ಸೇರದವಳೆಂಬುದು ನಿಜವಾಗಿದ್ದರೆ, ಆ ಸತ್ಯದಿಂದ ಕೀಚಕನು ನನ್ನನ್ನು ವಶಮಾಡಿಕೊಳ್ಳಲು ಶಕ್ತನಾಗದಿರಲಿ" ಎಂದು ಪ್ರಾರ್ಥಿಸಿದಳು.

ಇದು ಹದಿನೆಂಟನೆಯ ಅಧ್ಯಾಯವು.

ದ್ರೌಪದಿಯು ಸೂರ್ಯಾದಿ ದೇವತೆಗಳನ್ನು ಪ್ರಾರ್ಥಿಸಿದುದು. ಕೀಚಕನು ದ್ರೌಪದಿಯನ್ನು ಕಾಲಂದೊದೆದಾಗ, ಸೂರ್ಯದೂತನೊಬ್ಬನು ಬಂದು ಕೀಚಕನನ್ನು ಹೊಡೆದು ನೆಲಕ್ಕೆ ಕೆಡಹಿದುದು. ಧರ್ಮರಾಜನು ಕೀಚಕನನ್ನು ಕೊಲ್ಲಬೇಕೆಂದಿದ್ದ ಭೀಮನನ್ನು ಸಂಜ್ಞೆಯಿಂದ ನಿವಾರಿಸಿದುದು.

ಓ ಜನಮೇಜಯರಾಜನೇ ! ಕೇಳು ! "ಸುದೇಷ್ಣೆಯ ಕಠಿನಾಜ್ಞೆಯನ್ನು ಮೀರಲಾರದೆ ದ್ರೌಪದಿಯು ಕೀಚಕನ ಮನೆಗೆ ಹೊರಡುವಾಗ, ಯಮ, ವಾಯು, ಸೂರ್ಯ, ಇಂದ್ರಾದಿ ದೇವತೆಗಳನ್ನೂ, ಧರ್ಮದೇವತೆಯನ್ನೂ, ಕುಬೇರ, ವರುಣ, ರುದ್ರಾಗ್ನಿಗಳನ್ನೂ, ಸಾವಿತ್ರಿಯನ್ನೂ, ಬ್ರಹ್ಮ ವಿಷ್ಣುಗಳನ್ನೂ, ಸ್ಕಂದನನ್ನೂ, ಭಗ, ಪೂಷರೆಂಬ ದೇವತೆಗಳನ್ನೂ, ತನ್ನ ರಕ್ಷಣೆಗಾಗಿ ಸ್ತೋತ್ರಮಾಡಿದಳು. ಜಿಂಕೆಯ ಕಣ್ಣಿನಂತೆ ಕಣ್ಣುಳ್ಳ ಮತ್ತು ಧರ್ಮಚಾರಿಣಿಯಾದ ಆ ಬಾಲೆಯು, ಆಮೇಲೆ ಒಂದು ಮುಹೂರ್ತಕಾಲದವರೆಗೆ ಸೂರ್ಯದೇವನನ್ನು ಮಂತ್ರಪೂರ್ವಕವಾಗಿ ಧ್ಯಾನಿಸುತ್ತ ನಿಂತಳು. ಆಗ ಸೂರ್ಯದೇವನು ಅವಳ ಕಷ್ಟದಶೆಯನ್ನೆಲ್ಲ ಮನಸ್ಸಿಗೆ ತಂದುಕೊಂಡು, ಅವಳಲ್ಲಿ ಕನಿಕರಗೊಂಡು, ತನ್ನ ದೂತನಾದ ರಾಕ್ಷಸನೊಬ್ಬನನ್ನು ಅವಳ ರಕ್ಷಣೆಗಾಗಿ ನಿಯಮಿಸಿ, ಬೇರೆ ಯಾರಿಗೂ ತಿಳಿಯದಂತೆ ಅವಳನ್ನು ಹಿಂಬಾಲಿಸಿ ಹೋಗುವಂತೆ ಆಜ್ಞಾಪಿಸಿದನು. ಅದರಂತೆಯೇ ಸೂರ್ಯದೂತನಾದ ಆ ರಾಕ್ಷಸನು ನಿಮಿಷಮಾತ್ರವೂ ದ್ರೌಪದಿಯನ್ನು ಬಿಟ್ಟಗಲದೆ, ಅದೃಶ್ಯನಾಗಿಯೇ ಅವಳನ್ನು ಹಿಂಬಾಲಿಸಿ ಹೋಗುತ್ತಿದ್ದನು. ದ್ರೌಪದಿಯು ಕೀಚಕನ ಮನೆಗೆ ಹೋಗುವಾಗ, ರಾಣಿಯ ಕಠಿನಾಜ್ಞೆಯನ್ನು ನೆನೆಸಿಕೊಂಡು ಒಮ್ಮೊಮ್ಮೆ ಬೇಗಬೇಗನೆ ಹೆಜ್ಜೆಯಿಟ್ಟು ನಡೆಯುವಳು ! ಆ ಕೀಚಕನ ಮನೆಗೆ ಹೋಗಲಿಷ್ಟವಿಲ್ಲದೆ, ಒಮ್ಮೊಮ್ಮೆ ಕಾಲನ್ನು ಹಿಂತೆಗೆಯುವಳು ! ದುಃಖದಿಂದ ಹಾಗೆಯೇ ಮೈಮರೆತು ಅಲ್ಲಲ್ಲಿ ನಿಂತು ಬಿಡುವಳು ! ಹೀಗೆ ಬಹಳ ಕಷ್ಟದಿಂದ ದ್ರೌಪದಿಯು ಕೀಚಕನ ಮನೆಯನ್ನು ಸೇರಿದಳು. ಹೆಣ್ಣುಜಿಂಕೆಯಂತೆ ಭಯದಿಂದ ತತ್ತಳಿಸುತ್ತ, ಇದಿರಾಗಿ ಬರುತ್ತಿರುವ ಆ ಸೈರಂಧ್ರಿಯನ್ನು ಕಂಡೊಡನೆ, ಹೊಳೆಯನ್ನು



೯೭. ವಿರಾಟಸಭೆಗೆ ಓಡಿಬಂದ ದ್ರೌಪದಿಯನ್ನು ಬೆನ್ನಟ್ಟಿ ಬಂದು ಕೀಚಕನು ಕಾಲಿಂದೊದೆಯುತಿದ್ದಾಗ, ಸೂರ್ಯದೂತನು ಹಿಂದಿನಿಂದ ಕೀಚಕನನ್ನೆಳೆದುಹಾಕಿದುದು. ಆಗಲೇ ಕೀಚಕನನ್ನು ಕೊಲ್ಲುವುದಕ್ಕೆ ಯತ್ನಿಸಿದ ಭೀಮನಿಗೆ ಧರ್ಮರಾಜನು ಸನ್ನೆ ಮಾಡಿ ತಡೆದುದು.



೯೭. ವಿರಾಟಸಭೆಗೆ ಓಡಿಬಂದ ದ್ರೌಪದಿಯನ್ನು ಬೆನ್ನಟ್ಟಿ ಬಂದು ಕೀಚಕನು ಕಾಲಿಂದೊದೆಯುತಿದ್ದಾಗ, ಸೂರ್ಯದೂತನು ಹಿಂದಿನಿಂದ ಕೀಚಕನನ್ನೆಳೆದುಹಾಕಿದುದು. ಆಗಲೇ ಕೀಚಕನನ್ನು ಕೊಲ್ಲುವುದಕ್ಕೆ ಯತ್ನಿಸಿದ ಭೀಮನಿಗೆ ಧರ್ಮರಾಜನು ಸನ್ನೆಮಾಡಿ ತಡೆದುದು.

ಬೀಳಬೇಕೆಂದು ಕೋರುವೆಯೇಕೆ? ಸುದೇಷ್ಣೆಯು ಮಧುವನ್ನು ತರುವು ದಕ್ಕಾಗಿ ನನ್ನನ್ನು ನಿನ್ನಲ್ಲಿಗೆ ಕಳುಹಿಸಿರುವಳು. ನಿನ್ನ ಸಹೋದರಿಯು ಬಹಳ ದಾಹಪೀಡಿತಳಾಗಿರುವುದರಿಂದ ನಾನು ಬೇಗನೆ ಹೋಗಬೇಕಾಗಿದೆ. ಆದುದರಿಂದ ಶೀಘ್ರದಲ್ಲಿ ಮಧುವನ್ನು ಕೊಟ್ಟು ನನ್ನನ್ನು ಕಳುಹಿಸಿ ಬಿಡು,'' ಎಂದಳು. ಅದಕ್ಕೆ ಕೀಚಕನು, ''ಎಲೆ ಕಲ್ಯಾಣಿ! ನಾನು ಬೇರೆಯವರ ಮೂಲಕವಾಗಿ ಆ ಮಧುವನ್ನು ಕಳುಹಿಸಿಕೊಡುವೆನು. ಆ ಕೆಲಸಕ್ಕಾಗಿ ನೀನೇಕೆ ಹೋಗಬೇಕು? ಈಗ ನೀನು ಇಲ್ಲಿಗೆ ಬಂದಿರುವುದು ನನಗಾಗಿಯೇ,'' ಎಂದು ಹೇಳುತ್ತ, ಆ ಸೈರಂಧ್ರಿಯ ಬಲಗೈಯನ್ನು ಹಿಡಿದುಕೊಂಡನು. ಆಗ ದ್ರೌಪದಿಯು ಬಲಾತ್ಕಾರದಿಂದ ಅವನ ಕೈಯನ್ನು ಬಿಡಿಸಿಕೊಂಡು, ತಾನು ತಂದಿದ್ದ ಮಧುಪಾತ್ರೆಯನ್ನು ಅಲ್ಲಿಯೇ ಬಿಸಾಡಿ, ರಾಜಾಸ್ಥಾನದಲ್ಲಿ ರಕ್ಷಣೆಯನ್ನು ಬೇಡುವುದಕ್ಕಾಗಿ ಯುಧಿಷ್ಠಿರನಿದ್ದ ರಾಜಸಭೆಗೆ ಓಡಿಬಂದಳು. ಕೀಚಕನೂಕೂಡ ಅವಳನ್ನು ಹಿಂಬಾಲಿಸಿ ಓಡಿಬಂದು, ಬಿಚ್ಚಿದ ಅವಳ ತಲೆಕೂದಲನ್ನು ಹಿಡಿದು ಅವಳನ್ನು ನೆಲಕ್ಕೆ ಕೆಡಹಿ, ಸಭೆಯಲ್ಲಿದ್ದ ಅನೇಕ ವೃದ್ಧಬ್ರಾಹ್ಮಣರೂ, ಕ್ಷತ್ರಿಯರೂ, ರಾಜನಾದ ವಿರಾಟನೂ ನೋಡುತ್ತಿದ್ದಹಾಗೆಯೇ ಅವಳನ್ನು ಕಾಲಿಂದ ಒದೆದನು. ಕೀಚಕನು ಕಾಲಿಂದೊದೆದ ವೇಗಕ್ಕೆ ದ್ರೌಪದಿಯ ಮುಖದಿಂದ ರಕ್ತವು ಸುರಿಯಿತು. ಇಷ್ಟರಲ್ಲಿಯೇ ದ್ರೌಪದಿಗೆ ಕಾವಲಾಗಿ ಸೂರ್ಯನಿಂದ ಕಳುಹಿಸಲ್ಪಟ್ಟ ರಾಕ್ಷಸದೂತನು ಹಿಂದಿನಿಂದ ಬಂದು, ಅವನಮೇಲೆ ಬಿದ್ದು ಅವನನ್ನು ವಾಯುವೇಗದಿಂದ ಬಹುದೂರಕ್ಕೆ ಬಿಸಾಡಿದನು. ರಾಕ್ಷಸನು ಬಿಸಾಡಿದ ವೇಗಕ್ಕೆ ಆ ಕೀಚಕನು ಗಿರಗಿರನೆ ತಿರುಗುತ್ತ ಬುಡಕಡಿದ ಮರದಂತೆ ನಿಶ್ಚೇಷ್ಟನಾಗಿ ಬಿದ್ದುಬಿಟ್ಟನು. ದ್ರೌಪದಿಯ ಸ್ಥಿತಿಯನ್ನು ನೋಡಿ ಸಭೆಯಲ್ಲಿ ದೊಡ್ಡ ಹಾಹಾಕಾರವು ಹುಟ್ಟಿತು. ಆ ಸಭೆಯ ನಾಲ್ಕು ಕಡೆಗಳಿಂದಲೂ ''ಎಲೆ ಸೂತಪುತ್ರ! ಕೀಚಕಾ! ಇದು ನಿನಗೆ ಉಚಿತವಲ್ಲ! ದೀನೆಯಾಗಿ, ಅನಾಥೆಯಾಗಿರುವ ಹೆಂಗಸನ್ನು ನೀನು ಹೀಗೆ ಹೊಡೆಯುವುದೆಂದರೇನು? ಈ ಅನ್ಯಾಯವುಂಟೇ?'' ಎಂಬ ನಿಂದಾಧ್ವನಿಯು ಹೊರಟಿತು. ಈ ಸಂಭವವು ನಡೆಯುತ್ತಿರುವಾಗ, ಆ ರಾಜಸಭೆಯಲ್ಲ ಸಹೋದರರಾದ ಐದುಮಂದಿ ಪಾಂಡವರೂ ಕಣ್ಣಾರೆ ನೋಡುತ್ತಿದ್ದರು. ದ್ರೌಪ

ದಿಗೆ ಉಂಟಾದ ಈ ಅವಮಾನವನ್ನು ನೋಡಿ ಅವರು ಸಹಿಸಲಾರದೆ ಹೋದರು. ಅದರಲ್ಲಿಯೂ ಭೀಮನಿಗೆ ತನ್ನ ಪತ್ನಿಯಾದ ದ್ರೌಪದಿಯನ್ನು ಕೀಚಕನು ನೆಲಕ್ಕೆ ಕೆಡಹಿ ಕಾಲಿಂದೊದೆದುದನ್ನು ಕಣ್ಣಾರೆನೋಡಿದಾಗ ದುಃಖಾವೇಶದಿಂದ ಕಣ್ಣುಗಳಲ್ಲಿ ಫಳಫಳನೆ ನೀರು ಹೊರಟಿತು. ಬಿಸಿಬಿಸಿಯಾಗಿ ನಿಟ್ಟುಸಿರನ್ನು ಬಿಟ್ಟನು. ಅವನ ಕಣ್ಣಿನ ರೆಪ್ಪೆಗಳೆರಡೂ ಉಬ್ಬಿದುವು. ಮುಖದಲ್ಲಿ ಬೆವರಿನಿಂದ ಕೂಡಿದ ಭಯಂಕರ ಭ್ರುಕುಟಿಗಳು (ಹುಬ್ಬುಗಂಟುಗಳು) ಉಬ್ಬಿ ಕಾಣಿಸಿದುವು. ದುರಾತ್ಮನಾದ ಕೀಚಕನನ್ನು ಆ ಕ್ಷಣವೇ ಕೊಂದುಬಿಡಬೇಕೆಂದು ನಿಶ್ಚಯಿಸಿ, ಕೋಪದಿಂದ ಕಟಕಟನೆ ಹಲ್ಲುಗಳನ್ನು ಕಡಿಯುತ್ತ, ತಾನು ಕುಳಿತಿದ್ದ ಆಸನದಿಂದ ಥಟ್ಟನೆ ಮೇಲೆದ್ದು, ಸಮೀಪದಲ್ಲಿದ್ದ ಒಂದು ಮರವನ್ನು ದೃಷ್ಟಿಸಿ, ಅತ್ತಲಾಗಿ ವಿರಾಟನನ್ನೂ ತನ್ನ ಕಡೆಗಣ್ಣಿನಿಂದ ನೋಡಿದನು. ಆಗ ಇವೆಲ್ಲವನ್ನೂ ನೋಡುತ್ತಿದ್ದ ಯುಧಿಷ್ಠಿರನು, ದುರಾತ್ಮನಾದ ಕೀಚಕನನ್ನು ಕೊಲ್ಲುವುದಕ್ಕಾಗಿ ಭೀಮನು ಸಿದ್ಧನಾಗಿರುವುದನ್ನು ತಿಳಿದು, ಬೇರೆ ಯಾರಿಗೂ ತಿಳಿಯದಂತೆ ಮುಖಸಂಜ್ಞೆಯಿಂದ ಭೀಮನನ್ನು ನಿವಾರಿಸುತ್ತ, ಅವನನ್ನು ಕುರಿತು, "ಎಲ್ಲೆ ಅಡಿಗೆಯವನೇ! ನೀನು ಈ ಸಾಹಸಕಾರ್ಯವನ್ನು ಮಾಡಬೇಡ. ಈ ಮರವು ಚೆನ್ನಾಗಿ ಫಲಿಸಿದೆ! ಇದರಲ್ಲಿ ಒಣಗಿದ ಕಟ್ಟಿಗೆಗಳೇನೂ ಸಿಕ್ಕುವಹಾಗಿಲ್ಲ. ಹಾಗೆ ನಿನಗೆ ಅಡಿಗೆಗಾಗಿ ಕಟ್ಟಿಗೆಗಳನ್ನು ಸಂಪಾದಿಸಬೇಕೆಂಬ ಆಸೆಯಿದ್ದರೆ, ಈ ಪಟ್ಟಣದ ಹೊರಗಿನ ಬಯಲಿಗೆ ಹೋಗಿ, ಅಲ್ಲಿ ಬೇಕಾದಷ್ಟು ಗಿಡಗಳನ್ನು ನೀನು ಬುಡಸಹಿತವಾಗಿ ಕಿತ್ತುಹಾಕಬಹುದು. ನಿನ್ನ ಸಾಹಸಕ್ಕೆ ಇದು ಸ್ಥಳವಲ್ಲ. ಅದು ನಿನಗೇನೂ ಕಷ್ಟವಾಗಲಾರದು. ಹಸಿಯಾದ ಒಂದು ಮರದ ನೆರಳನ್ನಾಶ್ರಯಿಸಿ, ಅದರಿಂದ ಉಪಕಾರವನ್ನು ಪಡೆದ ಮನುಷ್ಯನು ತಾನು ಪಡೆದ ಆ ಉಪಕಾರವನ್ನು ಮರೆಯಬಾರದು. ಅದರ ಒಂದು ಎಲೆಯನ್ನಾದರೂ ಕಿತ್ತುಹಾಕಬಾರದು. ಎಲೆ ಪಾಚಕಾ! ನಿನ್ನ ಕೋಪಕ್ಕೆ ಇದು ಸಮಯವಲ್ಲ. ಈ ಚಪಲಬುದ್ಧಿಯನ್ನು ಬಿಡು. ಬಲಾಢ್ಯರಿಗೆ ಇದು (ಮರವನ್ನು ಮುರಿಯುವುದು) ಏನೂ ಒಂದು ದೊಡ್ಡ ಕಾರ್ಯವಲ್ಲ. ಆದರೂ ಈ ಮರವು ಇನ್ನೂ ಪೂರ್ಣವಾಗಿ ಬೆಳೆದಿಲ್ಲ. ಎರಡುಪಕ್ಷಗಳು ಇನ್ನೂ ಇದಕ್ಕೆ ಕಡಿಮೆ

ಯಾಗಿವೆ,'' ಎಂದು ಸಂಕೇತವಾಕ್ಯದಿಂದ ಆ ಭೀಮನನ್ನು ನಿವಾರಿಸಿದನು. ಹೀಗೆ ಧರ್ಮರಾಜನು ತನ್ನ ಸಂಕೇತವಾಕ್ಯವು ಎಲ್ಲಿ ತಿಳಿದುಬಿಡುವುದೋ, ಎಂದು ಭಯಪಟ್ಟು, ತನ್ನ ಕೈಯ ಹೆಬ್ಬೆರಳಿನಿಂದ ತನ್ನ ಕಾಲಿನ ಹೆಬ್ಬೆರಳನ್ನು ಅಮುಕಿ ಸಂಜ್ಞೆಯನ್ನು ಮಾಡಲು, ಧೀರನಾದ ಭೀಮನು ಧರ್ಮರಾಜನ ಮಾತುಗಳಿಂದಲೂ, ಅವನ ಚೇಷ್ಟೆಗಳಿಂದಲೂ ಅವನ ಅಭಿಪ್ರಾಯವನ್ನು ತಿಳಿದುಕೊಂಡು, ಬಲಾತ್ಕಾರದಿಂದ ತನ್ನ ಕೋಪವನ್ನು ತನ್ನಲ್ಲಿಯೇ ಅಡಗಿಸಿಕೊಂಡು ಸುಮ್ಮನಾದನು. ಆದರೆ, ಇತ್ತಲಾಗಿ ಭೀಮನ ಆರ್ಭಟವನ್ನೂ, ಅತ್ತಲಾಗಿ ಧರ್ಮರಾಜನ ಸಂಜ್ಞೆಗಳನ್ನೂ ನೋಡಿದಾಗ ದ್ರೌಪದಿಗೆ ದುಸ್ಸಹವಾದ ಕೋಪವೂ, ದುಃಖವೂ ಉಂಟಾಗಿ, ಮೇಲೆಮೇಲೆ ರೋದಿಸತೊಡಗಿದಳು. ಬೆನ್ನಟ್ಟಿಬಂದ ಕೀಚಕನಿಂದ ರಕ್ಷಣೆಯನ್ನು ಬೇಡುವುದಕ್ಕಾಗಿ ಸಭಾಮುಖಕ್ಕೆ ಬಂದು ನಿಂತಿದ್ದ ಆ ದ್ರೌಪದಿಯು, ದುಃಖದಿಂದಳುತ್ತ, ತಮ್ಮನ್ನೇ ತಾವು ದಹಿಸುವಂತೆ ಕೋಪದಿಂದ ಕೆಂಪೇರಿಕೆಂಡದಂತಿರುವ ಕಣ್ಣುಗಳಿಂದ ಕೇವಲ ಅಲ್ಲಿ ದೀನಮನಸ್ಕರಾಗಿದ್ದ ತನ್ನ ಪತಿಗಳನ್ನು ದುರದುರನೆ ನೋಡಿದಳು. ಹೇಗೆ ನೋಡಿದರೇನು? ಧರ್ಮಯುಕ್ತವಾದ ಪ್ರತಿಜ್ಞೆಯನ್ನು ಕಾಪಾಡುವುದಕ್ಕಾಗಿ, ತನ್ನ ನಿಜಸ್ಥಿತಿಯನ್ನು ಮರೆಸಿಟ್ಟುಕೊಂಡು, ಆ ಸಭಾಜನರೆಲ್ಲರ ಮುಂದೆ ಹೀಗೆಂದು ಹೇಳುವಳು. ''ಯಾವ ರಾಜರು ಪ್ರಜಾರಕ್ಷಣಶೀಲರಾಗಿ, ಎಣೆಯಿಲ್ಲದ ಪರಾಕ್ರಮವುಳ್ಳವರಾಗಿ, ಸತ್ಯಧರ್ಮಗಳಲ್ಲಿ ನಿರತರಾಗಿ, ತಮ್ಮ ರಾಜಕಾರ್ಯಗಳನ್ನು ಪಾಲಿಸುತ್ತ, ಸ್ವಜನರಲ್ಲಿಯೂ ಇತರ ಪ್ರಜೆಗಳಲ್ಲಿಯೂ ಭೇದಬುದ್ಧಿಯಿಲ್ಲದಿರುವರೋ, ಪ್ರಿಯಜನರಲ್ಲಿಯೂ, ವಧಾರ್ಹರಲ್ಲಿಯೂ ಯಾರು ಸಮತ್ವದಿಂದ ವರ್ತಿಸುವರೋ, ಮತ್ತು ಇಬ್ಬರಿಗೆ ವಿವಾದಗಳು ಬಂದಾಗ, ಧರ್ಮಾಸನದಲ್ಲಿರುವ ಯಾವ ರಾಜರು ನಿಷ್ಪಕ್ಷಪಾತವಾಗಿ ಕಾರ್ಯಗಳನ್ನು ಪರಿಶೀಲಿಸುವರೋ, ಅಂತವರು ಇಹ ಪರ ಲೋಕಗಳೆರಡನ್ನೂ ಜಯಿಸುವರು. ಎಲೈ ಮಹಾರಾಜನೆ! ಈಗ ಧರ್ಮಾಸನದಲ್ಲಿ ಕುಳಿತಿರುವ ನಿನಗೆ ನಿರಪರಾಧಿಯಾದ ನನ್ನನ್ನು ರಕ್ಷಿಸಬೇಕಾದುದು ಧರ್ಮವು. ದುರಾತ್ಮನಾದ ಕೀಚಕನು ನಿಮ್ಮೆಲ್ಲರ ಕಣ್ಣಿದಿರಿಗಾಗಿಯೇ, ನಿರಪರಾಧೆಯಾದ ನನ್ನನ್ನು ತನ್ನ ಕೈಕೆಳಗಿನ ದಾಸಿಯನ್ನು ಹೇಗೋ ಹಾಗೆ ಕಾಲಿಂದೊದೆ

ದಿರುವನು. ಅಲ್ಲದೆ ಓ ಮಹಾರಾಜಾ! ನಿನ್ನ ಮುಂದೆಯೇ ಅವನು ನನ್ನನ್ನು ಹಿಡಿದೆಳೆದು, ನೆಲಕ್ಕೆ ಕುಕ್ಕಿ ಕೆಡಹಿದನು. ನಾನು ನಿರಪರಾಧಿನಿ! ಅಬಲೆಯಾದ ಹೆಂಗಸು! ನಿಮ್ಮ ಕರುಣೆಗೆ ಪಾತ್ರಳಾದ ನನ್ನನ್ನು ಕಾಪಾಡಬೇಡವೆ? ಕೀಚಕನಿಂದ ಭಯಗ್ರಸ್ತಳಾಗಿ ಬಂದ ನನ್ನನ್ನು ರಕ್ಷಿಸಿ, ನಿನ್ನ ರಾಜಧರ್ಮವನ್ನು ಪಾಲಿಸಬೇಡವೆ? ಓ ಮತ್ಸ್ಯರಾಜನೆ! ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಂತೆ ನೀನು ಪ್ರಜೆಗಳನ್ನು ಕಾಪಾಡಬೇಕು. ಯಾವ ರಾಜನು ಮೋಹಾಕುಲವಾದ ಅಧರ್ಮದಿಂದ ತನ್ನ ರಾಜಕಾರ್ಯಗಳನ್ನು ನಡೆಸುವನೋ, ಅಂತಹ ದುರಾತ್ಮನು ಬಹು ಶೀಘ್ರದಲ್ಲಿಯೇ ಶತ್ರುಗಳ ವಶನಾಗುವನು. ನೀನು ಉತ್ತಮವಾದ ಮತ್ಸ್ಯಕುಲದಲ್ಲಿ ಹುಟ್ಟಿದವನು. ಮತ್ಸ್ಯಕುಲಕ್ಕೆ ಸತ್ಯವೇ ಮುಖ್ಯವು. ಧರ್ಮಪ್ರಧಾನವಾದ ಅಂತಹ ಕುಲದಲ್ಲಿ ನೀನು ಹುಟ್ಟಿದವನಾದುದರಿಂದ, ನಾನು ಈಗ ನಿನ್ನಲ್ಲಿ ಮರೆಹೊಕ್ಕು ಪ್ರಾರ್ಥಿಸಿದೆನು. ರಾಜೇಂದ್ರಾ! ಆ ಪಾಪಿಯಾದ ಕೀಚಕನಿಂದ ನನ್ನನ್ನು ರಕ್ಷಿಸಬೇಕು. ಆ ನರಾಧಮನು ನಾನು ಅನಾಥೆಯೆಂಬುದನ್ನು ತಿಳಿದು, ಧರ್ಮವನ್ನು ಯೋಚಿಸದೆ ನನ್ನನ್ನು ಹೊಡೆದಿರುವನು. ಮಾಡಬಾರದ ಕಾರ್ಯಗಳಿಂದ ಪ್ರಜೆಗಳನ್ನು ತಪ್ಪಿಸಿ, ನ್ಯಾಯವಾದ ಕಾರ್ಯಗಳಿಗೆ ಪ್ರೋತ್ಸಾಹಕೊಡುತ್ತ, ಒಳ್ಳೇ ನಡತೆಯಿಂದ ವರ್ತಿಸುವ ರಾಜರೇ ಉತ್ತಮವಾದ ಸ್ವರ್ಗಗತಿಯನ್ನು ಹೊಂದುವರು. ಕಾರ್ಯಾಕಾರ್ಯ ವಿಶೇಷಗಳನ್ನೆಲ್ಲ ತಿಳಿದೂ, ಸ್ವೇಚ್ಛೆಯಿಂದ ಪ್ರವರ್ತಿಸಿ, ಪ್ರಜೆಗಳಲ್ಲಿ ಪಾಪಕಾರ್ಯಕ್ಕೆ ಎಡೆಗೊಡುವ ರಾಜರು ತಲೆಕೆಳಗಾಗಿ ನರಕಕೂಪದಲ್ಲಿ ಬೀಳುವರು. ನಡೆಸಬೇಕಾದ ರಾಜಕಾರ್ಯಗಳನ್ನು ಸರಿಯಾಗಿ ನಡೆಸುವುದರಿಂದ ರಾಜರು ಪಡೆಯತಕ್ಕ ಧರ್ಮವು, ಅವರಿಗೆ ಯಜ್ಞಗಳಿಂದಾಗಲಿ, ದಾನಗಳಿಂದಾಗಲಿ, ಗುರುಕುಲಸೇವೆಯಿಂದಲಾಗಲಿ, ಲಭಿಸಲಾರದು. ಹಿಂದೊಮ್ಮೆ ದೇವೇಂದ್ರನು, ಧರ್ಮಾಧರ್ಮ ವಿಚಾರದಲ್ಲಿ ತನಗಿದ್ದ ಒಂದು ಸಂದೇಹವನ್ನು ಕುರಿತು ಬ್ರಹ್ಮದೇವನಲ್ಲಿಗೆ ಹೋಗಿ ಪ್ರಶ್ನೆಮಾಡಿದಾಗ, ಬ್ರಹ್ಮನು ಅವನ ಸಂದೇಹ ನಿವೃತ್ತಿಗಾಗಿ, ಲೋಕದಲ್ಲಿ ಕ್ರಿಯಾಕ್ರಿಯೆಗಳೆಂಬೆರಡೂ, ಪುಣ್ಯಪಾಪಗಳನ್ನು ಪ್ರತ್ಯೇಕವಾಗಿ ತಂದು ಸೇರಿಸತಕ್ಕ ವಿಷಯಗಳನ್ನು ವಿವರಿಸುತ್ತ, ಆ ಇಂದ್ರನನ್ನು ಕುರಿತು, ತಾನು ಪೂರ್ವಕಾಲದಲ್ಲಿ ಪ್ರಜೆಗಳನ್ನು ಸೃಜಿಸಿ

ದಾಗ, ತಾನು ಅವರಿಗೆ "ಓ ಪ್ರಜೆಗಳೆ! ಕಾರ್ಯಾಕಾರ್ಯಗಳು, ಧರ್ಮಾಧರ್ಮಗಳು, ಕ್ರಿಯಾಕ್ರಿಯೆಗಳೆಂಬೀ ಮೂರು ದ್ವಂದ್ವಗಳನ್ನೂ ನೀವು ಚೆನ್ನಾಗಿ ಪರಿಶೀಲಿಸಬೇಕು. ಇಂತಹ ದ್ವಂದ್ವಗಳಿಗೆ ಸಂಬಂಧಪಟ್ಟ ಸದಾಚಾರ ದುರಾಚಾರಗಳಿಂದ, ಮನುಷ್ಯನು ಆಯಾ ಕರ್ಮಕ್ಕೆ ತಕ್ಕ ಫಲವನ್ನು ಪಡೆಯುವನು. ಇವುಗಳಿಂದಲೇ ಸ್ವರ್ಗನರಕಗಳು ಪ್ರಾಪ್ತವಾಗುವುವು. ಮನುಷ್ಯನು ಮೋಹವಶನಾಗಿ, ಸತ್ಕಾರ್ಯವನ್ನೋ, ದುಷ್ಕಾರ್ಯವನ್ನೋ ಮಾಡಿ, ಮರಣವನ್ನು ಹೊಂದಿದಮೇಲೆ, ಫಲಾನುಭವದಲ್ಲಿ ತನ್ನ ಸ್ವಬುದ್ಧಿಯಿಂದ ಪಶ್ಚಾತ್ತಾಪಪಟ್ಟು ಕೊರಗಬೇಕಾಗುವುದು" ಎಂದು ಎಚ್ಚರಿಸಿದ ಸಂಗತಿಯನ್ನು ಇಂದ್ರನಿಗೆ ತಿಳಿಸಿದಮೇಲೆ ಇಂದ್ರನು, ಬ್ರಹ್ಮನ ಬುದ್ಧಿವಾದವನ್ನು ಪಡೆದು, ಅದರಂತೆ ಸ್ವರ್ಗರಾಜ್ಯವನ್ನು ಪಾಲಿಸುತ್ತಿದ್ದನು. ಆದುದರಿಂದ ರಾಜೇಂದ್ರಾ! ದೇವರಾಜನಾದ ಬ್ರಹ್ಮನು ಹೇಳಿದ ನೀತಿಯನ್ನನುಸರಿಸಿ, ಕಾರ್ಯಾಕಾರ್ಯ ವಿವೇಚನೆಗಳಲ್ಲಿ ಸ್ಥಿರಬುದ್ಧಿಯುಳ್ಳವನಾಗಿರು" ಎಂದು ಹೇಳಿದಳು.

ಇಲ್ಲಿಗೆ ಹತ್ತೊಂಭತ್ತನೆಯ ಅಧ್ಯಾಯವು.

ಕೀಚಕನನ್ನು ದಂಡಿಸದಿದ್ದುದಕ್ಕಾಗಿ ವಿರಾಟನನ್ನು ದ್ರೌಪದಿಯು ನಿಂದಿಸಿದುದು. ವಿರಾಟನು ಸಮಾಧಾನವನ್ನು ಹೇಳಿದುದು. ಯುಧಿಷ್ಠಿರನು (ಕಂಕಸನ್ಯಾಸಿಯು) ದ್ರೌಪದಿಯನ್ನು ಸಮಾಶ್ವಾಸಿಸಿದುದು.

ದ್ರೌಪದಿಯು ಹೀಗೆ ಅಳುತ್ತಿದ್ದರೂ, ಬಲದಿಂದ ಕೊಬ್ಬಿದ ಕೀಚಕನನ್ನು ಶಿಕ್ಷಿಸುವುದಕ್ಕೆ ವಿರಾಟನು ಅಶಕ್ತನಾದುದರಿಂದ, ಒಳ್ಳೇ ಮಾತುಗಳಿಂದಲೇ ಆ ಕೀಚಕನನ್ನು ನಿವಾರಿಸಿದನು. ಅಂತಹ ಮಹಾಪರಾಧಿಯಾದ ಕೀಚಕನನ್ನು, ಅವನ ಅಪರಾಧಕ್ಕೆ ತಕ್ಕಂತೆ ದಂಡಿಸದೆ ಬಿಟ್ಟುದಕ್ಕಾಗಿ, ವಿರಾಟನಮೇಲೆ ದ್ರೌಪದಿಗೆ ಮಹತ್ತಾದ ಕೋಪವುಂಟಾಯಿತು. ದ್ರೌಪದಿಯಾದರೋ, ಅಂತಹ ಅಪರಾಧಿಯಾದ ಕೀಚಕನ ವಿಷಯದಲ್ಲಿ

ಹೇಗೆ ನಡೆಯಬೇಕೆಂಬ ವ್ಯವಹಾರ ಧರ್ಮಗಳನ್ನು ಚೆನ್ನಾಗಿ ಬಲ್ಲವಳು. ಅಂತವನ ವಿಷಯದಲ್ಲಿಯೂ ರಾಜನು ದಂಡಿಸದೆ ಸುಮ್ಮನಿರುವುದನ್ನು ಕಂಡು, ಆಕೆಯು ಉತ್ತಮವಾದ ರಾಜಧರ್ಮವನ್ನು ಪರ್ಯಾಲೋಚಿಸಿ, ಆ ಸಭೆಯಲ್ಲಿ ರಾಜನನ್ನೂ, ರಾಜನ ಮನೋನುವರ್ತಿಗಳಾದ ಸಭಾಸದರನ್ನೂ, ಅಪರಾಧಿಯಾದ ಕೀಚಕನನ್ನೂ ನೋಡಿ, ದುಃಖದಿಂದ ವಿರಾಟನನ್ನು ನಿರ್ದೇಶಿಸಿ ತಿರುಗಿ ಹೀಗೆಂದು ಹೇಳುವಳು, "ಓ ರಾಜಾ! ನೀನು ರಾಜನೆನಿಸಿಕೊಂಡಿದ್ದರೂ, ದುರಾತ್ಮನಾದ ಈ ಕೀಚಕನ ವಿಷಯದಲ್ಲಿ ನೀನು ನಿಜವಾಗಿ ರಾಜನಂತೆ ನಡೆದುಕೊಳ್ಳಲಿಲ್ಲ. ನಿನ್ನ ನೀತಿಯು ಕೇವಲ ಚೋರರ ಸ್ವಭಾವವನ್ನು ಹೋಲುವುದು. ಸಜ್ಜನರಲ್ಲಿ ಇಂತಹ ಸ್ವಭಾವವಿರದು. ಓ ಸದಸ್ಯರೇ! ಕೇಳಿರಿ! ಧರ್ಮವನ್ನು ವಿಚಾರಿ ನಡೆದವನು ಈ ಕೀಚಕನು ಮಾತ್ರವೇ ಅಲ್ಲ. ಈ ಮತ್ಸ್ಯರಾಜನೂ ತನಗೆ ಯೋಗ್ಯವಾದ ಧರ್ಮದಲ್ಲಿ ನಡೆಯಲಿಲ್ಲ. ಅವನ ಆಶ್ರಿತರಾಗಿ ಈ ಸಭೆಯಲ್ಲಿರುವವರೂ ಧರ್ಮವನ್ನು ತಿಳಿದು ನಡೆಯಲಿಲ್ಲ. ಕೀಚಕನಿಗೇನೋ ಧರ್ಮಲೇಶವೂ ತಿಳಿಯದು. ಅವನಂತೆಯೇ ಇಲ್ಲಿರುವ ರಾಜಭೃತ್ಯರೂ ಧರ್ಮವನ್ನು ತಿಳಿದವರಲ್ಲ. ಈ ರಾಜನೂ ನ್ಯಾಯಮಾರ್ಗವನ್ನು ಹಿಡಿದು ನುಡಿಯಲಿಲ್ಲ. ಅವನ ಮಂತ್ರಿಗಳೂ ನ್ಯಾಯವನ್ನು ತಿಳಿಯದೆ ಹೋದರು. ಓ ರಾಜಾ! ರಾಜಸಭೆಯಲ್ಲಿ ನಾನು ವಿರಾಟರಾಜನಾದ ನಿನ್ನನ್ನು ನಿಂದಿಸುವೆನೆಂದು ತಿಳಿಯಬೇಡ! ನಿನ್ನಿದಿರಾಗಿಯೇ ನಾನು ಈ ಕೀಚಕನಿಂದ ಹೀಗೆ ಕಾಲಿನಿಂದ ಒದೆಯಲ್ಪಡುವುದು ಅನ್ಯಾಯವಲ್ಲವೆ? ಧರ್ಮವನ್ನತಿಕ್ರಮಿಸಿ ನಡೆದ ಈ ಕೀಚಕನ ದೌರಾತ್ಮ್ಯವನ್ನು ಸಭಾಸದರೆಲ್ಲರೂ ನೋಡಲಿ! ಎಲೈ ವಿರಾಟರಾಜನೆ! ನಾನು ನಿರಪರಾಧಿನಿ! ದಿಕ್ಕಿಲ್ಲದವಳು! ನನ್ನ ಸ್ಥಿತಿಯನ್ನು ನೋಡು. ದುಷ್ಟಜನರಲ್ಲಿ ಇಂಪಾದ ಬುದ್ಧಿವಾದಗಳಾವುವೂ ಕೆಲಸಕ್ಕೆ ಬಾರವು. ದುಷ್ಟರಿಗೆ ದಂಡನವನ್ನೇ ವಿಧಿಸಬೇಕಾದುದು ರಾಜಧರ್ಮವು. ಯಾವ ರಾಜನು ದಂಡಕ್ಕೆ ಅರ್ಹರಲ್ಲದವರನ್ನು ದಂಡಿಸುವನೋ, ಯಾವನು ದಂಡಿಸಬೇಕಾದವರನ್ನು ದಂಡಿಸದೆ ಬಿಡುವನೋ, ಅಂತವನು ಲೋಕದಲ್ಲಿ ರಾಜಶಬ್ದಕ್ಕೇ ಅರ್ಹನಲ್ಲ. ಕುಂಟರು, ಕುರುಡರು, ಬಡವರು, ಅಶಕ್ತರು, ಕೃಪಣರು, ಗುಜ್ಜಾರಿಗಳು, ಮಂಕರು,

ದಿಕ್ಕಿಲ್ಲದವರು, ಅರಿಯದ ಮಕ್ಕಳು, ಕೈಲಾಗದ ವೃದ್ಧರು, ದುಷ್ಟರಿಂದಲೂ ಚೋರರಿಂದಲೂ ಬಾಧಿತರಾದವರು ಪುರುಷರಾಗಿರಲಿ, ಸ್ತ್ರೀಯರಾಗಿರಲಿ, ಅವರನ್ನು ರಕ್ಷಿಸಬೇಕಾದುದು ರಾಜನ ಧರ್ಮವು. ಪ್ರಜೆಗಳಲ್ಲಿ ದಿಕ್ಕಿಲ್ಲದವರಿಗೆ ರಾಜನೇ ದಿಕ್ಕಾಗಿರುವನು. ತಂದೆತಾಯಿಗಳಿಲ್ಲದವರಿಗೆ ಅವನೇ ತಾಯಿ ಮತ್ತು ತಂದೆ! ಗುರುವಿಲ್ಲದವರಿಗೆ ಅವನೇ ಗುರು! ಗತಿಯಿಲ್ಲದವರಿಗೆ ಅವನೇ ಗತಿ! ಹೀಗೆ ಲೋಕದ ಜನರಿಗೆ ರಾಜನೇ ಸರ್ವವಿಧದಲ್ಲಿಯೂ ಆಶ್ರಯನಾಗಿರುವನು. ಮುಖ್ಯವಾಗಿ ಎಲೈ ರಾಜನೆ! ದಿಕ್ಕಿಲ್ಲದಿರುವ ಪತಿವ್ರತೆಯಾದ ಹೆಂಗಸೊಬ್ಬಳನ್ನು, ದುಷ್ಟರಾದ ಬೇರೆ ಪುರುಷರು ಸ್ಪರ್ಶಿಸುವುದಾದರೆ, ಆ ಸ್ತ್ರೀಯನ್ನು ತನ್ನ ಮಗಳಂತೆ ಭಾವಿಸಿ ರಕ್ಷಿಸಬೇಕಾದುದು ರಾಜನ ಧರ್ಮವು. ಇಷ್ಟು ದಿನಗಳವರೆಗೆ ನಾನು ನಿನ್ನ ನಗರದಲ್ಲಿ ನಿನ್ನ ಮಗಳಿಗಿಂತಲೂ ಹೆಚ್ಚಾಗಿ ನಿನ್ನ ಪ್ರೀತಿಗೆ ಪಾತ್ರಳಾಗಿದ್ದೆನು. ಈಗ ಕೀಚಕನು ನಿನ್ನಿದಿರಾಗಿಯೇ ನನ್ನನ್ನು ಕಾಲಿಂದ ಒದೆಯುವಂತಾಯಿತು. ನನ್ನನ್ನು ನೋಡಬಾರದೆ?" ಎಂದು ರೋದಿಸತೊಡಗಿದಳು. ಆಗ ವಿರಾಟನು "ಸೈರಂಧ್ರೀ! ನನ್ನ ಪರೋಕ್ಷದಲ್ಲಿ ನಿಮ್ಮಿಬ್ಬರಿಗೂ ನಡೆದ ಕಲಹಕಾರಣವೇನೆಂಬುದನ್ನು ನಾನರಿಯೆನು. ನಿಜಸ್ಥಿತಿಯನ್ನು ತಿಳಿಯದ ನಾನು, ಹೇಗೆತಾನೇ ದೋಷಭಾಗಿಯಾಗುವೆನು?" ಎಂದನು.

ಈ ಮಾತನ್ನು ಕೇಳಿ ದ್ರೌಪದಿಯು, ದುಃಖವನ್ನು ತಡೆಯಲಾರದೆ ಕೋಪದಿಂದ ಆ ಮಹಾಸಭೆಯನ್ನು ನೋಡಿ "ಯಾರಲ್ಲಿ ವೈರವನ್ನು ಸಂಪಾದಿಸಿದನರು, ಕಾಲಿಂದ ನೆಲವನ್ನು ಮುಟ್ಟಿ ನಿದ್ರಿಸಲಾರರೋ, ಅಂತಹ ಮಹಾತ್ಮರ ಪತ್ನಿಯಾದ ನನ್ನನ್ನು ಈ ಸೂತಪುತ್ರನು ಕಾಲಿಂದ ಒದೆದನು. ಯಾರು ಇತರರಿಗೆ ಕೊಡುವರೇ ಹೊರತು ಇತರರಿಂದ ಪ್ರತಿಗ್ರಹಿಸುವುದಿಲ್ಲವೋ, ಯಾರು ವೇದಗಳಲ್ಲಿಯೂ, ಬ್ರಾಹ್ಮಣರಲ್ಲಿಯೂ ವಿಶ್ವಾಸವುಳ್ಳವರೋ, ಸತ್ಯವಾದಿಗಳಾದ ಯಾರ ಧನುಷ್ಟಂಕಾರಮಾತ್ರವೇ ದುಂದುಭಿಧ್ವನಿಯಂತೆ ಕಠೋರವಾಗಿ ಕೇಳಿಸುವುದೋ, ಅಂತಹ ವೀರರ ಪ್ರಿಯಪತ್ನಿಯಾದ ನನ್ನನ್ನು ಸೂತಪುತ್ರನು ತನ್ನ ಕಾಲಿಂದ ಒದೆದನು. ಯಾರು

ಮಹಾತೇಜಸ್ವಿಗಳೂ, ಬಲವಂತರೂ, ಕ್ಷಮಾವಂತರೂ, ಮಾನವಂತರೂ ಮಹಾಧನುರ್ಧಾರಿಗಳೂ, ಯುದ್ಧವೀರರೂ, ಬಲಗರ್ವಿತರೂ ಆಗಿ, ಪೌರುಷಪ್ರಧಾನರಾಗಿರುವರೋ, ಅಂತವರ ಮಾನಿನೀಮಣಿಯೆನಿಸಿದ ನನ್ನನ್ನು ಸೂತಪುತ್ರನು ಕಾಲಿಂದೊದೆದಿರುವನು. ಮಹಾಬಲವುಳ್ಳ ಯಾರು ಕೋಪಿಸಿದ ಮಾತ್ರಕ್ಕೆ ಈ ಸಮಸ್ತ ಲೋಕಗಳನ್ನೂ ನಾಶಮಾಡುವರೋ ಅಂತವರ ಪ್ರಿಯೆಯಾದ ನನ್ನನ್ನು ಸೂತಪುತ್ರನು ಕಾಲಿಂದೊದೆದನು! ವೀರ್ಯದಲ್ಲಿಯಾಗಲಿ, ಸತ್ಯದಲ್ಲಿಯಾಗಲಿ, ಬಲದಲ್ಲಿಯಾಗಲಿ, ಇಂದ್ರಿಯನಿಗ್ರಹದಲ್ಲಿಯಾಗಲಿ, ಯಾರಿಗೆ ಸಮಾನನಾದವನು ಬೇರೊಬ್ಬನಿಲ್ಲವೋ, ಅಂತಹ ಮಹಾತ್ಮರ ಮನೋಹಾರಿಣಿಯಾದ ನನ್ನನ್ನು ಸೂತಪುತ್ರನು ಕಾಲಿಂದ ಒದೆದನು! ಸೌಭಾಗ್ಯಗಳಿಂದಾಗಲಿ ಯಾರಿಗೆ ಸಮಾನನಾದವನು ಲೋಕದಲ್ಲಿ ಬೇರೊಬ್ಬನಿಲ್ಲವೋ ಅಂತವರ ಮನೋಹಾರಿಣಿಯಾದ ನನ್ನನ್ನು ಸೂತಪುತ್ರನು ಕಾಲಿಂದೊದೆದಿರುವನು. ಅದರಲ್ಲಿಯೂ, ಈಗ, ಎಲೈ ರಾಜನೆ! ಪ್ರಜೆಗಳಿಗೆ ಹಿತೈಷಿಯೆಂದು ಹೇಳಿಸಿಕೊಳ್ಳುವ ನಿನ್ನ ಕಣ್ಣೆದಿರಾಗಿಯೇ, ಆ ಕೀಚಕನು ನನ್ನನ್ನು ಹೀಗೆ ನಿರ್ದಯವಾಗಿ ಹೊಡೆದನಲ್ಲವೆ? ಅಯ್ಯೋ! ಈ ಮಹಾಸಭೆಯಲ್ಲಿ ಆ ದುರಾತ್ಮನನ್ನು ದಂಡಿಸುವರೊಬ್ಬರೂ ಇಲ್ಲವೆ? ಆಹಾ! ಮರೆಹೊಕ್ಕವರಿಗೆ ಬೆಂಬಲವಾಗಿ ಕಾಪಾಡತಕ್ಕ ಮಹಾಬಲವುಳ್ಳ ನನ್ನ ಪತಿಗಳು ಈಗ ಈ ಲೋಕದಲ್ಲಿ ಎಲ್ಲಿ ತಲೆಮರೆಸಿಕೊಂಡು ತಿರುಗುತ್ತಿರುವರೋ? ಮಹಾಬಲಾಢ್ಯರೂ ತೇಜಸ್ವಿಗಳೂ, ಆದ ಆ ನನ್ನ ಪತಿಗಳು, ಸೂತಪುತ್ರನಿಂದ ಹೀಗೆ ಅವಮಾನಿತಳಾದ ನನ್ನನ್ನು ನೋಡಿಯೂ, ಶಕ್ತಿಹೀನರಂತೆ ಹೇಗೆ ಸೈರಿಸುತ್ತಿರುವರೋ? ಈಗ ಅವರ ಆ ಕೋಪವೆಲ್ಲಿ ಹೋಯಿತು? ಅವರ ವೀರ್ಯವೆಲ್ಲಿ ಹೋಯಿತು? ಅವರ ಬಲವೆಲ್ಲಿ ಹೋಯಿತು? ಅಯ್ಯೋ! ಅವರು ಹೀಗೆ ದುರಾತ್ಮನಾದ ಕೀಚಕನಿಂದ ಹಿಂಸಿಸಲ್ಪಡುವ ತಮ್ಮ ಪ್ರಿಯಪತ್ನಿಯಾದ ನನ್ನನ್ನು ಈ ವಿಪತ್ತಿನಿಂದ ತಪ್ಪಿಸಿ ಕಾಪಾಡುವುದಕ್ಕೆ ಇಷ್ಟಪಡದಿರುವರಲ್ಲ! ಅಯ್ಯೋ! ಈಗ ನಾನೇನುಮಾಡಲಿ? ನನ್ನ ಪತಿಗಳೂ ನನ್ನನ್ನು ಕೈಬಿಟ್ಟು, ಈ ವಿರಾಟರಾಜನೂ ಧರ್ಮದೂಷಕನಾಗಿ, ನಿರಪರಾಧಿಯಾದ ನನ್ನನ್ನು ಬೇರೊಬ್ಬರು ಹೊಡೆದುಕೊಲ್ಲುತ್ತಿರುವಾಗಲೂ ಕಣ್ಣಾರೆ ನೋಡುತ್ತ ಸುಮ್ಮನಿದ್ದ ಪಕ್ಷದಲ್ಲಿ,

ಅಬಲೆಯಾದ ನಾನು ಏನನ್ನು ತಾನೇ ಮಾಡಬಲ್ಲೆನು? ಯಾವ ಸಭೆಯಲ್ಲಿ ಧರ್ಮವನ್ನು ಮೆಟ್ಟಿ ಅಧರ್ಮವು ಮೇಲೆನಿಸುವುದೋ, ಅಧರ್ಮದಿಂದ ಧರ್ಮವನ್ನು ಕಾಪಾಡತಕ್ಕವರು ಯಾವ ಸಭೆಯಲ್ಲಿರುವುದಿಲ್ಲವೋ ಅಲ್ಲಿರ ತಕ್ಕ ಸಭಾಸದರೆಲ್ಲರೂ ಹತಪ್ರಾಯರೇ! ಯಾವ ಸಭೆಯಲ್ಲಿ ಎಲ್ಲರ ಕಣ್ಣ ಮುಂದೆ ಧರ್ಮವು ಅಧರ್ಮದಿಂದಲೂ, ಸತ್ಯವು ಅಸತ್ಯದಿಂದಲೂ ಪರಾ ಭವಿಸಲ್ಪಡುವುದೋ ಆ ಸಭೆಯಲ್ಲಿದ್ದವರೆಲ್ಲರೂ ಹತಪ್ರಾಯರೇ" ಎಂದಳು.

ಹೀಗೆ ದೈನ್ಯದಿಂದ ಕೂಗಿ ರೋದಿಸುತ್ತಿರುವ ಸೈರಂಧ್ರಿಯ ಮಾತನ್ನು ಕೇಳಿ, ಆ ಸಭೆಯಲ್ಲಿದ್ದವರೆಲ್ಲರೂ ಅವಳ ಧೈರ್ಯಕ್ಕೂ, ನ್ಯಾಯವಾದಕ್ಕೂ ಮೆಚ್ಚಿ "ಭಲೆ! ಶಹಬಾಸ್!" ಎಂದು ಅವಳನ್ನು ಕೊಂಡಾಡಿದರು. ಅನೇಕರು ಕೀಚಕನನ್ನು ನಿಂದಿಸಿದರು! ಕೆಲವರು ವಿರಾಟನನ್ನು ನಿಂದಿಸಿದರು! ಕೆಲವರು ಸುದೇಷ್ಣೆಯನ್ನು ಬೈಯುತ್ತಿದ್ದರು. ಹೀಗೆ ಆ ಸೈರಂಧ್ರಿಯಲ್ಲಿ ಕನಿಕರಗೊಂಡಿದ್ದ ಆ ಸಭಾಸದರು, ತಮ್ಮೊಳಗೆ ತಾವು ಒಬ್ಬರಿಗೊಬ್ಬರು ಹೀಗೆಂದು ಹೇಳತೊಡಗಿದರು. "ಆಹಾ! ಸರ್ವಾಂಗಸುಂದರಿಯೂ, ವಿಶಾಲಲೋಚನೆಯೂ ಆದ ಈಕೆಯು ಯಾವನಿಗೆ ಪತ್ನಿಯೆನಿಸಿರುವಳೋ, ಅವನೇ ಮಹಾಭಾಗ್ಯಶಾಲಿಯು. ಅವನು ಎಂದಿಗೂ ದುಃಖಭಾಗಿಯಾಗಲಾರನು. ಯಾವಳ ಶರೀರವು ಮಂಗಳಕರವಾಗಿ ಪುಷ್ಟಿಹೊಂದಿರುವುದೋ, ಯಾವಳು ತನ್ನ ಮುಖದಿಂದ ತಾವರೆಯನ್ನೂ, ತನ್ನ ನಡೆಯಿಂದ ಹಂಸವನ್ನೂ, ತನ್ನ ಮಂದಹಾಸದಿಂದ ನೊಲ್ಲೆಯ ಹೂವನ್ನೂ ಜಯಿಸುತ್ತಿರುವಳೋ, ಅಂತಹ ಸುಂದರಾಂಗಿಯಾದ ಆಕೆಯನ್ನು ಕಾಲಿಂದೊದೆದುದು ಸರ್ವಥಾ ಉಚಿತವಲ್ಲ! ಯಾವಳ ಮೂವತ್ತೆರಡು ಹಲ್ಲುಗಳೂ ಅತಿ ಸ್ವಚ್ಛವಾಗಿ ಬೆಳಗುತ್ತಿರುವುವೋ, ಯಾವಳ ಸರ್ವಾವಯವಗಳೂ ಶರೀರಕ್ಕೆ ತಕ್ಕಂತೆ ಸಮಪ್ರಮಾಣವುಳ್ಳವುಗಳಾಗಿ, ಲಾವಣ್ಯಮಯವಾಗಿ ಥಳಥಳಿಸುತ್ತಿರುವುವೋ, ಅಂತಹ ಸ್ತ್ರೀರತ್ನಕ್ಕೆ ಈ ವಿಧವಾದ ಪಾದತಾಡನವು ಸರ್ವಥಾ ಯೋಗ್ಯವಲ್ಲ. ಯಾವಳ ತಲೆಕೂದಲುಗಳು ಅತ್ಯಂತ ಮೃದುವಾಗಿ, ನುಣುಪಾಗಿ, ಥಳಥಳಿಸುತ್ತಿರುವುವೋ, ಅಂತಹ ತರುಣೀಮಣಿಗೆ ಈ ವಿಧವಾದ ಪಾದತಾಡನವು ಸರ್ವಥಾ ಉಚಿತವಲ್ಲ. ಯಾವಳ ಅಂಗೈಯಲ್ಲಿ

ಶಂಖ, ಚಕ್ರ, ಧ್ವಜ, ಪದ್ಮ, ಪ್ರಾಸಾದಗಳೇ ಮೊದಲಾದ ಶುಭರೇಖೆಗಳೆಲ್ಲವೂ ಕಾಣುತ್ತಿರುವುವೋ, ಅಂತಹ ಮಹಾಭಾಗ್ಯವತಿಯಾದ ಈಕೆಯನ್ನು ಕಾಲಿಂದೊದೆಯುವುದು ಸರ್ವಥಾ ಉಚಿತವಲ್ಲ. ಯಾವಳ ದೇಹದಲ್ಲಿ ಪ್ರದಕ್ಷಿಣಾಕಾರವಾದ ನಾಲ್ಕು ಸುಳಿಗಳೂ ಶೋಭಿಸುತ್ತಿರುವುವೋ, ಅಂತಹ ಶುಭಲಕ್ಷಣವುಳ್ಳ ಈಕೆಗೆ, ಈ ತಿರಸ್ಕಾರವು ಎಂದಿಗೂ ಯೋಗ್ಯವಲ್ಲ. ಎಡೆಯಿಲ್ಲದೆ ಒತ್ತಾದ ಕೈಕಾಲುಗಳಿಂದಲೂ, ಒತ್ತಾದ ಹಲ್ಲುಗಳಿಂದಲೂ, ಕಮಲದಳದಂತಿರುವ ಕಣ್ಣುಗಳಿಂದಲೂ ಶೋಭಿಸುತ್ತಿರುವ ಈ ಕನ್ಯೆಯನ್ನು ಮತ್ತೊಬ್ಬ ಪುರುಷನು ಕಾಲಿಂದೊದೆಯುವುದೆಂದರೇನು? ಅನೇಕ ಶುಭಲಕ್ಷಣಗಳಿಂದ ಕೂಡಿ, ಪೂರ್ಣಚಂದ್ರನಿಗೆ ಸಮಾನವಾದ ಮುಖವುಳ್ಳವಳಾಗಿ, ದಿವ್ಯಸೌಂದರ್ಯವತಿಯಾದ ಇಂತಹ ಕನ್ಯೆಯನ್ನು ಕಾಲಿಂದೊದೆದುದು ಎಷ್ಟುಮಾತ್ರವೂ ಉಚಿತವಲ್ಲ. ದೇವತೆಯಂತೆ ಸುಂದರಿಯೂ, ಇಂದ್ರಪತ್ನಿಯಂತೆ ಮಂಗಳಸ್ವರೂಪಿಣಿಯೂ, ಅಪ್ಸರಸಿಯಂತೆ ರೂಪವತಿಯೂ ಆದ ಈಕೆಯನ್ನು ಕಾಲಿಂದೊದೆದುದು ಸರ್ವಥಾ ಉಚಿತಕಾರ್ಯವಲ್ಲ,'' ಎಂದು ಅಲ್ಲಿದ್ದ ಸಭಾಸದರೆಲ್ಲರೂ ದ್ರೌಪದಿಯನ್ನು ಪ್ರಶಂಸೆಮಾಡುತ್ತಿದ್ದರು. ಇಷ್ಟರಲ್ಲಿ ಆ ವಿರಾಟನ ಸಮೀಪದಲ್ಲಿ ಸನ್ಯಾಸಿವೇಷದಿಂದಿದ್ದ ಯುಧಿಷ್ಠಿರನು ಏನೋ ಒಂದು ವಿಷಯವನ್ನು ಕುರಿತು ಮಾತಾಡುವ ಪ್ರಯತ್ನದಲ್ಲಿರುವುದನ್ನು ತಿಳಿದುಕೊಂಡು ದ್ರೌಪದಿಯು ದುಃಖದಿಂದ ನಿಟ್ಟುಸಿರನ್ನು ಬಿಟ್ಟು ತಲೆಯನ್ನು ಬಗ್ಗಿಸಿ, ನೆಲವನ್ನು ನೋಡುತ್ತ ಸುಮ್ಮನೆ ನಿಂತುಬಿಟ್ಟಳು. ಯುಧಿಷ್ಠಿರನಿಗಾದರೋ ಕೋಪದಿಂದ ಹಣೆಯಲ್ಲಿ ಬೆವರಿನ ಹನಿಗಳು ಸುರಿಯುತ್ತಿದ್ದುವು. ಆಗ ರಾಜನ ಸಮೀಪದಲ್ಲಿ ಸನ್ಯಾಸಿವೇಷದಿಂದಿದ್ದ ಆ ಧರ್ಮಪುತ್ರನು, ಸೈರಂಧ್ರಿಯಾಗಿದ್ದ ತನ್ನ ಆ ಪ್ರಿಯಮಹಿಷಿಯನ್ನು ನೋಡಿ ವ್ಯಾಜಾಂತರದಿಂದ ಹೀಗೆಂದು ಹೇಳುವನು. ''ಎಲೆ ಸೈರಂಧ್ರಿ! ಭಯಪಡಬೇಡ! ನೀನು ಈಗಲೇ ಈ ಸ್ಥಳವನ್ನು ಬಿಟ್ಟು, ಸುದೇಷ್ಣೆಯ ಅಂತಃಪುರಕ್ಕೆ ಹೊರಟು ಹೋಗು. ಈ ರಾಜನು ಧರ್ಮಶೀಲನು. ಮತ್ತು ಪರಲೋಕಭಯವುಳ್ಳವನು. ಸತ್ಯದಲ್ಲಯೂ, ಧರ್ಮಮಾರ್ಗದಲ್ಲಿಯೂ ನೆಲೆಗೊಂಡವನು. ಹಾಗಿದ್ದರೂ ನಿನ್ನನ್ನು ರಕ್ಷಿಸದೆ ಹೋದನು. ಆದುದರಿಂದ ನೀನು ರಾಣಿಯ ಬಳಿಗೆ ಹೋಗುವುದುತ್ತಮವು. ನಿನ್ನಂತಹ

ವೀರಪತ್ನಿಗಳು ತಮ್ಮ ಪತಿಯನ್ನು ಅನುಸರಿಸಿ ನಡೆಯುವ ಸಂದರ್ಭದಲ್ಲಿ, ಇಂತಹ ಕಷ್ಟಗಳಿಗೆ ಗುರಿಯಾಗುವುದೇನೋ ಸಹಜವೇ. ಹಾಗೆ ದುಃಖಕ್ಕೆ ಗುರಿಯಾಗಿಯೂ, ಪತಿಶುಶ್ರೂಷೆಯ ಬಲದಿಂದ ಅವರು ತಮ್ಮ ಪತಿಲೋಕವನ್ನು ಜಯಿಸುವರು. ನಿನ್ನ ಪತಿಗಳಾದರೂ ತಮ್ಮ ಕೋಪಕ್ಕೆ ಇದು ಕಾಲವಲ್ಲವೆಂಬುದಕ್ಕಾಗಿಯೇ ಸುಮ್ಮನಿರುವರೆಂದು ನನಗೆ ತೋರಿದೆ. ಅದರಿಂದಲೇ ನಿನ್ನ ಪತಿಗಳಾದ ಗಂಧರ್ವರು ಸೂರ್ಯತೇಜಸ್ಸುಳ್ಳವರಾದರೂ ನಿನ್ನನ್ನು ರಕ್ಷಿಸುವುದಕ್ಕಾಗಿ ಈಗ ಮುಂದೆ ಬಾರದಿರುವರು. ಎಲೆ ನೀಲವೇಣಿ! ಧರ್ಮಶಾಸ್ತ್ರವನ್ನನುಸರಿಸಿ, ಕುಲಸ್ತ್ರೀಯರ ಧರ್ಮಗಳೆಂತವೆಂಬುದನ್ನೂ, ಮೋಕ್ಷಧರ್ಮಗಳನ್ನೊಳಕೊಂಡ ಕಥೆಗಳನ್ನೂ ನೀನು ಕೇಳಿರಬಹುದು. ಸ್ತ್ರೀಯರಿಗೆ ಪತಿಯನಿಷಯದಲ್ಲಿ ಮಾಡುವ ಶುಶ್ರೂಷೆಯೊಂದೇ ಸದ್ಗತಿಗೆ ಕಾರಣವೇ ಹೊರತು, ಅವರಿಗೆ ಬೇರೆ ಯಜ್ಞವಾಗಲಿ, ಶ್ರಾದ್ಧವಾಗಲಿ, ಉಪವಾಸಾದಿ ವ್ರತಗಳಾಗಲಿ ಇರುವುದಿಲ್ಲ. ಸ್ತ್ರೀಯರನ್ನು ಬಾಲ್ಯದಲ್ಲಿ ತಂದೆಯೂ, ಯೌವನಕಾಲದಲ್ಲಿ ಪತಿಯೂ, ವಾರ್ಧಕದಲ್ಲಿ ಮಗನೂ ರಕ್ಷಿಸತಕ್ಕವನು. ಆದುದರಿಂದ ಸ್ತ್ರೀಯರು ಯಾವಾಗಲೂ ಸ್ವತಂತ್ರವಾಗಿರುವುದಕ್ಕೆ ಅರ್ಹರಲ್ಲ. ಎಲೆ ಭೀರು! ಸ್ತ್ರೀಯರು ಶತ್ರುಗಳಿಂದ ಅನೇಕ ಕಷ್ಟಗಳಿಗೆ ಗುರಿಯಾಗಿ ಅವಮಾನಪಡಿಸಲ್ಪಟ್ಟರೂ, ಅವರು ತಮ್ಮ ಪತಿಯಲ್ಲಿ ತಮಗಿರುವ ಭಯಕ್ಕಾಗಿ ಎಂದಿಗೂ ಕೋಪವನ್ನು ಹೊರಪಡಿಸಲಾರರು. ಎಂತಹ ಕಷ್ಟಗಳು ಬಂದರೂ, ತಮ್ಮ ಪತಿಯನ್ನು ಬಿಟ್ಟು ಬೇರೊಂದುವಿಷಯದಲ್ಲಿ ಮನಸ್ಸನ್ನಿಡದೆ, ಶುದ್ಧಾತ್ಮರೆನಿಸಿಕೊಂಡ ಸ್ತ್ರೀಯರೇ ನಿಜವಾಗಿಯೂ ಪುಣ್ಯಲೋಕಗಳನ್ನು ಜಯಿಸುವರು. ಇದು ತಮ್ಮ ಕೋಪಕ್ಕೆ ಕಾಲವಲ್ಲವೆಂದೇ ಸಹಿಸಿಕೊಂಡು ನಿನ್ನ ಪತಿಗಳು ಸುಮ್ಮನಿರುವರು. ಕಾಮರೂಪಿಗಳಾದ ಆ ಗಂಧರ್ವರುಮಾತ್ರ ಕೋಪಗೊಂಡರೆ ವೃತ್ರಾಸುರನನ್ನು ಕೊಂದ ಆ ಮಹೇಂದ್ರನಾದರೂ ಅವರನ್ನಿದಿರಿಸಿ ನಿಲ್ಲಲಾರನು. ಕಾಲನಿರೀಕ್ಷಣೆಗಾಗಿಯೇ ಅವರು ಈಗ ನಿನಗೆ ಬೆಂಬಲವಾಗಿ ಬರಲಿಲ್ಲವೆಂದು ತೋರುವುದು. ಎಲೆ ವಿಶಾಲಾಕ್ಷಿ! ನಿನ್ನ ಪತಿಗಳ ವಿಚಾರವು ಹಾಗಿರಲಿ. ಇದಕ್ಕೆ ಮೊದಲು ನೀನು ಏನಾದರೂ ಸಮಯವನ್ನು (ಪ್ರತಿಜ್ಞೆಯನ್ನು) ಮಾಡಿಕೊಂಡಿರುವೆಯೋ ಎಂಬುದನ್ನು ಜ್ಞಾಪಿಸಿಕೊಂಡು

ನೋಡು. ಕ್ಷಮೆಯೇ ಸ್ವಭಾವವಾಗಿ ಉಳ್ಳ ನೀನು ದುಡುಕಬಾರದು. ತಾಳ್ಮೆಯಿಂದ ಯೋಚಿಸಬೇಕು. ಕ್ಷಮೆಯೇ ಸರ್ವೋತ್ತಮವಾದ ಧರ್ಮವು. ಕ್ಷಮೆಯೇ ಸತ್ಯವು. ಕ್ಷಮೆಯೇ ದಾನವು. ಕ್ಷಮೆಯೇ ತಪಸ್ಸು. ತಾಳ್ಮೆಯುಳ್ಳವರಿಗೆ ಇಹಲೋಕ ಪರಲೋಕಗಳೆರಡೂ ಸ್ವಾಧೀನಗಳೆಂದೂ ತಿಳಿ! *ಎರಡು ಭಾಗಗಳೂ, ಹನ್ನೆರಡು ಅಂಗಗಳೂ, ಇಪ್ಪತ್ತುನಾಲ್ಕು ಗಿಣ್ಣುಗಳೂ, ಮುನ್ನೂರ ಅರವತ್ತು ಅರಗಳೂ ಉಳ್ಳ ಸಂವತ್ಸರವೆಂಬ ಚಕ್ರವು ಪೂರ್ಣವಾಗಿ ತಿರುಗುವುದಕ್ಕೆ ಒಂದುಮಾಸವುಮಾತ್ರ ಕಡಿಮೆಯಾಗಿರುವಾಗ, ಅಷ್ಟರಲ್ಲಿ ಯಾವನುತಾನೇ ಮನಸ್ಸನ್ನು ತಡೆದು ಸಹಿಸಿಕೊಂಡಿರಲಾರದೆ ಆತುರಪಡುವನು. ಎಲೆ ಸೈರಂಧ್ರಿ! ಇನ್ನು ನೀನು ಹೊರಡು. ಗಂಧರ್ವರು ನಿನಗೆ ಪ್ರಿಯವನ್ನುಂಟುಮಾಡುವರು. ನಿನಗೆ ಯಾವನು ಅಪರಾಧವನ್ನು ಮಾಡಿದನೋ, ಅವನನ್ನು ನಿಗ್ರಹಿಸಿ ನಿನ್ನ ದುಃಖವನ್ನು ನೀಗಿಸುವರು'' ಎಂದು ಹೇಳಿದನು. ಇಷ್ಟು ಹೇಳಿದರೂ ತಾನು ನಿಂತ ಸ್ಥಳದಿಂದ ಕದಲದೆ ಹಾಗೆಯೇ ನಿಂತಿದ್ದ ದ್ರೌಪದಿಯನ್ನು ನೋಡಿ ತಿರುಗಿ ಯುಧಿಷ್ಠಿರನು, ''ಎಲೆ ಭದ್ರೆ! ಇನ್ನೂ ನೀನು ಹೋಗುವುದಿಲ್ಲವಷ್ಟೆ? ರಾಜಸಭೆಯಲ್ಲಿ ಪಗಡೆಯಾಡುತ್ತಿರುವ ನಮಗೆಲ್ಲ ನೀನು ಅಡ್ಡಿಯನ್ನು ಮಾಡುತ್ತಿರುವೆ. ಇದರಿಂದ ನೀನು ನನಗೆ ನಟುವರ ಹೆಂಗಸಂತೆ ತೋರುತ್ತಿರುವೆ'' ಎಂದನು. ಆದಕ್ಕಾ ದ್ರೌಪದಿಯು ಧರ್ಮರಾಜನನ್ನು ದುರದುರನೆ ನೋಡುತ್ತ ''ಎಲೈ ವಿದ್ವಾಂಸನೆ! ನನ್ನನ್ನು ನಟಿಯೆಂದು ಭಾವಿಸುವೆಯಲ್ಲವೆ? ನೀನು ಹೇಳುವುದು ನಿಜವೇ! ನಾನು ನಟನ ಹೆಂಡತಿಯೇ ಅಹುದು. ಅಲ್ಲದೆ, ನನ್ನ ಪತಿಗಳಲ್ಲಿ ಎಲ್ಲರಿಗಿಂತಲೂ ಹಿರಿಯವನೊಬ್ಬನು ಜೂಜಾಡುವುದರಲ್ಲಿ ನಿರತನು. ಆದುದರಿಂದ ನಾನು ನಟನ ಮತ್ತು ಜೂಜುಗಾರನ ಹೆಂಡತಿಯೆಂಬುದು ನಿಜವು'' ಹೀಗೆಂದು ಹೇಳಿ ದ್ರೌಪದಿಯು, ತನ್ನ ಮುಖವನ್ನು ವಸ್ತ್ರದಿಂದ ಒರೆಸಿಕೊಳ್ಳುತ್ತ, ರಕ್ತದಿಂದ ನೆನೆಸಲ್ಪಟ್ಟ, ಮತ್ತು ಕೆದರಿದ ತಲೆಕೂದಲನ್ನು ಒಂದಾಗಿ ಸೇರಿಸಿಟ್ಟು, ಹೆಣ್ಣಾನೆಯಂತೆ ಗಂಭೀರವಾದ ನಡೆಯಿಂದ ಪತಿಯಾಜ್ಞೆಗೆ ಮೀರಲಾರದೆ

* ಇಲ್ಲಿನ ಸಂಖ್ಯಾವಾಚಕಗಳಿಗೆ ಕ್ರಮವಾಗಿ ಅಯನ, ಮಾಸ, ಪಕ್ಷ, ದಿನಗಳಿಂದರ್ಥವು.

ಆ ಸಭೆಯಿಂದ ಹಿಂತಿರುಗಿದಳು. ಆನೆಯ ಸುಂಡಿಲಿನಂತೆ ಅಂದವಾದ ತೊಡೆಗಳಿಂದಲೂ, ಜಿಂಕೆಯ ಕಣ್ಣುಗಳಂತಿರುವ ಕಣ್ಣುಗಳಿಂದಲೂ, ನಡುವೆ ಅವಕಾಶವಿಲ್ಲದೆ ಒತ್ತಾಗಿರುವ ಸ್ತನಗಳಿಂದಲೂ ಶೋಭಿಸುವ ಆ ಸುಂದರಾಂಗಿಯು, ನೆಲದ ಧೂಳಿನಿಂದ ತುಂಬಿದ ಮೈಯುಳ್ಳವಳಾಗಿ, ಮೇಘದಿಂದ ಮರೆಸಲ್ಪಟ್ಟ ಚಂದ್ರನ ಕಾಂತಿಯಂತೆ ಕಾಣುತ್ತಿದ್ದಳು. ಯಾವ ಳಿಗಾಗಿ ಪಾಂಡವರು ತಮ್ಮ ಪ್ರಾಣವನ್ನಾದರೂ ಬಿಡುವರೋ, ಅಂತಹ ದ್ರೌಪದಿಯು ಆ ದುಸ್ಥಿತಿಗೆ ಗುರಿಯಾದುದನ್ನು ನೋಡಿಯೂ ಅವರು ಧರ್ಮನಿರತರಾದುದರಿಂದ, ಸಮುದ್ರವು ತನ್ನ ವೇಲೆಯನ್ನು ಮೀರದಂತೆ ತಮ್ಮ ಪ್ರತಿಜ್ಞೆಯನ್ನು ಮೀರಲಾರದೆ ಸುಮ್ಮನಿದ್ದರು. ಇತ್ತಲಾಗಿ ದ್ರೌಪದಿಯು ದುಃಖದಿಂದ ನಡುಗುವ ಮೈಯುಳ್ಳವಳಾಗಿ, ದೀನಧ್ವನಿಯಿಂದ ರೋದಿಸುತ್ತ, ಸುದೇಷ್ಣೆಯ ಮನೆಗೆ ಬಂದು ಅವಳ ಮುಂದೆ ನಿಂತಳು. ಆಗ ವಿರಾಟಪತ್ನಿಯು ತನಗೇನೂ ತಿಳಿಯದಂತೆ ಕಪಟವನ್ನು ನಟಿಸುತ್ತ ದ್ರೌಪದಿಯನ್ನು ಕುರಿತು "ಎಲೆ ಸೈರಂಧ್ರಿ! ಏನಿದು? ಕಮಲಕ್ಕೆ ಸಮಾನವಾಗಿ, ಅಂದವಾದ ಹಲ್ಲು, ತುಟಿ, ಕಣ್ಣು, ಮೂಗು, ಇವುಗಳಿಂದ ಶೋಭಿತವಾಗಿ, ಪೂರ್ಣಚಂದ್ರನಿಗೆ ಸಮಾನವಾದ ಕಾಂತಿಯುಳ್ಳ ನಿನ್ನ ಮುಖವು ಕುಂದಿರುವುದೇಕೆ? ಏತಕ್ಕಾಗಿ ನೀನು ಹೀಗೆ ಕಣ್ಣೀರನ್ನು ಒರೆಸಿಕೊಳ್ಳುತ್ತಿರುವೆ? ತೊಂಡೆಯ ಹಣ್ಣನ್ನು ಹೋಲುವ ತುಟಿಯಿಂದಲೂ, ಅಂದವಾದ ಕರಿಯಾಲೆಗಳಿಂದಲೂ ಸೊಗಸುಬೀರುವ ನಿನ್ನ ಮುಖವು ಬಾಷ್ಪಪೂರ್ಣವಾಗಿರುವುದೇಕೆ? ನಿನಗೆ ಯಾರು ಯಾವ ಅಪರಾಧವನ್ನು ಮಾಡಿದರು? ನೀನೇಕೆ ಹೀಗೆ ಅಳುತ್ತಿರುವೆ? ನಿನ್ನಲ್ಲಿ ಅಪರಾಧಿಯಾದ ಯಾವನು ತನ್ನ ಪುತ್ರಕಳತ್ರ ಬಂಧು ಜನಗಳಿಂದ ಅಗಲಿಸಲ್ಪಡಬೇಕಾಗಿದೆ? ನಿನ್ನಲ್ಲಿ ಅಪರಾಧಿಯಾದ ಯಾವನು, ರಾಜನ ಕೋಪಕ್ಕೆ ಪಾತ್ರನಾಗಿ ಮರಣ ಶಿಕ್ಷೆಗೆ ಗುರಿಯಾಗಬೇಕು? ಬೇಗನೆ ಹೇಳು. ನಿನಗೆ ಹೇಗೆ ಮಾಡಿದರೆ ಪ್ರಿಯವೋ, ಅದನ್ನು ಬೇಗನೆ ತಿಳಿಸು. ಯಾರನ್ನು ನಾವು ತೊಲಗಿಸಬೇಕು? ಯಾವನನ್ನು ವಧಿಸಬೇಕು? ನಿನ್ನಿಷ್ಟದಂತೆಯೇ ಮಾಡುವೆವು" ಎಂದಳು. ಆಗ ದ್ರೌಪದಿಯು ನಿಟ್ಟುಸಿರನ್ನು ಬಿಡುತ್ತ "ದೇವೀ! ತಿಳಿದುತಿಳಿದೂ ನನ್ನನ್ನೇಕೆ ಕೇಳುವೆ! ನಿನ್ನ ಸಹೋದರನಾದ ಕೀಚಕನ

ಬಳಿಗೆ ನನ್ನನ್ನು ನಿರ್ಬಂಧಿಸಿ ಕಳುಹಿಸಿದವಳು ನೀನೆಯಲ್ಲವೇ? ತಿರುಗಿ ನೀನು ನನ್ನ ದುಃಖಕಾರಣವನ್ನು ಕೇಳುವೆಯಾ? ನಿನ್ನ ನಿರ್ಬಂಧದಂತೆ ಮಧುವನ್ನು ತರುವುದಕ್ಕಾಗಿ ಇಲ್ಲಿಂದ ಹೋದೊಡನೆ, ಕೀಚಕನು ನನ್ನನ್ನು ನಿರ್ಬಂಧಿಸಿ ರಾಜಸಭೆಯಲ್ಲಿ ರಾಜನ ಕಣ್ಣೆದಿರಾಗಿಯೇ, ನಿರ್ಜನವಾದ ಅಡವಿಯಲ್ಲಿ ಹೇಗೋ ಹಾಗೆ ಹೊಡೆದನು'' ಎಂದಳು. ಆಗ ಸುದೇಷ್ಣೆಯು, ''ಎಲೆ ಸುದತಿ! ಕೀಚಕನು ಅಂತಹ ಘಾತುಕಕೃತ್ಯವನ್ನು ನಡೆಸಿದನೆ? ಈಗ ನೀನು ಕೋರಿದಪಕ್ಷದಲ್ಲಿ ಅವನನ್ನು ಈಗಲೇ ಕೊಲ್ಲಿಸುವೆನು. ಅವನು ನನ್ನ ಒಡಹುಟ್ಟಿದವನಾದರೂ ಚಿಂತೆಯಿಲ್ಲ! ಧರ್ಮನಿರತಳಾದ ನಿನ್ನಲ್ಲಿ ಅತಿಕ್ರಮಿಸಿ ನಡೆದು, ಕಾಮಾಂಧನಾಗಿ ನಿನ್ನನ್ನು ಅವಮಾನಪಡಿಸಿದನಲ್ಲವೇ?'' ಎಂದಳು. ಆಗ ದ್ರೌಪದಿಯು ''ಸುದೇಷ್ಣೆ! ಆ ಕಷ್ಟವು ನಿನಗೇಕೆ? ದುರಾತ್ಮನಾದ ಆ ಕೀಚಕನು ಯಾರಲ್ಲಿ ಅಪರಾಧವನ್ನು ಮಾಡಿದನೋ, ಅವರೇ ಅವನನ್ನು ಈ ಕ್ಷಣದಲ್ಲಿ ಕೊಲ್ಲುವರೆಂದು ತಿಳಿ. ನಿನ್ನ ಸಹೋದರನು ತನ್ನ ತಪ್ಪಿಗಾಗಿ ಈಗಲೋ, ನಾಳೆಯೋ ಪರಲೋಕವನ್ನು ಹೊಂದುವುದು ನಿಶ್ಚಯವೆಂದು ನನಗೆ ತೋರುವುದು. ನೀನು ಶೀಘ್ರದಲ್ಲಿಯೇ ನಿನ್ನ ಒಡಹುಟ್ಟಿದ ಆ ಕೀಚಕನಿಗೆ ಜೀವಶ್ರಾದ್ಧವನ್ನು ಮಾಡಿಬಿಡಬಹುದು. ಅವನನ್ನು ಈಗಲೇ ಬೇಕಾದ ವಸ್ತುಗಳನ್ನು ಕೊಟ್ಟು ಸಂತೋಷಪಡಿಸು. ಇನ್ನುಮೇಲೆ ಅವನು ಪ್ರಾಣದಿಂದುಳಿಯಲಾರನು. ನನ್ನ ಐದುಮಂದಿ ಪತಿಗಳು ಧರ್ಮಾತ್ಮರು. ಅವರಲ್ಲಿ ಯಾವನೊಬ್ಬನನ್ನಾದರೂ ಜಯಿಸುವುದಕ್ಕೆ ಬೇರೊಬ್ಬರಿಗೂ ಶಕ್ತಿಯಿಲ್ಲ. ಅವರಲ್ಲಿ ಯಾರೊಬ್ಬರಿಗೂ ಬಲದಲ್ಲಿ ಸಾಟಿಯಾದವನು ಬೇರೊಬ್ಬನಿಲ್ಲ. ಅದರಲ್ಲಿಯೂ ಒಬ್ಬನು ಲೋಕಾತಿಶಯವಾದ ಬಲವುಳ್ಳವನು. ಎಂತವರಿಗೂ ದುರ್ಜಯನು. ಅವನುಮಾತ್ರ ಕೋಪಿಸಿಕೊಂಡರೆ, ಈ ಒಂದೇ ರಾತ್ರಿಯಲ್ಲಿ ಈ ಲೋಕವನ್ನೆಲ್ಲ ನಿರ್ಮಾನುಷ್ಯವನ್ನಾಗಿ ಮಾಡಬಲ್ಲನು. ಕಾಮರೂಪಿಯಾದ ಆಗಂಧರ್ವನು ಇದುವರೆಗೂ ತನ್ನ ಕೋಪವನ್ನು ಪ್ರಯತ್ನದಿಂದ ಅಡಗಿಸಿಕೊಂಡೇ ಇದ್ದನು. ಈಗ ಕೀಚಕನು ನನ್ನನ್ನು ಕಾಲಿಂದೊದೆದ ಸಂಗತಿಯು ಆತನಿಗೆ ತಿಳಿದುಹೋಯಿತು. ಇನ್ನುಮೇಲೆ ಪಾಪಿಯಾದ ಆ ಕೀಚಕನು ಪುತ್ರ ಮಿತ್ರ ಬಂಧುಸಹೋದರರೊಡನೆ ಅವನ ಕೈಯಿಂದ

ಸಾಯುವುದೇನೋ ನಿಶ್ಚಯವು. ತನ್ನ ಪಾಪಕಾರ್ಯಕ್ಕೆ ತಕ್ಕ ಫಲವನ್ನು ಅನುಭವಿಸಿಯೇ ತೀರುವನು. ವಿದ್ವಾಂಸರಾದ ಸತ್ಪುರುಷರು ಬಹುಕಾಲಕ್ಕೆ ಹಿಂದೆಯೇ ಹೇಳಿರುವ ನಾಣ್ನುಡಿಯನ್ನು ನೀನು ಕೇಳಿಲ್ಲವೇನು? ಯಾವ ನೊಬ್ಬನು ಕಾಲಪಾಶಕ್ಕೆ ವಶನಾಗಿ, ಒಂದು ಪಾಪಕಾರ್ಯವನ್ನು ಮಾಡಿದರೂ, ಅವನು ಮಾಡಿದ ಅಪರಾಧದಿಂದ ಅವನ ವಂಶವೇ ನಶಿಸಿಹೋಗುವುದು'' ಎಂಬೀ ಸಾಮತಿಯು ಲೋಕಪ್ರಸಿದ್ಧವಾದುದಲ್ಲವೆ,?'' ಎಂದಳು.

ಎಲ್ಲೆ ಜನಮೇಜಯರಾಜನೇ! ಸೈರಂಧ್ರಿಯು ಸುದೇಷ್ಣೆಗೆ ಈ ಮಾತನ್ನು ಹೇಳಿ ಮುಗಿಸುವಷ್ಟರಲ್ಲಿಯೇ, ದುಃಖದಿಂದ ಪ್ರಜ್ಞೆತಪ್ಪಿದಂತಾದಳು. ಕೀಚಕನನ್ನು ಕೊಲ್ಲುವುದಕ್ಕೆ ವ್ರತದೀಕ್ಷೆಯನ್ನು ಹಿಡಿದುಬಿಟ್ಟಳು. ಆಮೇಲೆ ಆ ಸೈರಂಧ್ರಿಯು ಅಲ್ಲಿದ್ದ ಸ್ತ್ರೀಯರೆಲ್ಲರೂ ಅನೇಕವಿಧವಾಗಿ ಬೇಡಿಕೊಂಡರೂ, ಸುದೇಷ್ಣೆಯು ಅನೇಕವಿಧದಿಂದ ಸಮಾಧಾನಪಡಿಸಿ ಸಮ್ಮಾನಿಸಿದರೂ, ಸ್ನಾನಮಾಡಲಿಲ್ಲ! ತನ್ನ ಮೈಯಲ್ಲಿ ಅಂಟಿದ್ದ ನೆಲದ ಧೂಳನ್ನೊರೆಸಿಕೊಳ್ಳಲಿಲ್ಲ. ಮುಖದಲ್ಲಿ ರಕ್ತದ ಗುರುತುಗಳು ಹಾಗೆಯೇ ಇರಲು, ಕಣ್ಣುಗಳನ್ನು ತಿಕ್ಕುತ್ತ, ದುಃಖದಿಂದ ಬೆಂದು ಬಹಳವಾಗಿ ರೋದನಮಾಡುತ್ತಲೇ ಇದ್ದಳು. ಈ ದ್ರೌಪದಿಯ ಸ್ಥಿತಿಯನ್ನು ನೋಡಿ ಸ್ತ್ರೀಯರೆಲ್ಲರೂ ತಮ್ಮಲ್ಲಿ ತಾವು ಮುಂದೆ ಸಂಭವಿಸಬಹುದಾದ ಕೀಚಕನ ವಧಕ್ಕಾಗಿ ಸಂತೋಷಿಸುತ್ತಿದ್ದರು.

ಇದು ಇಪ್ಪತ್ತನೆಯ ಅಧ್ಯಾಯವು.

ಕೀಚಕನ ಉತ್ಪತ್ತಿ ಮೊದಲಾದ ವೃತ್ತಾಂತಗಳು.

ಈ ನಡುವೆ ಜನಮೇಜಯನು ವೈಶಂಪಾಯನನ್ನು ಕುರಿತು ''ಓ ಮುನೀಂದ್ರಾ! ಆ ದ್ರೌಪದಿಯಾದರೋ ಪರಮ ಪತಿವ್ರತೆ! ಮಹಾಭಾಗ್ಯವತಿ! ಅಂತಹ ನಾರೀಮಣಿಯಾದ ದ್ರೌಪದಿಯು, ಕೀಚಕನು ತನ್ನನ್ನು ಕಾಲಿಂದೊದೆದಾಗ ದುಸ್ಸಹವಾದ ದುಃಖವನ್ನು ಸಹಿಸಿಕೊಂಡಿದ್ದಳು. ಆಹಾ! ಹಿಂದೊಮ್ಮೆ ಆ ಮಾನಿನಿಯು ಸೈಂಧವನು ತನ್ನನ್ನು ಬಲಾತ್ಕಾರ

ದಿಂದ ಹಿಡಿದುಕೊಂಡು ಹೋದಾಗ, ತನ್ನ ಪತಿಗಳಿಗೆ ಸಹೋದರಿಯಾದ ದುಶ್ಶಲೆಯನ್ನು ನೋಡಿ, ಅವಳಲ್ಲಿ ಕನಿಕರದಿಂದ ಆ ಸಿಂಧುರಾಜನನ್ನು ಶಪಿಸದೆ ಬಿಟ್ಟುಬಿಟ್ಟಳು. ಇದೇನೋ ನ್ಯಾಯವೇ! ಆದರೆ, ಈಗ ದುರಾತ್ಮನಾದ ಕೀಚಕನು, ತನ್ನನ್ನು ಕಾಲಿಂದ ಒದೆದಾಗಲೂ, ಅವನನ್ನು ಶಪಿಸದಿದ್ದುದೇಕೆ? ಪತಿವ್ರತಾಶಿರೋಮಣಿಯಾದ ಆ ದ್ರೌಪದಿಯು ತೇಜೋರಾಶಿಯೆನಿಸಿರುವಳು. ಧರ್ಮಜ್ಞಳು. ಸತ್ಯವನ್ನೇ ನುಡಿಯತಕ್ಕವಳು. ಅಂತಹ ಆ ದೇವಿಯು, ಪರಪುರುಷನು ತನ್ನ ತುರುಬನ್ನು ಹಿಡಿದು ಎಳೆಯುತ್ತಿರುವಾಗಲೂ, ಶಕ್ತಿಯಿಲ್ಲದ ಸಾಧಾರಣ ಸ್ತ್ರೀಯಂತೆ ಏತಕ್ಕೆ ಸಹಿಸಿಕೊಂಡು ಸುಮ್ಮನಿದ್ದಳು? ಇದಕ್ಕೇನೋ ಸ್ರಬಲ ಕಾರಣವಿರಬೇಕು. ಅದರ ನಿಜಾಂಶವನ್ನು ನಾನು ತಿಳಿಯಬೇಕೆಂದಿರುವೆನು. ದ್ರೌಪದಿಯ ದುಃಖವು ನನ್ನ ಮನಸ್ಸಿಗೆ ಮಹತ್ತಾದ ಸಂಕಟವನ್ನುಂಟುಮಾಡುತ್ತಿದೆ. ಮುನೀಂದ್ರಾ! ದುಷ್ಟನಾದ ಆ ಕೀಚಕನು ಹುಟ್ಟಿದ ವಂಶವಾವುದು? ವಿರಾಟನ ಬಾವಮೈದುನನಾದ ಆತನು ಹಾಗೆ ಬಲಗರ್ವಿತನಾಗಿರುವುದಕ್ಕೆ ಕಾರಣವೇನು? ಆ ನೀಚನು ತಮ್ಮ ಪ್ರಿಯಪತ್ನಿಯನ್ನು ಕಾಲಿಂದೊದುದನ್ನು ಕಣ್ಣಾರೆ ನೋಡಿಯೂ ವೀರರಾದ ಪಾಂಡವರು ಕೋಪವನ್ನಡಗಿಸಿಕೊಂಡಿದ್ದರಲ್ಲವೆ? ಆಮೇಲೆ ಅವರು ಅವನನ್ನು ಏನುಮಾಡಿದರು? ಈ ಅಂಶಗಳೆಲ್ಲವನ್ನೂ ತಿಳಿಸಬೇಕು'' ಎಂದನು. ಅದಕ್ಕಾ ವೈಶಂಪಾಯನ ಮುನಿಯು ಜನಮೇಜಯನನ್ನು ಕುರಿತು '' ರಾಜೇಂದ್ರಾ! ಕೇಳು. ಈಗ ನೀನು ಕೇಳಿದ ಪ್ರಶ್ನೆಯು ಕುರುವಂಶಕ್ಕೆ ಕೀರ್ತಿಕರವಾದುದು. ಅವೆಲ್ಲವನ್ನೂ ವಿವರವಾಗಿ ತಿಳಿಸುವೆನು. ಬ್ರಾಹ್ಮಣ ಸ್ತ್ರೀಯರಲ್ಲಿ ಕ್ಷತ್ರಿಯನಿಗೆ ಹುಟ್ಟಿದವನು ಸೂತನೆನಿಸುವನು. *ಪ್ರತಿಲೋಮ ಸಾಂಕರ್ಯದಿಂದ ಹುಟ್ಟಿದವರಲ್ಲಿ ಆತನುಮಾತ್ರವೇ ದ್ವಿಜನೆನಿಸುವನು. ಹೀಗೆ ಎರಡು ವರ್ಣಗಳ ಸಾಂಕರ್ಯದಿಂದ ಹುಟ್ಟಿದವರಿಗೆ ರಥಕಾರರೆಂದೂ ಹೆಸರು. ಇವರು ಕ್ಷತ್ರಿಯರಿಗಿಂತಲೂ ಸ್ವಲ್ಪ ಕಡಿಮೆಯೆಂದೂ, ವೈಶ್ಯರಿಗಿಂತಲೂ ಮೇಲೆಂದೂ ಹೇಳುವರು. ಪೂರ್ವಕಾಲದ ರಾಜರು ಸೂತರೊಡನೆ ಸಂಬಂಧವನ್ನು

* ಪ್ರತಿಲೋಮಸಾಂಕರ್ಯವೆಂದರೆ ಉತ್ತಮವರ್ಣದ ಸ್ತ್ರೀಯಲ್ಲಿ ಅದಕ್ಕಿಂತ ಕೀಳು ವರ್ಣದ ಪುರುಷನ ಸಂಬಂಧವೆಂದರ್ಥವು.

ಮಾಡಿರುವರು. ಆದರೆ, ಈ ಪ್ರತಿಲೋಮ ಸಾಂಕರ್ಯದಿಂದ ಸೂತಜಾತಿಯವರಿಗೆ ರಾಜರೆಂಬ ಹೆಸರುಮಾತ್ರ ಬರಲಿಲ್ಲ. ಈ ಸೂತರೆಂಬ ಹೆಸರಿನಿಂದಲೇ ಅವರ ದೇಶವು ಸೂತದೇಶವೆನಿಸಿತು. ಆ ಸೂತದೇಶದಲ್ಲಿ ಕೇಕಯನೆಂಬ ರಾಜನು ಪ್ರಸಿದ್ಧನಾಗಿದ್ದನು. ಅವನು ರಾಜಕನ್ಯೆಯಲ್ಲಿ ಹುಟ್ಟಿದವನು. ಸಾರಥ್ಯದಲ್ಲಿ ಎಣೆಯಿಲ್ಲದ ನೈಪುಣ್ಯವುಳ್ಳವನು. ಅವಳಿಗೆ ಮಾಲವಿಯೆಂಬವಳಲ್ಲಿ ಕೀಚಕರೆಂದು ಹೆಸರುಗೊಂಡ ನೂರಾರುಮಂದಿ ಪುತ್ರರು ಹುಟ್ಟಿದರು. ಅವರಲ್ಲಿ ಅತ್ಯಂತ ಬಲಾಢ್ಯನಾಗಿ, ಎಲ್ಲರನ್ನೂ ಜಯಿಸುವೆನೆಂಬ ದರ್ಪದಿಂದ ಕೊಬ್ಬಿದ ಕೀಚಕನೆಂಬವನೇ ಜ್ಯೇಷ್ಠನು. ಮಾಲವಿಗೆ ತಂಗಿಯೊಬ್ಬಳಿದ್ದಳು. ಅವಳಲ್ಲಿ ಅದೇ ಕೇಕಯರಾಜನಿಗೆ ಸುದೇಷ್ಣೆಯೆಂಬ ಕನ್ಯೆಯೊಬ್ಬಳು ಹುಟ್ಟಿದಳು. ಆಕೆಯನ್ನು ಕೇಕಯರಾಜನು ವಿರಾಟನಿಗೆ ಮದುವೆಮಾಡಿಕೊಟ್ಟನು. *ಕೋಸಲಪುತ್ರಿಯಾದ ಸುರಥೆಯೆಂಬವಳು ಮೃತಳಾಗಿ, ಅವಳ ಮಗನಾದ ಶ್ವೇತನೆಂಬವನು ಎಲ್ಲಿಯೋ ದೇಶಭ್ರಷ್ಟನಾಗಿ ಹೋಗಲು, ಶಂಖನೆಂಬವನೂ ತನ್ನ ಮಾವನ ಮನೆಯಲ್ಲಿ ಸೇರಿಬಿಟ್ಟನೆಂಬೆ ವಿರಾಟನು ಸುದೇಷ್ಣೆಯನ್ನು ಕೈಹಿಡಿದು, ದುಃಖವನ್ನು ನೀಗಿದನು. ಸುದೇಷ್ಣೆಯಲ್ಲಿ ವಿರಾಟರಾಜನಿಂದ ವಂಶೋದ್ಧಾರಕನಾದ ಉತ್ತರನೆಂಬ ಕುಮಾರನೂ, ಉತ್ತರೆಯೆಂಬ ಕನ್ಯೆಯೂ ಹುಟ್ಟಿದರು. ಕೀಚಕನಾದರೋ ತನ್ನ ಚಿಕ್ಕಮ್ಮನ ಮಗಳಾದ ಸುದೇಷ್ಣೆಯನ್ನು ಬಹಳವಾಗಿ ಪ್ರೀತಿಸುತ್ತ, ಅವಳ ಪರಿಚರ್ಯೆಯನ್ನು ಮಾಡಿಕೊಂಡು ವಿರಾಟನಲ್ಲಿಯೇ ಸುಖವಾಗಿರುತ್ತಿದ್ದನು. ಮಹಾಪರಾಕ್ರಮಿಗಳಾದ ಕೀಚಕನ ಸಹೋದರರೆಲ್ಲರೂ ತಮ್ಮಣ್ಣನಾದ ಕೀಚಕನನ್ನೇ ಅನುವರ್ತಿಸುತ್ತ, ವಿರಾಟನ ಸೈನ್ಯಗಳನ್ನೂ, ಬೊಕ್ಕಸವನ್ನೂ ಅಭಿವೃದ್ಧಿಗೆ ತಂದರು.

ಎಲೈ ಜನಮೇಜಯರಾಜನೇ ! ಪೂರ್ವದಲ್ಲಿ ಕಾಲೇಯರೆಂಬ ದೈತ್ಯರು ಭೂಮಿಯಲ್ಲಿ ಬಹಳ ಪ್ರಸಿದ್ಧಿಗೊಂಡಿದ್ದರು. ಅವರಲ್ಲಿ ಬಾಣನೆಂಬವನು ಜ್ಯೇಷ್ಠನು. ಆ ಕಾಲೇಯರೇ ಕೀಚಕರಾಗಿ ಹುಟ್ಟಿದರು. ಸಕಲಶಾಸ್ತ್ರ ಸಂಪ

*ಇವಳು ವಿರಾಟನಿಗೆ ಮೊದಲನೆಯ ಹೆಂಡತಿ.

ನ್ನನೂ, ಬಲಾಢ್ಯನೂ, ಭಯಂಕರ ಪರಾಕ್ರಮವುಳ್ಳವನೂ, ನೀತಿಮರ್ಯಾದೆಗಳನ್ನು ಮೀರಿ ನಡೆಯುವ ದುಸ್ವಭಾವವುಳ್ಳವನೂ ಆಗಿದ್ದ ಬಾಣನೆಂಬ ದೈತ್ಯನೇ ಕೀಚಕನಾಗಿ ಹುಟ್ಟಿದನು. ಬಲದರ್ಪಿತನಾದ ಆ ಕೀಚಕನ ಸಹಾಯದಿಂದಲೇ ವಿರಾಟನು, ಪೂರ್ವದಲ್ಲಿ ಇಂದ್ರನು ದೈತ್ಯರನ್ನು ಹೇಗೋ ಹಾಗೆ ಶತ್ರುಗಳನ್ನೆಲ್ಲ ಜಯಿಸಬಲ್ಲವನಾದನು. ಈ ಕೀಚಕನ ಬಲದಿಂದಲೇ ವಿರಾಟನು ಮೇಖಲ, ತ್ರಿಗರ್ತ, ದಶಾರ್ಣ, ಕಶೇರುಕ, ಮಾಲವ, ಯವನ, ಸಿಲಿಂದ, ಕಾಶಿ, ಕೋಸಲ, ಕರದ, ನಿಷಿದ್ಧ, ಶಿವ, ಮುಚುಲಕ, ಪುಳಿಂದ, ಕಳಿಂಗ, ಕಂಕಣ, ಪರಕಂಕಣ ಮೊದಲಾದ ಅನೇಕದೇಶಗಳನ್ನು ಜಯಿಸಿ ವಶಪಡಿಸಿಕೊಂಡನು. ಇವಲ್ಲದೆ, ಶೂರರಾದ ಇನ್ನೂ ಅನೇಕ ದೇಶಾಧಿಪತಿಗಳು ಕೀಚಕನಿಂದ ಯುದ್ಧದಲ್ಲಿ ಪರಾಜಿತರಾಗಿ, ದಿಕ್ಕು ದಿಕ್ಕಿಗೂ ಓಡಿಹೋದರು. ಹೀಗೆ ಮಹಾಪರಾಕ್ರಮಿಯಾಗಿ ಬಲದಲ್ಲಿ ಹತ್ತು ಸಾವಿರ ಆನೆಗಳಿಗೆ ಸಾಟಿಯೆನಿಸಿಕೊಂಡ ಆ ಕೀಚಕನ ಸಾಹಸಕ್ಕೆ ಮೆಚ್ಚಿ ವಿರಾಟನು ಅವನನ್ನು ತನ್ನ ಸೇನಾಧಿಪತಿಯನ್ನಾಗಿ ನಿಯಮಿಸಿಕೊಂಡನು. ದಶರಥಪುತ್ರನಾದ ರಾಮನಂತೆ ಪರಾಕ್ರಮವುಳ್ಳ ಹತ್ತು ಮಂದಿ ವೀರರು ವಿರಾಟನಿಗೆ ಒಡಹುಟ್ಟಿದವರಾಗಿದ್ದರು. ಅವರೂ ಆ ಕೀಚಕನನ್ನೇ ಅನುಸರಿಸುತ್ತಿದ್ದರು. ಭಯಂಕರವಾದ ಆ ಕೀಚಕನ ಶಕ್ತಿಯು ಈ ವಿಧವಾದುದು. ಇತರಕೀಚಕರೂ ಬಲದಲ್ಲಿ ಅವನಿಗೆ ಸಮನಾಗಿಯೇ ಇದ್ದರು. ಇವರೆಲ್ಲರೂ ತಮ್ಮ ಭಾವನಾದ ವಿರಾಟನ ಮೇಲ್ಮೆಯನ್ನೇ ಮನಃಪೂರ್ವಕವಾಗಿ ಕೋರುತ್ತಿದ್ದರು. ಆ ಕೀಚಕನ ಪರಾಕ್ರಮಕ್ಕೆ ಹೆದರಿಯೇ ವಿರಾಟನು ಅವನು ಮಾಡಿದ ಅಪರಾಧಕ್ಕೆ ಅವನನ್ನು ದಂಡಿಸಲಾರದೆ ಸುಮ್ಮನಿದ್ದನು. ಇನ್ನು ದ್ರೌಪದಿಯು ಆ ಕೀಚಕನನ್ನು ಶಪಿಸದೆ ಬಿಟ್ಟುದಕ್ಕೆ ಕಾರಣವೇನೆಂಬುದನ್ನು ತಿಳಿಸುವೆನು ಕೇಳು. ಋಷಿಗಳು ಯಾವಾಗಲೂ ತಮ್ಮ ತಪಸ್ಸನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಕೋಪವನ್ನು ಅಡಗಿಸಿಕೊಳ್ಳುವರು. ಆದುದರಿಂದಲೇ, ಅವರು ಅಪರಾಧಿಗಳನ್ನು ಶಪಿಸುವುದಿಲ್ಲ. ಆ ತತ್ವವನ್ನು ದ್ರೌಪದಿಯು ತಿಳಿದಿದ್ದುದರಿಂದ, ಆ ಕೀಚಕನನ್ನು ಶಪಿಸದಿದ್ದಳು. ಕ್ಷಮೆಯೇ ಧರ್ಮವು. ಕ್ಷಮೆಯೇ ದಾನವು. ಕ್ಷಮೆಯೇ ಯಜ್ಞವು. ಕ್ಷಮೆಯೇ ತಪಸ್ಸು. ಸತ್ಯಶೀಲಾದಿಗಳೂ ಕ್ಷಮೆಯೇ ಎಂದು ಶ್ರುತಿಗಳು

ಉದ್ಘೋಷಿಸುವುವು. ಕ್ಷಮೆಯುಳ್ಳವರಿಗೆ ಇಹಪರಗಳೆರಡೂ ವಶವಾಗುವುವು. ಇವೆಲ್ಲವನ್ನೂ ತಿಳಿದೇ ದ್ರೌಪದಿಯು ತಾಳ್ಮೆಯನ್ನು ವಹಿಸಿದಳು. ಪಾತಿವ್ರತ್ಯಪ್ರಭಾವದಿಂದ ಆ ದ್ರೌಪದಿಗೆ ಕೀಚಕನನ್ನು ನಿಗ್ರಹಿಸುವ ಶಕ್ತಿಯಿದ್ದರೂ, ತನ್ನ ಪತಿಗಳ ಅಭಿಪ್ರಾಯವನ್ನು ತಿಳಿದು ಸುಮ್ಮನಿದ್ದಳು. ಪಾಂಡವರೂ ಕೂಡ ಆ ದ್ರೌಪದಿಯ ದುಃಖವನ್ನು ನೋಡಿಯೂ, ಲಜ್ಜಿತರಾಗಿ ಕೋಪಾಗ್ನಿಯಿಂದ ಒಳಗೊಳಗೆ ಕುದಿಯುತ್ತಿದ್ದರು. ಸಮುದ್ರವು ವೇಲೆಯಿಂದ ಹೇಗೋ ಹಾಗೆ ಧರ್ಮರಾಜನ ಆಜ್ಞೆಯಿಂದ ನಿವಾರಿತರಾಗಿ ಸುಮ್ಮನಾದರು. ಭೀಮನು ಕೀಚಕನನ್ನು ಆಗಲೇ ಕೊಲ್ಲುವುದಕ್ಕಿದ್ದರೂ ಕೋಪವನ್ನು ತನ್ನಲ್ಲಿಯೇ ಅಡಗಿಸಿಕೊಂಡು, ಸಂಕಟದಿಂದ ಬಾರಿಬಾರಿಗೂ ನಿಟ್ಟುಸಿರನ್ನು ಬಿಡುತ್ತ, ಅಡಿಗೆಯ ಮನೆಗೆ ಹೋಗಿ, ಆ ರಾತ್ರಿಯೆಲ್ಲ ದುಸ್ಸಹವಾದ ವ್ಯಥೆಯಿಂದ ಹಾಸಿಗೆಯಮೇಲೆ ಹೊರಳಾಡುತ್ತಿದ್ದನು".

ಇದು ಇಪ್ಪತ್ತೊಂದನೆಯ ಅಧ್ಯಾಯವು.

ಕೀಚಕನನ್ನು ಕೊಲ್ಲಿಸಬೇಕೆಂದು ದ್ರೌಪದಿಯು ಅಡಿಗೆಯ ಮನೆಯಲ್ಲಿವ್ವ ಭೀಮಸೇನನ ಬಳಿಗೆ ಹೋಗಿ ತನ್ನ ದುಃಖವನ್ನು ಹೇಳಿಕೊಂಡುದು.

ಎಲೈ ಜನಮೇಜಯರಾಜನೇ! ಕೇಳು! ಆಮೇಲೆ ದ್ರೌಪದಿಯು ಕೀಚಕನಿಂದ ತನಗುಂಟಾದ ಅವಮಾನಕ್ಕಾಗಿ ದುಃಖವನ್ನು ಸಹಿಸಲಾರದೆ, ಅವನನ್ನು ಹೇಗಾದರೂ ಕೊಲ್ಲಿಸಬೇಕೆಂದು ನಿಶ್ಚಯಿಸಿ, ತನ್ನ ವಾಸಸ್ಥಾನಕ್ಕೆ ಬಂದು ಸೇರಿದಳು. ಅಲ್ಲಿ ವಿಧ್ಯುಕ್ತವಾಗಿ ಸ್ನಾನವನ್ನು ಮಾಡಿ, ತನ್ನ ಮೈಯನ್ನೂ, ತನ್ನ ಬಟ್ಟೆಗಳೆರಡನ್ನೂ ಚೆನ್ನಾಗಿ ಶುದ್ಧಿಮಾಡಿಕೊಂಡಳು. ತನಗುಂಟಾದ ಭಂಗವನ್ನು ನೆನೆಸಿಕೊಂಡು ಬಾರಿಬಾರಿಗೂ ಅಳುತ್ತ ಹೀಗೆಂದು ಚಿಂತಿಸುವಳು. "ಅಯ್ಯೋ! ಈಗ ನಾನೇನು ಮಾಡಲಿ! ಎಲ್ಲಿಗೆ ಹೋಗಲಿ? ನನ್ನ ಕಾರ್ಯವು ಹೇಗೆ ನೆರವೇರುವುದು?" ಎಂದು ಚಿಂತಿಸುತ್ತಿರುವಾಗಲೇ, ಅವಳ ಮನಸ್ಸಿಗೆ ಭೀಮನ ನೆನಪು ಬಂದಿತು. ಆಗ ಅವಳು

ಮನಸ್ಸಿನಲ್ಲಿ ಸ್ವಲ್ಪ ಸಮಾಧಾನವಾಡಿಕೊಂಡು, "ಭೀಮಸೇನನು ಹೊರತು ಬೇರೆ ಯಾವನೂ ನನ್ನ ಉದ್ದೇಶವನ್ನು ನೆರವೇರಿಸುವಹಾಗಿಲ್ಲ. ಇರಲಿ! ಅಲ್ಲಿಯೇ ಹೋಗುವೆನು," ಎಂದು ನಿಶ್ಚಯಿಸಿದಳು. ರಾತ್ರಿಯಾಯಿತು. ಕತ್ತಲೆಯಲ್ಲಿ ಊರೆಲ್ಲವೂ ನಿಶ್ಶಬ್ದವಾಗಿದ್ದಾಗ, ತನ್ನ ಹಾಸಿಗೆಯನ್ನು ಬಿಟ್ಟು ಮೇಲೆದ್ದು, ದುಃಖೋದ್ರೇಕದಿಂದ ದಾರಿಸಾಗುವುದನ್ನೂ ತಿಳಿಯದೆ, ವೇಗದಿಂದ ನಡೆದು ಅಡಿಗೆಯ ಮನೆಗೆ ಬಂದು, ಭೀಮನು ಮಲಗಿದ್ದ ಸ್ಥಳಕ್ಕೆ ಬಂದಳು. ಶುಚಿಸ್ಮಿತೆಯಾದ ಆ ದ್ರೌಪದಿಯು ಒಂದು ದೊಡ್ಡ ಮದದಾನೆಯ ಬಳಿಗೆ ಬರುವ ಹೆಣ್ಣಾನೆಯಂತೆಯೂ, ಒಳ್ಳೆಯ ಬಿಳಿಯ ಬಣ್ಣವುಳ್ಳ ಮೂರು ವರ್ಷದ ಒಂದು ಕಡಸು, ಅರಣ್ಯದಲ್ಲಿ ಉಕ್ಕಿ ಹರಿಯುತ್ತಿರುವ ಒಂದು ನದಿಯ ಪಕ್ಕದಲ್ಲಿ ಮಲಗಿದ ಒಂದು ಮಹಾವೃಷಭವನ್ನು ಸಮೀಪಿಸುವಂತೆಯೂ, ಒಂದು ಹೆಣ್ಣುಸಿಂಹವು ಮಲಗಿದ ಒಂದು ಸಿಂಹದ ಬಳಿಗೆ ಬರುವಂತೆಯೂ, ಆವಳು ಭೀಮಸೇನನ ಹಾಸಿಗೆಯ ಬಳಿಗೆ ಬಂದು, ಮಲಗಿದ್ದ ಆ ತನ್ನ ಪತಿಯನ್ನು ಎಚ್ಚರಗೊಳಿಸುವುದಕ್ಕಾಗಿ ಎರಡು ತೋಳುಗಳನ್ನೂ ನೀಡಿ ಅಪ್ಪಿಕೊಂಡಳು. ಗೋಮತೀತೀರದಲ್ಲಿ ಹುಲುಸಾಗಿ ಬೆಳೆದ ಒಂದು ವೃಕ್ಷವನ್ನು, ಪುಷ್ಪಿತವಾದ ಒಂದು ಬಳ್ಳಿಯು ಹೆಣೆದುಕೊಂಡಂತೆ, ತನ್ನ ಎರಡು ತೋಳುಗಳಿಂದಲೂ ಪತಿಯ ದೇಹವನ್ನಪ್ಪಿ ಅವನನ್ನು ಎಚ್ಚರಿಸುವುದಕ್ಕೆ ಯತ್ನಿಸಿದಳು. ಬೇರೊಬ್ಬ ಮಹಾಲಕ್ಷ್ಮಿಯೋ ಎಂಬಂತಿರುವ ಆ ದ್ರೌಪದಿಯು, ಸಮುದ್ರಶಾಯಿಯಾದ ವಿಷ್ಣುವಿನಂತೆ ಬಿಳಿಯ ಹಾಸಿಗೆಯಮೇಲೆ ಮಲಗಿದ್ದ ಆ ಭೀಮನನ್ನು ತನ್ನ ಮೃದುವಾದ ಕೈಗಳಿಂದೊತ್ತಿ, ಇಂದ್ರನನ್ನು ಶಚಿಯೂ, ಶಿವನನ್ನು ಪಾರ್ವತಿಯೂ, ಬ್ರಹ್ಮನನ್ನು ಸಾವಿತ್ರಿಯೂ, ಷಣ್ಮುಖನನ್ನು ದೇವಸೇನೆಯೂ, ಮಹಾಗಜವನ್ನು ಹೆಣ್ಣಾನೆಯೂ, ಶ್ರೀಮಹಾವಿಷ್ಣುವನ್ನು ಲಕ್ಷ್ಮೀದೇವಿಯೂ ನಿದ್ರೆಯಿಂದೆಚ್ಚರಗೊಳಿಸುವಂತೆ ಎಚ್ಚರಗೊಳಿಸಿದಳು. ವೃಷಭದಂತೆ ಕಣ್ಣುಳ್ಳವನೂ, ದಿಗ್ಗಜದಂತೆ ಆಕಾರವುಳ್ಳವನೂ ಆದ ಆ ತನ್ನ ಪತಿಯನ್ನು ನೋಡಿ, ವೀಣೆಯಂತೆ ಇಂಪಾದ ಕಂಠವುಳ್ಳ ಆ ದ್ರೌಪದಿಯು ಗಾಂಧಾರಸ್ವರದಿಂದ ಹೀಗೆಂದು ಹೇಳುವಳು. "ಭೀಮಸೇನಾ! ಏಳು! ಏಳು! ಮೃತನಂತೆ ಹೀಗೆ ನೆಲದಮೇಲೆ ನಿದ್ರಿಸುತ್ತಿರುವೆ! ನಿನ್ನ

ಪ್ರಿಯೆಯಾದ ನನ್ನನ್ನು ಕೈಯಿಂದ ಮುಟ್ಟಿದ ಪಾಪಾತ್ಮನಾದ ಆ ಕೀಚಕನೇ ಇನ್ನೂ ಜೀವದೊಂದಿಗೆ ಬದುಕಿರುವಾಗ, ನೀನು ಮೃತಪ್ರಾಯನಾಗಿ ಮಲಗಿರುವೆಯಾ? ನನ್ನ ವೈರಿಯಾದ ಆ ಮಹಾಪಾಪಿಯು, ಸೇನಾಧಿಪತಿಯೆನಿಸಿಕೊಂಡ ಆ ಕೀಚಕನು, ನನ್ನ ವಿಷಯದಲ್ಲಿ ಅಂತಹ ಅಕಾರ್ಯವನ್ನು ಮಾಡಿ ಇನ್ನೂ ಬದುಕಿರುವಾಗ ನಿನಗೆ ಹೇಗೆ ನಿದ್ರೆ ಬಂದಿತೋ ತಿಳಿಯಲಿಲ್ಲ" ಎಂದಳು. ಸುಖವಾಗಿ ಮಲಗಿದ್ದ ಆ ಭೀಮನಿಗೆ ಈ ವಾಕ್ಯಗಳು ಶಲ್ಯದಂತೆ ಕಿವಿಗೆ ಬಿದ್ದುವು. ಅಂಕುಶದಿಂದ ತಿವಿಯಲ್ಪಟ್ಟ ಮಹಾಗಜದಂತೆ ಅವನು ಥಟ್ಟನೆ ಎಚ್ಚರಗೊಂಡನು. ಒಡನೆಯೇ ತಾನು ಮಲಗಿದ್ದ ಹಾಸಿಗೆಯನ್ನು ಬಿಟ್ಟು ಎದ್ದು ಕುಳಿತನು. ಎಂಥವರಿಗೂ ಇದಿರಿಸಲಸಾಧ್ಯನಾದ ಆ ಭೀಮಸೇನನು, ತನ್ನ ಪ್ರಿಯಪತ್ನಿಯಾದ ಪಾಂಚಾಲಿಯನ್ನು ಕೈಹಿಡಿದು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಹೀಗೆಂದು ಪ್ರಶ್ನೆಮಾಡುವನು. "ಪ್ರಿಯೇ! ಏನಿದು? ನೀನು ಇಷ್ಟು ಆತುರದಿಂದ ನನ್ನಲ್ಲಿಗೆ ಬರಲು ಕಾರಣವೇನು? ನಿನ್ನ ಮೈಯಲ್ಲಿ ಸಹಜವಾಗಿರಬೇಕಾದ ಲಾವಣ್ಯವು ಇಷ್ಟು ಕಂದಿದುದೇಕೆ? ನೀನು ಬಹಳ ಬಳಲಿದಂತೆ ಕಾಣಿಸುತ್ತಿರುವೆ. ಅದು ರಹಸ್ಯವಾಗಿರಲಿ, ಪ್ರಕಾಶವಾಗಿರಲಿ, ಎಲ್ಲವನ್ನೂ ನನಗೆ ವಿವರವಾಗಿ ತಿಳಿಯುವಂತೆ ಹೇಳಬೇಕು. ಅದು ಶುಭವಾಗಲಿ, ಅಶುಭವಾಗಲಿ, ಅದರಿಂದ ಸುಖವಿರಲಿ, ಆಥವಾ ದುಃಖವಿರಲಿ, ಮಾಡಬಾರದ ಕಾರ್ಯವಾಗಿದ್ದರೂ ನಿನಗಾಗಿ ಅದನ್ನು ಮಾಡಿ ಮುಗಿಸಿದೆನೆಂದೇ ತಿಳಿ! ಎಲೆ ಕೃಷ್ಣೆ! ಸಮಸ್ತ ಕಾರ್ಯಗಳಲ್ಲಿಯೂ ನಿನ್ನ ನಂಬಿಕೆಗೆ ಪಾತ್ರನಾದವನು ನಾನೊಬ್ಬನೇ. ಅಡಿಗಡಿಗೆ ನಿನ್ನನ್ನು ನಾನು ಮಹಾವಿಪತ್ತುಗಳಿಂದ ತಪ್ಪಿಸಿರುವೆನು. ನೀನು ಬಂದ ಕಾರ್ಯೋದ್ದೇಶವನ್ನು ಬೇಗನೆ ತಿಳಿಸು! ಬೇರೊಬ್ಬರಿಗೆ ತಿಳಿಯುವುದಕ್ಕೆ ಮೊದಲು ನಿನ್ನ ಹಾಸಿಗೆಗೆ ಹೋಗಿ ಮಲಗಿಬಿಡು" ಎಂದನು. ಇದನ್ನು ಕೇಳಿ ದ್ರೌಪದಿಯು ಲಜ್ಜೆಯಿಂದಲೂ, ಭಯದಿಂದಲೂ ತಲೆಬಗ್ಗಿಸಿ, ಕಣ್ಣೀರು ತುಂಬಿಕೊಂಡು, ಪ್ರತ್ಯುತ್ತರವನ್ನೇನೂ ಹೇಳಲಾರದೆ ಮೌನದಿಂದಿದ್ದಳು. ಜನಮೇಜಯನೇ! ಕೇಳು! ಇದನ್ನು ನೋಡಿ ಪರಾಕ್ರಮವುಳ್ಳ ಆ ಭೀಮನು ತಿರುಗಿ ಅವಳನ್ನು ಕುರಿತು "ಸುಂದರೀ! ಎಲೆ ಪ್ರಾಣಪ್ರಿಯೆ! ಮತ್ತಗಜಗಾಮಿನಿ! ಏಕೆ ಸಮ್ಮನಿರುವೆ? ನಿನಗೆ

ನಾನು ಮಾಡಬೇಕಾದ ಪ್ರಿಯವೇನು? ತಿಳಿಸು" ಎನಲು ಆಗ ದ್ರೌಪದಿಯು "ಭೀಮಸೇನಾ! ಯುಧಿಷ್ಠಿರನ ಕೈಹಿಡಿದ ಹೆಂಗಸು ಹೇಗೆ ತಾನೇ ದುಃಖವಿಲ್ಲದೆ ಬದುಕುವಳು? ನಾಥಾ! ನೀನಾದರೋ ನನ್ನ ದುಃಖಗಳೆಲ್ಲವನ್ನೂ ತಿಳಿದೇ ಇರುವೆ. ಹಾಗಿದ್ದರೂ ತಿಳಿಯದವನಂತೆ ನನ್ನನ್ನೇಕೆ ಕೇಳುವೆ? ಹಿಂದೆ (ದ್ಯೂತಸಭೆಯಲ್ಲಿ) ಪ್ರಾತಿಕಾಮಿಯು ನನ್ನನ್ನು ದಾಸಿಯೆಂದು ಹೇಳಿ ಸಭೆಗೆ ಎಳೆದುಕೊಂಡುಬಂದುದು ಇನ್ನೂ ನನ್ನ ಮರ್ಮಗಳನ್ನು ಭೇದಿಸುತ್ತಿರುವುದು. ಅದರಮೇಲೆ ದುಶ್ಶಾಸನನು ಹಸ್ತಿನಾಪುರದಲ್ಲಿ ರಜಸ್ವಲೆಯಾಗಿದ್ದ ನನ್ನ ತಲೆಕೂದಲನ್ನು ಹಿಡಿದು, ರಾಜಸಭೆಯಲ್ಲಿ ಕರ್ಣಾದಿ ವೀರಕ್ಷತ್ರಿಯರೂ, ಆ ದುರ್ಯೋಧನನೂ ನನ್ನ ಅತ್ತೆಮಾವಂದಿರೂ, ಭೀಷ್ಮಾಚಾರ್ಯನೂ, ವಿದುರನೂ, ಕೃಪನೂ, ದ್ರೋಣನೂ ಕಣ್ಣಾರೆ ನೋಡುತ್ತಿದ್ದಾಗಲೇ ರಾಜಸಭೆಗೆ ಎಳೆದು ತಂದನು. ಓ ಪಾಂಡುಪುತ್ರಾ! ನೀನು ಜೀವಿಸಿರುವಾಗಲೇ ನನಗೆ ಈ ಅವಸ್ಥೆಯುಂಟಾಯಿತು. ನನ್ನ ಅತ್ತೆ ಮಾವಂದಿರ ಮುಂದೆಯೂ, ನಿನ್ನ ಸಹೋದರರ ಮುಂದೆಯೂ ಆ ಸಭಾಮಧ್ಯದಲ್ಲಿ ನಾನು ತುರುಬಿನಲ್ಲಿ ಹಿಡಿದು ಸೆಳೆಯಲ್ಪಟ್ಟೆನು. ಅದರಿಂದಾಚೆಗೆ ರಾಜ್ಯವನ್ನು ಬಿಟ್ಟು ಕಾಡಿನಲ್ಲಿ ನಿಮ್ಮೊಡನೆ ಅಲೆದಾಡಿದೆನು. ಅಲ್ಲಿ ಎಷ್ಟೋ ಕಷ್ಟಗಳನ್ನೆಲ್ಲ ಅನುಭವಿಸಿದೆನು. ಕಾಡುಗುಡ್ಡಗಳನ್ನೆಲ್ಲ ಸುತ್ತಿದೆನು. ಜಟಾಸುರನಿಂದ ಸಂಭವಿಸಿದ ಕಷ್ಟದಲ್ಲಿ ಮಹತ್ತಾದ ಭಯಕ್ಕೆ ಒಳಗಾದೆನು. ಓ ಪ್ರಭೂ! ದ್ರುಪದಪುತ್ರಿಯಾಗಿ ಜನಿಸಿ, ನಿಮ್ಮನ್ನು ಕೈಹಿಡಿದ ನಾನೊಬ್ಬಳು ಹೊರತು, ನನ್ನಂತಹ ಬೇರೆ ರಾಜಪುತ್ರಿಯು ಯಾವಳು ತಾನೇ ಇಂತಹ ಮಹಾದುಃಖವನ್ನನುಭವಿಸುತ್ತ ಪ್ರಾಣವನ್ನಿಟ್ಟುಕೊಂಡಿರಬಲ್ಲಳು? ಇದಲ್ಲದೆ ನಮ್ಮ ವನವಾಸಕಾಲದಲ್ಲಿ ದುರಾತ್ಮನಾದ ಸೈಂಧವನು ನನ್ನನ್ನು ಎತ್ತಿಕೊಂಡು ಹೋಗಲು ಯತ್ನಿಸಿದನು. ಈ ಎರಡನೆಯ ವಿಪತ್ತನ್ನು ಬೇರೆ ಯಾವಳು ತಾನೇ ಸಹಿಸಬಲ್ಲಳು? ನೀನು ಜೀವಿಸಿರುವಾಗಲೇ ನಾನು ದುರ್ಗಮವಾದ ಅರಣ್ಯಪ್ರದೇಶದಲ್ಲಿದ್ದು ಕಾಲವನ್ನು ಕಳೆಯಬೇಕಾಯಿತು. ಕಲ್ಲುಮುಳ್ಳುಗಳಿಂದ ಕಾಲಿಡಲು ಸಾಧ್ಯವಿಲ್ಲದೆಯೂ, ಅನೇಕ ದುಷ್ಟ ಮೃಗಗಳಿಂದ ನಿಬಿಡವಾಗಿಯೂ ಇದ್ದ ಕಾಡು ಗುಡ್ಡಗಳನ್ನೆಲ್ಲ

ನಾನು ಕಾಲ್ನಡೆಯಿಂದಲೇ ಸುತ್ತಿದುದಾಯಿತು. ಕಾಡಿನಲ್ಲಿ ದೊರೆಯುವ ಗಡ್ಡೆ, ಗೆಣಸು, ಸೊಪ್ಪು ಮುಂತಾದುವುಗಳನ್ನೇ ತಿನ್ನುತ್ತ ಹನ್ನೆರಡುವರ್ಷಗಳನ್ನು ಕಳೆದೆನು. ಈಗ ಈ ಹದಿಮೂರನೆಯ ವರ್ಷದಲ್ಲಿ, ಇಲ್ಲಿನ ರಾಣಿಯ ಪರಿಚಾರಿಕೆಯಾಗಿ ಸೇರಿರುವೆನು. ಆದರೆ, ಸತ್ಯಕ್ಕೂ ಧರ್ಮಕ್ಕೂ ಕುಂದಕವನ್ನು ತರಬಾರದೆಂಬ ಉದ್ದೇಶದಿಂದಲೇ ನಾನು ನನಗೆ ಸಮಾನಳಾದ ಬೇರೊಬ್ಬ ಸ್ತ್ರೀಯ ಪರಿಚಯ್ರ್ಯೆಯನ್ನು ಮಾಡಬೇಕಾಯಿತು. ಎಲೈ ಪಾಂಡವಶ್ರೇಷ್ಠನೆ! ಕೈ ಹಿಡಿದ ಪತಿಯಾದ ನೀನು ಬದುಕಿರುವಾಗಲೇ ನಾನು ಈ ವಿರಾಟರಾಜನಿಗೆ ಪ್ರತಿದಿನವೂ *ಗೋಶೀರ್ಷಕ, ಪದ್ಮಕ, ಹರಿಶ್ಯಾಮಾದಿ ಚಂದನಗಳನ್ನು ನನ್ನ ಕೈಯಿಂದ ಅರೆದುಕೊಡುತ್ತಿರುವೆನು. ನಿಮಗಾಗಿ ಇಂತಹ ಅನೇಕದುಃಖಗಳಿಗೊಳಗಾದರೂ, ಆ ಕಷ್ಟಗಳಿಂದನ್ನೂ ನಾನು ಅಷ್ಟಾಗಿ ಲಕ್ಷ್ಯಕ್ಕೆ ತಾರದೆ ಸಹಿಸಿಕೊಂಡಿರುವೆನು. ಆದರೆ, ಈಗ ನನಗುಂಟಾದ ಪರಿಭವವಾದರೋ ಅತಿ ದುಸ್ಸಹವಾಗಿದೆ, ಮತ್ಸ್ಯರಾಜನ ಮುಂದೆ, ಜೂದಾಳಿಯಾದ ಆ ಕಂಕನು ಕಣ್ಣಾರೆ ನೋಡುತ್ತಿರುವಾಗಲೇ ನಾನು ಕಾಲಿಂದೊದೆಯಲ್ಪಟ್ಟೆನು. ಇಂತಹ ದುಃಖಕ್ಕೀಡಾದ ಬೇರೆ ಯಾವ ಸ್ತ್ರೀಯುತಾನೇ ಪ್ರಾಣವನ್ನಿಟ್ಟುಕೊಂಡಿರುವಳು? ಇಷ್ಟು ಕಷ್ಟಕ್ಕೊಳಗಾದರೂ ನನ್ನನ್ನು ನೀವು ಗಮನಿಸದಿದ್ದ ಮೇಲೆ ನಾನು ಬದುಕಿ ಫಲವೇನು? ನಾನು ದ್ರುಪದರಾಜನ ಮಗಳು! ದೃಷ್ಟದ್ಯುಮ್ನನ ಸಹೋದರಿ! ಪವಿತ್ರವಾದ ಅಗ್ನಿಕುಂಡದಿಂದ ಹುಟ್ಟಿದವಳು. ನಾನು ಎಂದಿಗೂ ಬರೀ ಕಾಲಿನಿಂದ ನೆಲದಮೇಲೆ ಕಾಲಿಟ್ಟು ಸಂಚರಿಸಿದವಳಲ್ಲ. ಇಂತವಳಿಗೆ ಈ ಅವಸ್ಥೆಯುಂಟಾಯಿತು. ಈಗ ನೀನು ಆ ಕೀಚಕನನ್ನುಮಾತ್ರ ಕೊಲ್ಲದಿದ್ದರೆ, ನೇಣುಹಾಕಿಕೊಂಡೋ, ನೀರಿನಲ್ಲಿ ಬಿದ್ದೋ ಪ್ರಾಣವನ್ನು ಬಿಡುವುದು ನಿಶ್ಚಯವು. ವಿಷವನ್ನಾದರೂ ಕಲಸಿ ಕುಡಿಯುವೆನು. ಅಗ್ನಿಯಲ್ಲಿಯಾದರೂ ಬಿಳುವೆನು. ಮರವನ್ನೇರಿ ಕೆಳಗೆ ಬಿದ್ದಾದರೂ ಜೀವವನ್ನು ತೊರೆಯುವೆನು. ಆಯುಧದಿಂದ ನನ್ನ ದೇಹವನ್ನು ನಾನೇ ಕತ್ತ

---

*ಗೋಶೀರ್ಷಕಾದಿಗಳೆಲ್ಲ ಬೇರೆಬೇರೆ ತರದ ಸುವಾಸನೆಯುಳ್ಳ ಚಂದನಭೇದಗಳು. ಪದ್ಮಕವೆಂದರೆ ಕಮಲದ ವಾಸನೆಯುಳ್ಳದು.

ರಿಸಿಕೊಂಡಾದರೂ ದೇಹವನ್ನು ತೊರೆಯುವೆನು. ನಾನು ಜೀವಿಸಿರುವುದರಿಂದ ಆಗಬೇಕಾದುದೇನು? ಎಲೈ ಪುರುಷಶ್ರೇಷ್ಠನೇ! ವಿರಾಟನ ಭಾವಮೈದುನನೂ, ಅವನ ಸೇನಾಪತಿಯೂ ಆದ ಕೀಚಕನೆಂಬವನು ಯಾವನುಂಟೋ, ಆ ಪರಮದುರಾತ್ಮನು, ಸೈರಂಧ್ರೀವೇಷದಿಂದ ರಾಣಿವಾಸದಲ್ಲಿ ಕೆಲಸಮಾಡುತ್ತಿದ್ದ ನನ್ನಲ್ಲಿ ಕಣ್ಣಿಟ್ಟು, ಪ್ರತಿದಿನವೂ ನನ್ನಲ್ಲಿಗೆ ಬಂದು ತನಗೆ ಪತ್ನಿಯಾಗಬೇಕೆಂದು ಪದೇಪದೇ ನಿರ್ಬಂಧಿಸುತ್ತಿದ್ದನು. ವಧಾರ್ಹನಾದ ಆ ಪಾಪಿಯ ಬಾಯಿಂದ ಹೊರಟ ಈ ವಾಕ್ಯಗಳನ್ನು ಕೇಳಿ ನನ್ನ ಎದೆಯು ಮಾಗಿದ ಹಣ್ಣು ಬಿರಿಯುವಂತೆ ಬಿರಿಯುತ್ತಿರುವುದು. ಎಲೈ ನಾಥನೆ! ನೀನೇ ನನಗೆ ರಕ್ಷಕನಾಗಬೇಕು. ನಾನು ಯುಧಿಷ್ಠಿರನ ಬಳಿಗೆ ಹೋಗಲಾರೆನು. ಅವನು ಪ್ರಯತ್ನಹೀನನು! ಕ್ರೋಧವಿಲ್ಲದವನು! ವೀರ್ಯವಿಲ್ಲದವನು! ಹೆಂಗಸಾವಳೂ ಇಂತಹ ಪುತ್ರನನ್ನು ಪಡೆಯಲೇ ಬಾರದು. ಎಲೈ ಮಹಾಬಲಾಢ್ಯನೆ! ನಿನ್ನ ಕೋಪವನ್ನೂ, ನಿನ್ನ ವೀರ್ಯವನ್ನೂ, ನಿನ್ನ ಬಲವನ್ನೂ ನಾನು ಚೆನ್ನಾಗಿ ಬಲ್ಲೆನು. ಅದರಿಂದಲೇ ನಾನು ನಿನ್ನಮುಂದೆ ಹೀಗೆ ಅಳಬೇಕಾಯಿತು. ಅರುವತ್ತು ವರ್ಷದ ಒಂದು ಮದದಾನೆಯು, ಒಂದು ಬಿಲ್ವವೃಕ್ಷವನ್ನು ಮುರಿದು ಕೆಡಹಿ, ಹೇಗೆ ಕಾಲಿಂದ ತಿಕ್ಕಿ ಬಿಡುವುದೋ, ಅದರಂತೆ ನೀನು ನೀಚನಾದ ಆ ಕೀಚಕನ ತಲೆಯನ್ನು ಮುರಿದು, ನೆಲಕ್ಕೆ ಕೆಡಹಿ, ನಿನ್ನ ಎಡಗಾಲಿನಿಂದ ತಿಕ್ಕಿ ಬಿಸಾಡಬೇಕು. ಎಲೈ ನಾಥನೆ! ಹೆಚ್ಚೇಕೆ? ಆ ಕೀಚಕನು ಈ ರಾತ್ರಿ ಕಳೆದು ನಾಳೆ ಬೆಳಗಾದಮೇಲೆ ಉದಿಸುವ ಸೂರ್ಯನನ್ನು ನೋಡುವುದಾದರೆ ನಾನು ಬದುಕಿರಲಾರೆನು. ನೀನು ಈ ರಾತ್ರಿಯೇ ಆ ಕೀಚಕನನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಲೇಬೇಕು. ಹಾಗಿಲ್ಲದಿದ್ದರೆ ನನ್ನ ಪ್ರಾಣಗಳಮೇಲೆ ಆಣೆ! ಅರ್ಜುನನ ಸುಕ್ಕತದಮೇಲೆ ಆಣೆ! ಯುಧಿಷ್ಠಿರನ ಪಾದಗಳಮೇಲೆ ಆಣೆ! ನಕುಲಸಹದೇವರ ಜೀವದಮೇಲೆ ಆಣೆ! ಕಾಂತಾ! ನಿನಗೆ ಜ್ಯೇಷ್ಠನಾದರೂ ಅವನನ್ನು ನೀನೂ ನಿಂದಿಸಲೇಬೇಕು. ದೊಡ್ಡ ಜೂಜುಗಾರನಾದ ಅವನ ಪ್ರವರ್ತನೆಯಿಂದಲೇ ನಾನು ಇಂತಹ ಅಪಾರ ದುಃಖಕ್ಕೆ ಗುರಿಯಾದೆನು. ಜ್ಯೇಷ್ಠನಾದರೂ ಕುಲಕ್ಕೆ ಕುಂದಕವನ್ನು ತರತಕ್ಕವನಾಗಿದ್ದರೆ, ಅಂತವನನ್ನು ಧೀರಸ್ವಭಾವವುಳ್ಳ ಸಹೋದ

ರರು ನಿರ್ಭಯವಾಗಿ ನಿರಾಕರಿಸಿ, ಇತರರನ್ನು ಹಿಂಬಾಲಿಸಿ ನಡೆಯುವರು. ಲೋಕದಲ್ಲಿ ಯಾವನುತಾನೇ ಹೀಗೆ ಪುತ್ರಮಿತ್ರ ಪಶು ಬಂಧುವರ್ಗದೊಡಗೂಡಿದ ರಾಜ್ಯವನ್ನು ಬಿಟ್ಟು, ಕೃಷ್ಣಾಜಿನವನ್ನುಟ್ಟು ಮಹಾರಣ್ಯದಲ್ಲಿ ಜೀವಿಸುವನು? ಯಾವನಲ್ಲಿದ್ದ ಲಕ್ಷೋಪಲಕ್ಷ ಧಾನ್ಯಗಳೂ, ಇತರ ಧನಗಳೂ, ಚಿನ್ನ, ಬೆಳ್ಳಿ, ಬಂಗಾರ, ವಸ್ತ್ರ ವಾಹನಾದಿಗಳೂ, ಎತ್ತು, ಮೇಕೆ, ಕುದುರೆ, ಹೇಸರಗತ್ತೆ ಮುಂತಾದ ಪಶುಧನಗಳೂ, ಸಾವಿರಾರು ವರ್ಷಗಳವರೆಗೆ ಹಗಲು ರಾತ್ರಿ, ಎಡೆಬಿಡದೆ ಜೂಜಾಡಿ ಸೋತರೂ ಮುಗಿಯುವಂತಿರಲಿಲ್ಲವೋ, ಅಂತವನು ಅವೆಲ್ಲವನ್ನೂ ನಿಮಿಷಮಾತ್ರದಲ್ಲಿ ಕಳೆದುಕೊಂಡು, ಮುಂದಾಲೋಚನೆಯಿಲ್ಲದ ಮೂಢಜನದಂತೆ, ತಾನು ಮಾಡಿದ ಕಾರ್ಯಕ್ಕಾಗಿ ಪಶ್ಚಾತ್ತಾಪಪಡುತ್ತ ಈಗ ಬಾಯೆತ್ತಲಾರದಿರುವನು. ಪೂರ್ವದಲ್ಲಿ ಯಾವನು ಮನೆಯಿಂದ ಹೊರಟಾಗ, ಹತ್ತು ಸಾವಿರ ಆನೆಗಳೂ, ಹತ್ತು ಸಾವಿರ ಕುದುರೆಗಳೂ ಹಿಂಬಾಲಿಸಿ ಬರುತ್ತಿದ್ದುವೋ, ಅಂತವನು ಈಗ ಜೂಜಿನಿಂದ ಜೀವಿಸುತ್ತಿರುವನು. ಯಾವನು ಇಂದ್ರಪ್ರಸ್ಥದಲ್ಲಿದ್ದಾಗ, ಅಮಿತ ತೇಜಸ್ಸುಳ್ಳ ಲಕ್ಷಮಂದಿ ಸ್ತ್ರೀಯರು ಉಪಚರಿಸುತ್ತಿದ್ದರೋ, ಯಾವನ ಅಡಿಗೆಮನೆಯಲ್ಲಿ ಸಾವಿರಾರು ಮಂದಿ ದಾಸಿಯರು ಪ್ರತಿದಿನವೂ ಹಗಲು ರಾತ್ರಿ ಕೈಯಲ್ಲಿ ಪಾತ್ರಗಳನ್ನು ಸಿದ್ಧವಾಗಿ ಹಿಡಿದುಕೊಂಡು, ಅತಿಥಿಗಳಿಗೆ ಭೋಜನವನ್ನಿಕ್ಕುತಿದ್ದರೋ, ಯಾವನು ಪ್ರತಿದಿನವೂ ಪ್ರಾತಃಕಾಲದಲ್ಲಿ ಆರ್ಥಿಗಳಾಗಿ ಬಂದವರಿಗೆ ಸಾವಿರಾರು ಧಾನ್ಯಗಳನ್ನು ದಾನಮಾಡುತಿದ್ದನೋ, ಅಂತಹ ಯುಧಿಷ್ಠಿರನು ಈಗ ಜೂಜಾಟದಿಂದ ಸಂಭವಿಸಿದ ಮಹಾನರ್ಥಕ್ಕೆ ಗುರಿಯಾಗಿ ಸಂಕಟಪಡುತ್ತಿರುವನು. ಪೂರ್ವದಲ್ಲಿ ಈ ಯುಧಿಷ್ಠಿರನೇ ತನ್ನ ಅರಮನೆಯಲ್ಲಿ ನಿದ್ರಿಸುತ್ತಿದ್ದಾಗ ಬೆಳಗಾದೊಡನೆ ಇವನನ್ನು ಎಚ್ಚರಗೊಳಿಸುವುದಕ್ಕಾಗಿ ಅನೇಕ *ಸೂತ ಮಾಗಧ ವಂದಿಗಳು, ರತ್ನಕುಂಡಲಾಲಂಕೃತರಾಗಿ ಬಂದು, ಇಂಪಾದ ಕಂಠಸ್ವರದಿಂದ ಸುಪ್ರಭಾತಗಳನ್ನು ಹಾಡುತ್ತಿದ್ದರು. ಮತ್ತು ವಾಲಖಿಲ್ಯರೂ, (ಯಾವಾ

---

* ಸೂತ, ಮಾಗಧ. ವಂದಿಗಳೆಂದರೆ, ಕ್ರಮವಾಗಿ, ಪೌರಾಣಿಕರೆಂದೂ, ವಂಶಾವಳಿಯನ್ನು ಕೀರ್ತಿಸತಕ್ಕವರೆಂದೂ, ಹೊಗಳುಭಟ್ಟರೆಂದೂ ಭೇದವನ್ನು ಗ್ರಹಿಸಬೇಕು.

ಗಲೂ ಜಲಮಧ್ಯದಲ್ಲಿದ್ದು ಕಠಿನ ತಪಸ್ಸನ್ನು ಮಾಡುವ) ಉದವಾಸಿಗಳೂ, (ಕಲ್ಲಿನಿಂದ ಧಾನ್ಯವನ್ನು ಅರೆದು ತಿನ್ನುವ) ಅಶ್ಮಕುಟ್ಟರೂ, ವಾಯುಭಕ್ಷಕರೂ, ಮುನಿಪತ್ನಿಯರಾದ ತಾಪಸಿಯರೂ, ಬ್ರಹ್ಮಚಾರಿಗಳೂ, ಮೌನವ್ರತಿಗಳೂ, ಗೃಹಮೇಧಿಗಳೂ, †ಹಂಸರೂ, ಪರಮಹಂಸರೂ, ಯೋಗನಿಷ್ಠರೂ, ಬ್ರಾಹ್ಮಣರೂ, ಕುಟೀರಕರೂ, ಪರಿವ್ರಾಜಕರೂ ಇನ್ನೂ ವನಚಾರಿಗಳಾದ ಬಹುಮಂದಿ ವಾನಪ್ರಸ್ಥರೂ, ಊರ್ಧ್ವರೇತಸ್ಕರೂ, ಚತುರ್ವೇದ ಪಾರಂಗತರೂ, ಶಿಕ್ಷೆ, ವ್ಯಾಮಾಂಸೆ ಮೊದಲಾದುವುಗಳಲ್ಲಿ ನಿಪುಣರೂ ಆದ ಬ್ರಾಹ್ಮಣರೂ, ಕ್ರಮಪಾಠಿಗಳೂ, ಸಾಮವೇದವನ್ನು ಅಧ್ಯಯನಮಾಡಿದ ಬಹುಮಂದಿ ಋಷಿಗಳೂ, ತಪಸ್ಸ್ವಾಧ್ಯಾಯಪರರಾದವರೂ, ಸಾವಿರಸಾವಿರ ಸಂಖ್ಯೆಯಿಂದ ಯುಧಿಷ್ಠಿರನ ಸಭೆಯಲ್ಲಿ ನೆರೆಯುತಿದ್ದರು. ಆ ಯುಧಿಷ್ಠಿರನು ತನ್ನ ರಾಜ್ಯದ ಎಲ್ಲಾ ಕಡೆಯಲ್ಲಿಯೂ ಅಲ್ಲಲ್ಲಿರುವ ಕುಂಟರು, ಕುರುಡರು, ಅನಾಥರು, ವೃದ್ಧರು, ದುಃಖಿತರು, ಮುಂತಾದವರಿಗೆಲ್ಲ ಅನ್ನವನ್ನಿಕ್ಕಿ ಕರುಣೆಯಿಂದ ಪೋಷಿಸುತಿದ್ದವನು. ಈಗ ಆತನು ಮತ್ಸ್ಯರಾಜನ ಮನೆಯಲ್ಲಿ ಪರಿಚಾರಕನಾಗಿ ಸೇರಿಕೊಂಡಿರುವನು. ತನ್ನ ಹೆಸರನ್ನು ಹೇಳಿಕೊಳ್ಳಲಾರದೆ, ಕಂಕನೆಂಬ ನಾಮಾಂತರವನ್ನಿಟ್ಟುಕೊಂಡು ಸಭೆಯಲ್ಲ ಮತ್ಸ್ಯರಾಜನಿಗೆ ನಮ್ರನಾಗಿ ನಡೆಯುತ್ತಿರುವನು. ಇಂದ್ರಪ್ರಸ್ಥದಲ್ಲಿದ್ದ ಕಾಲದಲ್ಲ ಯಾವನಿಗೆ ಇತರ ರಾಜರೆಲ್ಲರೂ ಅಧೀನರಾಗಿ ಕಾಣಿಕೆಗಳನ್ನೊಪ್ಪಿಸುತ್ತಿದ್ದರೋ, ಅಂತವನು ಈಗ ಇತರರ ಕೈಕೆಳಗೆ ತನ್ನ ಜೀವನಕ್ಕಾಗಿ ಸೇರಿರುವನು. ಸೂರ್ಯನು ತನ್ನ ತೇಜಸ್ಸಿನಿಂದ ಜಗತ್ತನ್ನೆಲ್ಲ ಆವರಿಸಿದಂತೆ ಯಾವನು ತನ್ನ ಪರಾಕ್ರಮದಿಂದ ಭೂಮಂಡಲವನ್ನೆಲ್ಲ ಆಕ್ರಮಿಸಿದ್ದನೋ, ಅಂತವನು ಈಗ ವಿರಾಟರಾಜನ ಆಸ್ಥಾನದಲ್ಲಿ ಸಭಾಸ್ತಾರನಾಗಿರುವನು. ಯಾವನನ್ನು ಅನೇಕಮಹರ್ಷಿಗಳು ಸಭೆಯಲ್ಲಿ ಉಪಾಸಿಸುತ್ತಿದ್ದರೋ, ಅಂತಹ ಪಾಂಡುಪುತ್ರನು ಈಗ ಮತ್ತೊಬ್ಬನನ್ನು ಉಪಾಸಿಸುತ್ತಿರುವನು ನೋಡು. ನಿರ್ದುಷ್ಟನಾಗಿ, ಮಹಾಪ್ರಾಜ್ಞನೆನಿಸಿ

† ಹಂಸ, ಪರಮಹಂಸ, ಕುಟೀರಕ, ಪರಿವ್ರಾಜಕರೆಂಬುದು ಸನ್ಯಾಸಿಗಳಲ್ಲಿ ಭೇದಗಳು.

ಕೊಂಡು ಸ್ರಖ್ಯಾತನಾದ ಆ ಧರ್ಮಪುತ್ರನು ಹೊಟ್ಟೆಹೊರೆಯುವುದಕ್ಕಾಗಿ ತನ್ನ ಸ್ವರೂಪವನ್ನು ಮರೆಸಿಕೊಂಡಿರುವುದನ್ನು ನೋಡಿ ಯಾರಿಗೆ ತಾನೇ ದುಃಖವುಂಟಾಗದಿರುವುದು? ಯಾವನನ್ನು ಹಿಂದೆ ಸಭೆಯಲ್ಲಿ ಸಮಸ್ತ ಭೂಮಿಯೂ ಉಪಾಸಿಸುತ್ತಿದ್ದಿತೋ, ಭರತಕುಲತಿಲಕನಾದ ಆತನು ಈಗ ಮತ್ತೊಬ್ಬನನ್ನು ಉಪಾಸಿಸುತ್ತಿರುವನು ನೋಡು. ಭೀಮಸೇನಾ! ನಾನು ಹೀಗೆ ನಾನಾವಿಧ ಕಷ್ಟಗಳಿಗೀಡಾಗಿ ಅನಾಥೆಯಂತೆ ಶೋಕಸಾಗರದಲ್ಲಿ ಮುಳುಗಿಹೋಗುತ್ತಿರುವಾಗಲೂ ನೀನು ನನ್ನನ್ನು ಕಣ್ಣೆತ್ತಿ ನೋಡದಿರುವೆಯಲ್ಲಾ! ಈಗ ನಾನು ನಿನ್ನಲ್ಲಿ ತಿಳಿಸಬೇಕೆಂದಿರುವ ಒಂದು ವಿಷಯವು ನನಗೆ ಅತ್ಯಂತ ದುಃಖಕರವಾಗಿದೆ. ನಾನು ಹೀಗೆ ಹೇಳುವೆನೆಂದು ನೀನು ಅಸಮಾಧಾನಪಡಬಾರದು. ದುಸ್ಸಹವಾದ ದುಃಖದಿಂದ ನಾನು ಇದನ್ನು ನಿನಗೆ ತಿಳಿಸಬೇಕಾಗಿದೆ. ನೀನು ವಿರಾಟನಗರದಲ್ಲಿ ಸುದೇಷ್ಣೆಯನ್ನು ಮುಂದಿಟ್ಟುಕೊಂಡು ನಾವೆಲ್ಲರೂ ನೋಡುತ್ತಿರುವಾವಾಗಲೇ, ಹುಲಿ, ಕಾಡೆಮ್ಮೆ, ಸಿಂಹ ಮೊದಲಾದುವುಗಳೊಡನೆ ಹೋರಾಡುವುದುಂಟಲ್ಲವೆ? ಆಗ ನಿನ್ನನ್ನು ನೋಡಿ ನನ್ನ ಮನಸ್ಸು ಕಲಗುವುದು. ಆಗ ನನ್ನ ಇಂಗಿತ ಚೇಷ್ಟಾದಿಗಳನ್ನು ಕಂಡು ಅಲ್ಲಿದ್ದ ಅಂತಃಪುರ ಸ್ತ್ರೀಯರೆಲ್ಲರೂ ನಗುವರು. ಆಗ ಪ್ರಜ್ಞೆತಪ್ಪಿದವಳಂತೆ ಸ್ತಬ್ಧಳಾಗಿದ್ದ ನನ್ನ ಸ್ಥಿತಿಯನ್ನು ಕಂಡು ಸುದೇಷ್ಣೆಯೂ ಮೇಲೆದ್ದು ಮುಗುಳ್ನಗೆಯೊಡನೆ, ಅಲ್ಲಿನ ಇತರ ಸ್ತ್ರೀಯರನ್ನು ಕುರಿತು ಹೀಗೆಂದು ಹೇಳುವಳು. "ಇವರಿಬ್ಬರೂ ನಮ್ಮಲ್ಲಿ ಸೇರಿ ಸೇವೆಮಾಡುತ್ತಿರುವರಲ್ಲವೆ? ಈ ಸಹವಾಸಜನ್ಯವಾದ ಸ್ನೇಹದಿಂದ, ಈ ವಲಲನು ಇಲ್ಲಿ ಸಿಂಹ ವ್ಯಾಘ್ರಗಳೊಡನೆ ಹೋರಾಡುವುದನ್ನು ಕಂಡು ಇವಳ ಮನಸ್ಸು ಕಲಗುವುದು ಸಹಜವೇ! ಆದರೆ ಈ ಸೈರಂಧ್ರಿಯು ಒಳ್ಳೇ ರೂಪವತಿ! ವಲಲನೂ ಸುಂದರನು! ಸ್ತ್ರೀಯರ ಮನಸ್ಸನ್ನು ಹೀಗೆಂದು ತಿಳಿಯುವುದೇನೋ ಕಷ್ಟವೇ! ಇವರಿಬ್ಬರೂ ಅನ್ಯೋನ್ಯಾನುರಾಗಕ್ಕೆ ತಕ್ಕವರೆಂದೇ ನನಗೆ ತೋರುವುದು. ಈ ಸೈರಂಧ್ರಿಯು ಸಹವಾಸಜನಿತಪ್ರೇಮದಿಂದ ಯಾವಾಗಲೂ ಆ ವಲಲನ ವಿಚಾರದಲ್ಲಿ ಕನಿಕರವನ್ನೇ ಸೂಚಿಸಿ ಮಾತಾಡುತ್ತಿರುವಳು. ಅಲ್ಲದೆ ಅವರಿಬ್ಬರೂ ಏಕಕಾಲದಲ್ಲಿ ಬಂದು ಸೇರಿ ಇಲ್ಲಿ ವಾಸಮಾಡುತ್ತಿರು

ವರು'' ಎಂದು ಹೇಳಿದಳು. ಇಂತಹ ಮಾತನ್ನು ಸುದೇಷ್ಣೆಯು ಪ್ರತಿ ದಿನವೂ ಆಗಾಗ ನನ್ನನ್ನು ನೋಡಿ ಹೇಳುತ್ತಿರುವಳು. ನಾನು ಕೋಪಿಸಿ ಕೊಂಡಹಾಗೆ ತೋರಿದಾಗ, ನಿನ್ನ ವಿಷಯವಾಗಿ ನನ್ನಲ್ಲಿ ಸಂದೇಹಪಡುವಳು'' ಎಂದು ದ್ರೌಪದಿಯು ಹೇಳಿದುದನ್ನು ಕೇಳಿ, ಭಯಂಕರಪರಾಕ್ರಮವುಳ್ಳ ಭೀಮನು, ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ ಯಾವ ಮಾತನ್ನೂ ಆಡದೆ ಸುಮ್ಮನಿದ್ದನು. ಭೀಮನಿಗೆ ಮನಸ್ಸಿನಲ್ಲಿ ಸ್ವಲ್ಪ ಕೋಪವುಂಟಾದುದನ್ನು ತಿಳಿದು, ದ್ರೌಪದಿಯು ಅವನ ಕೋಪವನ್ನು ಇನ್ನೂ ಹೆಚ್ಚಿಸುವುದಕ್ಕಾಗಿ ತಿರುಗಿ ಅವನನ್ನು ಕುರಿತು ಹೀಗೆಂದು ಹೇಳುವಳು. ''ಕಾಂತಾ! ಧರ್ಮರಾಜನು ತಂದಿಟ್ಟ ಮಹಾದುಃಖಸಮುದ್ರದಲ್ಲಿ ನಾನು ಮುಳುಗಿಹೋದೆನು. ಇನ್ನು ನಾನು ಬದುಕಿರಲೊಲ್ಲೆನು. ದೇವಮನುಷ್ಯಾದಿಗಳೆಲ್ಲರನ್ನೂ ರಥಮಾತ್ರ ಸಹಾಯನಾಗಿ ಜಯಿಸಿ ಖ್ಯಾತಿಹೊಂದಿದ ಆ ತರುಣವಯಸ್ಸುಳ್ಳ ಅರ್ಜುನನಾದರೋ, ಈ ವಿರಾಟರಾಜನ ಮನೆಯಲ್ಲಿ ನಪುಂಸಕವೇಷದಿಂದ ತನ್ನ ರೂಪವನ್ನು ಮರೆಸಿಕೊಂಡು, ಅವನ ಕನ್ಯೆಯರಿಗೆ ನರ್ತನವನ್ನು ಕಲಿಸುತ್ತ, ಅವರ ಪರಿಚಾರಕನಾಗಿ ಕಾಲವನ್ನು ಕಳೆಯುತ್ತಿರುವನು. ಯಾವನು ಹಿಂದೆ ಖಾಂಡವವನದಲ್ಲಿ ಅಗ್ನಿಯನ್ನು ತೃಪ್ತಿಗೊಳಿಸಿದನೋ, ಅಂತಹ ಅಪ್ರಮೇಯಪ್ರಭಾವವುಳ್ಳ ಅರ್ಜುನನು, ಈಗ ಬೂದಿಮುಚ್ಚಿದ ಕೆಂಡದಂತೆ ವಿರಾಟನ ಅಂತಃಪುರದಲ್ಲಿ ತಲೆಮರೆಸಿಕೊಂಡಿರುವನು. ಪುರುಷಶ್ರೇಷ್ಠನಾದ ಯಾವನಿಗಾಗಿ ಯಾವಾಗಲೂ ಶತ್ರುಗಳು ಹೆದರಿ ನಡುಗುತ್ತಿರುವರೋ, ಅಂತಹ ಧನಂಜಯನು, ಲೋಕನಿಂದಿತವಾದ ನಪುಂಸಕವೇಷದಿಂದ ಈಗ ಅಂತಃಪುರದ ಸೇವೆಯಲ್ಲಿರುವನು. ಯಾವನ ಧನುಷ್ಟಂಕಾರಮಾತ್ರವೇ ಶತ್ರುಗಳನ್ನು ನಡುಗಿಸುತ್ತಿತ್ತೋ, ಅಂತವನು ಈಗ ನಪುಂಸಕರೂಪದಿಂದ, ಗಾನನೃತ್ಯಗಳನ್ನೇ ತನ್ನ ಜೀವನೋಪಾಯವನ್ನಾಗಿಟ್ಟುಕೊಂಡಿರುವುದನ್ನೂ, ಅವನ ಗಾನಸ್ವರಕ್ಕೆ ಮೆಚ್ಚಿ ಹೆಂಗಸರೆಲ್ಲರೂ ಅವನನ್ನು ಸುತ್ತಿಮುತ್ತಿ ಗುಂಪುಕೂಡಿ ಕೇಳುತ್ತಿರುವುದನ್ನೂ ನೋಡಿ, ನನ್ನ ಮನಸ್ಸು ಸಂಕಟದಿಂದ ಕುದಿಯುವುದು. ಯಾವನ ತಲೆಯಲ್ಲಿ ಹಿಂದೆ ಸೂರ್ಯಸಮಾನವಾದ ದಿವ್ಯಕಿರೀಟವು ಶೋಭಿಸುತ್ತಿತ್ತೋ ಅಂತಹ ಧನಂಜಯನು, ತಲೆಯಲ್ಲಿ ವಿಕಾರವಾದ ಜಡೆಯನ್ನು

ಹಾಕಿಕೊಂಡು ಹೆಂಗಸರ ನಡುವೆ ತಿರುಗುತ್ತಿರುವನು. ಯಾವ ಮಹಾತ್ಮನಿಗೆ ಸಮಸ್ತ ದಿವ್ಯಾಸ್ತ್ರಗಳೂ ಸ್ವಾಧೀನವಾಗಿರುವುವೋ, ಯಾವನು ಸಮಸ್ತ ವಿದ್ಯೆಗಳಿಗೂ ಆಧಾರಭೂತನೋ, ಯಾವನು ದಿವ್ಯಕುಂಡಲಧಾರಿಯೋ, ತೇಜಸ್ಸಿನಲ್ಲಿ ಅಸಮಾನನಾದ ಯಾವನನ್ನು ಸಾವಿರಾರುಮಂದಿ ರಾಜರು, ಆಲೆಗಳು ಸಮುದ್ರವೇಲೆಯನ್ನು ಹೇಗೋ ಹಾಗೆ, ಯುದ್ಧದಲ್ಲಿ ಮಿಾರಿಬರಲಾರರೋ, ಅಂತವನು ಈಗ ವಿರಾಟರಾಜನ ಕನ್ಯಾಂತಃಪುರದಲ್ಲಿ ಪರಿಚಾರಕನಾಗಿ, ವೇಷವನ್ನು ಮರೆಸಿಕೊಂಡು, ನಟುವನಂತೆ ಹುಡುಗಿಯರಿಗೆ ನಾಟ್ಯವನ್ನು ಕಲಿಸುತ್ತಿರುವನು. ಯಾವನ ರಥನಿರ್ಘೋಷದಿಂದಲೇ ಪರ್ವತ ವನಾಕಾಶಗಳೊಡಗೂಡಿದ ಸಮಸ್ತ ಭೂಮಿಯೂ ತನ್ನೊಳಗಿನ ಎಲ್ಲಾ ಸ್ಥಾವರಜಂಗಮಗಳೊಡನೆ ನಡುಗುತಿದ್ದಿತೋ, ಮಹಾಧನುಷ್ಮಂತನಾದ ಯಾವನು ಹುಟ್ಟಿದುದರಿಂದ ಕುಂತೀದೇವಿಗೆ ಎಣೆಯಿಲ್ಲದ ಸಂತೋಷವುಂಟಾಯಿತೋ, ಆ ನಿನ್ನ ತಮ್ಮನಾದ ಅರ್ಜುನನು, ಈಗ ನನ್ನ ಸ್ಥಿತಿಗಾಗಿ ಸ್ವಲ್ಪಮಾತ್ರವೂ ಶೋಕಿಸದಂತಿರುವನು. ಆ ಅರ್ಜುನನು ಈಗ ನಪುಂಸಕವೇಷಕ್ಕೆ ತಕ್ಕ ಅಲಂಕಾರಗಳನ್ನು ಧರಿಸಿ, ಕಿವಿಯೋಲೆಗಳು ತೂಗಾಡುತ್ತಿರಲು, ಶಂಖದ ಕೈಬಳೆಗಳನ್ನು ಧರಿಸಿ ಬರುವುದನ್ನು ನೋಡುವಾಗ ನನ್ನ ಮನಸ್ಸು ಬಹಳ ಸಂಕಟಪಡುವುದು. ಮೊದಲು ಭಯಂಕರ ಧನುರ್ಧಾರಿಯಾಗಿದ್ದ ಆ ಅರ್ಜುನನು ಈಗ ತಲೆಕೂದಲನ್ನು ಹೆಣೆದು ಜಡೆ ಹಾಕಿಕೊಂಡು, ಹೆಣ್ಣುಹುಡುಗಿಯರಿಂದ ಪರಿವೃತನಾಗಿರುವುದನ್ನು ನೋಡಿ ನನ್ನ ಮನಸ್ಸಿಗೆ ಬಹಳ ಸಂಕಟವಾಗುವುದು. ದೇವಸಮಾನವಾದ ಆಕಾರವುಳ್ಳ ಆ ಅರ್ಜುನನು, ಹೆಣ್ಣಾನೆಗಳ ಗುಂಪಿನಲ್ಲಿ ಮರೆಸಿಕೊಂಡಿರುವ ಮದಗಜದಂತೆ, ಕನ್ಯೆಯರ ನಡುವೆ ಸೇರಿಕೊಂಡು, ಆಗಾಗ ರಾಣಿವಾಸಕ್ಕೆ ಬರುವ ವಿರಾಟನನ್ನು ತನ್ನ ಹಾಡುಗಳಿಂದ ಸಂತೋಷಪಡಿಸುತ್ತ, ಅವನ ಅನುಗ್ರಹಕ್ಕೆ ಕಾದಿರುವುದನ್ನು ನೋಡಿ ನನ್ನ ಮನಸ್ಸಿಗೆ ಬಹಳ ವ್ಯಸನವಾಗುವುದು. ಆ ಧನಂಜಯನು ಇಂತಹ ಕಷ್ಟಕ್ಕೊಳಗಾಗಿರುವುದಾಗಲಿ, ಅಜಾತಶತ್ರುವೆನಿಸಿಕೊಂಡ ಧರ್ಮರಾಜನು ಕೆಟ್ಟ ಜೂಜಾಟದಿಂದ ಇಂತಹ ವಿಪತ್ತಿಗೆ ಒಳಗಾಗಿರುವುದಾಗಲಿ ಕುಂತಿಗೆ ಇನ್ನೂ ತಿಳಿದಿಲ್ಲವೆಂದು ತೋರುವುದು. ಸಮಸ್ತ ಶತ್ರುಗಳನ್ನೂ ನಿಗ್ರಹಿಸಬಲ್ಲ ಮಹಾಪರಾಕ್ರ

ಮಿಯೂ, ಅಪ್ರಮೇಯಬಲಶಾಲಿಯೂ ಆದ ಆ ಪಾರ್ಥನು, ರಥಮಾತ್ರ ಸಹಾಯನಾಗಿ, ಐಂದ್ರ, ವಾರುಣ, ವಾಯವ್ಯ, ವೈಷ್ಣವ, ಬ್ರಾಹ್ಮ, ಆಗ್ನೇಯ ಮುಂತಾದ ದಿವ್ಯಾಸ್ತ್ರಗಳಿಂದ, ಹಿಂದೆ ಖಾಂಡವವನದಲ್ಲಿ ಅಗ್ನಿ ದೇವನನ್ನು ತೃಪ್ತಿಗೊಳಿಸುವುದಕ್ಕಾಗಿ ತನ್ನನ್ನಿದಿರಿಸಿ ಬಂದ ದೇವತೆಗಳೆಲ್ಲರನ್ನೂ ಜಯಿಸಿದನು. ಮತ್ತು ಶ್ರೀಕೃಷ್ಣಸಹಾಯವುಳ್ಳ ಆ ಕಿರೀಟಿಯು, ಕೌಬೇರ, ವೈಷ್ಣವ, ಶೈವ, ಮೊದಲಾಗಿ ಇನ್ನೂ ಅನೇಕಮಂತ್ರಾಸ್ತ್ರಗಳಲ್ಲಿ ತನಗಿರುವ ಅಸಾಧಾರಣ ನೈಪುಣ್ಯವನ್ನು ತೋರಿಸುತ್ತ, ಗಾಂಧರ್ವ, ವಾಯವ್ಯ, ವೈಷ್ಣವ, ಬ್ರಾಹ್ಮ, ಪಾಶುಪತ, ಸ್ಥೂಣಾಕರ್ಣಗಳೆಂಬ ದಿವ್ಯಾಸ್ತ್ರ ಪ್ರಯೋಗಗಳಿಂದ ಮಹಾಬಲಶಾಲಿಗಳೂ, ಘೋರರೂಪಿಗಳೂ ಇಂದ್ರ ಶತ್ರುಗಳೂ ಆದ ಪೌಲೋಮ, ಕಾಲಕೇಯ, ನಿವಾತಕವಚಾದಿ ದೈತ್ಯರನ್ನೆಲ್ಲ ಜಯಿಸಿದನು. ಅಂತಹ ಅರ್ಜುನನು ಬಾವಿಯೊಳಗಿನ ಬೆಂಕಿಯಂತೆ ಅಂತಃಪುರದಲ್ಲಿ ತನ್ನ ಸ್ವರೂಪವನ್ನು ಮರೆಸಿಕೊಂಡು ತೇಜೋಹೀನನಾಗಿರುವನು. ಯಾವನು ಕಠಿನತಪಸ್ಸನ್ನು ಮಾಡಿ ಶೂಲಪಾಣಿಯಾದ ಶಂಕರನನ್ನು ತನ್ನ ಯುದ್ಧನೈಪುಣ್ಯದಿಂದ ಸಂತೋಷಗೊಳಿಸಿ, ಪಾಶುಪತಾಸ್ತ್ರವನ್ನು ಪಡೆದು ಬಂದನೋ, ಅಂತವನು ಈಗ ಹಸುಗಳ ಕೊಟ್ಟಿಗೆಯಲ್ಲಿ ಅಡಗಿಕೊಂಡಿರುವ ಮಹಾವೃಷಭದಂತೆ ಹೆಂಗಸರ ಗುಂಪಿನಲ್ಲಿ ಸ್ತ್ರೀವೇಷದಿಂದ ವಿಕೃತಾಕಾರನಾಗಿರುವುದನ್ನು ನೋಡಿ ನನ್ನ ಮನಸ್ಸು ಸಂಕಟದಿಂದ ಕುದಿಯುತ್ತಿರುವುದು.

ಇದರಮೇಲೆ ಯಾವನು ರೂಪದಲ್ಲಿಯೂ, ಅಸ್ತ್ರದಲ್ಲಿಯೂ, ಬುದ್ಧಿಯಲ್ಲಿಯೂ ಅಸಮಾನನೆನಿಸಿಕೊಂಡಿದ್ದನೋ ಅಂತಹ ನಕುಲನು ಈಗ ವಿರಾಟನ ಮನೆಯಲ್ಲಿ ಕುದುರೆಗಳನ್ನು ಕಟ್ಟುವ ಕೆಲಸದಲ್ಲಿರುವನು. ರಾಜಕನ್ಯೆಯರೂ, ದಾಸಿಯರೂ, ವೈಶ್ಯಕನ್ಯೆಯರೂ ಇನ್ನೂ ಪ್ರಖ್ಯಾತರಾದ ಸ್ತ್ರೀಯರೆಲ್ಲರೂ ಯಾವನ ರೂಪಾತಿಶಯಕ್ಕೆ ಪರವಶರಾಗುತ್ತಿದ್ದರೋ, ಆ ನಕುಲನು ಈಗ ದಾಮಗ್ರಂಥಿಯೆನಿಸಿಕೊಂಡು, ವಿರಾಟನ ಬಳಿಯಲ್ಲಿ ಕುದುರೆಯಾಳಾಗಿ ಕೆಲಸಮಾಡುತ್ತಿರುವನು. ತನ್ನಣ್ಣನಾದ ಧರ್ಮರಾಜನು ನೋಡುತ್ತಿರುವಾಗಲೇ ನಕುಲನು ವಿರಾಟನಮುಂದೆ ಕುದುರೆಗಳನ್ನು

ತಂದು ನಿಲ್ಲಿಸಿ, ಅವುಗಳನ್ನು ಅವನಿಗೆ ತೋರಿಸುತ್ತಿರುವಾಗ, ನಾನಾ ಕಡೆಗಳಿಂದ ಅನೇಕಜನರು ಗುಂಪುಗುಂಪಾಗಿ ಬಂದು ಸುತ್ತಲೂ ಮುತ್ತಿಕೊಂಡು ನೋಡುವುದನ್ನು ಕಂಡು ನನ್ನ ಮನಸ್ಸಿಗೆ ಬಹಳ ದುಃಖವಾಗುವುದು. ಅಷ್ಟುಮಾತ್ರವಲ್ಲ, ಆ ಸ್ಥಿತಿಯನ್ನು ನೆನಸಿಕೊಂಡಾಗಲೆಲ್ಲ ನಾನು ಅಳುತ್ತಿರುವೆನು. ಭೀಮಸೇನಾ! ಆ ಸಹದೇವನ ಸ್ಥಿತಿಯೂ ಇದರಂತೆಯೇ ಇರುವುದು. ಯೋಧರಲ್ಲಿ ಮೇಲೆನಿಸಿಕೊಂಡ ಆ ನಿನ್ನ ಕಿರಿಯ ತಮ್ಮನ ಸ್ಥಿತಿಯಾದರೂ ನನ್ನ ಮನಸ್ಸಿಗೆ ಸಮಾಧಾನಕರವಾಗಿರುವುದೆಂದು ತಿಳಿಯುವೆಯಾ? ಅದೂ ಇಲ್ಲ. ದನಗಳ ಕೊಟ್ಟಿಗೆಯಲ್ಲಿದ್ದು ಕೊಂಡು, ಗೊಲ್ಲರ ಕೆಲಸವನ್ನು ಮಾಡುತ್ತ, ನಿದ್ರೆಯು ಬಂದಾಗ ನೆಲದಮೇಲೆಯೋ, ಕರುಗಳ ಚರ್ಮದ ಮೇಲೆಯೋ ಮಲಗುತ್ತಿರುವ ಆ ಸಹದೇವನ ಸ್ಥಿತಿಯನ್ನು ನೋಡಿ ದುಃಖಶೋಕಗಳಿಂದ ನನ್ನ ಅವಯವವು ನಡುಗುತ್ತಿರುವುದು. ಅವನ ಸ್ಥಿತಿಯನ್ನು ನೆನಸಿಕೊಂಡೇ ನನ್ನ ಮೈ ದಿನದಿನಕ್ಕೆ ಬಡವಾಗಿ ಬಿಳುಪೇರಿತು. ಓ ಮಹಾಭಾಗಾ! ಸತ್ಯಪರಾಕ್ರಮನಾದ ಆ ಸಹದೇವನು ಇಂತಹ ಕಷ್ಟಕ್ಕೆ ಗುರಿಯಾದುದಕ್ಕೆ ಅವನಲ್ಲಿ ಯಾವ ವಿಧವಾದ ತಪ್ಪೂ ನನಗೆ ಕಾಣುವುದಿಲ್ಲ. ತನ್ನ ಸ್ವಯಂಕೃತವಾದ ಅಪರಾಧವೇನೂ ಇಲ್ಲದಿದ್ದಾಗಲೂ, ನಿನ್ನ ತಮ್ಮನಾದ ಆ ಸಹದೇವನು ಗೋವುಗಳ ಮಧ್ಯದಲ್ಲಿರುವ ಮಹಾವೃಷಭದಂತೆ ವಿರಾಟನ ಆಜ್ಞಾಧೀನನಾಗಿ ದನಗಳ ಕೊಟ್ಟಿಗೆಯಲ್ಲಿ ಸೇರಿಕೊಂಡು ಅಲ್ಲಿನ ಗೊಲ್ಲರಿಗೆ ತಾನು ಮುಂದಾಳಾಗಿ ನಿಂತು, ಆ ಮತ್ಸ್ಯರಾಜನನ್ನು ಮೆಚ್ಚಿಸುವುದಕ್ಕಾಗಿ ಕಷ್ಟಪಡುತ್ತಿರುವುದನ್ನು ನೋಡಿ ನನಗೆ ದುಃಖವು ಉಕ್ಕಿಬರುತ್ತಿರುವುದು. ನನ್ನ ಹೃದಯವು ನಡುಗುತ್ತಿರುವುದು. ಅತ್ತೆಯಾದ ಕುಂತೀದೇವಿಯು ಸಹದೇವನ ವಿಷಯವಾಗಿ ನನ್ನೊಡನೆ ಹೇಳಿದ ಮಾತುಗಳು ಇನ್ನೂ ನೆನಪಿನಲ್ಲಿವೆ. ಅವರು ನನ್ನೊಡನೆ "ಪಾಂಚಾಲಿ! ಈ ಸಹದೇವನು ಉತ್ತಮ ವಂಶದಲ್ಲಿ ಹುಟ್ಟಿದವನು. ನೀತಿವಂತನು. ಶೀಲವಂತನು. ಅಕಾರ್ಯಗಳಿಗೆ ನಾಚುವವನು. ಉತ್ತಮ ಧರ್ಮಶೀಲನು. ನನಗೆ ಅತ್ಯಂತ ಪ್ರೀತಿಪಾತ್ರನು. ಆದುದರಿಂದ ನೀನು ಅರಣ್ಯಪ್ರದೇಶಗಳಲ್ಲಿಯೂ, ರಾತ್ರಿಕಾಲಗಳಲ್ಲಿಯೂ ಅವನನ್ನು ಬಹಳ ಎಚ್ಚರದಿಂದ ನೋಡಿಕೊಳ್ಳುತ್ತಿರಬೇಕು,"

ಎಂದು ಆಗಾಗ ಹೇಳಿರುವಳು. ಮತ್ತು ಕುಂತಿದೇವಿಗೆ ಈ ಅವಳ ಮಕ್ಕಳಲ್ಲಿ ಅಸಾಧಾರಣವಾದ ಪ್ರೀತಿ. ನಾವೆಲ್ಲರೂ ಆರಣ್ಯಕ್ಕೆ ಹೊರಡುವಾಗ ಆ ಕುಂತಿದೇವಿಯು, ಪುತ್ರವಾತ್ಸಲ್ಯದಿಂದ ಆ ಸಹದೇವನನ್ನು ಬಾರಿಬಾರಿಗೂ ಆಲಿಂಗಿಸಿಕೊಂಡು, ನನ್ನನ್ನು ನೋಡಿ, "ಪಾಂಚಾಲಿ! ಈತನು ಬಹಳ ಸುಕುಮಾರನು, ಶೂರನು. ರಾಜನನ್ನು ಅನುಸರಿಸಿ ನಡೆಯತಕ್ಕವನು. ಜ್ಯೇಷ್ಠನಿಗೆ ವಿಧೇಯನಾಗಿರತಕ್ಕವನು, ವೀರನು; ಈ ಸಹದೇವನಿಗೆ ನೀನೇ ನಿನ್ನ ಕೈಯಿಂದ ಭೋಜನಾದ್ಯುಪಚಾರಗಳನ್ನು ನಡೆಸಬೇಕು," ಎಂದು ಕಣ್ಣೀರು ಬಿಡುತ್ತ ಹೇಳಿರುವಳು. ಎಲೈ ಪಾಂಡವ ಶ್ರೇಷ್ಠನೇ! ಅಂತಹ ಸಹದೇವನು ಈಗ ಗೊಲ್ಲರ ವೇಷದಿಂದ ವಿರಾಟನ ಸೇವೆಯಲ್ಲಿರುವುದನ್ನು ನೋಡಿಯೂ ನಾನು ಜೀವದೊಡನೆ ಬದುಕಿರುವುದು ನ್ಯಾಯವೇ? ನಾನು ಆ ಯುಧಿಷ್ಠಿರನ ದೆಸೆಯಿಂದಲೇ ಇಂತಹ ನೂರಾರುಕಷ್ಟಗಳಿಗೆ ಗುರಿಯಾದೆನು. ನನ್ನ ದುಃಖವು ಇಷ್ಟರಲ್ಲಿಯೇ ಮುಗಿಯಲಿಲ್ಲ. ಇನ್ನೂ ದಿನದಿನಕ್ಕೆ ಹೆಚ್ಚುತ್ತಲೇ ಇರುವುವು. ಅವೆಲ್ಲವನ್ನೂ ನಿನಗೆ ತಿಳಿಸಬೇಕಾಗಿದೆ. ಮುಖ್ಯವಾಗಿ ನೀವು ಬದುಕಿರುವಾಗಲೇ ಇಂತಹ ಅನೇಕ ಕಷ್ಟಗಳು ನನ್ನ ದೇಹವನ್ನು ಕಂದಿಸುತ್ತಿವೆ. ಇದಕ್ಕಿಂತ ಸ್ತ್ರೀಯರಿಗೆ ಬೇರೆ ದುಃಖವೇನುಂಟು. ನಾಥಾ! ಲೋಕದಲ್ಲಿ ಒಬ್ಬ ಗಂಡನನ್ನು ಪಡೆದ ಸ್ತ್ರೀಯು ಸುಖವಾಗಿಯೇ ಇರುವಳು. ನನಗಾದರೋ ಐದುಮಂದಿ ಪತಿಗಳಿದ್ದೂ ನನ್ನ ದುಃಖಕ್ಕೆ ಪಾರವಿಲ್ಲದಂತಿದೆ.

ಇದು ಇಪ್ಪತ್ತೆರಡನೆಯ ಅಧ್ಯಾಯವು.

ದ್ರೌಪದಿಯು ಭೀಮನಿಗೆ ತನ್ನ ಹಿಂದಿನ ವೈಭವಗಳನ್ನು ನೆನಪಿಗೆ ತಂದು ಕೀಚಕನನ್ನು ಕೊಲ್ಲುವುದಕ್ಕಾಗಿ ಪ್ರೋತ್ಸಾಹಗೊಳಿಸಿದುದು.

ಭೀಮಸೇನಾ! ಈಗ ನಾನೂ ಕೂಡ, ಜೂಜುಗಾರನಾದ ಆ ಯುಧಿಷ್ಠಿರನಿಂದಲ್ಲವೇ ಈ ರಾಜಗೃಹದಲ್ಲಿ ಸುದೇಷ್ಣೆಯ ಕೈಕೆಳಗೆ ಕೆಲಸಮಾಡುತ್ತಿರುವೆಮು. ಎಲೈ ಪರಂತಪನೆ! ರಾಜಪುತ್ರಿಯಾದ ನನ್ನ ಈಗಿನ

ಸ್ಥಿತಿಯು ಎಷ್ಟು ಶೋಚನೀಯವಾಗಿ ಮಾರ್ಪಟ್ಟಿರುವುದೋ ನೋಡು. ಆದರೂ ನಾನು ಕಾಲವನ್ನು ದಿರುನೋಡುತ್ತ ದುಸ್ಸಹವಾದ ದುಃಖಗಳನ್ನೆಲ್ಲ ಸಹಿಸಿಕೊಂಡಿರುವೆನು. ಮನುಷ್ಯರಿಗೆ ವಿಭವಗಳಾಗಲಿ, ದುಃಖಗಳಾಗಲಿ ಒಂದೇ ವಿಧವಾಗಿರಲಾರದೆಂಬುದನ್ನು ತಿಳಿದೇ ನಾನು, ತಿರುಗಿ ಪತಿಗಳಾದ ನಿಮ್ಮ ಅಭ್ಯುದಯಕಾಲವನ್ನು ನಿರೀಕ್ಷಿಸುತ್ತಿರುವೆನು. ಮತ್ತು ಮನುಷ್ಯನಿಗೆ ಯಾವುದು ಅಪಜಯಕ್ಕೆ ಅಥವಾ ಪರಾಭವಕ್ಕೆ ಕಾರಣವೋ ಅದೇ ಮುಂದೆ ಜಯಕ್ಕೂ ಕಾರಣವಾಗಬಹುದೆಂದು ತಿಳಿದು ನಾನು ಕಾಲವನ್ನು ನಿರೀಕ್ಷಿಸುತ್ತಿರುವೆನು. ಒಮ್ಮೆ ಒಬ್ಬರಿಗೆ ಕೈನೀಡಿ ಕೊಟ್ಟವರೇ ಮತ್ತೊಮ್ಮೆ ಇತರರ ಮುಂದೆ ಕೈನೀಡಿ ಯಾಚಿಸಬೇಕಾಗಿ ಬರುವುದು. ಒಮ್ಮೆ ಒಬ್ಬರನ್ನು ಹೊಡೆದವರು ಮತ್ತೊಮ್ಮೆ ಮತ್ತೊಬ್ಬರಿಂದ ಹೊಡೆಯಿಸಿಕೊಳ್ಳಬೇಕಾಗಿಯೂ ಬರುವುದು. ಒಮ್ಮೆ ಒಬ್ಬರನ್ನು ಕೆಳಕ್ಕೆ ಕೆಡಹಿದವರು, ಮತ್ತೊಮ್ಮೆ ಇತರರಿಂದ ಕೆಡಹಲ್ಪಡುವರು, ಎಂಬೀ ತತ್ವವನ್ನು ನಾನು ಕೇಳಿಬಲ್ಲೆನು. ಇದಲ್ಲದೆ, ದೈವಕ್ಕೆ ಅಸಾಧ್ಯವಾದುದೊಂದೂ ಇಲ್ಲವೆಂದೂ, ಆ ದೈವವನ್ನು ಮೀರಿಹೋಗುವುದು ಎಂಥವರಿಗೂ ಸಾಧ್ಯವಿಲ್ಲವೆಂದೂ ತಿಳಿದೇ ನಾನು, ಮುಂದೆ ನಮಗೂ ಒಳ್ಳೇ ಅದೃಷ್ಟಕಾಲವು ಬರಬಹುದೆಂದು ನಿರೀಕ್ಷಿಸುತ್ತಿರುವೆನು. ಮೊದಲು ಎಲ್ಲಿ ಸಮೃದ್ಧವಾಗಿ ನೀರಿದ್ದಿತೋ, ಮತ್ತೊಮ್ಮೆ ನೋಡುವಾಗ ಅದು ನಿರ್ಜಲಪ್ರದೇಶವಾಗಿ ಕಾಣುವುದುಂಟು. ಇಂತಹ ವಿಷಯಗಳನ್ನು ನೋಡಿಯೇ ನಾನೂ ಕೂಡ, ತಿರುಗಿ ನಮಗೆ ಅಭ್ಯುದಯಕಾಲವು ಬರಬಹುದೆಂದು ನಿರೀಕ್ಷಿಸುತ್ತಿರುವೆನು. ಒಬ್ಬನು ಎಷ್ಟೇ ಜಾಗರೂಕನಾಗಿ ನಡೆದುಕೊಂಡರೂ, ದೈವವಿಪರ್ಯಾಸದಿಂದ ಅವನ ಪ್ರಯೋಜನವು ಕೆಟ್ಟುಹೋಗುವುದುಂಟು. ಹಾಗಿದ್ದರೂ ವಿವೇಕಿಯಾದವನು, ದೈವವನ್ನು ಅನುಕೂಲಪಡಿಸಿಕೊಳ್ಳುವುದಕ್ಕಾಗಿ ತನ್ನ ಪ್ರಯತ್ನವನ್ನು ಬಿಡದೆ ಮಾಡುತ್ತಿರಬೇಕು. ನಾಥಾ! ಈಗ ನಾನು ಸುಮ್ಮನೆ ಈ ಮಾತುಗಳನ್ನಾಡಿದುದರಿಂದ ಪ್ರಯೋಜನವೇನು? ನನ್ನ ಈಗಿನ ದುಃಖವನ್ನು ಲಾಲಿಸಿ ಕೇಳು. ನೀನಾಗಿ ಪ್ರಶ್ನೆಮಾಡದಿದ್ದರೂ ನಾನು ನಿನ್ನಲ್ಲಿ ಹೇಳದೆ ಬಿಡಲಾರೆನು. ನಾನಾದರೋ ಐದು ಮಂದಿ ಪಾಂಡುಕುಮಾರರ ಪಟ್ಟದ ರಾಣಿಯೆನಿಸಿರುವೆನು. ದ್ರುಪದ ರಾಜನ

ಮಗಳು. ಹೀಗಿದ್ದರೂ ನನ್ನ ಸ್ಥಿತಿಯು ಹೀಗಾಗಿದೆ. ಇಂತಹ ದುಸ್ಥಿತಿಯಲ್ಲಿ ನಾನೊಬ್ಬಳುಹೊರತು ಬೇರೆ ಯಾವ ಸ್ತ್ರೀಯು ತಾನೇ ಪ್ರಾಣದಿಂದ ಬದುಕಿರಲು ಇಷ್ಟಪಡುವಳು? ಕೌರವರನ್ನೂ, ಪಾಂಚಾಲರನ್ನೂ, ಪಾಂಡುಪುತ್ರರಾದ ನಿಮ್ಮನ್ನೂ ಬಿಟ್ಟು, ಈ ಶೋಕವು ನನ್ನೊಬ್ಬಳಲ್ಲಿಯೇ ಬಂದು ಸೇರಿದೆ. ಅಷ್ಟು ಮಂದಿ ಸಹೋದರರು! ಅಷ್ಟು ಮಂದಿ ಮಾವಂದಿರು! ಅಷ್ಟು ಮಂದಿ ಮಕ್ಕಳು! ಇಂತಹ ಬಹುಜನ ಬಂಧುವರ್ಗದಿಂದ ಕೂಡಿದ್ದರೂ, ಬೇರೆ ಯಾವ ಹೆಂಗಸು ತಾನೇ ನನ್ನಂತೆ ದುಃಖಭಾಗಿನಿಯಾಗಿರುವಳು? ಭರತಕುಲೋತ್ತಮನೆ! ನಾನು ಬಾಲ್ಯದೋಷದಿಂದ ಬ್ರಹ್ಮದೇವನಿಗೆ ಅಪ್ರಿಯವಾದ ಯಾವುದೋ ಕಾರ್ಯವನ್ನು ನಡೆಸಿರಬೇಕು. ಆದುದರಿಂದಲೇ ಇಂತಹ ದುರವಸ್ಥೆಗೆ ಗುರಿಯಾಗಿರುವೆನು. ಪಾಂಡುಕುಮಾರಾ! ನನ್ನ ಬಣ್ಣವೂ, ನನ್ನ ವಿಕಾರವೇಷವೂ ಹೇಗಿದೆಯೋ ನೋಡು. ಇಂತಹ ವೈವರ್ಣ್ಯವೂ, ಇಂತಹ ವಿಕಾರವೂ, ನನಗೆ ಹಿಂದೆ ವನವಾಸದ ಕಷ್ಟದಶೆಯಲ್ಲಿಯೂ ಉಂಟಾಗಿರಲಿಲ್ಲ. ಭೀಮಸೇನಾ! ಹಿಂದೆ ನಾನು ಎಂತೆಂತಹ ಸುಖಭೋಗಗಳನ್ನು ಅನುಭವಿಸುತ್ತಿದ್ದೆನೋ ಅವೆಲ್ಲ ನಿನಗೂ ತಿಳಿದುದೇ! ಅಂತಹ ನಾನು ಈಗ ದಾಸಿಯಾಗಿರುವೆನು. ನನ್ನ ಮನಸ್ಸಿನಲ್ಲಿ ನೆಮ್ಮದಿಯೇ ಇಲ್ಲದಂತಾಗಿದೆ. ಭಯಂಕರ ಧನುರ್ಧಾರಿಯಾದ ಆ ಕುಂತೀಪುತ್ರನು, ಮಹಾಸಭೆಯಲ್ಲಿ ತಣ್ಣಗಾರಿದ ಬೆಂಕಿಯಂತೆ ನಿರ್ವೀರ್ಯನಾಗಿರುವನು. ಇದೆಲ್ಲ ದೈವಿಕವಾನ ಸಂಭವವೆಂದೇ ನನಗೆ ತೋರುತ್ತಿದೆ. ಪ್ರಾಣಿಗಳ ಗತಿಯನ್ನು ಹೀಗೆಂದು ತಿಳಿಯುವುದಕ್ಕೆ ಮನುಷ್ಯರಿಂದ ಸಾಧ್ಯವಲ್ಲ. ನಿಮಗೆ ಅಚಿಂತಿತವಾಗಿಯೇ ಎಂತಹ ಮಹಾ ಕಷ್ಟಗಳು ಬಂದಿವೆಯೋ ನೋಡು. ಇಂದ್ರಸಮಾನರಾದ ನೀವು ಯಾವ ನನ್ನ ಮುಖಭಾವವನ್ನು ಅತ್ಯಾದರದಿಂದ ನೋಡುತ್ತಿದ್ದಿರೋ, ಅಂತಹ ಉತ್ತಮಸ್ತ್ರೀಯಾದ ನಾನು, ನನಗಿಂತಲೂ ಹೀನರಾದ ಇತರ ಸ್ತ್ರೀಯರ ಮುಖೇಂಗಿತಗಳನ್ನು ನೋಡುತ್ತಿರಬೇಕಾಗಿದೆ. ಪಾಂಡುಕುಮಾರಾ! ನನ್ನ ಪತಿಗಳಾದ ನೀವೂ, ಪಾಂಚಾಲರೂ ಜೀವದಿಂದಿರುವಾಗಲೇ ನನಗೆ ಬರಬಾರದ ಈ ದುರವಸ್ಥೆಯು ಬಂದಿರುವುದನ್ನು ನೋಡು. ಸಮುದ್ರಾಂತವಾದ ಸಮಸ್ತ ಭೂಮಿಯೂ, ಹಿಂದೆ ಯಾವಳ ವಶವರ್ತಿಯಾಗಿದ್ದಿತೋ,

ಅಂತಹ ನಾನು ಈಗ ಸುದೇಷ್ಣೆಯ ಕೈಕೆಳಗಿನ ಸೇವಕಿಯಾಗಿರುವೆನು. ಯಾವ ನಾನು ಹೊರಟಾಗ, ಹಿಂದೆ ಮುಂದೆ ಹಲವು ಮಂದಿ ಅನುಚರರು ಬರುತ್ತಿದ್ದರೋ, ಅಂತಹ ನಾನು ಈಗ ಸುದೇಷ್ಣೆಯ ಹಿಂದೆಯೂ ಮುಂದೆಯೂ ತಿರುಗುತ್ತಿರುವೆನು. ಎಲೈ ಕುಂತೀಪುತ್ರನೆ! ಇವೆಲ್ಲಕ್ಕಿಂತಲೂ ದುಸ್ಸಹವಾದ ನನ್ನ ಮತ್ತೊಂದು ದುಃಖವನ್ನು ತಿಳಿಸುವೆನು ಕೇಳು. ಅತ್ತೆಯಾದ ಕುಂತೀದೇವಿಗೆ ಹೊರತು, ನನ್ನ ಸ್ವಂತಕ್ಕಾದರೂ ಶರೀರಾನುಲೇಪನಗಳನ್ನು ಯಾವಾಗಲೂ ಅರೆದು ತಿಳಿಯದ ನಾನು, ಈಗ ಪ್ರತಿದಿನವೂ ಸುದೇಷ್ಣೆಗಾಗಿ ಚಂದನವನ್ನು ಅರೆದುಕೊಡುತ್ತಿರುವೆನು. ನಿನಗೆ ಶುಭವಾಗಲಿ! ಕುಂತೀಕುಮಾರನೆ! ಇದೋ! ನನ್ನ ಕೈಗಳನ್ನು ನೋಡು. ನನ್ನ ಕೈಗಳು ಹೀಗಿದ್ದುದನ್ನು ಹಿಂದೆ ಯಾವಾಗಲೂ ನೋಡಿರುವೆಯಾ?'' ಎಂದು ಹೇಳಿ ಗಂಧವನ್ನರೆದು ಅಲ್ಲಲ್ಲಿ ಪಟ್ಟುಗಟ್ಟಿದ ತನ್ನ ಕೈಗಳೆರಡನ್ನೂ ನೀಡಿ ಭೀಮನ ಕಣ್ಣ ಮುಂದೆ ತೋರಿಸಿದಳು. ತಿರುಗಿ ಭೀಮನನ್ನು ಕುರಿತು ''ಎಲೈ ಕಾಂತನೆ! ಅತ್ತೆಯಾದ ಕುಂತಿಗಾಗಲಿ ನಿಮಗಾಗಲಿ ಯಾವಾಗಲೂ ಭಯಪಡದ ನಾನು, ವಿರಾಟರಾಜನ ಮುಂದೆ ಭಯದಿಂದ ನಡುಗುತ್ತ ನಿಲ್ಲುವೆನು. ನಾನು ಅರೆದ ಚಂದನವು ರಾಜನಿಗೆ ತೃಪ್ತಿಕರವಾಗಿರುವುದೋ, ಇಲ್ಲವೋ. ಅದಕ್ಕೆ ಕಟ್ಟಿದ ಬಣ್ಣವನ್ನು ನೋಡಿ ವಿರಾಟನು ಏನು ಹೇಳುವನೋ, ಎಂದು ಭಯಪಡುತ್ತ, ಆ ರಾಜನ ಮುಂದೆ ಕಿಂಕರಿಯಾಗಿ ನಿಲ್ಲುತ್ತಿರುವೆನು. ನಾನುಹೊರತು ಬೇರೊಬ್ಬರು ಚಂದನವನ್ನರೆದುಕೊಟ್ಟರೆ ವಿರಾಟನಿಗೆ ಅದು ಪ್ರಿಯವಿಲ್ಲವಂತೆ! ನಿನ್ನ ಪತ್ನಿಯಾದ ನನ್ನ ಸ್ಥಿತಿಯು ಹೇಗಾಯಿತು ನೋಡು'' ಎಂದಳು. ಹೀಗೆ ದ್ರೌಪದಿಯು ದುಃಖಕೋಪಗಳಿಂದ ತನ್ನ ಕಷ್ಟಗಳನ್ನು ಭೀಮಸೇನನಿಗೆ ತಿಳಿಸಿ, ಅವನ ಎದೆಯನ್ನೊರಗಿಕೊಂಡು ಮೆಲ್ಲಗೆ ಅಳುವುದಕ್ಕಾರಂಭಿಸಿದಳು. ಹೀಗೆ ದ್ರೌಪದಿಯು ಭೀಮನ ಎದೆಯಮೇಲೆ ಒರಗಿಕೊಂಡು, ಬಾರಿಬಾರಿಗೆ ನಿಟ್ಟುರನ್ನು ಬಿಡುತ್ತ ಬಾಷ್ಪಗದ್ಗದವಾದ ಮಧುಸ್ವರದಿಂದ ಹೀಗೆಂದು ಹೇಳುವಳು. ''ಎಲೈ ಪಾಂಡವೋತ್ತಮಾ! ಭೀಮಸೇನಾ! ನಾನಾದರೋ ಪರಮ ನಿರ್ಭಾಗ್ಯಳು. ಯಾವಾಗಲೋ ಸಾಯಬೇಕಾದ ಸ್ಥಿತಿಯಲ್ಲಿಯೂ ಇನ್ನೂ ಬದುಕಿರುವೆನು. ನಾನು ದೇವತೆಗಳ ವಿಷಯದಲ್ಲಿ ಏನೋ ಮಹಾ

ಪರಾಧವನ್ನು ಮಾಡಿರಬೇಕು. ಅದರಿಂದಲೇ ಈ ದುಃಖಗಳನ್ನನುಭವಿಸುವುದಕ್ಕಾಗಿ ಬದುಕಿರುವೆನು. ಈಗಲೂ ನೀನು ಆ ದುರಾತ್ಮನಾದ ಕೀಚಕನನ್ನು ಕೊಲ್ಲದೆ ಬಿಟ್ಟಪಕ್ಷದಲ್ಲಿ ನಾನು ಈ ದೇಹವನ್ನು ಬಿಡುವುದು ನಿಶ್ಚಯವು. ವಿಷವನ್ನು ಕಲೆಸಿ ಕುಡಿಯುವೆನು. ಅಥವಾ ಬೆಂಕಿಯಲ್ಲಿ ಬಿಳುವೆನು. ನಾನು ಭಾಗ್ಯಹೀನಳು. ಪುಣ್ಯಲೇಶವಿಲ್ಲದವಳು. ಯಾವಾಗಲೂ ದುಃಖವನ್ನೇ ಅನುಭವಿಸುತ್ತಿರುವವಳು. ಕ್ಷಣಮಾತ್ರವೂ ಮನಸ್ಸಿಗೆ ನೆಮ್ಮದಿಯಿಲ್ಲದವಳು. ಪಾಪದಲ್ಲಿ ಮುಳುಗಿದ ನಾನು, ಇನ್ನೂ ಈ ಲೋಕದಲ್ಲಿ ಬದುಕಿದ್ದು ಆಗಬೇಕಾದುದೇನು?'' ಎಂದು ಹೇಳಿ ಪಟ್ಟುಗಟ್ಟಿದ ತನ್ನ ಕೈಗಳೆರಡನ್ನೂ ತಿರುಗಿ ಭೀಮನಿಗೆ ತೋರಿಸಿದಳು. ಆಗ ಭೀಮನು ದುಃಖದಿಂದ ನಡುಗುತ್ತಿರುವ ಆಕೆಯ ಕೈಗಳೆರಡನ್ನೂ ತನ್ನ ಮುಖವಮೇಲಿಟ್ಟುಕೊಂಡು ಅಳುವುದಕ್ಕಾರಂಭಿಸಿದನು. ಶತ್ರುಗಳನ್ನು ಧ್ವಂಸಮಾಡತಕ್ಕ ಮಹಾವೀರ್ಯವುಳ್ಳವನಾದರೂ ಭೀಮನು, ದುಸ್ಸಹವಾದ ವ್ಯಸನದಿಂದ ಧೈರ್ಯಗೆಟ್ಟು ಕಣ್ಣೀರುಬಿಡುತ್ತ ಹೀಗೆಂದು ಹೇಳುವನು.

ಇದು ಇಪ್ಪತ್ತುಮೂರನೆಯ ಅಧ್ಯಾಯವು.

ದ್ರೌಪದಿಗೂ ಭೀಮಸಿಗೂ ನಡೆದ ಸಂವಾದಗಳು. ಭೀಮನು ಕೀಚಕನನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಿ ಅದಕ್ಕೆ ಉಪಾಯವನ್ನು ಹೇಳಿದುದು.

ಆಮೇಲೆ ಭೀಮಸೇನನು ದ್ರೌಪದಿಯನ್ನು ಸಮಾಧಾನಗೊಳಿಸುತ್ತ ''ಎಲೆ ಭದ್ರೆ! ನೀನು ಆ ವಿರಾಟಸಭೆಗೆ ಬಂದಾಗಲೇ ನಾನು ಕೋಪಾವೇಶದಿಂದ ಸಂಕಲ್ಪಿಸಿದ್ದುದನ್ನು ಕೇಳು. ಆಗಲೇ ಮತ್ಸ್ಯದೇಶದೊಡನೆ ಯುದ್ಧವನ್ನು ತೆಗೆದು, ಆದಕ್ಕೆ ದೊಡ್ಡ ವಿನಾಶವನ್ನು ತಂದಿಡುವುದಾಗಿ ಆಲೋಚಿಸಿದೆನು. ನಿನಗೆ ಶುಭವಾಗಲಿ! ಆ ಉದ್ದೇಶದಿಂದ ಆಗಲೇ ನಾನು ಒಂದು ಮರವನ್ನೂ ನೋಡಿದೆನು. ಆಗ ಧರ್ಮರಾಜನು ತನ್ನ ಕಣ್ಣುಸಂಜ್ಞೆಯಿಂದ ನನ್ನನ್ನು ನಿವಾರಿಸಲು, ಆ ಸಂಕೇತವನ್ನು ತಿಳಿದು, ನಾನು

ತಲೆಬಗ್ಗಿಸಿಕೊಂಡು ಮೌನದಿಂದ ಅಡಿಗೆಯ ಮನೆಗೆ ಹೊರಟು ಬಂದು ಬಿಟ್ಟೆನು. ಪ್ರಿಯೇ! ಈಗ ಮತ್ತೊಂದು ಪ್ರತಿಜ್ಞೆಯನ್ನು ತಿಳಿಸುವೆನು ಕೇಳು. ಪೂರ್ವದಲ್ಲಿ ಚಿಗುರಿನಂತೆ ಕೆಂಪಾಗಿದ್ದ ಈ ನಿನ್ನ ಕೈಗಳೆರಡೂ, ಈಗ ಗಂಧವನ್ನರೆಯುವುದರಿಂದ ಪಟ್ಟುಗಟ್ಟಿರುವುದೇನೋ ನಿಜವೇ! ಇದಕ್ಕಾಗಿ ಈ ನನ್ನ ಬಾಹುಬಲವನ್ನೂ, ಅರ್ಜುನನ ಗಾಂಡೀವವನ್ನೂ ಛೀಗಳೆಯಬೇಕಾದುದೂ ಸಹಜವೇ! ಆ ವಿರಾಟಸಭೆಯಲ್ಲಿ ಆಗಲೇ ದೊಡ್ಡ ಯುದ್ಧವನ್ನು ಹೂಡಿ ಸರ್ವನಾಶಮಾಡದೆ ಬಿಟ್ಟು ಬಂದುದಕ್ಕಾಗಿ, ಈಗ ನನಗೆ ಬಹಳವಾಗಿ ಪಶ್ಚಾತ್ತಾಪವುಂಟಾಗಿದೆ. ಆದರೆ, ಈಗಲೂ ಅದನ್ನು ಮಾಡದೆ ಬಿಡುವವನಲ್ಲ. ಆಗ ನಾನು ಸುಮ್ಮನಾದುದಕ್ಕೆ ಧರ್ಮರಾಜನು ನನ್ನನ್ನು ನೋಡಿದುದೇ ಕಾರಣವು. ಅವನ ಅಭಿಪ್ರಾಯವನ್ನು ತಿಳಿದೇ, ನಾನು ಧರ್ಮಕ್ಕೆ ಕಟ್ಟುಬಿದ್ದು ಸುಮ್ಮನಾದೆನು. ನಾವು ರಾಜ್ಯವನ್ನು ಬಿಟ್ಟುಬಂದುದು, ಕೌರವರನ್ನು ಕೊಲ್ಲದಿದ್ದುದು, ಆಗಲೇ ದುರ್ಯೋಧನ, ಕರ್ಣ, ಸುಬಲಪುತ್ರನಾದ ಶಕುನಿ, ಮತ್ತು ಪಾಪಿಯಾದ ಆ ದುಶ್ಶಾಸನ ನೆಂಬವರ ತಲೆಗಳನ್ನು ಹಾರಿಸದೆ ಸುಮ್ಮನೆ ಬಂದುದು, ಇವೆಲ್ಲ ಈಗ ಹೃದಯಶಲ್ಯವಾಗಿ ನನ್ನನ್ನು ದಹಿಸುತ್ತಿರುವುದು. ಎಲೆ ಕಲ್ಯಾಣಿ! ಹಿಂದೆ ನಾನು ಹೇಳಿದ ಮತ್ತೊಂದು ವಿಷಯವು ನಿನ್ನ ನೆನಪಿನಲ್ಲಿದೆಯೋ? ಪರಿಶುದ್ಧವಾದ ಸರಸ್ವತೀನದಿಯ ತೀರದಲ್ಲಿ ಹಿಂದೊಮ್ಮೆ ನಾವೆಲ್ಲರೂ ಸೇರಿದ್ದಾಗ, ನಾನು ನಮ್ಮ ಹಿಂದಿನ ಕಷ್ಟಗಳೆಲ್ಲವನ್ನೂ ನೆನೆಸಿಕೊಂಡು ನಿನ್ನೊಡನೆ "ಎಲೆ ಪಾಂಚಾಲಿ! ಇನ್ನು ನಾನು ಧರ್ಮಪುತ್ರನನ್ನಾಗಲಿ, ಅರ್ಜುನನನ್ನಾಗಲಿ, ಮಾದ್ರೀಪುತ್ರರಾದ ನಕುಲಸಹದೇವರನ್ನಾಗಲಿ, ಅನುಸರಿಸುವವನಲ್ಲ" ವೆಂದು ಹೇಳಿದ್ದೆನು. ಅದೇ ನಿಶ್ಚಯದಿಂದ ಆಗ ಅಣ್ಣನಾದ ಯುಧಿಷ್ಠಿರನನ್ನೂ ನಿಂದಿಸಿಬಿಟ್ಟೆನು. ಅಕಾರ್ಯಗಳಿಗೆ ನಾಚುವ ಸ್ವಭಾವವುಳ್ಳ ಯುಧಿಷ್ಠಿರನು, ಆಗ ನಾನಾಡಿದ ಕಠಿನವಾಕ್ಯಗಳನ್ನು ಕೇಳಿ, ಧೌಮ್ಯ ಮುನಿಯು ಇದಿರಾಗಿದ್ದಾಗಲೇ ನಯವಾಕ್ಯಗಳಿಂದ ತಮ್ಮಂದಿರಾದ ನಮ್ಮೆಲ್ಲರಿಗೂ ಸಮಾಧಾನಗಳನ್ನು ಹೇಳಿದನು. ಎಲೆ ರಾಜಪತ್ನಿ! ನೀನಾದರೋ ಶಾಸ್ತ್ರನಿರ್ಣೀತಗಳಾದ ಸಕಲ ಗುಣಗಳಿಂದಲೂ ಕೂಡಿದವಳು. ಆದುದರಿಂದ ಈ ಕಷ್ಟಗಳಿಗೆಲ್ಲ ನೀನು ಧೈರ್ಯಗೆಟ್ಟು ಹೀಗೆ ಅಳಬಾರದು.

ಪ್ರಪಂಚದಲ್ಲಿ ಸತ್ಯಕ್ಕೆ ಸಮಾನವಾದ ಧರ್ಮವು ಬೇರೊಂದಿಲ್ಲವು. ನಾವೆಲ್ಲರೂ ಸೇರಿ ಅದನ್ನು ರಕ್ಷಿಸಿಕೊಳ್ಳಬೇಕು. ಆಗ ಧರ್ಮರಾಜನು ನಮಗೆ ಹೇಳಿದ ಸಮಾಧಾನವಾಕ್ಯಗಳನ್ನು ನೀನೂ ನಿನಗೆ ಹೇಳಿದುದಾಗಿ ಗ್ರಹಿಸಬೇಕು. ಆದುದರಿಂದ, ಎಲೆ ಸುಶ್ರೋಣಿ! ಮಹಾಬುದ್ಧಿಶಾಲಿನಿಯಾದ ನೀನು ಧೈರ್ಯವನ್ನು ಬಿಡಬಾರದು. ಕ್ರೋಧವನ್ನು ಬಿಡಬೇಕು. ಎಲೆ ಕಾಂತೆ! ಈಗ ನೀನು ಹೇಳಿದ ನಿಂದಾವಾಕ್ಯಗಳನ್ನು ಧರ್ಮರಾಜನಾಗಲಿ, ಅರ್ಜುನನಾಗಲಿ, ಅಥವಾ ಅವಳಮಕ್ಕಳಾದ ಆ ನಕುಲಸಹದೇವರಾಗಲಿ ಕೇಳಿದರೆ, ಜೀವವನ್ನೇ ಕಳೆದುಕೊಳ್ಳುವರು. ಹಾಗೇನಾದರೂ ಅವರು ಲೋಕಾಂತರವನ್ನೈದಿದರೆ ನಾನೂ ಜೀವಿಸಿರಲಾನೆನು. ಆದುದುರಿಂದ, ಎಲೆ ಪಾಂಚಾಲಿ! ಈಗ ನಾನು ಹೇಳುವ ಧರ್ಮಸೂಕ್ಷ್ಮವನ್ನು ಕೇಳು. ಜನಕರಾಜನ ಪುತ್ರಿಯಾದ ವೈದೇಹಿಯೆಂಬವಳಿದ್ದುದನ್ನು ನೀನೂ ಕೇಳಿರಬೇಕಲ್ಲವೆ! ತನ್ನ ಪತಿಯು ಅರಣ್ಯವಾಸಕ್ಕಾಗಿ ಹೋದಾಗ ಆಕೆಯೂ ಅವನನ್ನು ಹಿಂಬಾಲಿಸಿ ಹೋದಳು. ಶ್ರೀರಾಮನಿಗೆ ಪ್ರಿಯಪತ್ನಿಯಾದ ಆ ಸೀತಾದೇವಿಯು ಮಹಾರಣ್ಯದಲ್ಲಿದ್ದಾಗ, ಅವಳನ್ನು ರಾವಣನೆಂಬ ಕ್ರೂರರಾಕ್ಷಸನು ಅಪಹರಿಸಿಕೊಂಡು ಹೋದುದನ್ನೂ, ಅಶೋಕವನದಲ್ಲಿ ರಾಕ್ಷಸಸ್ತ್ರೀಯರು ಅವಳನ್ನು ಬಹಳವಾಗಿ ಭಯಪಡಿಸುತಿದ್ದರೂ ಅವಳು ಆ ಕಷ್ಟಗಳನ್ನೆಲ್ಲ ಸಹಿಸಿಕೊಂಡು ರಾಮನನ್ನೇ ಅನುಸರಿಸುತಿದ್ದಳೆಂಬುದನ್ನೂ ನೀನು ಕೇಳಿಯೇ ಇರುವೆಯಲ್ಲವೆ? ಅದರಂತೆಯೇ ಲೋಪಾಮುದ್ರೆಯು, ಮಹಾತ್ಮನೂ ತನ್ನ ಪತಿಯೂ ಆದ ಅಗಸ್ತ್ಯಮಹಾಮುನಿಯ ಪಾದಛ್ಛಾಯೆಯನ್ನು ಹಿಡಿದು ಅರಣ್ಯಕ್ಕೆ ಹೋದಳು. ಶರ್ಯಾತಿಯ ಮಗಳಾದ ಸುಕನ್ಯೆಯೆಂಬ ಪರಮಪತಿವ್ರತೆಯು, ಹುತ್ತದಂತಾಗಿದ್ದ ಚ್ಯವನನೆಂಬ ತನ್ನ ಪತಿಯನ್ನು ಹಿಂಬಾಲಿಸಿ ಕಾಡಿನಲ್ಲಿಯೇ ಇರುತಿದ್ದಳು. ರೂಪದಲ್ಲಿ ಅಸಮಾನಳೆನಿಸಿಕೊಂಡ ನಾಲಾಯಣಿಯೆಂಬ ಇಂದ್ರಸೇನೆಯು ತನ್ನ ಪತಿಯು ಸಾವಿರವರ್ಷದ ಮುದುಕನಾಗಿದ್ದರೂ, ಅವನನ್ನು ಅನುವರ್ತಿಸಿ ನಡೆಯುತಿದ್ದಳು. ಹಾಗೆಯೇ ದಮಯಂತಿಯು ತನ್ನ ಪತಿಯಾದ ನಳರಾಜನೊಡನೆ ಅರಣ್ಯವಾಸ ಮಾಡಿದಳು. ಆದುದರಿಂದ ಎಲೆ ಕೃಷ್ಣೆ! ನೀನೂ ಈಗ ನಿನ್ನ ಪತಿಗಳನ್ನೇ ಅನುವರ್ತಿಸಿ ನಡೆಯಬೇಕು. ನಾನು

ಇದುವರೆಗೆ ಹೇಳಿದ ಸ್ತ್ರೀಯರೆಲ್ಲರೂ ಮಹಾಪತಿವ್ರತೆಯರು. ಒಳ್ಳೇ ರೂಪವತಿಯರು. ಎಲೆ ಕಲ್ಯಾಣಿ! ನೀನೂ ಅವರಂತೆಯೇ ಎಲ್ಲಾ ಗುಣಗಳಿಂದಲೂ ಕೂಡಿದವಳಾಗಿದ್ದು ಹೀಗೆ ಆತುರಪಡಬಾರದು. ತಾಳ್ಮೆಯನ್ನು ವಹಿಸಬೇಕು. ಇನ್ನು ಹೆಚ್ಚು ದಿನಗಳೇನೂ ಇಲ್ಲ. ಇನ್ನು ಮೂವತ್ತುದಿನಗಳು (ಒಂದು ತಿಂಗಳು) ಮಾತ್ರ ಸಹಿಸಿಕೊಂಡಿರು. ಹದಿಮೂರನೆಯ ವರ್ಷವು ಮುಗಿದ ಮಾರನೆಯ ದಿನವೇ, ಪಟ್ಟಮಹಿಷೀಪದವಿಯನ್ನು ಹೊಂದುವೆಯೆಂದು ತಿಳಿ! ಸತ್ಯದಮೇಲೆ ಆಣೆಯಿಟ್ಟು ಹೇಳುವೆನು. ಅದು ಹಾಗೆಯೇ ನಡೆಯುವುದೇ ಹೊರತು, ಬೇರೆಯಾಗಲಾರದು. ಇಂತಹ ಅವಕಾಶವು ದೊರೆತಿರುವಾಗ, ನೀನು ಬೇರೆ ಎಲ್ಲಾ ಉತ್ತಮ ಸ್ತ್ರೀಯರಿಗೂ ಆದರ್ಶಭೂತೆಯೆಂಬುದನ್ನು ತೋರಿಸಿ ಕೊಡಬೇಕು. ಎಲೆ ಭಾಮಿನಿ! ನೀನು ಶೀಘ್ರದಲ್ಲಯೇ ಸಮಸ್ತ ರಾಜಕುಲದ ತಲೆಯಲ್ಲಿ ನಿಲ್ಲುವೆ! ನಿನ್ನ ಪತಿಭಕ್ತಿಯಿಂದಲೂ, ಸಚ್ಚರಿತ್ರದಿಂದಲೂ ನೀನು ದುರ್ಲಭಗಳಾದ ಭಾಗ್ಯಗಳನ್ನು ಹೊಂದುವೆ. ನಮ್ಮ ಪ್ರತಿಜ್ಞೆಯನ್ನು ಮುಗಿಸಿದಮೇಲೆ ನೀನು ಉತ್ತಮ ಭೋಗಗಳನ್ನನುಭವಿಸುವೆ. ಆಗ ನೀನೇ ಇವೆಲ್ಲ ದೊಡ್ಡವರಲ್ಲಿ ಭಕ್ತಿಯ ಪ್ರಭಾವದಿಂದ ಬಂದ ಪದವಿಯೆಂಬುದನ್ನು ತಿಳಿದು, ಎಲ್ಲಾ ರಾಜರ ಶಿರಸ್ಸಿನಮೇಲೆ ಮೆರೆಯುವೆ" ಎಂದನು.

ಆಗ ದ್ರೌಪದಿಯು "ಕುಂತೀಕುಮಾರಾ! ನಾನು ದುಃಖದಿಂದ ಹೀಗೆ ವಿಲಪಿಸುವೆನೇ ಹೊರತು, ನಾನು ರಾಜನನ್ನು ನಿಂದಿಸಲಿಲ್ಲ. ದುಃಖವನ್ನು ಸಹಿಸಲಾರದೆ ನಾನು ಹೀಗೆ ಕಣ್ಣೀರನ್ನು ಬಿಡುತ್ತಿರುವೆನು. ಮುಖ್ಯವಾಗಿ ಇದೊಂದು ದುಃಖವು ಮಾತ್ರ ನನಗೆ ಅತ್ಯಂತ ದುಸ್ಸಹವಾಗಿ ನನ್ನನ್ನು ಸದಾ ಸಂಕಟಗೊಳಿಸುತ್ತಿದೆ. ವಿರಾಟನ ಭಾವಮೈದುನನಾದ ಆ ಸೂತಪುತ್ರನು, ತ್ರಿಗರ್ತದೇಶದಲ್ಲಿ ಜನಿಸಿ ಭೋಜನೆಂದೂ, ಕೀಚಕನೆಂದೂ ಕರೆಯಲ್ಪಡುವ ಘಾತುಕನಾದ ಆ ಪಾಪಿಯು, ಆ ಧರ್ಮವಿದೂರನು, ಸಮಸ್ತಕ್ಕೂ ದುರಾಸೆಪಡತಕ್ಕ ಆ ಅವಿವೇಕಿಯು, ನಾನು ಅನಾಥೆಯೆಂದು ತಿಳಿದು ಪ್ರತಿದಿನವೂ ನನ್ನಲ್ಲಿಗೆ ಬಂದು "ನನ್ನ ಹೆಂಡತಿಯಾಗು" ಎಂದು ಬಾರಿಬಾರಿಗೂ ಪೀಡಿಸುತಿದ್ದ ನಲ್ಲವೆ? ಭೀಮಸೇನಾ! ಓ ಮಹಾ

ಬಲಾ! ಕಳೆದುಹೋದುದನ್ನು ಪುನಃಪುನಃ ಹೇಳಿ ಪ್ರಯೋಜನವೇನು? ಪ್ರಕೃತದಲ್ಲಿ ಬಂದೊದಗಿರುವ ಕಾರ್ಯಕ್ಕೆ ತಕ್ಕ ಪ್ರಯತ್ನವನ್ನು ಮಾಡು! ಕೇಕಯಪುತ್ರಿಯಾದ ಆ ಸುದೇಷ್ಣೆಯು ನನ್ನ ರೂಪಕ್ಕೆ ಭಯಪಟ್ಟು, "ತನ್ನ ಪತಿಯಾದ ವಿರಾಟನು ನನ್ನನ್ನು ಕಂಡರೆ ಬಿಡುವನೆ" ಎಂದು ಯಾವಾಗಲೂ ಸಂದೇಹಪಟ್ಟು ಕಳವಳಿಸುತ್ತಲೇ ಇರುವಳು. ಆ ಕೀಚಕನಾದರೋ ಸ್ವಭಾವದಿಂದಲೇ ದುಷ್ಟಬುದ್ಧಿಯುಳ್ಳವನು. ಇದರಮೇಲೆ ಸುದೇಷ್ಣೆಗೆ ನನ್ನ ವಿಷಯದಲ್ಲಿರುವ ಸಂದೇಹವನ್ನೂ ತಿಳಿದುಕೊಂಡು, ನಿರ್ಭಯವಾಗಿ ಬಾರಿಬಾರಿಗೂ ನನ್ನನ್ನು ಪೀಡಿಸುತ್ತಲೇ ಇರುವನು. ಅವ ನನ್ನು ಕಂಡಾಗಲೇ ನನಗೆ ಮಿತಿಮೀರಿದ ಕೋಪವು ಉಕ್ಕಿಬಂದಿತು. ಆದರೂ ಆ ಕೋಪವನ್ನಡಗಿಸಿಕೊಂಡು ಸಮಾಧಾನಪೂರ್ವಕವಾಗಿಯೇ ಅವನನ್ನು ಕುರಿತು ಹೀಗೆಂದು ಹೇಳಿದೆನು. "ಎಲೆ ಕೀಚಕಾ! ನೀನು ಕಾಮಮೋಹಿತನಾಗಿ ಹೀಗೆ ಆಡಬಾರದ ಮಾತನ್ನಾಡುವೆ! ನಿನ್ನ ಸ್ವರೂಪವನ್ನು ಕಾಪಾಡಿಕೊಳ್ಳುವನಾಗು. ನಾನು ಐದುಮಂದಿ ಗಂಧರ್ವರಿಗೆ ಪತ್ನಿಯಾಗಿರುವೆನು. ಅವರಿಗೆ ನಾನು ಪಟ್ಟಮಹಿಷಿ. ಅವರು ಎಂತವರಿಗೂ ದುರ್ಜಯರು. ಮಹಾಸಾಹಸಿಕರು. ಅವರಿಗೇನಾದರೂ ಈ ವಿಚಾರವು ತಿಳಿದರೆ ನಿನ್ನನ್ನು ಕೊಂದುಬಿಡುವರು" ಎಂದು ಹೇಳಿದೆನು. ಇಷ್ಟು ವಿಧವಾಗಿ ಹೇಳಿದರೂ ಆತನು ತಿರುಗಿ ಪಾಪಬುದ್ಧಿಯಿಂದ ನನ್ನನ್ನು ನೋಡಿ "ನಾನು ಗಂಧರ್ವರಿಗೇನೂ ಭಯಪಡುವಹಾಗಿಲ್ಲ. ಐದುಮಂದಿ ಮಾತ್ರವಲ್ಲ. ನೂರು ಮಂದಿ ಗಂಧರ್ವರು ಒಟ್ಟಿಗೆ ಸೇರಿ ಯುದ್ಧಕ್ಕಾಗಿ ಬಂದರೂ, ಸಾವಿರಮಂದಿ ಕೂಡಿಬಂದರೂ ನಾನು ಕೊಲ್ಲಬಲ್ಲೆನು! ಭೀರೂ! ನನ್ನನ್ನು ಸಂತೋಷಗೊಳಿಸು" ಎಂದು ಉತ್ತರಕೊಟ್ಟನು. ತಿರುಗಿ ನಾನು ಆ ಸೂತಾಧಮನನ್ನು ನೋಡಿ "ಕೀಚಕಾ! ಅನ್ಯಾಯವಾಗಿ ಕೆಡಬೇಡ! ಆ ಗಂಧರ್ವರಿಗೆ ನೀನು ಎಂದಿಗೂ ಇದಿರಲ್ಲ. ಅಲ್ಲದೆ ನಾನು ಪಾತಿವ್ರತ್ಯಧರ್ಮನಿರತಳು. ಕುಲಶೀಲಗಳಲ್ಲಿ ನಿಷ್ಕಳಂಕಳಾದವಳು. ನಾನೇ ನಿನ್ನನ್ನು ಈಗ ಕೊಲ್ಲಬಹುದಾಗಿದ್ದರೂ, ಸುಮ್ಮನೆ ಬಿಟ್ಟಿರುವೆನು. ಅದರಿಂದಲೇ ನೀನು ಇನ್ನೂ ಜೀವದಿಂದಿರುವೆ" ಎಂದು ಭಯಪಡಿಸಿದೆನು. ಆಗಲೂ ಆ ದುರಾತ್ಮನು ಗಹಗಹನೆ ಅಟ್ಟಹಾಸದಿಂದ ನಗುತ್ತಿದ್ದನೇಹೊರತು, ಸನ್ಮಾರ್ಗಕ್ಕೆ ಬರಲಿಲ್ಲ.

ಧರ್ಮಕ್ಕೂ ಮನಸ್ಸು ಕೊಡಲಿಲ್ಲ. ಪಾಪಾತ್ಮನೂ, ಪಾಪಕಾರಿಯೂ, ಕಾಮುಕ್ಕೆ ಪರವಶನೂ, ಅವಿನೀತನೂ ಆದ ಆ ದುಷ್ಟನನ್ನು ನಾನು ವಿಧವಿಧವಾಗಿ ಬಾರಿಬಾರಿಗೂ ಛೀಗುಟ್ಟಿ ನಿರಾಕರಿಸಿದೆನು. ಅವನು ಈಗಲೂ ನನ್ನನ್ನು ಬಿಡುವಹಾಗೆ ತೋರಲಿಲ್ಲ. ಕಂಡಕಂಡಾಗಲೆಲ್ಲ ನನ್ನನ್ನು ಪೀಡಿಸದೆ ಬಿಡಲಾರನು. ಇನ್ನುಮೇಲೆ ಹಾಗೆ ಪೀಡಿಸಿದಪಕ್ಷದಲ್ಲಿ ಆಗಲೇ ನಾನು ಪ್ರಾಣವನ್ನು ಬಿಡುವುದು ನಿಶ್ಚಯವು! ಹಾಗೆ ನಾನು ಪ್ರಾಣವನ್ನು ಬಿಟ್ಟರೆ, ಧರ್ಮಕ್ಕಾಗಿಯೇ ಪಾಡುಪಡುತ್ತಿರುವ ನಿಮ್ಮ ದೊಡ್ಡ ಧರ್ಮಕ್ಕೇ ಹಾನಿಯುಂಟಾಗುವುದು. ಅಲ್ಲದೆ ನೀವು ನಿಮ್ಮ ಅಜ್ಞಾತವಾಸಪ್ರತಿಜ್ಞೆಯನ್ನು ಪಾಲಿಸಿದರೂ, ನಿಮಗೆ ಭಾರ್ಯೆಯಿಲ್ಲದಂತಾಗುವುದು. "ಭಾರ್ಯೆಯನ್ನು ರಕ್ಷಿಸಿದಾಗಲೇ ಸಂತಾನವು ರಕ್ಷಿಸಲ್ಪಟ್ಟಂತಾಗುವುದು. ಸಂತಾನರಕ್ಷಣೆಯಿದ್ದಾಗಲೇ ಆತ್ಮವು ಉಜ್ಜೀವಿತವಾಗುವುದು." ಎಂದು ವರ್ಣಾಶ್ರಮಧರ್ಮಗಳನ್ನು ಬಲ್ಲ ಬ್ರಾಹ್ಮಣರು ಹೇಳಿದುದನ್ನು ಕೇಳಿರುವೆನು. ಕ್ಷತ್ರಿಯನಿಗೆ ಶತ್ರುನಿಗ್ರಹಕ್ಕಿಂತಲೂ ಬೇರೆ ನಿಯತಧರ್ಮವಿಲ್ಲ. ಧರ್ಮರಾಜನು ಕಣ್ಣಿದಿರಿಗೆ ನೋಡುತ್ತಿದ್ದಾಗಲೇ ಕೀಚಕನು ನನ್ನನ್ನು ಬೆನ್ನಟ್ಟಿ ಬಂದು ಹಿಡಿದನು. ಓ ಮಹಾಬಲಾಢ್ಯನೆನಿಸಿದ ಭೀಮಸೇನಾ! ನಿನ್ನಿದಿರಾಗಿಯೇ ನಾನು ಅಂತಹ ಪರಿಭವಕ್ಕೊಳಗಾದೆನು. ಹಿಂದೆ ಆ ಜಟಾಸುರನಿಂದ ನನ್ನನ್ನು ಬಿಡಿಸಿ ಕಾಪಾಡಿದವನೂ ನೀನೇ! ಹಿಂದೆ ಜಯದ್ರಥನನ್ನು ಅವನ ತಮ್ಮಂದಿರೊಡನೆ ಸೇರಿಸಿ ನಿಗ್ರಹಿಸಿದವನೂ ನೀನೇ! ಆದುದರಿಂದ ಈಗಲೂ ನೀನೇ ನನ್ನನ್ನವಮಾನಗೊಳಿಸಿದ ಆ ಪಾಪಿಷ್ಠನನ್ನು ಕೊಲ್ಲಬೇಕು. ಓ ಭರತಪುತ್ರಾ! ರಾಜವಾಲ್ಲಭ್ಯದ ಮದದಿಂದ ಕೀಚಕನು ನನಗೆ ಇಂತಹ ಭಂಗವನ್ನುಂಟುಮಾಡಿದನು. ಕಾಮದಿಂದ ಕುದಿಯುತ್ತಿರುವ ಆ ಮಹಾಪಾಪಿಯನ್ನು ಈಗಲೇ ನೀನು ಕಲ್ಲಿನ ಮೇಲೆ ಮಡಕೆಯನ್ನೊಡೆಯುವಂತೆ ಬಡಿದುಹಾಕಬೇಕು. ಯಾವ ದುರಾತ್ಮನು ನನ್ನ ಬಹುವಿಧವಾದ ಈ ಅನರ್ಥಗಳಿಗೆಲ್ಲ ನಿಮಿತ್ತಭೂತನಾದನೋ ಆ ಪಾಪಿ ಕೀಚಕನು ನಾಳೆ ಸೂರ್ಯೋದಯದವರೆಗೆ ಬದುಕಿದ್ದುದನ್ನು ನಾನು ನೋಡುವುದಾದರೆ, ಒಡನೆಯೇ ವಿಷವನ್ನು ಕದಡಿ ಕುಡಿದು ಪ್ರಾಣ ಬಿಡುವೆನು. ಭೀಮಸೇನಾ! ಆ ಕೀಚಕನ ವಶಳಾಗುವುದಕ್ಕಿಂತ ನಿನ್ನ

ಮುಂದೆ ಮರಣವೇ ನನಗೆ ಶ್ರೇಯಸ್ಕರವು'' ಎಂದು ಹೇಳುತ್ತ, ದ್ರೌಪದಿಯು ಭೀಮನ ಎದೆಯಮೇಲೆ ಒರಗಿಕೊಂಡು ರೋದಿಸಿದಳು. ಭೀಮನು ಆಗ ಅವಳನ್ನಪ್ಪಿಕೊಂಡು, ಬಹುವಿಧ ಸಮಾಧಾನಗಳನ್ನು ಹೇಳಿದನು. ಆಗ ಅವನಿಗೆ ಕೀಚಕನ ವಿಷಯವು ಚೆನ್ನಾಗಿ ಮನಸ್ಸಿಗೆ ನಾಟಿತು. ಕೋಪದಿಂದ ಕಡೆಬಾಯಿಗಳನ್ನು ನಕ್ಕುತ್ತ, ಸಕಾರಣವಾದ ಯಥಾರ್ಥವಚನಗಳಿಂದ ದ್ರೌಪದಿಗ ಸಮಾಧಾನಗಳನ್ನು ಹೇಳಿ, ಕಣ್ಣೀರು ತುಂಬಿದ್ದ ಅವಳ ಮುಖವನ್ನು ತನ್ನ ಕೈಗಳಿಂದ ಬಾರಿಬಾರಿಗೂ ಒರೆಸುತ್ತ ಹೀಗೆಂದು ಹೇಳಿದನು

ಇದು ಇಪ್ಪತ್ತನಾಲ್ಕನೆಯ ಅಧ್ಯಾಯವು.

ಭೀಮನ ಸೂಚನೆಯಂತೆ ದ್ರೌಪದಿಯು ಕೀಚಕನನ್ನು ಒಂದು ಸಂಕೇತಸ್ಥಳಕ್ಕೆ ಬರುವಹಾಗೆ ಹೇಳಿ ಭೀಮನಿಗೆ ಆ ಸಂಗತಿಯನ್ನು ತಿಳಿಸಿದುದು.

''ಎಲೆ ಕಲ್ಯಾಣಿ! ನೀನು ಹೇಳಿದಂತೆಯೇ ನಡೆಸುವೆನು. ಈಗಲೇ ಕೀಚಕನನ್ನು ಅವನ ಬಂಧುಗಳ ಸಹಿತವಾಗಿ ನಾಶಮಾಡುವೆನು. ಈ ರಾತ್ರಿಯು ಕಳೆದು ಬೆಳಗಾದೊಡನೆ ನೀನು ಅವನೊಡನೆ ಒಂದು ಸಂಕೇತವನ್ನು ಮಾಡು. ಎಲೆ ಯಾಜ್ಞಸೇನಿ! ನಿನ್ನ ದುಃಖವನ್ನೂ, ಕಳವಳವನ್ನೂ ಬಿಡು. ಮತ್ಸ್ಯರಾಜನು ಈ ನರ್ತನಶಾಲೆಯನ್ನು ಏರ್ಪಡಿಸಿರುವನಲ್ಲವೆ? ಅಲ್ಲಿ ರಾಜಕನ್ಯೆಯರು ಹಗಲೆಲ್ಲ ನರ್ತನಮಾಡುತ್ತಿದ್ದು ರಾತ್ರಿಯಾದಕೂಡಲೆ ಮನೆಗೆ ಹೋಗುವರು. ಆ ನರ್ತನಶಾಲೆಯಲ್ಲಿ ಒಳ್ಳೆಯ ಧೃಢವಾದ ಕಟ್ಟುಳ್ಳ ಒಂದು ಮಂಚವು ಇರುವುದು. ಆ ಮಂಚದಲ್ಲಿಯೇ ನಾನು ಆ ಕೀಚಕನಿಗೆ, ಮೃತರಾದ ಅವನ ಪೂರ್ವಪಿತೃಗಳ ದರ್ಶನವನ್ನು ಮಾಡಿಸಿಬಿಡುವೆನು. ನಿನ್ನನ್ನು ನೋಡಿ ಕಾಮದಿಂದ ಕಲಗಿದ ಇಂದ್ರಿಯಗಳುಳ್ಳ ಆತನನ್ನು ಆಗಲೇ ತೀರಿಸಿಬಿಡುವೆನು. ನೀನು ಅವನೊಡನೆ ಬೇಗನೆ ಸಂಕೇತವನ್ನು ಮಾಡಿ ಬಾ. ನೀನು ಬೇರೆ ಯಾರಿಗೂ ತಿಳಿಯದಂತೆ ಅವನೊಡನೆ ಸಂಕೇತವನ್ನು ಮಾಡಿ, ಅವನು ನನ್ನ ಬಳಿಗೆ ಬರುವಂತೆ

ಮಾಡು. ಎಲೆ ಭೀರು! ಕೀಚಕನ ನಾಶಕ್ಕಾಗಿ ನಾವಿಬ್ಬರೂ ಈಗ ಸೇರಿ ಮಾಡಿದ ಆಲೋಚನೆಯು ಬೇರೊಬ್ಬ ಮನುಷ್ಯನಿಗೆ ತಿಳಿಯದಂತೆ ಬಹಳ ರಹಸ್ಯವಾಗಿ ಈ ಕೆಲಸವನ್ನು ಮಾಡಬೇಕು'' ಎಂದನು.

ಎಲೈ ಜನಮೇಜಯರಾಜನೇ! ಕೇಳು! ಭೀಮಸೇನನೂ, ದ್ರೌಪದಿಯೂ ಹೀಗೆ ಮಾತನಾಡಿಕೊಂಡು, ದುಃಖದಿಂದ ಕಣ್ಣೀರು ಬಿಡುತ್ತ ಉಳಿದ ರಾತ್ರಿಯನ್ನು ಬಹಳ ಕಷ್ಟದಿಂದ ಕಳೆದರು. ಭೀಮನು ಕೀಚಕನನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಿ ಕೊಟ್ಟೊಡನೆಯೇ, ದ್ರೌಪದಿಯು ಅಲ್ಲಿಂದ ಹಿಂತಿರುಗಿ ಸುದೇಷ್ಣೆಯ ಮನೆಗೆ ಬಂದುಸೇರಿದಳು. ಆ ರಾತ್ರಿಯು ಕಳೆದು ಬೆಳಗಾದೊಡನೆ, ಕೀಚಕನು ಹಾಸಿಗೆಯಿಂದೆದ್ದು ತನ್ನ ಕಾಮಾತುರದಿಂದ ತಿರುಗಿ ದ್ರೌಪದಿಯನ್ನು ನೋಡುವುದಕ್ಕಾಗಿ ಸುದೇಷ್ಣೆಯ ಅಂತಃಪುರಕ್ಕೆ ಬಂದನು. ಧೂರ್ತನಾದ ಆ ಕೀಚಕನು ಅಲ್ಲಿದ್ದ ದ್ರೌಪದಿಯನ್ನು ಲಜ್ಜೆಯಿಲ್ಲದೆ ತಿರುಗಿ ಮಾತನಾಡಿಸುತ್ತ ಹೀಗೆಂದು ಹೇಳುವನು. ''ಎಲೆ ಸೈರಂಧ್ರಿ! ರಾಜನ ಕಣ್ಣಿದಿರಾಗಿಯೇ ನಾನು ನಿನ್ನನ್ನು ಕೆಳಕ್ಕೆ ಕೆಡಹಿ, ಕಾಲಿಂದೊದೆ ನಲ್ಲವೆ? ಆಗ ನಿನ್ನನ್ನು, ಬಲಾಢ್ಯನಾದ ನನ್ನ ಕೈಯಿಂದ ತಪ್ಪಿಸಿ ರಕ್ಷಿಸುವುದಕ್ಕೆ ಯಾವನು ತಾನೇ ಸಮರ್ಥನಾದನು? ವಿರಾಟನು ಹೆಸರಿಗೆ ಮಾತ್ರ ಈ ಮತ್ಸ್ಯದೇಶಗಳಿಗೆಲ್ಲ ರಾಜನೆನಿಸಿರುವನೇ ಹೊರತು, ಸೇನಾಪತಿಯಾದ ನಾನೇ ಈ ದೇಶಕ್ಕೆಲ್ಲ ರಾಜನು. ಎಲೆ ಭೀರು! ನೀನು ಸುಖವಾಗಿ ನನ್ನನ್ನು ಸೇರು. ನಾನು ನಿನಗೆ ದಾಸನಾಗಿ ನಡೆದುಕೊಳ್ಳುವೆನು. ನಿನ್ನನ್ನು ಬಿಟ್ಟು ನಾನು ಬಹುಕಾಲಕ್ಕೆ ಜೀವಿಸಿರಲಾರೆನು. ದಿನವೊಂದಕ್ಕೆ ನೂರು ನಿಷ್ಕಗಳಂತೆ ನಿನಗೆ ಪ್ರತಿದಿನವೂ ಕೊಡುವೆನು. ನೂರು ಮಂದಿ ದಾಸಿಯರನ್ನೂ, ನೂರು ಮಂದಿ ದಾಸರನ್ನೂ, ಬೇರೆ ಪರಿಚಾರಕರನ್ನೂ ನಿನಗೆ ಕೊಡುವೆನು. ಹೇಸರಗತ್ತೆಗಳಿಂದ ಕೂಡಿದ ಅನೇಕ ರಥಗಳನ್ನು ನಿನ್ನ ವಶದಲ್ಲಿರಿಸುವೆನು. ಎಲೆ ಸುಂದರೀ! ಒಳ್ಳೆಯ ನಿಪುಣರಾದ ಸಾವಿರ ಮಂದಿ ಭೃತ್ಯರೊಡನೆ ಸಾವಿರ ಎಮ್ಮೆಗಳನ್ನೂ, ಸಾವಿರ ಅಂತಃಪುರಗಳನ್ನೂ, ಸಾವಿರ ಭಂಗಾರದ ಕಲಶಗಳನ್ನೂ ನಿನಗಾಗಿ ಕೊಡುವೆನು. ರಾಜಯೋಗ್ಯಗಳಾದ ವಸ್ತ್ರಗಳನ್ನು ಕೊಡುವೆನು,'' ಎಂದನು.

ಆಗ ದ್ರೌಪದಿಯು, "ಕೀಚಕಾ! ಈಗ ನಾನೊಂದು ಮಾತನ್ನು ಹೇಳುವೆನು. ಅದನ್ನು ನೀನು ನಿಜವೆಂದು ನಂಬು. ನಾನೇನೋ ನಿನ್ನ ವಳಾಗುವೆನು. ಆದರೆ, ನೀನು ನನ್ನನ್ನು ಸೇರುವುದು ನಿನ್ನ ಮಿತ್ರರಿಗಾಗಲಿ, ನಿನ್ನ ಸಹೋದರರಿಗಾಗಲಿ ಯಾರಿಗೂ ತಿಳಿಯಬಾರದು. ಲೋಕಾಪವಾದಕ್ಕೆ ನಾನು ಬಹಳವಾಗಿ ಹೆದರತಕ್ಕವಳು. ಮುಖ್ಯವಾಗಿ ಈ ವಿಚಾರವು ಗಂಧರ್ವರಿಗೆಮಾತ್ರ ತಿಳಿದರೆ, ದೊಡ್ಡ ಅನರ್ಥಕ್ಕೂ, ಅಪಕೀರ್ತಿಗೂ ಕಾರಣವಾಗುವುದು. ಆದುದರಿಂದ ನೀನು ಇದನ್ನು ಅತಿರಹಸ್ಯವಾಗಿಡುವ ವಿಷಯದಲ್ಲಿ ನನಗೆ ಮೊದಲು ಪ್ರತಿಜ್ಞೆಮಾಡಿಕೊಟ್ಟರೆ, ಆಮೇಲೆ ನಾನು ನಿನ್ನವಳಾಗುವೆನು," ಎಂದಳು. ಅದಕ್ಕಾ ಕೀಚಕನು, "ಎಲೆ ಸುಶ್ರೋಣಿ! ನೀನು ಹೇಳಿದಂತೆಯೇ ನಡೆಸುವೆನು. ನಾನು ಏಕಾಕಿಯಾಗಿ, ಯಾರೂ ಇಲ್ಲದ ವೇಳೆಯಲ್ಲಿ ನಿನ್ನ ಮನೆಗೆ ಬರುವೆನು. ಸೂರ್ಯತೇಜಸ್ಸುಳ್ಳ ಆ ಗಂಧರ್ವರು ನಿನ್ನನ್ನು ನೋಡದಂತೆಯೇ ನಿನ್ನೊಡನೆ ಕೂಡುವುದಕ್ಕಾಗಿ ಬರುವೆನು," ಎಂದನು. ಆಗ ದ್ರೌಪದಿಯು, "ಎಲೆ ಕೀಚಕಾ! ಮತ್ಸ್ಯರಾಜನು ಏರ್ಪಡಿಸಿರುವ ಈ ನಾಟ್ಯಶಾಲೆಯುಂಟಲ್ಲವೆ? ಕನ್ಯೆಯರೆಲ್ಲರೂ ಇದರಲ್ಲಿ ಹಗಲೆಲ್ಲ ನರ್ತನಮಾಡಿ, ರಾತ್ರಿಯಲ್ಲಿ ತಮ್ಮ ತಮ್ಮ ಮನೆಗಳಿಗೆ ಹೋಗುವರು. ಈ ದಿನ ರಾತ್ರಿ ನೀನು ಅಲ್ಲಿಗೆ ಹೋಗಿರು! ಗಂಧರ್ವರಿಗೆ ಇದು ತಿಳಿಯಲಾರದು. ಅಲ್ಲಿ ನಮ್ಮಿಷ್ಟಬಂದಂತೆ ನಡೆದರೂ ಪ್ರಮಾದವೇನೂ ಇರದು. ಇದರಲ್ಲಿ ಸಂದೇಹವಿಲ್ಲ. ನೀನು ಈ ರಾತ್ರಿ ಒಂಟಿಯಾಗಿಯೇ ಅಲ್ಲಿಗೆ ಬಂದುಬಿಡು. ನಿನಗೆ ಮುಂದಾಗಿಯೇ ನಾನು ಅಲ್ಲಿ ಬಂದಿರುವೆನು. ಅಲ್ಲಿ ನಿನ್ನ ಇಷ್ಟದಂತೆ ನಿನ್ನ ವಶಳಾಗಿರುವೆನು. ಇದರಲ್ಲಿ ಸಂದೇಹವಿಲ್ಲ," ಎಂದಳು. ಅದಕ್ಕಾ ಕೀಚಕನು "ಭದ್ರೆ! ನೀನು ಹೇಳಿದಂತೆಯೇ ನಡೆಸುವೆನು. ನಾನೊಬ್ಬನೇ ನಿನ್ನ ಸಮಾಗಮಕ್ಕಾಗಿ ಆ ನಾಟ್ಯಶಾಲೆಗೆ ಬರುವೆನು. ನನ್ನ ಸತ್ಯದಮೇಲೆ ಆಣೆಯಿಟ್ಟು ಹೇಳುವೆನು ಕೇಳು. ಗಂಧರ್ವರಿಗೆ ನೀನು ಬಂದ ಸಂಗತಿಯು ತಿಳಿಯದ ಹಾಗೆಯೇ ನಡೆದುಕೊಳ್ಳುವೆನು. ಸತ್ಯವಾಗಿ ಹೇಳುವೆನು. ಗಂಧರ್ವರಿಂದ ನಿನಗೇನೂ ಭಯವಿರದು. ಇನ್ನು ನಾನು ಹೋಗಿ, ನಿನ್ನ ಸಮಾಗಮಯೋಗ್ಯವಾದ ಅಲಂಕಾರಗಳನ್ನು ಮಾಡಿಕೊಂಡು ಬರುವೆನು. ನಿನಗೂ

ಮನೋಹರಗಳಾದ ವಿಚಿತ್ರವಸ್ತುಗಳನ್ನು ತರುವೆನು. ಎಲೆ ಭಾಮಿನಿ! ಹೆಚ್ಚೇಕೆ? ಇನ್ನುಮೇಲೆ ನೀನು ನನ್ನನ್ನು ಎಂದೆಂದಿಗೂ ಬಿಟ್ಟುಹೋಗದ ಹಾಗೆ, ನಿನ್ನನ್ನು ಸಂತೋಷಗೊಳಿಸಿ, ನಾನೂ ನಿನ್ನೊಡನೆ ಸುಖಪಡುವೆನು," ಎಂದನು. ಅದನ್ನು ಕೇಳಿ ದ್ರೌಪದಿಯು, "ಓ ಸೂತಾ! ಹಾಗಿದ್ದರೆ ನಾನೂ ನಿನಗೆ, ನೀನು ಹುಟ್ಟಿದುದು ಮೊದಲು ಯಾವಾಗಲೂ ಅನುಭವಿಸಿ ಕಾಣದ ಸುಖವನ್ನು ತೋರಿಸುವೆನು," ಎಂದಳು. ಎಲೈ ಜನಮೇಜಯ ರಾಜನೆ ಕೇಳು! ಹೀಗೆ ಅನ್ಯೋನ್ಯವಾಗಿ ಮಾತಾಡುತ್ತಿದ್ದ ದ್ರೌಪದಿಗೂ, ಕೀಚಕನಿಗೂ, ಆ ಒಂದು ಕ್ಷಣಕಾಲವೇ ಒಂದು ತಿಂಗಳಿಗೆ ಸಮಾನವಾಗಿ ತೋರಿತು. ಕೀಚಕನು ಮಿತಿಮೀರಿದ ಸಂತೋಷವಲ್ಲಿ ಮುಳುಗಾಡುತ್ತ ತನ್ನ ಮನೆಗೆ ಬಂದನು. ತನ್ನ ಮೃತ್ಯುದೇವತೆಯೇ ಸೈರಂಧ್ರೀರೂಪದಿಂದ ಬಂದು ತನ್ನನ್ನು ಕರೆಯುತ್ತಿದೆಯೆಂಬುದನ್ನು ಆ ಮೂಢನು ತಿಳಿದುಕೊಳ್ಳಲಿಲ್ಲ. ಕಾಮವಿಮೋಹಿತನಾದ ಆತನು ಗಂಧಪುಷ್ಪಾದಿಗಳಿಂದಲೂ, ಆಭರಣಗಳಿಂದಲೂ ವಿಶೇಷವಾಗಿ ತನ್ನ ದೇಹವನ್ನಲಂಕರಿಸಿಕೊಳ್ಳುವುದರಲ್ಲಿಯೇ ಆತುರವುಳ್ಳವನಾಗಿದ್ದನು. ಆತನು ವಿಶಾಲಾಕ್ಷಿಯಾದ ಆ ದ್ರೌಪದಿಯನ್ನೇ ಎಡೆಬಿಡದೆ ಮನಸ್ಸಿನಲ್ಲಿ ಧ್ಯಾನಿಸುತ್ತ, ಅಲಂಕಾರಕಾರ್ಯಗಳನ್ನೆಲ್ಲ ಆತುರದಿಂದ ಮಾಡಿಕೊಳ್ಳುತ್ತಿದ್ದರೂ, ಆ ಸ್ವಲ್ಪಕಾಲವೇ ಅವನಿಗೆ ಅತಿದೀರ್ಘವಾಗಿ ಕಂಡುಬಂದಿತು. ದೀಪವು ನಂದಿಹೋಗುವಕಾಲದಲ್ಲಿ ಬತ್ತಿಗೆ ಉರಿಹಿಡಿದು, ಹೆಚ್ಚು ಪ್ರಕಾಶವನ್ನು ತೋರಿಸುವಂತೆ, ಸಮಸ್ತ ಭಾಗ್ಯವನ್ನೂ ಕಳೆದುಕೊಂಡು ಸಾಯುವುದಕ್ಕೆ ಸಿದ್ಧನಾಗಿದ್ದ ಆ ಕೀಚಕನಿಗೆ ಆಗಿನ ಅಲಂಕಾರಗಳು ಒಂದು ಅಪೂರ್ವ ಶೋಭೆಯನ್ನುಂಟುಮಾಡಿದುವು. ಕಾಮಾಂಧನಾದ ಕೀಚಕನು, ದ್ರೌಪದಿಯ ಮಾತಿನಲ್ಲಿ ದೃಢವಾದ ನಂಬಿಕೆಯನ್ನಿಟ್ಟು, ತನಗೆ ಮುಂದೆ ಬರುವ ಅಧಃಪತನವನ್ನು ತಿಳಿಯದಾದನು. ಇಷ್ಟರಲ್ಲಿ ಇತ್ತಲಾಗಿ ದ್ರೌಪದಿಯಾದರೋ, ಅಡಿಗೆಯಮನೆಯಲ್ಲಿದ್ದ ಭೀಮಸೇನನ ಬಳಿಗೆ ಬಂದು ಸೇರಿದಳು. ಮುಂಗಳಸ್ವರೂಪಿಣಿಯಾದ ಆ ದ್ರೌಪದಿಯು ಭೀಮನನ್ನು ನೋಡಿ "ಓ ಪರಂತಪಾ! ನೀನು ಹೇಳಿದಂತೆಯೇ ನಾಟ್ಯಶಾಲೆಗೆ ಬಂದು ಸೇರುವಹಾಗೆ ಕೀಚಕನಿಗೆ ಹೇಳಿಬಂದಿರುವೆನು. ಕಾಮದಿಂದ ಸೆಳೆಯಲ್ಪಟ್ಟು, ಕಾಲಪಾಶದಿಂದ ಬದ್ಧನಾದ ಆ ನೀಚನು,

ರಾತ್ರಿ ಯಾರೂ ಇಲ್ಲದವೇಳೆಗೆ ನರ್ತನಾಗಾರಕ್ಕೆ ತಾನೊಬ್ಬನೇ ಒಂಟಿಯಾಗಿ ಬರುವನು. ಓ ಮಹಾಬಾಹೂ! ಅಲ್ಲಿ ನೀನು ಅವನನ್ನು ಕೊಂದುಬಿಡು. ನೀನು ಆ ಸಮಯಕ್ಕೆ ನಾಟ್ಯಶಾಲೆಗೆ ಹೋಗಿ ಮದೋದ್ಧತನಾದ ಕೀಚಕನನ್ನು ನಿರ್ಜೀವನನ್ನಾಗಿ ಮಾಡು. ಆ ಸೂತಪುತ್ರನು ಬಹಳ ಗರ್ವಿಷ್ಠನು. ಗಂಧರ್ವರನ್ನೂ ಅವನು ಲಕ್ಷ್ಯಮಾಡುವವನಲ್ಲ. ಯುದ್ಧದಲ್ಲಿ ನಿಪುಣನಾದ ನೀನು, ಮದದಾನೆಯು ತಾವರೆಯ ದಂಟನ್ನು ಕಿತ್ತೆಸೆಯುವಂತೆ ಅವನನ್ನು ನಿಗ್ರಹಿಸು. ಓ ಭರತಶ್ರೇಷ್ಠಾ! ದುಃಖದಿಂದ ಕುಗ್ಗಿದ ನನ್ನ ಕಣ್ಣೀರನ್ನೊರೆಸುವನಾಗು. ಈಗ ನೀನು ನಿನ್ನ ಬಾಹುವೀರ್ಯಕ್ಕೆ ತಕ್ಕ ಪರಾಕ್ರಮವನ್ನು ತೋರಿಸಿ, ನಿನಗೂ, ನಿನ್ನ ಕುಲಕ್ಕೂ ಮಾನವನ್ನು ತರುವನಾಗು. ನಿನಗೆ ಮಂಗಳವಾಗಲಿ” ಎಂದಳು.

ಆಗ ಭೀಮನು ದ್ರೌಪದಿಯನ್ನು ನೋಡಿ “ಎಲೆ ಪ್ರಿಯೆ! ನನಗೆ ಪ್ರಿಯವಾದ ವೃತ್ತಾಂತವನ್ನು ತಿಳಿಸಿದೆ. ನಿನಗೆ ಸುಖಾಗಮನವು. ಈಗಿನ ಕೆಲಸಕ್ಕಾಗಿ ನಾನೇನೂ ಸ್ವಲ್ಪವಾದರೂ ಸಹಾಯವನ್ನಪೇಕ್ಷಿಸುವವನಲ್ಲ. ಕೀಚಕನನ್ನು ಸಂಧಿಸುವ ವಿಷಯದಲ್ಲಿ ನನಗೆ ಪ್ರಿಯವನ್ನುಂಟುಮಾಡಿದೆ. ಹಿಂದೆ ಹಿಡಿಂಬನನ್ನು ಕೊಂದಾಗ ನನಗುಂಟಾದ ಉಲ್ಲಾಸವೇ ಈಗ ಕೀಚಕನೊಡನೆ ಯುದ್ಧಮಾಡುವುದರಲ್ಲಿ ಉಂಟಾಗುವುದು. ಎಲೆ ದೇವಿ! ನನ್ನ ಅಣ್ಣತಮ್ಮಂದಿರ, ಮತ್ತು ನನ್ನ ಸತ್ಯದಮೇಲೆ ಆಣೆಯಿಟ್ಟು ಶಪಥಮಾಡುವೆನು. ಹಿಂದೆ ದೇವೇಂದ್ರನು ವೃತ್ರನನ್ನು ಕೊಂದಹಾಗೆ ಆ ಕೀಚಕನನ್ನು ಕೊಲ್ಲುವೆನು. ಕೃಷ್ಣನು ಕೇಶಿಯನ್ನು ಕೊಂದಹಾಗೆ ಅವನನ್ನು ಬಲಾತ್ಕಾರದಿಂದ ಹಿಡಿದು ಕೊಲ್ಲುವೆನು. ರಹಸ್ಯವಾಗಿಯೋ, ಬಹಿರಂಗವಾಗಿಯೋ ಈ ರಾತ್ರಿ ಆ ಕೀಚಕನನ್ನು ಕೊಲ್ಲುವುದು ಸತ್ಯವು. ಒಂದುವೇಳೆ ನಾನು ಕೀಚಕನನ್ನು ಕೊಂದ ವೃತ್ತಾಂತವು ಈ ಮತ್ಸ್ಯದೇಶದ ಜನರಿಗೆ ತಿಳಿದುಹೋದರೆ, ಆಗ ದೇಶವನ್ನೇ ನಿರ್ಮಾನುಷ್ಯವನ್ನಾಗಿ ಮಾಡಿಬಿಡುವೆನು. ಇದರಮೇಲೆ, ಎಲೆ ಕಾಂತೆ! ನಾನು ಮತ್ಸ್ಯದೇಶದ ಜನರನ್ನು ಕೊಂದ ಸಂಗತಿಯು ಒಂದು ವೇಳೆ ದುರ್ಯೋಧನನಿಗೆ ತಿಳಿದರೂ, ಆಗ ಅವನನ್ನೂ ಅವನ ಬಂಧುಮಿತ್ರಪರಿಜನರೊಡನೆ ಕೊಂದು, ಕೌರವರಾಜ್ಯವೆಲ್ಲವನ್ನೂ

ಆಗಲೇ ನಾನು ಕೈವಶಮಾಡಿಕೊಳ್ಳುವೆನೆಂದು ತಿಳಿ. ಎಲೆ ಯಾಜ್ಞಸೇನಿ! ಇನ್ನುಮೇಲೆ ನಾನು ಆ ಯುಧಿಷ್ಠಿರನನ್ನು ಅನುಸರಿಸಿ ನಡೆಯಲಾರೆನು. ಅವನು ತನಗೆ ಇಷ್ಟಬಂದಂತೆ ಸತ್ಯಕ್ಕೆ ಕಟ್ಟುಬಿದ್ದು ನಡೆದುಕೊಳ್ಳಲಿ! ಅವನಲ್ಲಿ ವಿಶ್ವಾಸವುಳ್ಳ ಇತರರೂ ತಮ್ಮ ಇಷ್ಟದಂತೆ ಧರ್ಮಕ್ಕೆ ಕಟ್ಟುಬಿದ್ದು ಅವನನ್ನು ಹಿಂಬಾಲಿಸಿ ಹೋಗಲಿ! ಆದರೆ ಇಂತಹ ಮಹಾ ಸಂಕಟದಲ್ಲಿ ಸಿಕ್ಕಿಬಿದ್ದಿರುವ ನಿನ್ನನ್ನು ನೋಡಿ ಎಷ್ಟುಮಾತ್ರಕ್ಕೂ ನಾನು ಉದಾಸೀನನಾಗಿರಲಾರೆನು. ಎಲೆ ಪಾಂಚಾಲಿ! ಇನ್ನುಮೇಲೆ ನೀನು ನೆಮ್ಮದಿಯಿಂದಿರು. ಕೀಚಕನನ್ನು ವಧಿಸಿದಂತೆಯೇ ತಿಳಿ,'' ಎಂದನು.

ಆಗ ದ್ರೌಪದಿಯು ''ಕಾಂತಾ! ಒಂದುವೇಳೆ ನೀನು ಕೀಚಕನನ್ನು ಕೊಂದ ಸಂಗತಿಯು ಇಲ್ಲಿನ ಪುರಜನರಿಗೆ ತಿಳಿದುಹೋದರೆ, ಆಮೇಲೆ ನಾನು ಬದುಕಿರುವುದಕ್ಕೆ ಸಾಧ್ಯವಿಲ್ಲ. ಇದಲ್ಲದೆ ನನಗಾಗಿ ರಾಜನಾದ ಯುಧಿಷ್ಠಿರನು ಸತ್ಯಭ್ರಷ್ಟನಾಗದಂತೆ ನೀನು ಈ ರಾತ್ರಿ ಯಾರಿಗೂ ತಿಳಿಯದಂತೆಯೇ ಕೀಚಕನನ್ನು ಕೊಲ್ಲಬೇಕು. ಈ ಸಂಗತಿಯು ಕೌರವರಿಗೇನಾದರೂ ತಿಳಿದರೆ, ತಿರುಗಿ ಯುಧಿಷ್ಠಿರನು ತನ್ನ ತಮ್ಮಂದಿರೊಡನೆ ಕಾಡಿಗೆ ಹೋಗಿಸೇರಬೇಕಾಗಿ ಬರುವುದು. ಎಲೈ ಭರತಶ್ರೇಷ್ಠನೇ! ಧರ್ಮವನ್ನೇ ಮುಖ್ಯವಾಗಿ ನಂಬಿರುವ ಜ್ಯೇಷ್ಠಸಹೋದರರನ್ನು ಅತಿಕ್ರಮಿಸಿ ನಡೆಯುವುದು ಎಂಥವರಿಗೂ ಯೋಗ್ಯವಲ್ಲ. ನಿನ್ನ ಪ್ರಯತ್ನವು ಎಲ್ಲಿ ಹೊರಬೀಳುವುದೋ ಎಂದು ನಾನು ಬಹಳ ಭಯಪಡುತ್ತಿರುವೆನು. ಆದುದರಿಂದ ನೀನು ಬಹಳ ಆಗ್ರಹವನ್ನು ಹೊರಕ್ಕೆ ಕಾಣಿಸಬಾರದು. ನೀನು ಸೂತಪುತ್ರನನ್ನು ಕೊಂದುದು ಯಾರಿಗೂ ತಿಳಿಯದಂತೆ ನಡೆಸು. ಓ ಪರಂತಪಾ! ಯಾರ ಕಣ್ಣಿಗೂ ಬೀಳದಂತೆ ನೀನು ಹೋಗಿ ಆ ಕೀಚಕನ ಪ್ರಾಣಗಳನ್ನು ನೀಗಿಸು,'' ಎಂದಳು.

ಇದು ಇಪ್ಪತ್ತೈದನೆಯ ಅಧ್ಯಾಯವು.

ಕೀಚಕನು ಬರುವುದಕ್ಕೆ ಮುಂದಾಗಿಯೇ ಭೀಮನು ನಾಟ್ಯಶಾಲೆಗೆ ಬಂದು, ಅಲ್ಲಿನ ಹಾಸಿಗೆಯಮೇಲೆ ಮಲಗಿದ್ದುದು. ದ್ರೌಪದಿಯೆಂದು ತಿಳಿದು ಕೀಚಕನು ಭೀಮನ ಮೈಯನ್ನು ಮುಟ್ಟಿ ಮಾತಾಡಿಸಿದುದು. ಭೀಮನು ಕೀಚಕನನ್ನು ಹಿಡಿದು ಕೊಂದುದು. ಉಪಕೀಚಕರು ಅಲ್ಲಿಗೆ ಬಂದುದು.

ಆಗ ಭೀಮನು ದ್ರೌಪದಿಯನ್ನು ಕುರಿತು "ಎಲೆ ಭೀರು! ನೀನೇಕೆ ಹೆದರುವೆ? ನೀನು ಹೇಳಿದಂತೆಯೇ ನಡೆಸುವೆನು. ಯಾರಿಗೂ ತಿಳಿಯದಂತೆ ಹೋಗಿ, ಆನೆಯು ಬಿಲ್ವದ ಕಾಯನ್ನು ನೆಗ್ಗುವಂತೆ, ದುರ್ಲಭೆಯಾದ ನಿನ್ನನ್ನು ಬಯಸಿದ ದುರಾತ್ಮನಾದ ಕೀಚಕನ ತಲೆಯನ್ನು ಕುಂಡಲಸಹಿತವಾಗಿ ಕಿತ್ತು ನೆಗ್ಗಿಬಿಡುವೆನು. ಎಲೆ ಪಾಂಚಾಲಿ! ಅಣ್ಣನಾದ ಧರ್ಮರಾಜನ ವಿಷಯವಾಗಿ ಈಗ ನಾನು ಆಡಿದ ಮಾತುಗಳು, ಕೇವಲ ಕೋಪಾನೇಶದಿಂದಲೇಹೊರತು ಮನಃಪೂರ್ವಕವಾದುದಲ್ಲ. ಯಾವನುತಾನೇ ಅಂತಹ ಮಹಾತ್ಮನಾದ ರಾಜನ ಮಾತನ್ನು ಮೀರಿಹೋಗುವನು" ಎಂದನು.

ಓ ಜನಮೇಜಯರಾಜೇಂದ್ರನೆ ಕೇಳು! "ಮಹಾಬಾಹುವಾದ ಭೀಮನು ಹೀಗೆಂದು ಹೇಳಿದಮೇಲೆ, ಅರ್ಧರಾತ್ರಿಯಲ್ಲಿ ಮೇಲೆದ್ದು, ಬಿಳುಪಾದ ಒಂದು ನವಿರುಬಟ್ಟೆಯನ್ನು ಮೈಮೇಲೆ ಹೊದೆದುಕೊಂಡು, ದ್ರೌಪದಿಯನ್ನೂ ತನ್ನ ಹಿಂದೆಯೇ ಕರೆದುಕೊಂಡು ನಾಟ್ಯಶಾಲೆಗೆ ಹೊರಟನು. ಹೀಗೆ ಭೀಮನು ಆ ರಾತ್ರಿ ಕತ್ತಲೆಯಲ್ಲಿ ಕೀಚಕನು ಬರುವುದಕ್ಕೆ ಮೊದಲೇ, ನಾಟ್ಯಶಾಲೆಯನ್ನು ಪ್ರವೇಶಿಸಿ, ಕಾಡಿನಲ್ಲಿ ಸಿಂಹವು ಮೃಗಕ್ಕಾಗಿ ಹೊಂಚುಹಾಕುವಂತೆ, ಅದೃಶ್ಯನಾಗಿ ಕೀಚಕನು ಬರುವುದನ್ನೇ ನಿರೀಕ್ಷಿಸುತ್ತಿದ್ದನು.

ಇತ್ತಲಾಗಿ ಕೀಚಕನಾದರೋ, ಆ ರಾತ್ರಿ ತಲೆಗೆ ಸ್ನಾನಮಾಡಿ, ಚೆನ್ನಾಗಿ ದೇಹವನ್ನಲಂಕರಿಸಿಕೊಂಡು, ಅತ್ಯಾತುರದಿಂದ ಹೊರಟು, ಬಾಗಿಲುತೆರೆದು, ಜನಶೂನ್ಯವಾಗಿದ್ದ ನಾಟ್ಯಶಾಲೆಗೆ ಬಂದು ಸೇರಿದನು. ಕಾಮಮೋಹಿತನಾದ ಆ ಕೀಚಕನು, ತನಗಾಗಿ ಸೈರಂಧ್ರಿಯು ಆ ಸಂಕೇತ

ಸ್ಥಳಕ್ಕೆ ಮುಂದಾಗಿಯೇ ಬಂದು ಕಾದಿರುವಳೆಂದು ನಂಬಿ, ಸಂತೋಷದಿಂದ ನಾಟ್ಯಶಾಲೆಯೊಳಕ್ಕೆ ಪ್ರವೇಶಿಸಿದನು. ಮೂಢನಾದ ಕೀಚಕನು, ಆ ನಾಟ್ಯಶಾಲೆಯಲ್ಲಿದ್ದ ಮಂಚದಮೇಲೆ ತನಗೆ ಮುಂದಾಗಿಯೇ ಬಂದು ಮಲಗಿದ್ದ ಭೀಮನನ್ನು ದ್ರೌಪದಿಯೆಂದು ತಿಳಿದು, ತನ್ನ ಮೃತ್ಯುವನ್ನು ತಾನೇ ತಟ್ಟಿ ಎಬ್ಬಿಸುವಂತೆ ಕೈಯಿಂದ ಮುಟ್ಟಿದನು. ಅಪ್ರತಿಮಪ್ರತಾಪನೂ, ಬಲದರ್ಪಿತನೂ ಆದ ಭೀಮನು, ದ್ರೌಪದಿಗೆ ಉಂಟಾದ ಅವಮಾನಕ್ಕಾಗಿ ಮೊದಲೇ ಕೋಪದಿಂದುರಿಯುತ್ತಿರುವಾಗ, ಕೀಚಕನು ಕಾಲಪ್ರೇರಿತನಾಗಿ ಬಂದು, ಏಕಾಂತದಲ್ಲಿ ಭೀಮನನ್ನು ಸಮಿಾಪಿಸಿ, ದ್ರೌಪದಿಯು ತನ್ನ ಕೈವಶಳಾದಳೆಂಬ ಸಂತೋಷದಿಂದ ಮೈಮರೆತು, ಮಂದಹಾಸಪೂರ್ವಕವಾಗಿ ಹೀಗೆಂದು ಹೇಳುವನು.

.

"ಎಲೆ ಕಲ್ಯಾಣಿ! ಎಲೆ ಶುಚಿಸ್ಮಿತೆ! ನಿನಗಾಗಿ ನಾನು ಆಷ್ಟೊಂದು ಧನವನ್ನು ಕಳುಹಿಸಿರುವೆನು. ಅವೆಲ್ಲವೂ ನಿನಗೇ ಇರಲಿ! ಎಲೆ ಸುಂದರಿ! ನೀನಾಗಿ ನನ್ನನ್ನು ಕಾಮಿಸಿ ಬಂದಿರುವೆ! ಆದುದರಿಂದ ನನ್ನ ಮನೆಯೊಳಗಿನ ಸ್ತ್ರೀಯರೆಲ್ಲರೂ ನನ್ನನ್ನು ನೋಡಿ, "ನೀನು ಮಹಾಬಲಶಾಲಿ! ನೀನು ಪರಮಸುಂದರನು! ನಿನಗೆ ಸಮಾನನಾದ ಪುರುಷನು ಬೇರೊಬ್ಬನಿಲ್ಲ"ವೆಂದು ನನ್ನನ್ನು ಯಾವಾಗಲೂ ಹೊಗಳುವರು. ಓ ಕಮಲಾಕ್ಷೀ! ನಾನಾದರೂ ಸಾಮಾನ್ಯನೆ! ಸಹಜವಾಗಿಯೇ ಸುಂದರನು. ಇದರಮೇಲೆ ಮಂಗಳಸ್ನಾನವನ್ನು ಮಾಡಿ ಬಂದಿರುವೆನು. ವಿಶೇಷವಾಗಿ ದೇಹವನ್ನಲಂಕರಿಸಿಕೊಂಡಿರುವೆನು. ಸ್ತ್ರೀಯರನ್ನು ವಶಮಾಡಿಕೊಳ್ಳುವುದರಲ್ಲಿ ನನಗೆ ಚಾತುರ್ಯವುಂಟು. ಆದುದರಿಂದ ನಾನು ಯಾವಾಗಲೂ ಸ್ತ್ರೀಯರಿಗೆ ಪ್ರಿಯನೆನಿಸಿರುವೆನು. ನನ್ನ ಅನುಪಮ ಸೌಂದರ್ಯಕ್ಕೆ ಈಗಲೇ ತಕ್ಕ ಫಲವನ್ನು ಕಂಡಂತಾಯಿತು" ಎಂದನು. ಭೀಮನು ಈ ಮಾತುಗಳೆಲ್ಲವನ್ನೂ ಕೇಳಿ, ಆದಕ್ಕೆ ಪ್ರತ್ಯುತ್ತರವಾಗಿ ಕೀಚಕನನ್ನು ಕುರಿತು "ಓ ಸೂತಪುತ್ರಾ! ನೀನು ಹೇಳಿದುದು ನಿಜವೇ! ಅದೃಷ್ಟವಶದಿಂದ ನೀನು ಇಷ್ಟು ಸುಂದರನಾಗಿರುವೆ. ಭಾಗ್ಯವಶದಿಂದಲೇ ನಿನ್ನನ್ನು ನೀನೇ ಹೀಗೆ ಹೊಗಳುವಂತಾಗಿದೆ. ನಿನ್ನ ಸಂಗತಿಯು ಹಾಗಿರಲಿ! ರೂಪದಲ್ಲಿ

ಯೂ, ಗುಣದಲ್ಲಿಯೂ, ಶೀಲದಲ್ಲಿಯೂ ನನ್ನಂತಿರುವ ಸ್ತ್ರೀಯನ್ನು ನೀನೂ ಇದುವರೆಗೆ ನೋಡಿರಲಾರೆ. ನೀನು ನನ್ನ ರೂಪವನ್ನು ನೋಡಿದರೆ ಆಗ ನಿನಗೇ ತಿಳಿಯುವುದು. ಈ ಹೆಂಗಸು ಎಂತಹ ಗುಣವತಿಯೆಂಬುದು ಇನ್ನು ಒಂದು ಮುಹೂರ್ತಕಾಲದಲ್ಲಿ ನಿನಗೆ ತಿಳಿಯುವುದು. ನಿನ್ನ ಇಷ್ಟ ಬಂದಹಾಗೆ ನೀನು ರಮಿಸಬಹುದು. ನನ್ನನ್ನು ಸ್ಪರ್ಶಿಸಿ ನೋಡು. ಇಂತಹ ಅಪೂರ್ವವಾದ ಹೆಂಗಸಿನ ಆಂಗಸ್ಪರ್ಶಸುಖವನ್ನು ನೀನು ಹಿಂದೆ ಯಾವಾಗಲೂ ಅನುಭವಿಸಿರಲಾರೆ. ನೀನು ರಸಿಕನೆಂಬುದೂ ನಿಜವೇ! ನನ್ನ ಸ್ಪರ್ಶಸುಖವೆಂತದೆಂದು ನೀನು ಬೇಗನೆ ತಿಳಿಯುವೆ. ನೀನು ಕಾಮಶಾಸ್ತ್ರ ವಿಧಿಗಳಲ್ಲಿ ಸಮರ್ಥನು. ಸ್ತ್ರೀಯರಿಗೆ ಪರಮಪ್ರಿಯನು. ನಿನಗೆ ಸಮಾನನಾದ ಪುರುಷನು ಬೇರೊಬ್ಬನಿಲ್ಲ'' ಎಂದನು. ಹೀಗೆ ಭೀಮನು ವ್ಯಂಗ್ಯವಾದ ಪ್ರಿಯವಾಕ್ಯಗಳನ್ನು ಹೇಳುತಿದ್ದಹಾಗೆಯೇ ಹಾಸಿಗೆಯನ್ನು ಬಿಟ್ಟೆದ್ದು, ಒಂದಾವರ್ತಿ ದೊಡ್ಡ ಅಟ್ಟಹಾಸವನ್ನು ಮಾಡಿ ''ಎಲ ದುರಾತ್ಮಾ! ಸಿಂಹವು ದೊಡ್ಡ ಆನೆಯನ್ನು ಹಿಡಿದೆಳೆಯುವಂತೆ, ಪರ್ವತದಂತಿರುವ ನಿನ್ನನ್ನು ಎಳೆದುಬಿಸಾಡುವುದನ್ನು ನಿನ್ನ ಸಹೋದರಿಯು ನೋಡಲಿ! ನೀನು ಹತನಾದಮೇಲೆ ಸೈರಂಧ್ರಿಯು ನಿರ್ಭಯವಾಗಿ ಯಾವ ಅಡ್ಡಿಯೂ ಇಲ್ಲದೆ ಸಂಚರಿಸುತ್ತಿರಲಿ! ಆ ಸೈರಂಧ್ರಿಯ ಪತಿಗಳೂ ಇನ್ನುಮೇಲೆ ನಿಶ್ಚಿಂತರಾಗಿ ತಿರುಗುವರು'' ಎಂದು ಹೇಳಿ, ಪುಷ್ಪಗಳಿಂದಲಂಕೃತವಾಗಿ ಸುವಾಸನೆಯಿಂದ ಘಮಘಮಿಸುತ್ತಿದ್ದ ಆ ಕೀಚಕನ ತಲೆಕೂದಲಿಗೆ ಕೈಯಿಕ್ಕಿ ಝಾಡಿಸಿ ಎಳೆದನು. ಆಗ ಭೀಮನು ಮಾಂಸಾಶೆಯಿಂದ ಒಂದು ಮಹಾ ಸಿಂಹವು ಕ್ಷುದ್ರಮೃಗವನ್ನು ಹಿಡಿದೆಳೆಯುವಂತೆ ಕಾಣುತ್ತಿದ್ದನು. ಕೀಚಕನೂ ಬಲಾಢ್ಯನಾದುದರಿಂದ, ಭೀಮನು ಹಿಡಿದಿದ್ದ ತಲೆಕೂದಲನ್ನು ಬಿಡಿಸಿಕೊಂಡು, ಭೀಮನನ್ನು ತನ್ನ ಕೈಯಿಂದ ಹಿಡಿದುಕೊಂಡನು. ವಸಂತ ಕಾಲದಲ್ಲಿ ಒಂದು ಹೆಣ್ಣಾನೆಗಾಗಿ ಎರಡು ಗಂಡಾನೆಗಳು ಹೋರಾಡುವಂತೆ, ಪೌರುಷದಲ್ಲಿ ಪ್ರಖ್ಯಾತರಾದ ಭೀಮಕೀಚಕರಿಬ್ಬರಿಗೂ ಬಾಹುಯುದ್ಧವು ಆರಂಭವಾಯಿತು. ಪೂರ್ವದಲ್ಲಿ ವಾನರಶ್ರೇಷ್ಠರಾದ ವಾಲಿಸುಗ್ರೀವರಿಬ್ಬರಿಗೂ ಯುದ್ಧವು ನಡೆದಂತೆ, ಪುರುಷಶ್ರೇಷ್ಠನಾದ ಭೀಮನಿಗೂ, ಸೂತಪುತ್ರರಲ್ಲಿ ಪ್ರಧಾನನೆನಿಸಿದ ಕೀಚಕನಿಗೂ ಪ್ರಬಲಯುದ್ಧವು ಪ್ರವರ್ತಿಸಿತು.

ಅವರಿಬ್ಬರೂ ಹುಲಿಗಳಂತೆ ಗರ್ಜಿಸುತ್ತ, ಗರುಡನು ಹಾವನ್ನು ಹಿಡಿಯುವಂತೆ ಒಬ್ಬರನ್ನೊಬ್ಬರು ಹಿಡಿಯಲು ಪ್ರಯತ್ನಿಸುತ್ತಿದ್ದರು. ಇಬ್ಬರೂ ಸಮಾನಬಲವುಳ್ಳವರು! ಇಬ್ಬರೂ ಸಮಾನವಾನ ಆಕ್ರೋಶವುಳ್ಳವರು! ಇಬ್ಬರೂ ಜಯಾಶೆಯಿಂದ ಹೋರಾಡುತ್ತ, ಇಬ್ಬರೂ ಒಮ್ಮೊಮ್ಮೆ ಕೆಳಗೆ ಬೀಳುವರು! ಮತ್ತೇರಿದ ಮಹಾಗಜಗಳಂತೆಯೂ, ವಪ್ರಕ್ರೀಡೆಯಿಂದಾಡುತ್ತಿರುವ ಮಹಾವೃಷಭಗಳಂತೆಯೂ ಸಮಾನಬಲವುಳ್ಳ ಅವರಿಬ್ಬರೂ ಕೋಪದಿಂದ ಗರ್ಜಿಸುತ್ತಿರುವರು. ಹೀಗೆ ಹೋರಾಡುತ್ತ ಇಬ್ಬರೂ ಕೆಳಗೆ ಬಿದ್ದಾಗ, ಭೀಮನು ಸ್ವಲ್ಪ ದಣಿದು, ಕೋಪದಿಂದ ತಲೆಬಗ್ಗಿಸಿ ನಿಂತಿರುವ ಸಮಯವನ್ನು ನೋಡಿ ಕೀಚಕನು ಅವನನ್ನು ಮೊಳಕಾಲಿನಿಂದ ಗುದ್ದಿ ನೆಲಕ್ಕೆ ಕೆಡಹಿದನು. ಆದರೇನು? ಒಡನೆಯೇ ಭೀಮನು ದಂಡಾಹತವಾದ ಸರ್ಪದಂತೆ ವೇಗದಿಂದ ಮೇಲಕ್ಕೆಗರಿದನು. ಬಲದರ್ಪಿತರಾದ ಆ ಭೀಮಕೀಚಕರಿಬ್ಬರೂ ತಿರುಗಿ ಕೈಕಲೆತರು. ಒಬ್ಬರನ್ನೊಬ್ಬರು ಜಯಿಸಬೇಕೆಂಬ ಆಗ್ರಹದಿಂದ, ನಿಶ್ಶಬ್ದವಾಗಿ ಒಬ್ಬರನ್ನೊಬ್ಬರು ಹಿಡಿದು ಎಳೆದಾಡುತ್ತಿದ್ದರು. ಇವರ ಎಳೆದಾಟದಿಂದ ಆ ನಾಟ್ಯಶಾಲೆಯೇ ಮೊತ್ತಕ್ಕೆ ನಡುಗುವಂತಾಯಿತು. ಅವರಿಬ್ಬರೂ ಮುಷ್ಟಿಗಳಿಂದ ಒಬ್ಬರನ್ನೊಬ್ಬರು ಅಪ್ಪಳಿಸುತ್ತಿದ್ದರು. ಆಗ ಭೀಮನು ತನ್ನ ಎರಡು ಅಂಗೈಗಳಿಂದಲೂ ಕೀಚಕನ ಎದೆಯಮೇಲೆ ರೋಷದಿಂದ ಅಪ್ಪಳಿಸಿದನು. ಕೀಚಕನಿಗೆ ಅತ್ಯಾಕ್ರೋಶದಿಂದ ಕಣ್ಣುಗಳು ಕೆಂಪೇರಿದುವು. ಆಗ ಅವನು, ಕೇವಲ ಭ್ರಾಂತನಂತೆ ಅತ್ತಿತ್ತ ಒಂದಡಿಯನ್ನಾದರೂ ಇಡದೆ ಇದ್ದಲ್ಲಿಯೇ ಸ್ತಬ್ಧವಾಗಿ ನಿಂತಿದ್ದನು. ಮಹಾವೇಗವುಳ್ಳ ಭೀಮನ ಪ್ರಹಾರವೇಗವನ್ನು ಕೀಚಕನು ತಡೆದುಕೊಳ್ಳಲಾರದಿದ್ದರೂ, ಹೇಗೋ ಮುಹೂರ್ತಕಾಲದಲ್ಲಿಯೇ ತಿರುಗಿ ಚೇತರಿಸಿಕೊಂಡನು. ಆದರೆ, ಮೇಲೆಮೇಲೆ ಭೀಮನ ಪೆಟ್ಟಿನಿಂದ ಕೀಚಕನ ಬಲವು ಕ್ರಮಕ್ರಮವಾಗಿ ಕುಂದುತ್ತ ಬಂದಿತು. ಆಗ ಬಲಾಢ್ಯನಾದ ಭೀಮನು, ಕೀಚಕನ ಬಲವು ಕುಂದುತ್ತಿರುವುದನ್ನು ನೋಡಿ ಪ್ರಜ್ಞೆತಪ್ಪಿದಂತಿದ್ದ ಆತನನ್ನು ವೇಗದಿಂದೆಳೆದು, ಅವನ ಎದೆಯಮೇಲೆ ಬಲವಾಗಿ ಗುದ್ದಿದನು. ಮೇಲೆಮೇಲೆ ಭೀಮನು ಕ್ರೋಧಾವೇಶದಿಂದ ಬುಸುಗುಟ್ಟುತ್ತ, ತಿರುಗಿ ಆ ಕೀಚಕನ ತಲೆಕೂದಲನ್ನು ಬಲವಾಗಿ ಹಿಡಿದು

ಕೊಳ್ಳಲು, ಆಗ ಕೀಚಕನು ಹಸಿದ ಹುಲಿಯ ಕೈಗೆ ಸಿಕ್ಕಿಬಿದ್ದ ಮೃಗದಂತೆ ಕಾಣಿಸಿದನು. ಇಷ್ಟಾದರೂ, ಬೇರೊಬ್ಬರಿಗೆ ತಾನು ದುರ್ಜಯನೆಂಬ ಬಲದಿಂದ ಕೊಬ್ಬಿದ ಕೀಚಕನು, ತಿರುಗಿ ಭೀಮನೊಡನೆ ಹೆಣಗಾಡತೊಡಗಿದನು. ಆಗ ಭೀಮನು ದೃಢಮುಷ್ಟಿಯಿಂದ ಅವನ ನೆತ್ತಿಯ ಮೇಲೆ ಬಲವಾಗಿ ಹೊಡೆದನು. ಆ ಪೆಟ್ಟನ್ನು ತಡೆದುಕೊಳ್ಳಲಾರದೆ, ಆ ಕೀಚಕನ ಕೆಂಪಾದ ಕಣ್ಣಾಲೆಗಳು ಗಿರಗಿರನೆ ತಿರುಗುತ್ತಿರಲು, ಪ್ರಾಣವನ್ನು ನೀಗಿ ನೆಲಕ್ಕೆ ಬಿದ್ದನು. ಆಗ ಭೀಮನು ಕೀಚಕನ ಶರೀರವನ್ನೆಲ್ಲ ಮರ್ದಿಸಿ, ಅವನ ಮುಖ, ಕೈ, ಕಾಲು, ಕಡುಕುಗಳ ಕಾಂತಿಯಿಂದ ಶೋಭಿಸುತ್ತಿರುವ ಅವನ ತಲೆ, ಮತ್ತು ಕಂಠ, ಮೊದಲಾದ ಅವಯವಗಳನ್ನೆಲ್ಲ ಅವನ ಹೊಟ್ಟೆಯೊಳಕ್ಕೆ ದೂಡಿ, ಅವನ ಶರೀರವನ್ನು ಒಂದೇ ಮಾಂಸದ ಮುದ್ದೆಯಂತೆ ಮಾಡಿಟ್ಟನು. ಒಡನೆಯೇ ಭೀಮನು ತಾನಾಗಿಯೇ ತನ್ನ ಕೈಗಳನ್ನು ಒಂದಕ್ಕೊಂದಕ್ಕೆ ತಿಕ್ಕುವುದರಿಂದ ಅಗ್ನಿಯನ್ನು ಹುಟ್ಟಿಸಿ, ಅದರ ಬೆಳಕಿನಲ್ಲಿ ದ್ರೌಪದಿಗೆ ಕೀಚಕನ ಸ್ಥಿತಿಯನ್ನು ತೋರಿಸುತ್ತ "ಪಾಂಚಾಲಿ! ನಿನ್ನನ್ನು ಕಾಮಿಸಿದ ಪಾಪಿ, ಪರಸ್ತ್ರೀಯರನ್ನು ಬಯಸುವ ದುರಾತ್ಮನ ಅವಸ್ಥೆಯು ಹೇಗಿದೆಯೆಂಬುದನ್ನು ನೋಡು. ಅವನು ನಿನ್ನನ್ನು ಕಾಮಿಸಿದುದಕ್ಕೆ ಇದೇ ಫಲವು. ಎಲೆ ಭೀರು! ಇನ್ನು ಮೇಲಾದರೂ ಯಾವನು ಶೀಲವತಿಯಾದ ನಿನ್ನನ್ನು ಕಾಮಿಸುವನೋ, ಅವನು ನಿನ್ನನ್ನು ಕಾಲಿಂದೊದೆದ ಈ ದುರಾತ್ಮನಂತೆಯೇ ಸತ್ತು ಮಲಗುವನೆಂದು ತಿಳಿ" ಎಂದನು.

ಭೀಮನು ಹೀಗೆಂದು ಹೇಳಿ, "ಕೀಚಕನು ಗಂಧರ್ವರಿಂದ ಹತನಾದನೆಂಬ ಸುದ್ದಿಯು ಜನರಲ್ಲಿ ಹರಡುವುದಕ್ಕಾಗಿ, ಆ ಯುದ್ಧರಂಗದಿಂದ ಆಗಲೇ ಹೊರಡಲುದ್ಯುಕ್ತನಾದನು. ಹೀಗೆ ಭೀಮನು ತನ್ನ ಕೋಪವನ್ನು ಕೀಚಕನ ಮೇಲೆ ಪೂರ್ಣವಾಗಿ ತೀರಿಸಿಕೊಂಡು, ದ್ರೌಪದಿಯ ಅನುಮತಿಯನ್ನು ಪಡೆದು, ಅಲ್ಲಿಂದ ಹೊರಟು, ಅಡಿಗೆಯ ಮನೆಗೆ ಬಂದು ಸೇರಿದನು. ಅಲ್ಲಿ ಚೆನ್ನಾಗಿ ಮೈತೊಳೆದು ಸ್ನಾನಮಾಡಿ, ಗಂಧಾನುಲೇಪನವನ್ನು ಮಾಡಿಕೊಂಡು, ತನ್ನ ಕೋರಿಕೆಯು ಕೈಗೂಡಿತೆಂದು ನೆಮ್ಮದಿಯಿಂದ ಹಾಸಿಗೆಯಮೇಲೆ ಸುಖವಾಗಿ ಕುಳಿತನು. ಇತ್ತಲಾಗಿ ದ್ರೌಪದಿಯು,

ತನ್ನ ಪ್ರಾಣಕಾಂತನಾದ ಭೀಮನು ಅಡಿಗೆಯಮನೆಗೆ ಹೋಗಿ ಸೇರಿದನೆಂದು ತಿಳಿದವಳಾಗಿ, ಮನಸ್ಸಿನಲ್ಲಿ ಸಂತೋಷಗೊಂಡು, ನಿರ್ಭಯಳಾಗಿ, ನಾಟ್ಯಶಾಲೆಯ ಕಾವಲುಗಾರರಿದ್ದಲ್ಲಿಗೆ ಬಂದು, "ಅಯ್ಯೋ! ಬನ್ನಿರಿ! ಎಲ್ಲರೂ ಬಂದು ನೋಡಿರಿ! ಕೀಚಕನು ನನ್ನ ಪತಿಗಳಾದ ಗಂಧರ್ವರಿಂದ ಹತನಾದನು. ಪರಸ್ತ್ರೀಯರಲ್ಲಿ ಕಾಮದಿಂದ ಕುದಿಯುತ್ತಿದ್ದ ಅವನ ಅವಸ್ಥೆಯೇನಾಗಿದೆಯೆಂಬುದನ್ನು ನೀವೆಲ್ಲರೂ ಬಂದು ನೋಡಬಾರದೆ?" ಎಂದು ಕೂಗಿಕೊಂಡಳು. ಈ ಮಾತನ್ನು ಕೇಳಿದೊಡನೆ ಕಾವಲುಗಾರರೆಲ್ಲರೂ, ಸಂಭ್ರಮದಿಂದ ಮೇಲೆದ್ದು, ಕೈಯಲ್ಲಿ ಕೊಳ್ಳಿಗಳನ್ನು ಹಿಡಿದು ನಾನಾಕಡೆಗಳಿಂದ ಬಂದರು. ಆಮೇಲೆ ಕೀಚಕನ ಸಹೋದರರೂ, ತಮ್ಮಣ್ಣನು ಹತನಾದ ಸುದ್ದಿಯನ್ನು ದ್ರೌಪದಿಯಿಂದಲೇ ಕೇಳಿ, ನಾಟ್ಯಶಾಲೆಗೆ ಬಂದು, ಅಲ್ಲಿ ನೆಲದಮೇಲೆ ರಕ್ತಮಯವಾಗಿ ಬಿದ್ದಿದ್ದ ಮೃತದೇಹವನ್ನು ಕಂಡರು. ಕೈ, ಕಾಲು, ತಲೆ, ಇವೊಂದೂ ಇಲ್ಲದೆ ಒಂದು ಮುಂಡವು ಮಾತ್ರ ಅಲ್ಲಿ ಬಿದ್ದಿರುವುದನ್ನು ನೋಡಿ, ಬೆಜ್ಜರಬಿದ್ದು ಒಬ್ಬರಿಗೊಬ್ಬರು "ಅಯ್ಯೋ ಇದೇನು? ಇವನ ತಲೆಯೆಲ್ಲಿ? ಕೈಕಾಲುಗಳೆಲ್ಲಿ? ಕಣ್ಣುಗಳೆಲ್ಲಿ?" ಎಂದು ಹೇಳುತ್ತ ಆ ಮೃತಶರೀರವನ್ನು ಪರೀಕ್ಷಿಸತೊಡಗಿದರು. ಈ ಅಮಾನುಷಕೃತ್ಯವು ಗಂಧರ್ವರಿಂದಲೇ ನಡೆದಿರಬೇಕೆಂದು ಅವರೂ ನಿಶ್ಚಯಿಸಿಕೊಂಡು, ಪರಮಾಶ್ಚರ್ಯದಲ್ಲಿ ಮುಳುಗಿದ್ದರು.

ಇದು ಇಪ್ಪತ್ತಾರನೆಯ ಅಧ್ಯಾಯವು.

ಕೀಚಕನ ವಧದಿಂದ ಕೋಪಗೊಂಡ ಉಪಕೀಚಕರು ಕೀಚಕನ ಮೃತಶರೀರದೊಡನೆ ಶವವಿಮಾನದಲ್ಲಿ ದ್ರೌಪದಿಯನ್ನೇರಿಸಿ, ಶ್ಮಶಾನಕ್ಕೆ ಸಾಗಿಸುತ್ತಿರುವಾಗ ಅವಳ ಆಕ್ರಂದವನ್ನು ಕೇಳಿ ಭೀಮನು ಬಂದು ಉಪಕೀಚಕರನ್ನು ಕೊಂದುದು.

ಆಗ ಕೀಚಕನ ಸಹೋದರರೂ, ಬಂಧುಗಳೂ ಅಲ್ಲಿಗೆ ಬಂದು ಅವನ ಮೃತದೇಹದ ಸುತ್ತಲೂ ನಿಂತು ಅಳುತ್ತಿದ್ದರು. ಆ ಕೀಚಕನ ದೇಹ

ವಾದರೋ ನಜ್ಜುಗಿಜ್ಜಾಗಿ ಬಿದ್ದಿದ್ದಿತು. ನೀರಿನಿಂದ ಮೇಲಕ್ಕೆಸೆದ ಆಮೆಯಂತೆ ಬಹಳ ಶೋಚನೀಯಾವಸ್ಥೆಯಲ್ಲಿದ್ದ ಆ ಕೀಚಕನ ದೇಹವು ನೋಡುವವರಿಗೆ ಭಯವನ್ನು ಹುಟ್ಟಿಸುವಂತಿತ್ತು. ಅವನ ಸ್ಥಿತಿಯನ್ನು ನೋಡಿದವೆಲ್ಲರಿಗೂ ರೋಮಾಂಚವು ಹುಟ್ಟಿತು. ಯಾರಿಗೂ ಇದಿರಿಸಲು ಸಾಧ್ಯವಿಲ್ಲದಹ್ಟ ಬಲಗರ್ವಿತನಾಗಿದ್ದ ಕೀಚಕನು, ಇಂದ್ರನಿಂದ ಹತನಾದ ದಾನವನಂತೆ ಭೀಮನಿಂದ ಹತನಾಗಿ ಬಿದ್ದಿರಲು, ನಿಜಸ್ಥಿತಿಯನ್ನು ತಿಳಿಯದ ಜನರು ಗಂಧರ್ವರಿಂದಲೇ ಅವನು ಹತನಾಗಿರಬೇಕೆಂದು ನಿಶ್ಚಯಮಾಡಿಕೊಂಡರು. ಕೀಚಕನಿಗೆ ಅಪರಸಂಸ್ಕಾರಗಳನ್ನು ನಡೆಸುವುದಕ್ಕಾಗಿ ಊರ ಹೊರಗಿನ ಶ್ಮಶಾನಕ್ಕೆ ಸಾಗಿಸಲು ಸಿದ್ಧರಾದರು. ಆಮೇಲೆ ಕೀಚಕನ ತಮ್ಮಂದಿರಾದ ಉಪಕೀಚಕರೆಲ್ಲರೂ ಒಂದಾಗಿ ಸೇರಿ, ಸಮೀಪದಲ್ಲಿ ದ್ರೌಪದಿಯು ಒಂದು ಕಂಬವನ್ನೊರಗಿಕೊಂಡು ಮೌನದಿಂದ ಬಂದು ನಿಂತಿರುವುದನ್ನು ನೋಡಿದರು. ಅವರಲ್ಲಿ ಒಬ್ಬನು ಆ ದ್ರೌಪದಿಯನ್ನು ತನ್ನ ಕಣ್ಣಿನಿಂದಲೇ ಸುಟ್ಟುಬಿಡುವಂತೆ ಕೋಪದಿಂದ ದುರದುರನೆ ನೋಡುತ್ತ, ತನ್ನ ಇತರಸಹೋದರರನ್ನು ಕುರಿತು ನಗುತ್ತ ಹೀಗೆಂದು ಹೇಳುವನು. "ಎಲೈ ಸಹೋದರರೇ! ಅದೋ ನೋಡಿರಿ. ನೀಚೆಯಾದ ಈಕೆಯ ದೆಸೆಯಿಂದಲ್ಲವೇ ನಮ್ಮ ಕೀಚಕನು ಹತನಾದನು. ನಾವು ಈಗಲೇ ಇವಳನ್ನು ಕೊಂದುಬಿಡಬೇಕು. ಹಾಗಿಲ್ಲವೇ ಇವಳನ್ನು ಕೊಲ್ಲದೆ, ನಮ್ಮ ಅಣ್ಣನ ಮೃತದೇಹದೊಡನೆ ಇವಳನ್ನೂ ಸೇರಿಸಿ ಕಟ್ಟಿ, ಎರಡು ಶರೀರಗಳನ್ನೂ ಒಟ್ಟಿಗೆ ಸುಟ್ಟುಬಿಡುವೆವು. ಹೌದು! ಇದೇ ಸರಿಯೆಂದು ತೋರುವುದು. ಏಕೆಂದರೆ, ನಮ್ಮಣ್ಣನು ಇವಳನ್ನು ಕಾಮಿಸಿದ್ದನಲ್ಲವೆ? ಅವನ ಇಷ್ಟಾನುಸಾರವಾಗಿ ಅವನ ಸಂಗಡಲೇ ಇವಳನ್ನು ಸುಟ್ಟುಬಿಟ್ಟರೆ, ಸತ್ತಮೇಲೆಯಾದರೂ ಅವನ ಇಷ್ಟವು ಕೈಗೂಡಿದಂತಾಗುವುದು. ಅವನಿಗೆ ಪ್ರಿಯವಾದ ಈ ಕಾರ್ಯವನ್ನು ನಾವು ಮಾಡಿಯೇ ತೀರಬೇಕು. ಇವಳಾದರೋ ಪರಮದುಷ್ಟೆ. ನಮ್ಮ ಸಹೋದರನಿಗೆ ಇವಳೇ ಮೃತ್ಯು. ಇವಳ ದೆಸೆಯಿಂದಲೇ ನಮ್ಮಣ್ಣನು ಮೃತನಾದನು. ಆದುದರಿಂದ ಇವಳನ್ನು ಪ್ರಾಣದಿಂದುಳಿಸಬಾರದು. ಸಹೋದರರೆ! ನಡೆಯಿರಿ. ರಾಜನಿಗೂ ಈ ಸಂಗತಿಯನ್ನು ತಿಳಿಸಿ, ಅವನ ಅನುಮತಿಯನ್ನು ಪಡೆದು, ಇವ

ಳನ್ನೂ ಕೀಚಕನೊಡನೆ ಸುಟ್ಟುಬಿಡುವೆವು. ಒಂದುವೇಳೆ ನಮ್ಮಣ್ಣನು ಗಂಧರ್ವರಿಂದಲೇ ಕೊಲ್ಲಲ್ಪಟ್ಟಿದ್ದರೂ, ಕೀಚಕನಿಗೆ ಇದರಿಂದ ತೃಪ್ತಿಯುಂಟು,'' ಎಂದರು. ಆಮೇಲೆ ಆ ಸೂತರೆಲ್ಲರೂ ಒಂದಾಗಿ ಸೇರಿ ವಿರಾಟನಬಳಿಗೆ ಬಂದು ಕೈಮುಗಿದು '' ಮಹಾರಾಜಾ! ಕೀಚಕನು ಕಾಮರೂಪಿಗಳಾದ ಗಂಧರ್ವರಿಂದ ಹತನಾಗಿ ಬಿದ್ದಿರುವನು. ಸೈರಂಧ್ರಿಯ ದೆಸೆಯಿಂದ ನಿನ್ನೆ ರಾತ್ರಿಯೇ ಅವನು ಸತ್ತನು. ಆದುದರಿಂದ ಸೈರಂಧ್ರಿಯನ್ನೂ ಆ ಕೀಚಕನ ಸಂಗಡಲೇ ಸುಡುವುದಾಗಿರುವೆವು. ಓ ವೀರಾಗ್ರಣಿ! ನಮ್ಮನ್ನು ಯಾವಾಗಲೂ ವಿಶ್ವಾಸದಿಂದ ಕಾಣುತ್ತಿರುವ ನೀನು ಈ ಕಾರ್ಯಕ್ಕೆ ನಮಗೆ ಅನುಮತಿಯನ್ನು ಕೊಡಬೇಕು,'' ಎಂದನು. ವಿರಾಟನಾದರೋ ಆ ಸೂತರ ಪರಾಕ್ರಮವನ್ನು ಚೆನ್ನಾಗಿ ಬಲ್ಲವನಾದುದರಿಂದ, ಅವರ ಇಷ್ಟಕ್ಕೆ ವಿರೋಧಿಸಲಾರದೆ, ನಿಮ್ಮಿಷ್ಟದಂತೆಯೇ ನಡೆಸಿರಿ!'' ಎಂದು ಅನುಮತಿಸಿದನು. ಆಮೇಲೆ ಸೂತರು ಆ ಕೀಚಕನ ದೇಹದೊಡನೆ ದ್ರೌಪದಿಯನ್ನು ಚಟ್ಟದಮೇಲೇರಿಸಿ, ಅವಳ ತಲೆಕೂದಲನ್ನೂ, ಕಾಲುಗಳನ್ನೂ ಬಿಗಿದು ಕಟ್ಟಿ, ಅವಳಕಡೆಗೆ ನೋಡುತ್ತ ತಮ್ಮೊಳಗೆ ಒಬ್ಬರಿಗೊಬ್ಬರು ಹೀಗೆಂದು ಹೇಳುವರು. '' ಈ ನೀಚೆಯ ದೆಸೆಯಿಂದಲೇ ಮಹಾಧೀರನಾದ ನಮ್ಮಣ್ಣನು ಕೊಲೆಗೀಡಾದನು. ಆದುದರಿಂದ ಇವಳೂ ಆ ಕೀಚಕನು ಹೋದ ದಾರಿಗೇ ಹೋಗಲಿ. ಇವಳೂ ಆ ಕೀಚಕನೊಡನೆ ಸ್ವರ್ಗಲೋಕವನ್ನು ಸೇರಲಿ'' ಎಂದು ಆರ್ಭಟಿಸುತ್ತಿದ್ದರು. ದ್ರೌಪದಿಯಾದರೋ ಮಹಾಯಶಸ್ವಿನಿ! ಉದಾರಚಿತ್ತಳು! ಉತ್ತಮ ಶೀಲವತಿ! ಅಂತಹ ಮಂಗಳಸ್ವರೂಪಿಣಿಯಾದ ಆಕೆಯನ್ನು ಪರಮದುಷ್ಟನಾದ ಆ ಕೀಚಕನ ಶವದೊಂದಿಗೆ ಸೇರಿಸಿ ಬಿಗಿದಿದ್ದಾಗ, ಅವಳ ಸಂಕಟವನ್ನು ಕೇಳಬೇಕೆ? ಆ ಕಷ್ಟದಿಂದ ತಪ್ಪಿಸಿಕೊಳ್ಳಲಾರದೆ, ಪರವಶೆಯಾಗಿ, ಆ ಚಟ್ಟದಲ್ಲಿ ನೇತಾಡುತ್ತಿದ್ದ ಹಾಗೆಯೇ ಗಟ್ಟಿಯಾಗಿ ರೋದಿಸತೊಡಗಿದಳು. ಹೀಗೆ ಸೂತಪುತ್ರರಿಂದ, ಮೃತಶರೀರದೊಡನೆ ಬಿಗಿಯಲ್ಪಟ್ಟು, ಶ್ಮಶಾನಕ್ಕೆ ಸಾಗಿಸಲ್ಪಡುತಿದ್ದ ಆ ದ್ರೌಪದಿಗೆ, ತನ್ನ ಜೀವದಮೇಲಣ ಆಶೆಯು ಸಂಪೂರ್ಣವಾಗಿ ಬಿಟ್ಟುಹೋಯಿತು. ನಿರ್ದುಷ್ಟೆಯಾದ ಸತೀಮಣಿಯು ಸನಾಥೆಯಾಗಿದ್ದರೂ ಅನಾಥೆಯಂತೆ ರಕ್ಷಣೆಯನ್ನು ಕೋರುತ್ತ, ಮಹಾವಿಪತ್ತಿಗೆ

ಸಿಕ್ಕಿದ ಹೆಣ್ಣಾನೆಯಂತೆ ಆತ್ಯುಚ್ಚಧ್ವನಿಯಿಂದ ಹೀಗೆಂದು ಮೊರೆಯಿಡುವಳು. "ಅಯ್ಯೋ! ಸೂತಪುತ್ರರು ನನ್ನನ್ನು ಹೀಗೆ ಜೀವದಿಂದ ಸುಡುವುದಕ್ಕಾಗಿ ಕೊಂಡುಹೋಗುತ್ತಿರುವರಲ್ಲಾ! ಜಯ, ಜಯೇಶ, ವಿಜಯ, ಜಯತ್ಸೇನ, ಜಯದ್ಬಲರೆಂಬ ಆ ಐದುಮಂದಿ ಗಂಧರ್ವರು ನನ್ನ ಮೊರೆಯನ್ನು ಕೇಳಬಾರದೆ? ಯಾವ ವೀರರ ಧನುಸ್ಸಿನ ಹೆದೆಯ ಶಬ್ದವು ಮುಂದುಭಿಧ್ವನಿಯಂತೆ ಮೊರೆಯುತ್ತಿರುವುದೋ, ಆ ಗಂಧರ್ವರು ನನ್ನ ಮೊರೆಯನ್ನು ಕೇಳಬಾರದೆ? ಸೂತಪುತ್ರರು ನನ್ನನ್ನು ಎಳೆದುಕೊಂಡು ಹೋಗುತ್ತಿರುವರು. ಯಾವ ವೀರರು ಬಿಲ್ಲಿನ ನಾಣನ್ನು ಕೈಯಿಂದ ತಟ್ಟುವ ಧ್ವನಿಯು ಸಿಡಿಲಿನ ಧ್ವನಿಯಂತೆ ಮೊರೆಯುತ್ತಿರುವುದೋ ಅವರು ನನ್ನ ಈ ಮೊರೆಯನ್ನು ಕೇಳಬಾರದೆ? ಈ ಸೂತಪುತ್ರರು ನನ್ನನ್ನು ಎಳೆದು ಕೊಂಡು ಹೋಗುತ್ತಿರುವರಲ್ಲ! ಯುದ್ಧದಲ್ಲಿ ಮಹಾಬಲಾಢ್ಯರಾದ ಯಾರ ಘೋಷವು ಶತ್ರುಭಯಂಕರವಾಗಿ ಕೇಳಿಸುತ್ತಿರುವುದೋ, ಯಾರ ರಥ ಘೋಷವೇ ರಣರಂಗದಲ್ಲಿ ವ್ಯಾಪಿಸಿ ವೈರಿಗಳನ್ನು ನಡುಗಿಸುತ್ತಿರುವುದೋ ಅವರು ನನ್ನ ಮೊರೆಯನ್ನು ಕೇಳಲಿ! ಸೂತಪುತ್ರರು ನನ್ನನ್ನು ಎಳೆದು ಕೊಂಡುಹೋಗುತ್ತಿರುವರು. ಯಾರ ವೀರ್ಯವು ಅಸಮಾನವೆನಿಸಿರುವುದೋ, ಯಾರ ಕೀರ್ತಿಯೂ ಬಲವೂ, ದೇವೇಂದ್ರನ ಕೀರ್ತಿಗೂ ಬಲಕ್ಕೂ ಸಮಾನವೋ, ಅಂತಹ ರಾಜಸಿಂಹರು ಈ ನನ್ನ ಕಷ್ಟವನ್ನು ತಿಳಿದು ಕಾಪಾಡಲಿ" ಎಂದು ಗಟ್ಟಿಯಾಗಿ ಕೂಗಿಕೊಂಡಳು. ಹೀಗೆ ದೈನ್ಯದಿಂದ ವಿಲಪಿಸುತ್ತಿರುವ ಆ ದ್ರೌಪದಿಯ ವಾಕ್ಯಗಳು ಅಡಿಗೆಯ ಮನೆಯಲ್ಲಿ ಮಲಗಿದ್ದ ಭೀಮನ ಕಿವಿಗೆ ಬಿದ್ದುವು. ಆಗ ಅವನು ಹಿಂದುಮುಂದಾ ಲೋಚಿಸದೆ ಥಟ್ಟನೆ ಹಾಸಿಗೆಯಿಂದ ಮೇಲೆದ್ದು ನಿಂತು "ಸೈರಂಧ್ರೀ! ನಿನ್ನ ಮಾತು ಕಿವಿಗೆ ಬಿದ್ದಿತು. ಸೂತಪುತ್ರರಿಂದ ನಿನಗೆ ಎಂದಿಗೂ ಭಯವಿಲ್ಲವೆಂದು ತಿಳಿ" ಎಂದನು. ಹೀಗೆಂದು ಹೇಳಿ ಮಹಾಬಾಹುವಾದ ಭೀಮನು ಸೂತಪುತ್ರರನ್ನು ಕೊಂದುಬಿಡಬೇಕೆಂದೇ ನಿಶ್ಚಯಿಸಿ ಉತ್ಸಾಹಗೊಂಡನು. ಒಡನೆಯೇ ಯುದ್ಧಕ್ಕೆ ಸಿದ್ಧನಾಗಿ, ನಡುದಟ್ಟಿಯನ್ನು ಬಿಗಿದು ಕಟ್ಟಿದನು. ಅಡಿಗೆಯ ಮನೆಯಿಂದ ಹೊರಡುವಾಗ ಬಾಗಿಲಿಲ್ಲದ ಕಡೆಯನ್ನು ನೋಡಿ, ಅಲ್ಲಿದ್ದ ಒಂದು ಮರವನ್ನೇರಿ, ಪ್ರಾಕಾರದ ಗೋಡೆ

ಯನ್ನಿಳಿದು, ಅತಿ ವೇಗದಿಂದ ಆ ಉಪಕೀಚಕರು ಹೆಣವನ್ನು ಸಾಗಿಸುತ್ತಿದ್ದ ಶ್ಮಶಾನಕ್ಕೆದಿರಾಗಿ ಹೋದನು. ಹೀಗೆ ಭೀಮನು ಪ್ರಾಕಾರದ ಗೋಡೆಯನ್ನು ದಾಟಿ ಪಟ್ಟಣದಿಂದ ಹೊರಗೆ ಬಂದು, ಆ ಸೂತಪುತ್ರರಿಗಿದಿರಾಗಿ ಅವರನ್ನು ದಿರಿಸಿದನು. ಕೀಚಕನನ್ನು ಸುಡುವುದಕ್ಕಾಗಿ ಮಾಡಿದ ಚಿತೆಯ ಸಮೀಪಕ್ಕೆ ಬಂದಾಗ, ಭೀಮಸೇನಿಗೆ ಅಲ್ಲಿ ತಾಳವೃಕ್ಷದಂತೆ ಉನ್ನತವಾದ ಮರವೊಂದು ಕಾಣಿಸಿತು. ಆಡಿಯಲ್ಲಿ ದಪ್ಪನಾಗಿ, ಮೇಲುಗಡೆಯಲ್ಲಿ ಚೆನ್ನಾಗಿ ಒಣಗಿದ್ದ ಆ ಮಹಾವೃಕ್ಷವನ್ನು ಭೀಮನು, ಆನೆಯು ತನ್ನ ಸುಂಡಿಲಿನಿಂದ ಹೇಗೋ ಹಾಗೆ ಎರಡು ಕೈಗಳಿಂದ ಹಿಡಿದು ಬುಡಸಹಿತವಾಗಿ ಕಿತ್ತು ಕೊಂಡನು. ಆ ಮರದಡಿಯಲ್ಲಿ ಹತ್ತುಮಾರು ದೂರಕ್ಕೆ ಎಲೆಗಳೊಂದೂ ಇಲ್ಲದಂತೆ ಮಾಡಿದನು. ಆಮೇಲೆ ದೊಡ್ಡ ಪ್ರಮಾಣವುಳ್ಳ ಆ ಮರವನ್ನು ಕೈಯಿಂದ ಮೇಲಕ್ಕೆತ್ತಿ ಗಿರಗಿರನೆ ಸುತ್ತಿಸುತ್ತ, ದಂಡಪಾಣಿಯಾದ ಯಮನಂತೆ ಮಹಾ ವೇಗದಿಂದ ಆ ಸೂತಪುತ್ರರಿದ್ದ ಕಡೆಗೆ ಓಡಿಬಂದನು. ಭೀಮನು ಓಡಿಬಂದಾಗ, ಅವನ ತೊಡೆಯ ವೇಗಕ್ಕೆ ಸಿಕ್ಕಿದ, ಆಲ, ಆರಳಿ, ಮುತ್ತುಗ, ಮೊದಲಾದ ಹಲವು ದೊಡ್ಡ ಮರಗಳೆಲ್ಲ ಮುರಿದು ಕೆಳಗೆ ಬಿದ್ದು ಹೋದುವು. ಸಿಂಹದಂತೆ ಕೋಪಾವೇಶದಿಂದ ಬರುತಿದ್ದ ಭೀಮನನ್ನು ನೋಡಿ ಉಪಕೀಚಕರೆಲ್ಲರೂ ತಮಗೆ ವೈರಿಯಾದ ಗಂಧರ್ವನು ಬಂದನೆಂದು ತಿಳಿದು, ಮಹಾಭಯದಿಂದಲೂ, ವ್ಯಸನದಿಂದಲೂ ತತ್ತಳಿಸುತಿದ್ದರು. ತಮ್ಮ ಜ್ಯೇಷ್ಠನಾದ ಕೀಚಕನನ್ನು ದಹನಮಾಡುವುದಕ್ಕಾಗಿ ಬಂದಿದ್ದ ಆ ಸೂತಪುತ್ರರೆಲ್ಲರೂ, ಭೀಮನನ್ನೇ ಗಂಧರ್ವನೆಂದು ತಿಳಿದು ಭಯಗ್ರಸ್ತರಾಗಿ ತಮ್ಮೊಳಗೆ ಒಬ್ಬರಿಗೊಬ್ಬರು ಮುಖವನ್ನು ನೋಡಿಕೊಳ್ಳುತ್ತ "ಆಯ್ಯೋ! ಇನ್ನೇನು ಗತಿ! ಆ ಗಂಧರ್ವನು ಮಹಾವೃಕ್ಷವನ್ನೆತ್ತಿಕೊಂಡು ಕೋಪದಿಂದ ಬರುತ್ತಿರುವನಲ್ಲ! ಸಾಧಾರಣವಾಗಿಯೇ ಗಂಧರ್ವರು ಮಹಾಬಲಶಾಲಿಗಳು! ಮಹಾಮಹಿಮೆಯುಳ್ಳವರು! ಸೂರ್ಯತೇಜಸ್ಸುಳ್ಳವರು! ಅವರು ಹಿಡಿದ ಪಟ್ಟನ್ನು ಬಿಡುವವರಲ್ಲ. ನಮಗೆ ಮಹತ್ತಾದ ಭಯವು ಪ್ರಾಪ್ತವಾಗಿದೆ! ಆದುದರಿಂದ ನಾವು ಸೈರಂಧ್ರಿಯನ್ನು ಬಿಟ್ಟುಹೋಗುವೆವು" ಎಂದು ಮಾತಾಡಿಕೊಳ್ಳುತ್ತ, ಅತ್ತಲಾಗಿ ಭೀಮನು ಸುತ್ತಿಸಿಕೊಂಡು ಬರುತ್ತಿರುವ ವೃಕ್ಷವನ್ನು ನೋಡಿ, ಭಯ

ದಿಂದ ನಡುಗುತ್ತ, ದ್ರೌಪದಿಯನ್ನು ಅಲ್ಲಿಯೇ ಬಿಟ್ಟು ಊರಿನ ಕಡೆಗೆ ಪಲಾಯನ ಮಾಡಿದರು. ಆದರೇನು? ಭೀಮನು ಅವರನ್ನು ಬಿಡದೆ ಬೆನ್ನಟ್ಟಿ, ಇಂದ್ರನು ವಜ್ರಪಾಣಿಯಾಗಿ ದಾನವರ ಬೆನ್ನಟ್ಟುವಂತೆ ಮುಂದೆ ಬಂದು, ಅವರ ದಾರಿಯನ್ನಡ್ಡಗಟ್ಟಿದನು. ಭೀಮನ ಆರ್ಭಟವನ್ನು ನೋಡಿ ಅವರಿಗೆ ಭಯದಿಂದ ಪ್ರಜ್ಞೆತಪ್ಪಿದಂತಾಯಿತು. ಕೈಕಾಲುಗಳೇ ಆಡದೆ ಹೋದುವು. ನಿಶ್ಚೇಷ್ಟರಾಗಿ ನಿಂತುಬಿಟ್ಟರು. ಆಗ ಭೀಮನು, ಇಂದ್ರನು ವಜ್ರಾಯುಧದಿಂದ ದಾನವರನ್ನು ಹೇಗೋಹಾಗೆ ಆ ಮರದಿಂದ ಅವರನ್ನು ಬಡಿದು ಕೊಲ್ಲುತ್ತಬಂದನು. ಒಂದೇ ಪ್ರಹಾರಕ್ಕೆ ಹತ್ತು, ಏಳು, ಇಪ್ಪತ್ತು, ಹದಿನಂಟು, ಆಮೇಲೆ ಐವತ್ತುಮಂದಿಯಂತೆ ಆ ನೂರೈದು ಮಂದಿಯನ್ನೂ ಆರು ಪ್ರಹಾರಗಳಲ್ಲಿಯೇ ಯಮಪುರಿಗೆ ಕಳುಹಿಸಿಬಿಟ್ಟನು. ಹೀಗೆ ಬಲಾಢ್ಯನಾದ ಆ ವಾಯುಪುತ್ರನು ವೇಗದಲ್ಲಿ ತನ್ನ ತಂದೆಯಾದ ವಾಯುದೇವನಿಗೆ ಸಮಾನನಾಗಿ, ಸೂತಪುತ್ರರನ್ನು ಸುತ್ತಿಸುತ್ತಿ ಬಡಿಯುತ್ತ, ತಾನು ಹಿಡಿದಿದ್ದ ಒಂದೇ ಮರದಿಂದ ಎಲ್ಲರನ್ನೂ ತೀರಿಸಿಬಿಟ್ಟನು. ಹೀಗೆ ಉಪಕೀಚಕರನ್ನು ಕೊಂದ ಮೇಲೆ ಭೀಮನು ದ್ರೌಪದಿಯಬಳಿಗೆ ಬಂದು, ಅವಳ ಕಟ್ಟನ್ನು ಬಿಚ್ಚಿ, ಪ್ರಿಯವಾಕ್ಯದಿಂದ ಅವಳನ್ನು ಸಮಾಧಾನಪಡಿಸುತ್ತ ಭಯದಿಂದ ಮೈಮರೆತು ಕಣ್ಣೀರು ಬಿಡುತಿದ್ದ ಆಕೆಯನ್ನು ಕುರಿತು ಹೀಗೆಂದು ಹೇಳುವನು. "ಎಲೆ ಪ್ರಿಯೆ! ಯಾಜ್ಞಸೇನಿ! ಇನ್ನು ನಿನ್ನ ದುಃಖವನ್ನು ಬಿಡು! ಪಾತಿವ್ರತ್ಯದಲ್ಲಿ ನೆಲೆಗೊಂಡ ನೀನು ಹೀಗೆ ವ್ಯಸನಪಡಬಾರದು. ನಿನ್ನಂತೆ ಪಾತಿವ್ರತ್ಯನಿರತೆಯಾದ ಸ್ತ್ರೀಯು ಎಷ್ಟೇ ಕಷ್ಟದಲ್ಲಿಯೂ ತನ್ನ ವ್ರತವನ್ನು ಕಾಪಾಡಿಕೊಳ್ಳಬೇಕಾದುದು ಸಹಜವು. ಪತಿವ್ರತೆಯರಿಗೆ ಇಂತಹ ಕಷ್ಟಗಳು ಸಂಭವಿಸುವುದು ಸಹಜವೇ. ಹಿಂದೆ ಮಹಾಪತಿಭಕ್ತಿಯುಳ್ಳ ಶಿರೋಮಣಿಯೆಂಬ ದೇವರಾತನ ಭಾರ್ಯೆಯನ್ನು ಅವಳ ಪತಿಯಂತೆಯೇ ವೇಷವನ್ನು ಧರಿಸಿ ಬಂದ ರಾಕ್ಷಸನೊಬ್ಬನು ಎತ್ತಿಕೊಂಡು ಹೋದನು. ಆ ರಾಕ್ಷಸನು ಅವಳನ್ನು ಒಂದು ಕೊಳದ ದಡದಲ್ಲಿರಿಸಿ, ಆಮೇಲೆ ತನ್ನ ಕಪಟವೇಷವನ್ನು ಬಿಟ್ಟು ಭಯಂಕರವಾದ ರಾಕ್ಷಸಸ್ವರೂಪದಿಂದ ಅವಳಿಗೆ ಕಾಣಿಸಿಕೊಂಡನು. ಆಮೇಲೆ ಆ ರಾಕ್ಷಸನು ಆ ಪತಿ

ವ್ರತೆಯನ್ನು ಸಾಮ ದಾನ ಭೇದೋಪಾಯಗಳಿಂದ ತನ್ನ ವಶಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಿದನು. ಅವಳು ಅವನ ಮಾತಿಗೆ ಮರುಳಾಗದೆ ನಿರಾಕರಿಸಿ ಬಿಡಲು, ಆ ರಾಕ್ಷಸನು ಬಲಾತ್ಕಾರದಿಂದ ಅವಳನ್ನು ಕೆಳಕ್ಕೆ ಕೆಡಹಿ, ಮೇಲೆಬಿದ್ದು ಭೋಗಿಸುವುದಕ್ಕೂ ಯತ್ನಿಸಿದನು. ಆಗಲೂ ಅವಳು ಧೈರ್ಯವನ್ನು ಬಿಡದೆ, ಅವನ ಅತಿಕ್ರಮಪ್ರವೇಶಕ್ಕೆ ಸ್ವಲ್ಪವೂ ಅವಕಾಶವನ್ನು ಕೊಡಲಿಲ್ಲ. ಆಗಲೂ ಆ ರಾಕ್ಷಸನು, ಅವಳ ಮುಂದೆ ತನ್ನ ಖಡ್ಗವನ್ನೆಳೆದು ಕೊಲ್ಲುವುದಾಗಿ ಭಯಪಡಿಸಿದನು. ಸಾಧ್ವೀಮಣಿಯಾದ ಆಕೆಯು ತನ್ನ ಪ್ರಾಣಗಳನ್ನು ಬಿಡುವುದಕ್ಕೂ ದೃಢನಿಶ್ಚಯ ಮಾಡಿಕೊಂಡು, " ನಾನು ನನ್ನ ಪತಿಯನ್ನೇ ಪರದೇವತೆಯನ್ನಾಗಿ ಭಜಿಸತಕ್ಕವಳೆಂಬುದು ನಿಜವಾಗಿದ್ದರೆ, ನಾನು ಮನೋವಾಕ್ಕಾಯಗಳೆಂಬ ತ್ರಿಕರಣಗಳಿಂದ ಹಿರಿಯರನ್ನು ಸಂತೋಷಪಡಿಸುವವಳಾಗಿದ್ದರೆ, ಆ ಸತ್ಯದಿಂದ ನನ್ನ ಶರೀರದ ಸ್ವಲ್ಪ (ಮಧ್ಯ) ಭಾಗವು ದೃಢವಾದ ಕಲ್ಲಾಗಲಿ" ಎಂದು ಪ್ರತಿಜ್ಞೆಮಾಡಿದಳು. ಅವಳ ಬಾಯಿಂದ ಈ ಮಾತು ಮುಗಿಯುವಷ್ಟರಲ್ಲಿಯೇ ಅವಳ ದೇಹದಲ್ಲಿ ಹೊಕ್ಕುಳಿನಿಂದ ಕೆಳಕ್ಕೆ ಮೊಳಕಾಲಿಂದ ಮೇಲಕ್ಕಿರುವ ಭಾಗವೆಲ್ಲವೂ ಕಲ್ಲಿನಂತಾಯಿತು. ಆಮೇಲೆ ಆ ರಾಕ್ಷಸನು ನಿರಾಶನಾಗಿ, ಕೋಪದಿಂದ ಕತ್ತಿಯನ್ನೆತ್ತಿ ಅವಳ ತಲೆಯನ್ನು ಕಡಿದುಬಿಟ್ಟನು. ಆಮೇಲೆ ಅವಳೇ ಪಾರ್ವತಿಗೆ ನಖಮಾಂಸಗಳಂತೆ ಅತ್ಯಂತ ಪ್ರಿಯಸಖಿಯಾದ ಜಯೆಯೆಂಬ ಸಖಿಯಾಗಿ ಹುಟ್ಟಿದಳು. ಆದುದರಿಂದ ಓ ಪಾಂಚಾಲೀ! ಪತಿವ್ರತೆಯರಿಗೆ ಒಮ್ಮೊಮ್ಮೆ ದುಃಖವು ಪ್ರಾಪ್ತವಾದರೂ ಆ ದುಃಖವು ಅಲ್ಪವು. ಅವರಿಗೆ ಉಂಟಾಗುವ ಸುಖವು ಮಹತ್ತಾದುದು. ಎಲೆ ಭೀರು! ಯಾರು ನಿನ್ನನ್ನು ಹಿಂಸೆಗೊಳಿಸುವರೋ ಅಂತವರ ಗತಿಯೆಲ್ಲ ಹೀಗೆಯೇ ಎಂದು ತಿಳಿ! ಇನ್ನು ನೀನು ಹಿಂತಿರುಗಿ ನಗರಕ್ಕೆ ಹೋಗು. ಇನ್ನು ನಿನಗೇನೂ ಭಯವಿರದು. ನೀನು ಬೇರೆ ದಾರಿಯಿಂದ ಸುದೇಷ್ಣೆಯ ಮನೆಗೆ ಹೋಗು. ನಾನು ಬೇರೊಂದು ದಾರಿಯಿಂದ ವಿರಾಟನ ಆಡಿಗೆಯ ಮನೆಗೆ ಹೋಗಿ ಸೇರುವೆನು. ಈ ರಾತ್ರಿಯಲ್ಲಿ ಹೀಗೆ ನಾವಿಬ್ಬರೂ ಇಲ್ಲಿದ್ದ ಸಂಗತಿಯು ಜನಗಳಿಗೆ ತಿಳಿಯದಂತೆ ನಾವು ನಡೆದುಕೊಳ್ಳಬೇಕು" ಎಂದನು.

ಓ ಜನಮೇಜಯರಾಜನೆ ಕೇಳು! ಭೀಮನಿಂದ ಹೀಗೆ ಸಮಾಧಾನ ಗೊಳಿಸಲ್ಪಟ್ಟ ಆ ದ್ರೌಪದಿಯು, ತನ್ನನ್ನು ಕಾಮಿಸಿದ ನಹುಷನು ಅಗಸ್ತ್ಯ ಶಾಪಕ್ಕೀಡಾದಮೇಲೆ, ಶಚೀದೇವಿಯು ನೆಮ್ಮದಿಯಿಂದ ಸ್ವರ್ಗವನ್ನು ಸೇರಿದ ಹಾಗೆ ಸುದೇಷ್ಣೆಯ ಗೃಹವನ್ನು ಪ್ರವೇಶಿಸಿದಳು. ಅತ್ತಲಾಗಿ ಬಲಾಢ್ಯನಾದ ಆ ಭೀಮಸೇನನೂ ಕೂಡ, ರಾಮನು ರಾಕ್ಷಸರನ್ನು ಹೇಗೋ ಹಾಗೆ, ಆ ಉಪಕೀಚಕರೆಲ್ಲರನ್ನೂ ನಿಶ್ಶೇಷವಾಗಿ ಕೊಂದಮೇಲೆ, ಶತ್ರುಜಯದಿಂದ ಉತ್ಸಾಹಗೊಂಡ ಮನಸ್ಸುಳ್ಳವನಾಗಿ, ಅಲ್ಲಿಂದ ಹಿಂತಿರುಗಿ ನಗರಪ್ರವೇಶವನ್ನು ಮಾಡಿದನು. ಅತ್ತಲಾಗಿ ಭೀಮನಿಂದ ಹತರಾದ ನೂರೈದುಮಂದಿ ಕೀಚಕರೂ, ಶ್ಮಶಾನಸಮೀಪದಲ್ಲಿ ಮೃತರಾಗಿ ಬಿದ್ದಿರಲು, ಆ ಪ್ರದೇಶವು ಮರಗಳನ್ನು ಕಡಿದುಹಾಕಿದ ಕಾಡಿನಂತೆ ಕಾಣಿಸುತಿತ್ತು. ವಿರಾಟ ಸೇನಾಪತಿಯಾಗಿದ್ದ ಪ್ರಧಾನಕೀಚಕನೂ ಸೇರಿ, ನೂರಾರುಮಂದಿ ಕೀಚಕರು ಸತ್ತಸುದ್ದಿಯನ್ನು ಕೇಳಿದಾಗಲೂ ಕೀಚಕನ ಬಂಧುಗಳು ಗಂಧರ್ವರ ಭಯಕ್ಕಾಗಿ ಬಾಯೆತ್ತದೆ ಮೌನದಿಂದಿದ್ದರು. ಅಲ್ಲಿ ಬಂದವರಿಗೆ ಸೈರಂಧ್ರಿಯು ಕಡೆಗೆ ಕಣ್ಣೆತ್ತಿ ನೋಡುವುದಕ್ಕೂ ಧೈರ್ಯವಿಲ್ಲದಂತಾಯಿತು. ವಿರಾಟನಗರದಲ್ಲಿದ್ದ ಸ್ತ್ರೀಪುರುಷರೆಲ್ಲರೂ ಬೆಳಗ್ಗೆ ಬಂದು, ನೂರಾರುಮಂದಿ ಕೀಚಕರು ಸತ್ತುಬಿದ್ದಿರುವುದನ್ನು ನೋಡಿ ಆಶ್ಚರ್ಯಪಡುತಿದ್ದರೇಹೊರತು, ಬಾಯೆತ್ತಿ ಯಾರೊಬ್ಬರೂ ಯಾವ ಮಾತನ್ನೂ ಆಡಲಿಲ್ಲ.

ಇದು ಇಪ್ಪತ್ತೇಳನೆಯ ಅಧ್ಯಾಯವು.

ಪುರಜನರು ಉಪಕೀಚಕರ ವಧವನ್ನು ವಿರಾಟನಿಗೆ ತಿಳಿಸಿ, ಸೈರಂಧ್ರಿಯನ್ನು ಪಟ್ಟಣದಿಂದ ಹೊರಡಿಸಲು ಪ್ರೇರಿಸಿದುದು. ಈ ರಾಜಾಜ್ಞೆಯನ್ನು ಸುದೇಷ್ಣೆಯು ದ್ರೌಪದಿಗೆ ಹೇಳಲು, ದ್ರೌಪದಿಯು ಒಂದು ತಿಂಗಳ ಅವಧಿಯನ್ನು ಕೇಳಿದುದು.

ಭೀಮನಿಂದ ಹತರಾಗಿ ಬಿದ್ದ ಆ ಸೂತರನ್ನು ನೋಡಿ, ಪುರಜನರೆಲ್ಲರೂ ಒಂದುಗೂಡಿ ವಿರಾಟನ ಬಳಿಗೆ ಓಡಿಬಂದು, ಅವನಲ್ಲಿ ಹೀಗೆಂದು

ತಿಳಿಸುವರು. "ರಾಜಾ! ನೂರಾರುಮಂದಿ ಸೂತಪುತ್ರರು ಗಂಧರ್ವನಿಂದ ಹತರಾಗಿ, ವಜ್ರಾಹತಗಳಾದ ಪರ್ವತಗಳಂತೆ ಬಿದ್ದಿರುವರು. ಈಗಲೇ ಆ ಘೋರವನ್ನು ನೋಡಿಬಂದೆವು. ಆ ಸೈರಂಧ್ರಿಯು ಅವರಿಂದ ಹೇಗೋ ತಪ್ಪಿಸಿಕೊಂಡು, ತಿರುಗಿ ನಮ್ಮ ಈ ಊರಿನ ಕಡೆಗೆ ಬರುತ್ತಿರುವಳು. ಇನ್ನು ನಮ್ಮೂರಿನ ಜನರೆಲ್ಲ ಮೊತ್ತಕ್ಕೆ ಪ್ರಾಣದಿಂದುಳಿಯುವುದೇ ಸಂದೇಹವೆನಿಸಿದೆ. ಆ ಸೈರಂಧ್ರಿಯೋ ಅತ್ಯಂತ ರೂಪವತಿ! ಅವಳ ಗಂಡಂದಿರಾದ ಗಂಧರ್ವರೋ ಮಹಾಬಲಾಢ್ಯರು. ರೂಪವತಿಯರಾದ ಹೆಂಗಸರನ್ನು ಕಂಡಾಗ ಪುರುಷರಿಗೆ ಮೋಹವುಂಟಾಗುವುದೇನೋ ಸಹಜವೇ! ಇದರಲ್ಲಿ ಸಂದೇಹವಿಲ್ಲ. ಆದುದರಿಂದ ಈ ಸೈರಂಧ್ರಿಯ ದೆಸೆಯಿಂದ ನಮ್ಮ ಪಟ್ಟಣಕ್ಕೆ ಇನ್ನುಮುಂದೆಯಾದರೂ ಅಪಾಯವೇನೂ ಬಾರದಂತೆ, ಈಗಲೇ ಎಚ್ಚರತೆಗೆದುಕೊಳ್ಳುವುದು ಯುಕ್ತವು. ಸರ್ವಾಂಗ ಸುಂದರಿಯಾಗಿ, ರೂಪಲಾವಣ್ಯಗಳಿಂದ ಶೋಭಿಸುತ್ತಿರುವ ಆ ಸೈರಂಧ್ರಿಯನ್ನು ಕಂಡೊಡನೆ, ಪುರುಷರಿಗೆ ಅವಳನ್ನು ಎವೆಮುಚ್ಚದೆ ನೋಡುತ್ತಿರಬೇಕೆಂಬ ಆಸೆ ಹುಟ್ಟದಿರದು. ಅಂತವರ ದೃಷ್ಟಿಯನ್ನೂ, ಮನಸ್ಸನ್ನೂ ತಪ್ಪಿಸುವುದಕ್ಕೆ ಯಾರಿಂದತಾನೇ ಸಾಧ್ಯವು! ಅಂತಹ ರೂಪವತಿಯಾದ ಸೈರಂಧ್ರಿಯನ್ನು ನೋಡಿ, ಯಾವ ಪುರುಷನು ಸ್ವಲ್ಪವಾದರೂ ಮನಸ್ಸಿನಲ್ಲಿ ಕಾಮಿಸುವನೋ, ಅವನಿಗೆ ಗಂಧರ್ವರಿಂದ ಮರಣವು ನಿಶ್ಚಯವು. ಆದುದರಿಂದ ಈಕೆಯನ್ನು ನಿನ್ನ ಅಂತಃಪುರದಿಂದ ಆಟ್ಟಿಬಿಡುವುದೇ ಮೇಲು. ಮುಖ್ಯವಾಗಿ ಇಂತವಳು ನಮ್ಮ ನಗರದಲ್ಲಿಯೇ ಇರದಂತೆ ಮಾಡುವುದೊಳ್ಳೆಯದು. ಯಮನೇ ಈ ಸೈರಂಧ್ರಿಯಲ್ಲಿ ಪ್ರವೇಶಿಸಿ, ನಮ್ಮಾ ಪಟ್ಟಣವನ್ನು ನಾಶಮಾಡುತ್ತಿರುವನೆಂಬುದರಲ್ಲಿ ಸಂದೇಹವಿಲ್ಲ" ಎಂದು ಬಿನ್ನವಿಸಿದರು. ಅವರ ಮಾತನ್ನು ಕೇಳಿ ವಿರಾಟನು ತನ್ನ ಸೇನಾಪತಿಯನ್ನು ಕರೆಸಿ, "ಕೀಚಕರೆಲ್ಲರಿಗೂ ಅಪರಕ್ರಿಯೆಗಳನ್ನು ಮಾಡಿಸು. ಅಗ್ನಿಯನ್ನು ಚೆನ್ನಾಗಿ ಜ್ವಲಿಸುವಂತೆ ಮಾಡಿ, ವಾಸನಾದ್ರವ್ಯಗಳನ್ನು ಸೇರಿಸಿ, ಅದರಲ್ಲಿ ಆ ಕೀಚಕರೆಲ್ಲರನ್ನೂ ದಹಿಸಬೇಕು" ಎಂದು ಆಜ್ಞಾಪಿಸಿದನು. ರಾಜನು ಹೀಗೆಂದು ಹೇಳಿ ವ್ಯಸನಪೀಡಿತನಾಗಿ, ಅಲ್ಲಿಂದ ಅಂತಃಪುರಕ್ಕೆ ಹೋಗಿ, ಅಲ್ಲಿ ತನ್ನ ಪಟ್ಟಮಹಿಷಿಯಾದ ಸುದೇಷ್ಣೆಯನ್ನು ನೋಡಿ,

"ಸುದೇಷ್ಣೆ! ಆ ಸೈರಂಧ್ರಿಯು ಇಲ್ಲಿಗೆ ಬರುವಳಲ್ಲವೆ? ಬಂದರೆ, ಅವಳಿಗೆ ನಾನು ಹೇಳಿದುದಾಗಿ ಹೀಗೆಂದು ನೀನು ತಿಳಿಸು. 'ಸೈರಂಧ್ರೀ! ನಿನಗೆ ಶುಭವಾಗಲಿ! ಇನ್ನು ನೀನು ಇಲ್ಲಿಂದ ಬಿಟ್ಟುಹೋಗಿ, ನಿನ್ನ ಇಷ್ಟ ಬಂದಕಡೆಯಲ್ಲಿ ಸಂಚರಿಸು. ಗಂಧರ್ವರಿಂದ ಬರಬಹುದಾದ ಅಪಾಯಕ್ಕಾಗಿ ರಾಜನು ಬಹಳವಾಗಿ ಹೆದರುತ್ತಿರುವನು. ಗಂಧರ್ವರಿಂದ ರಕ್ಷಿತೆಯಾದ ನಿನ್ನಲ್ಲಿಗೆ ಬಂದು ಅವನು ಈ ಮಾತನ್ನು ತಾನಾಗಿ ನಿನ್ನೊಡನೆ ಹೇಳುವುದಕ್ಕೆ ಹೆದರುವನು. ನಮ್ಮಂತಹ ಹೆಂಗಸರು ನಿನ್ನೊಡನೆ ಮಾತನಾಡುವುದರಲ್ಲಿ ತಪ್ಪಿಲ್ಲ. ಆದುದರಿಂದ ನಿನಗೆ ಈ ವಿಷಯವನ್ನು ತಿಳಿಸುವಂತೆ ಹೇಳಿರುವನು,' ಎಂದು ಹೇಳು" ಎಂದನು.

ಇಷ್ಟರಲ್ಲಿ ಇತ್ತಲಾಗಿ ರಾಜಸೇವಕರು ಚೆನ್ನಾಗಿ ಚಿತೆಯನ್ನುರಿಸಿ, ಆ ಒಂದೇ ಅಗ್ನಿಯಲ್ಲಿ ಕೀಚಕರನ್ನೆಲ್ಲ ಸರ್ವವಿಧ ಸಂಸ್ಕಾರಗಳಿಂದ ದಹನ ಮಾಡಿದರು. ಇತ್ತಲಾಗಿ ದ್ರೌಪದಿಯು ಭೀಮನಿಂದ ಬಿಡಿಸಲ್ಪಟ್ಟಮೇಲೆ, ಅವಳಿಗೆ ಕೀಚಕನ ಭಯವು ತಪ್ಪಿದರೂ, ಮುಂದೇನಾಗುವುದೋ ಎಂಬ ಶಂಕೆಯಿತ್ತು. ಹುಲಿಗೆ ಹೆದರಿದ ಕಣ್ಣುಜಿಂಕೆಯಂತೆ ಭೀತಿಯು ಮನಸ್ಸನ್ನು ನಡುಗಿಸುತ್ತಿರಲು, ತನ್ನ ಶರೀರವನ್ನೂ, ಉಟ್ಟ ಬಟ್ಟೆಗಳನ್ನೂ ಚೆನ್ನಾಗಿ ತೊಳೆದು ಸ್ನಾನಮಾಡಿ ಪಟ್ಟಣಕ್ಕೆ ಪ್ರವೇಶಮಾಡಿದಳು. ಇವಳನ್ನು ನೋಡಿ ಅಲ್ಲಲ್ಲಿದ್ದ ಪುರುಷರೆಲ್ಲರೂ ಗಂಧರ್ವರ ಭಯಕ್ಕಾಗಿ ನಾನಾ ಕಡೆಗೆ ಓಡಿಹೋದರು. ಕೆಲವರು ಕಣ್ಣುಗಳನ್ನು ಮುಚ್ಚಿಕೊಂಡರು. ಬೇರೆ ಕೆಲವರು ಅವಳನ್ನು ಕಂಡೊಡನೆ ಭಯದಿಂದ ತಬ್ಬಿಬ್ಬಾಗಿ, ತಮ್ಮ ಕೈಯನ್ನು ಕಣ್ಣಿಗೆ ಮರೆಮಾಡಿಕೊಂಡು ಓಡಿಹೋದರು. ಮತ್ತೆ ಕೆಲವರು ಸಮೀಪದಲ್ಲಿದ್ದವರನ್ನು ನೋಡಿ ದೀನಸ್ವರದಿಂದ, "ಬೇಡಿರಿ! ಬೇಡಿರಿ! ಆ ಸೈರಂಧ್ರಿಯನ್ನು ನೋಡಬೇಡಿರಿ" ಎಂದು ಎಚ್ಚರಿಸುತ್ತಿದ್ದರು. ಇನ್ನೂ ಕೆಲವರು, "ಸೌಂದರ್ಯದಿಂದ ಬೆಳಗುತ್ತಿರುವ ಈಕೆಯನ್ನು ನೋಡಿದವರು ಕೀಚಕರಂತೆ ಇಲ್ಲಿಯೇ ಸಾಯಬೇಕಾಗುವುದು," ಎಂದು ಭಯದಿಂದ ತತ್ತಳಿಸುತ್ತ ಗಂಧರ್ವರನ್ನು ನೆನೆಸಿಕೊಂಡು ತಬ್ಬಿಬ್ಬಾಗಿ ನಿಂತುಬಿಟ್ಟರು. ಆಮೇಲೆ ದ್ರೌಪದಿಯು ತಾನು ದಾರಿಯಲ್ಲಿ ಬರುವಾಗ ಭೀಮು

ನಿದ್ದ ಅಡಿಗೆಯ ಮನೆಯ ಮುಂದೆ ಬರುತ್ತ, ದೊಡ್ಡ ಮದದಾನೆಯಂತೆ ಬಾಗಿಲಲ್ಲಿ ನಿಂತಿದ್ದ ಭೀಮಸೇನನನ್ನು ನೋಡಿ ಪರಿಹಾಸಪೂರ್ವಕವಾಗಿ ಮೆಲ್ಲಗೆ "ನನ್ನನ್ನು ಆಪತ್ತಿನಿಂದ ತಪ್ಪಿಸಿ ಕಾಪಾಡಿದ ಆ ಗಂಧರ್ವರಾಜನಿಗೆ ವಂದನವು. ಯಾವ ತಪ್ಪೂ ಇಲ್ಲದೆ ದಿಕ್ಕುಗೆಟ್ಟು ಇಲ್ಲಿ ಬಂದು ಜೀವನಾರ್ಥವಾಗಿ ಸೇರಿಕೊಂಡಿದ್ದ ನನ್ನನ್ನು ಆ ಕೀಚಕರಿಂದ ರಕ್ಷಿಸಿದ ಗಂಧರ್ವನಿಗೆ ನಮಸ್ಕಾರಗಳು" ಎಂದಳು. ಆಗ ಭೀಮನು ಅವಳಿಗೆ ತಿಳಿಯುವಂತೆ, "ಯಾವ ಪುರುಷರು ನಿನಗೆ ಸ್ವಾಧೀನರಾಗಿ ಲೋಕಸಂಚಾರ ಮಾಡುತ್ತಿರುವರೋ, ಅವರಿಗೆ ನೀನು ಯಾವಾಗಲೂ ವಶವರ್ತಿನಿಯಾಗಿದ್ದು ನಿನ್ನ ಇಷ್ಟದಂತೆ ಸಂಚರಿಸುತ್ತಿರು. ಯಾವ ಪುರುಷರು ನಿನಗೆ ವಶರಾಗಿ ತಿರುಗುತ್ತಿರುವರೋ, ಅವರೂ ಈ ನಿನ್ನ ಮಾತನ್ನು ಕೇಳಿ ತಾವು ಋಣಮುಕ್ತರಾದಂತೆ ತಿಳಿದು ಇನ್ನುಮೇಲೆ ನೆಮ್ಮದಿಯಿಂದಿರಲಿ!" ಎಂದನು.

ಓ ಜನಮೇಜಯರಾಜನೆ! ಇವರಿಬ್ಬರ ಭಾವಗರ್ಭವಾದ ಈ ಸಂಭಾಷಣವನ್ನು ಕೇಳಿಯೂ, ಅದರ ಮರ್ಮವೇನೆಂದು ಬೇರೆ ಜನರಿಗೆ ತಿಳಿಯಲಿಲ್ಲ. ಆ ಮೇಲೆ ದ್ರೌಪದಿಯು ತನ್ನ ದಾರಿಯನ್ನು ಹಿಡಿದು ಹೊರಟು ಹೋದಳು. ಅದರಿಂದಾಚೆಗೆ ತಿರುಗಿ ದ್ರೌಪದಿಯು ನಾಟ್ಯಶಾಲೆಗೆ ಬಂದು, ಅಲ್ಲಿ ರಾಜಕನ್ಯೆಯರಿಗೆ ನಾಟ್ಯವನ್ನು ಕಲಿಸುತ್ತಿದ್ದ ಅರ್ಜುನನನ್ನು ಕಂಡಳು. ನಿರಪರಾಧಿಯಾಗಿದ್ದರೂ ಕಷ್ಟಕ್ಕೊಳಗಾಗಿ ಬಹಳ ದೈನ್ಯದಿಂದ ತನ್ನ ಕಡೆಗೆ ಬರುತ್ತಿದ್ದ ಸೈರಂಧ್ರಿಯನ್ನು ದೂರದಲ್ಲಿ ಕಂಡೊಡನೆ, ಅಲ್ಲಿ ನಾಟ್ಯವನ್ನು ಕಲಿಯುತ್ತಿದ್ದ ರಾಜಕನ್ಯೆಯರೆಲ್ಲರೂ, ತಮ್ಮ ನಾಟ್ಯಾಚಾರ್ಯನಾದ ಅರ್ಜುನನೊಡನೆ ಥಟ್ಟನೆ ಹೊರಗೆ ಬಂದು ಆ ಸೈರಂಧ್ರಿಯನ್ನು ನೋಡಿ ಹೀಗೆಂದು ಹೇಳುವರು. "ಆಹಾ! ಸೈರಂಧ್ರೀ! ಅದೃಷ್ಟವಶದಿಂದ ತಪ್ಪಿಬಂದೆ! ನಿನ್ನ ಭಾಗ್ಯವಶದಿಂದ ಆ ಪಾಪಿಗಳು ಹತರಾಗಿ ನೀನು ತಿರುಗಿ ಇಲ್ಲಿಗೆ ಕ್ಷೇಮದಿಂದ ಬರುವಂತಾಯಿತು." ಎಂದರು. ಬೃಹನ್ನಳೆಯು ಆ ಸೈರಂಧ್ರಿಯನ್ನು ನೋಡಿ "ಸೈರಂಧ್ರೀ! ನೀನು ಹೇಗೆ ತಪ್ಪಿಸಿಕೊಂಡು ಬಂದೆ! ಆ ಪಾಪಿಗಳು ಹೇಗೆ ಕೊಲ್ಲಲ್ಪಟ್ಟರು? ನಿನ್ನ ವೃತ್ತಾಂತವನ್ನೆಲ್ಲ ಕೇಳಬೇಕೆಂದಪೇಕ್ಷಿಸುವೆನು. ನಡೆದುದನ್ನು ನಡೆದ

ಹಾಗೆ ಹೇಳು'' ಎಂದನು. ಅದಕ್ಕಾ ಸೈರಂಧ್ರಿಯು ''ಓ ಬೃಹನ್ನಳೇ! ನಿನಗೆ ಸೈರಂಧ್ರಿಯಾದ ನನ್ನ ವಿಚಾರವೇಕೆ? ಈಗ ನನ್ನಿಂದ ನಿನಗಾಗ ಬೇಕಾದ ಕಾರ್ಯವೇನಿದೆ? ಎಲೆ ಕಲ್ಯಾಣೀ! ನೀನು ಕನ್ಯಾಂತಃಪುರದಲ್ಲಿ ಯಾವಾಗಲೂ ಸುಖವಾಗಿದ್ದು ಕೊಂಡಿರತಕ್ಕವಳು. ಸೈರಂಧ್ರಿಯು ಅನುಭವಿಸುವ ದುಃಖಕ್ಕೆ ನಿನಗೇನೂ ಸಂಬಂಧವಿರುವುದಿಲ್ಲ. ಇಲ್ಲಿ ಸುಖವಾಗಿರತಕ್ಕ ನಿನಗೆ ಅಂತಹ ದುಃಖವೇನೂ ಬರುವಹಾಗಿಲ್ಲ. ಆದುದರಿಂದ ದುಃಖಿತೆಯಾದ ನನ್ನ ಸ್ಥಿತಿಯನ್ನು ನೋಡಿ ನಗುತ್ತಾ ಈ ರೀತಿ ಕೇಳುತ್ತಿರುವೆ'' ಎಂದಳು. ಆಗ ಬೃಹನ್ನಳೆಯು ''ಎಲೆ ಶುಭಾಂಗೀ! ಈ ಬೃಹನ್ನಳೆಯಾದರೂ (ನಾನಾದರೂ) ಅನುಭವಿಸುವ ದುಃಖಕ್ಕೆ ಪಾರವೇ ಇಲ್ಲದಂತಿದೆ. ತಿರ್ಯಗ್ಜಾತಿಯಲ್ಲಿ ಹುಟ್ಟಿದ ಒಂದು ಜಂತುವಿನಂತೆ ನಾನೂ ದುರಂತವಾದ ದುಃಖದಲ್ಲಿರುವುದನ್ನು ನೀನು ತಿಳಿಯೆ? ನಿನ್ನ ಸಂಗಡಲೇ ನಾನೂ ಇಲ್ಲಿರುವೆನು. ನೀನೂ ನಿನ್ನ ಕಡೆಯವರೆಲ್ಲರೊಡನೆಯೇ ಇಲ್ಲಿರುವೆ. ನಿನಗಿಂತಲೂ ಹೆಚ್ಚು ಕಷ್ಟದಲ್ಲಿಯೇ ನಾನು ಇಲ್ಲಿ ವಾಸಿಸುತ್ತಿರುವೆನು. ನೀನು ಹೀಗೆ ಕಷ್ಟಪಡುತ್ತಿರುವಾಗ ಯಾವನು ತಾನೇ ದುಃಖಿಸದಿರಲಾರನು? ಆದರೆ, ಒಬ್ಬನ ಹೃದಯವೆಂತದೆಂಬುದನ್ನು ಮತ್ತೊಬ್ಬರು ತಿಳಿದುಕೊಳ್ಳಲು ಸಾಧ್ಯವಿಲ್ಲ. ಆದುದರಿಂದಲೇ ನನ್ನ ಮನಸ್ಸು ಹೇಗಿದೆಯೆಂಬುದು ನಿನಗೆ ತಿಳಿಯಲಿಲ್ಲ'' ಎಂದನು.

ಓ ಜನಮೇಜಯನೆ ಕೇಳು. ಆಮೇಲೆ ದ್ರೌಪದಿಯು, ಅಲ್ಲಿದ್ದ ಕನ್ಯೆಯರೊಡನೆಯೇ ಅರಮನೆಗೆ ಪ್ರವೇಶಿಸಿ, ಸುದೇಷ್ಣೆಯ ಬಳಿಗೆ ಬಂದಳು. ಇವಳನ್ನು ಕಂಡೊಡನೆ ರಾಣಿಯು ತನ್ನ ಪತಿಯಾದ ವಿರಾಟನು ಹೇಳಿದ್ದ ಮಾತಿನಮೇಲೆ ಅವಳನ್ನು ಕುರಿತು ಹೀಗೆಂದು ಹೇಳುವಳು. ''ಸೈರಂಧ್ರಿ! ಇನ್ನು ನೀನು ಇಲ್ಲಿರಬೇಡ! ಒಡನೆಯೇ ನಮ್ಮ ಮನೆಯನ್ನು ಬಿಟ್ಟು ನಿನ್ನಿಷ್ಟಬಂದಕಡೆಗೆ ಹೋಗು. ಗಂಧರ್ವರಿಂದ ತನಗೇನು ಆಪಾಯವು ಬರುವುದೋ ಎಂದು ರಾಜನು ಬಹಳವಾಗಿ ಅಂಜುತ್ತಿರುವನು. ನೀನಾದರೋ ಇನ್ನೂ ಪ್ರಾಯದ ಹೆಂಗಸು. ರೂಪದಲ್ಲಿಯೂ ಎಣೆಯಿಲ್ಲದವಳು. ಪುರುಷರ ಮನಸ್ಸು ಯಾವಾಗಲೂ (ಸ್ತ್ರೀಯರ) ಅಂಗಸ್ಪರ್ಶಸುಖದಲ್ಲಿಯೇ

ಅನುರಾಗವುಳ್ಳದು. ನಿನ್ನಿಂದ ನನಗೂ, ನಮ್ಮ ನಗರಕ್ಕೂ, ನಮ್ಮ ರಾಷ್ಟ್ರದ ಮೊತ್ತಕ್ಕೂ ಭಯಕ್ಕೆ ಕಾರಣವಾಗಿದೆ. ಆದುದರಿಂದ ಈಗಲೇ ನೀನು ನಮ್ಮ ನಗರವನ್ನು ಬಿಟ್ಟು ಬೇರೆಲ್ಲಿಯಾದರೂ ನಿನ್ನ ಇಷ್ಟಬಂದ ಕಡೆಗೆ ಹೋಗಿರು. ನಿನ್ನ ದೆಸೆಯಿಂದ ನನ್ನ ಬಂಧುಜನರೆಲ್ಲರೂ ಹತರಾದರು. ನಿನ್ನ ಬುದ್ಧಿಯೇನೋ ಬಹಳ ಕ್ರೂರವಾಗಿ ತೋರುತಿದೆ. ನನ್ನ ಸಹೋದರರೆಲ್ಲರೂ ನಿನ್ನ ನಿಮಿತ್ತದಿಂದಲ್ಲವೇ ಕೊಲೆಗೆ ಗುರಿಯಾದರು? ಆದುದರಿಂದ ನಮಗೆಲ್ಲ ಆ ಗಂಧರ್ವರಾಜರಿಂದ ಬಹಳ ಭಯವುಂಟಾಗಿದೆ. ನೀನು ಇಷ್ಟಬಂದ ಕಡೆಗೆ ಹೊರಟುಹೋಗು. ನಮಗೇನೂ ಅಪಾಯವಿಲ್ಲದಂತೆ ಮಾಡು'' ಎಂದಳು. ಆ ಮಾತುಗಳನ್ನು ಕೇಳಿ ಸೈರಂಧ್ರಿಯು ಸುದೇಷ್ಣೆಯನ್ನು ಕುರಿತು ಹೀಗೆಂದು ಹೇಳುವಳು. ''ಎಲೆ ಭಾಮಿನಿ! ನಿನ್ನ ಪತಿಯಾದ ರಾಜನು ಇನ್ನು ಹದಿಮೂರುದಿನಗಳವರೆಗೆ ಮಾತ್ರ ಸಹಿಸಿಕೊಂಡಿರಲಿ! ಅಷ್ಟರಲ್ಲಿ ಆ ಗಂಧರ್ವರ ವ್ರತಕಾಲವು ಮುಗಿದು ಅವರು ಕೃತಕೃತ್ಯರಾಗುವರು. ಒಡನೆಯೇ ಅವರು ಬಂದು ನನ್ನನ್ನು ಕರೆದುಕೊಂಡು ಹೋಗುವರು. ಅವರು ನಿಮಗೂ ಪ್ರಿಯವನ್ನುಂಟುಮಾಡುವರು. ವಿರಾಟರಾಜನು ತನ್ನ ಬಂಧುವರ್ಗದೊಡನೆ ಅವರಿಂದ ಒಳ್ಳೇ ಶ್ರೇಯಸ್ಸನ್ನು ಪಡೆಯುವುದು ನಿಜವು. ಆ ಗಂಧರ್ವರು ಯಾವಾಗಲೂ ಉಪಕಾರಸ್ಮರಣೆಮಾಡತಕ್ಕ ಕೃತಜ್ಞತಾಸ್ವಭಾವವುಳ್ಳವರು. ಪರಮ ಸಾಧುಗಳು. ಬಲದಿಂದ ಕೊಬ್ಬಿದವರು. ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡುವುದರಲ್ಲಿ ಅಕ್ಕರೆಯುಳ್ಳವರು. ಅಂತವರು ರಾಜನಿಂದ ಉಪಕಾರವನ್ನು ಪಡೆದಿರುವುದರಿಂದ, ಅವನಿಗೆ ತಕ್ಕ ಪ್ರತ್ಯುಪಕಾರವನ್ನು ಮಾಡದೆ ಹೋಗುವವರಲ್ಲ. ನಾನು ಇಲ್ಲಿ ಕಾರ್ಯಾರ್ಥಿನಿಯಾಗಿ ಬಂದಿರುವುದರಿಂದ, ಕಾಲಕ್ಕೆ ತಕ್ಕಂತೆ ಏನೋ ಹೇಳುವೆನೆಂದು ತಿಳಿಯಬೇಡ. ಆ ದಿನಗಳವರೆಗೆ ಮಾತ್ರ ನನ್ನನ್ನು ಕಾಪಾಡುತ್ತಿರು. ಅದರಿಂದ ನಿನಗೆ ಶ್ರೇಯಸ್ಸುಂಟು'' ಎಂದಳು.

ಈ ಮಾತನ್ನು ಕೇಳಿ ಸುದೇಷ್ಣೆಗೆ ಅವಳಲ್ಲಿ ಕನಿಕರವು ಹುಟ್ಟಿತು. ತನ್ನ ಸಹೋದರರ ಮರಣದಿಂದುಂಟಾದ ದುಃಖದಿಂದ ಬಹಳವಾಗಿ

ನೊಂದಿದ್ದರೂ, ಅವಳು ಪ್ರೀತಿಪುರಸ್ಸರವಾಗಿ ದ್ರೌಪದಿಯನ್ನು ಕುರಿತು, "ಎಲೆ ಕಲ್ಯಾಣಿ! ನಿನ್ನ ಇಷ್ಟವಿರುವ ವರೆಗೆ ಇಲ್ಲಿ ಸುಖವಾಗಿರು. ನಾನು ನಿನ್ನಲ್ಲಿ ಮರೆಹೊಕ್ಕಿರುವೆನು. ನನ್ನ ಪತಿಯನ್ನೂ, ಮುಖ್ಯವಾಗಿ ನನ್ನ ಪುತ್ರರನ್ನೂ ಅಪಾಯಕ್ಕೊಳಗಾಗದಂತೆ ರಕ್ಷಿಸಬೇಕಾದ ಭಾರವು ನಿನ್ನದು" ಎಂದು ಹೇಳಿ, ಒಡನೆಯೇ ಸುದೇಷ್ಣೆಯು ತನ್ನ ಪತಿಯಾದ ವಿರಾಟರಾಜನಿದ್ದಲ್ಲಿಗೆ ಬಂದು, "ಕಾಂತಾ! ಆ ಸೈರಂಧ್ರಿಯನ್ನು ಇನ್ನು ಮೂವತ್ತು ದಿನಗಳ ವರೆಗೆ ನನ್ನಲ್ಲಿಯೇ ಇಟ್ಟುಕೊಂಡಿರುವೆನು" ಎಂದು ತಿಳಿಸಿದಳು.

ಇದು ಇಪ್ಪತ್ತೈದನೆಯ ಅಧ್ಯಾಯವು.

ಇಲ್ಲಿಗೆ ಕೀಚಕವಧಪರ್ವವು ಸಮಾಪ್ತವು.

ಗೋಗ್ರಹಣಪರ್ವವು.

ಪಾಂಡವರನ್ನು ಕಂಡುಹಿಡಿಯುವುದಕ್ಕಾಗಿ ಹೊರಟ
ದುರ್ಯೋಧನನ ಚಾರರು ವಿರಾಟನಗರದಲ್ಲಿ ನಡೆದ
ಕೀಚಕವಧವನ್ನು ದುರ್ಯೋಧನನಿಗೆ
ತಿಳಿಸಿದುದು.

ಓ ಜನಮೇಜಯರಾಜನೆ ಕೇಳು. ಕೀಚಕನ ಮರಣಕ್ಕಾಗಿ ವಿರಾಟನೂ, ಅವನ ಮಂತ್ರಿಪುರೋಹಿತಾದಿಗಳೂ ಬಹಳ ದುಃಖಾಕುಲರಾಗಿದ್ದರು. ವಿರಾಟನಗರದಲ್ಲಿಯೂ, ಅವನ ದೇಶದಲ್ಲಿಯೂ ಇದ್ದ ಜನಸಾಮಾನ್ಯವೆಲ್ಲ, ಮಹಾಬಲವುಳ್ಳ ಕೀಚಕನ ಮತ್ತು ಅವನ ಸಹೋದರರ ಕೊಲೆಯನ್ನು ಕೇಳಿ, ಇದೊಂದು ಮಹಾಭಯಂಕರವಾದ ಸಂಗತಿಯೆಂದು ಆಶ್ಚರ್ಯಪಡುತ್ತಿದ್ದರು. ನಗರಗಳಲ್ಲಿಯೂ, ದೇಶದಲ್ಲಿಯೂ, ಎಲ್ಲಿ ನೋಡಿದರೂ ಜನರು ಬೇರೆಬೇರೆಯಾಗಿ ಗುಂಪುಕೂಡಿಕೊಂಡು ಒಬ್ಬರಿಗೊಬ್ಬರು ಹೀಗೆಂದು ಮಾತಾಡಿಕೊಳ್ಳುತ್ತಿದ್ದರು. "ಆಹಾ! ಏನಾಶ್ಚರ್ಯವಿದು! ಕೀಚಕನೋ ಮಹಾವೀರ್ಯವುಳ್ಳವನು! ರಾಜನಿಗೆ ವಿಶೇಷ ಪ್ರೇಮಪಾತ್ರನು. ಮದಗರ್ವಿತನು. ಯುದ್ಧದಲ್ಲಿ ಮಹಾಕ್ರೂರಶವುಳ್ಳವನು. ಎಂತವರಿಗೂ ದುರ್ಜಯನು. ಬಲಾಢ್ಯನು. ಅನೇಕ ಶತ್ರುಗಳನ್ನು ಕೊಂದವನು. ದುರ್ಬುದ್ಧಿಯುಳ್ಳ ಆತನಿಗೆ ಪರಸ್ತ್ರೀಯರ ಮೇಲೆಯೇ ಕಣ್ಣು. ಅವನು ಸೈರಂಧ್ರಿಯ ದೆಸೆಯಿಂದ ಅರ್ಧರಾತ್ರಿಯಲ್ಲಿ ಗಂಧರ್ವರಿಂದ ಹತನಾದನಂತೆ!" ಎಂದುಗುಸುಗುಟ್ಟುತ್ತ, ಆ ಕೀಚಕನ ವಧವನ್ನುಕುರಿತೇ ಮಾತನಾಡುತ್ತಿದ್ದರು. ಕೀಚಕನು ಹತನಾದಕೂಡಲೆ, ಆ ವೃತ್ತಾಂತವು ದೇಶದೇಶಕ್ಕೂ ಹರಡಿ, ಎಲ್ಲೆಲ್ಲಿನ ಜನರೂ ಅವನ್ನು ಕುರಿತೇ ಆಶ್ಚರ್ಯದಿಂದ ಮಾತಾಡಿಕೊಳ್ಳುತಿದ್ದರು.

ಇದೇ ಸಮಯದಲ್ಲಿ, ಅಜ್ಞಾತವಾಸದಲ್ಲಿದ್ದ ಪಾಂಡವರನ್ನು ಕಂಡುಹಿಡಿಯುವುದಕ್ಕಾಗಿ ದುರ್ಯೋಧನಾಜ್ಞೆಯಿಂದ ಅನ್ಯದೇಶಗಳಿಗೆ ಕಳುಹಿಸಲ್ಪ

ಟ್ಟಿದ್ದ ಚಾರರು, ಅನೇಕ ದೇಶಗಳನ್ನೂ, ಪಟ್ಟಣಗಳನ್ನೂ ಹುಡುಕಿನೋಡಿದ ಮೇಲೆ, ತಾವು ಸಂಕೇತಮಾಡಿಕೊಂಡಿದ್ದ ಸ್ಥಳಕ್ಕೆ ಬಂದು, ಅಲ್ಲಿ ಎಲ್ಲರೂ ಒಂದಾಗಿ ಸೇರಿದರು. ಅಲ್ಲಿ ಒಬ್ಬರಿಗೊಬ್ಬರು ಮಾತಾಡಿಕೊಂಡು, ಅಲ್ಲಿಂದ ಎಲ್ಲರೂ ಹಸ್ತಿನಾಪುರಿಗೆ ಬಂದು ಸೇರಿ, ಅಲ್ಲಿ ದುರ್ಯೋಧನನನ್ನು ನೋಡುವುದಕ್ಕಾಗಿ ರಾಜಸ್ಥಾನಕ್ಕೆ ಬಂದರು. ಅಲ್ಲಿ ದ್ರೋಣ, ಕರ್ಣ, ಕೃಪಾದಿ ವೀರರಿಂದಲೂ, ಮಹಾತ್ಮನಾದ ಭೀಷ್ಮನಿಂದಲೂ, ಮಹಾರಥರೆನಿಸಿದ ತ್ರಿಗರ್ತ ದೇಶಾಧಿಪತಿಗಳಿಂದಲೂ ಪರಿವೃತನಾಗಿ, ಸಭೆಯಲ್ಲಿದ್ದ ದುರ್ಯೋಧನನಿಗೆ ಜಯಜಯ ಶಬ್ದದೊಡನೆ ತಲೆಬಗ್ಗಿಸಿ ನಮಸ್ಕರಿಸಿದರು. ಆ ಸಭಾಮಧ್ಯದಲ್ಲಿ ಕೌರವನು ಸೂರ್ಯಪ್ರಭೆಯಂತೆ ಬೆಳಗುತ್ತಿರುವ ಸುವರ್ಣ ಸಿಂಹಾಸನದ ಮೇಲೆ ಠೀವಿಯಿಂದ ಕುಳಿತಿರುವನು. ದೇವತೆಗಳು ಇಂದ್ರನನ್ನು ಹೇಗೋ ಹಾಗೆ ಅನೇಕಮಂತ್ರಿಗಳು ಅವನನ್ನು ಉಪಾಸಿಸುತ್ತಿರುವರು. ವಿದ್ವಾಂಸರೂ, ಪಾಠಕರೂ, ಕವಿಗಳೂ, ಸ್ತುತಿಪಾಠಕರೂ, ಸಾಮಂತರಾಜರೂ ಅವರ ಪರಿವಾರದವರೂ ಸುತ್ತಿನಿಂತಿರುವರು. ಇಂತಹ ಸಭಾಮಧ್ಯದಲ್ಲಿ ರಾಜನು ಕುಳಿತಿರುವಾಗ, ಆ ಚಾರರೆಲ್ಲರೂ ಮುಂದೆ ಬಂದು ವಿನಯದಿಂದ ಹೀಗೆಂದು ತಿಳಿಸುವರು.

"ಓ ರಾಜೇಂದ್ರ! ನಾವು ಪಾಂಡವರನ್ನು ಹುಡುಕುವುದಕ್ಕಾಗಿ ನಮ್ಮಿಂದಾದ ಪ್ರಯತ್ನಗಳನ್ನೆಲ್ಲ ಮಾಡಿದೆವು. ಜನಶೂನ್ಯವಾಗಿ, ದುಷ್ಟ ಮೃಗಗಳಿಂದಲೂ, ನಾನಾಜಾತಿಯ ದುಂಬಿಗಳಿಂದಲೂ, ಗಿಡಮರಗಳಿಂದಲೂ, ನಾನಾತರದ ಪೊದೆಗಳಿಂದಲೂ, ದುರ್ಗಮವಾದ ಆ ಮಹಾರಣ್ಯದಲ್ಲಿ ಪ್ರವೇಶಿಸಿ, ಎಲ್ಲೆಲ್ಲಿಯೂ ಹುಡುಕಿಬಂದೆವು. ಸತ್ಯಪರಾಕ್ರಮಿಗಳಾದ ಆ ಪಾಂಡವರು ಹೋದ ದಾರಿಯೇ ನಮಗೆ ತಿಳಿಯಲಿಲ್ಲ. ಋಷ್ಯಾಶ್ರಮಗಳಲ್ಲಿಯೂ, ವನಗಳಲ್ಲಿಯೂ, ಎತ್ತರವಾದ ಪರ್ವತಶಿಖರಗಳಲ್ಲಿಯೂ, ನಾನಾದೇಶಗಳಲ್ಲಿಯೂ, ಜನನಿಬಿಡವಾದ ಪ್ರದೇಶಗಳಲ್ಲಿಯೂ, ಬೀದಿಯ ಚೌಕಗಳಲ್ಲಿಯೂ, ಪಟ್ಟಣಗಳಲ್ಲಿಯೂ ನಾವು ಆ ಪಾಂಡವರ ಹೆಜ್ಜೆಯ ಗುರುತುಗಳನ್ನಾದರೂ ಕಂಡುಹಿಡಿಯಲು ಪ್ರಯತ್ನಿಸಿದೆವು. ಅವರು ಎಲ್ಲಿಯೋ ಬಹುಬೇಗನೆ ಪಲಾಯನಮಾಡಿ ಅಡಗಿಕೊಂಡುದರಿಂದ, ನಮಗೆ

ಸಿಕ್ಕಲಿಲ್ಲ. ಆದರೆ, ನಾವು ಇಷ್ಟುಮಟ್ಟಿಗೆ ಹುಡುಕಿದರೂ, ಅವರ ಸುಳಿವೇ ಕಾಣದುದರಿಂದ, ಅವರೆಲ್ಲರೂ ಸತ್ತೇ ಹೋಗಿರಬೇಕು. ರಾಜಾ! ನಿನಗೆ ಶುಭವಾಗಲಿ. ಪರ್ವತಾಗ್ರದ ಪೊದೆಗಳಲ್ಲಿಯೂ, ಗುಹೆಗಳ ಮಧ್ಯದಲ್ಲಿಯೂ, ನೆಲಮಾಳಿಗೆಗಳಲ್ಲಿಯೂ, ಬೆಟ್ಟದ ಮೇಲಿನ ನದಿಗಳಲ್ಲಿಯೂ, ಮಡುಗಳಲ್ಲಿಯೂ, ಸರೋವರಗಳಲ್ಲಿಯೂ, ತಟಾಕಗಳಲ್ಲಿಯೂ, ದುರ್ಗಮಗಳಾದ ಮಹಾರಣ್ಯಗಳಲ್ಲಿಯೂ, ಗ್ರಾಮಗಳಲ್ಲಿಯೂ, ಹೂತೋಟಗಳಲ್ಲಿಯೂ ಹುಡುಕಿದೆವು. ಮತ್ತು ಆನೆಗಳ ಹಿಂಡಿನಲ್ಲಿಯೂ, ಹುಲಿ, ಸಿಂಹ, ಶರಭ ಮೊದಲಾದ ಮೃಗಗಳಿರತಕ್ಕ ಸ್ಥಳಗಳಲ್ಲಿಯೂ ಹುಡುಕಿದೆವು. ಅವರು ಹೋದ ದಾರಿಯನ್ನು ಯಾವಯಾವ ವಿಧದಿಂದಲೂ ತಿಳಿಯಲಸಾಧ್ಯವಾಗಿದೆ. ಇದಲ್ಲದೆ, ಅವರ ರಥಗಳು ಎಲ್ಲಿವೆಯೆಂಬ ಸೂಚನೆಯನ್ನಾದರೂ ತಿಳಿಯಬೇಕೆಂದು ನಾವು ಕೆಲವು ಕಾಲದವರೆಗೆ ಅವರ ಸಾರಥಿಗಳನ್ನು ಹಿಂಬಾಲಿಸುತ್ತ ಅವರನ್ನು ಅನುಸರಿಸುತಿದ್ದೆವು. ಆ ಭಾಗದಲ್ಲಿ ಸ್ವಲ್ಪಮಟ್ಟಿಗೆ ಯಥಾರ್ಥವಾದ ಸಂಗತಿಯು ನಮಗೆ ತಿಳಿಯಬಂದಿತು. ಸಾರಥಿಗಳು ಪಾಂಡವರನ್ನು ಬಿಟ್ಟು ದ್ವಾರಕೆಗೆ ಹೋದರು. ದ್ವಾರಕೆಯಲ್ಲಿ ನೋಡಿದರೆ ದ್ರೌಪದಿಯಾಗಲಿ, ಪಾಂಡವರಾಗಲಿ ಯಾರೂ ಇಲ್ಲವು. ಇದು ಯಥಾರ್ಥವಾದ ಸಂಗತಿ! ರಾಜೇಂದ್ರಾ! ಪಾಂಡವರು ಈ ಭೂಮಿಯಲ್ಲಿಯೇ ಇಲ್ಲವೆಂದು ತೋರುವುದು. ಪಾಂಡವರು ತೀರಿಹೋಗಿರಬೇಕು. ಇನ್ನು ನೀನು ನಿಶ್ಚಿಂತನಾಗಿ ನೆಮ್ಮದಿಯಿಂದಿರು. ಸರ್ವವಿಧದಿಂದಲೂ ಪಾಂಡವರು ನಶಿಸಿಯೇ ಹೋಗಿರುವರು. ಭರತೋತ್ತಮಾ! ನಿನಗೆ ವಂದನವು. ಕಾಡುಗಳು, ಬೆಟ್ಟಗಳು, ಮಹಾರಣ್ಯಗಳು, ನಗರಗಳು, ಗ್ರಾಮಗಳು, ದೇಶಗಳು, ಮೊದಲಾಗಿ ಈ ಭೂಮಿಯೊಳಗಿನ ಸಮಸ್ತ ಭಾಗಗಳನ್ನೂ ನಾವು ನಿಶ್ಶೇಷವಾಗಿ ಹುಡುಕಿದುದಾಯಿತು. ಪಾಂಡವರ ಸುಳಿವೇ ಇಲ್ಲ. ತಿರುಗಿ ಮತ್ತೊಮ್ಮೆ ಅವರನ್ನು ಹುಡುಕಿಬರುವುದಕ್ಕೇನಾದರೂ ಬೇರೆ ಉಪಾಯವಿದ್ದರೆ, ಅದನ್ನು ತಿಳಿಸಿ ನಮಗೆ ಆಜ್ಞೆಯನ್ನು ಕೊಡು. ಆದರೆ, ಓ ವೀರಾಗ್ರಣೀ! ನಿನಗೆ ಪ್ರಿಯವಾಗಿಯೂ, ಕ್ಷೇಮಕರವಾಗಿಯೂ ಇರುವ ಒಂದು ಹೊಸಸಂಗತಿಯನ್ನು ಮಾತ್ರ ತಿಳಿಸುವೆವು ಕೇಳು. ಮತ್ಸ್ಯದೇಶದಲ್ಲಿ ಕೀಚಕನೆಂಬೊಬ್ಬನಿದ್ದನು. ಅವನು ಮತ್ಸ್ಯರಾಜನಿಗೆ

ಬಹಳ ಪ್ರೇಮಪಾತ್ರನು. ಅವನು ಸೂತಜಾತಿಯಲ್ಲಿ ಹುಟ್ಟಿದವನು. ಮಹಾ ಬಲಶಾಲಿ! ತ್ರಿಗರ್ತರನ್ನು ಅನೇಕಾವರ್ತಿ ತನ್ನ ಪರಾಕ್ರಮದಿಂದ ಜಯಿಸಿದವನು. ಅಂತಹ ವೀರನು ರಾತ್ರಿಯಲ್ಲಿ ಗಂಧರ್ವರಿಂದ ವಧಿಸಲ್ಪಟ್ಟನು. ರಾಜೇಂದ್ರಾ! ಆ ಕೀಚಕನು ಸುದೇಷ್ಣೆಯ ತಮ್ಮನು ವಿರಾಟನಿಗೆ ಭಾವ ಮೈದುನನು. ಮತ್ತು ಅವನ ಮುಖ್ಯ ಸೇನಾಪತಿ. ಅವನ ಬುದ್ಧಿಯು ಬಹಳ ಗಂಭೀರವಾದುದು. ಸ್ವಭಾವದಲ್ಲಿ ಕ್ರೂರನಾದರೂ ಶೂರನು. ಮತ್ತು ವೀರನು. ಸರ್ವಕಾಲದಲ್ಲಿಯೂ ಸುಖಸಂತೋಷಗಳಿಂದ ಉತ್ಸಾಹ ಗೊಂಡಿದ್ದವನು. ಯುದ್ಧವಿದ್ಯೆಗಳನ್ನು ಚೆನ್ನಾಗಿ ಬಲ್ಲವನು. ಶತ್ರುಗಳ ವೀರ್ಯವನ್ನಡಗಿಸತಕ್ಕವನು. ಸಿಂಹಕ್ಕೆ ಸಮಾನವಾದ ಪರಾಕ್ರಮವುಳ್ಳವನು. ಪ್ರಜೆಗಳನ್ನು ರಕ್ಷಿಸುವುದರಲ್ಲಿಯೂ, ಶತ್ರುಗಳನ್ನು ನಿಗ್ರಹಿಸುವುದರಲ್ಲಿಯೂ ಸಮರ್ಥನು. ಅವನು ಆತ್ಮಗೌರವದಲ್ಲಿ ದೃಷ್ಟಿಯುಳ್ಳವನು. ಪುರುಷರ ಮನಸ್ಸನ್ನು ಆಕರ್ಷಿಸಬಲ್ಲವನು. ಧೀರನು. ವಾಕ್ಚತುರನು. ಯುದ್ಧಪ್ರಿಯನು. ಧರ್ಮಾರ್ಥಕಾಮಗಳನ್ನು ಗಳಿಸತಕ್ಕವನು. ಮನುಷ್ಯರಲ್ಲಿ ಮೇಲಾದ ಹೆಸರುಗೊಂಡವನು. ಅಂತವನು, ಒಂದು ಸ್ತ್ರೀಯ ನಿಮಿತ್ತವಾಗಿ ಅರ್ಧರಾತ್ರಿಯ ವೇಳೆಯಲ್ಲಿ ತನ್ನ ಸಹೋದರರೊಡನೆ ಗಂಧರ್ವರಿಂದ ವಧಿಸಲ್ಪಟ್ಟು, ಅವನ ಸ್ನೇಹಿತರೂ, ಅವನ ಕಡೆಯ ಕೆಲವು ಯೋಧರೂ ಶಸ್ತ್ರಗಳಿಂದ ಕೊಲ್ಲಲ್ಪಟ್ಟರಂತೆ! ಆ ವಿರಾಟನ ಅಂತಃಪುರದಲ್ಲಿ ಸೈರಂಧ್ರಿಯೊಬ್ಬಳಿರುವಳು. ಅವಳು ಗಂಧರ್ವಪತ್ನಿಯಂತೆ! ಕೀಚಕನು ತನ್ನ ಬಲದಕೊಬ್ಬಿನಿಂದ ಬುದ್ಧಿಗೆಟ್ಟು, ಆ ಸೈರಂಧ್ರಿಯಮೇಲೆ ಕಣ್ಣಿಟ್ಟು, ಅವಳನ್ನು ಬಲಾತ್ಕಾರಿಸಿದನಂತೆ! ಇದಕ್ಕಾಗಿ ಅವನು ರಾತ್ರಿಯಲ್ಲಿ ಗಂಧರ್ವರಿಂದ ತನ್ನ ಬಹುಮಂದಿ ಬಂಧುಗಳೊಡನೆ ಹತನಾದನೆಂದು ಕೇಳಿರುವೆವು. ಆದುದರಿಂದ, ಇಲ್ಲಿಂದಾಚೆಗೆ ನೀನು ಮತ್ತೊಮ್ಮೆ ಪಾಂಡವರನ್ನು ಹುಡುಕುವುದಕ್ಕಾಗಿ ಚಾರರನ್ನು ಆಕಡೆಗೆ ಮಾತ್ರ ಕಳುಹಿಸುವುದು ಉತ್ತಮವೆಂದು ನಮಗೆ ತೋರುವುದು. ದುರಾತ್ಮನಾದ ಕೀಚಕನು ತನ್ನ ತಮ್ಮಂದಿರೊಡನೆ ಗಂಧರ್ವರಿಂದ ಹತನಾದನೆಂಬ ಸುದ್ದಿಯನ್ನುಮಾತ್ರ ನಾವು ಕೇಳಬಂದೆವು. ನಿನಗೆ ಶುಭವಾಗಲಿ! ಈ ಪ್ರಿಯವೃತ್ತಾಂತವನ್ನು ಕೇಳಿ

ಮುಂದೆ ಶತ್ರುಗಳ ಪರಾಭವವನ್ನು ಕುರಿತು ನೀನು ನಡೆಸಬೇಕಾದ ಕಾರ್ಯವೇನೋ ಅದನ್ನು ಶೀಘ್ರದಲ್ಲಿ ಮಾಡು'' ಎಂದರು.

ಇದು ಇಪ್ಪತ್ತೊಂಭತ್ತನೆಯ ಅಧ್ಯಾಯವು.

ಪಾಂಡವರನ್ನು ಕಂಡುಹಿಡಿಯುವುದಕ್ಕಾಗಿ ದುರ್ಯೋಧನಾದಿಗಳ ಆಲೋಚನೆ.

ಓ ಜನಮೇಜಯರಾಜನೆ ಕೇಳು! ದುರ್ಯೋಧನನು ಆ ಚಾರರ ಮಾತನ್ನು ಕೇಳಿದಮೇಲೆ, ಬಹಳ ಹೊತ್ತಿನವರೆಗೆ ತನ್ನಲ್ಲಿ ತಾನೇ ಆಲೋಚಿಸುತಿದ್ದನು. ಆಮೇಲೆ ಸಭಾಸದರನ್ನು ಕುರಿತು ಹೀಗೆಂದು ಹೇಳುವನು. ''ಕಾರ್ಯಗತಿಯು ಹೇಗೆ ಹೋಗುವುದೆಂಬುದನ್ನು ಯಥಾವತ್ತಾಗಿ ತಿಳಿಯುವುದೇನೋ ಅಸಾಧ್ಯವೇ! ಆದುದರಿಂದ ಕೂಡಿದಮಟ್ಟಿಗೆ, ಪಾಂಡವರೆಲ್ಲಿರುವರೆಂಬುದನ್ನು ಕಂಡುಹಿಡಿಯುವುದಕ್ಕೆ ನೀವೆಲ್ಲರೂ ತಕ್ಕ ಆಲೋಚನೆಗಳನ್ನು ಹೇಳಬೇಕು. ಪಾಂಡವರ ಅಜ್ಞಾತಕಾಲವೆನಿಸಿದ ಈ ಹದಿಮೂರನೆಯ ವರ್ಷವು ಬಹಳಮಟ್ಟಿಗೆ ಮುಗಿಯುತ್ತ ಬಂದು, ಸ್ವಲ್ಪದಿನಗಳು ಮಾತ್ರ ಅವಶಿಷ್ಟವಾಗಿವೆ. ಆ ಉಳಿದ ಭಾಗವನ್ನೂ ಪಾಂಡವರು ಅಜ್ಞಾತವಾಸದಲ್ಲಿ ಕಳೆದುಬಿಟ್ಟರೆ, ಅವರು ತಮ್ಮ ಪ್ರತಿಜ್ಞೆಯನ್ನು ಪೂರೈಸಿದಂತಾಗುವುದು. ಅವರಾದರೋ ಸತ್ಯವೇ ವ್ರತವಾಗಿ ಉಳ್ಳವರು. ನಮ್ಮಿಂದ ಹಿಂದೆ ಅನುಭವಿಸಿದ ಕಷ್ಟಗಳಿಂದ ಬಹಳವಾಗಿ ಸೊಂದಿರುವರು. ಅವರು ಆ ಕಾಲಾವಧಿಯನ್ನು ಕಳೆದು ಹೊರಗೆ ಬಂದು ಬಿಟ್ಟರೆ, ಮಹಾಗಜಗಳಂತೆಯೂ, ವಿಷಸರ್ಪಗಳಂತೆಯೂ ನಮ್ಮಮೇಲೆ ಬಿದ್ದು ಹಗೆ ತೀರಿಸಿಕೊಳ್ಳದೆ ಬಿಡುವುದಿಲ್ಲ. ಇದು ನಿಜವು. ಆದುದರಿಂದ ಈ ಅಜ್ಞಾತವಾಸಕಾಲವು ಮುಗಿಯುವಷ್ಟರಲ್ಲಿಯೇ ನಾವು ಅವರನ್ನು ಕಂಡುಹಿಡಿಯಬೇಕು. ಇದಕ್ಕಾಗಿ, ಒಳ್ಳೇ ಚತುರರೂ, ಜ್ಞಾನಸಂಪನ್ನರೂ, ತಿಳಿವಳಿಕೆಯುಳ್ಳವರೂ, ಕಾರ್ಯಸಮರ್ಥರೂ, ಗೂಢಪ್ರವರ್ತನೆಯುಳ್ಳವರೂ ಆದ ಚಾರರಮೂಲಕವಾಗಿ, ಒಳ್ಳೇ ಸೂಕ್ಷ್ಮೋಪಾಯ

ಗಳಿಂದ ಆ ಪಾಂಡವರನ್ನು ಕಂಡುಹಿಡಿಯಲು ಪ್ರಯತ್ನಿಸಬೇಕು. ವೇಷಾಂತರದಿಂದ ಬಹಳ ಕಷ್ಟದಶೆಯಲ್ಲಿರುವ ಪಾಂಡವರನ್ನು, ಅವರ ಅಜ್ಞಾತವಾಸಕಾಲದೊಳಗಾಗಿಯೇ ಕಂಡು ಹಿಡಿದರೆ, ಅವರ ಕೊಬ್ಬಡಗಿ, ತಿರುಗಿ ಅವರು ಕಾಡಿಗೆ ಹೋಗಬೇಕಾಗುವುದು. ಆಗ ರಾಜ್ಯವು ನಮಗೆ ಶತ್ರುಭಯವಿಲ್ಲದಂತೆ ಚಿರಕಾಲಕ್ಕೆ ಅವಿಚ್ಛಿನ್ನವಾಗಿ ನಡೆಯುವುದು. ಆದುದರಿಂದ ನೀವು ಈಗಲೇ ಅದಕ್ಕೆ ತಕ್ಕ ಉಪಾಯವನ್ನು ಚಿಂತಿಸಿರಿ" ಎಂದನು. ದುರ್ಯೋಧನನು ಬಹಳವ್ಯಾಕುಲತೆಯೊಡನೆ ಈ ಮಾತನ್ನು ಹೇಳಲು, ಕರ್ಣನು "ಮಹಾರಾಜಾ! ತಿರುಗಿ ಇದೇ ಚಾರರನ್ನು ಕಳುಹಿಸಬಾರದು. ಇವರಿಗಿಂತಲೂ ಶೀಘ್ರಗಾಮಿಗಳೂ, ರಹಸ್ಯವನ್ನು ಕಾಪಾಡತಕ್ಕವರೂ, ಚತುರರೂ ಆದ ಬೇರೆ ಚಾರರನ್ನು ಕಳುಹಿಸಿ, ಮತ್ತೊನ್ನೆ ದೇಶದೇಶಗಳನ್ನೂ, ಪಟ್ಟಣಗಳನ್ನೂ, ಗ್ರಾಮಗಳನ್ನೂ ಹುಡುಕಿಸಬೇಕು. ಅವರು ಅಲ್ಲಲ್ಲಿ ಸಾಧುಗಳಿರತಕ್ಕ ಸ್ಥಳಗಳಲ್ಲಿಯೂ, ಪುಣ್ಯತೀರ್ಥಾಶ್ರಮಗಳಲ್ಲಿಯೂ, ಗಣಿಗಳಲ್ಲಿಯೂ ಬ್ರಾಹ್ಮಣವೇಷಧಾರಿಗಳಾಗಿ ರಹಸ್ಯವಾಗಿ, ಹೋಗಿ ಬಹಳ ಜಾಗರೂಕತೆಯಿಂದ ಹುಡುಕಲಿ! ನದೀತೀರದ ಪೊದರುಗಳಲ್ಲಿಯೂ, ಪವಿತ್ರ ತೀರ್ಥಗಳಲ್ಲಿಯೂ, ರಮಣೀಯಾಶ್ರಮಗಳಲ್ಲಿಯೂ, ಪರ್ವತಗಳಲ್ಲಿಯೂ, ಗುಹೆಗಳಲ್ಲಿಯೂ ಚೆನ್ನಾಗಿ ಹುಡುಕಿಸಬೇಕು. ಅಂತಹ ಸ್ಥಳಗಳಲ್ಲಿ ಎಲ್ಲಿಯಾದರೂ ಪಾಂಡವರು ತಮ್ಮ ವೇಷವನ್ನು ಮರೆಸಿಕೊಂಡಿರಬಹುದು. ಆದುದರಿಂದ ಅಂತಹ ಸ್ಥಳಗಳಿಗೆಲ್ಲ ಮೇಲೆ ಹೇಳದಂತೆ ನಿಪುಣರಾದ ಬೇರೆ ಚಾರರನ್ನೇ ಕಳುಹಿಸಿ ಹುಡುಕಿಸು" ಎಂದನು. ಆಗ ಅಣ್ಣನಾದ ದುರ್ಯೋಧನನಿಗೆ ಬಹಳ ಹಿತಚಿಂತಕನಾದ ದುಶ್ಶಾಸನನು ಕೌರವನನ್ನು ಕುರಿತು "ಅಣ್ಣಾ! ನಮ್ಮ ರಾಧೇಯನು ಹೇಳಿದಂತೆ ನಮಗೆ ವಿಶ್ವಾಸಪಾತ್ರರಾಗಿ, ನಮ್ಮಿಂದ ಒಳ್ಳೇ ವೇತನವನ್ನು ಪಡೆದು, ಕಾರ್ಯದಲ್ಲಿಯೂ ನಿಪುಣರಾದ ಬೇರೆ ಚಾರರನ್ನು ತಿರುಗಿ ಪಾಂಡವರನ್ನು ಹುಡುಕುವುದಕ್ಕಾಗಿ ಕಳುಹಿಸಬೇಕು. ಪಶುಗಳು ತಮ್ಮ ಘ್ರಾಣೇಂದ್ರಿಯದಿಂದಲೂ, ಬ್ರಾಹ್ಮಣರು ವೇದಗಳಿಂದಲೂ, ರಾಜರು ಚಾರರಿಂದಲೂ, ಇತರಜನರು ತಮ್ಮ ಕಣ್ಣುಗಳಿಂದಲೂ ತಿಳಿದುಕೊಳ್ಳುವರು. ಆದುದರಿಂದ ರಾಜನಿಗೆ ಚಾರರೇ ಕಣ್ಣುಗಳಂತಿರುವರು. ಅದಕ್ಕಾಗಿಯೇ ಅರಸರನ್ನು "ಚಾರ

ಚಕ್ಷು''ಗಳೆಂದು ಹೇಳುವರು. ನೀನೂ ನಿನಗೆ ನೇತ್ರಪ್ರಾಯರಾದ ಅಂತಹ ಚಾರರ ಮೂಲಕವಾಗಿ ಸಮಸ್ತದೇಶಗಳನ್ನೂ, ನಗರಗಳನ್ನೂ ಚೆನ್ನಾಗಿ ಪರೀಕ್ಷಿಸಿ ಹುಡುಕಿಸಬೇಕು. ಆದರೂ ಆ ಪಾಂಡವರ ಸ್ಥಿತಿಗತಿಗಳೇನೂ ನಮಗೆ ತಿಳಿಯಲಾರದು. ಅವರು ಎಂದೆಂದಿಗೂ ಹೊರಕ್ಕೆ ಬಾರದೆ ಎಲ್ಲಿಯೋ ತಲೆಮರೆಸಿಕೊಂಡು ಹೋಗಿರಬೇಕು. ಇಲ್ಲವೇ ಸಮುದ್ರದಿಂದಾಚೆಗೆ ಎಲ್ಲಿಯೋ ಹೋಗಿ ಸೇರಿರಬೇಕು. ಕಾಡಿನಲ್ಲಿ ದುಷ್ಟಜಂತುಗಳಿಂದ ಸತ್ತಿರಬೇಕು. ಅದೂ ಇಲ್ಲದಿದ್ದರೆ, ಕೊನೆಗೆ ದ್ವೀಪಾಂತರಕ್ಕೆ ಹೋಗಿ ಸೇರಿರಬೇಕು. ಹಾಗಿಲ್ಲವೇ ರಾಕ್ಷಸರ ಬಾಯಿಗೆ ತುತ್ತಾಗಿರಬೇಕು. ಇದೊಂದೂ ಇಲ್ಲದಿದ್ದರೆ, ಯಾವುದೋ ಕಷ್ಟದಶೆಯಿಂದ ಯಾವಾಗಲೋ ನಾಶಹೊಂದಿರಬೇಕು. ಆದುದರಿಂದ ಇನ್ನು ನೀನು ನಿನ್ನ ಮನೋವ್ಯಾಕುಲತೆಯನ್ನು ಬಿಟ್ಟು, ಉತ್ಸಾಹದಿಂದ ರಾಜ್ಯವನ್ನಾಳುತ್ತಿರು'' ಎಂದನು.

ಇದು ಮೂವತ್ತನೆಯ ಅಧ್ಯಾಯವು.

ಕರ್ಣದುಶ್ಶಾಸನರ ಮಾತನ್ನು ಖಂಡಿಸಿ, ದ್ರೋಣಭೀಷ್ಮರಿಬ್ಬರೂ ಪಾಂಡವರ ಗುಣಗಳನ್ನೆತ್ತಿ ಹೇಳಿ, ಅವರಿಗೆ ಅಂತಹ ಅಪಾಯವೇನೂ ಬಾರದೆಂದೂ, ಅವರೊಡನೆ ಈಗಲೂ ಸಂಧಿಮಾಡಿಕೊಳ್ಳುವುದು ಉಚಿತವೆಂದೂ ದುರ್ಯೋಧನನಿಗೆ ಬುದ್ಧಿವಾದ ಹೇಳಿದುದು.

ಓ ಜನಮೇಜಯರಾಜೇಂದ್ರಾ ಕೇಳು! ಆಮೇಲೆ ಆ ಸಭೆಯಲ್ಲಿ ಸೂಕ್ಷ್ಮಾರ್ಥಗಳನ್ನು ಊಹಿಸಿ ತಿಳಿಯಬಲ್ಲ ದ್ರೋಣಾಚಾರ್ಯನು ದುರ್ಯೋಧನನನ್ನು ಕುರಿತು ''ಓ ರಾಜಾ! ಆ ಪಾಂಡವರಾದರೋ ಶೂರರು. ವಿದ್ಯಾವಂತರು! ಬುದ್ಧಿಶಾಲಿಗಳು! ಜಿತೇಂದ್ರಿಯರು! ಧರ್ಮಜ್ಞರು! ಸತ್ಯಸಂಧರು! ಅಲ್ಲದೆ, ನೀತಿಧರ್ಮಗಳನ್ನು ಬಲ್ಲವನಾಗಿಯೂ, ಧರ್ಮನಿರತನಾಗಿಯೂ, ಸತ್ಯಸಂಧನಾಗಿಯೂ ತಮಗೆ ಹಿರಿಯಣ್ಣನಾಗಿಯೂ ಇರುವ ಯುಧಿಷ್ಠಿರನನ್ನು ಅವರು ತಮ್ಮ ತಂದೆಯಂತೆಯೇ ಭಾವಿಸಿ,

ಅವನಿಗೆ ವಿಧೇಯರಾಗಿ, ಅವನನ್ನು ಅನುವರ್ತಿಸುತ್ತಿರುವರು. ಅಂತವರಿಗೆ ನಾಶವೆಂದರೇನು? ಈ ದುಶ್ಶಾಸನನು ಊಹಿಸುವಂತೆ ಅವರಿಗೆ ಎಂದಿಗೂ ಮರಣವಿರಲಾರದು. ಅವರಿಗೆ ಬೇರೊಬ್ಬರಿಂದ ಪರಾಭವವೂ ಇರದು. ಅಜಾತಶತ್ರುವೆನಿಸಿಕೊಂಡ ಶ್ರೀಮಂತನಾದ ಆ ಯುಧಿಷ್ಠಿರನೂಕೂಡ, ತನ್ನಲ್ಲಿ ವಿಧೇಯರಾದ ಆ ಸಹೋದರರಲ್ಲಿ ಎಷ್ಟೋ ವಿಶ್ವಾಸವನ್ನಿಟ್ಟು ಅವರೆಲ್ಲರ ಮನಸ್ಸನ್ನೂ ಅನುವರ್ತಿಸಿ ನಡೆಯತಕ್ಕವನು. ಅಂತಹ ಧರ್ಮಪುತ್ರನು ಹೇಗೆತಾನೇ ತನ್ನ ಸಹೋದರರಿಗೆ ಶ್ರೇಯಸ್ಸನ್ನು ಕೋರದಿರುವನು. ಆದುದರಿಂದ ಓ ರಾಜಾ! ಪಾಂಡವರಿಲ್ಲವೆಂದು ನೀನು ಧೈರ್ಯದಿಂದಿರಬಾರದು. ಈಗಲೂ ಅವರು ಅಜ್ಞಾತವಾಸದಲ್ಲಿರಬೇಕಾದ ಕಾಲಾವಧಿಯು ಮುಗಿದಿಲ್ಲ. ಆದುದರಿಂದ ನೀನು ನಿನ್ನಿಂದಾದಷ್ಟು ಸಾಹಸದಿಂದ ಅವರನ್ನು ಕಂಡುಹಿಡಿಯುವುದಕ್ಕೆ ಯತ್ನವಮಾಡು. ಅವರು ಸತ್ತಿಲ್ಲವೆಂದೇ ನನ್ನ ನಿಶ್ಚಯವು. ಆದುದರಿಂದ ಕಾಲೋಚಿತವಾದ ಮುಂದಿನ ಕಾರ್ಯವೇನೆಂಬುದನ್ನು ಚೆನ್ನಾಗಿ ಯೋಚಿಸಿ, ಶೀಘ್ರದಲ್ಲಿಯೇ ಅದನ್ನು ನಡೆಸು. ಅವರು ಇರತಕ್ಕ ಸ್ಥಳವಾವುದೆಂದು ಊಹಿಸಿ ನೋಡು! ಎಲ್ಲಾ ವಿಚಾರಗಳಲ್ಲಿಯೂ ಧೀರಮನಸ್ಸುಳ್ಳ ಆ ಪಾಂಡವರ ವೃತ್ತಾಂತವನ್ನು ತಿಳಿಯುವುದಕ್ಕೆ ಉಪಾಯವೇನೋ ಅದಕ್ಕೆ ತಕ್ಕ ನೀತಿಯನ್ನು ನಡೆಸು. ಪಾಂಡವರನ್ನು ಕಂಡುಹಿಡಿಯಲು ಸರ್ವೋಪಾಯಗಳಿಂದಲೂ ನೀನು ಯತ್ನಿಸಬೇಕು. ಶೂರರಾದ ಅವರನ್ನು ಕಂಡುಹಿಡಿಯುವುದೇನೋ ಸುಲಭಸಾಧ್ಯವಲ್ಲ. ದೇವತೆಗಳಿಂದ ಅವರು ರಕ್ಷಿಸಲ್ಪಡುತ್ತಿರುವರು. ಆ ಧರ್ಮರಾಜನು ಸಾಮಾನ್ಯನಲ್ಲ. ಬಹಳ ಶುದ್ಧಾತ್ಮನು. ಮಾನಧನನು! ಸತ್ಯನಿರತನು! ನೀತಿನಿಪುಣನು! ತೇಜೋರಾಶಿಯಿಂದ ತುಂಬಿದವನು! ಆ ಯುಧಿಷ್ಠಿರನು ತನ್ನ ಕಣ್ಣಿನಿಂದಲೇ ನಮ್ಮೆಲ್ಲರನ್ನೂ ದಹಿಸಿಬಿಡಬಹುದು. ಆದುದರಿಂದ ನೀನು ಬಹಳ ಜಾಗರೂಕನಾಗಿರು. ನಿನ್ನಿಂದಾದ ಯತ್ನವನ್ನು ಮಾಡು! ತಿರುಗಿ ಆ ಪಾಂಡವರನ್ನು ಹುಡುಕಿಸಿ ನೋಡುವೆವು. ಇದಕ್ಕಾಗಿ ಆಯಾ ಕಾಲದೇಶಗಳಿಗೆ ತಕ್ಕಂತೆ ಬೇರೆಬೇರೆಯಾಗಿ ಬ್ರಾಹ್ಮಣರನ್ನೂ, ಗೂಢಚಾರರನ್ನೂ ಸಿದ್ಧರನ್ನೂ, ನಿಪುಣರಾದ ತಾಪಸರನ್ನೂ ಅಲ್ಲಲ್ಲಿ ಕಳುಹಿಸಿ ಹುಡುಕಿಸುವೆವು. ಈ ಕಾರ್ಯಕ್ಕಾಗಿ ನಾವು

ಹುಡುಕುವುದರಲ್ಲಿ ಸಮರ್ಥರಾಗಿಯೂ, ಭಯವಿಲ್ಲದವರಾಗಿಯೂ, ಆ ಪಾಂಡವರಲ್ಲಿ ಮೊದಲು ಪರಿಚಯವುಳ್ಳ ಜನರಿಗೆ ಸಮ್ಮತರಾಗಿಯೂ ಇರುವವರನ್ನೇ ಕಳುಹಿಸಿ, ಚೆನ್ನಾಗಿ ಹುಡುಕಿಸಬೇಕು. ಆ ಪಾಂಡವರು ಎಲ್ಲಿಯೋ ಗುಪ್ತಚಾರಿಗಳಾಗಿರಬೇಕು'' ಎಂದನು. ದ್ರೋಣಾಚಾರ್ಯನು ಈ ಮಾತನ್ನು ಹೇಳಿ ಮುಗಿಸಿದೊಡನೆ, ಭರತಕುಲಪಿತಾಮಹನೂ, ಉದಾರ ಬುದ್ಧಿಯುಳ್ಳವನೂ ಆದ ಭೀಷ್ಮನು ಹೇಳತೊಡಗಿದನು. ಆ ಭೀಷ್ಮನಾದರೋ ನೀತಿಧರ್ಮಗಳನ್ನು ಚೆನ್ನಾಗಿ ಬಲ್ಲವನು. ಧರ್ಮಜ್ಞನಾದ ಯುಧಿಷ್ಠಿರನಿಗೆ ಯಾವಾಗಲೂ ಹಿತಚಿಂತಕನು. ಅಮೋಘವಾಕ್ಯವುಳ್ಳವನು. ಆದುದರಿಂದ, ಈ ಮೇಲಿನ ಗುಣಗಳಿಗನುಸಾರವಾಗಿ, ಧರ್ಮಯುಕ್ತವಾಗಿಯೂ, ಸಾಧುಸಮ್ಮತವಾಗಿಯೂ, ಅಸತ್ತುಗಳಿಗೆ ಅಗ್ರಾಹ್ಯವಾಗಿಯೂ ಇರುವ ಮಾತುಗಳಿಂದ ಆ ಸಭೆಯಲ್ಲಿ ಹೀಗೆಂದನು.

''ಸರ್ವ ಧರ್ಮಗಳನ್ನೂ ಬಲ್ಲ ಈ ಆಚಾರ್ಯನು ಹೇಳಿದುದೇ ವಾಸ್ತವವು. ಶಾಸ್ತ್ರಜ್ಞಾನದಿಂದಲೂ, ಸಚ್ಚರಿತ್ರದಿಂದಲೂ ಕೂಡಿದ ಪಾಂಡವರು ನಾಶವನ್ನು ಹೊಂದಿರುವರೆಂಬುದು ಸುಳ್ಳು! ಅವರು ತಮ್ಮ ಪ್ರತಿಜ್ಞಾಭಂಗವಾಗಬಾರದೆಂಬುದಕ್ಕಾಗಿ, ಎಲ್ಲಿಯೋ ಗುಪ್ತವಾಗಿ ವಾಸಮಾಡುತ್ತಿರುವರು. ಅವರಾದರೋ ಸರ್ವಲಕ್ಷಣಸಂಪನ್ನರು. ಸಾಧುಚರಿತ್ರವುಳ್ಳವರು. ಹಿರಿಯರ ಮಾತಿಗೆ ಕಟ್ಟುಬಿದ್ದು ನಡೆಯತಕ್ಕವರು. ಸತ್ಯಧರ್ಮಪರಾಯಣರು. ಶುಭವ್ರತವುಳ್ಳವರು. ಅವರು ಕಾಲವನ್ನು ಚೆನ್ನಾಗಿ ಬಲ್ಲವರು. ಅವರು ಎಂದಿಗೂ ಯಾವ ದುಃಖಕ್ಕೂ ಒಳಗಾಗುವರಲ್ಲ. ಸಜ್ಜನಸಮ್ಮತವಾದ ಕಾರ್ಯಭಾರವನ್ನೇ ವಹಿಸಿದವರು. ಅವರು ತಮ್ಮ ತಪಸ್ಸಿನಿಂದಲೂ ತಮ್ಮ ವೀರ್ಯದಿಂದಲೂ ರಕ್ಷಿತರಾಗಿರುವರು. ಅವರು ನಾಶಹೊಂದಿರಲಾರರೆಂದೇ ನನ್ನ ನಿಶ್ಚಯವು. ಆ ಪಾಂಡವರು ಕ್ಷತ್ರಿಯಧರ್ಮದಲ್ಲಿ ನೆಲೆಗೊಂಡಿರುವರು. ಶ್ರೀಕೃಷ್ಣನೇ ಅವರಿಗೆ ಬೆಂಬಲವಾಗಿದ್ದು ಕಾಪಾಡುತ್ತಿರುವನು. ಅವರು ಮಹಾ ವೀರರು. ಮಹಾಮಹಿಮೆಯುಳ್ಳವರು. ಮಹಾ ಬಲಶಾಲಿಗಳು. ಆದುದರಿಂದ ಅವರು ನಾಶಹೊಂದಿದರೆಂದು ನೀನು ನಂಬಬಾರದು. ಒಂದುವೇಳೆ ಅವರನ್ನು ಹುಡುಕಿ ಕಂಡುಹಿಡಿಯಬೇ

ಕೆಂಬ ಉದ್ದೇಶವು ನಿನಗಿದ್ದರೆ, ಅದಕ್ಕೆ ಬೇಕಾದ ಉಪಾಯವನ್ನು ಹೇಳುವೆನು ಕೇಳು. ಒಳ್ಳೇ ನೀತಿಜ್ಞನಾದವನು ಹೋಗತಕ್ಕ ದಾರಿಯನ್ನು ತಿಳಿಯುವುದು ಕಷ್ಟವೇ! ಆದರೂ, ನಮ್ಮಿಂದ ಸಾಧ್ಯವಾದಷ್ಟು ಪ್ರಯತ್ನವನ್ನು ಮಾಡದೆ ಬಿಡಬಾರದು. ನನಗೆ ತಿಳಿದಮಟ್ಟಿಗೆ ನನ್ನ ಬುದ್ಧಿಯಿಂದಾಲೋಚಿಸಿ ಹೇಳುವೆನು ಕೇಳು. ವೃದ್ಧರ ಮಾತಿನಂತೆ ನಡೆಯುತ್ತ, ಸತ್ಯಶೀಲನೆನಿಸಿಕೊಂಡ ಆ ಧರ್ಮರಾಜನ ಸಂಗತಿಯನ್ನು ಕುರಿತು ಇಲ್ಲಿ ಚೆನ್ನಾಗಿ ಬಿಚ್ಚಿ ಹೇಳುವುದೂ ಉಚಿತವಲ್ಲ. ಆದರಲ್ಲಿಯೂ ನನ್ನ ಬಾಯಿಂದ ನಾನು ಹೇಳಲೇಬಾರದು. ಏಕೆಂದರೆ, ನನಗೆ ಕೌರವರೂ, ಪಾಂಡವರೂ ಸಮಾನವೇ! ಆದರೂ ಆ ಪಾಂಡವರಿರುವ ಸ್ಥಳವೆಂತದೆಂಬುದನ್ನು ನನ್ನ ಬುದ್ಧಿಯಿಂದಾಲೋಚಿಸಿ ಹೇಳುವೆನು. ಕೌರವರಾಜಾ! ಹೆಚ್ಚು ಮಾತಿನಿಂದೇನು? ಎಲ್ಲಿ ಧರ್ಮವೋ ಅಲ್ಲಿ ಜಯವು ಸಿದ್ಧವು. ಸಭಾಮಧ್ಯದಲ್ಲಿ ಮಾತಾಡಬೇಕೆಂಬ ಉದ್ದೇಶದಿಂದ ಪ್ರೇರಿಸಲ್ಪಟ್ಟ ಒಬ್ಬ ಮನುಷ್ಯನು, ಧರ್ಮವನ್ನುದ್ದೇಶಿಸಿ, ಸರ್ವವಿಧದಿಂದಲೂ ಯೋಗ್ಯವಾದ ಮಾತನ್ನೇ ಆಡಬೇಕು. ಪಾಂಡವರ ವಿಚಾರದಲ್ಲಿ ಇಲ್ಲಿರುವ ಇತರಜನರು ತಿಳಿದಂತೆ ನಾನು ಊಹಿಸಲಿಲ್ಲ. ನನಗೆ ತೋರಿದ ಮಟ್ಟಿಗೆ ಪಾಂಡವರು ವಾಸಿಸುವ ಸ್ಥಳವಾವುದೆಂಬುದನ್ನು ಚಾರರಿಂದ ತಿಳಿಯುವುದೂ ಸಾಧ್ಯವಲ್ಲ.

ವೀರರಾದ ತನ್ನ ಸಹೋದರರಿಂದಲೂ, ಪ್ರಿಯಪತ್ನಿಯಾದ ದ್ರೌಪದಿಯಿಂದಲೂ ಕೂಡಿದ ಯಶಸ್ವಿಯಾದ ಆ ಧರ್ಮರಾಜನು, ತಮ್ಮ ಶ್ರೀಯಸ್ಸನ್ನು ಹೇಗೆತಾನೇ ನೋಡದಿರುವನು? ಹಿಂದೆ ನೀವು ರಾಜ್ಯದಾಸೆಯಿಂದ ಅವನನ್ನು ಅವಮಾನಗೊಳಿಸಿದುದೂ, ಅವನನ್ನು ಕಷ್ಟಪಡಿಸಿದುದೂ ನಿನಗೂ ತಿಳಿದ ವಿಷಯವೇ. ಆ ಧರ್ಮರಾಜನು ಸಹಜವಾಗಿ ನೀತಿವಂತನು. ನ್ಯಾಯಕ್ಕಾಗಿಯೇ ಮಾತಿಗೆ ಕಟ್ಟುಬಿದ್ದು ತಲೆಮರೆಸಿಕೊಂಡಿರುವನು. ಒಂದು ವರ್ಷಕಾಲಕ್ಕೆ ಮಾತ್ರ ಯಾರಿಗೂ ತಿಳಿಯದಂತೆ ವಾಸಮಾಡುತ್ತಿದ್ದು, ತನ್ನ ಅಭ್ಯುದಯಕಾಲವು ಬಂದೊಡನೆ ಹೊರಗೆ ಬರುವನು. ದುರ್ಯೋಧನಾ! ನೀನು ಶೀಘ್ರದಲ್ಲಿಯೇ ತಮ್ಮಂದಿರೊಡನೆಯೂ, ದ್ರೌಪದಿಯೊಡನೆಯೂ ಆ ಧರ್ಮರಾಜನನ್ನು ನಿನ್ನ ಕಣ್ಣಾರೆ

ನೋಡುವೆ. ಆದುದರಿಂದ ಮುಂದೆ ನಮಗೆ ಹೇಗೆ ಕ್ಷೇಮವುಂಟಾಗಬೇಕೋ ಅದಕ್ಕೆ ತಕ್ಕ ಉಪಾಯವನ್ನು ಮಾಡು. ಬಲಾಢ್ಯರಲ್ಲಿ ಮೇಲೆನಿಸಿಕೊಂಡ ಆ ರಾಜನು ಗುಪ್ತವಾಗಿ ವಾಸಮಾಡುತ್ತಿದ್ದರೂ, ಅವನು ಎಲ್ಲಿರುವನೋ ಆ ಸ್ಥಳವು ಎಲ್ಲಾ ಭಾಗದಲ್ಲಿಯೂ ಸುಭಿಕ್ಷದಿಂದ ಕೂಡಿರುವುದು. ಅವ ನಿರತಕ್ಕ ಸ್ಥಳದಲ್ಲಿ ಮನುಷ್ಯರು ರಾಗಮೋಹಾದಿ ದುಗುಣವಿವರ್ಜಿತರಾಗಿರು ವರು. ಅಲ್ಲಿ ಆಧಿವ್ಯಾಧಿಗಳೊಂದೂ ತಲೆದೋರವು. ರಾಜನಾದ ಯುಧಿ ಷ್ಠಿರನು ಎಲ್ಲಿರುವನೋ ಆ ಪಟ್ಟಣದಲ್ಲಿಯಾಗಲಿ, ದೇಶದಲ್ಲಿಯಾಗಲಿ ಜನ ರೆಲ್ಲರೂ ಸರ್ವಗುಣದಿಂದ ಕೂಡಿರುವರು. ಒಬ್ಬೊಬ್ಬರೂ ದಾನಶೀಲರಾಗಿ ಉದಾರಿಗಳಾಗಿರುವರು. ಜನಗಳಲ್ಲಿ ಅಸೂಯಾದಿಗುಣಗಳೊಂದೂ ಇರದು. ಎಲ್ಲರೂ ಧರ್ಮಪರರಾಗಿರುವರು. ದಾನ, ಧರ್ಮ, ಸತ್ಯ, ಶೌಚ, ಶಾಂತಿ, ದಾಂತಿ, ತುಷ್ಟಿ, ಪುಷ್ಟಿ, ಶೌರ್ಯ, ಧೈರ್ಯಾದಿ ಗುಣಗಳಿಂದ ಕೂಡಿ, ಸತ್ಯವಾಗಿಯೂ, ಪ್ರಿಯವಾಗಿಯೂ ಮಾತಾಡತಕ್ಕವನೂ, ಧರ್ಮಶೀಲನೂ, ಜಿತೇಂದ್ರಿಯನೂ ಆದ, ಯುಧಿಷ್ಠಿರನೆಲ್ಲಿರುವನೋ ಅಲ್ಲಿ ಸದಾ ವೇದ ಘೋಷಗಳೂ, ಸದಾ ಮಂಗಳವಾದ್ಯಗಳೂ ಮೊಳಗುತ್ತಿರುವುವು. ಯಾವಾ ಗಲೂ ಅಲ್ಲಿ ಭೂರಿದಕ್ಷಿಣೆಗಳುಳ್ಳ ಅನೇಕಯಾಗಗಳು ನಡೆಯುತ್ತಿರುವುವು. ಅವನಿದ್ದ ದೇಶದಲ್ಲಿ ಯಾವಾಗಲೂ ಮೇಘವು ಸುವೃಷ್ಟಿಯನ್ನು ಕರೆಯು ತ್ತಿರುವುದು. ಭೂಮಿಯು ಸದಾ ಸಸ್ಯಸಮೃದ್ಧವಾಗಿರುವುದು. ಧಾನ್ಯ ಗಳೂ, ಫಲಗಳೂ ಒಳ್ಳೆಯ ರುಚಿಯಿಂದಲೂ, ಗುಣದಿಂದಲೂ ಕೂಡಿ ರುವುವು. ಅಲ್ಲಿ ಬೆಳೆಯುವ ಪುಷ್ಪಗಳೆಲ್ಲವೂ ಸುಗಂಧವಿಶಿಷ್ಟಗಳಾಗುವುವು. ದೇಶವು ನಿರಾಮಯವಾಗಿರುವುದು. ಯಾರ ಬಾಯಿಯಿಂದಲೂ ಶುಭ ಶಬ್ದಗಳೇ ಹೊರಡುವುವು. ವಾಯುವು ಸುಖಸ್ಪರ್ಶವಾಗಿ ಬೀಸುವುದು. ಯುಧಿಷ್ಠಿರನಿದ್ದ ಕಡೆಯಲ್ಲಿ ಕಳವು, ಕೊಲೆ, ಮುಂತಾದ ಕ್ರೂರಕೃತ್ಯಗಳ ಪ್ರಸಕ್ತಿಯೇ ಇರುವುದಿಲ್ಲ. ಆ ದೇಶದಲ್ಲಿ ಜನರಿಗೆ ದಂಡನೆಯಾಗಲಿ, ಭಯವಾಗಲಿ, ವ್ಯಸನವಾಗಲಿ ಇಲ್ಲ. ಅಶಕ್ತರೂ, ದುಷ್ಟರೂ ಅಲ್ಲಿರುವು ದಿಲ್ಲ. ಯಾವುದನ್ನು ನೋಡಿದರೂ ಶುಭಕರವಾಗಿಯೇ ಕಾಣುವುದು. ಧರ್ಮರಾಜನಿದ್ದ ದೇಶದಲ್ಲಿ ಗೋವುಗಳೆಲ್ಲವೂ ಚೆನ್ನಾಗಿ ಬೆಳೆದು, ಸಮೃ ದ್ಧವಾಗಿ ಹಾಲನ್ನು ಕೊಡುವುವು. ಹಾಲು, ಮೊಸರು, ತುಪ್ಪ ಮುಂತಾ

ದುವು ರಸವತ್ತಾಗಿಯೂ, ಹಿತವಾಗಿಯೂ ಇರುವುದು. ಸಮಸ್ತ ಜಲಾಶಯಗಳೂ ಮತ್ತು ಸಮಸ್ತ ಜನರ ಭಾವಗಳೂ ನಿಷ್ಕಲ್ಮಷವಾಗಿ ಪ್ರಸನ್ನವಾಗಿರುವುವು. ಅನ್ನಪಾನಾದಿಗಳೆಲ್ಲವೂ ಅತ್ಯಂತ ರುಚಿಕರವಾಗಿರುವುವು. ಆ ಯುಧಿಷ್ಠಿರನಿದ್ದ ದೇಶದಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಇಂದ್ರಿಯಭೋಗ್ಯಗಳಾದ ವಿಷಯಗಳೆಲ್ಲವೂ, ಅಧಿಕಗುಣವುಳ್ಳವುಗಳಾಗಿರುವುವು. ನೋಟಗಳೆಲ್ಲವೂ ಪ್ರಸನ್ನವಾಗಿ ತೋರುವುವು. ಸಮಸ್ತ ಬ್ರಾಹ್ಮಣರೂ ತಮ್ಮತಮ್ಮ ಧರ್ಮದಲ್ಲಿ ನೆಲೆಗೊಂಡು ಗುಣವಂತರಾಗಿರುವರು. ಓ ಕೌರವರಾಜೇಂದ್ರಾ! ಮೇಲೆ ಹೇಳಿದ ಗುಣಗಳು ಯಾವ ದೇಶದಲ್ಲಿ ಕಾಣುವುವೋ ಅಲ್ಲಯೇ ಪಾಂಡವರಿರುವರು. ನೀನು ಆ ಪಾಂಡವರನ್ನು ರಾಜ್ಯದಿಂದ ಕಾಡಿಗಟ್ಟಿ ಹನ್ನೆರಡು ವರ್ಷಗಳು ಕಳೆದು, ಹದಿಮೂರನೆಯ ವರ್ಷವು ನಡೆಯುತ್ತಿರುವುದರಿಂದ, ತತ್ಕಾಲದಲ್ಲಿ ಯಾವ ದೇಶವು ಮೇಲೆ ಹೇಳಿದಂತೆ ಸುಭಿಕ್ಷಸ್ಥಿತಿಯಲ್ಲಿರುವುದೋ ಅಲ್ಲಿಯೇ ಪಾಂಡವರಿರುವರು. ಆ ಯುಧಿಷ್ಠಿರನೆಲ್ಲರುವನೋ ಅಲ್ಲಿನ ಜನರಲ್ಲಿ ನಿತ್ಯಸಂತೋಷವೂ, ಅನ್ಯೋನ್ಯಾನುರಾಗವೂ, ಶೌಚವೂ, ದೇವತಾತಿಥಿ ಪೂಜೆಗಳೂ, ದಾನಧರ್ಮಗಳೂ, ಉತ್ಸಾಹವೂ, ಶುಭಾಶಂಸೆಗಳೂ, ನಿತ್ಯಮಂಗಳಗಳೂ, ಶಾಂತವಚನಗಳೂ. ನಿತ್ಯೋತ್ಸವ ಪರಂಪರೆಗಳೂ, ಅನುಸ್ಯೂತವಾಗಿ ನಡೆಯುತ್ತಿರುವುವು. ಆ ದೇಶವು ಅಧಿಕಸಂಪತ್ತಿನಿಂದ ಕೂಡಿ ನಿತ್ಯಕಲ್ಯಾಣಗಳಿಂದ ಶೋಭಿಸುತ್ತಿರುವುವು. ಓ ರಾಜಾ! ಧರ್ಮಜ್ಞನಾದ ಆ ಯುಧಿಷ್ಠಿರನ ನಿಜಸ್ಥಿತಿಯನ್ನು ತಿಳಿಯುವುದಕ್ಕೆ ಸರ್ವಜ್ಞರಾದ ಬ್ರಾಹ್ಮಣರಿಂದಲೂ ಸಾಧ್ಯವಿಲ್ಲ. ಇನ್ನು ಪ್ರಾಕೃತಜನರ ಮಾತೇನು? ಮುಖ್ಯವಾಗಿ ಸತ್ಯ, ದಾನ, ಧೃತಿ, ಶಾಂತಿ, ಕ್ಷಮೆ, ಕೀರ್ತಿ, ಹ್ರೀ, ಲಜ್ಜೆ, ದಿವ್ಯತೇಜಸ್ಸು, ಅಹಿಂಸೆ, ಋಜುತ್ವ ಮೊದಲಾದ ಗುಣಗಳು ಆ ಧರ್ಮರಾಜನಲ್ಲಿ ನೆಲೆಗೊಂಡಿರುವುವು. ಆದುದರಿಂದ ನಾನು ಹೇಳಿದ ಈ ಗುರುತುಗಳಿಂದ ಪಾಂಡವರ ನಿವಾಸವನ್ನೂ, ಅವರ ವರ್ತನೆಗಳನ್ನೂ ಊಹಿಸಿ ತಿಳಿಯಬೇಕು. ಇದಕ್ಕಿಂತಲೂ ಬೇರೆ ನಾನು ಹೇಳಬೇಕಾದುದೇನೂ ಇಲ್ಲ. ನನ್ನ ಮಾತಿನಲ್ಲಿ ನಿನಗೆ ವಿಶ್ವಾಸವಿದ್ದರೆ, ಅದನ್ನು ನಿಜವೆಂದು ನಂಬಿ, ಮುಂದೆ ನಿನಗೂ, ನಿನ್ನ ಕುಲಕ್ಕೂ

ಶ್ರೇಯಸ್ಕರವಾವುದೋ ಆ ಕಾರ್ಯವನ್ನು ವಿಳಂಬವಿಲ್ಲದೆ ನಡೆಸು'' ಎಂದನು.

ಇದು ಮೂವತ್ತೊಂದನೆಯ ಅಧ್ಯಾಯವು.

ದುರ್ಯೋಧನನಿಗೆ ಕೃಪನ ಬುದ್ಧಿವಾದಗಳು. ಕೀಚಕವಧ
ವೃತ್ತಾಂತದಿಂದ ಪಾಂಡವರು ವಿರಾಟನಗರದಲ್ಲಿಯೇ
ಇರಬೇಕೆಂದೂಹಿಸಿ, ದುರ್ಯೋಧನನು ಗೋವು
ಗಳನ್ನು ಸೆರೆಹಿಡಿಯುವುದಕ್ಕಾಗಿ ವಿರಾಟನಗ
ರಕ್ಕೆ ಸುಶರ್ಮನನ್ನು ಕಳುಹಿಸಿದುದು.

ಜನಮೇಜಯರಾಜೇಂದ್ರನೆ ಕೇಳು! ಭೀಷ್ಮನ ಮಾತು ಮುಗಿದ ಮೇಲೆ ಶರದ್ವತಪುತ್ರನಾದ ಕೃಪಾಚಾರ್ಯನು ಹೀಗೆಂದು ಹೇಳುವನು. ''ಕೌರವೇಂದ್ರಾ! ಪಾಂಡವರ ವಿಷಯವಾಗಿ, ನಿಮ್ಮ ಪಿತಾಮಹನಾದ ಭೀಷ್ಮಾಚಾರ್ಯನು ಹೇಳಿದ ಮಾತು ನಿಜವು. ಧರ್ಮಾರ್ಥಯುಕ್ತವಾಗಿಯೂ, ನಿಮಗೆ ಹಿತವಾಗಿಯೂ, ಸತ್ಯವಾಗಿಯೂ, ಸಹೇತುಕವಾಗಿಯೂ ಇರುವ ಮಾತನ್ನೇ ಅವನು ಹೇಳಿರುವನು. ನನ್ನ ಅಭಿಪ್ರಾಯವೂ ಭೀಷ್ಮಾಚಾರ್ಯನ ಮಾತಿಗೆ ಅನುಗುಣವಾಗಿಯೇ ಇರುವುದು. ಈಗ ಪಾಂಡವರೆಲ್ಲರುವರು, ಅವರ ಪ್ರವರ್ತನೆಯೇನು, ಎಂಬಿವೆಲ್ಲವನ್ನೂ ಸುವಿಚಾರದಿಂದ ಕಂಡುಕೊಳ್ಳಬೇಕು. ಮುಂದೆ ನಿನಗೆ ಹಿತವಾವುದೋ ಅದಕ್ಕೆ ತಕ್ಕ ನೀತಿಯನ್ನವಲಂಬಿಸು. ತಾನು ಕ್ಷೇಮದಿಂದಿರಬೇಕೆಂದು ಬಯಸುವವನು, ತನ್ನ ಶತ್ರುವು ಕೇವಲ ಸಾಧಾರಣಮನುಷ್ಯನಾಗಿದ್ದರೂ ಅವನಲ್ಲಿ ಅಲಕ್ಷ್ಯವಾಗಿರಬಾರದು. ಹೀಗಿರುವಾಗ, ಶೂರರೂ, ವಿದ್ವಾಂಸರೂ, ಬಲಾಢ್ಯರೂ ಆದ ಪಾಂಡವರ ವಿಷಯದಲ್ಲಿ ಹೇಳಬೇಕಾದುದೇನು? ಮಹಾತ್ಮರಾದ ಆ ಪಾಂಡವರು ಅರಣ್ಯಕ್ಕೆ ಹೋಗಿ, ಅಲ್ಲಿಂದ ತಮ್ಮ ಸ್ಥಿತಿಗತಿಗಳನ್ನು ಹೊರಬೀಳಿಸದೆ ಎಲ್ಲಿಯೋ ಗುಪ್ತಭಾವದಿಂದ ನಡೆಯುತ್ತಿರುವರು. ಅವರ ಅಜ್ಞಾತವಾಸಕಾಲವು ಮುಗಿಯುತ್ತ ಬಂದಿರುವಾಗ, ನಾವು

ಅಲಕ್ಷ್ಯವಾಗಿರಬಾರದು. ಅವರಿಗೆ ಅಭ್ಯುದಯಕಾಲವು ಸವಿಾಪಿಸಿಬಿಟ್ಟಿತು. ಈಗಲೇ ನಾವು ಸ್ವರಾಷ್ಟ್ರದಲ್ಲಿಯೂ, ಪರರಾಷ್ಟ್ರದಲ್ಲಿಯೂ ನಮ್ಮ ಬಲಾಬಲ ಗಳನ್ನು ಕಂಡುಕೊಳ್ಳಬೇಕು. ಮಹಾತ್ಮರೂ, ಬಲಿಷ್ಠರೂ ಆದ ಪಾಂಡ ವರು ತಮ್ಮ ಪ್ರತಿಜ್ಞಾಕಾಲವನ್ನು ಪೂರೈಸಿಕೊಂಡು ಹೊರಗೆ ಬಂದು ಬಿಟ್ಟರೆ, ಅವರ ಉತ್ಸಾಹಕ್ಕೂ, ಪರಾಕ್ರಮಕ್ಕೂ ಮೇರೆಯಿಲ್ಲದಂತಾಗು ವುದು. ಆದುದರಿಂದ, ಓ ಕೌರವಾ! ಈಗಲೇ ನೀನು ಅವರೊಡನೆ ಯುದ್ಧ ಮಾಡುವುದಕ್ಕೆ ತಕ್ಕಂತೆ ಸೈನ್ಯವನ್ನೂ, ಭಂಡಾರವನ್ನೂ ಚೆನ್ನಾಗಿ ಸಂಗ್ರ ಹಿಸಿಡು. ರಾಜನೀತಿಯನ್ನು ಉಚಿತರೀತಿಯಲ್ಲಿ ಪ್ರಯೋಗಿಸಬೇಕು. ಒಂದು ವೇಳೆ ಆ ಪಾಂಡವರಿಗೆ ಅಭ್ಯುದಯ ಕಾಲವೆಂದು ಕಂಡುಬಂದರೆ, ಅವರೊ ಡನೆ ಅನುಕೂಲವಾಗಿ ಸಂಧಿಯನ್ನಾದರೂ ಮಾಡಿಕೊಳ್ಳುವೆ. ಓ ರಾಜೇಂದ್ರಾ! ನಿನ್ನ ಬಲವೆಷ್ಟೆಂಬುದನ್ನು ತಿಳಿದುಕೊಂಡು, ಮುಂದೆ ನಿನ್ನ ಶ್ರೇಯಸ್ಸಿಗೆ ದಾರಿಯಾವುದೋ ಅದನ್ನು ಯೋಚಿಸು. ಬಲಶಾಲಿಗಳಾಗಿ ರಲಿ, ಅಥವಾ ದುರ್ಬಲರಾಗಿರಲಿ, ನಿನ್ನ ಎಲ್ಲಾ ಮಿತ್ರರಿಂದ ನಿನಗೆ ಒದಗ ಬಹುದಾದ ಬಲವೆಷ್ಟೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸು. ಆ ಮಿತ್ರ ರಿಂದ ನಿನಗೆ ಒದಗುವ ಬಲವು ಸಾರವಾದುದೋ, ನಿಸ್ಸಾರವಾದುದೋ, ಎರಡಕ್ಕೂ ನಡುತರವಾದುದೋ ಎಂಬುದನ್ನು ತಿಳಿದು, ಸ್ವರಾಷ್ಟ್ರ ಪರ ರಾಷ್ಟ್ರಗಳಿಂದ ತನಗೆ ಲಭಿಸುವ ಬಲವೆಷ್ಟೆಂಬುದನ್ನು ತಿಳಿಯಬೇಕು. ಶತ್ರು ಗಳು ಪ್ರಬಲರೆಂದು ತೋರಿದರೆ, ಅವರೊಡನೆ ಇಷ್ಟದಿಂದಲೋ, ಅಥವಾ ಕಷ್ಟದಿಂದಲೋ ಸಂಧಿಯನ್ನು ಮಾಡಿಕೊಳ್ಳದೆ ತೀರದು. ಸಾಮ ದಾನ ಭೇದ ದಂಡಗಳೆಂಬ ನಾಲ್ಕು ಉಪಾಯಗಳಿಂದಲಾಗಲಿ, ಕಪ್ಪವನ್ನು ಕಟ್ಟುವುದರಿಂದಲಾಗಲಿ ಆಯಾ ಶತ್ರುಗಳ ಬಲಾಬಲವನ್ನನುಸರಿಸಿ ಅವ ನನ್ನು ವಶಮಾಡಿಕೊಳ್ಳಬೇಕು. ಶತ್ರುಗಳಲ್ಲ ಕೆಲವರನ್ನು ನ್ಯಾಯಮಾರ್ಗ ದಿಂದಲೇ ಜಯಿಸಿ ವಶಪಡಿಸಿಕೊಳ್ಳಬೇಕು. ದುರ್ಬಲರನ್ನು ಬಲಾತ್ಕಾರ ದಿಂದ ಅಡಗಿಸಿ ವಶಮಾಡಿಕೊಳ್ಳಬೇಕು. ಆಪ್ತಮಿತ್ರರನ್ನು ಆಗಾಗ ಸಮಾಧಾನಗೊಳಿಸುತ್ತ, ನಮ್ಮ ಸೈನ್ಯಗಳನ್ನು ಸುಖವಾಗಿರಿಸಿ ಕಾಪಾಡ ಬೇಕು. ರಾಜಾ! ನಿನ್ನ ಭಂಡಾರವನ್ನೂ, ಸೈನ್ಯವನ್ನೂ ನೀನು ಸರಿಯಾಗಿ ಹೆಚ್ಚಿಸಿಕೊಳ್ಳುತ್ತಿದ್ದರೆ, ನೀನು ಒಳ್ಳೆಯ ಕಾರ್ಯಸಿದ್ಧಿಯನ್ನು ಹೊಂದುವೆ.

ಆಗ ನೀನು ನಿನಗಿಂತಲೂ ಬಲಶಾಲಿಗಳಾದ ಬೇರೆ ಶತ್ರುಗಳೊಡನೆ ಯಾಗಲಿ, ಸೈನ್ಯವಾಹನಾದಿಗಳಲ್ಲಿ ನಿನಗಿಂತಲೂ ಕಡಿಮೆಯಾದ ಪಾಂಡವರೊಡನೆಯಾಗಲಿ ನಿರ್ಭಯವಾಗಿ ಹೋರಾಡಬಹುದು. ಈ ಅಂಶಗಳನ್ನೆಲ್ಲ ಚೆನ್ನಾಗಿ ತೀರ್ಮಾನಿಸಿಕೊಂಡು, ಕಾಲವನ್ನನುಸರಿಸಿ ನ್ಯಾಯದಿಂದ ನಡೆದರೆ ನಿನಗೆ ಎಂದೆಂದಿಗೂ ಸುಖವುಂಟು.''

ಹೀಗೆ ಭೀಷ್ಮ ದ್ರೋಣ ಕೃಪಾಚಾರ್ಯರುಗಳೂ, ಕರ್ಣ ದುಶ್ಶಾಸನಾದಿಗಳೂ ತಮತಮಗೆ ತೋರಿದಂತೆ ಹೇಳಿದ ಆಲೋಚನೆಗಳನ್ನು ಕೇಳಿ ದುರ್ಯೋಧನನು, ತನ್ನಲ್ಲಿ ತಾನೇ ಸ್ವಲ್ಪ ಹೊತ್ತು ಆಲೋಚಿಸಿ, ತನ್ನ ಮಂತ್ರಿಗಳನ್ನು ಕುರಿತು ಹೀಗೆಂದು ಹೇಳುವನು, ''ಎಲೈ ಮಂತ್ರಿವರ್ಯರೇ! ನಾನು ಹಿಂದೆ ಜನಗಳ ಗುಂಪಿನಲ್ಲಿ ಸಲ್ಲಾಪಗಳು ನಡೆಯುತ್ತಿದ್ದಾಗ ಇದೊಂದು ಸಂಗತಿಯನ್ನು ಕೇಳಬಲ್ಲೆನು. ಧೀರರೂ, ಶಾಸ್ತ್ರಜ್ಞರೂ ಆದ ವಿದ್ವಾಂಸರ ಬುದ್ಧಿನಿಶ್ಚಯವನ್ನೂ, ಬುದ್ಧಿಶಾಲಿಗಳ ಸಾರಾಸಾರ ವಿವೇಚನೆಯನ್ನೂ ನಾನು ನೀತಿಯೆಂಬ ಕಣ್ಣಿನಿಂದ ನೋಡಿಯೂ ತಿಳಿದಿರುವೆನು. ದೈತ್ಯ, ರಾಕ್ಷಸ ಮನುಷ್ಯವರ್ಗದಿಂದ ಕೂಡಿದ ಈ ಪ್ರಪಂಚದಲ್ಲಿ, ಪರಾಕ್ರಮದಲ್ಲಿಯೂ ಬಾಹುಬಲದಲ್ಲಿಯೂ ಧೈರ್ಯದಲ್ಲಿಯೂ, ನಾಲ್ಕುಮಂದಿ ಮಾತ್ರ ಇಂದ್ರಸಮಾನರಾಗಿ, ಬಲದಲ್ಲಿ ಪ್ರಪಂಚದ ಎಲ್ಲಾ ಪ್ರಾಣಿಗಳಿಗಿಂತಲೂ ಮೇಲೆನಿಸಿದವರೆಂದು ಕೇಳಿರುವೆನು. ಈ ಲೋಕದ ಪ್ರಾಣಿವರ್ಗಗಳಲ್ಲಿ ಬಲದಲ್ಲಿ ಅವರಿಗೆ ಮೇಲಾದವರಾಗಲಿ, ಕೊನೆಗೆ ಸಮಾನರಾಗಲಿ ಯಾರೂ ಇಲ್ಲವು. ಆ ನಾಲ್ಕು ಮಂದಿಯೂ ಅನ್ಯೋನ್ಯವಾಗಿ ಸಮಬಲವುಳ್ಳವರು. ಬಲರಾಮನೊಬ್ಬನು, ಭೀಮನೊಬ್ಬನು, ಶಲ್ಯನೊಬ್ಬನು, ನಾಲ್ಕನೆಯವನು ಕೀಚಕನು. ಇವರಿಗೆ ಸಮಾನನಾದ ಐದನೆಯವನಾವನೆಂದು ನಾನು ಇದುವರೆಗೆ ಕೇಳಲಿಲ್ಲ. ಈ ನಾಲ್ವರೂ ಅನ್ಯೋನ್ಯವಾಗಿ ಸಮಾನಬಲವುಳ್ಳವರು. ಒಬ್ಬರನ್ನೊಬ್ಬರು ಜಯಿಸಬೇಕೆಂಬ ಉತ್ಸಾಹವುಳ್ಳವರು. ವೀರಾವೇಶದಿಂದ ಆತುರಗೊಂಡವರು. ಇವರು ಯಾವಾಗಲೂ ಬಾಹುಯುದ್ಧದಲ್ಲಿ ಆಪೇಕ್ಷೆಯುಳ್ಳವರು. ಈ ನಂಬಿಕೆಯಿಂದ ನಾನು, ಭೀಮನೇ ಕೀಚಕನನ್ನು ಕೊಂದಿರುವನೆಂದು ಊಹಿಸು

ವೆನು. ಈ ಕೀಚಕವಧವೇ ಇನ್ನೂ ಪಾಂಡವರು ನಿಜವಾಗಿ ಜೀವಿಸಿ ರುವರೆಂಬ ನಿಶ್ಚಯವನ್ನು ನನ್ನ ಮನಸ್ಸಿಗೆ ಹುಟ್ಟಿಸುತ್ತಿದೆ. ವಿರಾಟನಗರ ದಲ್ಲಿ ಭೀಮನೇ ಕೀಚಕನನ್ನು ಕೊಂದಿರಬೇಕು. ಆ ಸೈರಂಧ್ರಿಯು ದ್ರೌಪ ದಿಯೇ ಆಗಿರಬೇಕು. ಇದರಲ್ಲಿ ಸಂದೇಹಪಡಬೇಕಾದುದೇ ಇಲ್ಲ. ದ್ರೌಪ ದಿಯ ನಿಮಿತ್ತದಿಂದಲೇ ಭೀಮಸೇನನು, ಕೀಚಕನನ್ನು ಯಾರೋ ಗಂಧ ರ್ವರು ಕೊಂದರೆಂಬ ವ್ಯಾಜವನ್ನು ಹುಟ್ಟಿಸಿ, ರಾತ್ರಿಯಲ್ಲಿ ಕೊಂದುಬಿಟ್ಟರ ಬೇಕೆಂದು ಊಹಿಸುವೆನು. ಭೀಮನುಹೊರತು ಕೀಚಕನನ್ನು ಕೊಲ್ಲುವ ವೀರನು ಬೇರೆ ಯಾವನುಂಟು? ಅಲ್ಲದೆ ಆಯುಧಗಳೇನೂ ಇಲ್ಲದೆ ಕೇವಲ ಬಾಹುಬಲದಿಂದಲೇ ಕೀಚಕನು ಕೊಲ್ಲಲ್ಪಟ್ಟಿರುವನಂತೆ! ಆ ಕೀಚಕನ ಶರೀರವನ್ನೆಲ್ಲ ಮರ್ದಿಸಿ, ಅವನ ಚರ್ಮ ಮಾಂಸಾಸ್ಥಿಗಳನ್ನೆಲ್ಲ ಚೂರ್ಣ ಮಾಡಿ, ಬರೀ ಒಂದು ಮಾಂಸದ ಮುದ್ದೆಯಂತೆ ಇಟ್ಟುದಾಗಿಯೂ ಕೇಳು ವೆವು. ಭೀಮನಲ್ಲದೆ ಬೇರೆ ಯಾವನು ತಾನೇ ಈ ಕೆಲಸವನ್ನು ಮಾಡಲು ಶಕ್ತನು? ಭೀಮನ ಕಾರ್ಯವೇ ಇದು! ಆ ಭೀಮನೇ ರೂಪಾಂತರದಿಂದ ಈ ಘೋರಕೃತ್ಯವನ್ನು ನಡೆಸಿರುವನು. ದ್ರೌಪದಿಯ ನಿಮಿತ್ತವಾಗಿ ಭೀಮ ಸೇನನಿಂದಲೇ ಸೂತಪುತ್ರರೆಲ್ಲರೂ ರಾತ್ರಿಯಲ್ಲಿ ಕೊಲ್ಲಲ್ಪಟ್ಟು, ಆ ತಪ್ಪನ್ನು ಗಂಧರ್ವರಮೇಲೆ ಹೊರಿಸಿರುವರು. ಇದರಲ್ಲಿ ಸಂದೇಹವೇ ಇಲ್ಲ. ಇದ ಲ್ಲದೆ ನಮ್ಮ ಪಿತಾಮಹರಾದ ಭೀಷ್ಮಾಚಾರ್ಯರು, ಯುಧಿಷ್ಠಿರನು ವಾಸ ಮಾಡತಕ್ಕ ದೇಶದ ವಿಷಯವಾಗಿ ಯಾವ ಯಾವ ಗುಣಗಳನ್ನು ಹೇಳಿರು ವರೋ, ಈಗ ಅವೆಲ್ಲವೂ ವಿಶೇಷವಾಗಿ ಮತ್ಸ್ಯದೇಶಗಳಲ್ಲಿ ಕಾಣುತ್ತಿವೆ ಯೆಂದೂ ನಾನು ಅನೇಕರಿಂದ ಕೇಳಿರುವೆನು. ಆದುದರಿಂದ ಪಾಂಡವರು ವಿರಾಟನಗರದಲ್ಲಿಯೇ ವೇಷವನ್ನು ಮರೆಸಿಕೊಂಡು ವಾಸಮಾಡುತ್ತಿರ ಬೇಕು. ಆದುದರಿಂದ ಅಲ್ಲಿಗೆ ಹೊರಡುವುದಕ್ಕೆ ಪ್ರಯತ್ನಿಸಿರಿ. ನಾವು ಮತ್ಸ್ಯರಾಷ್ಟ್ರಕ್ಕೆ ಹೋಗಿ, ಅಲ್ಲಿನ ಗೋಧನವನ್ನು ಸೆರೆಹಿಡಿದುಕೊಳ್ಳುವೆವು. ಗೋವುಗಳನ್ನು ಹಿಡಿದುಕೊಂಡರೆ, ಆಗ ಪಾಂಡವರು ರಾಜನ ಸಹಾಯ ಕ್ಕಾಗಿ ಯುದ್ಧಕ್ಕೆ ಬಂದೇ ಬರುವರು. ಅಜ್ಞಾತವಾಸಕಾಲವು ಮುಗಿಯು ವುದರೊಳಗಾಗಿ, ಅವರನ್ನು ನಾವು ಹಿಡಿದುಬಿಟ್ಟರೆ, ತಿರುಗಿ ಅವರು ಹನ್ನೆ ರಡು ವರ್ಷಗಳು ಕಾಡಿನಲ್ಲಿರಬೇಕಾಗಿ ಬರುವುದು. ಈ ಗೋಧನವನ್ನು

ಸೆರೆಹಿಡಿಯುವುದರಿಂದ ನಮಗೆ ಎರಡು ವಿಧದಲ್ಲಿ ಲಾಭವುಂಟು. ಆ ದೇಶವನ್ನು ಜಯಿಸುವುದರಿಂದ ನಮ್ಮ ಬೊಕ್ಕಸವು ವೃದ್ಧಿಹೊಂದುವುದೊಂದು; ನಮ್ಮ ಶತ್ರುಗಳಾದ ಪಾಂಡವರ ಪೂರ್ಣನಾಶವೊಂದು; ಎರಡು ಕಾರ್ಯಗಳೂ ಕೈಗೂಡುವುವು. ಇದಲ್ಲದೆ, ಪಾಂಡವರು ಹೊರಕ್ಕೆ ಬಂದುಬಿಟ್ಟರೆ, ಆಮೇಲೆ ವಿರಾಟನು ನಮ್ಮನ್ನು ಲಕ್ಷ್ಯಮಾಡುವುದಿಲ್ಲ. ಮೊದಲು ಯುಧಿಷ್ಠಿರನನ್ನು ಪೋಷಿಸುತ್ತಿದ್ದ (ಅಥವಾ ಅವನಿಂದ ಪೋಷಿಸಲ್ಪಟ್ಟ) ವಿರಾಟನು, ಸುಯೋಧನನಲ್ಲಿ ತಾನು ಹೇಗೆತಾನೇ ಕಲೆಯುವೆನೆಂದು ನನ್ನಲ್ಲಿ ತಿರಸ್ಕಾರಭಾವದಿಂದಲೂ ಹೇಳಬಹುದು. ಆದುದರಿಂದ ನಾವು ಅವಶ್ಯವಾಗಿ ಈಗಲೇ ಅಲ್ಲಿಗೆ ದಂಡೆತ್ತಿ ಹೋಗಬೇಕು. ಅದಕ್ಕೆ ಸನ್ನಾಹಮಾಡಿರಿ. ಇದೇ ನನಗೆ ಒಳ್ಳೇ ನೀತಿಯುಕ್ತವಾಗಿ ತೋರುವುದು. ನಿಮ್ಮೆಲ್ಲರಿಗೂ ಸಮ್ಮತವಾದರೆ ಬೇಗನೆ ಆ ಕಾರ್ಯವನ್ನು ನಡೆಸುವೆವು" ಎಂದನು.

ಜನಮೇಜಯರಾಜಾ! ದುರ್ಯೋಧನನು ಈ ಮಾತನ್ನು ಹೇಳಿ ಮುಗಿಸಿದಮೇಲೆ, ತ್ರಿಗರ್ತದೇಶಗಳಿಗೆ ರಾಜನೂ, ಅನೇಕಸೈನ್ಯಗಳಿಗೆ ಪಾಲಕನೂ ಆದ ಸುಶರ್ಮನೆಂಬವನು, ಕರ್ಣ ದುಶ್ಶಾಸನರೊಡನೆ ಮೊದಲು ಮಾತಾಡಿಕೊಂಡು, ಅವರ ಅಭಿಪ್ರಾಯವನ್ನು ಪಡೆದು, ದುರ್ಯೋಧನನನ್ನು ಕುರಿತು ಕಾಲೋಚಿತವಾದ ಮಾತಿನಿಂದ ಹೇಳತೊಡಗಿದನು. ಇವನು ಹಿಂದೆ ಅನೇಕಾವರ್ತಿ, ಮತ್ಸ್ಯ, ಸಾಲ್ವ, ಕೇಕಯದೇಶದವರಿಂದ ಯುದ್ಧದಲ್ಲಿ ಪರಾಜಿತನಾಗಿ ಅವಮಾನಪಟ್ಟವನು. ವಿರಾಟನ ಸೇನಾಪತಿಯಾದ ಕೀಚಕನೂಕೂಡ ಆಗಾಗ ಅನೇಕಾವರ್ತಿ ಇವನನ್ನೂ, ಇವನ ಬಂಧುಗಳನ್ನೂ ಬಲಾತ್ಕಾರದಿಂದ ಹಿಡಿದು ಬಹಳ ಕಷ್ಟಪಡಿಸಿರುವನು. ಆದುದರಿಂದ, ಮತ್ಸ್ಯದೇಶದಮೇಲೆ ಹಗೆತೀರಿಸಿಕೊಳ್ಳಲು ಸಮಯವನ್ನು ಕಾದಿದ್ದ ಆ ಸುಶರ್ಮನು, ಆತುರದಿಂದ ಮೇಲೆದ್ದು, ಕರ್ಣನ ಮುಖವನ್ನು ನೋಡುತ್ತ, ದುರ್ಯೋಧನನನ್ನು ಕುರಿತು ಹೀಗೆಂದು ಹೇಳುವನು. "ಓ ರಾಜಾ! ಆ ಮತ್ಸ್ಯರಾಜನು ಹಿಂದೆ ಅನೇಕಾವರ್ತಿ ನಿನ್ನ ರಾಜ್ಯಕ್ಕೆ ಬಹಳ ಬಾಧೆಯನ್ನು ಕೊಟ್ಟಿರುವನು. ಬಲಗರ್ವಿತನಾದ ಕೀಚಕನೇ ಅವನ ಸೈನ್ಯಕ್ಕೆ ಮುಂದಾಳಾಗಿದ್ದವನು. ಆ ಕೀಚಕನಾದರೋ ಇತರರಿಗೆ ದುರ್ಜ

ಯನು. ಎಂತವರನ್ನಾದರೂ ಜಯಿಸತಕ್ಕ ಪ್ರಸಿದ್ಧಬಲಪರಾಕ್ರಮವುಳ್ಳ ವನು. ಪಾಪಿಯೂ, ಕ್ರೂರನೂ ಆದ ಕೀಚಕನು ವಿರಾಟನಗರದಲ್ಲಿ ತನ್ನ ಪಾಪಕ್ಕೆ ಫಲವಾಗಿ ವಧಿಸಲ್ಪಟ್ಟನು. ಆ ಕೀಚಕನು ಹತನಾದುದರಿಂದ, ವಿರಾಟನ ಕೊಬ್ಬಡಗಿ, ಅವನು ಈಗ ನಿರಾಶ್ರಯನಾಗಿರುವನು. ಯುದ್ಧದಲ್ಲಿ ಅವನು ನಿರುತ್ಸಾಹನಾಗಿರುವನೆಂದೂ ನನಗೆ ತೋರುವುದು. ಓ ರಾಜಾ! ನಿನಗೆ ಸಮ್ಮತವಾಗಿದ್ದರೆ, ಅಲ್ಲಿಗೆ ದಂಡೆತ್ತಿ ಹೋಗುವುದೇ ಒಳ್ಳೆಯದೆಂದು ನನ್ನ ಅಭಿಮತವು. ಎಲ್ಲಾ ಕೌರವರಿಗೂ, ಮಹಾತ್ಮನಾದ ಕರ್ಣನಿಗೂ ಈ ಕಾರ್ಯವು ಸಮ್ಮತವಾಗಿಯೇ ಇರುವುದು. ಧನಧಾನ್ಯಗಳಿಂದ ಸಮೃದ್ಧವಾದ ಆ ವಿರಾಟನ ರಾಷ್ಟ್ರವನ್ನು ಇದಿರಿಸುವೆವು. ಅವನ ವಿವಿಧ ವಸ್ತುಗಳನ್ನೂ, ಅಲ್ಲಿನ ರತ್ನಾದಿಗಳನ್ನೂ ಕೊಳ್ಳೆಹೊಡೆಯುವೆವು. ಅವನ ಗ್ರಾಮಗಳನ್ನೂ ರಾಷ್ಟ್ರಗಳನ್ನೂ ಬೇರೆಬೇರೆಯಾಗಿ ನಾವು ವಶಮಾಡಿಕೊಳ್ಳುವೆವು. ಹಾಗಿಲ್ಲವೇ, ಅವನ ನಗರವನ್ನು ಬಲಾತ್ಕಾರದಿಂದಾಕ್ರಮಿಸಿ, ಅವನಲ್ಲಿರುವ ಸಾವಿರಾರು ಗೋವುಗಳನ್ನು ಹಿಡಿದುಕೊಳ್ಳುವೆವು. ಮಹಾರಥರಾದ ಕೌರವರೊಡನೆಯೂ, ತ್ರಿಗರ್ತ ಸೇನೆಯೊಡನೆಯೂ ಹೋಗಿ, ಅಲ್ಲಿನ ಗೋವುಗಳನ್ನೆಲ್ಲ ಸೆರೆಹಿಡಿಯುವೆವು. ಒಂದುವೇಳೆ ಅವನು ನಮಗೆ ಶರಣಾಗತನಾಗುವ ಪಕ್ಷದಲ್ಲಿ, ಅವನೊಡನೆ ಸಂಧಿಯನ್ನು ಮಾಡಿಕೊಂಡು, ಅವನ ಪೌರುಷವನ್ನೆಲ್ಲ ತಗ್ಗಿಸಿಬಿಡುವೆವು. ಅವನ ಸಮಸ್ತಸೈನ್ಯವನ್ನೂ ಕೊಂದು ಅವನನ್ನು ವಶಮಾಡಿಕೊಳ್ಳುವೆವು. ಅಥವಾ ನ್ಯಾಯಮಾರ್ಗದಿಂದಲೇ ಅವನನ್ನು ನಮ್ಮ ವಶಮಾಡಿಕೊಂಡು ನಾವು ಸುಖವಾಗಿರಬಹುದು. ಆಗ ಅವನೂ ನಮ್ಮಕಡೆಗೆ ಬರುವುದರಿಂದ, ಕೌರವರಾದ ನಿಮ್ಮ ಬಲವು ಹೆಚ್ಚಿದಂತಾಗುವುದು ” ಎಂದನು.

ಓ ಜನಮೇಜಯರಾಜೇಂದ್ರಾ! ಸುಶರ್ಮನು ಹೇಳಿದ ಈ ಮಾತುಗಳನ್ನು ಕೇಳಿ ಕರ್ಣನು ತಿರುಗಿ ದುರ್ಯೋಧನನನ್ನು ಕುರಿತು “ ಮಿತ್ರನೆ! ಸುಶರ್ಮನು ಹೇಳಿದ ಮಾತು ಕಾಲೋಚಿತವಾಗಿಯೂ, ಸಮಂಜಸವಾಗಿಯೂ ಇರುವುದು. ಆದುದರಿಂದ ನಾವು ಈಗಲೇ ಸೈನ್ಯವನ್ನು ಸೇರಿಸಿಕೊಂಡು ಹೊರಡುವೆವು. ನಿನ್ನ ಅಭಿಮತವಾವುದೋ ಅದೇ ನನಗೂ

ಸಮ್ಮತವು. ನಾವು ನಮ್ಮ ಸೈನ್ಯಗಳನ್ನೆಲ್ಲ ಬೇರೆಬೇರೆಯಾಗಿ ಹಂಚಿ ಕೊಂಡು ದಂಡೆತ್ತಿ ಹೋಗುವ ವಿಷಯದಲ್ಲಿ ನಿನ್ನ ಇಷ್ಟವೇನು ಹೇಳು. ನಮ್ಮೆಲ್ಲರಿಗೂ ಪಿತಾಮಹನಾದ ಭೀಷ್ಮನು ಒಳ್ಳೇ ಪ್ರಜ್ಞಾವಂತನು. ನಮ್ಮ ಕುಲಕ್ಕೆಲ್ಲ ದೊಡ್ಡವನು. ಆಚಾರ್ಯನಾದ ಈ ಕೃಪನೂ ಮಹಾ ಪ್ರಾಜ್ಞನು. ಇವರ ಮತ್ತು ಮಾವನಾದ ಈ ಶಕುನಿಯ ಅಭಿಪ್ರಾಯ ವನ್ನು ಕೇಳಿ, ಅವರೆಲ್ಲರೂ ಹೇಳುವಂತೆ ಸೈನ್ಯವನ್ನು ವಿಭಾಗಿಸಿ, ದಂಡಯಾ ತ್ರೆಗೆ ಹೊರಡುವೆವು. ಇದನ್ನು ಚೆನ್ನಾಗಿ ಆಲೋಚಿಸಿ ನಿಶ್ಚಯಿಸಿಕೊಂಡು, ನಮ್ಮ ಕಾರ್ಯಸಾಧನೆಗಾಗಿ ಬೇಗನೆ ಹೊರಡಬೇಕು. ಪಾಂಡವರ ವಿಚಾ ರವಾಗಿ ನಾವೇನೂ ಅಷ್ಟಾಗಿ ಈಗ ಯೋಚಿಸಬೇಕಾದ ಕಾರಣವೂ ಇಲ್ಲ. ಧನವನ್ನೂ, ಸೈನ್ಯವನ್ನೂ, ಪೌರುಷವನ್ನೂ ಕಳೆದುಕೊಂಡು ನಿರ್ಗತಿಕ ರಾಗಿರುವ ಆ ಪಾಂಡವರ ಭಯವು ನಮಗೇಕೆ? ಅವರು ಸಂಪೂರ್ಣ ವಾಗಿ ನಷ್ಟರಾದಂತೆಯೇ ತಿಳಿ. ಅವರು ಇಷ್ಟರಲ್ಲಿ ಯಮಪುರಿಗೆ ಹೋಗಿ ದ್ದರೂ ಇರಬಹುದು. ಆದುದರಿಂದ ಓ ಕೌರವರಾಜಾ! ಈಗಲೇ ನೀನು ಮಹತ್ತಾದ ನಿನ್ನ ಎಲ್ಲಾ ಚತುರಂಗಸೈನ್ಯಗಳೊಡನೆ ವಿರಾಟನಗರಕ್ಕೆ ದಂಡೆತ್ತಿ ಹೊರಡು. ವಿರಾಟನ ಗೋವುಗಳನ್ನೂ, ಅವನ ವಿವಿಧವಸ್ತು ಗಳನ್ನೂ ಸಾಗಿಸಿ ತರುವೆವು'' ಎಂದನು. ಕರ್ಣನ ಈ ಮಾತುಗಳನ್ನು ಕೇಳಿ ದುರ್ಯೋಧನನು, ಯಾವಾಗಲೂ ತನ್ನ ಆಜ್ಞೆಯನ್ನು ಕಾದು ನಿಂತಿ ರುವ ತಮ್ಮನಾದ ದುಶ್ಶಾಸನನನ್ನು ನೋಡಿ ''ದುಶ್ಶಾಸನಾ! ದೊಡ್ಡವರೊ ಡನೆ ಆಲೋಚಿಸಿ ನಮ್ಮ ಸೈನ್ಯಗಳನ್ನು ಸಿದ್ಧಪಡಿಸು. ಎಲ್ಲಾ ಕೌರವ ರನ್ನೂ ಕೂಡಿಸಿಕೊಂಡು, ಅವರವರ ಇಷ್ಟಾನುಸಾರವಾಗಿ ಬೇರೆಬೇರೆ ಪ್ರದೇ ಶಗಳಿಗೆ ದಂಡೆತ್ತಿ ಹೋಗುವಂತೆ ಮಾಡು. ಮಹಾರಥನೆನಿಸಿದ ಸುಶರ್ಮನು ಬಲಪೌರುಷಗಳಿಂದ ಪ್ರಸಿದ್ಧರಾದ ಎಲ್ಲಾ ತ್ರಿಗರ್ತಸೈನ್ಯಗಳೊಡನೆ, ಅವ ನಿಗೆ ಉದ್ದಿಷ್ಟವಾದ ಕಡೆಗೆ ದಂಡೆತ್ತಿ ಹೊರಡಲಿ! ಅವನು ಎಲ್ಲವನ್ನೂ ಸಿದ್ಧಪಡಿಸಿಕೊಂಡು ಮುಂದಾಗಿಯೇ ವಿರಾಟನಗರಕ್ಕೆ ಹೋಗಲಿ! ಬಳಿಕ ಒಂದು ದಿವಸವನ್ನು ಬಿಟ್ಟುಕೊಂಡು ಅವನ ಹಿಂದೆ ನಾವು ಹೊರಡುವೆವು. ಈ ಸುಶರ್ಮನು ಮುಂದಾಗಿ ಹೋಗಿ, ಸಂಪತ್ಸಮೃದ್ಧವಾದ ಮತ್ಸ್ಯದೇಶವನ್ನೂ, ಅವನ ಗೋಧನವನ್ನೂ ಹಿಡಿದುಕೊಂಡರೆ, ವಿರಾ

ಟನು ಸೈನ್ಯದೊಡನೆ ಬಂದು ತ್ರಿಗರ್ತಸೈನ್ಯಗಳೊಡನೆ ಯುದ್ಧವನ್ನಾರಂಭಿಸುವನು. ಆಮೇಲೆ ಮಾರನೆಯ ದಿನಕ್ಕೆ ಕೌರವರು ಬೇರೆ ಕಡೆಯಿಂದ ಹೋಗಿ ಅಲ್ಲಿಯೂ ಗೋವುಗಳನ್ನು ಸೆರೆಹಿಡಿಯಲಿ. ಆಗ ಆ ಗೋವುಗಳನ್ನು ಬಿಡಿಸುವುದಕ್ಕಾಗಿ ಪಾಂಡವರು ಬಂದೇ ಬರುವರು. ಆವರು ಕೌರವಸೇನೆಗಿದಿರಾಗಿ ಬಂದು ಯುದ್ಧಮಾಡಬೇಕಾಗುವುದು. ಆದುದರಿಂದ ಸೈನ್ಯಗಳೆಲ್ಲವನ್ನೂ ಎರಡಾಗಿ ವಿಭಾಗಿಸಿಕೊಂಡು, ಈಗಲೇ (ಎರಡು ಕಡೆಯಿಂದ) ವಿರಾಟನಗರಕ್ಕೆ ದಂಡೆತ್ತಿ, ಅಲ್ಲಿ ಗೋವುಗಳಿರುವ ಸ್ಥಳವನ್ನು ಮುತ್ತಿಗೆಹಾಕಿ, ಒಳ್ಳೇ ಗುಣವುಳ್ಳ ಮತ್ತು ಅಂದವಾದ ಗೋಧನವನ್ನು ನೂರುಸಾವಿರಸಂಖ್ಯೆಯಿಂದ ಹಿಡಿಯುವೆವು'' ಎಂದನು. ಹೀಗೆಂದು ಆಜ್ಞಾಪಿಸಿದಕೂಡಲೇ, ವಿರಾಟನಗರವನ್ನು ಮುತ್ತುವುದಕ್ಕೆ ಸೈನ್ಯಗಳು ಸಿದ್ಧವಾದುವು. ಸುಶರ್ಮನು ಸೈನ್ಯಗಳೊಡನೆ ಹೊರಟು, ಕೃಷ್ಣಪಕ್ಷದ ಅಷ್ಟಮಿತಿಥಿಯಲ್ಲಿ ವಿರಾಟನ ಗೋವುಗಳನ್ನು ಹಿಡಿದನು. ಆದರ ಮರುದಿನವೇ ನವಮಿತಿಥಿಯಲ್ಲಿ ಕೌರವಸೈನ್ಯಗಳೂ ಬಂದು ಗೋವುಗಳನ್ನು ಹಿಡಿದುವು.

ಇದು ಮೂವತ್ತೆರಡನೆಯ ಅಧ್ಯಾಯವು.

ಸುಶರ್ಮನು ಗೋವುಗಳನ್ನು ಹಿಡಿದ ವೃತ್ತಾಂತವನ್ನು, ಗೋಪಾಲಕರು ವಿರಾಟನಿಗೆ ತಿಳಿಸಿದುದು. ವಿರಾಟನು ಯುದ್ಧಕ್ಕಾಗಿ ಹೊರಟುದು. ಯುಧಿಷ್ಠಿರಾಜ್ಞೆಯಿಂದ ಅವನ ಸಹಾಯಕ್ಕಾಗಿ ಪಾಂಡವರು ಅವನನ್ನು ಹಿಂಬಾಲಿಸಿದುದು.

ವೇಷವನ್ನು ಮಾರಿಸಿಕೊಂಡು ವಿರಾಟನಗರದಲ್ಲಿದ್ದ ಮಹಾತ್ಮರಾದ ಪಾಂಡವರಿಗೆ ಆ ಹದಿಮೂರನೆಯ ವರ್ಷವು ಸುಖವಾಗಿ ಕಳೆಯುತ್ತ ಬಂದಿತು. ಸುಶರ್ಮನು ಗೋವುಗಳನ್ನು ಸೆರೆಹಿಡಿದ ಕಾಲಕ್ಕೆ, ಪಾಂಡವರಿಗೆ, ಅಜ್ಞಾತವಾಸದಲ್ಲಿರಬೇಕಾದ ಒಂದು ವರ್ಷವೂ ಸಮಾಪ್ತವಾಗುತ್ತ

ಬಂದಿತು. ದುರಾತ್ಮನಾದ ಕೀಚಕನು ಹತನಾದಮೇಲೆ, ವಿರಾಟರಾಜನು ತನಗೆ ಕೀಚಕನಿಲ್ಲದ ಕೊರತೆಯು ನೀಗುವಂತೆ ತನ್ನ ಸಹಾಯಕ್ಕೆ ಪಾಂಡವರಿರುವರೆಂಬ ಧೈರ್ಯದಿಂದ, ಧರ್ಮರಾಜನಲ್ಲಿ ಮೊದಲಿಗಿಂತಲೂ ಹೆಚ್ಚು ವಿಶ್ವಾಸವನ್ನು ತೋರಿಸುತ್ತ ಬಂದನು. ಹೀಗಿರುವಾಗ, ಅವರಿಗೆ ಅಜ್ಞಾತವಾಸದ ಹದಿಮೂರನೆಯ ವರ್ಷವು ಕೊನೆಮುಟ್ಟುವುದೂ, ಸುಶರ್ಮನು ವಿರಾಟನ ಗೋವುಗಳನ್ನು ಹಿಡಿದುದೂ ಸಮವಾಗಿ ಸಂಘಟಿಸಿತು. ಇಷ್ಟರಲ್ಲಿ ಇತ್ತಲಾಗಿ ಸುಶರ್ಮನ ಸೇನೆಯು ವಿರಾಟನಗರವನ್ನು ಮುತ್ತಿದೊಡನೆ, ಅವರ ಯುದ್ಧಕೋಲಾಹಲಗಳು ಪ್ರಬಲವಾಗಿ ಕೇಳಬಂದುವು. ದೊಡ್ಡ ರಣಧೂಳಿಯೆದ್ದು ಆಕಾಶವನ್ನೆಲ್ಲ ವ್ಯಾಪಿಸಿತು. ಒಂದುಕಡೆಯಲ್ಲಿ ಪಟಹ ಶಂಖ, ದುಂದುಭಿ, ಭೇರಿ ಮೊದಲಾದ ರಣವಾದ್ಯಘೋಷಗಳು! ಒಂದು ಕಡೆಯಲ್ಲಿ ರಥಚಕ್ರ ಚೀತ್ಕಾರಗಳು! ಇನ್ನೊಂದು ಕಡೆಯಲ್ಲಿ ಕುದುರೆಗಳ ಹೇಷಾಧ್ವನಿ! ಬೇರೊಂದು ಕಡೆಯಲ್ಲಿ ಕಾಲಾಳುಗಳ ಕಲಕಲಧ್ವನಿ! ಇವೆಲ್ಲ ಒಂದುಗೂಡಿ ಪ್ರಬಲಧ್ವನಿಯು ಕೇಳಿಸಿತು. ತ್ರಿಗರ್ತಸೈನ್ಯವು ಮತ್ಸ್ಯ ಭೂಪಾಲನ ಗೋವುಗಳನ್ನು ಸೆರೆಹಿಡಿದು ಹೋಗುತ್ತಿರಲು, ಹಸುಗಳನ್ನು ಕಾಯುತ್ತಿದ್ದ ಗೊಲ್ಲರೇ ಆ ಸೈನಿಕರನ್ನಿದಿರಿಸಿದರು. ಆದರೇನು? ತ್ರಿಗರ್ತಸೈನಿಕರಾದರೋ ಹೆಚ್ಚು ಮಂದಿಯಿರುವರು. ಅದರಮೇಲೆ ಆಯುಧ ಸಮೃದ್ಧಿಯುಳ್ಳವರು. ಅವರು ಗೋಧನಗಳನ್ನೆಲ್ಲ ಹಿಡಿದುಕೊಂಡು, ವೇಗವುಳ್ಳ ತಮ್ಮ ಕುದುರೆಗಳನ್ನೂ, ರಥಗಳನ್ನೂ ಓಡಿಸಿ, ಆ ಗೋಪಾಲಕರನ್ನು ನಾನಾಕಡೆಗಳಿಗೆ ಚದರಿಸಿಬಿಟ್ಟರು. ಆ ಗೊಲ್ಲರನ್ನು ತಾವು ಜಯಿಸುವುದು ಸುಲಭವೆಂಬ ಧೈರ್ಯದಿಂದ ಯುದ್ಧವನ್ನು ಪಕ್ರಮಿಸಿದರು. ಪ್ರಾಸ, ತೋಮರಾದ್ಯಾಯುಧಗಳಿಂದ ಅನೇಕಸೈನಿಕರು ಸೇರಿ ತಮ್ಮನ್ನು ಹೊಡೆಯುತ್ತಿದ್ದರೂ ಆ ಗೊಲ್ಲರು, ಅವನ್ನೆಲ್ಲ ಸಹಿಸಿಕೊಂಡು, ತಮಗೆ ಮಂದೆಯಲ್ಲಿರುವ ಅಭಿಮಾನದಿಂದ ತಮ್ಮ ಶಕ್ತಿಮೀರಿ ಆ ಗೋವುಗಳನ್ನು ಬಿಡಿಸಲು ಪ್ರಯತ್ನಿಸಿದರು. ಆಗ ಗೊಲ್ಲರು, ಕೊಡಲಿ, ಒನಕೆ, ಭಿಂಡಿವಾಲ, ಮುದ್ಗರ, ಮುಂತಾದ ಆಯುಧಗಳಿಂದಲೂ, ವಿಧವಿಧವಾದ ತಮ್ಮ ಕೊಕ್ಕೆಯಕೋಲುಗಳಿಂದಲೂ ಆ ಕುದುರೆಗಳನ್ನೆಲ್ಲ ಹೊಡೆಯುತ್ತ ಬಂದರು. ಇದನ್ನು ನೋಡಿ ತ್ರಿಗರ್ತಸೈನಿಕರಿಗೆ ಮತ್ತಷ್ಟು ಕೋಪವು ಹೆಚ್ಚಿತು. ಅವ

ರಲ್ಲಿ ರಥಾರೂಢರಾಗಿ ಬಂದಿದ್ದವರು ಬಾಣವರ್ಷಗಳನ್ನು ಕರೆದು ಆ ಗೊಲ್ಲ ರನ್ನು ಓಡಿಸತೊಡಗಿದರು. ಕೊನೆಗೆ ಆ ಸೈನಿಕರ ಪ್ರಹಾರಗಳನ್ನು ತಡೆಯ ಲಾರದೆ ಗೊಲ್ಲರು ಯುದ್ಧದಿಂದ ಹಿಂತಿರುಗಬೇಕಾಯಿತು. ಒಳ್ಳೇ ಪ್ರಾಯ ವುಳ್ಳ ಅನೇಕ ಗೋಪಾಲಕರು ಭಯದಿಂದ ಮೇಲುಸಿರುಬಿಡುತ್ತ ವೇಗ ದಿಂದ ಪಟ್ಟಣದಕಡೆಗೆ ಓಡಿದರು. ಅವರಲ್ಲಿ ಕೆಲವರು ಮತ್ಸ್ಯನಗರವ ನ್ನೈದಿ, ಪಾಂಡವರೊಡನೆ ಆಸ್ಥಾನದಲ್ಲಿ ಕುಳಿತಿದ್ದ ರಾಜಶ್ರೇಷ್ಠನಾದ ವಿರಾ ಟನಲ್ಲಿಗೆ ಬಂದರು. ಆಗ ವಿರಾಟನು ಕಡುಕು, ತೋಳ್ಬಳೆ ಮುಂತಾದ ಅಲಂಕಾರಗಳಿಂದ ಕೂಡಿದ ಅನೇಕ ಯೋಧರಿಂದ ಪರಿವೃತನಾಗಿರುವನು. ಅವನ ಸುತ್ತಲೂ ಪಂಡಿತರೂ, ಸಾಧುಗಳೂ ನೆರೆದಿರುವರು. ಆಗ ಗೊಲ್ಲರು ವಿರಾಟನಿಗೆ ಕೈಮುಗಿದು "ಓ ರಾಜೇಂದ್ರ! ತ್ರಿಗರ್ತರು ನಮ್ಮ ಗೋವು ಗಳನ್ನೆಲ್ಲ ಸೆರೆಹಿಡಿದು, ನಮ್ಮೆಲ್ಲರನ್ನೂ ಯುದ್ಧದಲ್ಲಿ ಜಯಿಸಿ, ನಮ್ಮನ್ನೂ, ನಮ್ಮ ಬಂಧುಗಳನ್ನೂ ತಿರಸ್ಕರಿಸಿರುವರು. ನಮ್ಮ ಅರವತ್ತುಸಾವಿರ ಗೋ ವುಗಳನ್ನೂ ಹಿಡಿದುಕೊಂಡಿರುವರು. ಮಹಾರಾಜಾ! ನಮ್ಮ ಗೋವುಗಳು ನಷ್ಟವಾಗದಂತೆ ಅವುಗಳನ್ನು ಬಿಡಿಸುವ ಪ್ರಯತ್ನ ಮಾಡು" ಎಂದರು. ಗೊಲ್ಲರ ಮಾತನ್ನು ಕೇಳಿದೊಡನೆ ವಿರಾಟನು ದೊಡ್ಡ ಸೇನೆಯನ್ನು ಸೇರಿ ಸುವಂತೆ ಆಜ್ಞೆಮಾಡಿದನು. ಆನೆಗಳೂ, ಕುದುರೆಗಳೂ, ರಥಗಳೂ ಸಿದ್ಧವಾ ದುವು. ಕೈಯಲ್ಲಿ ಧ್ವಜವನ್ನು ಹಿಡಿದ ಕಾಲಾಳುಗಳು ಸಿದ್ಧರಾದರು. ರಾಜ ರೂ, ರಾಜಪುತ್ರರೂ ಒಳ್ಳೆಯ ಕಾಂತಿಯುಕ್ತವಾಗಿಯೂ, ಗಾಳಿಯು ಪ್ರವೇ ಶಿಸುವುದಕ್ಕೆ ಅವಕಾಶವಿಲ್ಲದೆಯೂ, ಸುಖವಾಗಿ ಧರಿಸುವುದಕ್ಕೆ ಯೋಗ್ಯವಾ ಗಿಯೂ ಇರುವ ಯುದ್ಧ ಕವಚಗಳನ್ನು ಅವರವರ ಪದವಿಗೆ ತಕ್ಕಂತೆ ಧರಿ ಸಿಕೊಂಡರು. ಸುವರ್ಣಾಲಂಕೃತಗಳಾದ ಕುದುರೆಗಳು ರಥಕ್ಕೆ ಹೂಡಲ್ಪ ಟ್ಟುವು. ಶೂರರಾದ ಧನುರ್ಧಾರಿಗಳು ಬಿಲ್ಲಿಗೆ ನಾಣನ್ನೆಳೆದು ಕಟ್ಟಿದರು. ವಿರಾಟನಿಗೆ ಪ್ರಿಯಸಹೋದರನಾದ ಶತಾನೀಕನು, ದೃಢವಾದ ಮತ್ತು ಮೇಲೆ ಸುವರ್ಣಕಾಂತಿಯಿಂದಲಂಕೃತವಾದ ಉಕ್ಕಿನ ಕವಚವನ್ನು ಧರಿಸಿ ದನು. ಈ ಶತಾನೀಕನ ತಮ್ಮನಾದ ಮದಿರಾಕ್ಷನೆಂಬವನು ಎಷ್ಟು ಭಾರ ವನ್ನಾದರೂ ತಡೆಯತಕ್ಕುದಾಗಿಯೂ, ಸುವರ್ಣರೇಖೆಗಳಿಂದ ವಿಚಿತ್ರವಾ ಗಿಯೂ ಇರುವ ಬೇರೊಂದು ಕವಚವನ್ನು ಧರಿಸಿದನು. ಸೂರ್ಯದತ್ತ

ನೆಂಬವನು ಮೇಲುಭಾಗದಲ್ಲಿ ನೂರು ಕಮಲಗಳಿಂದಲೂ, ನೂರು ಸೌಗಂಧಿಕಗಳಿಂದಲೂ ಚಿತ್ರಿತವಾಗಿ, ಅಂಚಿನಲ್ಲಿ ಸುವರ್ಣದ ರೇಖೆಯಿಂದ ಅಲಂಕರಿಸಲ್ಪಟ್ಟ ಕವಚವನ್ನು ಧರಿಸಿಕೊಂಡನು. ವೀರನೂ, ವಿರಾಟನ ಜ್ಯೇಷ್ಠಕುಮಾರನೂ ಆದ ಶಂಖನೆಂಬವನು, ದೃಢವಾಗಿಯೂ, ಅಯೋನಿರ್ಮಿತವಾಗಿಯೂ, ಸುವರ್ಣಾಲಂಕೃತವಾಗಿಯೂ ಇರುವ ಒಂದು ಕವಚವನ್ನು ಧರಿಸಿದನು. ಮತ್ಸ್ಯಾಧಿಪತಿಯಾದ ವಿರಾಟನೂ ಕೂಡ ನೂರು ಸೂರ್ಯಪ್ರತಿಮೆಗಳೂ, ನೂರುಸುಳಿಗಳೂ, ನೂರು ಚುಕ್ಕಿಗಳೂ, ನೂರು ಕಣ್ಣುಗಳೂ, ಉಳ್ಳ, ಮತ್ತು ದುರ್ಭೇದ್ಯವಾದ ಒಂದು ಕವಚವನ್ನು ತೊಟ್ಟುಕೊಂಡನು. ಹೀಗೆಯೇ ಮಹಾಬಲಾಢ್ಯರೂ, ಯುದ್ಧೋತ್ಸಾಹವುಳ್ಳವರೂ, ದೇವಸಮಾನರೂ, ವಿವಿಧಶಸ್ತ್ರಧಾರಿಗಳೂ ಆದ ವೀರರೆಲ್ಲರೂ, ಅವರವರಿಗೆ ಯೋಗ್ಯವಾದ ನಾನಾಬಗೆಯ ಕವಚಗಳನ್ನು ಧರಿಸಿಕೊಂಡು ಸಿದ್ಧರಾದರು. ಮಹಾರಥರುಗಳು ಸಮಸ್ತ ಸಾಮಗ್ರಿಗಳಿಂದ ಸಿದ್ಧವಾಗಿಯೂ, ಬಿಳುಪಾಗಿಯೂ, ಮಹತ್ತಾಗಿಯೂ ಇರುವ ರಥಗಳಲ್ಲಿ ಸುವರ್ಣಾಲಂಕೃತಗಳಾದ ಕುದುರೆಗಳನ್ನು ಕಟ್ಟಿ ಸಿದ್ಧರಾದರು. ಸೂರ್ಯಚಂದ್ರರಿಗೆ ಸಮಾನವಾಗಿಯೂ ಸುವರ್ಣರತ್ನಶೋಭಿತವಾಗಿಯೂ ಇರುವ ಮತ್ಸ್ಯರಾಜನ ರಥದಲ್ಲಿ, ಮಹಾಪ್ರಮಾಣವುಳ್ಳ ಒಂದು ದೊಡ್ಡ ಧ್ವಜವು ಏರಿಸಲ್ಪಟ್ಟಿತು. ಶೂರರಾದ ಇತರರಾಜರೂ ಕೂಡ ತಮ್ಮತಮ್ಮ ರಥಗಳಲ್ಲಿ ಬೇರೆಬೇರೆ ಆಕೃತಿಗಳುಳ್ಳ ಸುವರ್ಣ ಧ್ವಜಗಳನ್ನು, ಚಿನ್ನದ ಮಾಲಿಕೆಗಳಿಂದ ಅಲಂಕರಿಸಿ ಕಟ್ಟಿದರು. ಹೀಗೆ ರಥಗಳು ಸಿದ್ಧವಾಗುತ್ತಿರುವಾಗ, ಕಂಕಸನ್ಯಾಸಿಯು (ಯುಧಿಷ್ಠಿರನು) ವಿರಾಟನನ್ನು ಕುರಿತು, "ಎಲೆ ರಾಜೇಂದ್ರಾ! ಧರ್ಮಾರ್ಥಕಾಮ ಮೋಕ್ಷಗಳೆಂಬ ಚತುರ್ವರ್ಗಗಳಿಗೂ ಸಾಧಕವಾದ ಅಸ್ತ್ರವು ನನಗೆ ಒಬ್ಬ ಋಷಿಶ್ರೇಷ್ಠರ ಅನುಗ್ರಹದಿಂದ ಲಭಿಸಿದೆ. ಆದುದರಿಂದ ನಾನೂ ಕವಚವನ್ನು ಧರಿಸಿ, ರಥವನ್ನೇರಿ ಆ ಗೋವುಗಳಿರುವ ಸ್ಥಳಕ್ಕೆ ಹೊರಡುವೆನು. ಮತ್ತು ನಮ್ಮ ಅಡಿಗೆಯ ಮನೆಯಲ್ಲಿರುವ ವಲಲನೂಕೂಡ ಒಳ್ಳೆಯ ಬಲಶಾಲಿಯಾದ ಶೂರನಂತೆ ಕಾಣುತ್ತಿರುವನು. ಮತ್ತು ನಮ್ಮಲ್ಲಿ ಪಶುರಕ್ಷಕನಾದ ತಂತ್ರೀಪಾಲನನ್ನೂ, ಅಶ್ವರಕ್ಷಕನಾದ ದಾಮಗ್ರಂಥಿಯನ್ನೂ ರಥದಮೇಲೇರಿ ಹೊರಡುವಂತೆ ನಿಯಮಿಸು. ಈಗ ಗೋವುಗ

ಳನ್ನು ಹಿಡಿಯುವುದಕ್ಕಾಗಿ ಬಂದವರು ಯಾರೂ ಇವರೊಡನೆ ಯುದ್ಧ ಮಾಡಲಾರರೆಂದು ನಾನೆಣಿಸುವೆನು'' ಎಂದನು.

ಆಮೇಲೆ ವಿರಾಟನು, ತನ್ನ ತಮ್ಮನಾದ ಶತಾನೀಕನನ್ನು ಕರೆದು "ಎಲೈ ಸಹೋದರನೇ! ಈ ಕಂಕಸನ್ಯಾಸಿಯೂ, ನಮ್ಮ ಅಡಿಗೆಯವನಾದ ವಲಲನೂ, ದಾಮಗ್ರಂಥಿಯೂ, ಗೋಪಾಲಕನಾದ ತಂತ್ರೀಪಾಲನೂ ಬಹಳ ಶೂರರಂತೆಯೂ, ವೀರರಂತೆಯೂ, ಪುರುಷಶ್ರೇಷ್ಠರಂತೆಯೂ ತೋರುವುದು. ಉತ್ತಮವಾದ ಗಜರಾಜನಂತೆ ಬಲವುಳ್ಳ ಅವರು, ರಣರಂಗದಲ್ಲಿ ಚೆನ್ನಾಗಿ ಯುದ್ಧಮಾಡಬಲ್ಲರೆಂದೂ ನನಗೆ ತೋರಿದೆ. ಈ ವಿಷಯದಲ್ಲಿ ಸಂದೇಹವಿಲ್ಲ. ಆದುದರಿಂದ ಧ್ವಜಪತಾಕೆಗಳಿಂದ ಅಲಂಕೃತಗಳಾದ ರಥಗಳನ್ನೂ, ದೃಢವಾಗಿಯೂ, ಹಗುರವಾಗಿಯೂ ಇರುವ ಯುದ್ಧಕವಚಗಳನ್ನೂ ಇವರಿಗೂ ಒದಗಿಸಿ ಕೊಡು. ಇವರಿಗೆ ಬೇಕಾದ ಆಯುಧಗಳನ್ನೂ ಸಿದ್ಧಪಡಿಸು. ನಿಶ್ಚಯವಾಗಿ ಇವರು ಯುದ್ಧಮಾಡದೆ ಇರಲಾರರು'' ಎಂದನು. ಈ ಮಾತನ್ನು ಕೇಳಿದೊಡನೆ, ಶತಾನೀಕನು ಆತುರದಿಂದ ಹೋಗಿ ಪಾಂಡವರಿಗಾಗಿ ರಥಗಳನ್ನು ತರುವಂತೆ ಆಜ್ಞಾಪಿಸಿದನು. ಧರ್ಮರಾಜ, ಭೀಮ, ನಕುಲ, ಸಹದೇವರೆಂಬ ನಾಲ್ವರಿಗೂ ರಥಗಳು ಸಿದ್ಧವಾದುವು. ರಾಜಭಕ್ತಿಯುಳ್ಳ ಸಾರಥಿಗಳು ಒಳ್ಳೆಯ ಕುದುರೆಗಳನ್ನು ತಂದು ರಥಗಳಿಗೆ ಹೂಡಿದರು. ಅದರಂತೆಯೇ ವಿರಾಟನ ಆಜ್ಞೆಯಿಂದ ಮಹಾರಥರಾದ ಪಾಂಡವರಿಗೆ, ವಿಚಿತ್ರಗಳಾಗಿಯೂ, ಹೊಸದಾಗಿಯೂ, ದೃಢವಾಗಿಯೂ ಇರುವ ಯುದ್ಧಕವಚಗಳೂ ತಂದಿಡಲ್ಪಟ್ಟುವು. ಬಲಶಾಲಿಗಳೂ, ಸರ್ವಶಾಸ್ತ್ರವಿಶಾರದರೂ, ಗುಸ್ತರೂಪವುಳ್ಳವರೂ ಆದ ಪಾಂಡವರು, ಆ ಕವಚಗಳನ್ನು ತೊಟ್ಟು, ಸುವರ್ಣಾಲಂಕೃತಗಳಾದ ರಥಗಳನ್ನೇರಿ, ಅತ್ಯುತ್ಸಾಹದಿಂದ ವಿರಾಟನ ಹಿಂದೆ ಯುದ್ಧರಂಗಕ್ಕೆ ಹೊರಟರು. ಪಾಂಡುಪುತ್ರರಾದ ನಾಲ್ಕುಮಂದಿ ಸಹೋದರರೂ, ದೃಢವಾದ, ಉದ್ದವಾದ ಬಿಲ್ಲುಗಳನ್ನು ತೆಗೆದುಕೊಂಡು ಅದಕ್ಕೆ ನಾಣನ್ನೆಳೆದುಕಟ್ಟಿದರು. ಒಳ್ಳೆಯ ವಸ್ತ್ರಚಂದನಾದಿಗಳಿಂದಲಂಕೃತರಾದ ಆ ನಾಲ್ಕುಮಂದಿ ಸಹೋದರರೂ ವಿರಾಟರಾಜನಿಂದ ಪ್ರೇರಿತರಾಗಿ, ಕುದುರೆಗಳನ್ನು ತಟ್ಟಿ, ರಥವನ್ನು ಮುಂದೆ

ಬಿಟ್ಟರು. ಒಳ್ಳೆಯ ನಡೆಯುಳ್ಳವುಗಳೂ, ಎತ್ತರವಾದ ಆಕಾರವುಳ್ಳವುಗಳೂ, ಸುವರ್ಣಾಲಂಕೃತಗಳೂ ಆದ ಆ ಕುದುರೆಗಳು, ವೇಗದಿಂದ ಓಡುತ್ತ, ಆಕಾಶದಲ್ಲಿ ಹಾರುವ ಪಕ್ಷಿಗಳ ಸಾಲಿನಂತೆ ಕಾಣುತಿದ್ದುವು. ನೋಡುವುದಕ್ಕೆ ಹೆದರಿಕೆಯನ್ನುಂಟುಮಾಡುವಂತೆ ಉನ್ನತಾಕಾರವುಳ್ಳವುಗಳೂ, ಮದಜಲಧಾರೆಯಿಂದ ಕೂಡಿದ ಮುಖವುಳ್ಳವುಗಳೂ, ಗಜಯುದ್ಧದಲ್ಲಿ ಚತುರರಾದ ಯೋಧರಿಂದ ಏರಲ್ಪಟ್ಟವುಗಳೂ ಆದ ಗಜಸೈನ್ಯಗಳು, ಒಳ್ಳೆಯ ಮಾವಟಿಗರಿಂದ ನಡೆಸಲ್ಪಟ್ಟು, ಸಾಲಾಗಿ ಹೋಗುತಿದ್ದುವು. ಈ ಆನೆಗಳಲ್ಲಿ ಒಂದೊಂದೂ ಅರವತ್ತು ವರ್ಷದ ಯೌವ್ವನವುಳ್ಳದು! ಒಂದೊಂದೂ ಅಂದವಾದ ದಂತವುಳ್ಳದು! ಇಂತಹ ಆನೆಗಳು ಮಳೆಯನ್ನು ಸುರಿಸುವ ಮೇಘಗಳಂತೆ ಮದಜಲವನ್ನು ಸುರಿಸುತ್ತ, ನಡೆಯುವ ಪರ್ವತಗಳಂತೆ ರಾಜನನ್ನು ಹಿಂಬಾಲಿಸಿದುವು. ಆಯುಧಗಳನ್ನು ಹಿಡಿದ ಕಾಲಾಳುಗಳಿಂದಲೂ, ರಥಾಶ್ವಗಜಗಳಿಂದಲೂ ತುಂಬಿದ ಆ ವಿರಾಟನ ಸೈನ್ಯವು ದೇವೇಂದ್ರನ ಸೈನ್ಯದಂತೆ ಕಾಣುತಿತ್ತು.

ಎಲೈ ಜನಮೇಜಯರಾಜನೇ! ಗೋವುಗಳನ್ನು ಬಿಡಿಸಿಕೊಂಡು ಬರುವ ಆತುರದಿಂದ ದಂಡೆತ್ತಿ ಹೊರಟ ಆ ವಿರಾಟನ ಹಿಂದೆ, ಗೋರಕ್ಷಣೆಯೇ ಮುಖ್ಯವಾಗಿ ಉಳ್ಳ ಅನೇಕಮಂದಿ ವೈಶ್ಯರು ಹೊರಟರು. ಮತ್ತು ಇಪ್ಪತ್ತುಸಾವಿರಮಂದಿ ಅನುಚರರೂ, ಎಂಟುಸಾವಿರ ರಥಗಳೂ, ಸಾವಿರ ಆನೆಗಳೂ, ಇಪ್ಪತ್ತುಸಾವಿರ ಕುದುರೆಗಳೂ ವಿರಾಟರಾಜನನ್ನು ಹಿಂಬಾಲಿಸಿದುವು. ಓ ಜನಮೇಜಯರಾಜೇಂದ್ರಾ! ಹೀಗೆ ಹೊರಟ ವಿರಾಟನ ಸೈನ್ಯವು ವಸಂತಕಾಲದಲ್ಲಿ ನಾನಾಬಗೆಯ ಪುಷ್ಪಗಳಿಂದ ಚಿತ್ರಿತವಾದ ಕಾಡಿನಂತೆ ಅತ್ಯಂತ ಶೋಭಾಯಮಾನವಾಗಿದ್ದಿತು.

ಇದು ಮೂವತ್ತುಮೂರನೆಯ ಅಧ್ಯಾಯವು.

ವಿರಾಟನ ಮತ್ತು ಸುಶರ್ಮನ ಸೈನ್ಯಗಳಿಗೆ ಯುದ್ಧವು.
ಯುಧಿಷ್ಠಿರಾದಿಗಳಿಂದ ಹತವಾದ ಸೈನ್ಯಗಳ ಸಂಖ್ಯೆ.
ವಿರಾಟ ಸುಶರ್ಮರ ಯುದ್ಧವು.

ಓ ಜನಮೇಜಯರಾಜಾ! ಕೇಳು! ಹೀಗೆ ಶೂರರೂ, ಶಸ್ತ್ರಧಾರಿಗಳೂ ಆದ ಮತ್ಸ್ಯದೇಶದ ವೀರರು, ಸೈನ್ಯಗಳನ್ನು ವ್ಯೂಹಗಳನ್ನಾಗಿ ನಿಲ್ಲಿಸಿಕೊಂಡು, ಆ ದಿನದ ಸಾಯಂಕಾಲದಲ್ಲಿ ಸೂರ್ಯಾಸ್ತಮಯವಾಗುವ ವೇಳೆಗೆ ತ್ರಿಗರ್ತಸೈನಿಕರನ್ನು ಸಂಧಿಸಿದರು. ಆ ತ್ರಿಗರ್ತಸೈನಿಕರೂ ತಮ್ಮ ಸೈನ್ಯಗಳನ್ನು ಕ್ರಮವಾಗಿ ನಿಲ್ಲಿಸಿ, ಶಸ್ತ್ರಧಾರಿಗಳಾಗಿ ನಿಂತರು. ಮಹಾಬಲವುಳ್ಳ ಸೈನ್ಯಗಳೆರಡೂ ಒಂದನ್ನೊಂದು ಇದಿರಿಸಿ, ಗೋವುಗಳನ್ನು ದಕ್ಕಿಸಿಕೊಳ್ಳುವ ಆತುರದಿಂದ ಯುದ್ಧವನ್ನು ಪಕ್ರಮಿಸಿದುವು. ಒಳ್ಳೇ ನಿಪುಣರಾದ ಮಾವಟಿಗರು ಮೇಲೇರಿ ಕುಳಿತು, ತೋಮರಗಳಿಂದಲೂ ಅಂಕುಶಗಳಿಂದಲೂ, ತಿವಿದು ಮುಂದೆ ಬಿಡಲು, ಭಯಂಕರಾಕಾರವುಳ್ಳ ಮದಗಜಸೇನೆಗಳು ಒಂದಕ್ಕೊಂದು ಕೈಕಲೆತು ಯುದ್ಧವನ್ನಾರಂಭಿಸಿದುವು. ಈ ಆನೆಗಳು ಒಂದಕ್ಕೊಂದು ಅಪ್ಪಳಿಸುತ್ತ, ಹಟದಿಂದ ಹೋರಾಡುತ್ತಿದ್ದ ನೋಟವು ನೋಡುವವರಿಗೆ ಮೈಯಲ್ಲಿ ರೋಮಾಂಚವನ್ನು ಹುಟ್ಟಿಸುವಂತೆ ಆಶ್ಚರ್ಯಕರವಾಗಿದ್ದಿತು. ಈ ಎರಡು ಸೈನ್ಯಗಳ ಹೋರಾಟವು ದೇವಾಸುರ ಯುದ್ಧಕ್ಕೆ ಸಮಾನವಾಗಿ, ಯಮಲೋಕವನ್ನು ಜನಸಮೃದ್ಧವಾಗಿ ಮಾಡುವಂತೆ ಅತಿಘೋರವಾಯಿತು. ರಥಾಶ್ವ ಗಜ ಪದಾತಿಗಳೆಂಬ ಚತುರಂಗಸೈನ್ಯಗಳೂ ಆ ಸೂರ್ಯಾಸ್ತಮಯಕಾಲದಲ್ಲಿ ಒಂದಕ್ಕೊಂದು ಮೇಲೆಬಿದ್ದು ಹೊಡೆದಾಡುತ್ತಿರುವಾಗ, ನೆಲದಿಂದ ಮೇಲಕ್ಕೆದ್ದ ದೊಡ್ಡ ಧೂಳು ಭೂಮ್ಯಾಕಾಶಗಳೆಲ್ಲವನ್ನೂ ಮರೆಸುವಂತೆ ವ್ಯಾಪಿಸಿ, ಕಣ್ಣಿಗೆ ಏನೊಂದೂ ತಿಳಿಯದಂತಾಯಿತು. ಆಗಿನ ಸೇನಾಧೂಳಿಗೆ ಆಕಾಶದ ಹಕ್ಕಿಗಳೆಲ್ಲವೂ ಕೆಳಕ್ಕೆ ಬಿದ್ದುವು. ಮೊದಲೇ ಕಾಂತಿಗುಂದಿ ಮುಳುಗುತ್ತಿರುವ ಸೂರ್ಯನನ್ನು, ಧನುರ್ಧಾರಿಗಳ ಬಿಲ್ಲಿನಿಂದ ಹೊರಟ ಬಾಣಗಳು ಪೂರ್ಣವಾಗಿ ಮರೆಸಿಬಿಟ್ಟುವು. ಕಾಂತಿಯುಕ್ತಗಳಾದ ಆ ಬಾಣಗಳಿಂದ ಆಕಾಶವೆಲ್ಲವೂ ಮಿಂಚುಹುಳುಗಳಿಂದ ತುಂಬಿದಂತೆ ಕಾಣಿಸುತ್ತಿತ್ತು. ಎಡದಿಂದಲೂ, ಬಲದಿಂದಲೂ

ಬಾಣಪ್ರಯೋಗಮಾಡುತ್ತಿರುವ ಆ ವೀರರು, ಕೈಯಲ್ಲಿ ಹಿಡಿದಿರುವ ಚಿನ್ನದ ಬೆನ್ನುಪಟ್ಟಿಗಳುಳ್ಳ ಬಿಲ್ಲುಗಳು, ಮಿಂಚಿನಂತೆ ಹೊಳೆಯುತ್ತಿದ್ದುವು. ರಥಗಳು ರಥಗಳೊಡನೆಯೂ, ಪದಾತಿಗಳು ಪದಾತಿಗಳೊಡನೆಯೂ, ಕುದುರೆಯ ರಾವುತರು ರಾವುತರುಗಳೊಡನೆಯೂ, ಆನೆಗಳು ಆನೆಗಳೊಡನೆಯೂ ಕೈಕಲೆತುವು. ಅಲ್ಲಿದ್ದ ಯೋಧರು ಕತ್ತಿ, ಪಟ್ಟಸ, ಶಕ್ತಿ, ತೋಮರ, ಮೊದಲಾದ ಆಯುಧಗಳಿಂದ ಒಬ್ಬರನ್ನೊಬ್ಬರು ಹೊಡೆಯುತಿದ್ದರು. ದೊಡ್ಡ ಪರಿಘಗಳನ್ನು ಕೈಯಲ್ಲಿ ಹಿಡಿದು ಮಹೋತ್ಸಾಹದಿಂದ ಒಬ್ಬರನ್ನೊಬ್ಬರು ಬಡಿದು ಕೊಲ್ಲುತ್ತಿದ್ದರು. ಇಷ್ಟಾದರೂ ಆ ಯುದ್ಧದಲ್ಲಿ ಒಬ್ಬರಿಗೊಬ್ಬರು ಭಯಪಟ್ಟು ಹಿಂತಿರುಗಿದವರಾರೂ ಇಲ್ಲ. ಆ ರಣರಂಗದಲ್ಲಿ ಕೆಂಪಾದ ತುಟಿಗಳಿಂದಲೂ, ಅಂದವಾದ ಮೂಗಿನಿಂದಲೂ, ತಿದ್ದಿದ ಮಾಸೆಗಳಿಂದಲೂ, ಒಳ್ಳೆಯ ಅಲಂಕಾರಗಳಿಂದಲೂ ಕೂಡಿದ ತಲೆಗಳು ಮುಂಡದಿಂದ ಬೇರೆಯಾಗಿ, ನೆಲದ ದೂಳಿನಿಂದ ಮಾಸಿದ ಕುಂಡಲಗಳೊಡನೆ ಕೆಳಗೆ ಬಿದ್ದಿದ್ದುವು. ಇದಲ್ಲದೆ, ಅಲ್ಲಲ್ಲಿ ರಣಯೋಧರಿಂದ ಕಡಿಯಲ್ಪಟ್ಟ ಕ್ಷತ್ರಿಯ ಶರೀರಗಳೂ ದೊಡ್ಡ ಮರದಕೊಂಬೆಗಳಂತೆ ನೆಲದಮೇಲೆ ನಾನಾ ಕಡೆಗಳಲ್ಲಿ ಬಿದ್ದಿದ್ದುವು. ಸರ್ಪಶರೀರಕ್ಕೆ ಸಮಾನವಾಗಿ, ಚಂದನಾನುಲೇಪಿತಗಳಾದ ತೋಳುಗಳೊಂದು ಕಡೆ! ಕುಂಡಲಸಹಿತಗಳಾದ ತಲೆಗಳೊಂದು ಕಡೆ! ಮುಂಡಗಳೊಂದು ಕಡೆ! ಹೀಗೆ ಶರೀರಾವಯವಗಳೆಲ್ಲವೂ ಆ ರಣರಂಗದ ಎಲ್ಲಾ ಕಡೆಗಳಲ್ಲಿಯೂ ಭಿನ್ನಭಿನ್ನವಾಗಿ ಬಿದ್ದಿದ್ದುವು. ಹೀಗೆ ಸುವರ್ಣಾಲಂಕೃತವಾಗಿ ಬಿದ್ದಿದ್ದ ಶರೀರಾವಯವಗಳಿಂದ, ಆ ರಣಭೂಮಿಯು ಸುವರ್ಣರೇಖೆಗಳಿಂದ ಅಲಂಕೃತವಾದ ಎರಡು ಸೀರೆಗಳನ್ನುಟ್ಟ ಒಬ್ಬ ಯುವತಿಯಂತೆ ಕಾಣುತ್ತಿತ್ತು. ಪ್ರಬಲವಾಗಿ ಎದ್ದಿದ್ದ ರಣಧೂಳಿಯು ಆಗಾಗಲೇ ರಕ್ತದ ಮಳೆಗಳಿಂದ ಅಡಗುತಿತ್ತು. ಆಗ ವಿರಾಟನ ಸೈನ್ಯವೆಲ್ಲ ಮಿತಿಮೀರಿದ ಮೋಹಾವೇಶದಿಂದ ಕೈಕಾಲುಗಳಾಡದಂತೆ ನಿಶ್ಚೇಷ್ಟವಾಯಿತು. ಆಗ ಧರ್ಮಾತ್ಮನಾದ ಯುಧಿಷ್ಠಿರನು ತನ್ನ ಸಹೋದರರೊಡನೆ ಸೇನೆಗಳನ್ನು ವ್ಯೂಹವಾಗಿ ಸಿದ್ಧಪಡಿಸಿಕೊಂಡು, ವಿರಾಟನಿಗೆ ಬೆಂಬಲವಾಗಿ ಯುದ್ಧಕ್ಕೆ ನಿಂತನು. ಧರ್ಮರಾಜನು ತನ್ನ ಸೈನ್ಯವನ್ನು ಒಂದು ಗಿಡುಗನ ಆಕಾರಕ್ಕೆ ನಿಲ್ಲಿಸಿ, ತಾನು ಅದರ ಕೊಕ್ಕಿನ ಸ್ಥಾನಕ್ಕೆ ನಿಂತನು.

ನಕುಲ ಸಹದೇವರು ಎರಡು ರೆಕ್ಕೆಗಳಾದರು. ಬಾಲದ ಕಡೆಗೆ ಭೀಮನು ನಿಂತನು. ಈ ಸೇನಾವ್ಯೂಹದ ಸಹಾಯದಿಂದ ಧರ್ಮರಾಜನು ಸಾವಿರಾರು ಶತ್ರುಸೈನ್ಯವನ್ನು ಕೊಂದನು. ಕ್ರುದ್ಧನಾದ ಭೀಮಸೇನನು ಎರಡುಸಾವಿರ ರಥಿಕರನ್ನು ಕೊಂದನು. ನಕುಲನು ಮುನ್ನೂರು ರಥಿಕರನ್ನೂ, ಸಹದೇವನು ನಾನೂರು ಮಂದಿಯನ್ನೂ ಹೊಡೆದುಕೊಂದನು. ಮಹಾಬಲಿಷ್ಠನಾದ ಶತಾನೀಕನು ನೂರುರಥಿಕರನ್ನೂ, ಮದಿರಾಶ್ವನು ನಾನೂರುಮಂದಿಯನ್ನೂ ಕೊಂದನು. ಬಲಿಷ್ಠರಾದ ಶತಾನೀಕ ಮದಿರಾಶ್ವರಿಬ್ಬರೂ ಉತ್ಸಾಹದಿಂದಿದ್ದ ತ್ರಿಗರ್ತರ ಸೇನೆಯಲ್ಲಿ ಪ್ರವೇಶಿಸಿ, ವೀರಾವೇಶದಿಂದ ಆ ಸೈನ್ಯಗಳನ್ನು ಕೊಲ್ಲುವುದಕ್ಕಾರಂಭಿಸಿದರು. ಒಬ್ಬರಿಗೊಬ್ಬರು ತಲೆಕೂದಲುಗಳನ್ನು ಹಿಡಿದು, ರಥಗಳಮೇಲೆ ರಥಗಳನ್ನು ಬಿಟ್ಟು ಹೋರಾಡಿದರು. ಹೀಗೆ ಶತಾನೀಕ ಮದಿರಾಶ್ವರಿಬ್ಬರೂ ಧೈರ್ಯದಿಂದ ತ್ರಿಗರ್ತರ ಸೈನ್ಯಗಳೊಳಗೆ ಪ್ರವೇಶಿಸಿದುದನ್ನು ಕಂಡು, ಸೂರ್ಯದತ್ತನೂ, ವಲಲನೂ ಅವರನ್ನು ಹಿಂಬಾಲಿಸಿದರು. ಮಹಾಧನುರ್ಧಾರಿಯೂ, ಬಲಶಾಲಿಯೂ ಆದ ವಿರಾಟಪುತ್ರನಾದ ಶಂಖನೂಕೂಡ, ಮುಂದೆ ಬಂದ ಸೂತಪುತ್ರರನ್ನು ಕೊಲ್ಲುತ್ತ ಸೈನ್ಯದೊಳಗೆ ಪ್ರವೇಶಿಸಿದನು. ಮತ್ತೊಂದು ಕಡೆಯಲ್ಲಿ ವಿರಾಟನು ರಥದ ಮೇಲೆ ಕುಳಿತು ನಾನಾಕಡೆಗೆ ತಿರುಗುತ್ತ ಐನೂರು ರಥಗಳನ್ನೂ, ನೂರು ಆನೆಗಳನ್ನೂ, ಸಾವಿರ ಕುದುರೆಗಳನ್ನೂ ಧ್ವಂಸಮಾಡಿದುದಲ್ಲದೆ, ಆಮೇಲೆ ಸುವರ್ಣಮಯವಾದ ರಥದಲ್ಲಿ ಕುಳಿತಿದ್ದ ತ್ರಿಗರ್ತರಾಜನಾದ ಸುಶರ್ಮನನ್ನು ಇದಿರಿಸಿದನು. ಬಲಾಢ್ಯರಾದ ಮತ್ತು ಮಹಾ ಧನುರ್ಧಾರಿಗಳಾದ ಆ ವೀರರಿಬ್ಬರೂ, ದನಗಳ ಮಂದೆಯಲ್ಲಿ ಗೂಳಿಗಳೆರಡು ಹೋರಾಡುವಂತೆ ಒಬ್ಬರನ್ನೊಬ್ಬರು ಇದಿರಿಸಿ ಯುದ್ಧಮಾಡುತ್ತಿದ್ದರು. ಇಬ್ಬರೂ ರಾಜರಲ್ಲಿ ಸಿಂಹದಂತಿರುವರು! ಇಬ್ಬರೂ ಯುದ್ಧೋತ್ಸಾಹವುಳ್ಳವರು! ಇಬ್ಬರೂ ತಮ್ಮ ತಿರಸ್ಕಾರವನ್ನು ಸಹಿಸಲಾರದವರು! ಇಬ್ಬರೂ ಅಸ್ತ್ರವಿದ್ಯೆಯನ್ನು ಕಲಿತವರು! ಇವರಿಬ್ಬರೂ ಕತ್ತಿ, ಕೊಡಲಿ, ಶಕ್ತಿ, ತೀಕ್ಷ್ಣಬಾಣಗಳು ಇವುಗಳನ್ನೆಲ್ಲ ಪ್ರಯೋಗಿಸಿ, ಒಬ್ಬರನ್ನೊಬ್ಬರು ಹೊಡೆಯುತ್ತಿದ್ದರು. ಇಬ್ಬರೂ ರಥಾರೂಢರಾಗಿ ಮೇಘಗಳು ಮಳೆಯನ್ನು ಕರೆಯುವಂತೆ ಬಾಣಗಳನ್ನು ವರ್ಷಿಸುತ್ತಿದ್ದರು. ಆನೆಗಳು ತಮ್ಮ ತೀಕ್ಷ್ಣದಂತಗಳಿಂದ ತಿವಿದಾ

ಡುವಂತೆ ಒಬ್ಬರನ್ನೊಬ್ಬರು ಬಾಣಗಳಿಂದ ನೋಯಿಸುತ್ತಿದ್ದರು. ಹೀಗಿರುವಲ್ಲಿ ವಿರಾಟನು ತನ್ನ ಐದು ತೀಕ್ಷ್ಣಬಾಣಗಳಿಂದ ಸುಶರ್ಮನನ್ನು ಬಲವಾಗಿ ನೋಯಿಸಿದನು. ಬೇರೆ ಐದು ಬಾಣಗಳಿಂದ ಅವನ ಕುದುರೆಯನ್ನೂ, ಇನ್ನೆರಡು ಬಾಣಗಳಿಂದ ಅವನ ಸಾರಥಿಯನ್ನೂ ಹೊಡೆದನು. ಮೂರು ಬಾಣಗಳಿಂದ ಅವನ ಧ್ವಜವನ್ನು ಮುರಿದು ಹಾಕಿದನು. ಆದರೇನು? ಯುದ್ಧದಲ್ಲಿ ಕೊಬ್ಬಿದ ಸುಶರ್ಮನೂಕೂಡ, ಉತ್ತಮಾಸ್ತ್ರಗಳನ್ನು ಬಲ್ಲವನಾದುದರಿಂದ, ಐವತ್ತು ತೀಕ್ಷ್ಣಬಾಣಗಳನ್ನು ವಿರಾಟನಮೇಲೆ ಏಕಕಾಲದಲ್ಲಿ ಪ್ರಯೋಗಿಸಿ, ಬಹಳವಾಗಿ ನೋಯಿಸಿದನು. ಓ ರಾಜೇಂದ್ರಾ! ಆಗ ಸಂಧ್ಯಾಕಾಲದ ಮಬ್ಬು ಕವಿದು, ರಣಧೂಳಿಯು ಆಕಾಶವನ್ನೆಲ್ಲ ಮರೆಸಿ ವ್ಯಾಪಿಸಿದ್ದುದರಿಂದ, ಆ ವಿರಾಟ ಸುಶರ್ಮರ ಸೈನ್ಯಗಳೆರಡೂ ಒಂದನ್ನೊಂದು ನೋಡಲಾರದೆ ಕಳವಳಿಸುತಿದ್ದುವು.

ಇದು ಮೂವತ್ತನಾಲ್ಕನೆಯ ಅಧ್ಯಾಯವು.

ಸುಶರ್ಮನು ಯುದ್ಧದಲ್ಲಿ ವಿರಾಟನನ್ನು ಸೆರೆ ಹಿಡಿದುದು.
ಯುಧಿಷ್ಠಿರನ ಸೂಚನೆಯಮೇಲೆ ಭೀಮನು ವಿರಾಟನನ್ನು ಬಿಡಿಸಿ ಸುಶರ್ಮನನ್ನು ಸೆರೆ ಹಿಡಿದುದು.
ಯುಧಿಷ್ಠಿರನು ಕರುಣೆಯಿಂದ ಸುಶರ್ಮನನ್ನು ಬಿಡಿಸಿ ಕಳುಹಿಸಿದುದು.

ಓ ಜನಮೇಜಯರಾಜನೆ ಕೇಳು! ಹೀಗೆ ಸಾಯಂಕಾಲದ ಮಬ್ಬು ಕವಿದು, ರಣಧೂಳಿಯು ಆಕಾಶವನ್ನೆಲ್ಲ ತುಂಬಿಕೊಂಡಿರಲು, ಒಂದು ಮುಹೂರ್ತಕಾಲದವರೆಗೆ ಆ ಸೈನ್ಯಗಳೆರಡೂ ಯುದ್ಧಕಾರ್ಯವನ್ನು ನಡಿಸಲಾರದೆ ಸುಮ್ಮನಾದುವು. ಇಷ್ಟರಲ್ಲಿಯೇ ಚಂದ್ರೋದಯವಾಗಿ ಕತ್ತಲೆಯು ಸ್ವಲ್ಪ ನೀಗುತ್ತ ಬಂದು, ರಾತ್ರಿಯು ಸ್ವಚ್ಛವಾಯಿತು. ಆ ಬೆಳಕಿನಲ್ಲಿ ಒಬ್ಬರನ್ನೊಬ್ಬರು ನೋಡುವಂತಾಯಿತು. ಆಮೇಲೆ ತಿರುಗಿ ಭಯಂಕರ ಯುದ್ಧವು ಆರಂಭವಾಯಿತು. ಆ ತುಮುಲಯುದ್ಧದಲ್ಲಿ ಎರಡು ಸೈನ್ಯಗಳೂ ಕೋಪಾವೇಶದಿಂದ, ಗದೆ, ಕತ್ತಿ, ಪಟ್ಟಸ, ಕೊಡಲಿ, ಒಳ್ಳೆಯ ತೀಕ್ಷ್ಣ

ವಾದ ಅಲಗುಗಳಿಂದ ಹೊಳೆಯುವ ಪ್ರಾಸಗಳು, ಈ ಮುಂತಾದ ಆಯುಧ
ಗಳನ್ನು ಹಿಡಿದುಒಬ್ಬರಿಗೊಬ್ಬರು ಮೇಲೆ ಬಿದ್ದು, ಹೊಡೆಯುವುದಕ್ಕಾರಂಭಿ
ಸಿದರು. ಇಷ್ಟರಲ್ಲಿ ತ್ರಿಗರ್ತರಾಜನಾದ ಸುಶರ್ಮನು, ತನ್ನ ಬಲದಿಂದ
ವಿರಾಟಸೈನ್ಯವೆಲ್ಲವನ್ನೂ ಬಲವಾಗಿ ನೋಯಿಸಿ ಜಯಹೊಂದಿ ವಿರಾಟ
ನಿಗಿದಿರಾಗಿ ಓಡಿದನು. ಕೊಬ್ಬಿದ ಎರಡು ವೃಷಭಗಳಂತೆಯೂ, ಎರಡು
ಮದದಾನೆಗಳಂತೆಯೂ, ಆನೆಗಳನ್ನು ಹಿಡಿಯತಕ್ಕ ಎರಡು ಸಿಂಹಗಳಂತೆ
ಯೂ, ಇಂದ್ರವೃತ್ರರಂತೆಯೂ, ಅವರಿಬ್ಬರೂ ಯುದ್ಧವನ್ನಾರಂಭಿಸಿದರು.
ಇಬ್ಬರೂ ಸಮಾನಬಲವುಳ್ಳವರು. ಇಬ್ಬರೂ ಸಮಾನವಾದ ಯುದ್ಧೋ
ತ್ಸಾಹವುಳ್ಳವರು. ಇಬ್ಬರೂ ಸಮಾನಪರಾಕ್ರಮವುಳ್ಳವರು. ಇಬ್ಬರೂ
ಸಮಾನವಾದ ಅಸ್ತ್ರಚಾತುರ್ಯವುಳ್ಳವರು. ಇಬ್ಬರೂ ಯುದ್ಧದಲ್ಲಿ ನಿಪು
ಣರು. ಒಬ್ಬರನ್ನೊಬ್ಬರು ಕೋಪದಿಂದಿದಿರಿಸಿ, ಅನ್ಯೋನ್ಯವಾಗಿ ರಥಾಶ್ವ
ಗಳನ್ನೂ, ಸಾರಥಿಗಳನ್ನೂ ಕೊಂದರು. ಇಬ್ಬರೂ ವಿರಥರಾದರು. ಆಗಲೂ
ಬಿಡದೆ ಇಬ್ಬರೂ ಕೃಷ್ಣ ಕಂಸರಂತೆ ಹೆಮ್ಮೆಯಿಂದ ಯುದ್ಧವನ್ನು ನಡೆಸುತ್ತಿ
ದ್ದರು. ಆಮೇಲೆ ಸುಶರ್ಮನು ತನ್ನ ತಮ್ಮನಾದ ಸುವರ್ಮನೊಡನೆ ಕೂಡಿ
ಕೊಂಡು, ಅನೇಕ ರಥಸಮೂಹಗಳೊಡನೆ ನಾನಾಕಡೆಯಿಂದ ಮತ್ಸ್ಯರಾಜ
ನನ್ನು ಬೆನ್ನಟ್ಟಿದನು. ಸ್ವಲ್ಪ ಹೊತ್ತಿನಮೇಲೆ ಆ ಅಣ್ಣತಮ್ಮಂದಿರಿಬ್ಬರೂ
ತಮ್ಮ ರಥಗಳಿಂದ ಕೆಳಕ್ಕೆ ಧುಮುಕಿ, ಗದೆಗಳನ್ನು ಕೈಯಲ್ಲಿ ಹಿಡಿದು ವೇಗ
ದಿಂದ ವಿರಾಟನನ್ನಿದಿರಿಸಿದರು. ಬಲಶಾಲಿಯಾದ ಸುಶರ್ಮನು ಗದಾಮಾತ್ರ
ಸಹಾಯನಾಗಿ ಮುಂದೆ ಹೋಗಿ, ವಿರಥನಾದ ವಿರಾಟನನ್ನು ಜೀವದೊಂದಿಗೆ
ಸೆರೆಹಿಡಿದುಬಿಟ್ಟನು. ಕಾಮುಕನಾದವನು ತಾನು ಮೋಹಿಸಿದ ಯುವ
ತಿಯನ್ನು ಹೇಗೋ ಹಾಗೆ, ಸುಶರ್ಮನು ಮತ್ಸ್ಯರಾಜನನ್ನು ಹಿಡಿದೆಳೆದು,
ತನ್ನ ರಥದಮೇಲೇರಿಸಿಕೊಂಡು, ಹಿಂತಿರುಗಿ ಹೊರಟನು. ವಿರಾಟನು
ಸುಶರ್ಮನ ಕೈಗೆ ಸೆರೆಸಿಕ್ಕಿದುದನ್ನು ನೋಡಿ ಮತ್ಸ್ಯಸೈನ್ಯವೆಲ್ಲವೂ ಉತ್ಸಾ
ಹಭಂಗದಿಂದ ಭಯಪಟ್ಟು ಬೆದರಿಹೋಯಿತು. ತ್ರಿಗರ್ತಸೈನ್ಯಗಳಿಗೆ
ಉತ್ಸಾಹವು ಹೆಚ್ಚಿ, ಮತ್ಸ್ಯರನ್ನು ಸಿಕ್ಕಿದಹಾಗೆ ಹೊಡೆಯುವುದಕ್ಕಾರಂಭಿಸಿ
ದುವು. ಆಗ ಮತ್ಸ್ಯಸೈನ್ಯಗಳು ನಾನಾದಿಕ್ಕುಗಳಿಗೆ ಪಲಾಯನಮಾಡು
ತ್ತಿದ್ದುವು. ವಿರಾಟಸೈನ್ಯವು ಹೀಗೆ ಚದರಿಹೋಗುತ್ತಿರುವುದನ್ನು ಕಂಡು

ಧರ್ಮಾತ್ಮನಾದ ಯುಧಿಷ್ಠಿರನು ಭೀಮಸೇನನನ್ನು ನೋಡಿ, "ಓ ಮಹಾ ಬಾಹೂ! ಅದೋ! ವಿರಾಟನನ್ನು ಸುಶರ್ಮನು ಹಿಡಿದುಬಿಟ್ಟಿರುವನು. ಸುಶರ್ಮನಲ್ಲಿ ಸಿಕ್ಕಿ ಸಂಕಟಕ್ಕೊಳಗಾಗಿರುವ ಮತ್ಸ್ಯರಾಜನನ್ನು ಕಾಪಾಡು. ನಮ್ಮೆಲ್ಲರಿಗೂ ಹಿತವನ್ನುಂಟುಮಾಡಿದ ವಿರಾಟನನ್ನು ಶತ್ರುಗಳ ಸೆರೆಯಿಂದ ಬೇಗನೆ ಬಿಡಿಸು. ಕಳೆದ ಒಂದು ವರ್ಷದಿಂದ ನಾವೆಲ್ಲರೂ ಇವನ ಆಶ್ರಯದಲ್ಲಿ ಸುಖವಾಗಿರುತಿದ್ದೆವು. ಅವನೂ ನಮ್ಮ ಕೋರಿಕೆಗಳನ್ನೆಲ್ಲ ಈಡೇರಿಸಿ ನಮ್ಮನ್ನು ಚೆನ್ನಾಗಿ ಸತ್ಕರಿಸುತಿದ್ದನು. ಓ ಭೀಮಸೇನಾ! ಅಂತವನಿಗೆ ಈಗ ನಾವು ಪ್ರತ್ಯುಪಕಾರವನ್ನು ತೋರಿಸಬೇಕು" ಎಂದನು. ಈ ಮಾತನ್ನು ಕೇಳಿ ಭೀಮನು, ಆ ರಣಮಧ್ಯದಲ್ಲಿಯೇ ಯುಧಿಷ್ಠಿರನನ್ನು ಕುರಿತು "ಎಲೈ ಪೂಜ್ಯನೆ! ನಿನ್ನ ಆಜ್ಞೆಯಂತೆಯೇ ಅವನನ್ನು ನಾನು ರಕ್ಷಿಸುವೆನು. ಯುದ್ಧದಲ್ಲಿ ಈಗ ನಾನು ಶತ್ರುಗಳೊಡನೆ ನಡೆಸುವ ಮಹತ್ತಾದ ಕಾರ್ಯವನ್ನಾದರೂ ನೋಡು. ಬೇರೊಬ್ಬರಿಗೆ ಅಸಾಧ್ಯವಾದ ಕಾರ್ಯವನ್ನು ನನ್ನ ಬಾಹುಬಲದಿಂದ ನಡೆಸುವೆನು. ನೀನು ಸಹೋದರರೊಡನೆ ಏಕಾಂತವಾಗಿ ಇದನ್ನು ನೋಡುತ್ತಿರು. ಇದೋ! ಇತ್ತಲಾಗಿ ಅನೇಕಶಾಖೆಗಳಿಂದ ಕೂಡಿದ ಒಂದು ವೃಕ್ಷವು ಬೆಟ್ಟದಂತೆ ಬೆಳೆದಿರುವುದು ನೋಡು. ಈ ಮರವನ್ನೇ ಕಿತ್ತು ಅದರಿಂದ ಶತ್ರುಗಳನ್ನು ನಾಶಮಾಡುವೆನು," ಎಂದನು. ಓ ಜನಮೇಜಯರಾಜಾ! ಈ ಮಾತುಗಳನ್ನು ಹೇಳಿ, ಆ ಮರದಮೇಲೆ ಕಣ್ಣಿಟ್ಟು ಮದಿಸಿದ ಮಹಾಗಜದಂತೆ ನಿಂತಿರುವ ಭೀಮನನ್ನು ಕುರಿತು ತಿರುಗಿ ಧರ್ಮರಾಜನು "ಭೀಮಾ! ಆ ಸಾಹಸವನ್ನು ಮಾಡಬೇಡ. ಆ ಮರವು ಹಾಗಿರಲಿ. ನೀನು ಆ ವೃಕ್ಷವನ್ನು ಕಿತ್ತು, ಅದನ್ನೇ ಆಯುಧವನ್ನಾಗಿ ಮಾಡಿಕೊಂಡು ನಿನ್ನ ಸಾಹಸವನ್ನು ತೋರಿಸಿದರೆ, ಆ ನಿನ್ನ ಅತಿಮಾನುಷಕೃತ್ಯವನ್ನು ನೋಡಿ ಜನರೆಲ್ಲರೂ ನೀನೇ ಭೀಮನೆಂದು ಕಂಡುಕೊಳ್ಳುವರು. ಆದುದರಿಂದ ಆ ಮರವನ್ನು ಕೀಳಬೇಡ. ನಿನ್ನ ಸಿಂಹಗರ್ಜನೆಯನ್ನೂ ತೋರಿಸಬೇಡ. ನೀನು ಸಿಂಹನಾದವನ್ನು ಮಾಡಿದರೂ ಜನಗಳು ನೀನು ಭೀಮನೆಂದು ತಿಳಿದುಕೊಳ್ಳುವರು. ಈ ಮರವನ್ನು ಕಿತ್ತಾಗಲೇ ನಿನ್ನನ್ನು ಜನರು ಭೀಮನೆಂದು ತಿಳಿದುಬಿಡುವರು. ಬೇರೆ ಯಾವುದಾದರೂ ಆಯುಧಗಳನ್ನು

ಹಿಡಿದುಕೊಂಡು ಹೋಗು. ಧನುರ್ಬಾಣಗಳನ್ನೋ, ಖಡ್ಗವನ್ನೋ, ಶಕ್ತಿಯನ್ನೋ ಹಿಡಿದು ಯುದ್ಧಮಾಡು. ಮನುಷ್ಯರಿಗೆ ಯೋಗ್ಯವಾದ ಯಾವುದಾದರೂ ಆಯುಧವನ್ನು ಹಿಡಿದು, ನಿನ್ನ ರಹಸ್ಯವು ಬೇರೆಯವರಿಗೆ ತಿಳಿಯದಂತೆ ನೀನು ಸೈನ್ಯವನ್ನು ದಿರಿಸಿ ರಾಜನನ್ನು ಬಿಡಿಸು. ಈ ನಕುಲಸಹದೇವರಿಬ್ಬರೂ ವಿರಾಟನನ್ನು ಬಿಡಿಸುವುದಕ್ಕಾಗಿ ರಣರಂಗದಲ್ಲಿ ಹೋಗುವ ನಿನ್ನ ಚಕ್ರರಕ್ಷಕರಾಗಿರುವರು'' ಎಂದನು.

ಎಲೈ ಜನಮೇಜಯರಾಜನೇ! ಕೇಳು! ಯುಧಿಷ್ಠಿರನ ಮಾತನ್ನು ಕೇಳಿ ಭೀಮನು ಆ ಮರವನ್ನು ಕೀಳುವ ಉದ್ದೇಶವನ್ನು ಬಿಟ್ಟನು. ಧನುಸ್ಸನ್ನು ಕೈಗೆತ್ತಿಕೊಂಡನು. ರಥವನ್ನೇರಿ ಮೇಘವು ಮಳೆಯನ್ನು ಕರೆಯುವಂತೆ ತ್ರಿಗರ್ತಸೈನ್ಯದಮೇಲೆ ಬಾಣವರ್ಷಗಳನ್ನು ಕರೆಯುತ್ತ ಸುಶರ್ಮನನ್ನು ಬೆನ್ನಟ್ಟಿದನು. ಭೀಮನು ಸುಶರ್ಮನ ರಥವನ್ನು ಸಮೀಪಿಸಿ, ಆ ರಥದಲ್ಲಿದ್ದ ವಿರಾಟನನ್ನು ನೋಡುತ್ತ, ಸುಶರ್ಮನನ್ನು ಕುರಿತು ''ನಿಲ್ಲು ನಿಲ್ಲೆ''ಂದು ಗಂಭೀರಧ್ವನಿಯಿಂದ ಕೂಗಿದನು. ಈ ಕೂಗನ್ನು ಕೇಳಿದೊಡನೆ ಸುಶರ್ಮನು ಹಿಂತಿರುಗಿ, ಬೆನ್ನಟ್ಟಿಬರುತ್ತಿರುವ ಭೀಮನನ್ನು ನೋಡಿ, ಪ್ರಳಯಕಾಲದ ಯಮನೇ ತನ್ನನ್ನು ಬೆನ್ನಟ್ಟಿಬರುವಂತೆ ತಿಳಿದು ತಬ್ಬಿಬ್ಬಾದನು. ತಮಗೆ ಮಹಾಯುದ್ಧವು ಪ್ರಾಪ್ತವಾಯಿತೆಂದು ತಮ್ಮನಿಗೆ ಎಚ್ಚರಿಸಿ, ಧನುಸ್ಸನ್ನು ಕೈಗೆತ್ತಿಕೊಂಡು ಸಿದ್ಧನಾದನು. ಇದನ್ನು ನೋಡಿ ಭೀಮನೂ ಗದೆಯನ್ನೆತ್ತಿಕೊಂಡು, ಎವೆಯಿಕ್ಕುವಷ್ಟರೊಳಗೆತ್ತಿನಲ್ಲಿ, ಸಾವಿರಾರು ರಥಗಳನ್ನೂ, ಆನೆಗಳನ್ನೂ, ಕುದುರೆಗಳನ್ನೂ, ಬಿಲ್ಲಾಳುಗಳನ್ನೂ, ಪದಾತಿಗಳನ್ನೂ ವಿರಾಟರಾಜನು ನೋಡುತ್ತಿದ್ದಹಾಗೆಯೇ ಬಡಿದುಕೊಂದನು. ತನ್ನ ಚತುರಂಗಸೈನ್ಯವು ಹೀಗೆ ನಾನಾಕಡೆಗಳಲ್ಲಿ ಹತವಾಗುತ್ತಿರುವುದನ್ನೂ, ಭೀಮನ ಯುದ್ಧಾವೇಶವನ್ನೂ ನೋಡಿ ಸುಶರ್ಮನ ಮನಸ್ಸಿಗೆ ಒಂದು ವಿಧವಾದ ಭಯವೂ, ಚಿಂತೆಯೂ ಹುಟ್ಟಿತು. ಅವನು ತನ್ನೊಳಗೆ ತಾನು ''ಆಹಾ! ಯಾರಿವನು? ಮಹಾಬಲವುಳ್ಳ ತನ್ನ ಸೈನ್ಯದ ನಡುವೆ ಇದುವರೆಗೆ ಎಲ್ಲಿಯೂ ಅಡಗಿದ್ದ ಹೊಸಮನುಷ್ಯನೊಬ್ಬನು ಕಾಣಿಸುತ್ತಿರುವನಲ್ಲಾ! ನಮ್ಮ ಸೈನ್ಯದಲ್ಲಿ ಏನಾದರೂ ಉಳಿದಿದೆಯೋ, ಎಲ್ಲ

ವೂ ನಷ್ಟವಾಯಿತೋ'' ಎಂದು ಚಿಂತಿಸುತ್ತ, ತನ್ನ ಬಿಲ್ಲಿಗೆ ಬಾಣವನ್ನು ಸೇರಿಸಿ, ಆಕರ್ಣಾಂತವಾಗಿ ಸೆಳೆದು ಮೇಲೆಮೇಲೆ ತೀಕ್ಷ್ಣಬಾಣಗಳನ್ನು ಬಿಡಲಾರಂಭಿಸಿದನು. ಇದನ್ನು ಕಂಡು ಇತ್ತಲಾಗಿ ಮತ್ಸ್ಯಸೈನಿಕರೆಲ್ಲ ಒಂದಾಗಿ ಕೋಪದಿಂದ, ತಮ್ಮತಮ್ಮ ಕುದುರೆಗಳನ್ನು ಮುಂದೆಬಿಟ್ಟುಕೊಂಡು, ದಿವ್ಯಾಸ್ತ್ರಗಳನ್ನು ತ್ರಿಗರ್ತರಮೇಲೆ ಪ್ರಯೋಗಿಸುತ್ತಾ ಬಂದರು. ತ್ರಿಗರ್ತರು ತಮ್ಮ ರಥಗಳನ್ನೋಡಿಸಿಕೊಂಡು ಬರುವುದನ್ನು ಕಂಡು, ವಿರಾಟಪುತ್ರನಾದ ಶಂಖನು, ಮಹಾಕೋಪದಿಂದ, ಆ ದೊಡ್ಡ ಸೇನೆಯನ್ನಿದಿರಿಸಿ ನಿಂತು ಅತ್ಯಾಶ್ಚರ್ಯಕರವಾಗಿ ಯುದ್ಧಮಾಡಿದನು. ತ್ರಿಗರ್ತರೂಕೂಡ ಹಟದಿಂದ ಸುತ್ತಲೂ ಅವರಿಸಿನಿಂತು ಮತ್ಸ್ಯಸೈನ್ಯವನ್ನು ಹೊಡೆಯಲಾರಂಭಿಸಿದರು. ಇದನ್ನು ನೋಡಿ ಭೀಮಸೇನನಿಗೆ ಮಹತ್ತಾದ ಆಕ್ರೋಶವು ಹುಟ್ಟಿತು. ಕ್ಷಣಮಾತ್ರದಲ್ಲಿ ಎರಡುಸಾವಿರ ರಥಿಕರನ್ನು ಪರಲೋಕಕ್ಕೆ ಕಳುಹಿಸಿಬಿಟ್ಟನು. ಇದೇ ಸಮಯದಲ್ಲಿ ಯುಧಿಷ್ಠಿರನು ಸಾವಿರ ರಥಿಕರನ್ನು ಧ್ವಂಸಮಾಡಿಬಿಟ್ಟನು. ಹಾಗೆಯೇ ನಕುಲ ಸಹದೇವರೂ ಕೂಡ, ಯುಧಿಷ್ಠಿರರಾಜ್ಞೆಯಿಂದ ಮಹತ್ತಾದ ತ್ರಿಗರ್ತಸೈನ್ಯದೊಳಗೆ ಪ್ರವೇಶಿಸಿ, ಸಮಸ್ತ ಭೂತಗಳೂ ಭಯಪಡುವಂತೆ ಬಾಣಗಳನ್ನು ಬಿಡುತ್ತ, ಸಿಂಹವು ಕ್ಷುದ್ರಮೃಗಗಳನ್ನು ಹೇಗೋ ಹಾಗೆ ಶತ್ರುಗಳನ್ನು ಕೊಲ್ಲುತ್ತ ಬಂದರು. ನಕುಲನು ಏಳುನೂರು ವೀರರನ್ನೂ, ಸಹದೇವನು ಮುನ್ನೂರು ಮಂದಿ ವೀರರನ್ನೂ ಕೊಂದನು. ಇಷ್ಟರಲ್ಲಿ ಯುಧಿಷ್ಠಿರನು ಮಹಾವೇಗದಿಂದ ಸುಶರ್ಮನನ್ನು ಬೆನ್ನಟ್ಟಿಬಂದು, ಅವನನ್ನು ಅನೇಕ ಬಾಣಗಳಿಂದ ಪ್ರಹರಿಸಿದನು. ಸುಶರ್ಮನೂ ಮಹಾಕ್ರೋಧದಿಂದ ಯುಧಿಷ್ಠಿರನಿನ್ನಿದಿರಿಸಿ ಅವನನ್ನು ಹತ್ತುಬಾಣಗಳಿಂದಲೂ, ಅವನ ನಾಲ್ಕುಕುದುರೆಗಳನ್ನು ನಾಲ್ಕು ಬಾಣಗಳಿಂದಲೂ ಪ್ರಹರಿಸಿದನು. ಇಷ್ಟರಲ್ಲಿ ಭೀಮನು ವೇಗದಿಂದ ಸುಶರ್ಮನನ್ನು ಸಮೀಪಿಸಿ, ಅವನ ರಥದ ಕುದುರೆಗಳನ್ನು ಕೊಂದು ಕೆಡಹಿದನು. ಅವನ ಬೆಂಗಾಲಿನವರಿಬ್ಬರನ್ನೂ ತನ್ನ ತೀಕ್ಷ್ಣಬಾಣಗಳಿಂದ ಹೊಡೆದು, ಸಾರಥಿಯನ್ನೂ ಕೊಂದು ರಥದಿಂದ ಕೆಳಕ್ಕೆ ಕೆಡಹಿದನು. ತನ್ನ ಸ್ವಾಮಿಯಾದ ಸುಶರ್ಮನು ರಥಹೀನನಾದುದನ್ನು

ನೋಡಿ, ಅವನ ಚಕ್ರರಕ್ಷಕನಾಗಿದ್ದ ಶೋಣಾಶ್ವನೆಂಬವನು, ಅಲ್ಲಿಂದ ರಣ ರಂಗವನ್ನು ಬಿಟ್ಟು ತಲೆತಪ್ಪಿಸಿಕೊಂಡು ಹೋದನು. ಸುಶರ್ಮನ ರಥ ದಲ್ಲಿ ಸೆರೆಯಾಗಿದ್ದ ವಿರಾಟನು ಇದೇ ಸಮಯದಲ್ಲಿ ಮೆಲ್ಲಗೆ ರಥದಿಂದ ಸರಿದು ಸುಶರ್ಮನ ಕೈಲಿದ್ದ ಗದೆಯನ್ನೇ ಕಿತ್ತುಕೊಂಡು ಅದರಿಂದಲೇ ಅವನನ್ನು ಬಡಿದನು. ವಿರಾಟನು ವೃದ್ಧನಾಗಿದ್ದರೂ ಗದೆಯನ್ನು ಕೈಯಲ್ಲಿ ಹಿಡಿದು ಒಳ್ಳೆಯ ತರುಣನಂತೆ ಯುದ್ಧರಂಗದಲ್ಲಿ ಸುತ್ತಾಡುತಿದ್ದನು. ಆಗ ಭಯಂಕರಾಕಾರವುಳ್ಳ ಭೀಮನು, ಯುಧಿಷ್ಠಿರನ ಪೆಟ್ಟಿನಿಂದ ಚೇತರಿಸಿ ಕೊಂಡು ತಿರುಗಿ ಯುದ್ಧಕ್ಕೆ ಸಿದ್ಧನಾಗಿ ನಿಂತ ಸುಶರ್ಮನನ್ನು ನೋಡಿ, ರೋಷಾವಿಷ್ಟನಾಗಿ, ತನ್ನ ರಥದಿಂದ ಒಂದೇ ನೆಗೆತಕ್ಕೆ ಸುಶರ್ಮನ ರಥಕ್ಕೆ ಹಾರಿ, ಸಿಂಹವು ಬೆಟ್ಟದಿಂದ ಹಾರಿ ಕ್ಷುದ್ರಮೃಗವನ್ನು ಹಿಡಿಯುವಂತೆ ಯೂ, ಬೆಕ್ಕು ಕೋಪದಿಂದ ಮೇಲೆಬಿದ್ದು ಇಲಿಯನ್ನು ಹಿಡಿಯುವಂತೆ ಯೂ ಸುಶರ್ಮನ ತಲೆಯನ್ನು ಹಿಡಿದುಕೊಂಡನು. ಅತ್ಯಾಕ್ರೋಶದಿಂದ ಸುಶರ್ಮನನ್ನು ಮೇಲಕ್ಕೆತ್ತಿ ನೆಲದಮೇಲೆ ಕುಕ್ಕಿ, ಚಿನ್ನಾಗಿ ಮರ್ದಿಸಿ, ಅವನ ತಲೆಯಮೇಲೆ ಹೊಡೆದುದಲ್ಲದೆ, ಅವನ ಮೈಮೇಲೆ ತನ್ನ ಮೊಳ ಕಾಲನ್ನೂರಿ ಮುಷ್ಟಿಯಿಂದ ತಿವಿದನು. ಆ ಪೆಟ್ಟನ್ನು ತಡೆಯಲಾರದೆ ಸುಶ ರ್ಮನು ಮೂರ್ಛಿತನಾದನು. ಮಹಾರಥನಾದ ತಮ್ಮ ರಾಜನು ಭೀಮನ ಕೈಗೆ ಸಿಕ್ಕಿಬಿಟ್ಟುದನ್ನು ನೋಡಿ, ತ್ರಿಗರ್ತಸೈನ್ಯಗಳೆಲ್ಲವೂ ಭಯದಿಂದ ಚದರಿ ಪಲಾಯನಮಾಡಿದುವು. ಆಮೇಲೆ ಪಾಂಡುಪುತ್ರರು, ಸುಶರ್ಮನು ಸೆರೆಹಿಡಿದಿದ್ದ ಗೋವುಗಳನ್ನೆಲ್ಲ ಹಿಂತಿರುಗಿಸಿದರು. ಸುಶರ್ಮನನ್ನು ಜಯಿಸಿ, ಸಮಸ್ತ ಧನದೊಡನೆ ಅವನನ್ನು ವಶಮಾಡಿಕೊಂಡು ಧರ್ಮ ರಾಜನಬಳಿಗೆ ಬಂದುನಿಂತರು. ಆ ಪಾಂಡವರಾದರೋ ಅಕಾರ್ಯಕ್ಕೆ ನಾಚುವವರು. ದೃಢವಾದ ವ್ರತವನ್ನು ಹಿಡಿದವರು. ವಿರಾಟನ ಕಷ್ಟ ವನ್ನು ಬಿಡಿಸಿ ಕಾಪಾಡಿದವರು. ಇಂತಹ ಮಹಾತ್ಮರಾದ ಪಾಂಡವರು ಜಯಶೀಲರಾಗಿ ರಾಜನಮುಂದೆ ಬಂದು ನಿಂತಾಗ, ಭೀಮನು ಹೀಗೆಂದು ಹೇಳುವನು. "ಮಹಾರಾಜಾ! ಪಾಪಿಯಾದ ಈ ಸುಶರ್ಮನು ನಮ್ಮಿಂದ ಬದುಕಿಹೋಗುವುದಕ್ಕೆ ಸರ್ವಥಾ ಯೋಗ್ಯನಲ್ಲ. ಯಾವಾಗಲೂ ದಯಾ

ಸ್ವಭಾವವುಳ್ಳವನು. ಈಗ ನಾವು ಮಾಡಬೇಕಾದುದೇನು,'' ಎಂದನು. ಹೀಗೆಂದು ಹೇಳುತ್ತ ಭೀಮನು, ತನ್ನ ಕೈಗೆ ಸಿಕ್ಕಿಬಿದ್ದು ಪರವಶನಾಗಿದ್ದ ಆ ಸುಶರ್ಮನನ್ನು ಹೆಕ್ಕತ್ತಿನಲ್ಲಿ ಹಿಡಿದು ಸೆಳೆತಂದು, ರಾಜನ ಕಾಲ ಮುಂದೆ ಕೆಡಹಿದನು. ಸುಶರ್ಮನಾದರೋ ಆಗ ಮೈಮೇಲೆ ಪ್ರಜ್ಞೆಯಿಲ್ಲದವನಂತೆ ಪ್ರಾಣಸಂಕಟದಿಂದ ದುಡಿಯುತ್ತಿರುವನು. ಮೈಯೆಲ್ಲ ಧೂಳಿನಿಂದ ಮಾಸಿರುವುದು. ಅಂತಹ ಸ್ಥಿತಿಯಲ್ಲಿ ಅವನನ್ನು ಭೀಮನು ಹಿಂಗಟ್ಟುಕಟ್ಟಿ ರಣಮಧ್ಯದಲ್ಲಿದ್ದ ಧರ್ಮರಾಜನ ಮುಂದೆತಂದು ತೋರಿಸಿದಾಗ, ಧರ್ಮರಾಜನು ಆ ಸುಶರ್ಮನ ಕಡೆಗೆ ನೋಡಿ ನಗುತ್ತ ಭೀಮನನ್ನು ಕುರಿತು, ''ಭೀಮಸೇನಾ! ನರಾಧಮನಾದ ಇವನನ್ನು ಬಿಟ್ಟುಬಿಡು,'' ಎಂದನು. ಆಗ ಭೀಮನು ಸುಶರ್ಮನನ್ನು ನೋಡಿ, ''ಎಲೆ ಮೂಢಾ! ಇನ್ನೂ ನಿನಗೆ ಬದುಕಬೇಕೆಂಬ ಇಚ್ಛೆಯಿದ್ದರೆ, ಅದಕ್ಕೆ ಉಪಾಯವನ್ನು ಹೇಳುವೆನು ಕೇಳು. ವೀರರ ಸಮೂಹಗಳಲ್ಲಿಯೂ, ಸಭೆಗಳಲ್ಲಿಯೂ ನೀನು 'ನಾನು ನಿನಗೆ ದಾಸ'ನೆಂದು ಹೇಳಿ, ನನ್ನಲ್ಲಿ ಮನ್ನಣೆಯನ್ನು ಕೇಳಬೇಕು. ಹಾಗೆ ಹೇಳಿದರೆಮಾತ್ರವೇ ನಿನ್ನನ್ನು ಪ್ರಾಣದಿಂದ ಬಿಡುವೆನು. ಯುದ್ಧದಲ್ಲಿ ಜಯವನ್ನು ಪಡೆದವರ ಪದ್ಧತಿಯೇ ಇದು,'' ಎಂದನು. ಆಗ ಯುಧಿಷ್ಠಿರನು ಮೃದುವಾಕ್ಯದಿಂದ ಭೀಮನನ್ನು ಕುರಿತು, ''ವತ್ಸಾ! ನನ್ನ ಮಾತಿನಲ್ಲಿ ನಿನಗೆ ವಿಶ್ವಾಸವಿರುವುದಾದರೆ, ಈ ಅಧಮನನ್ನು ಈಗಲೇ ಬಿಟ್ಟುಬಿಡು. ಬೇಗನೆ ಬಿಟ್ಟುಬಿಡು. ಇವನು ಆ ಮಾತನ್ನು ತನ್ನ ಬಾಯಿಂದ ಹೇಳದಿದ್ದರೂ, ನಮ್ಮ ರಾಜನಾದ ವಿರಾಟನಿಗೆ ಆಗಲೇ ದಾಸನಾಗಿಬಿಟ್ಟನು,'' ಎಂದು ಹೇಳಿ, ಸುಶರ್ಮನ ಕಡೆಗೆ ತಿರುಗಿ ''ಓ ತ್ರಿಗರ್ತಾಧಿಪತೀ! ನಿನ್ನನ್ನು ಬಿಟ್ಟಿರುವೆವು. ಇನ್ನುಮೇಲೆ ಎಂದೆಂದಿಗೂ ಇಂತಹ ಕೆಲಸವನ್ನು ಮಾಡಬೇಡ. ನೀನು ನಮಗೆ ದಾಸನಾಗದಂತೆಯೇ ಮರ್ಯಾದೆಯಿಂದ ಓಡಿಹೋಗು,'' ಎಂದನು. ಧರ್ಮರಾಜನ ಬಾಯಿಯಿಂದ ಹೊರಟ ಈ ಮಾತನ್ನು ಕೇಳಿ ಸುಶರ್ಮನು ಲಜ್ಜೆಯಿಂದ ತಲೆಯನ್ನು ತಗ್ಗಿಸಿ ನಿಂತಿದ್ದನು. ಆಮೇಲೆ, ಸುಶರ್ಮನು ವಿರಾಟನಲ್ಲಿಗೆ ಬಂದು ನಮಸ್ಕರಿಸಿ ಅಲ್ಲಿಂದ ಹೊರಟನು. ಎಲೈ ಜನಮೇಜಯ

ರಾಜನೇ! ಹೀಗೆ ಪಾಂಡವರು ಯುದ್ಧದಲ್ಲಿ ಜಯಹೊಂದಿ, ಆ ರಾತ್ರಿಯೆಲ್ಲ ರಣರಂಗದಲ್ಲಿಯೇ ಸುಖವಾಗಿರುತಿದ್ದರು.

ಇದು ಮೂವತ್ತೈದನೆಯ ಅಧ್ಯಾಯವು.

ಯುಧಿಷ್ಠಿರನ ಪ್ರೇರಣೆಯಿಂದ ವಿರಾಟನ ದೂತರು ನಗರದಲ್ಲಿ ತಮ್ಮ ಜಯವನ್ನು ಸಾರಿದುದು.

ಎಲೈ ಜನಮೇಜಯರಾಜನೆ ಕೇಳು! ಆಮೇಲೆ ವಿರಾಟನು ಅತಿಮಾನುಷಪರಾಕ್ರಮವುಳ್ಳ ಪಾಂಡವರನ್ನು ಧನದಿಂದಲೂ, ಮರ್ಯಾದೆಯಿಂದಲೂ, ಪ್ರಿಯವಾಕ್ಯಗಳಿಂದಲೂ ಮೊದಲಿಗಿಂತಲೂ ಅಧಿಕವಾದ ಸ್ನೇಹಭಾವದಿಂದಲೂ ವಿಶೇಷವಾಗಿ ಸತ್ಕರಿಸಿದನು. ವಿರಾಟನ ಸಂತೋಷಕ್ಕೆ ಮೇರೆಯಿಲ್ಲದಂತಾಯಿತು. ಆಗ ವಿರಾಟನು ಪಾಂಡವರನ್ನು ನೋಡಿ "ಎಲೈ ಮಹಾರಥರೇ! ನನ್ನಲ್ಲಿರುವ ಉತ್ತಮವಸ್ತುಗಳು, ಮತ್ತು ರತ್ನಗಳು ಯಾವುವುಂಟೋ ಅವೆಲ್ಲವೂ ನಿಮ್ಮವುಗಳೇ! ಅವುಗಳನ್ನೆಲ್ಲ ನಿಮಗೆ ಇಷ್ಟ ಬಂದಂತೆ ನಿಮ್ಮ ಸೌಕರ್ಯಾನುಸಾರವಾಗಿ ಉಪಯೋಗಿಸಿಕೊಳ್ಳಬಹುದು. ಒಳ್ಳೆಯ ಅಲಂಕೃತರಾದ ಕನ್ಯೆಯುರನ್ನೂ, ವಿವಿಧ ವಸ್ತುಗಳನ್ನೂ ನಿಮಗೆ ಒಪ್ಪಿಸುವೆನು. ಅಲ್ಲದೆ ನೀವು ಮನಸ್ಸಿನಿಂದ ಕೋರಿದುದನ್ನೆಲ್ಲ ಕೊಡಲು ಸಿದ್ಧನಾಗಿರುವೆನು. ನಿಮ್ಮ ಪರಾಕ್ರಮದಿಂದಲೇ ನಾನು ಶತ್ರುಗಳಿಂದ ಮುಕ್ತನಾಗಿ, ಈಗ ಇಲ್ಲಿಗೆ ಕ್ಷೇಮದಿಂದ ಬರುವಂತಾಯಿತು. ಆದುದರಿಂದ ಈಗ ನೀವೇ ಮತ್ಸ್ಯದೇಶಗಳಿಗೆಲ್ಲ ಅಧಿಪತಿಗಳು," ಎಂದನು. ಹೀಗೆ ಹೇಳಿದ ವಿರಾಟನ ಮಾತನ್ನು ಕೇಳಿ ಯುಧಿಷ್ಠಿರನೇ ಮೊದಲಾದ ಐದು ಮಂದಿ ಪಾಂಡವರೂ ವಿರಾಟನ ಗುಣಕ್ಕೆ ಮೆಚ್ಚಿ, ಸಂತೋಷದಿಂದ ಒಬ್ಬೊಬ್ಬರೂ ಬೇರೆಯಾಗಿ ಅವನನ್ನು ಕುರಿತು ಹೀಗೆಂದು ಹೇಳುವರು. "ಓ ರಾಜಾ! ನಿನ್ನ ಮಾತನ್ನು ನಾವು ಸರ್ವವಿಧದಿಂದಲೂ ಅಭಿನಂದಿಸುವೆವು. ನಿಮ್ಮಿಂದ ನಾವೇನೂ ಅಪೇಕ್ಷಿಸುವವರಲ್ಲ. ನೀನು ಶತ್ರುಗಳಿಂದ ಬಿಡುಗಡೆಹೊಂದಿ ಬಂದುದೊಂದೇ ನಮಗೆ ಎಲ್ಲಕ್ಕಿಂತಲೂ ಪ್ರಿಯವಾದುದು.

ನಮಗೆ ಹಿತಕರವಾದ ಕಾರ್ಯವೆಲ್ಲವೂ ಅದೇ! ನಮಗೆ ನಿನ್ನಿಂದಾಗಬೇಕಾದ ಬೇರೆ ಕಾರ್ಯವೇನೂ ಇಲ್ಲ. ನಿನ್ನಿಂದ ಧನವನ್ನೂ ನಾವು ಅಪೇಕ್ಷಿಸುವವರಲ್ಲ'' ಎಂದರು. ಇದನ್ನು ಕೇಳಿ ಸಂತುಷ್ಟನಾದ ಮತ್ಸ್ಯರಾಜನು, ಧರ್ಮರಾಜನನ್ನು ನೋಡಿ ಸಂತೋಷಾತಿಶಯದಿಂದುಂಟಾದ ಗದ್ಗದಸ್ವರದೊಡನೆ ತಿರುಗಿ ಹೀಗೆಂದು ಹೆಳುವನು. ''ಓ ಪರಂತಪಾ! ಅವಶ್ಯವಾಗಿ ನೀನು ಬರಬೇಕು. ನಿನಗೆ ಪಟ್ಟಾಭಿಷೇಕವನ್ನು ಮಾಡಿಸುವೆನು. ಇನ್ನು ಮೇಲೆ ನೀನೇ ನಮ್ಮ ಮತ್ಸ್ಯದೇಶಕ್ಕೆಲ್ಲಾ ರಾಜನು. ನಿನ್ನ ಮನಸ್ಸಿನಲ್ಲಿ ಬೇರೆ ಕೋರಿಕೆಯೇನಿದ್ದರೂ ಅದನ್ನು ತಿಳಿಸು. ಅದನ್ನು ನಡೆಸಿಕೊಡಲು ಸಿದ್ಧನಾಗಿರುವೆನು. ನಮ್ಮ ಸರ್ವಸ್ವಕ್ಕೂ ನೀನು ಸ್ವಾಮಿಯಾಗಿರುವೆ. ವ್ಯಾಘ್ರಪಾದ ಗೋತ್ರದಲ್ಲಿ ಹುಟ್ಟಿದ ಓ ಬ್ರಾಹ್ಮಣೋತ್ತಮನೇ! ರತ್ನಗಳನ್ನಾಗಲಿ, ಗೋವುಗಳನ್ನಾಗಲಿ, ಸ್ವರ್ಣವನ್ನಾಗಲಿ ಮುತ್ತುಗಳನ್ನಾಗಲಿ ಯಾವುದನ್ನು ಕೋರಿದರೂ ಕೊಡುವೆನು. ಸರ್ವಥಾ ನಿನಗೆ ವಂದನವು. ಈ ನನ್ನ ರಾಜ್ಯವೂ, ಈ ನನ್ನ ಜೀವವೂ ನಿಮ್ಮದೆಂದೇ ನಾನು ಭಾವಿಸಿರುವೆನು. ನಮಗೆ ಯಾವನು ಮನಸ್ಸಿಗೆ ಕಳವಳವನ್ನು ತಂದಿಟ್ಟನೋ, ಅಂತಹ ಶತ್ರುವು ನಿಮ್ಮಿಂದ ನಮಗೆ ಕೈವಶನಾದನು'' ಎಂದನು. ಇದನ್ನು ಕೇಳಿ ತಿರುಗಿ ಧರ್ಮರಾಜನು ''ಎಲೈ ಮತ್ಸ್ಯರಾಜನೆ! ನಿನ್ನ ಪ್ರಿಯವಾಕ್ಯದಿಂದ ಸಂತುಷ್ಟನಾದೆನು. ನೀನು ಯಾವಾಗಲೂ ಮೃದುಸ್ವಭಾವವುಳ್ಳವನು. ಮತ್ತು ಪ್ರಸನ್ನಮುಖವುಳ್ಳವನು. ಈ ಸುಸ್ವಭಾವಕ್ಕಾಗಿ ನಾನು ಸಂತೋಷಿಸುವೆನು'' ಎಂದನು. ಆಗ ವಿರಾಟನು ತಿರುಗಿ ಕಂಕನನ್ನು ನೋಡಿ ''ಓ ವಿಪ್ರೋತ್ತಮಾ! ಶೂದ್ರನಾದ ಆ ವಲಲನು ಯುದ್ಧದಲ್ಲಿ ನಡೆಸಿದ ಕಾರ್ಯವು ಅತ್ಯಾಶ್ಚರ್ಯವನ್ನುಂಟುಮಾಡುವುದು. ಆ ಶೂದ್ರನೇ ನನ್ನನ್ನು ಯುದ್ಧದಲ್ಲಿ ಕಾಪಾಡಿದವನು. ಇವೆಲ್ಲಕ್ಕೂ ಮುಖ್ಯ ಕಾರಣಭೂತನು ನೀನು! ಆದುದರಿಂದ ನಿನಗೆ ಬೇಕಾದುದನ್ನು ಕೇಳು. ನಿನಗೆ ಮಂಗಳವಾಗಲಿ. ನನ್ನಿಂದ ನಿನಗೆ ಆಗಬೇಕಾದುದೇನು ತಿಳಿಸು. ಉತ್ಕೃಷ್ಟವಾದ ರತ್ನಗಳನ್ನಾಗಲಿ, ಶಯನಗಳನ್ನಾಗಲಿ, ಆಸನಗಳನ್ನಾಗಲಿ, ವಾಹನಗಳನ್ನಾಗಲಿ, ಒಳ್ಳೆಯ ಅಲಂಕೃತರಾದ ಕನ್ಯೆಯರನ್ನಾಗಲಿ, ಆನೆಕುದುರೆಗಳನ್ನಾಗಲಿ, ರಥಗಳನ್ನಾಗಲಿ, ಅನೇಕ ರಾಷ್ಟ್ರಗಳನ್ನಾಗಲಿ ನನ್ನ ಮನಃ

ಪ್ರೀತಿಯಿಂದ ನಿಮಗೆ ಒಪ್ಪಿಸುವೆನು. ನನ್ನಲ್ಲಿ ಅಭಿಮಾನವಿಟ್ಟು ಇನ್ನೆಲ್ಲ ವನ್ನೂ ನೀನು ಅಂಗೀಕರಿಸಬೇಕು'' ಎಂದನು. ಇದನ್ನು ಕೇಳಿ ತಿರುಗಿ ಯುಧಿಷ್ಠಿರನು ''ಓ ಪರಂತಪಾ! ನಾನು ಮೊದಲೇ ಹೇಳಿದೆನಲ್ಲವೆ! ನೀನು ಶತ್ರುಗಳ ಕೈಯಿಂದ ತಪ್ಪಿಬಂದುದೇ ನನಗೆ ಎಲ್ಲಕ್ಕಿಂತಲೂ ಪ್ರಿಯವು. ಇನ್ನು ನೀನು ಸಂತೋಷದಿಂದ ಪುರಕ್ಕೆ ಹೋಗಿ ಪತ್ನೀಪುತ್ರರೊಡನೆ ಸುಖವಾಗಿರಬೇಕು. ಇದೇ ನನಗೆ ಎಣೆಯಿಲ್ಲದ ಪ್ರೀತಿಯನ್ನುಂಟುಮಾಡುವುದು. ನಿನ್ನಿಂದ ವರವನ್ನು ಕೇಳಬೇಕೆಂದು ನಿರ್ಬಂಧಿಸುವೆಯಲ್ಲವೆ! ಈ ಸುಶರ್ಮನನ್ನು ನಿರ್ಬಂಧಿಸದೆ ಅವನ ಸೈನ್ಯ ವಾಹನ ಪರಿವಾರಗಳೊಡನೆ ಇಲ್ಲಿಂದ ಅವನ ಪಟ್ಟಣಕ್ಕೆ ಕಳುಹಿಸಿಕೊಡು. ಇದೇ ನಾನು ನಿನ್ನಲ್ಲಿ ಕೇಳಬೇಕಾದ ವರವು'' ಎಂದನು. ಇದನ್ನು ಕೇಳಿ ವಿರಾಟನು ''ಎಲೈ ವಿಪ್ರೋತ್ತಮನೆ! ಆ ಸುಶರ್ಮನು ತನ್ನ ಇಷ್ಟವಿದ್ದಂತೆ ಹೋಗಲು ನನ್ನ ಅಡ್ಡಿಯಿಲ್ಲ'' ಎಂದನು. ಆಮೇಲೆ ಕಂಕನು ವಿರಾಟನನ್ನು ಕುರಿತು ''ಓ ರಾಜಾ! ಇಗಲೇ ನಿನ್ನ ದೂತರನ್ನು ನಿನ್ನ ನಗರಕ್ಕೆ ಕಳುಹಿಸು. ಅವರು ನಾವು ಜಯಿಸಿದ ವೃತ್ತಾಂತವನ್ನು ನಿನ್ನ ಆಪ್ತಮಿತ್ರರಿಗೆಲ್ಲ ತಿಳಿಸಲಿ. ಊರಿನಲ್ಲೆಲ್ಲ ನಮ್ಮ ಜಯವನ್ನು ಉದ್ಘೋಷಿಸಲಿ'' ಎಂದನು. ಆಗ ವಿರಾಟನು ದೂತರನ್ನು ಕರೆಸಿ, ''ಎಲೈ ದೂತರೇ! ಈಗಲೇ ನೀವು ಪಟ್ಟಣಕ್ಕೆ ಹೋಗಿ, ನಮಗೆ ಯುದ್ಧದಲ್ಲಿ ಜಯವುಂಟಾದುದನ್ನು ತಿಳಿಸಿರಿ. ನಾವು ಇಲ್ಲಿಂದ ಬರುವಷ್ಟರಲ್ಲಿ ಒಳ್ಳೇ ಅಲಂಕೃತರಾದ ಕನ್ಯೆಯರೂ, ವೇಶ್ಯೆಯರೂ, ಸಮಸ್ತ ವಾದ್ಯಗಳೂ, ಪುರಜನರೂ ನಮ್ಮನ್ನು ಇದಿರುಗೊಳ್ಳುವುದಕ್ಕೆ ಬರಲಿ,'' ಎಂದನು. ಒಡನೆಯೇ ವೇಗಶಾಲಿಗಳಾದ ಕೆಲವು ದೂತರು ಆ ರಾತ್ರಿಯೇ ಹೊರಟು, ಒಂದೇ ಪ್ರಯಾಣವಾಗಿ ದಾರಿನಡೆದು, ಸೂರ್ಯೋದಯದ ಹೊತ್ತಿಗೆ ನಗರಪ್ರವೇಶವನ್ನು ಮಾಡಿದರು. ಅಲ್ಲಿ ವಿರಾಟನ ವಿಜಯ ವೃತ್ತಾಂತವನ್ನು ಜನರೆಲ್ಲರಿಗೂ ತಿಳಿಸಿ, ಅನೇಕ ಧ್ವಜಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ ಆ ಪಟ್ಟಣವನ್ನು ಅಲಂಕರಿಸಿ, ಭೂಮಿಯಲ್ಲಿ ಎಣೆಯಿಲ್ಲದ ಶೋಭಾತಿಶಯದಿಂದ ಪ್ರಕಾಶಿಸುವಂತೆ ಮಾಡಿದರು.

ಇದು ಮೂವತ್ತಾರನೆಯ ಅಧ್ಯಾಯವು.

ದುರ್ಯೋಧನನು ಭೀಷ್ಮಾದಿಗಳೊಡನೆ ವಿರಾಟನಗರದ ಉತ್ತರ ಭಾಗಕ್ಕೆ ಬಂದು, ಅಲ್ಲಿ ಗೋವುಗಳನ್ನು ಹಿಡಿದುಕೊಳ್ಳಲು, ಹಸುಗಳನ್ನು ಕಾಯುತಿದ್ದ ಗೋಪಾಲನೊಬ್ಬನು, ವಿರಾಟಪುತ್ರನಾದ ಉತ್ತರನ ಬಳಿಗೆ ಬಂದು ಆ ವೃತ್ತಾಂತವನ್ನು ತಿಳಿಸಿ ಮೊರೆ ಯಿಟ್ಟುದು.

ಓ ಜನಮೇಜಯರಾಜಾ ಕೇಳು! ಅತ್ತಲಾಗಿ ತ್ರಿಗರ್ತಸೇನೆಗಳಿಂದ ಪಶುಗಳನ್ನು ಬಿಡಿಸಿಕೊಳ್ಳುವುದಕ್ಕಾಗಿ ವಿರಾಟನು ತನ್ನ ಸೈನ್ಯಗಳೊಡನೆ ಪುರದ ದಕ್ಷಿಣದಿಕ್ಕಿಗೆ ಹೋದನೆಂಬೀ ಮೇಲೆ, ದುರ್ಯೋಧನನು ವಿರಾಟನಗರವನ್ನು ಮುತ್ತುವುದಕ್ಕಾಗಿ ತನ್ನ ಮಂತ್ರಿಗಳೊಡನೆ ಉತ್ತರಭಾಗದಿಂದ ದಂಡೆತ್ತಿಬಂದನು. ಆ ದುರ್ಯೋಧನನೊಡನೆ, ಭೀಷ್ಮದ್ರೋಣರೂ, ಕರ್ಣನೂ, ಕೃಪನೂ, ಅಶ್ವತ್ಥಾಮನೂ, ಶಕುನಿಯೂ, ದುರ್ಯೋಧನನ ತಮ್ಮಂದಿರಾದ ದುಶ್ಶಾಸನಾದಿಗಳೂ, ಶಲ್ಯ, ವಿವಿಂಶತಿ, ವಿಕರ್ಣ, ಚಿತ್ರಸೇನ, ದುಸ್ಸಹ, ದುರ್ಮುಖ ಮೊದಲಾಗಿ ಇನ್ನೂ ಅನೇಕಮಹಾರಥರೂ ತಮ್ಮತಮ್ಮ ಸೇನಾಸಮೇತರಾಗಿ ಹೊರಟರು. ಇವರೆಲ್ಲರೂ ಒಂದಾಗಿ ಸೇರಿ ಮತ್ಸ್ಯದೇಶಕ್ಕೆ ಬಂದು, ಹಸುಗಳನ್ನು ಕಾಯುತಿದ್ದ ಗೊಲ್ಲರನ್ನು ಹೊಡೆದೋಡಿಸಿ ವಿರಾಟನ ಗೋಧನವನ್ನೆಲ್ಲ ಸೆರೆಹಿಡಿದರು. ಹೀಗೆ ಕೌರವರು ವಿರಾಟರಾಜನ ಲಕ್ಷಾಧಿಕ ಗೋವುಗಳನ್ನು ತಡೆದು ನಿಲ್ಲಿಸಿ, ಸುತ್ತಲೂ ರಥಸಮೂಹಗಳಿಂದ ಆವರಿಸಿಕೊಂಡು, ಗೋಪಾಲಕರನ್ನು ಸಿಕ್ಕಿದ ಕಡೆಗಳಲ್ಲಿ ಹೊಡೆದಟ್ಟುತಿದ್ದರು. ಭಯಂಕರವಾದ ಈ ಹೊಡೆದಾಟದಲ್ಲಿ, ಮಹಾರಥರಿಂದ ಪೆಟ್ಟುತಿಂದ ಗೊಲ್ಲರ ಆಕ್ರಂದನವು ನಾನಾಕಡೆಗಳಿಂದ ಪ್ರಬಲವಾಗಿ ಕೇಳಬಂದಿತು. ಆ ಗೊಲ್ಲರಿಗೆಲ್ಲಾ ಯಜಮಾನನಾಗಿದ್ದವನು, ಈ ಆಕ್ರಂದನವನ್ನು ಕೇಳಿ ಭಯಪಟ್ಟು, ಒಡನೆಯೇ ಒಂದು ರಥವನ್ನೇರಿ ಅತಿವೇಗದಿಂದ ಪಟ್ಟಣಕ್ಕೆ ಹೊರಟನು. ದೈನ್ಯದಿಂದ ಮೊರೆಯಿಡುತ್ತಾ ರಾಜಧಾನಿಗೆ ಬಂದು, ಅರಮನೆಯ ಬಾಗಿಲಲ್ಲಿ ಬಂಡಿಯಿಂದಿಳಿದು, ರಾಜನಿಗೆ ತಿಳಿಸುವುದಕ್ಕಾಗಿ ಒಳಗೆ ಪ್ರವೇಶಿಸುವಾಗ, ನಡುದಾರಿಯಲ್ಲಿಯೇ ವಿರಾಟನ ಮಗನಾದ ಭೂಮಿಂಜಯನೆಂಬವನನ್ನು ಕಂಡನು. ಈ ಭೂಮಿಂಜಯನೆಂಬವನು ಸ್ವಭಾ

ವದಲ್ಲಿಯೇ ಆತ್ಮಾಭಿಮಾನವುಳ್ಳವನು. ಅವನನ್ನು ಕಂಡೊಡನೆ ಗೊಲ್ಲರ ಯಜಮಾನನು ನಡೆದ ಸಂಗತಿಯನ್ನೆಲ್ಲ ತಿಳಿಸಿ, "ಓ ರಾಜಕುಮಾರಾ! ಕೌರವರು ಬಂದು ನಮ್ಮ ಲಕ್ಷಾಧಿಕಗೋವುಗಳನ್ನೆಲ್ಲ ಹಿಡಿದುಕೊಂಡು ಹೋಗುತ್ತಿರುವರು. ಏಳು! ಬೇಗನೆ ಹೊರಡು! ನಮ್ಮ ಗೋವುಗಳನ್ನು ಬಿಡಿಸಿಕೊಂಡು ಬರುವ ಪ್ರಯತ್ನವನ್ನು ಮಾಡು! ವಿಳಂಬಮಾಡದೆ ನೀನೇ ಬೇಗನೆ ಹೊರಟು ಬಾ! ನಿನಲ್ಲವೇ ಇನ್ನುಮೇಲೆ ಈ ನಮ್ಮ ರಾಷ್ಟ್ರಕ್ಕೆ ಮೇಲ್ಮೆಯನ್ನು ತರತಕ್ಕವನು! ಮಹಾರಾಜನು ತಾನಿಲ್ಲದ ವೇಳೆಯಲ್ಲಿ ನಿನ್ನನ್ನಲ್ಲವೇ ಈ ರಾಜ್ಯರಕ್ಷಣೆಗಾಗಿ ನಿಯಮಿಸಿಹೋದನು? ರಾಜನು ಸಭಾಜನರ ಮುಂದೆ ಯಾವಾಗಲೂ ನಿನ್ನ ಪೌರುಷವನ್ನು ಕುರಿತು ಬಹಳವಾಗಿ ಹೊಗಳುತ್ತಲೂ ಇರುವನು. ನೀನೇ ತನಗೆ ಅನುರೂಪನಾದ ಪುತ್ರನೆಂದೂ, ಮಹಾಶೂರನೆಂದೂ, ಕುಲೋದ್ಧಾರಕನೆಂದೂ, ಬಾಣ ಪ್ರಯೋಗಗಳಲ್ಲಿಯೂ, ಮಂತ್ರಾಸ್ತ್ರಗಳಲ್ಲಿಯೂ ನಿಪುಣನೆಂದೂ ಎಲ್ಲರ ಮುಂದೆ ಹೇಳಿಕೊಳ್ಳುತ್ತಿರುವನು. ಅಲ್ಲದೆ ನಿನ್ನ ತಂದೆಯು ಆಗಾಗ ಸಭೆಯಲ್ಲಿ "ನನ್ನ ಮಗನು ಯುದ್ಧದಲ್ಲಿ ಬಹಳ ಸಮರ್ಥನಾದ ವೀರನು. ಅಂತಹ ಕೌರವರೊಡನೆಯೂ ಯುದ್ಧಮಾಡಬಲ್ಲವನು" ಎಂದು ಕೂಡ ಹೇಳಿರುವನು. ಆದುದರಿಂದ, ಆ ರಾಜನ ಮಾತನ್ನು ಸುಳ್ಳಾಗಿಸದೆ ಸತ್ಯವನ್ನಾಗಿ ಮಾಡು. ನಿನ್ನ ತಂದೆಯು ಹೇಳಿದ ಮಾತನ್ನು ನೋಡಿದರೆ, ನಿನಗೆ ಯುದ್ಧದಲ್ಲಿ ಜಯವು ನಿಶ್ಚಯವು. ನೀನು ಹೋದರೆ ನಿಶ್ಚಯವಾಗಿ ಕೌರವರು ಹತರಾದಂತೆಯೇ! ಇದರಲ್ಲಿ ಸಂದೇಹವಿಲ್ಲ. ಇನ್ನು ಹೊರಡು. ಪಶುಪತಿಯಾದ ರುದ್ರನಂತೆ ಕೌರವರನ್ನು ಜಯಿಸಿ, ಗೋವುಗಳನ್ನು ಹಿಂತಿರುಗಿಸಿಕೊಂಡು ಬಾ! ಓ ರಾಜಕುಮಾರಾ! ಆ ಕೌರವರ ಸೈನ್ಯವನ್ನು ನಿನ್ನ ಬಾಣಾಗ್ನಿಯಿಂದ ದಹಿಸು! ನೀನು ಆನೆಯ ಸಲಗನಂತೆ ಮುಂದೆಬಿದ್ದು ಹೋಗಿ, ಬಗ್ಗಿದ ಗಿಣ್ಣುಗಳಿಂದಲೂ, ಚಿನ್ನದ ಹಿಡಿಗಳಿಂದಲೂ ಕೂಡಿದ ನಿನ್ನ ವಿಚಿತ್ರಬಾಣಗಳಿಂದ ಆ ಶತ್ರುಸೈನ್ಯವನ್ನು ಛಿನ್ನಭಿನ್ನವಾಗಿ ಮಾಡು. ನಾಣಿನ ತುದಿಗಳೆಂಬ ಬಿರಡೆಗಳಿಂದಲೂ, ಮೌರ್ವಿ (ಹೆದೆ) ಯೆಂಬ ತಂತಿಯಿಂದಲೂ, ಚಾಪದಂಡವೆಂಬ ದಂಡದಿಂದಲೂ, ಬಾಣಗಳೆಂಬ ಸ್ವರಸ್ಥಾನಗಳಿಂದಲೂ ಶೋಭಿತವಾಗಿ, ಮಹಾ

ಧ್ವನಿಯನ್ನು ಕೊಡುತ್ತಿರುವ ನಿನ್ನ ಬಿಲ್ಲಿಂಬ ವೀಣೆಯನ್ನು ಶತ್ರುಗಳ ಮಧ್ಯದಲ್ಲಿ ಬಾಜಿಸು. ಓ ಯುವರಾಜಾ! ಏಳು! ಬೇಗನೆ ಏಳು! ಇನ್ನೂ ಏಕೆ ಕುಳಿತಿರುವೆ? ನಗರವನ್ನು ಬಿಟ್ಟು ಹೊರಡು! ಸುವರ್ಣಾಲಂಕೃತಗಳಾದ ಬಿಳೀ ಕುದುರೆಗಳನ್ನು ನಿನ್ನ ರಥಕ್ಕೆ ಕಟ್ಟುವಂತೆ ನಿಯಮಿಸು! ಸುವರ್ಣಾಲಂಕೃತವಾದ ನಿನ್ನ ಸಿಂಹಧ್ವಜವು ರಥದಮೇಲೆ ಎತ್ತಿ ಕಟ್ಟಲ್ಪಡಲಿ! ಒಳ್ಳೇ ಹಸ್ತಲಾಘವವುಳ್ಳ ನೀನು ಪ್ರಯೋಗಿಸಿದ ಚಿನ್ನದ ಹಿಡಿಗಳುಳ್ಳ ಮತ್ತು ಶತ್ರುರಾಜರ ಆಯುಸ್ಸನ್ನು ನೀಗಿಸತಕ್ಕ ತೀಕ್ಷ್ಣಬಾಣಗಳು, ಸೂರ್ಯನನ್ನೇ ಮರೆಸುವಂತೆ ರಣರಂಗದಲ್ಲಿ ವ್ಯಾಪಿಸಲಿ! ವಜ್ರಪಾಣಿಯಾದ ಇಂದ್ರನು ದೈತ್ಯರನ್ನು ಹೇಗೋ ಹಾಗೆ, ನೀನು ಯುದ್ಧದಲ್ಲಿ ಎಲ್ಲಾ ಕೌರವರನ್ನೂ ಜಯಿಸಿ, ಅಪಾರವಾದ ಕೀರ್ತಿಯನ್ನು ಪಡೆದು, ತಿರುಗಿ ಪುರಪ್ರವೇಶವನ್ನು ಮಾಡು. ಈ ರಾಷ್ಟ್ರಕ್ಕೆ ಮುಂದೆ ನೀನಲ್ಲವೇ ದಿಕ್ಕು? ನಮ್ಮ ದೇಶವಾಸಿಗಳಾದ ಜನರೆಲ್ಲರೂ ನಿನ್ನಿಂದ ಈಗಲೇ ಸನಾಥರಾಗಲಿ! ಜಯಶಾಲಿಗಳಲ್ಲಿ ಮೇಲೆನಿಸಿದ ಅರ್ಜುನನು ಪಾಂಡವರಿಗೆ ಹೇಗೋ ಹಾಗೆ, ನಮ್ಮ ದೇಶವಾಸಿಗಳಿಗೆಲ್ಲ ನೀನೇ ಮುಖ್ಯಗತಿಯೆಂಬುದು ನಿಶ್ಚಯವು" ಎಂದರು. ಇದು ಮೂವತ್ತೇಳನೆಯ ಅಧ್ಯಾಯವು.

ರಣಭೀರುವಾದ ಉತ್ತರನು, ತನಗೆ ಸರಿಯಾದ ಸಾರಥಿಯಿಲ್ಲದೆ ಯುದ್ಧಕ್ಕೆ ಹೋಗಲು ಅಡ್ಡಿಯಾಗಿದೆಯೆಂದು ನೆವವನ್ನು ಹೇಳಲು, ದ್ರೌಪದಿಯು ಅರ್ಜುನನ ಸಂಜ್ಞೆಯಮೇಲೆ, ಬೃಹನ್ನಳೆಯು ಸಾರಥ್ಯದಲ್ಲಿ ನಿಪುಣೆಯೆಂದು ಸೂಚಿಸಿದುದು. ತಂಗಿಯಾದ ಉತ್ತರೆಯಮೂಲಕ ವಾಗಿ ಉತ್ತರನು ಬೃಹನ್ನಳೆಯನ್ನು ಸಾರಥ್ಯಕ್ಕೆ ನಿಯಮಿಸಿಕೊಂಡುದು.

ಗೊಲ್ಲನು ಬಂದು ಉತ್ತರನಿಗೆ ಗೋಗ್ರಹಣವೃತ್ತಾಂತವನ್ನು ತಿಳಿಸಿದಾಗ, ಅಲ್ಲಿ ಅನೇಕ ಮಹಾಜನರೂ, ವಿಶೇಷವಾಗಿ ಅಂತಃಪುರಸ್ತ್ರೀಯರೂ

ನೆರೆದಿದ್ದರು. ಆ ಗುಂಪಿನಲ್ಲಿ ಎಲ್ಲರೂ ಕೇಳುವಂತೆ ಗೋಪಾಲನು ಬಂದು ಯುದ್ಧಕ್ಕೆ ಹೊರಡಬೇಕೆಂದು ಉತ್ತರನನ್ನು ನಿರ್ಬಂಧಿಸಿದಾಗ, ರಾಜಕು ಮಾರನಿಗೆ ಅದನ್ನು ನಿರಾಕರಿಸಲು ಸಾಧ್ಯವಿಲ್ಲದೆ ತೊಡಕಿನಲ್ಲಿ ಸಿಕ್ಕಿಬಿ ದ್ದಂತಾಯಿತು. ಆಗ ಉತ್ತರನು ಅಂತಃಪುರಮಧ್ಯದಲ್ಲಿ ತನ್ನ ಹೆಮ್ಮೆ ಯನ್ನು ತೋರ್ಪಡಿಸಿಕೊಳ್ಳುತ್ತ, ಆ ಗೊಲ್ಲನನ್ನು ಕುರಿತು ಹೀಗೆಂದು ಹೇಳು ವನು. "ಆಹಾ! ಈಗೇನುಮಾಡಲಿ! ಕುದುರೆಗಳನ್ನು ನಡೆಸುವುದರಲ್ಲಿ ಒಳ್ಳೇ ನಿಪುಣನಾದ ಸಾರಥಿಯೊಬ್ಬನುಮಾತ್ರ ಈಗ ನನಗೆ ಇದ್ದಿದ್ದರೆ, ನಾನು ಈ ಕ್ಷಣವೇ ನನ್ನ ದೃಢಧನುಸ್ಸನ್ನು ಹಿಡಿದು ನಮ್ಮ ಗೋವುಗ ಳನ್ನು ಬಿಡಿಸುವುದಕ್ಕಾಗಿ ಬೆನ್ನಟ್ಟಿ ಹೋಗುತಿದ್ದೆನು. ನನಗೆ ಅನುರೂಪ ನಾದ ಸಾರಥಿ ಯಾವನೆಂದೇ ತೋರಲಿಲ್ಲ. ಈಗಲೇ ನೀವು ಎಲ್ಲಿಯಾ ದರೂ ನನಗೆ ತಕ್ಕಂತೆ ನಿಪುಣನಾದ ಸಾರಥಿಯೊಬ್ಬನನ್ನು ನೋಡಿರಿ. ಇದ ಕ್ಕೆವೊದಲು ಸ್ವಲ್ಪ ಹೆಚ್ಚುಕಡಿಮೆಯಾಗಿ ಇಪ್ಪತ್ತೆಂಟು ದಿನಗಳೋ, ಕೊನೆಗೆ ಒಂದು ತಿಂಗಳ ಕಾಲವೋ ಎಡೆಬಿಡದೆ ನಡೆದ ಮಹಾಯುದ್ಧವಾ ನುದುಂಟೋ, ಅದರಲ್ಲಿ ನಮ್ಮ ಸಾರಥಿಯು ಕೊಲ್ಲಲ್ಪಟ್ಟನು. ನಾನೇನೋ ಯುದ್ಧಕ್ಕೆ ಸಿದ್ಧನಾಗಿಯೇ ಇರುವೆನು. ನಾನು ಯುದ್ಧಕ್ಕೆ ಹೊರಟುಬಿ ಟ್ಟರೆ ನನಗೆ ಸಾರಥ್ಯಮಾಡುವನಾವನು? ನಿಪುಣನಾದ ಸಾರಥಿಯು ಮಾತ್ರ ನನಗೆ ದೊರೆತಪಕ್ಷದಲ್ಲಿ, ನನ್ನ ಸಿಹ್ಮಧ್ವಜವನ್ನು ರಥದಮೇಲೇರಿಸಿ, ಈಗಲೇ ರಣರಂಗಕ್ಕೆ ಹೋಗುವೆನು. ಆನೆಗಳಿಂದಲೂ, ಕುದುರೆಗ ಳಿಂದಲೂ, ರಥಗಳಿಂದಲೂ ತುಂಬಿದ ಶತ್ರುಸೈನ್ಯವನ್ನು ಪ್ರವೇಶಿಸಿ, ನನ್ನ ಶಸ್ತ್ರಪ್ರತಾಪದಿಂದ ಕೌರವರೆಲ್ಲರನ್ನೂ ನಿರ್ವೀರ್ಯರನ್ನಾಗಿ ಮಾಡಿ, ನಮ್ಮ ಪಶುಗಳನ್ನು ಹಿಂದಕ್ಕೆ ತರುವೆನು. ಆ ದುರ್ಯೋಧನನನ್ನೂ, ಭೀಷ್ಮ ನನ್ನೂ, ಸೂರ್ಯಪುತ್ರನಾದ ಕರ್ಣನನ್ನೂ, ಕೃಪನನ್ನೂ, ಪುತ್ರಸಹಿತ ನಾದ ದ್ರೋಣನನ್ನೂ, ಇನ್ನೂ ಶತ್ರುಸೈನ್ಯದಲ್ಲಿ ಕಲೆತಿರುವ ಮಹಾಧನು ರ್ಧಾರಿಗಳನ್ನೂ ಇಂದ್ರನು ದಾನವರನ್ನು ಹೇಗೋ ಹಾಗೆ ಯುದ್ಧರಂಗ ದಿಂದ ಓಡಿಸಿ, ಈ ಮುಹೂರ್ತದಲ್ಲಿಯೇ ನಮ್ಮ ಗೋವುಗಳನ್ನು ಹಿಂತಿರುಗಿ ಸುವೆನು. ಆ ಕೌರವರು ನಮ್ಮ ಗೋಧನಕ್ಕೆ ಯಾರೂ ರಕ್ಷಕರಿಲ್ಲವೆಂದು ತಿಳಿದೇ ಅವುಗಳನ್ನು ಹಿಡಿದುಕೊಂಡು ಹೋಗುತ್ತಿರುವರು. ಅಲ್ಲಿ ನನ್ನಂತ

ವನು ಇಲ್ಲದಿದ್ದಾಗ ಅವರು ಏನನ್ನು ತಾನೇ ಮಾಡದಿರುವರು? ಆದರೇನು? ಇರಲಿ! ಯುದ್ಧಕ್ಕೆ ಸೇರಿರುವ ಕುರುಗಳೆಲ್ಲರೂ ನನ್ನ ಪರಾಕ್ರಮವನ್ನು ಈಗಲೇ ನೋಡುವರು. ಆ ಕೌರವರು ನನ್ನನ್ನು ಕುಂತೀಪುತ್ರನಾದ ಆ ಅರ್ಜುನನೆಂದು ತಿಳಿದರೇನು?" ಎಂದು ಆರ್ಭಟಿಸಿದನು.

ಓ ಜನಮೇಜಯರಾಜಾ! ಹೆಂಗಸರ ಗುಂಪಿನಲ್ಲಿ ಆತ್ಮಸ್ತುತಿರೂಪವಾದ ಈ ಮಾತುಗಳನ್ನು ಕೇಳಿ, ಅಲ್ಲಿದ್ದ ದ್ರೌಪದಿಯು ಸಹಿಸಲಾರದೆ ಹೋದಳು. ಅದರಲ್ಲಿಯೂ ವಿರಾಟಪುತ್ರನು ಅರ್ಜುನನ ಹೆಸರನ್ನೆತ್ತಿದುದು ಅವಳಿಗೆ ಸಹಿಸದಂತಾಯಿತು. ಅಂತಃಪುರದಲ್ಲಿ ನಾಟ್ಯಾಚಾರ್ಯನಾಗಿದ್ದ ಅರ್ಜುನನಿಗೂಕೂಡ ಉತ್ತರನ ವೀರವಾದಗಳು ಕಿವಿಗೆ ಬಿದ್ದುವು. ಆ ಸಮಯವು ಕಳೆದು ಸ್ವಲ್ಪ ಹೊತ್ತಿನಮೇಲೆ, ಅರ್ಜುನನು ತನಗೆ ಪ್ರಿಯಪತ್ನಿಯಾಗಿಯೂ, ಸತ್ಯಋಜುತ್ವಾದಿಗುಣಗಳಿಂದ ಕೂಡಿದವಳಾಗಿಯೂ, ತನಗೆ ಹಿತೈಷಿಣಿಯಾಗಿಯೂ ಇರುವ ದ್ರುಪದಪುತ್ರಿಯನ್ನು ಏಕಾಂತದಲ್ಲಿ ಕರೆದು ಹೀಗೆಂದು ಹೇಳುವನು. "ಎಲೆ ಪಾಂಚಾಲಿ! ಓ ಶುಚಿಸ್ಮಿತೆ! ರಾಜಕುಮಾರಿಯಾದ ಉತ್ತರೆಯೊಡನೆ ನೀನು, ನನ್ನನ್ನು ನಿರ್ದೇಶಿಸಿ, "ಈ ಬೃಹನ್ನಳೆಯು ಪೂರ್ವದಲ್ಲಿ ಸವ್ಯಸಾಚಿಯೆನಿಸಿದ ಅರ್ಜುನನಿಗೆ ಖಾಂಡವವನಸಂಬಂಧವಾಗಿ ಇಂದ್ರನೊಡನೆ ಯುದ್ಧವು ಸಂಭವಿದಾಗ ಸಾರಥಿಯಾಗಿದ್ದಳು. ಅವಳನ್ನು ಸಾರಥಿಯಾಗಿಟ್ಟುಕೊಂಡರೆ, ನಿನ್ನಣ್ಣನಿಗೆ ದೊಡ್ಡ ಜಯವುಂಟಾಗುವುದು" ಎಂದು ಹೇಳು" ಎಂದನು. ಅರ್ಜುನನಿಂದ ಪ್ರೇರಿಸಲ್ಪಟ್ಟ ಪಾಂಚಾಲಿಯು, ಒಡನೆಯೇ ಉತ್ತರೆಯ ಮನೆಗೆ ಬಂದಳು. ಆಗ ದ್ರೌಪದಿಗೆ, ಸತ್ಯಧರ್ಮಪರಾಯಣನೂ, ಯಾವಾಗಲೂ ಋಜುಮಾರ್ಗದಲ್ಲಿಯೇ ನಡೆಯತಕ್ಕವನೂ ಆದ ತನ್ನ ಪತಿ ಧರ್ಮರಾಜನು, ರಾಹುವಿನಿಂದ ಬಿಡಲ್ಪಟ್ಟ ಚಂದ್ರನಂತೆ, ಅಜ್ಞಾತವಾಸನಿಯಮದಿಂದ ಮುಕ್ತನಾದನೆಂದು ಮನಸ್ಸಿಗೆ ತಿಳಿಯಿತು. ಇದುವರೆಗೆ ತನ್ನ ಪತಿಗಳು ಅನುಭವಿಸಿದ ಕಷ್ಟವನ್ನು ನೆನೆಸಿಕೊಂಡು, ಸಹಿಸಲಾರದೆ, ಸಖಿಯರನಡುವೆ ವಿಲಾಸದಿಂದ ಕುಳಿತಿದ್ದ ಉತ್ತರೆಯನ್ನು ಕಂಡು ಹೀಗೆಂದು ಹೇಳುವಳು.

"ರಾಜಪುತ್ರೀ! ಆಕಾರದಲ್ಲಿ ಆನೆಯ ಸಲಗದಂತೆ ಕಾಣುತ್ತ, ಒಳ್ಳೇ ಯೌವನವಯಸ್ಕನಾಗಿ, 'ತಾನು ಬೃಹನ್ನಳೆ'ಯೆಂದು ಹೇಳಿಕೊಂಡು

ನಮ್ಮ ಅಂತಃಪುರದಲ್ಲಿ ಸೇರಿರುವವಳು ಯಾವಳುಂಟೋ, ಅವಳೇ ಪೂರ್ವದಲ್ಲಿ ಮಹಾಧನುರ್ಧಾರಿಗಳಲ್ಲಿ ಮೇಲೆನಿಸಿದ ಅರ್ಜುನನಿಗೆ ಸಾರಥಿಯಾಗಿದ್ದಳೆಂದು ತೋರುತ್ತಿದೆ. ಈ ಸಾರಥಿಯ ಬಲದಿಂದಲೇ ವೀರ್ಯಶಾಲಿಯಾದ ಅರ್ಜುನನು, ಹಿಂದೆ ಖಾಂಡವವನ ದಹನ ಕಾಲದಲ್ಲಿ, ದೇವದಾನವ ಗಂಧರ್ವ ಪನ್ನಗರೊಡನೆ ತನಗಿದಿರಾದ ಸಮಸ್ತ ಭೂತಗಳನ್ನೂ ಜಯಿಸಿ, ಅಗ್ನಿದೇವನಿಗೆ ತೃಪ್ತಿಯನ್ನುಂಟುಮಾಡಿದನು. ಆಗಿನ ಯುದ್ಧದಲ್ಲಿ ಇವನ ರೀತಿಯನ್ನೂ, ಮತ್ತು ಶತ್ರುಸೈನ್ಯಮಧ್ಯದಲ್ಲಿ ಅವನ ವೀರ್ಯವೆಂತದೆಂಬುದನ್ನೂ ನಾನು ಚೆನ್ನಾಗಿ ಬಲ್ಲೆನು. ಅರ್ಜುನಸಾರಥಿಯಾಗಿದ್ದ ಆ ಬೃಹನ್ನಳೆಯು, ಆಗಿನ ಯುದ್ಧರಂಗದಲ್ಲಿ ರಥದಮೇಲೆ ಕುಳಿತು, ಕುದುರೆಗಳ ಹಗ್ಗವನ್ನು ಮಾತ್ರವಲ್ಲದೆ, ತಾನೇ ಬಿಲ್ಲನ್ನೂ ಹಿಡಿದು ಯುದ್ಧಕಾರ್ಯಕ್ಕೆ ಸಿದ್ಧಳಾದಳು. ಆದುದರಿಂದ ಎಲೆ ರಾಜಕುಮಾರೀ! ಆ ಬೃಹನ್ನಳೆಯನ್ನು ನಿನ್ನ ಅಣ್ಣನಾದ ಉತ್ತರನ ಸಾರಥ್ಯಕ್ಕಾಗಿ ಕರೆದುಕೊಂಡು ಹೋದರೆ ಅವನನ್ನು ಸಮಸ್ತಭೂತಗಳಾಗಲಿ, ದೇವದಾನವರುಗಳಾಗಲಿ, ಧನುರ್ಧಾರಿಗಳಾದ ಎಲ್ಲಾ ಕುರುಗಳೂ ಒಂದಾಗಿ ಸೇರಿಯಾಗಲಿ ಇದಿರಿಸಿ ನಿಲ್ಲಲಾರರು. ಅವರು ಗೋಧನವನ್ನು ಎಂದಿಗೂ ದಕ್ಕಿಸಿಕೊಂಡು ಹೋಗಲಾರರೆಂದು ತಿಳಿ! ಈ ಬೃಹನ್ನಳೆಯೆಂಬವಳು ಮಹಾತ್ಮನಾದ ಅರ್ಜುನನಿಗೆ ಧನುರ್ವಿದ್ಯೆಯಲ್ಲಿ ಉತ್ತಮಶಿಷ್ಯೆಯಾಗಿದ್ದಳೆಂಬುದನ್ನೂ ಕೂಡ, ನಾನು ಹಿಂದೆ ಪಾಂಡವರ ಅರಮನೆಯಲ್ಲಿದ್ದಾಗ ಚೆನ್ನಾಗಿ ತಿಳಿದುಬಲ್ಲೆನು. ಆ ಅರ್ಜುನನಾದರೂ ಮುಖ್ಯವಾಗಿ ಇವಳ ಸಹಾಯದಿಂದಲೇ ಖಾಂಡವವನವನ್ನು ಅಗ್ನಿಗೆ ಆಹುತಿಯಾಗಿಸಲು ಶಕ್ತನಾದನೆಂದು ಹೇಳಬಹುದು. ಮತ್ತು ಪಾರ್ಥನು ಇವಳ ಸಾರಥ್ಯಬಲದಿಂದಲೇ ಇಂದ್ರಪ್ರಸ್ಥದಲ್ಲಿದ್ದಾಗಲೂ, ಯಾವಾಗಲೂ ಎಲ್ಲಾಕಡೆಯೂ, ಎಲ್ಲಾ ಶತ್ರುಗಳನ್ನೂ ಜಯಿಸಬಲ್ಲವನಾದನು. ಅಂತಹ ಸಾರಥಿಯು ಬೇರೆ ಯಾವನೂ ಇಲ್ಲ'' ಎಂದಳು. ಆಮೇಲೆ ಉತ್ತರೆಯು ಸೈರಂಧ್ರಿಯೊಡನೆಯೇ ಉತ್ತರನ ಬಳಿಗೆ ಬಂದು, ''ಅಣ್ಣಾ! ಈಗಲೇ ನೀನು ಈ ಬೃಹನ್ನಳೆಯನ್ನು ಸಾರಥ್ಯಕ್ಕಾಗಿ ಪ್ರಾರ್ಥಿಸು. ಇವಳು ಗಾನವಾದ್ಯಗಳಲ್ಲಿಯೂ ನರ್ತನದಲ್ಲಿಯೂ ಹೇಗೋ ಹಾಗೆ ಸಾರಥ್ಯದಲ್ಲಿಯೂ ಒಳ್ಳೇ ಸುಶಿಕ್ಷಿತಳಾಗಿರುವಳಂತೆ. ಮಹಾ ಪ್ರಾಜ್ಞ

ಳಾದ ಸೈರಂಧ್ರಿಯೇ ಬೃಹನ್ನಳೆಯನ್ನು ಬಹಳವಾಗಿ ಶ್ಲಾಘಿಸಿ ಈ ರಹಸ್ಯವನ್ನು ನನಗೆ ತಿಳಿಸಿದಳು'' ಎಂದಳು. ಈ ಮಾತನ್ನು ಕೇಳಿ ಉತ್ತರನು ''ಸೈರಂಧ್ರೀ! ನನ್ನ ವ್ರತವೆಂತದೆಂಬುದನ್ನು ತಿಳಿದೇ ಇರುವೆಯಷ್ಟೆ? ನಾನು ನಪುಂಸಕರೊಡನೆ ಸಂಭಾಷಣೆ ಮಾಡತಕ್ಕವನಲ್ಲ. ಇದು ನನ್ನ ನಿಯಮವು. ಆದುದರಿಂದ, ನಾನಾಗಿ ಅವಳಿಗೆ ಕುದುರೆಗಳನ್ನು ನಡೆಸು'' ಎಂದು ಹೇಳಲಾರೆನು, ಇದಕ್ಕೇನು ಮಾಡಲಿ'' ಎಂದನು. ಆದಕ್ಕಾ ಸೈರಂಧ್ರಿಯು ''ರಾಜಕುಮಾರಾ! ಭಯಕಾಲವು ಬಂದಿರುವಾಗ ವ್ರತವಾವುದು? ಅವ್ರತವಾವುದು? ಅಂತಹ ಕಾಲದಲ್ಲಿ ಪ್ರಾಜ್ಞನಾದವನು ತನ್ನ ವಿಪತ್ತನ್ನು ದಾಟುವುದಕ್ಕಾಗಿ ಸಮಯವು ಬಂದಂತೆ ಹೇಗೋ ಪ್ರಯತ್ನಿಸಬೇಕೆಂದು ಧರ್ಮಜ್ಞರು ಹೇಳುವರು. ಆದುದರಿಂದ ನೀನೇ ಬೃಹನ್ನಳೆಯನ್ನು ಕರೆಸಿ ಕೇಳು. ನಿನ್ನ ತಂಗಿಯಾದ ಉತ್ತರೆಯು ಮೂಲಕವಾಗಿ ಹೇಳಿಕಳುಹಿಸಿದರೆ, ಅವಳ ಮಾತನ್ನು ಬೃಹನ್ನಳೆಯು ತಪ್ಪದೆ ನಡೆಸುವಳು. ಇದರಲ್ಲಿ ಸಂದೇಹವಿಲ್ಲ. ಆ ಬೃಹನ್ನಳೆಯು ಮಾತ್ರ ನಿನಗೆ ಸಾರಥಿಯಾದರೆ, ನೀನು ಕುರುಗಳನ್ನೆಲ್ಲ ಜಯಿಸಿ, ಗೋವುಗಳನ್ನು ಹಿಂತಿರುಗಿಸಿಕೊಂಡು ಬರುವುದರಲ್ಲಿ ಸಂದೇಹವೇ ಇಲ್ಲ,'' ಎಂದಳು.

ಓ ಜನಮೇಜಯರಾಜಾ! ಸೈರಂಧ್ರಿಯ ಮಾತನ್ನು ಕೇಳಿ ಉತ್ತರನು ತನ್ನ ತಂಗಿಯನ್ನು ಕುರಿತು ''ವತ್ಸೇ! ನೀನು ಹೋಗಿ ಬೃಹನ್ನಳೆಯನ್ನು ಇಲ್ಲಿಗೆ ಕರೆದುಕೊಂಡು ಬಾ'' ಎಂದನು. ಒಡನೆಯೇ ಯಶಸ್ವಿನಿಯಾದ ಉತ್ತರೆಯು, ಅಣ್ಣನಾಜ್ಞೆಯಂತೆ, ಬೃಹನ್ನಳೆಯ ಸಮೀಪಕ್ಕೆ ಅತುರದಿಂದ ಓಡಿದಳು. ಉತ್ತರೆಯು ಅಲ್ಲಿಂದ ಹೊರಟಾಗ, ಅವಳ ನಡೆಯ ಸೊಬಗನ್ನು ಕೇಳಬೇಕೆ? ಕಂಠದಲ್ಲಿ ಸುವರ್ಣಮಾಲಿಕೆಯು ತೂಗಾಡುತ್ತಿರುವುದು. ಅಂದವಾದ ಹುಬ್ಬು! ಮುಖದಲ್ಲಿ ಮಂಗಳಸೂಚಕವಾದ ಪ್ರಸನ್ನತೆ! ದೇಹದಲ್ಲಿ ವಜ್ರಖಚಿತಗಳಾದ ಸುವರ್ಣಾಭರಣಗಳು ಥಳಥಳಿಸುತ್ತಿರುವುವು. ಕಿವಿಗಳಲ್ಲಿ ಮುತ್ತು ವಜ್ರಗಳಿಂದ ಕೆತ್ತಲ್ಪಟ್ಟ ಸುವರ್ಣಕುಂಡಲಗಳು ಝಗಝಗಿಸುತ್ತಿರುವುವು. ಮೃದುವಾದ ನಡೆ! ಮೈಯಲ್ಲಿ ಪ್ರದಕ್ಷಿಣಾಕಾರವಾಗಿ ಉತ್ತಮಲಕ್ಷಣ ಸೂಚಕಗಳಾದ ಸುಳಿಗಳು! ಅಲಂಕಾ

ರಾರ್ಥವಾಗಿ ಒಂದು ನವಿಲುಗರಿಯನ್ನು ತುರುಬಿಗೆ ಸಿಕ್ಕಿಸಿರುವಳು. ಕಮಲದಂತಿರುವ ಮುಖದಿಂದಲೂ, ತಾವರೆಯೆಸಳಿನಂತಿರುವ ವಿಶಾಲವಾದ ಕಣ್ಣುಗಳಿಂದಲೂ, ತೆಳುವಾದ ನೈಯಿಂದಲೂ, ಸಮವಾದ ಅವಯವಸನ್ನಿವೇಶದಿಂದಲೂ, ಪ್ರಸನ್ನಗಂಭೀರವಾದ ನೋಟದಿಂದಲೂ, ಅಪೂರ್ವವಿಲಾಸದಿಂದಲೂ ಒಪ್ಪುತ್ತಿರುವಳು. ಇಂತಹ ನಿರತಿಶಯ ಸೌಂದರ್ಯದಿಂದ ಶೋಭಿಸುತ್ತಿರುವ ಮತ್ಸ್ಯರಾಜಕುಮಾರಿಯು, ಮಿಂಚನ್ನು ಹೋಲುವ ಮೇಘದಂತೆ ನರ್ತನಾಗಾರಕ್ಕೆ ಬಂದಳು. ಬಾಗಿದೆವೆಗಳಿಂದಲೂ, ಆನೆಯ ಸುಂಡಿಲಂತೆ ದುಂಡಗೆ ಅಂದವಾದ ತೊಡೆಗಳಿಂದಲೂ, ವೇದಿಕೆಯನ್ನು ಹೋಲುವ ಮಧ್ಯಭಾಗದಿಂದಲೂ, ಯಾವ ವಿಧದಲ್ಲಿಯೂ ದೋಷವಿಲ್ಲದ ಅವಯವದಿಂದಲೂ ಶೋಭಿಸುತ್ತ, ಉತ್ತಮ ಮಾಲಿಕೆಯನ್ನು ಧರಿಸಿದ ಆ ಶೋಭನಾಂಗಿಯು, ನಾಟ್ಯಶಾಲೆಯೊಳಗೆ ಪ್ರವೇಶಿಸಿ, ಒಂದು ಹೆಣ್ಣಾನೆಯು ಆನೆಯ ಸಲಗನ ಒಳಗೆ ಬಂದು ನಿಂತಹಾಗೆ ಅರ್ಜುನನ ಸಮೀಪಕ್ಕೆ ಬಂದು ನಿಂತಳು. ಆಗ ಅರ್ಜುನನು ತನ್ನ ಸಮೀಪದಲ್ಲಿ ಬಂದು ನಿಂತ ವಿಶಾಲಾಕ್ಷಿಯಾದ ಆ ಉತ್ತರೆಯನ್ನು ನೋಡಿ, "ಎಲೆ ಸುಂದರಾಂಗಿ! ನೀನು ಬಂದ ಕಾರಣವೇನು? ಎಲೆ ಸುಭ್ರು! ಇದೇನು? ಏನೋ ಆತುರದಿಂದ ಬಂದವಳಂತೆ ಕಾಣುವೆ? ನಿನ್ನ ಮುಖದಲ್ಲಿ ಏನೋ ಒಂದು ಕಳವಳವು ತೋರುತ್ತಿದೆ. ಸಂಗತಿಯೇನು? ಬೇಗನೆ ಹೇಳು" ಎಂದನು. ವಜ್ರವೈಡೂರ್ಯಾದಿರತ್ನಖಚಿತವಾದ ಕುಂಡಲಗಳಿಂದ ಶೋಭಿತೆಯೂ, ಪದ್ಮಗಂಧಿನಿಯೂ ಆದ, ಆ ಚಂದ್ರಮುಖಿಯು ಅರ್ಜುನನನ್ನು ಕುರಿತು, "ಎಲೆ ಬೃಹನ್ನಳೆ! ಕೌರವರು ನನ್ನ ತಂದೆಯ ಸಮಸ್ತ ಧನವನ್ನೂ, ಸಾವಿರಾರು ಗೋವುಗಳನ್ನೂ ಕೊಳ್ಳೆಹೊಡೆದುಕೊಂಡು ಹೋಗುತ್ತಿರುವರು. ಆಗಲೇ ಬಹುದೂರಕ್ಕೆ ಹೋಗಿಬಿಟ್ಟರು. ನೀನು ರಥಾಶ್ವಗಳನ್ನು ನಡೆಸುವುದರಲ್ಲಿ ಒಳ್ಳೇ ನೈಪುಣ್ಯವುಳ್ಳವನೆಂದು ಸೈರಂಧ್ರಿಯು ಹೇಳುತ್ತಿರುವಳು. ಈಗ ನೀನು ನಮ್ಮಣ್ಣನಿಗೆ ಸಾರಥಿಯಾಗಿದ್ದು ಸಹಾಯ ಮಾಡಬೇಕು. ನೀನುಮಾತ್ರ ಈ ಸಮಯದಲ್ಲಿ ಸಹಾಯಮಾಡದಿದ್ದರೆ, ನಾವು ಪ್ರಾಣವನ್ನೇ ಬಿಡಬೇಕಾಗಿ ಬರುವುದರಲ್ಲಿ ಸಂದೇಹವಿಲ್ಲ," ಎಂದಳು. ಉತ್ತರೆಯು ಹೇಳಿದ ಈ ಮಾತನ್ನು ಕೇಳಿ, ದಯಾಶೀಲನೂ, ಪುರುಷ

ಶ್ರೇಷ್ಠನೂ ಆದ ಧನಂಜಯನು, ಉತ್ತರೆಯನ್ನು ನೋಡಿ "ಎಲೆ ಶುಚಿಸ್ಮಿತೆ! ನೀನು ಕೋರಿದಂತೆಯೇ ನಡೆಸುವೆನು. ನೀನು ಹೇಳಿದ ಸ್ಥಳಕ್ಕೆ ಹೋಗಲು ನಾನು ಸಿದ್ಧನಾಗಿರುವೆನು. ಅಷ್ಟೇಕೆ? ಉರಿಯುವ ಬೆಂಕಿಯಲ್ಲಿ ಪ್ರವೇಶಿಸಬೇಕೆಂದು ನೀನು ಹೇಳಿದರೂ, ಅದಕ್ಕೂ ನಾನು ಸಿದ್ಧನಾಗಿರುವೆನು. ಎಲೆ ಸುಂದರಿ! ಈಗ ನಾನು ಮಾಡಬೇಕಾದುದೇನು? ಹೇಳು. ನನ್ನ ವಿಷಯದಲ್ಲಿ ನೀನು ಸಂದೇಹಪಟ್ಟು ಆತ್ಮಹತ್ಯೆಯನ್ನು ಮಾಡಿಕೊಂಡು ಯಮಪುರಿಗೆ ಹೋಗಬೇಕಾದಷ್ಟು ಕಷ್ಟವೇಕೆ?" ಎಂದು ಸಮಾಧಾನವಾಕ್ಯವನ್ನು ಹೇಳಿದನು. ಅರ್ಜುನನು ಉತ್ತರೆಗೆ ಇಷ್ಟುಮಾತ್ರವನ್ನು ಹೇಳಿ, ಆಗಲೇ ಅಲ್ಲಿಂದ ಉತ್ತರನಬಳಿಗೆ ಹೊರಟನು. ಅರ್ಜುನನು ಹೊರಟುಬರುವಾಗ ಅವನ ಬೆಡಗನ್ನು ಕೇಳಬೇಕೆ? ಬೃಹನ್ನಳೆಯೆಂಬ ಹೆಸರಿಗೂ, ನಪುಂಸಕವೇಷಕ್ಕೂ ತಕ್ಕಂತೆ ಮೈಮೇಲೆ ಆಭರಣಗಳು! ಮುಖದಲ್ಲಿ ದಿವ್ಯವಾದ ಕಳೆ! ಆನೆಯ ಸಲಗನಂತೆ ತೋರುವ ಗಂಭೀರಾಕೃತಿ! ಆನೆಯ ಸುಂಡಿಲಂತೆ ದುಂಡಗೆ ನೀಡಿದ ತೋಳುಗಳು! ಕಮಲದಳದಂತೆ ವಿಶಾಲವಾದ ಕಣ್ಣುಗಳು! ಕವಾಟದಂತೆ ವಿಸ್ತಾರವಾದ ಎದೆ! ಉಬ್ಬಿದ ಹೆಗಲು! ಇಂತಹ ವೀರಯೋಗ್ಯವಾದ ರಾಜಲಕ್ಷಣಗಳಿಂದೊಪ್ಪುತ್ತ, ಆನೆಯಂತೆ ಗಂಭೀರವಾಗಿ ತನ್ನ ಕಡೆಗೆ ನಡೆದುಬರುತ್ತಿದ್ದ ಮಹಾಬಲಾಢ್ಯನಾದ ಅರ್ಜುನನ್ನು ಕಂಡೊಡನೆ ಉತ್ತರನು, ಅತ್ಯಾದರದಿಂದ ಅವನನ್ನು ಸಮೀಪಕ್ಕೆ ಕರೆದು, ಮಾತಾಡಿಸತೊಡಗಿದನು. ಗಂಡಾನೆಯನ್ನು ಹಿಂಬಾಲಿಸಿ ಬರುವ ಹೆಣ್ಣಾನೆಯಂತೆ ಮತ್ತಗಜದಂತೆ ನಡೆದುಬರುತ್ತಿದ್ದ ಆ ಅರ್ಜುನನನ್ನು, ವಿಶಾಲಾಕ್ಷಿಯಾದ ಉತ್ತರೆಯೂ ಹಿಂಬಾಲಿಸಿಬರುತಿದ್ದಳು. ರಾಜಪುತ್ರನಾದ ಉತ್ತರನು, ಅರ್ಜುನನನ್ನು ದೂರದಿಂದ ಕಂಡಾಗಲೇ ಆತುರದಿಂದ "ಓ ಬೃಹನ್ನಳೇ! ನಿನ್ನನ್ನು ಸಾರಥಿಯಾಗಿಟ್ಟುಕೊಂಡೇ ಹಿಂದೆ ಅರ್ಜುನನು ಖಾಂಡವವನದಲ್ಲಿ ಅಗ್ನಿಯನ್ನು ತೃಪ್ತಿಗೊಳಿಸಿದನಂತೆ! ಧನಂಜಯನೆನಿಸಿದ ಆ ಪಾರ್ಥನು, ನಿನ್ನ ಬಲದಿಂದಲೇ ಸಮಸ್ತ ಭೂಮಿಯನ್ನೂ ಜಯಿಸಿದನಂತೆ! ಈ ವಿಚಾರವನ್ನೆಲ್ಲ ಸೈರಂಧ್ರಿಯು ನಮಗೆ ಹೇಳಿರುವಳು. ಅವಳು ಪಾಂಡವರನ್ನು ಚೆನ್ನಾಗಿ ಬಲ್ಲವಳು. ಇಂದ್ರನಿಗೆ ಪ್ರಸಿದ್ಧ ಪರಾಕ್ರಮವುಳ್ಳ ಮಾತಲಿಯೂ,

ಜಮದಗ್ನಿಗೆ ಸುಮಹನೂ, ಕೃಷ್ಣನಿಗೆ ದಾರುಕನೂ, ಶ್ರೀರಾಮನಿಗೆ ಸುಮಂತ್ರನೂ, ಸೂರ್ಯನಿಗೆ ಅರುಣನೂ ಬಹಳ ಹೆಸರುಗೊಂಡ ಸಾರಥಿಗಳೆಂದು ಹೇಳುವರು. ಆದರೇನು? ಅವರಾರೂ ಬೃಹನ್ನಳೆಗೆ ಸಾಟಿಯಾದವರಲ್ಲ''ವೆಂದು ಸೈರಂಧ್ರಿಯು ನನಗೆ ಹೇಳಿದುದರಿಂದ, ನಾನು ನಿನ್ನನ್ನು ಇಲ್ಲಿಗೆ ಕರೆಸಬೇಕಾಯಿತು. ''ಓ ಬೃಹನ್ನಳೆ! ಇನ್ನು ನಾವು ಯುದ್ಧಕ್ಕೆ ಹೋಗುವೆವು! ನನ್ನೊಡನೆ ಬಾ! ಕೌರವರು ನಮ್ಮ ಗೋವುಗಳನ್ನು ಹಿಡಿದು, ಈಗಾಗಲೇ ಬಹಳ ದೂರಕ್ಕೆ ಕೊಂಡೊಯ್ದಿರುವರು. ಬೇಗನೆ ಸಿದ್ಧಳಾಗು'' ಎಂದನು. ಆಗ ಬೃಹನ್ನಳೆಯು ಉತ್ತರನ ಮಾತಿಗೆ ಪ್ರತ್ಯುತ್ತರವಾಗಿ ''ಓ ರಾಜಕುಮಾರಾ! ನನಗೆ ಯುದ್ಧರಂಗದಲ್ಲಿ ಸಾರಥ್ಯವನ್ನು ಮಾಡಲು ಶಕ್ತಿಯೆಲ್ಲಿಯದು? ನಾನು ಹೆಂಗಸರಿಗೆ ಕುಣಿಯುವುದನ್ನು ಕಲಿಸಬಲ್ಲೆನು. ಹಾಡುಗಳನ್ನು ಹೇಳಿಕೊಡುವೆನು. ಬೇರೆಬೇರೆ ತರದ ವಾದ್ಯಗಳನ್ನು ನುಡಿಸುವ ರೀತಿಯನ್ನೂ ಕಲಿಸುವೆನು. ಅಂತಹ ವಿದ್ಯೆಗಳನ್ನು ಬೇಕಾದರೆ ನಾನು ಹೇಳಿಕೊಡುವೆನು. ಸಾರಥ್ಯಕ್ಕೂ, ನನಗೂ ಸಂಬಂಧವೆಲ್ಲಿಯದು?'' ಎಂದನು.

ಅದಕ್ಕಾ ಉತ್ತರನು ''ಓ ಬೃಹನ್ನಳೇ! ನೀನು ಕುಣಿಯುವಳಾದರೂ ಆಗು! ಹಾಡುವಳಾದರೂ ಆಗಿರು! ಅದರಿಂದ ನನಗೇನು? ಇಲ್ಲಿನ ಸ್ತ್ರೀಯರೆಲ್ಲರೂ ನಿನ್ನ ಪೌರುಷಕಾರ್ಯವನ್ನು ಕುರಿತು ನನ್ನ ಮುಂದೆ ಬಾರಿಬಾರಿಗೂ ಬಹಳ ಪ್ರಶಂಸೆಮಾಡುತ್ತಿರುವರು. ಆದುದರಿಂದ ನೀನು ಈಗ ವಿಳಂಬಮಾಡದೆ, ಕಾಂತಿಯುಕ್ತವಾದ ಕವಚವನ್ನು ತೊಟ್ಟುಕೊಂಡು ಯುದ್ಧಕ್ಕೆ ಹೊರಡಲು ಸಿದ್ಧನಾಗು'' ಎಂದು ಹೇಳಿ, ವಿರಾಟಕುಮಾರನು ಮಂದಹಾಸದೊಡನೆ ಆ ಅರ್ಜುನನನ್ನು ಪ್ರೋತ್ಸಾಹಗೊಳಿಸಿದುದಲ್ಲದೆ, ಒಡನೆಯೇ ಸುವರ್ಣಚಿತ್ರಿತವಾಗಿಯೂ, ನೂರು ಕಣ್ಣುಗಳುಳ್ಳದಾಗಿಯೂ, ಒಳ್ಳೇ ಕಾಂತಿಯುಕ್ತವಾಗಿಯೂ ಇದ್ದ ಒಂದು ಕವಚವನ್ನು ತರಿಸಿ ತನ್ನ ಕೈಯಿಂದಲೇ ಬೃಹನ್ನಳೆಗೆ ಕೊಟ್ಟನು. ಆಗಲೂ ಅರ್ಜುನನು, ಯುದ್ಧಕ್ಕೆ ಹೋಗಲು ಸ್ವಲ್ಪವೂ ಇಷ್ಟವಿಲ್ಲದವನಂತೆಯೇ ನಟಿಸುತ್ತ, ರಾಜಕುಮಾರನ ಆಜ್ಞೆಯನ್ನು ಮೀರಲಾರದ ನಿರ್ಬಂಧಕ್ಕಾಗಿ

ಒಪ್ಪಿಕೊಳ್ಳುವಂತೆ ಆ ಕವಚವನ್ನು ಕೈಗೆ ತೆಗೆದುಕೊಂಡು ಉತ್ತರನನ್ನು ಕುರಿತು "ಓ ರಾಜಕುಮಾರಾ! ನಿನಗೆ ಯುದ್ಧದಲ್ಲಿ ಶೌರ್ಯವಿದ್ದರೆ, ಮತ್ತು ಶತ್ರುಗಳನ್ನು ಕೊಲ್ಲುವುದು ಸಾಧ್ಯವೆಂದು ನಿನಗೆ ತೋರಿದರೆ, ನೀನು ಹೋದಕಡೆಗೆ ನಾನೂ ನಿನ್ನನ್ನು ಹಿಂಬಾಲಿಸಿಬರುವುದಕ್ಕೇನೂ ಅಡ್ಡಿಯಿಲ್ಲ" ಎಂದನು. ಎಲ್ಲವನ್ನೂ ಬಲ್ಲವನಾಗಿದ್ದರೂ, ತಾನು ಏನೂ ತಿಳಿಯದವನೆಂದು ತೋರಿಸುವುದಕ್ಕಾಗಿ ಉತ್ತರೆಯ ಮುಂದೆ ಹಾಸ್ಯಾಸ್ಪದಗಳಾದ ಹಲವು ಚೇಷ್ಟೆಗಳನ್ನೂ ಮಾಡಿದನು. ವೀರಾಗ್ರೇಸರನಾದ ಆ ಅರ್ಜುನನು, ಉತ್ತರನು ತನ್ನ ಕೈಗೆ ಕೊಟ್ಟ ಕವಚವನ್ನು ಮೊದಲು ತಲೆಕೆಳಗಾಗಿ ಹಿಡಿದು ತೊಟ್ಟುಕೊಳ್ಳುವುದಕ್ಕೆ ಯತ್ನಿಸಲು, ಅಲ್ಲಿದ್ದ ಸ್ತ್ರೀಯರೆಲ್ಲರೂ ಗೊಳ್ಳೆಂದು ನಕ್ಕುಬಿಟ್ಟರು. ಆಮೇಲೆ ಕವಚವನ್ನು ಅಡ್ಡಲಾಗಿ ತೊಟ್ಟುಕೊಳ್ಳುವುದಕ್ಕೆ ಯತ್ನಿಸಿದನು. ತಿರುಗಿ ಮತ್ತೊಮ್ಮೆ ಕವಚವನ್ನು ತಲೆಕೆಳಗಾಗಿ ಹಿಡಿದನು. ಆ ಕವಚವನ್ನು ಮೇಲಕ್ಕೆತ್ತಿ ಮೇಲಿಂದ ಕೆಳಕ್ಕೆ ತೊಡಲು ಯತ್ನಿಸಿದನು. ಅರ್ಜುನನು ಮಾಡಿದ ಈ ಅಸಂಬದ್ಧಕಾರ್ಯಗಳನ್ನೆಲ್ಲ ನೋಡಿ, ಅಲ್ಲಿ ಪ್ರಾಯದ ಹೆಮ್ಮೆಯಿಂದಿದ್ದ ಹೆಂಗಸರನೇಕರು ಕೇಕೆಹಾಕಿ ನಗುತಿದ್ದರು. ಅವರ ಹಾಸ್ಯವನ್ನೂ ಲಕ್ಷ್ಯಮಾಡದೆ ಅರ್ಜುನನು ಅಜ್ಞಾತೆಯನ್ನೇ ನಟಿಸುತಿದ್ದರೂ, ಉತ್ತರನು ತಾನು ಮಾತ್ರ ಅವನನ್ನೇನೂ ಹಾಸ್ಯಮಾಡಿ ಅವಮಾನಿಸದೆ ಸುಮ್ಮನಿದ್ದನು. ಕೊನೆಗೆ ಸುವರ್ಣಮಯವಾದ ಅಂಚಿನಿಂದ ಕೂಡಿ, ಅಗ್ನಿಯಂತೆ ಜಾಜ್ವಲ್ಯಮಾನವಾಗಿ, ಸಾವಿರಾರು ಕಿರಣಧಾರೆಗಳನ್ನು ಎರಚುವಂತಿರುವ ಆ ಕವಚವನ್ನು ಅರ್ಜುನನ ಕೈಯಿಂದ ತೆಗೆದುಕೊಂಡು, ತಾನೇ ಅದನ್ನು ಅವನಿಗೆ ತೊಡಿಸಿದನು. ಆಮೇಲೆ ಅರ್ಜುನನು, ಚಿನ್ನದ ಕವಚಗಳಿಂದ ಹೊದಿಸಲ್ಪಟ್ಟ ಒಳ್ಳೇ ಕುದುರೆಗಳನ್ನು ಆರಿಸಿತಂದು, ಉತ್ತರನ ರಥಕ್ಕೆ ಹೂಡಿದನು. ಮತ್ತು ಚಿನ್ನದ ಕುಚ್ಚುಗಳಿಂದಲಂಕೃತವಾದ ಕೇಸರಗಳುಳ್ಳ ಸುವರ್ಣಮಯವಾದ ಸಿಂಹವನ್ನು ತರಿಸಿ ಧ್ವಜಕ್ಕೆ ಕಟ್ಟಿಸಿದನು. ಉತ್ತಮ ಧನುಸ್ಸುಗಳೂ, ವಿಚಿತ್ರಬಾಣಗಳೂ, ಅನೇಕವಿಧಗಳಾದ ಆಯುಧಗಳೂ ರಥದಲ್ಲಿ ಇರಿಸಲ್ಪಟ್ಟುವು. ಬೃಹನ್ನಳೆಯು ಸಾರಥ್ಯಕ್ಕಾಗಿ ರಥದಲ್ಲಿ ಕುಳಿತಮೇಲೆ, ಉತ್ತರನೂ ಆ ರಥವನ್ನೇರಿ ಹೊರಡಲುದ್ಯುಕ್ತನಾದನು. ಆಗ

ಅವನ ತಂಗಿಯಾದ ಉತ್ತರೆಯು ಇತರ ರಾಜಕನ್ಯೆಯರೊಡನೆಯೂ, ತನ್ನ ಸಖಿಯರೊಡನೆಯೂ ಮುಂದೆ ಬಂದು, ರಥದಲ್ಲಿ ಸಾರಥ್ಯಕ್ಕಾಗಿ ಕುಳಿತಿದ್ದ ಅರ್ಜುನನನ್ನು ನೋಡಿ "ಬೃಹನ್ನಳೇ! ನೀವು ಯುದ್ಧದಲ್ಲಿ ಭೀಷ್ಮ, ದ್ರೋಣಾದಿ ಕೌರವರನ್ನೆಲ್ಲ ಜಯಿಸಿದಮೇಲೆ, ಅಲ್ಲಿಂದ ನಮ್ಮ ಆಟದ ಬೊಂಬೆಗಳಿಗೆ ತೊಡಿಸುವುದಕ್ಕಾಗಿ ವಿಚಿತ್ರ ವಸ್ತ್ರಗಳನ್ನೂ, ರತ್ನಾಭರಣಗಳನ್ನೂ ತಂದುಕೊಡಬೇಕು" ಎಂದರು. ಕನ್ಯೆಯರು ಹೇಳಿದ ಮಾತನ್ನು ಕೇಳಿ ನಗುತ್ತ ಅರ್ಜುನನು ಅವರನ್ನು ಕುರಿತು ಮೇಘಗಂಭೀರಸ್ವರದಿಂದ "ಓ ಶುಭಾಂಗಿಯರೇ! ಅದಕ್ಕೆ ತಡೆಯೇನು? ರಾಜಕುಮಾರನಾದ ಈ ಉತ್ತರನು ಯುದ್ಧದಲ್ಲಿ ಮಹಾರಥರನ್ನು ಜಯಿಸುವನಾದರೆ, ನಿಮಗೆ ಬೇಕಾದಷ್ಟು ಬಟ್ಟೆಗಳನ್ನೂ, ಆಭರಣಗಳನ್ನೂ ತಂದುಕೊಡುವೆನು" ಎಂದನು.

ಓ ಜನಮೇಜಯರಾಜಾ! ಆಮೇಲೆ ಉತ್ತರನು ವೈಡೂರ್ಯಖಚಿತವಾದ ಮತ್ತು ಉತ್ತಮವಾದ ಸುವರ್ಣಕವಚವೊಂದನ್ನು ಮೈಗೆ ತೊಟ್ಟುಕೊಂಡು, ರಥವನ್ನೇರಿ ಕುಳಿತನು. ಉತ್ತರನೂ, ಬೃಹನ್ನಳೆಯೂ ರಥವನ್ನೇರಿ ಕುಳಿತಮೇಲೆ, ಅನೇಕ ಮಹಾಜನರೂ, ಹೆಂಗಸರೂ, ಕನ್ನಿಕೆಯರೂ, ಪ್ರತನಿಷ್ಠರಾದ ಬಾಹ್ಮಣರೂ, ಪ್ರದಕ್ಷಿಣವಾಗಿ ಸುತ್ತಿಬಂದು, ಮಂಗಳಕಾರ್ಯಗಳನ್ನು ಮಾಡುತ್ತ, "ಬೃಹನ್ನಳೆ! ಹಿಂದೆ ಖಾಂಡವವನ ದಹನ ಕಾಲದಲ್ಲಿ ಮಹಾವೃಷಭದಂತೆ ಗಂಭೀರವಾದ ನಡೆಯುಳ್ಳ ಆ ಅರ್ಜುನನಿಗೆ ಯಾವ ಮಂಗಳವುಂಟಾಯಿತೋ, ಅದೇ ವಿಧವಾದ ಮಂಗಳವು, ಈಗ ಉತ್ತರನೊಡನೆ ಕುರುಗಳನ್ನಿದಿರಿಸುವುದಕ್ಕಾಗಿ ಹೋಗುವ ನಿನಗೂ ಉಂಟಾಗಲಿ!" ಎಂದು ಶುಭಾಶಂಸೆಗಳನ್ನು ಮಾಡಿದರು.

ಇದು ಮೂವತ್ತೈದನೆಯ ಅಧ್ಯಾಯವು.

ಉತ್ತರನು ಕೌರವಸೈನ್ಯವನ್ನು ಕಂಡು ಭಯಪಟ್ಟು
ರಥದಿಂದ ದುಮುಕಿ ಓಡಿದುದು. ಅರ್ಜುನನು
ಅವನನ್ನು ಬೆನ್ನಟ್ಟಿ ಹಿಡಿದುತಂದುದು.
ಅರ್ಜುನನ ವೇಷವನ್ನು ನೋಡಿ
ಕೌರವರ ಸಂದೇಹವು.

ಓ ಜನಮೇಜಯರಾಜಾ! ಕೇಳು! ಆಮೇಲೆ ಉತ್ತರನು ರಾಜಧಾನಿಯಿಂದ ಹೊರಟು ರಣರಂಗವನ್ನು ಸವಿಾಪಿಸುವವರೆಗೆ ಎಲ್ಲಿಯೂ ಭಯವಿಲ್ಲದೆ, ಕುರುಗಳಿದ್ದ ಕಡೆಗೆ ಬೇಗನೆ ರಥವನ್ನು ನಡೆಸುವಂತೆ ತಾನೇ ತ್ವರೆಪಡಿಸಿದುದಲ್ಲದೆ, ಸಾರಥಿಯಾದ ಬೃಹನ್ನಳೆಯನ್ನು ಕುರಿತು "ಓ ಸಾರಥೀ! ನಮ್ಮನ್ನು ಜಯಿಸಬೇಕೆಂದು ಗುಂಪುಕಟ್ಟಿಕೊಂಡು ಬಂದಿರುವ ಕೌರವರೆಲ್ಲರನ್ನೂ ಜಯಿಸಿ, ನಮ್ಮ ಗೋವುಗಳನ್ನೆಲ್ಲ ನಿವಿಷಮಾತ್ರದಲ್ಲಿ ಹಿಂತಿರುಗಿಸಿಕೊಂಡು ಬಂದುಬಿಡುವೆನು ನೋಡು" ಎಂದು ಆರ್ಭಟಿಸಿದನು. ಒಡನೆಯೇ ಅರ್ಜುನನು ಕುದುರೆಗಳನ್ನು ತಟ್ಟಿ ಬಿಡಲು, ಕುದುರೆಗಳು ಕಾಲಿನಿಂದ ಆಕಾಶವನ್ನು ಕೆರೆಯುವಂತೆ ಹಾರಿಹಾರಿ ವಾಯುವೇಗದಿಂದ ಓಡಿದುವು. ಉತ್ತರನು ಸಾರಥಿಯಾದ ಅರ್ಜುನನೊಡನೆ ಕೌರವರಿದ್ದ ಸ್ಥಳಕ್ಕೆ ಬಹಳ ದೂರವಿಲ್ಲದಂತೆ ಬಂದುಸೇರಿದರು. ಆಗ ಪ್ರಬಲವಾದ ಕುರುಸೈನ್ಯವು ಅವರ ಕಣ್ಣಿಗೆ ಕಾಣಿಸಿತು. ಶೂರರಾದ ಅವರಿಬ್ಬರೂ ಶ್ಮಶಾನಕ್ಕೆ ಪಕ್ಕವಾದ ದಾರಿಯಿಂದ ಹೊರಟು ಅಲ್ಲಿ ನೆರೆದಿದ್ದ ಕೌರವರನ್ನು ಕಂಡರು. ಆ ಕುರುಸೈನ್ಯವು ಅಪಾರಸಮುದ್ರದಂತೆ ವಿಸ್ತಾರವಾಗಿದ್ದಿತು. ಅನೇಕ ವೃಕ್ಷಗಳಿಂದ ದಟ್ಟವಾದ ಕಾಡಿನಂತೆಯೂ, ಆಕಾಶದಲ್ಲಿಯೇ ಹಾರಿಬರುವಂತೆಯೂ ಮುಂದೆ ಸಾಗಿಬರುತ್ತಿರುವ ಆ ಸೈನ್ಯದ ತುಳಿತದಿಂದ ಮೇಲಕ್ಕೆದ್ದ ನೆಲದ ಧೂಳಿಯು, ಆಕಾಶವನ್ನೆಲ್ಲ ಆವರಿಸಿ, ಸಮಸ್ತ ಪ್ರಾಣಿಗಳ ಕಣ್ಣನ್ನೂ ಕೆಡಿಸುವಂತಿದ್ದಿತು. ರಥ ಗಜ ತುರಗ ಪದಾತಿಗಳೆಂಬ ಚತುರಂಗಗಳಿಂದ ಕೂಡಿ, ಭೀಷ್ಮ, ದ್ರೋಣ, ಕೃಪ, ಕರ್ಣ, ದುರ್ಯೋಧನಾದಿ ವೀರರಿಂದಲೂ, ಮಹಾಧನುರ್ಧಾರಿಯೂ, ಧೀಮಂತನೂ ಆದ ಅಶ್ವತ್ಥಾಮನಿಂದಲೂ ರಕ್ಷಿತವಾಗಿದ್ದ ಆ ಸೈನ್ಯವನ್ನು

ನೋಡಿದೊಡನೆ, ಉತ್ತರನಿಗೆ ಭಯದಿಂದ ಬುದ್ಧಿಯು ತಬ್ಬಿಬ್ಬಾಗಿ, ಮೈಯಲ್ಲಿ ರೋಮಾಂಚವು ಹುಟ್ಟಿತು. ದೇಹದಲ್ಲಿ ನಡುಕವು ಕಂಡಿತು. ಆ ಸೈನ್ಯವನ್ನು ನೋಡಲಾರದೆ ಉತ್ತರನು, ಕಣ್ಣುಗಳನ್ನು ಮುಚ್ಚಿಕೊಂಡೇ ಅರ್ಜುನನನ್ನು ಕುರಿತು ಹೀಗೆಂದು ಹೇಳುವನು, "ಬೃಹನ್ನಳೆ! ನನ್ನಿಂದಾಗದು! ಈ ಕೌರವರೊಡನೆ ಯುದ್ಧಮಾಡುವುದಕ್ಕೆ ನನ್ನಿಂದ ಸಾಧ್ಯವಿಲ್ಲ! ಆ ಸೈನ್ಯವನ್ನು ನೋಡಿದೊಡನೆ ಭಯದಿಂದ ನನ್ನ ಮೈಯೆಲ್ಲ ರೋಮಾಂಚಿತವಾಗಿದೆ ನೋಡು. ಅನೇಕಮಹಾವೀರರಿಂದ ಕೂಡಿ, ಅತಿ ಕ್ರೂರವಾದ ಈ ಸೈನ್ಯವನ್ನು ದೇವತೆಗಳಿಗಾದರೂ ಇದಿರಿಸಲು ಸಾಧ್ಯವಲ್ಲ. ಇಷ್ಟು ಭಯಂಕರವಾದ ಕೌರವಸೈನ್ಯಕ್ಕೆ ಇದಿರಾಗಿ ನಿಂತು ಯುದ್ಧಮಾಡುವುದಕ್ಕೆ ನಾನು ಸಮರ್ಥನೆ? ಅಯ್ಯೋ! ಅವರ ಕೈಯಲ್ಲಿರುವ ಭಯಂಕರವಾದ ಬಿಲ್ಲನ್ನು ನೋಡು! ಅಂತಹ ಕುರುಸೈನ್ಯದಲ್ಲಿ ಪ್ರವೇಶಿಸುವುದಕ್ಕೆ ನನಗೆ ಸರ್ವಥಾ ಸಮ್ಮತವಿಲ್ಲ. ಇಂದ್ರನೊಡಗೂಡಿದ ದೇವತೆಗಳಿಗಾದರೂ ಆ ಸೈನ್ಯಕ್ಕಿದಿರಾಗಿ ಹೋಗಲು ಸಾಧ್ಯವಿಲ್ಲ. ಇನ್ನು ಮನುಷ್ಯರ ಪಾಡೇನು! ರಥಗಳು, ಆನೆಗಳು, ಕುದುರೆಗಳು, ಪದಾತಿಗಳು, ಧ್ವಜಗಳು ಇವುಗಳಿಂದ ದಟ್ಟವಾದ ಆ ಸೈನ್ಯವನ್ನು ಕಣ್ಣಿಂದ ನೋಡುವಾಗಲೇ ನನ್ನ ಮನಸ್ಸು ನಡುಗುತ್ತಿದೆ. ಆ ಸೇನೆಯಲ್ಲಿರತಕ್ಕವರಾದರೂ ಒಬ್ಬರಿಬ್ಬರೇ! ಭೀಷ್ಮ, ದ್ರೋಣ, ಕೃಪ, ಕರ್ಣ, ವಿವಿಂಶತಿ, ಅಶ್ವತ್ಥಾಮ, ವಿಕರ್ಣ, ಸೋಮದತ್ತ, ಬಾಹ್ಲಿಕ, ಮೊದಲಾದ ವೀರಾಧಿವೀರರು ಅದರಲ್ಲಿರುವರು. ರಾಜನಾದ ದುರ್ಯೋಧನನೂ, ವೀರನಾದ ದುರ್ಮರ್ಷಣನೂ ಆ ಸೈನ್ಯದಲ್ಲಿರುವುದನ್ನು ನೋಡು. ಎಲ್ಲರೂ ಮಹಾಧೀರರು! ಮಹಾಧನುರ್ಧಾರಿಗಳು! ಎಲ್ಲರೂ ಯುದ್ಧವಿಶಾರದರು. ಒಬ್ಬೊಬ್ಬರೂ ಕೊಬ್ಬಿದ ಮದದಾನೆಗಳಂತಿರುವರು. ರಥದಮೇಲೆ ತಮ್ಮತಮ್ಮ ಧ್ವಜಗಳನ್ನೂ, ಪತಾಕೆಗಳನ್ನೂ ಹೇಗೆ ಏರಿಸಿರುವರು ನೋಡು! ಎಲ್ಲರೂ ಒಳ್ಳೆಯ ನೀತಿಯನ್ನುಬಲ್ಲವರು. ಸಮಸ್ತ ಸನ್ನಾಹಗಳನ್ನೂ ಸಿದ್ಧಪಡಿಸಿಕೊಂಡಿರುವರು. ಸಮಸ್ತ ವಿಷಯಗಳಲ್ಲಿಯೂ ನಿಶ್ಚಯಜ್ಞಾನವುಳ್ಳವರು. ಇಂತಹ ಮಹಾಶೂರರನ್ನು ಯುದ್ಧದಲ್ಲಿ ಜಯಿಸಬೇಕೆಂದು ನಾನು ಬುದ್ಧಿಯಿಲ್ಲದೆ ಇಲ್ಲಿಗೆ ಬಂದಂತಾಯಿತು. ಕೈಯಲ್ಲಿ ಆಯುಧಗಳನ್ನೆಲ್ಲ ಸಿದ್ಧವಾಗಿ ಹಿಡಿದು, ಸೈನ್ಯ

ವನ್ನು ವ್ಯೂಹಗಳನ್ನಾಗಿ ಮಾಡಿಕೊಂಡು ಬಂದಿರುವ ಆ ಕುರುಗಳನ್ನು ನೋಡಿದಮಾತ್ರದಲ್ಲಿಯೇ ನನ್ನ ಮೈಯಲ್ಲಿ ರೋಮಾಂಚವೆದ್ದಿದೆ. ನನ್ನ ಮನಸ್ಸಿಗೇನೋ ಮಯಕವು ಬರುವಂತಿದೆ. ಇನ್ನೇನುಗತಿ,'' ಎಂದನು.

ಜನಮೇಜಯರಾಜೇಂದ್ರಾ! ಹೀಗೆ ಧನುರ್ಧಾರಿಗಳಾಗಿ ಬಂದಿದ್ದ ಕೌರವರ ದೊಡ್ಡ ಸೈನ್ಯವನ್ನು ನೋಡಿನೋಡಿ ಮೂಢನಾದ ಉತ್ತರನು, ಅರ್ಜುನನಮುಂದೆ ಭಯದಿಂದ ರೋದಿಸುವುದಕ್ಕೆ ತೊಡಗಿದನು. ''ಓ ಸಾರಥೀ! ನನ್ನ ತಂದೆಯು ತ್ರಿಗರ್ತರನ್ನು ಇದಿರಿಸುವುದಕ್ಕಾಗಿ ಸೈನ್ಯ ಗಳನ್ನೆಲ್ಲ ತನ್ನೊಡನೆ ಕರೆದುಕೊಂಡು ಹೋದನು. ಜನಶೂನ್ಯವಾದ ಈ ನಗರದಲ್ಲಿ ನನ್ನನ್ನು ಬಿಟ್ಟುಹೋಗಿರುವನು. ನನ್ನ ಸಹಾಯಕ್ಕೆ ಇಲ್ಲಿ ಸೈನಿಕರೂ ಇಲ್ಲ. ಇಲ್ಲಿ ನಾನು ಏಕಾಕಿಯಾಗಿರುವೆನು. ಇನ್ನೂ ಬಾಲನು. ನನಗೆ ಅಸ್ತ್ರಗಳಲ್ಲಿ ಪರಿಶ್ರಮವೂ ಇಲ್ಲವು. ಇಂತಹ ನಾನು ಅಸ್ತ್ರ ವಿದ್ಯೆಯಲ್ಲಿ ಸುಶಿಕ್ಷಿತರಾದ ಅನೇಕಮಂದಿ ವೀರರನ್ನು ಇದಿರಿಸಿ ನಿಲ್ಲಬೇ ಕೆಂದರೆ ಹೇಗೆತಾನೇ ಸಾಧ್ಯವು? ನನ್ನಿಂದ ಸಾಧ್ಯವಿಲ್ಲ ಓ ಬೃಹನ್ನಳೆ! ರಥವನ್ನು ಹಿಂತಿರುಗಿಸಿಬಿಡು'' ಎಂದು ದೈನ್ಯದಿಂದ ಪ್ರಾರ್ಥಿಸಿದನು. ಹೀಗೆ ತನ್ನ ಮುಂದೆ ಗೋಳಾಡುತ್ತಿರುವ ಉತ್ತರನನ್ನು ನೋಡಿ, ಲೋಕ ದಲ್ಲಿರುವ ಮಹಾರಥರಲ್ಲೆಲ್ಲಾ ಮೇಲೆನಿಸಿಕೊಂಡ ಅರ್ಜುನನು ನಗುತ್ತ ಹೀಗೆಂದು ಹೇಳುವನು. ''ಓ ರಾಜಕುಮಾರಾ! ಭಯದಿಂದ ನೀನು ಹೀಗೆ ಕುಗ್ಗಿರುವೆಯಲ್ಲಾ! ಈ ನಿನ್ನ ಸ್ಥಿತಿಯು ಶತ್ರುಗಳಿಗೆ ಮತ್ತಷ್ಟು ಉತ್ಸಾಹಕರವಾಗುವುದು. ಯುದ್ಧರಂಗದಲ್ಲಿ ಶತ್ರುಗಳು ಇನ್ನೂ ನಮ್ಮ ನಮ್ಮಮೇಲೆ ಕೈಮಾಡಿ, ಸ್ವಲ್ಪವಾದರೂ ಯುದ್ಧಕಾರ್ಯವನ್ನು ತೋರಿ ಸಿಲ್ಲ. ಇಷ್ಟರಲ್ಲಿಯೇ ನಿನಗೆ ಈ ಭಯವುಂಟೇ? ನೀನಾಗಿಯೇ ನನ್ನನ್ನು ಕರೆಸಿ, ಕೌರವರ ಬಳಿಗೆ ನಿನ್ನನ್ನು ಕರೆದುಕೊಂಡು ಹೋಗೆಂದು ಹೇಳಿದೆ ಯಲ್ಲವೇ? ಅಲ್ಲಿಗೇ ನಾನು ಕರೆದುಕೊಂಡು ಹೋಗುವೆನು. ಅದೋ, ಅನೇಕವಾದ ಧ್ವಜಗಳು ಕಾಣುತ್ತಿರುವ ಆ ಸ್ಥಳದಲ್ಲಿಯೇ ಕೌರವರಿರು ವರು. ಓ ಮಹಾಬಾಹೂ! ಮಾಂಸಾಶೆಯುಳ್ಳ ಹದ್ದುಗಳಂತೆ, ಪರಸ್ವಾಪ ಹಾರದಲ್ಲಿಯೇ ಆಸಕ್ತರಾಗಿ, ಕೊಲೆಗೆಲಸಕ್ಕೆ ಹಿಂಜರಿಯದ ಚತತಾಯಿಗಳೆ

ನಿಸಿದ ಆ ಕೌರವರನಡುವೆ ನಿನ್ನನ್ನು ತೆಗೆದುಕೊಂಡುಹೋಗಿ ಬಿಡಬೇಕೆಂದಿದ್ದೆನು. ಇಷ್ಟರಲ್ಲಿಯೇ ನೀನು ಹೆದರುವೆಯಾ? ಸಮುದ್ರದಂತೆ ಗಂಭೀರವಾಗಿರುವ ಆ ಕುರುಸೈನ್ಯಕ್ಕೆ ಹೋಗುವೆವು ಬಾ! ಓ ರಾಜಕುಮಾರಾ! ಹಿಂದೆ ನೀನು ಹೆಂಗಸರ ಗುಂಪಿನಲ್ಲಿ, ಅನೇಕಪುರುಷರೂ ಕೇಳುತ್ತಿದ್ದ ಹಾಗೆಯೇ, ಇಲ್ಲದ ಜಂಬವನ್ನು ಹೇಳಿಕೊಂಡು ಹೊರಟುಬಂದು, ಇಲ್ಲಿ ಯುದ್ಧಮಾಡಲಾರದೆ ಹೀಗೆ ಮಾತಾಡುತ್ತಿರುವೆಯಲ್ಲಾ. ನೀನು ಸ್ತ್ರೀಯರ ಮುಂದೆಯೂ, ಪುರುಷರ ಮುಂದೆಯೂ ಶಪಥಪೂರ್ವಕವಾಗಿ ನಿನ್ನ ಪೌರುಷವನ್ನು ಹೇಳಿಕೊಂಡು, ಒಡನೆಯೇ ರಥವನ್ನೇರಿ ಬಂದೆಯಲ್ಲವೇ? ಅದನ್ನಾದರೂ ನೀನು ಮನಸ್ಸಿಗೆ ತಂದುಕೊಳ್ಳಬೇಡವೇ? ನೀನು ಶತ್ರುಗಳಿಂದ ನಿಮ್ಮ ಗೋವುಗಳನ್ನು ಬಿಡಿಸಿಕೊಳ್ಳದೆ ಪಟ್ಟಣಕ್ಕೆ ಹಿಂತಿರುಗಿ ಹೋದರೆ, ವೀರರೂ, ಹೆಂಗಸರೂ, ಸಾಮಾನ್ಯಜನರೂ ನಿನ್ನನ್ನು ಹಾಸ್ಯ ಮಾಡುವುದಿಲ್ಲವೇ? ಉತ್ತರಾ! ನಿನ್ನ ಸಂಗತಿಯಾದರೂ ಹಾಗಿರಲಿ. ಸಾರಥ್ಯಕಾರ್ಯದಲ್ಲಿ ಮಹಾನಿಪುಣನೆಂದು ಸೈರಂಧ್ರಿಯು ನನ್ನನ್ನು ಅಷ್ಟು ಬಗೆಯಿಂದ ಸ್ತೋತ್ರಮಾಡಿರುವಳು. ಈಗ ಗೋವುಗಳನ್ನು ಬಿಡಿಸಿಕೊಳ್ಳದೆ ಹಿಂತಿರುಗಿ ಪಟ್ಟಣಕ್ಕೆ ಹೋಗಬೇಕೆಂದರೆ ನನಗೇ ನಾಚಿಕೆಯಾಗಿರುವುದು. ನನಗೆ ಹಿಂತಿರುಗಿ ಹೋಗುವುದಕ್ಕೂ ಇಲ್ಲದಂತಾಗಿದೆ. ಸೈರಂಧ್ರಿಯ ಸ್ತೋತ್ರದಿಂದಲೂ ನಿನ್ನ ಪ್ರೋತ್ಸಾಹದಿಂದಲೂ ನಾನು ಇಲ್ಲಿಗೆ ಬಂದವನು. ಈಗ ನಾನು ಈ ಕುರುಗಳೊಡನೆ ಯುದ್ಧಮಾಡದೆ ಹೇಗೆ ತಾನೇ ಹಿಂತಿರುಗಬಹುದು? ಕುಮಾರಾ! ಮನಸ್ಸನ್ನು ದೃಢಮಾಡಿಕೊಂಡು ಸುಮ್ಮನಿರು'' ಎಂದನು.

ಅದಕ್ಕಾ ಉತ್ತರನು ''ಓ ಬೃಹನ್ನಳೆ! ಕೌರವರೆಲ್ಲರೂ ಗುಂಪಾಗಿ ಬಂದು ಮತ್ಸ್ಯದೇಶದ ಧನವನ್ನೆಲ್ಲಾ ತಮಗೆ ಇಷ್ಟಬಂದಂತೆ ಕೊಳ್ಳೆಹೊಡೆದುಕೊಂಡು ಹೋಗಲಿ. ಹೆಂಗಸರೂ, ಗಂಡಸರೂ ಬೇಕಾದ ಹಾಗೆ ನನ್ನನ್ನು ಹಾಸ್ಯಮಾಡಲಿ. ನನಗೆ ಈಗ ಈ ಯುದ್ಧದಿಂದೇನೂ ಆಗಬೇಕಾದುದಿಲ್ಲ. ನಮ್ಮ ಗೋವುಗಳು ಹೋದರೂ ಹೋಗಲಿ. ನಾನೇನೋ ಇಲ್ಲಿಂದ ಹಿಂತಿ

ರುಗಿ ನಿನ್ನ ಕಣ್ಣೆದಿರಾಗಿಯೇ ಪಟ್ಟಣಕ್ಕೆ ಹೋಗಿ ಸೇರಿಕೊಳ್ಳುವೆನು'' ಎಂದನು.

ಓ ಜನಮೇಜಯರಾಜಾ ಕೇಳು! ಹೀಗೆಂದು ಹೇಳಿ ಉತ್ತರನು, ತನ್ನ ಮಾನದ ಮೇಲೆಯೂ ದೃಷ್ಟಿಯನ್ನಿಡದೆ, ಮಹಾಭಯಗ್ರಸ್ತನಾಗಿ ತನ್ನ ಕೈಯಲ್ಲಿದ್ದ ಧನುರ್ಬಾಣಗಳನ್ನು ರಥದಲ್ಲಿಯೇ ಬಿಟ್ಟು, ರಥದಿಂದ ದುಮುಕಿ ಓಡುವುದಕ್ಕಾರಂಭಿಸಿದನು. ಅರ್ಜುನನು ಉತ್ತರನನ್ನು ಕೂಗಿ ಕರೆಯುತ್ತ, '' ಕ್ಷತ್ರಿಯರು ರಣರಂಗದಿಂದ ಹೀಗೆ ಪಲಾಯನಮಾಡುವುದು ಧರ್ಮವಲ್ಲ! ಶೂರರು ಇಂತಹ ಕಾರ್ಯವನ್ನು ಸಹಿಸಲಾರರು. ಯುದ್ಧಕ್ಕೆ ಬಂದಮೇಲೆ ಶತ್ರುಗಳ ಕೈಯಿಂದ ಸಾಯುವುದಾದರೂ ಉತ್ತಮವೇಹೊರತು ಭಯಪಟ್ಟು ಓಡಿಹೋಗುವುದು ಉಚಿತವಲ್ಲ'' ಎಂದು ಹೇಳುತ್ತ, ತಾನೂ ರಥದಿಂದ ಕೆಳಕ್ಕೆ ಧುಮುಕಿ, ಓಡಿಹೋಗುತ್ತಿರುವ ಆ ವಿರಾಟಪುತ್ರನನ್ನು ಹಿಡಿದುತರುವುದಕ್ಕಾಗಿ ಅವನ ಹಿಂದೆ ಓಡಿದನು. ಬೆನ್ನಹಿಂದೆ ಜಡೆಹಾಕಿ ಉದ್ದವಾದ ತಲೆಕೂದಲನ್ನೂ, ಮೈಮೇಲೆ ಧರಿಸಿದ ಎರಡು ಕೆಂಪುವಸ್ತ್ರಗಳನ್ನೂ ಹಾರಿಸುತ್ತ, ನೆಲವು ಜಗ್ಗುವಂತೆ ದಾಟುಗಾಲಿನಿಂದ ಉತ್ತರನನ್ನು ಹಿಂಬಾಲಿಸಿ ಓಡುತ್ತಿದ್ದಾಗ, ಅವನು ಅರ್ಜುನನೆಂದು ಯಾರಿಗೂ ತಿಳಿಯಲಿಲ್ಲ. ಆ ಸ್ತ್ರೀರೂಪವನ್ನು ನೋಡಿ ಕೆಲವು ಸೈನಿಕರು ಅಟ್ಟಹಾಸದಿಂದ ನಗುತ್ತಿದ್ದರು. ಕೌರವರೂ ಕೂಡ ಹೀಗೆ ವೇಗದಿಂದ ಓಡುತ್ತಿದ್ದ ಅರ್ಜುನನನ್ನು ನೋಡಿ, ಒಬ್ಬರಿಗೊಬ್ಬರು '' ಯಾವನಿವನು? ಹೀಗೆ ರಥವನ್ನು ಬಿಟ್ಟು ಓಡುತ್ತಿರುವನು? ಬೂದಿಮುಚ್ಚಿದ ಕೆಂಡದಂತೆ ಇವನಾವನೋ ವೇಷವನ್ನು ಮರೆಸಿಕೊಡಿರುವಂತಿದೆ. ಇವನಲ್ಲಿ ಕೆಲವು ಭಾಗವು ಪುರುಷನನ್ನೂ, ಕೆಲವು ಭಾಗವು ಸ್ತ್ರೀಯನ್ನೂ ಹೋಲುತ್ತಿರುವುದು'' ಎಂದು ಹೇಳಿಕೊಳ್ಳುತ್ತಿದ್ದರು. ಆಗ ಕೌರವ ಪಾಂಡವರಿಬ್ಬರಿಗೂ ಆಚಾರ್ಯನೂ, ಬುದ್ಧಿಯಲ್ಲಿ ಶುಕ್ರಬೃಹಸ್ಪತಿಗಳಿಗೆ ಸಮಾನನೂ ಆದ ದ್ರೋಣಾಚಾರ್ಯನು ಅವರನ್ನು ಕುರಿತು '' ಎಲೈ ಸೈನಿಕರೇ! ಈಗ ಆ ವಿಚಾರದಿಂದ ನಿಮಗೇನು? ಓಡಿಹೋಗುತ್ತಿರುವ ಈ ವ್ಯಕ್ತಿಯಿಂದತಾನೇ ನಿಮಗೆ ಆಗಬೇಕಾದುದೇನು? ಯಾವನೋ ಒಬ್ಬನು ಭಯದಿಂದ ಯುದ್ಧ


ರಂಗವನ್ನು ಬಿಟ್ಟು ಓಡುತ್ತಿರುವಾಗ, ಅವನನ್ನು ಬೆನ್ನಟ್ಟಿ ಮತ್ತೊಂದು ವ್ಯಕ್ತಿಯು ನಿರ್ಭಯವಾಗಿ ಹಿಂದೆ ಜಡೆಯನ್ನು ಹಾರಿಸುತ್ತಾ ಓಡುತ್ತಿರುವುದು. ಅವನಾವನೋ ಪುರುಷಶ್ರೇಷ್ಠನಂತೆ ಕಾಣುವುದು. ಇವನು ನಪುಂಸಕವೇಷದಿಂದಿದ್ದರೂ ಇವನ ರೂಪವು ಅರ್ಜುನನ ಆಕಾರದಂತಿರುವುದು. ಸ್ತ್ರೀವೇಷದಿಂದ ಅಲಂಕರಿಸಲ್ಪಟ್ಟ ಈತನೂ ರೂಪದಲ್ಲಿ ಅರ್ಜುನನನ್ನೇ ಹೋಲುತ್ತಿರುವನು. ಅದೇ ತಲೆ! ಅದೇ ಕತ್ತು! ಬಾಗಿಲಗುಳಿಗಳಿಗೆ ಸಮಾನಗಳಾದ ತೋಳುಗಳೂ ಅವೇ! ಗಂಭೀರವಾದ ನಡೆಯ ರೀತಿಯೂ ಅದೇ! ಅವನು ಅರ್ಜುನನಿಗಿಂತ ಬೇರೆಯವನಲ್ಲ. ದೇವತೆಗಳಲ್ಲಿ ದೇವೇಂದ್ರನು ಹೇಗೋ ಹಾಗೆ ಮನುಷ್ಯರಲ್ಲಿ ಅರ್ಜುನನು ಮೇಲೆನಿಸಿರುವನು. ಲೋಕದಲ್ಲಿ ಆ ಧನಂಜಯನೊಬ್ಬನನ್ನು ಬಿಟ್ಟರೆ, ಬೇರೆ ಯಾವನುತಾನೇ ಏಕಾಕಿಯಾಗಿ ನಮ್ಮನ್ನಿದಿರಿಸಲು ಬರುವನು" ಎಂದನು. ದ್ರೋಣನು ಹೇಳಿದ ಈ ಮಾತನ್ನು ಕೇಳಿ ಕರ್ಣನು ಕೌರವರನ್ನು ಕುರಿತು "ವಿರಾಟಪುತ್ರನಾದ ಉತ್ತರನೊಬ್ಬನೇ ಶೂನ್ಯವಾದ ಆ ಪಟ್ಟಣದಲ್ಲಿ ಉಳಿದಿದ್ದವನು. ಅವನೇ ಈಗ ಹುಡುಗುತನದಿಂದ ನಮ್ಮನ್ನಿದಿರಿಸುವುದಕ್ಕಾಗಿ ಬಂದಿರುವನೇಹೊರತು ಅವನಲ್ಲಿ ಅಷ್ಟು ಪೌರುಷವಿಲ್ಲ. ಚಪಲ ಬುದ್ಧಿಯಿಂದ ಆ ವಿರಾಟಪುತ್ರನು ಯಾವನೋ ನಪುಂಸಕನೊಬ್ಬನನ್ನು ಸಾರಥಿಯನ್ನಾಗಿಟ್ಟುಕೊಂಡು ಪಟ್ಟಣದಿಂದ ಹೊರಟುಬಿಟ್ಟಿರಬೇಕು. ಆದರೆ, ನಪುಂಸಕವೇಷದಿಂದ ತನ್ನನ್ನು ಮರೆಸಿಕೊಂಡು ಓಡಿಹೋಗುತ್ತಿರುವವನು ಅರ್ಜುನನೆಂದೇ ನಾವು ನಿಶ್ಚಯಿಸಬಹುದಾಗಿಯೂ ಇದೆ. ಮತ್ಸ್ಯದೇಶದವರೆಲ್ಲರೂ ಒಂದಾಗಿ ಸೇರಿದರೂ ನಮ್ಮನ್ನು ಯುದ್ಧದಲ್ಲಿ ಇದಿರಿಸಿ ನಿಲ್ಲಲು ಸಮರ್ಥರಲ್ಲ. ಹೀಗಿರುವಾಗ ಅವರಲ್ಲಿ ಏಕಾಕಿಯಾದ ಈ ವಿರಾಟಪುತ್ರನು, ಎಲ್ಲಾ ಕುರುಗಳನ್ನೂ ಇದಿರಿಸಿ ಹೇಗೆತಾನೇ ಯುದ್ಧಕ್ಕೆ ಬರುವನು? ಆ ಉತ್ತರನೇ ಅವನನ್ನು ಸಾರಥಿಯನ್ನಾಗಿ ಮಾಡಿಕೊಂಡು ನಗರದಿಂದ ಬಂದುಬಿಟ್ಟರೂ, ಈಗ ನಮ್ಮ ಧ್ವಜವನ್ನು ನೋಡಿದ ಮಾತ್ರಕ್ಕೇ ಭಯಪಟ್ಟು ಓಡಿಹೋಗುತ್ತಿರುವನು" ಎಂದನು. ಆಗ ಕೃಪನು ಕೌರವರನ್ನು ನೋಡಿ "ಹೌದು! ಈಗ ನಾವು ಊಹಿಸಿದುದೇ ನಿಜವು. ಭಯದಿಂದ ಓಡುತ್ತಿರುವ ಆ ಉತ್ತರನನ್ನು ಹಿಡಿಯು

ವುದಕ್ಕಾಗಿಯೇ, ಅರ್ಜುನನು ಅವನನ್ನು ಹಿಂಬಾಲಿಸಿ ಓಡುತ್ತಿರುವನು. ಇಷ್ಟುಮಾತ್ರವಲ್ಲ, ಉತ್ತರನನ್ನೇ ಸಾರಥಿಯನ್ನಾಗಿ ಮಾಡಿಕೊಂಡು, ತಾನೇ ಯುದ್ಧಮಾಡಬೇಕೆಂದೂ ಅವನು ಉದ್ದೇಶಿಸುವನು" ಎಂದನು.

ಓ ಜನಮೇಜಯರಾಜಾ! ಹೀಗೆ ಕೌರವಸೈನ್ಯದಲ್ಲಿ ಒಬ್ಬೊಬ್ಬರು ಬೇರೆಬೇರೆಯಾಗಿ ಗುಂಪುಕೂಡಿ ವಿಚಾರಮಾಡುತ್ತಿದ್ದರೂ, ಅವನೇ ಅರ್ಜುನನೆಂದು ದೃಢವಾಗಿ ನಿಶ್ಚಯಿಸಲಾರದೆ ಹೋದರು. ಆಗ ದುರ್ಯೋಧನನು ತನ್ನ ಸೈನ್ಯದಲ್ಲಿದ್ದ ರಥಿಕರನ್ನು ನೋಡಿ, "ಎಲೈ ಮಹಾರಥರೇ, ಈಗ ಆ ವಿಚಾರಗಳಿಂದೇನು? ಅವನು ಅರ್ಜುನನಾದರೇನು? ಅಥವಾ ವಾಸುದೇವನಾದರೇನು? ರಾಮನಾದರೇನು? ಅಥವಾ ಪ್ರದ್ಯುಮ್ನನಾದರೇನು? ಅವರು ಯಾರೇ ಆದರೂ ಯುದ್ಧದಲ್ಲಿ ನಮ್ಮನ್ನಿದಿರಿಸುವುದಕ್ಕೆ ಶಕ್ತರಾಗಲಾರರು. ಹಾಗಿದ್ದರೂ ಈಗ ಬೇರೆ ಯಾವನಾದರೊಬ್ಬನು ನಪುಂಸಕ ವೇಷದಿಂದ ಗೋವುಗಳಿದ್ದ ಸ್ಥಾನಕ್ಕೆ ಕಾಲಿಟ್ಟರೆ, ಒಡನೆಯೇ ಅವನನ್ನು ನಾವು ತೀಕ್ಷ್ಣಬಾಣಗಳಿಂದ ತಿವಿದು ನೆಲಕ್ಕೆ ಉರುಳಿಸಿಬಿಡುವೆವು. ಒಬ್ಬನು ಏಕಾಕಿಯಾಗಿ ಬಂದು ಎಲ್ಲಾ ಕುರುಗಳನ್ನೂ ಇದಿರಿಸುವುದಕ್ಕೆ ಹೇಗೆ ಸಮರ್ಥನಾದಾನು?" ಎಂದನು.

ಎಲೈ ಜನಮೇಜಯರಾಜನೇ! ಹೀಗೆ ಕೌರವಸೈನಿಕರು ವೇಷಾಂತರದಿಂದ ಬಂದಿದ್ದ ಅರ್ಜುನನನ್ನು ಕಂಡು, ಅವನು ನಿಜವಾಗಿ ಅರ್ಜುನನೇಯೋ ಅಲ್ಲವೋ ಎಂದು ಸಂದೇಹಿಸುತ್ತಿದ್ದರೇಹೊರತು ಯಾರಿಗೂ ನಿಶ್ಚಯಜ್ಞಾನವು ಹುಟ್ಟಲಿಲ್ಲ. ಕೌರವರೆಲ್ಲರೂ ಹೀಗೆ ತಿರುಗಿತಿರುಗಿ ಅನುಮಾನದಿಂದ ವಿಚಾರಮಾಡುತ್ತಿದ್ದು, ತಮ್ಮೊಳಗೆ ಒಬ್ಬರಿಗೊಬ್ಬರು "ಆ ಅರ್ಜುನನಾದರೋ ಮಹಾಬಲವುಳ್ಳವನು. ದೃಢವಾದ ಬಾಣಪ್ರಯೋಗವುಳ್ಳವನು. ಆ ಅರ್ಜುನನೇ ಈಗ ನಮಗಿದಿರಾಗಿ ಬರುವಪಕ್ಷದಲ್ಲಿ, ನಮ್ಮ ಸಮಸ್ತ ಸೈನ್ಯವೂ ಪ್ರಾಣದಿಂದುಳಿಯುವುದು ಸಂದೇಹವೇ" ಎಂದು ಹೇಳಿಕೊಳ್ಳುತ್ತಿದ್ದರು. ಆದರೆ, ಅರ್ಜುನನಲ್ಲದೆ ಬೇರೊಬ್ಬನು ಬರಲಾರನೆಂದೂ ಅವರಿಗೆ ನಿಶ್ಚಯವು ಹುಟ್ಟಿತು. ಅತ್ತಲಾಗಿ ಅರ್ಜುನನಾದರೋ ಓಡುತ್ತಿರುವ ಉತ್ತರನನ್ನು, ನೂರಡಿಗಳ ವರೆಗೆ ಬೆನ್ನಟ್ಟಿ ಹೋಗಿ ಅವನ

ತಲೆಕೂದಲಿಗೆ ಕೈಹಾಕಿ ಅವನನ್ನು ಹಿಡಿದುಬಿಟ್ಟನು. ಹೀಗೆ ಸಿಕ್ಕಿಬಿದ್ದ ಉತ್ತರನು "ಬೃಹನ್ನಳೇ! ಬೇಡಬೇಡ. ನನ್ನನ್ನು ಹಿಡಿಯಬೇಡ. ನಿನಗೆ ಮಂಗಳವಾಗಲಿ. ನಾನು ನಿನ್ನ ದಾಸನಾಗಿರುವೆನು" ಎಂದು ಹೇಳುತ್ತಾ, ತಿರುಗಿ ಅವನ ಕೈಯನ್ನು ಬಿಡಿಸಿಕೊಂಡು ಓಡುತ್ತಿರಲು, ಅರ್ಜುನನು ತಿರುಗಿ ಅವನನ್ನು ಫಕ್ಕನೆ ಹಿಡಿದುಕೊಂಡನು. ಆಗ ಉತ್ತರನು ಅರ್ಜುನನ ಕೈಯಿಂದ ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲದೆ, ಅತಿ ದೈನ್ಯದಿಂದ ನಾನಾವಿಧವಾಗಿ ರೋದಿಸತೊಡಗಿದನು. ಅರ್ಜುನನಿಗೆ ಹೆಚ್ಚು ಧನವನ್ನು ಕೊಡುವುದಾಗಿಯೂ ಆಶೆತೋರಿಸಿದನು. "ಓ ಬೃಹನ್ನಳೇ! ಬಂಗಾರವನ್ನಾಗಲಿ, ರತ್ನಗಳನ್ನಾಗಲಿ, ಮುತ್ತುಗಳನ್ನಾಗಲಿ, ನೀನು ಯಾವುದನ್ನು ಅಪೇಕ್ಷಿಸುವೆಯೋ ಅವೆಲ್ಲವನ್ನೂ ಕೊಡುವೆನು. ಆನೆಗಳನ್ನೂ, ಕುದುರೆಗಳನ್ನೂ, ರಥಗಳನ್ನೂ, ಅಲಂಕೃತರಾದ ಸ್ತ್ರೀಯರನ್ನೂ, ಗೋವುಗಳನ್ನೂ, ಕೊಡುವೆನು. ಶುದ್ಧಭಂಗಾರದ ನಾಣ್ಯಗಳನ್ನಾಗಲಿ, ನೂರಾರು ಬೆಳ್ಳಿಯನಾಣ್ಯಗಳನ್ನಾಗಲಿ, ನೂರಾರು ವರಹಗಳನ್ನಾಗಲಿ ನಿನಗೆ ಕೊಡುವೆನು. ಒಳ್ಳೇ ಅಲಂಕೃತರಾದ ಅರುವತ್ತು ಮಂದಿ ಕನ್ಯೆಯರನ್ನೂ, ಒಂದು ಗ್ರಾಮವನ್ನೂ ನಿನಗೆ ಕೊಟ್ಟುಬಿಡುವೆನು. ಬಹಳ ದೀನನಾಗಿ, ಭಯದಿಂದ ನಡುಗುತ್ತಿರುವ ನನ್ನನ್ನು ಬಿಟ್ಟುಕೊಡು. ಭಂಗಾರದಲ್ಲಿ ಕೆತ್ತಿದ ಒಳ್ಳೇ ಪ್ರಕಾಶವುಳ್ಳ ಎಂಟು ವೈಡೂರ್ಯಗಳನ್ನೂ ನಿನಗೆ ಕೊಡುವೆನು. ಸುವರ್ಣದಂಡಗಳಿಂದ ಶೋಭಿತವಾದ ಒಂದು ಉತ್ತಮ ರಥವನ್ನು ಕುದುರೆಗಳಸಹಿತವಾಗಿಯೇ ನಿನಗೆ ಕೊಟ್ಟುಬಿಡುವೆನು. ಒಳ್ಳೇ ಮದವುಳ್ಳ ಹತ್ತು ಆನೆಗಳನ್ನು ನಿನಗೆ ಕೊಡುವೆನು. ಓ ಬೃಹನ್ನಳೆ! ನನ್ನನ್ನು ಬಿಟ್ಟುಬಿಡು. ಆ ನನ್ನ ತಾಯಿಯನ್ನು ನೋಡುವುದಕ್ಕೆ ನಾನು ಪಟ್ಟಣಕ್ಕೆ ಹೋಗುವೆನು. ಎಲೈ ನಪುಂಸಕನೇ! ನನ್ನ ತಾಯಿಗೆ ನಾನೊಬ್ಬನೇ ಮಗನು. ಇದಕ್ಕಿಂತ ನಾನು ಬೇರೆ ಏನನ್ನು ಹೇಳಲಿ? ಆ ಕೆಟ್ಟ ದೈವವು ಇಂತಹ ಕಾಲದಲ್ಲಿ ನನ್ನನ್ನು ನಿನ್ನ ಕೈಯಲ್ಲಿ ಸಿಕ್ಕಿಸಿಬಿಟ್ಟಿದೆಯಲ್ಲವೇ? ಓ ಬೃಹನ್ನಳೇ! ನಾನು ಮತ್ಸ್ಯರಾಜನ ಮುದ್ದು ಮಗನು! ಇನ್ನೂ ಬಾಲನು! ನನ್ನ ತಂದೆಯು ನನ್ನನ್ನು ಎಷ್ಟೋ ಪ್ರೀತಿಸುತ್ತಿರುವನು. ನನ್ನ ತಾಯಿಯು ನನ್ನನ್ನು ತನ್ನ ಪಕ್ಕದಲ್ಲಿಯೇ ಮಲಗಿಸಿಕೊಳ್ಳುತ್ತಿರು



ಕೌರವ ಸೈನ್ಯವನ್ನು ಕಂಡು ಭಯಪಟ್ಟು, ರಥದಿಂದ ಧುಮುಕಿ ಓಡಿಹೋಗುತ್ತಿದ್ದ ಉತ್ತರನನ್ನು ಅರ್ಜುನನು ಬೆನ್ನಟ್ಟಿ ಹಿಡಿದುದು.

ವಳು. ಬಿಸಿಲಾಗಲಿ, ಗಾಳಿಯಾಗಲಿ, ನನ್ನ ಮೈಗೆ ತಾಗಿದುದಿಲ್ಲ. ಮಕ್ಕಳ ಜಗಳವನ್ನಾಗಲಿ ಇದುವರೆಗೆ ನಾನು ಕಣ್ಣಿಂದ ನೋಡಿದವನಲ್ಲ. ನಾನೆಲ್ಲಿ! ಆ ಕೌರವರೆಲ್ಲಿ! ನಾನು ತಾಯಿಯ ಬಳಿಗೆ ಹೋಗುವೆನು. ಬೃಹನ್ನಳೇ! ನನ್ನನ್ನು ಬಿಟ್ಟುಬಿಡು. ಅದೋ! ಆ ಕೌರವಸೈನ್ಯವು ಪ್ರಳಯಸಮುದ್ರದಂತೆ ಭಯಂಕರವಾಗಿ ಕಾಣುತ್ತಿರುವುದು. ನಾನು ಅಜ್ಞಾನವಶದಿಂದ ಆ ಹೆಂಗಸರನಡುವೆ ಇಲ್ಲದ ವೀರ್ಯವನ್ನೂ, ಶೌರ್ಯವನ್ನೂ ಹೇಳಿಕೊಂಡು ಮಾತಾಡಿಬಿಟ್ಟೆನು. ಪ್ರಾಯದ ಕೆಚ್ಚಿನಿಂದ ಬಾಯಿಗೆ ಬಂದಹಾಗೆ ಹರಟಿದೆನು. ಅಯ್ಯೋ! ಆ ಕೌರವರನ್ನು ಜಯಿಸುವುದಕ್ಕೆ ಯಾವನು ತಾನೇ ಶಕ್ತನು? ಓ ಬೃಹನ್ನಳೇ! ನೀನು ನನ್ನನ್ನು ಬಿಡದೆ ಆ ಸೈನ್ಯಕ್ಕೆದಿರಾಗಿ ಕರೆದುಕೊಂಡು ಹೋಗುವುದಾದರೆ, ಇಲ್ಲಿಯೇ ನಿನ್ನಮುಂದೆ ಪ್ರಾಣಗಳನ್ನು ಬಿಡುವೆನು" ಎಂದನು.

ಎಲೈ ಜನಮೇಜಯರಾಜನೆ ಕೇಳು! ಉತ್ತರನು ಈ ರೀತಿಯಾಗಿ ದೈನ್ಯದ ಮಾತುಗಳನ್ನಾಡಿ, ಮೈಮೇಲೆ ಪ್ರಜ್ಞೆತಪ್ಪಿದವನಂತೆ ಗೋಳಿಡುತ್ತಿದ್ದರೂ, ಪುರುಷಶ್ರೇಷ್ಠನಾದ ಅರ್ಜುನನು ಬಲಾತ್ಕಾರದಿಂದ ಹಿಡಿದುಕೊಂಡು ಬಂದು ರಥದಬಳಿಗೆ ಸೇರಿಸಿದನು. ಆಮೇಲೆ ಭಯದಿಂದ ಮೈಮರೆತು ನಿಂತಿದ್ದ ಆ ಉತ್ತರನನ್ನು ನೋಡಿ ಅರ್ಜುನನು "ಉತ್ತರಾ! ಹಿಂದೆ ನೀನೇ ನನ್ನನ್ನು ನೋಡಿ 'ನೆಪಮಾತ್ರಕ್ಕೆ ನೀನು ಸಾರಥಿಯಾಗಿರು. ನಾನು ಕೌರವರನ್ನು ನೋಡಿಕೊಳ್ಳುವೆನು' ಎಂದು ನನಗೆ ಧೈರ್ಯವನ್ನು ಹೇಳಿ ಕರೆತಂದು, ಈಗ ಹೀಗೆ ಓಡಿಹೋಗುವುದೆಂದರೇನು? ನಡೆ! ಕೌರವರೊಡನೆ ಯುದ್ಧಮಾಡು. ನಿನಗೆ ನಿಜವಾಗಿಯೂ ಜಯವುಂಟಾಗುವುದು. ಅಷ್ಟೇಕೆ? ಒಂದು ರಹಸ್ಯವನ್ನು ಹೇಳುವೆನು ಕೇಳು. ನಾನು ಯಾರಿಗೆ ಸಾರಥಿಯಾಗಿದ್ದು, ಕುದುರೆಗಳ ಕಡಿವಾಣವನ್ನು ಹಿಡಿಯುವೆನೋ ಅವನು ರಾಜನಾಗಿರಲಿ, ರಾಜಪುತ್ರನಾಗಿರಲಿ, ಅವನಿಗೆ ಯುದ್ಧದಲ್ಲಿ ಜಯವು ನಿಶ್ಚಯವು. ಉತ್ತರಾ! ಸಾರಥಿಯಾದ ನನ್ನ ಸಹಾಯದಿಂದ ನೀನು ಕುರುಗಳೊಡನೆ ಹೇಗೆಬೇಕಾದರೂ ಯುದ್ಧ ಮಾಡು. ರಾಜ್ಯವನ್ನು ಜಯಿಸಿ, ಒಳ್ಳೇ ಕೀರ್ತಿಯನ್ನು ಪಡೆದು, ಈ ಸಮಸ್ತ ಭೂಮಿ

ಯನ್ನೂ ಅನುಭವಿಸುವೆ. ನೀನು ಜಯಿಸಿಬಂದರೆ ರಾಜ್ಯಸುಖವುಂಟು. ಒಂದುವೇಳೆ ಯುದ್ಧದಲ್ಲಿ ಸತ್ತರೂ ಸ್ವರ್ಗಸುಖವನ್ನು ಪಡೆಯುವೆ. ರಣರಂಗದಿಂದ ಪಲಾಯನಮಾಡುವುದೇನೂ ಸರ್ವಥಾ ಶ್ರೇಯಸ್ಕರವಲ್ಲ. ಓ ರಾಜಕುಮಾರಾ! ನೀನು ಈಗಲೇ ಈ ಕುರುಗಳೆಲ್ಲರನ್ನೂ ಓಡಿಸಿ, ಜಯ ಹೊಂದುವುದಕ್ಕೆ ತಕ್ಕಂತೆ ನಾನು ಪ್ರಯತ್ನಿಸುವೆನು. ಇಲ್ಲಿ ನಾನು ನಿನಗೆ ಸಹಾಯಕನಾಗಿರುವೆನಲ್ಲವೇ? ಒಂದುವೇಳೆ ಶತ್ರುಗಳೊಡನೆ ಯುದ್ಧ ಮಾಡುವುದಕ್ಕೆ ನಿನಗೆ ಇಷ್ಟವಿಲ್ಲದಿದ್ದರೆ, ನನಗೆ ಸಾರಥಿಯಾಗಿದ್ದು ಕುದುರೆಗಳನ್ನಾದರೂ ನಡೆಸು. ನಾನು ಶತ್ರುಗಳೊಡನೆ ಯುದ್ಧಮಾಡುವೆನು. ನನ್ನ ಬಾಹುಬಲದಿಂದ ರಕ್ಷಿತನಾದ ನೀನು ಇತರರಿಗೆ ದುರ್ಜಯವಾಗಿಯೂ, ಭಯಂಕರವಾಗಿಯೂ, ಭಯಂಕರಪರಾಕ್ರಮವುಳ್ಳ ರಥಿಕರಿಂದ ರಕ್ಷಿತವಾಗಿಯೂ ಇರುವ ಆ ಸೈನ್ಯಕ್ಕೆದಿರಾಗಿ ಹೊರಡು. ರಾಜಕುಮಾರಾ! ಭಯಪಡಬೇಡ! ಶತ್ರುಗಳನ್ನು ನಾಶಮಾಡತಕ್ಕ ಕ್ಷತ್ರಿಯಜಾತಿಯಲ್ಲಿ ಹುಟ್ಟಿದವನಲ್ಲನೇ ನೀನು? ಆ ಕುರುಗಳೊಡನೆ ನಾನೇ ಯುದ್ಧಮಾಡಿ ನಿನ್ನ ಗೋವುಗಳನ್ನು ಹಿಂತಿರುಗಿಸಿಕೊಂಡು ಬರುವೆನು. ನಡೆ! ಬೇಗನೆ ರಥವನ್ನೇರು! ನನಗೆ ನೀನು ಸಾರಥಿಯಾಗು. ಯುದ್ಧಪ್ರಚಂಡರಾದ ಶೂರರೆಲ್ಲರನ್ನೂ ನಾನು ನಿಮಿಷಮಾತ್ರದಲ್ಲಿ ಯಮಪುರಿಗೆ ಕಳುಹಿಸುವೆನು'' ಎಂದನು. ಹೀಗೆಂದು ಹೇಳುತ್ತ ಅರ್ಜುನನು, ವಿರಾಟಪುತ್ರನಾದ ಉತ್ತರನಿಗೆ ಧೈರ್ಯವನ್ನು ಹೇಳಿ ಉತ್ಸಾಹಗೊಳಿಸಿದನು. ಉತ್ತರನಾದರೋ, ಮನಸ್ಸಿನಲ್ಲಿ ಭಯದಿಂದ ನಿಂತನೆಲೆಯಲ್ಲಿ ನಿಲ್ಲದೆ, ಅತ್ತಿತ್ತ ಹೊರಳಾಡುತ್ತಿರುವನು. ಅವನಿಗೆ ಈ ಪ್ರಪಂಚವೇ ಬೇಡವಾಗಿದ್ದಿತು. ಅವನು ಗಟ್ಟಿಯಾಗಿ ಅಳುತಿದ್ದನು. ಈ ಸ್ಥಿತಿಯಲ್ಲಿ ಅರ್ಜುನನು ತಾನೇ ಅವನನ್ನೆತ್ತಿ ರಥದಲ್ಲಿ ಕುಳ್ಳಿರಿಸಿದನು. ಮತ್ತು ಅವನಿಗೆ ಇನ್ನೂ ಅನೇಕವಿಧವಾಗಿ ಸಮಾಧಾನಹೇಳಿ ತನ್ನ ಸಾರಥಿಯಾಗಿರಲು ಅವನನ್ನೊಪ್ಪಿಸಿದನು. ಆಮೇಲೆ, ರಥವನ್ನೇರಿ, ತನ್ನ ಗಾಂಡೀವಧನುಸ್ಸನ್ನಿಟ್ಟಿದ್ದ ಬನ್ನಿಯಮರದ ಬಳಿಗೆ ಬಂದನು.

ಇದು ಮೂವತ್ತೊಂಭತ್ತನೆಯ ಅಧ್ಯಾಯವು.

ಅರ್ಜುನನ ನಿರ್ಬಂಧದಿಂದ ಉತ್ತರನು ಬನ್ನಿಯುಮರದ ಮೇಲೇರಿ ಆಯುಧಗಳನ್ನು ತೆಗೆದುಕೊಟ್ಟುದು.

ಓ ಜನಮೇಜಯರಾಜೇಂದ್ರಾ! ಹೀಗೆ ನಪುಂಸಕವೇಷದಿಂದ ತನ್ನ ರೂಪವನ್ನು ಮರೆಸಿಕೊಂಡಿದ್ದ ಅರ್ಜುನನು, ಉತ್ತರನನ್ನು ರಥದ ಮೇಲೇರಿಸಿಕೊಂಡು, ತಾನೂ ರಥದಲ್ಲಿ ಕುಳಿತು, ರಥಿಕೋತ್ತಮನಂತೆ ಕಾಣುತ್ತ, ಬನ್ನಿಯ ಮರದಕಡೆಗೆ ಹೋಗುತ್ತಿರುವುದನ್ನು, ಕೌರವಸೈನ್ಯದಲ್ಲಿ ರಥಿಕ ಶ್ರೇಷ್ಠರೆನಿಸಿದ ಭೀಷ್ಮದ್ರೋಣಾದಿಗಳೆಲ್ಲರೂ ನೋಡಿದರು. ಮೊದಲಿಂದಲೂ ಅರ್ಜುನನ ವಿಷಯದಲ್ಲಿ ತಮಗಿದ್ದ ಬೆಜ್ಜರದಿಂದ ಎಲ್ಲರಿಗೂ ಅಂಜಿಕೆ ಹುಟ್ಟಿತು. ಈ ಭಯದಿಂದ ಕೌರವಸೈನಿಕರಿಗೆಲ್ಲ ಯುದ್ಧದಲ್ಲಿ ಉತ್ಸಾಹವಿಲ್ಲದಿರುವುದನ್ನೂ, ಅಲ್ಲಲ್ಲಿ ಆಶ್ಚರ್ಯಕರಗಳಾಗಿ ತೋರುತ್ತಿರುವ ಉತ್ಪಾತಗಳನ್ನೂ ನೋಡಿ, ಶಸ್ತ್ರಧಾರಿಗಳಲ್ಲಿ ಮೇಲೆನಿಸಿದ ದ್ರೋಣಾಚಾರ್ಯನು ಕೌರವರನ್ನು ಸಂಬೋಧಿಸಿ ಹೀಗೆಂದು ಹೇಳುವನು. "ಎಲೈ ವೀರರೇ! ನಮ್ಮ ಮುಂದೆ ಕಾಣಿಸುತ್ತಿರುವ ಭಯಂಕರಗಳಾದ ಉತ್ಪಾತಗಳನ್ನು ನೋಡಿರಿ. ಗಾಳಿಯು ಸುಖಸ್ಪರ್ಶವನ್ನು ಬಿಟ್ಟು, ಭಯಂಕರವಾಗಿ ಮೊರೆಯುತ್ತ ಕ್ರೂರವಾಗಿ ಬೀಸುತ್ತಿರುವುದು. ಆಕಾಶದಿಂದ ಊದಿಯ ಮಳೆಯು ಬಿದ್ದಂತೆ ಒಂದು ವಿಧವಾದ ಮಬ್ಬು ಅಂತರಿಕ್ಷವನ್ನೆಲ್ಲ ಆವರಿಸಿದೆ! ಅದೋ! ಮೇಘಗಳು ವಿಕಾರವರ್ಣದಿಂದ ನೋಡುವುದಕ್ಕೆ ಆಶ್ಚರ್ಯವನ್ನುಂಟುಮಾಡುತ್ತಿವೆ. ನಮ್ಮ ಶಸ್ತ್ರಗಳು ಒರೆಗಳಿಂದ ತಾವಾಗಿ ಸಡಿಲಿಬೀಳುತ್ತಿರುವುವು. ಅದೋ! ದಿಕ್ಕುಗಳೆಲ್ಲ ಉರಿಯುವಂತೆ ಕಾಣುತ್ತ, ಅಲ್ಲಲ್ಲಿ ನರಿಗಳು ಭಯಂಕರಧ್ವನಿಯಿಂದ ಗೋಳಿಡುತ್ತಿರುವುವು. ನಮ್ಮ ಕುದುರೆಗಳು ಇದ್ದಕ್ಕಿದ್ದಹಾಗೆ ಕಣ್ಣೀರನ್ನು ಸುರಿಸುತ್ತಿರುವುವು. ಗಾಳಿ ಮುಂತಾದ ಕಾರಣಗಳೇನೂ ಇಲ್ಲದೆಯೇ, ಧ್ವಜಗಳು ನಡುಗುತ್ತಿರುವುವು. ಈ ಮುಂದೆ ಕಾಣುವ ದುರ್ನಿಮಿತ್ತಗಳನ್ನು ನೋಡಿದರೆ, ಮುಂದೆ ಭಯಂಕರವಾದ ಒಂದು ಯುದ್ಧವು ನಮ್ಮನ್ನು ಇದಿರುನೋಡುತ್ತಿರುವುದಾಗಿ ತೋರುವುದು. ನೀವೆಲ್ಲರೂ ಎಚ್ಚರಿಕೆಯಿಂದಿರಿ! ನಮ್ಮ ರಾಜನನ್ನು ನಿರಪಾಯವಾಗಿ ಕಾಪಾಡಿಕೊಳ್ಳಿರಿ! ನಿಮ್ಮ ಸೈನ್ಯಗಳನ್ನು ವ್ಯೂಹರೂಪ

ವಾಗಿ ನಿಲ್ಲಿಸಿರಿ. ಏನೋ ಮಹಾವಿಪತ್ತು ನಮಗಿದಿರಾಗಿರುವುದೆಂದು ಭಾವಿಸಿರಿ. ಗೋಧನವನ್ನು ರಕ್ಷಿಸಿಕೊಳ್ಳಿರಿ! ಮಹಾಧನುರ್ಧರನೂ, ಎಲ್ಲಾ ಶಸ್ತ್ರಧಾರಿಗಳಲ್ಲಿ ಮೇಲೆನಿಸಿದವನೂ, ವೀರನೂ ಆದ ಆ ಅರ್ಜುನನೇ ನಪುಂಸಕವೇಷದಿಂದ ಇಲ್ಲಿಗೆ ಬಂದಿರುವನು. ಇದರಲ್ಲಿ ಸಂದೇಹವೇ ಇಲ್ಲ'' ಎಂದು ಹೇಳಿ, ಭೀಷ್ಮನ ಕಡೆಗೆ ತಿರುಗಿ, '' ಎಲೈ ಗಂಗಾಪುತ್ರನೆ! (ಲಂಕೇಶ್ವರನಾದ ರಾವಣನ ಅಶೋಕವನಕ್ಕೆ ವೈರಿಯಾದ) ಹನುಮಂತನನ್ನು ಧ್ವಜದಲ್ಲಿ ಉಳ್ಳವನೂ, (ಅರ್ಜುನವೆಂಬ) ಪೃಕ್ಷಪರ್ಯಾಯವಾದ ಹೆಸರುಳ್ಳವನೂ, ಇಂದ್ರಪುತ್ರನೂ, ನಡತೆಯಲ್ಲಿ ದೇವರಾಜನಂತೆಯೂ, ಒಂದೊಂದು ಸಮಯದಲ್ಲಿ ಹೆಂಗಸಿನಂತೆಯೂ ಕಾಣುವ ಧೀರನು (ಅದೋ ಬಂದಿರುವನು)'' ಎಂಬೀ ವಾಕ್ಯಗಳನ್ನು (ಬೇರೆಯವರಿಗೆ ಅರ್ಥವಾಗದಂತಿರುವ) *ಸಂಜ್ಞೆಯ ಮಾತಿನಿಂದ ಅವನಿಗೆ ತಿಳಿಸಿದನು.

ಓ ಜನಮೇಜಯರಾಜನೇ! ದ್ರೋಣಾಚಾರ್ಯನು ಹೀಗೆಂದು ಹೇಳಿ ಸುಮ್ಮನಾದಮೇಲೆ ಭೀಷ್ಮನು, ದ್ರೋಣನ ಮಾತಿಗೆ ಉತ್ತರವಾಗಿ, ತಾನೂ ಸಂಜ್ಞೆಯಿಂದ ಹೀಗೆಂದು ಹೇಳುವನು. '' ನಾವು ನಮ್ಮ ರಾಜ್ಯದ ಎಲ್ಲೆಯನ್ನು ದಾಟಿ ಈಗ ಇತರರಾಜ್ಯಕ್ಕೆ ಬಂದು ಸೇರಿರುವೆವು. ಹಿಂದೆ ನಾವು ಸಭೆಯಲ್ಲಿ ಸೂಚಿಸಿದ್ದ (ಪಾಂಡವರ ಅಜ್ಞಾತವಾಸದ) ಕಾಲಾವಧಿಯೂ ಕಳೆದುಹೋಯಿತು. ಇನ್ನು (ಅವರು) ಶತ್ರುಗಳಿಂದ ಭಯಪಡಬೇಕಾಗಿಲ್ಲ. ಓ ಪುರುಷಶ್ರೇಷ್ಠನೇ! (ಪಾಂಡವರಿಗೆ ಅಪಾಯವುಂಟಾಗುವುದೆಂಬ) ಶಂಕೆಯನ್ನು ಬಿಡು'' ಎಂದನು. (ಪಾಂಡವರಿಗೆ) ಹಿತೈಷಿಯಾದ ಭೀಷ್ಮನು ಹೇಳಿದ ಈ ಮಾತನ್ನು ಕೇಳಿ ದ್ರೋಣನು ದುರ್ಯೋಧನನನ್ನು ನೋಡಿ '' ರಾಜಾ! ಮಹಾಧನುರ್ಧಾರಿಯೂ, ಶಸ್ತ್ರಧಾರಿಗಳಲ್ಲಿ ಮೇಲೆನಿಸಿದವನೂ, ವೀರನೂ ಆದ ಅರ್ಜುನನೇ ನಪುಂಸಕವೇಷದಿಂದ ಇಲ್ಲಿಗೆ ಬಂದಿರುವನು. ಇದರಲ್ಲಿ ಸಂದೇಹವೇ ಇಲ್ಲ. ಮಹಾಪರಾಕ್ರಮಿಯೂ, ಸವ್ಯಸಾಚಿಯೆಂದು ಹೆರಸುಗೊಂಡವನೂ, ಶತ್ರುನಿಗ್ರಾಹಕನೂ

* ನದೀಜಲಂ ಕೇಶವನಾರಿಕೇತುರ್ನಗಾಹ್ವಯೋನಾಮ ನಗಾರಿಸೂನುಃ | ಗತ್ಯಾಸುರೇಶಃ ಕ್ವಚಿದಂಗನೇವ ಗುರುರ್ಬಭಾಷೇ ವಚನಂ ತದಾನೀಂ || ಎಂಬು ಇಲ್ಲಿನ ಸಂಜ್ಞಾಶ್ಲೋಕವು.

ಆದ ಅರ್ಜುನನೇ ಈತನು! ಬೇರೆ ಎಲ್ಲಾ ರಾಜರನ್ನೂ ಜಯಿಸಬಲ್ಲ ಕೌರವರಾದರೂ ಇವನಿಂದ ಕೊಲ್ಲಲ್ಪಡತಕ್ಕವರೇ! ಯಾವನು ಹುಟ್ಟಿದೊಡನೆ ಈ ಸಮಸ್ತ ಭೂಮಿಯೂ ಅಧಿಕಾಹ್ಲಾದವನ್ನು ಹೊಂದಿತೋ, ಯಾವನು ತನ್ನ ವೀರ್ಯದಿಂದ ದ್ರುಪದನನ್ನು ಕಟ್ಟತಂದು, ನನಗೆ ಗುರುದಕ್ಷಿಣೆಯಾಗಿ ಒಪ್ಪಿಸಿದನೋ, ಯಾವನು ಹಿಂದೆ ದ್ರುಪದರಾಜನ ಪಟ್ಟಣದಲ್ಲಿ ಆಕಾಶದಲ್ಲುನ್ನತ ಮತ್ಸ್ಯಯಂತ್ರವನ್ನು ಭೇದಿಸಿ, ತನಗೆ ಇದಿರಾದ ರಾಜರೆಲ್ಲರನ್ನೂ ಸೋಲಿಸಿ, ಸ್ವಯಂವರದಲ್ಲಿ ಪಾಂಚಾಲಪುತ್ರಿಯನ್ನು ಸಾಧಿಸಿದನೋ, ಯಾವನು ದೇವಾಸುರರೆಲ್ಲರನ್ನೂ ಜಯಿಸಿ ಖಾಂಡವವನದಲ್ಲಿ ಅಗ್ನಿದೇವನನ್ನು ತೃಪ್ತಿಗೊಳಿಸಿದನೋ, ಯಾವನು ಯಾದವರನ್ನು ಜಯಿಸಿ ಸುಭದ್ರೆಯನ್ನು ಮದುವೆಯಾದನೋ, ಯಾವನು ತ್ರಿಪುರಸಂಹಾರಿಯೂ, ಕಾಮನಿರೋಧಿಯೂ ಆದ ರುದ್ರನನ್ನು ಕಾಳಗದಲ್ಲಿ ಗೆದ್ದನೋ, ಯಾವನು ಸ್ವರ್ಗಕ್ಕೆ ಹೋಗಿ ಅಲ್ಲಿ ಇಂದ್ರನನ್ನು ಜಯಿಸಿದ ನಿವಾತಕವಚರೆಂಬ ಮೂರುಕೋಟಿ ದಾನವರನ್ನು ಜಯಿಸಿದನೋ, ಯಾವನು ಹಿರಣ್ಯಪುರವಾಸಿಗಳಾದ ಕಾಲಕೇಯರನ್ನು ಜಯಿಸಿದನೋ, ಓ ದುರ್ಯೋಧನ ರಾಜಾ! ಅಷ್ಟೇಕೆ? ಹಿಂದೆ ದ್ವೈತವನದಲ್ಲಿ ಚಿತ್ರಸೇನನೆಂಬ ಗಂಧರ್ವನಿಂದ ಹಿಡಿದು ಕಟ್ಟಲ್ಪಟ್ಟ ನಿನ್ನನ್ನು ಯಾವನು ಬಿಡಿಸಿದನೋ, ಯಾವನು ಮೇರುವಿನ ಉತ್ತರಭಾಗಕ್ಕೆ ಹೋಗಿ, ಅನೇಕ ರಾಜರನ್ನು ಜಯಿಸಿ, ಮಹತ್ತಾದ ಧನರಾಶಿಯನ್ನು ತಂದು ಧರ್ಮರಾಜನಿಗೆ ಒಪ್ಪಿಸಿದನೋ, ಯಾವನಲ್ಲಿ ಶೌರ್ಯ, ವೀರ್ಯ, ಧೈರ್ಯ, ಗಾಂಭೀರ್ಯ, ಔದಾರ್ಯ, ಪರಾಕ್ರಮ, ಶ್ರೀ, ಹ್ರೀ, ಧರ್ಮ, ದಯೆ, ಆರ್ಜವ ಮೊದಲಾದ ಸದ್ಗುಣಗಳೆಲ್ಲವೂ ತುಂಬಿರುವುವೋ, ಆ ಅರ್ಜುನನೇ ಇವನೆಂಬುದರಲ್ಲಿ ಸಂದೇಹವಿಲ್ಲ. ಇವನು ಸಮಸ್ತ ದೇವಗಣಗಳನ್ನಾದರೂ ಜಯಿಸದೆ ಯುದ್ಧದಿಂದ ಹಿಂತಿರುಗುವುದಿಲ್ಲ. ಶೂರನಾದ ಈತನನ್ನು ನೀನು ಕಾಡಿನಲ್ಲಿ ಅನೇಕವಿಧವಾಗಿ ಕಷ್ಟಪಡಿಸಿರುವೆ. ಆ ಕೋಪವು ಅವನ ಮನಸ್ಸಿನಲ್ಲಿ ಈಗಲೂ ಕುದಿಯುತ್ತಿರುವುದು. ಇದರಮೇಲೆ ಇಂದ್ರನಿಂದ ಈತನು ಧನುರ್ವಿದ್ಯೆಯಲ್ಲಿ ಚೆನ್ನಾಗಿ ಶಿಕ್ಷಿತನಾಗಿ ಬಂದಿರುವನು. ನಿನ್ನಮೇಲಿನ ಕೋಪದಿಂದಲೇ ಅವನು ಯುದ್ಧಕ್ಕೆ ಬಂದಿರುವುದರಲ್ಲಿ ಸಂದೇಹವಿಲ್ಲ. ಇವನನ್ನಿದಿರಿಸಿ

ಯುದ್ಧಮಾಡತಕ್ಕ ಶಕ್ತನು ಬೇರೊಬ್ಬನಿರುವನೆಂದೇ ನನಗೆ ತೋರಲಿಲ್ಲ. ಮಹಾದೇವನೂ ಕೂಡಾ ಹಿಮವತ್ಪರ್ವತದಲ್ಲಿ ಕಿರಾತವೇಷದಿಂದ ಬಂದು, ಇವನ ಯುದ್ಧಕ್ಕೆ ಮೆಚ್ಚಿದನೆಂದು ಕೇಳುವೆವು'' ಎಂದು ದ್ರೋಣನು ಅರ್ಜುನನ ಗುಣಗಳನ್ನು ಕೊಂಡಾಡುತ್ತಿರುವಾಗ, ಕರ್ಣನಿಗೆ ಆ ಮಾತುಗಳು ದುಸ್ಸಹವಾದುವು. ಅವನು ಕೋಪದಿಂದ ದ್ರೋಣನನ್ನು ಕುರಿತು ''ಯಾವಾಗಲೂ ನಮ್ಮ ಮುಂದೆ ಆ ಫಲ್ಗುಣನ ಗುಣಗಳನ್ನು ಕೊಂಡಾಡುವುದೇ ನಿನ್ನ ಸ್ವಭಾವವು. ಆ ಅರ್ಜುನನು ಶಸ್ತ್ರವಿದ್ಯೆಯಲ್ಲಿ ನನಗಿಂತಲಾಗಲಿ, ದುರ್ಯೋಧನನಿಗಿಂತಲಾಗಲಿ ಹೆಚ್ಚಿನವನೇನು?'' ಎಂದನು. ಆಗ ದುರ್ಯೋಧನನು ಕರ್ಣನನ್ನು ನೋಡಿ ''ಮಿತ್ರನೇ! ಇವನು ನಿಜವಾಗಿ ಅರ್ಜುನನೇ ಆದಪಕ್ಷದಲ್ಲಿ, ನಮ್ಮ ಕಾರ್ಯವು ಗೆದ್ದಂತೆಯೇ ಆಯಿತು. ಈಗ ಇವರ ನಿಜವನ್ನು ನಾವು ಕಂಡುಹಿಡಿದುಬಿಟ್ಟರೆ, ಅವರು ಇನ್ನೊಮ್ಮೆ ಹನ್ನೆರಡುವರ್ಷಗಳವರೆಗೆ ಕಾಡಿನಲ್ಲಿಯೇ ಇರಬೇಕಾಗುವುದು. ಹಾಗಿಲ್ಲದೆ, ದೇವಶ್ರೇಷ್ಠನಾದ ಬೇರೆ ಯಾವನೋ ಒಬ್ಬನು ನಪುಂಸಕ ವೇಷದಿಂದ ಇಲ್ಲಿಗೆ ಬಂದಿದ್ದರೂ, ತೀಕ್ಷ್ಣಬಾಣದಿಂದ ಈಗಲೇ ಅವನನ್ನು ಕೊಂದು ಕೆಡಹುವೆನು'' ಎಂದನು. ಹೀಗೆಂದು ದುರ್ಯೋಧನನು ಪೌರುಷವನ್ನು ಹೇಳಿಕೊಳ್ಳುತ್ತಿರಲು, ಭೀಷ್ಮ, ದ್ರೋಣ, ಕೃಪ, ಅಶ್ವತ್ಥಾಮನೆಂಬೀ ನಾಲ್ವರೂ ಅವನ ಪೌರುಷವನ್ನು ಅಭಿನಂದಿಸಿದರು.

ಇದು ಹೀಗಿರುತ್ತಿರಲು, ಅತ್ತಲಾಗಿ ಅರ್ಜುನನು ಬನ್ನಿಯಮರದ ಸಮೀಪಕ್ಕೆ ಬಂದಮೇಲೆ, ವಿರಾಟಪುತ್ರನಾದ ಉತ್ತರನನ್ನು ಕುರಿತು ಹೀಗೆಂದು ಹೇಳುವನು. ''ಓ ಭೂಮಿಂಜಯಾ! ಇಲ್ಲಿಗೆ ಬಾ. ನಿನಗೆ ಒಂದು ಕಾರ್ಯವನ್ನು ಹೇಳುವೆನು. ಇದೋ! ನೀನು ಈ ದೊಡ್ಡ ಶಮೀವೃಕ್ಷವನ್ನೇರಿ, ಅಲ್ಲಿರುವ ಗಾಂಡೀವವೆಂಬ ಧನುಸ್ಸನ್ನು ತೆಗೆದುಕೊಡು. ಈಗ ನೀನು ತಂದಿರುವ ಧನುಸ್ಸುಗಳು ನನ್ನ ಬಲಕ್ಕೆ ತಡೆಯುವಹಾಗಿಲ್ಲ. ಭಾರವಾದ ವಸ್ತುಗಳನ್ನು ಭೇದಿಸುವುದಕ್ಕಾಗಲಿ, ಆನೆಗಳನ್ನು ಕೊಲ್ಲುವುದಕ್ಕಾಗಲಿ, ಈ ಯುದ್ಧದಲ್ಲಿ ಶತ್ರುಗಳನ್ನು ಜಯಿಸಬೇಕೆಂದಿರುವ ನನ್ನ ಕೈಗಳ ಎಳೆದಾಟವನ್ನು ತಡೆದುಕೊಳ್ಳುವುದಕ್ಕಾಗಲಿ, ಈ ನಿನ್ನ ಧನುಸ್ಸುಗಳು

ತಕ್ಕಷ್ಟು ಬಲವುಳ್ಳವುಗಳಾಗಿಲ್ಲ. ಆದುದರಿಂದ, ಈಗಿನ ಯುದ್ಧಕಾರ್ಯವನ್ನು ಈ ಬಿಲ್ಲುಗಳಿಂದಲೇ ನಡೆಸುವುದಕ್ಕೆ ನನಗೆ ಇಷ್ಟವಿಲ್ಲ. ಇದಲ್ಲದೆ, ಈ ನಿನ್ನ ಆಯುಧಗಳೆಲ್ಲವೂ ಬಹಳ ಸಣ್ಣವು. ನನ್ನ ಕೈಗೆ ಸಾಲದಷ್ಟು ಚಿಕ್ಕವು. ಬಹಳ ಮೃದುವಾದವುಗಳು. ಆದುದರಿಂದ ಎಲೆಗಳಿಂದ ತುಂಬಿದ ಈ ಬನ್ನಿಮರವನ್ನೇರಿ, ಅಲ್ಲಿರುವ ಧನುಸ್ಸನ್ನು ತೆಗೆದುಕೊಡು! ಪಾಂಡವರು ತಮ್ಮ ಆಯುಧಗಳನ್ನು ಈ ಬನ್ನಿಯಮರದಮೇಲೆ ಇಟ್ಟಿರುವರು. ಧರ್ಮರಾಜನ, ಭೀಮಾರ್ಜುನರ, ಮತ್ತು ಅವಳಿಮಕ್ಕಳಾದ ನಕುಲಸಹದೇವರ ಧ್ವಜಗಳೂ, ಬಾಣಗಳೂ, ದಿವ್ಯ ಕವಚಗಳೂ ಇದರಲ್ಲಿಡಲ್ಪಟ್ಟಿರುವುವು. ಆ ಅರ್ಜುನನ ಗಾಂಡೀವವೆಂಬ ಮಹಾವೀರ್ಯವುಳ್ಳ ಧನಸ್ಸೂ ಇದರಲ್ಲಿಯೇ ಇರುವುದು. ಆ ಒಂದು ಧನುಸ್ಸೇ ಲಕ್ಷ ಧನುಸ್ಸುಗಳಿಗೆ ಸಮಾನವಾದ ಬಲವುಳ್ಳದು! ರಾಜ್ಯಗಳನ್ನು ಅಭಿವೃದ್ಧಿಗೊಳಿಸತಕ್ಕದು! ಯುದ್ಧದಲ್ಲಿ ಎಂತಹ ಎಳೆದಾಟಗಳನ್ನಾದರೂ ತಡೆದುಕೊಳ್ಳಬಲ್ಲುದು! ತಾಳೆಯ ಮರದಷ್ಟು ದೊಡ್ಡದಾದುದು! ಆಯುಧಗಳೊಳಗೆಲ್ಲ ಮೇಲೆನಿಸಿದುದು. ಸಮಸ್ತ ಶತ್ರುಗಳನ್ನೂ ನಾಶಮಾಡತಕ್ಕುದು. ಸುವರ್ಣದಿಂದ ಚಿತ್ರಿತವಾದುದು. ಎಲ್ಲಿಯೂ ಭಿನ್ನವಿಲ್ಲದೆ ಎಂತಹ ಭಾರಗಳನ್ನಾದರೂ ಸಹಿಸಬಲ್ಲುದು. ಒಳ್ಳೇ ಪ್ರಕಾಶವಿಶಿಷ್ಟವಾದುದು. ಮತ್ತು ಅದು ವರುಣದೇವನನಿಗೆ ಸಂಬಂಧಪಟ್ಟ ದೇವಯೋಗ್ಯವಾದ ಉತ್ತಮ ಧನುಸ್ಸು. ನೋಡುವುದಕ್ಕೂ ಅದು ಬಹಳ ಅಂದವಾಗಿರುವುದು. ಆ ಗಾಂಡೀವದಂತೆಯೇ ಪಾಂಡವರೆಲ್ಲರ ಆಯುಧಗಳೂ ಒಳ್ಳೇ ದೃಢವಾಗಿ, ಬಲವುಳ್ಳವುಗಳಾಗಿ, ಬಹಳ ಪ್ರಖ್ಯಾತಿಗೊಂಡಿರುವುವು. ಆ ಆಯುಧಗಳನ್ನು ಇತರರು ಕಣ್ಣಿಂದ ನೋಡುವುದಕ್ಕೂ ಕೂಡ ಸಾಧ್ಯವಿಲ್ಲದಂತಿರುವುದು'' ಎಂದನು. ಅದಕ್ಕೆ ಉತ್ತರನು, ''ಬೃಹನ್ನಳೇ! ಇದೇನು? ನೀನು ಇಂತಹ ಅಸಭ್ಯವಾದ ಕೆಲಸವನ್ನು ನನಗೆ ಹೇಳುತ್ತಿರುವೆ? ಈ ಬನ್ನಿಯಮರದ ಮೇಲೆ ಬಹುಕಾಲಕ್ಕೆ ಹಿಂದೆ ಕಟ್ಟಿದ ಯಾವುದೋ ಒಂದು ಹೆಣವು ಶುಷ್ಕವಾಗಿ ತೂಗಾಡುತ್ತಿರುವುದು. ರಾಜಪುತ್ರನಾದ ನಾನು ಹೇಗೆತಾನೇ ಅದನ್ನು ಕೈಯಿಂದ ಮುಟ್ಟಲಿ? ನನ್ನಿಂದ ಇಂತಹ ಕಾರ್ಯವನ್ನು ಮಾಡಿಸಬೇಡ! ಹೇಗೆತಾನೇ ನಾನು ಇಂತಹ ಅಕಾರ್ಯವನ್ನು

ಮಾಡಬಹುದು? ನಿನ್ನ ಬುದ್ಧಿಗೆತಾನೇ ಇದು ಹೇಗೆ ಉಚಿತವೆಂದು ತೋರಿತು? ನಾನಾದರೋ ಉತ್ತಮ ಕ್ಷತ್ರಿಯಕುಲದಲ್ಲಿ ಹುಟ್ಟಿದವನು. ದೊಡ್ಡ ರಾಜಕುಮಾರನು. ಮಂತ್ರಗಳನ್ನೂ, ಯಜ್ಞಗಳನ್ನೂ ಬಲ್ಲವನು. ನಾನು ಇಂತವನಾಗಿದ್ದು. ಈ ಕೆಲಸವನ್ನು ಮಾಡುವುದೇ! ಓ ಬೃಹನ್ನಳೆ! ಈ ಮೃತದೇಹವನ್ನು ಮುಟ್ಟಿನವನು ಹೆಣವನ್ನು ಹೊತ್ತವನಂತೆ ಅಶುಚಿಯಾಗುವನಲ್ಲನೇ? ಇಂತಹ ಕೆಲಸವನ್ನು ಮಾಜೆಂದು ನನ್ನೊಡನೆ ಹೇಳುವುದಕ್ಕೆ ಹೇಗೆತಾನೇ ನಿನಗೆ ಮನಸ್ಸು ಬಂದಿತು?" ಎಂದನು. ಅದಕ್ಕೆ ಅರ್ಜುನನು "ರಾಜಕುಮಾರಾ! ನೀನು ಮತ್ಸ್ಯಕುಲದಲ್ಲಿ ಹುಟ್ಟಿದವನೆಂದೂ, ಮಹಾಬುದ್ಧಿಶಾಲಿಯೆಂದೂ ನಾನು ಚೆನ್ನಾಗಿ ಬಲ್ಲೆನು. ಓ ಮಹಾಪ್ರಾಜ್ಞ! ಜಾತಿಯಿಂದಲೂ, ಕುಲದಿಂದಲೂ ಮೇಲೆಸಿಕೊಂಡ ನಿನಗೆ ಅಂತಹ ಪಾಪಕಾರ್ಯಗಳನ್ನು ಮಾಡುವಂತೆ ಹೇಳುವೆನೇ? ನೀನು ಅದನ್ನು ಮುಟ್ಟಿದುದರಿಂದ ನಿನ್ನನ್ನು ಯಾರೂ ದೂರಮಾಡುವುದಿಲ್ಲ. ಅದರಿಂದ ನೀನು ಅಶುಚಿಯೂ ಆಗುವುದಿಲ್ಲ. ನೀನು ಹೆದರಬೇಡ. ಅವು ಧನುಸ್ಸುಗಳೇ ಹೊರತು ಮೃತಶರೀರವಲ್ಲ. ಮತ್ಸ್ಯಪುತ್ರನಾಗಿ ಸತ್ಕುಲದಲ್ಲಿ ಹುಟ್ಟಿದ ನಿನ್ನಿಂಪ ನಿಂದಿತವಾದ ಕಾರ್ಯವನ್ನು ನಾನು ಮಾಡಿಸುವೆನೇ?" ಎಂದನು. ಈ ಮಾತನ್ನು ಕೇಳಿದಮೇಲೆ ಉತ್ತರನು ರಥದಿಂದ ಕೆಳಕ್ಕಿಳಿದು ಆ ಶಮೀವೃಕ್ಷವನ್ನೇರಿದನು. ಅರ್ಜುನನು ಅಷ್ಟೊಂದುವಿಧವಾಗಿ ಧೈರ್ಯವನ್ನು ಹೇಳಿದ್ದರೂ, ಉತ್ತರನು ಮನಸ್ಸಿಲ್ಲದೆ ನಿರ್ಬಂಧಕ್ಕಾಗಿ ಮೇಲೇರಜೇಕಾಯಿತು. ಇತ್ತಲಾಗಿ ರಥದಲ್ಲಿ ಕುಳಿತಿದ್ದ ಹಾಗೆಯೇ ಅರ್ಜುನನು ಉತ್ತರನನ್ನು ನೋಡಿ "ರಾಜಕುಮಾರಾ! ವಿಳಂಬ ಮಾಡಬೇಡ. ಆ ಮರದ ತುದಿಯಿಂದ ಧನುಸ್ಸುಗಳನ್ನು ಬೇಗನೆ ತೆಗೆದು ಕೊಡು" ಎಂದನು. ಆದರಂತೆ ಉತ್ತರನು, ಮೇಲೆ ಮುಚ್ಚಿದ್ದ ಎಲೆಗಳನ್ನೆಲ್ಲಾ ಒತ್ತರಿಸಿ, ಅಲ್ಲಿ ಕಟ್ಟಿದ್ದ ಉತ್ತಮವಾದ ಆಯುಧಗಳ ಕಟ್ಟನ್ನು ಬಿಚ್ಚಿ ಮರದಿಂದ ಕೆಳಕ್ಕಿಳಿಸಿದನು. ತಿರುಗಿ ಅರ್ಜುನನು ಉತ್ತರನನ್ನು ಕುರಿತು "ರಾಜಕುಮಾರಾ! ಇದರಮೇಲೆ ಇನ್ನೂ ನಾಲ್ಕುಕಡೆಗಳಲ್ಲಿಯೂ ಸುತ್ತಿರುವ ಹೊದಿಕೆಗಳನ್ನೆಲ್ಲಾ ಪೂರ್ಣವಾಗಿ ತೆಗೆದುಬಿಡು. ವಿಳಂಬಮಾಡಬೇಡ" ಎನಲು, ಉತ್ತರನು ಅದರಂತೆ ಮೇಲಿನ ಹೊದಿಕೆಗಳಿಲ್ಲವನ್ನೂ



೨೨೮. ಪಾಂಡವರು ಅಜ್ಞಾತವಾಸಕ್ಕೆ ಹೋಗುವ ಮೊದಲು, ಒಂದು ಹೆಣದ ಆಕಾರಕ್ಕೆ ಬನ್ನಿಯ ಮರದಮೇಲೆ ಕಟ್ಟಿಹೋಗಿದ್ದ ಆಯುಧಗಳನ್ನು ಉತ್ತರನು ತೆಗೆದುಕೊಟ್ಟ್ಟಿದು.

ತೆರೆದುನೋಡಿದನು. ಅಲ್ಲಿ ಬೇರೆ ನಾಲ್ಕು ಧನುಸ್ಸುಗಳೊಡನೆ ಗಾಂಡೀವ ವೆಂಬ ದಿವ್ಯಧನುಸ್ಸು ಕಾಣಿಸಿತು. ಆ ಪೆಟ್ಟಿಗೆಯನ್ನು ತೆರೆದಾಗಲೇ ಸೂರ್ಯತೇಜಸ್ಸುಳ್ಳ ಆ ಧನುಸ್ಸುಗಳ ದಿವ್ಯಕಾಂತಿಗಳು, ಗ್ರಹಗಳು ಉದಿಸಿದಂತೆ ಥಳಥಳಿಸಿದುವು. ಹೆಡೆಯಾಡುವ ಸರ್ಪಗಳಂತೆ ಭಯಂಕರವಾಗಿದ್ದ ಆ ಬಿಲ್ಲುಗಳ ಆಕಾರವನ್ನು ನೋಡಿ ಉತ್ತರನಿಗೆ ಮೈ ಬೆವರುವಂಥ ಭಯವಾಯಿತು. ದೇಹವು ನಡುಗಿತು. ಹೀಗೆ ಭಯಪಟ್ಟ ಉತ್ತರನನ್ನು ನೋಡಿ ಅರ್ಜುನನು ಅವನಿಗೆ ಅನೇಕವಿಧವಾಗಿ ಧೈರ್ಯವನ್ನು ಹೇಳಿದಮೇಲೆ ಆ ಉತ್ತರನಿಗೆ ಸ್ವಲ್ಪ ಧೈರ್ಯವುಂಟಾಯಿತು. ಆ ಬಿಲ್ಲುಗಳನ್ನು ಧೈರ್ಯದಿಂದ ನೋಡುವುದಕ್ಕೂ, ಅವುಗಳನ್ನು ಧೈರ್ಯದಿಂದ ಮುಟ್ಟುವುದಕ್ಕೂ ಬಾರಿಬಾರಿಗೂ ಅವನಿಗೆ ಅಭ್ಯಾಸವಾಯಿತು. ಭೀರು ಸ್ವಭಾವವುಳ್ಳ ಉತ್ತರನಾದರೋ, ಒಂದಾವರ್ತಿ ಕಣ್ಣುಬಿಟ್ಟು ನೋಡುವನು! ಒಡನೆಯೇ ಭಯದಿಂದ ಕಣ್ಣುಮುಚ್ಚಿಬಿಡುವನು! ಮನಸ್ಸನ್ನು ಧೈರ್ಯಮಾಡಿಕೊಂಡು ಆ ಬಿಲ್ಲುಗಳನ್ನು ಕೈಯಲ್ಲಿ ಹಿಡಿಯುವುದಕ್ಕೆ ಹೋಗುವನು! ಒಡನೆಯೇ ಭಯದಿಂದ ಕೈಗಳನ್ನು ಹಿಂತೆಗೆಯುವನು! ಹೀಗೆ ಅನೇಕಾವರ್ತಿ ಕಣ್ಣುಗಳನ್ನು ಮುಚ್ಚಿತೆರೆಯುತ್ತಾ. ಆಗಾಗ ಬಿಲ್ಲುಗಳನ್ನು ಮುಟ್ಟಿಮುಟ್ಟಿ ನೋಡುತ್ತ ಬಂದಮೇಲೆ, ಉತ್ತರನ ಮನಸ್ಸಿಗೆ ಪೂರ್ಣವಾದ ಧೈರ್ಯವುಂಟಾಯಿತು. ಆಮೇಲೆ ಉತ್ತರನು ದಿವ್ಯಕಾಂತಿಯುಳ್ಳ ಆ ಮಹಾಧನುಸ್ಸುಗಳನ್ನು ಕೈಯಿಂದ ಚೆನ್ನಾಗಿ ತೆಗೆದುನೋಡಿ, ಅರ್ಜುನನೊಡನೆ ಹೀಗೆಂದು ಹೇಳುವನು.''

ಇದು ನಾಲ್ವತ್ತನೆಯ ಅಧ್ಯಾಯವು.

ಆ ಆಯುಧಗಳನ್ನು ನೋಡಿ ವಿಸ್ಮಿತನಾದ ಉತ್ತರನು, ಆ ಒಂದೊಂದು ಧನುಸ್ಸನ್ನೂ ತೆಗೆದು, ಅದು ಯಾರ ಯಾರ ಆಯುಧವೆಂದು ಅರ್ಜುನನನ್ನು ಪ್ರಶ್ನೆಮಾಡಿದುದು.

''ಓ ಸಾರಥೀ! ನಿಜವಾಗಿ ಇದು ಧನುಸ್ಸೋ ಅಥವಾ ಸರ್ಪವೋ? ಇದರಲ್ಲಿ, ದರ್ಭಾಗ್ನಿಯಂತೆ ಜ್ವಲಿಸತಕ್ಕವುಗಳಾಗಿಯೂ, ಕಾಂತಿಯುಕ್ತ

ಗಳಾಗಿಯೂ, ಮಹತ್ತಾಗಿಯೂ ಇರುವ ಸುವರ್ಣಮಯವಾದ ಕಮಲ ಗಳು ಅಲ್ಲಲ್ಲಿ ಬೇರೆಬೇರೆಯಾಗಿ ಕೆತ್ತಲ್ಪಟ್ಟಿರುವುವು. ಇದರ ನಾಲ್ಕು ಕಡೆ ಗಳಲ್ಲಿಯೂ ರತ್ನಖಚಿತವಾದ ಚಿನ್ನದ ಬೊಟ್ಟುಗಳು ಪ್ರಕಾಶಿಸುವುವು. ಇದರ ಹಿಂಭಾಗದಲ್ಲಿ ಚಂದ್ರ ಸೂರ್ಯ ಮಂಡಲಗಳೂ, ಸುವರ್ಣಕಮಲ ಗಳೂ ಬೇರೆಬೇರೆಯಾಗಿ ಕೆತ್ತಲ್ಪಟ್ಟಿವೆ. ಶತ್ರುಭಯಂಕರವಾಗಿಯೂ ಆಶ್ಚ ರ್ಯಕರವಾಗಿಯೂ ಇರುವ ಈ ಧನುಸ್ಸು ಯಾರದು? ಇದೋ! ಈ ಬಿಲ್ಲು ಸುವರ್ಣಾಲಂಕೃತವಾಗಿ, ಕಾಂತಿಯಲ್ಲಿ ಕಣ್ಣಿ ನೈದಿಲೆಯನ್ನು ಹೋಲು ತ್ತಿರುವುದು. ಹಿಂಭಾಗದಲ್ಲಿ ದೊಡ್ಡ ಕೊಂಬುಳ್ಳ ಎತ್ತುಗಳ ಆಕೃತಿಯು ಸುವರ್ಣದಲ್ಲಿ ಕೆತ್ತಲ್ಪಟ್ಟಿದೆ. ತಾಳೆಯಮರದಷ್ಟು ದೊಡ್ಡದಾದ ಈ ಬಿಲ್ಲು ಯಾರದು? ಇದೋ! ಇದರಲ್ಲಿ ಹತ್ತು ಕಪಿಗಳ ಆಕೃತಿಯು ಸುವರ್ಣ ದಲ್ಲಿ ಕೆತ್ತಲ್ಪಟ್ಟಿವೆ. ಇತರರಿಗೆ ಬಗ್ಗಿಸುವುದಕ್ಕೂ ಸಾಧ್ಯವಲ್ಲದ ಈ ಮಹಾಧನುಸ್ಸು ಯಾರದು? ಸೂರ್ಯಚಂದ್ರರಂತೆ ಶುದ್ಧಕಾಂತಿಯುಳ್ಳ ವುಗಳಾಗಿಯೂ, ಅಂದವಾಗಿಯೂ ಇರುವ ಹಂಸಾಕೃತಿಗಳು ಈ ಬಿಲ್ಲಿನ ಹಿಂದೆ ಕೆತ್ತಲ್ಪಟ್ಟಿರುವುವು. ಆಶ್ಚರ್ಯಕರವಾಗಿ, ವಿಷ್ಣುಧನುಸ್ಸಿಗೂ ಅ ರ್ಜುನನ ಗಾಂಡೀವಕ್ಕೂ ಸಮಾನವಾದ ಈ ಧನುಸ್ಸು ಯಾರದು? ಇದೋ! ಈ ನಾಲ್ಕನೆಯ ಧನುಸ್ಸು ಕೇವಲ ಸುವರ್ಣಮಯವಾಗಿ ಮಿಂಚಿ ನ ಸಾಲಿನಂತೆ ಹೊಳೆಯುತ್ತಿರುವುದು. ಎಲ್ಲಿಯೂ ಭಿನ್ನವಿಲ್ಲದೆ ನೀಲ ವರ್ಣದಿಂದ ಲೇಪಿತವಾಗಿರುವುದು. ಇದರ ಹಿಂದೆ ಅನೇಕ ಮತ್ಸ್ಯಾ ಕಾರಗಳು ಚಿನ್ನದಿಂದ ಕೆತ್ತಲ್ಪಟ್ಟಿವೆ. ಇಂದ್ರಧನುಸ್ಸಿಗೆ ಸಮಾನವಾದ ಈ ಆಯುಧವು ಯಾರದು? ಇದೋ! ಉನ್ನತವಾಗಿಯೂ, ಇತರರಿಂದ ಬಗ್ಗಿಸುವುದಕ್ಕೆ ಸಾಧ್ಯವಿಲ್ಲದಷ್ಟು ದೃಢವಾಗಿಯೂ, ಸರ್ಪಾಕಾರವಾಗಿಯೂ ಇರುವ ಈ ದಿವ್ಯಧನುಸ್ಸಿನಹಿಂದೆ ಸುವರ್ಣಮಯವಾದ ಸಾವಿರ ಉಡು ಗಳ, ಹದಿನಾಲ್ಕು ಹುಲಿಗಳ, ಮತ್ತು ನೂರು ಕಣ್ಣುಗಳಿಂದ ಕೂಡಿದ ನವಿಲುಗರಿಗಳ ಆಕಾರದಿಂದ ಕೆತ್ತಲ್ಪಟ್ಟಿರುವ ಸುವರ್ಣಚಿತ್ರಿತವಾದ ಈ ಐದನೆಯ ಧನುಸ್ಸು ಯಾರದು? ಪಕ್ಷಿಯ ಗರಿಗಳಿಂದ ಕೂಡಿ, ತೀಕ್ಷ್ಣ ವಾದ ಅಲಗುಗಳುಳ್ಳವುಗಳಾಗಿ, ಬತ್ತಳಿಕೆಯಲ್ಲಿ ತುಂಬಿಟ್ಟಿರುವ ಈ ಸಹಸ್ರ ಬಾಣಗಳೂ, ಸಣ್ಣ ಕತ್ತಿಗಳೂ (ಕ್ಷುರಗಳೂ) ಯಾರವು? ಅರಿಸಿನದ ಬಣ್ಣ

ವುಳ್ಳವುಗಳಾಗಿ, ಸರ್ಪದಂತೆ ಕ್ರೂರಸ್ಪರ್ಶಗಳಾಗಿ, ಪ್ರತ್ಯೇಕವಾಗಿರುವ ಈ ಐನೂರು ಬಾಣಗಳು ಯಾರವು? ಬಹಳ ತೀಕ್ಷ್ಣಗಳಾಗಿಯೂ ಋಜುವಾಗಿಯೂ ಇರುವ ಈ ಬಾಣಗಳನ್ನು ಪ್ರಯೋಗಿಸತಕ್ಕವರಾರು? ಇದೋ ಇಲ್ಲಿ ಹದ್ದಿನ ಗರಿಗಳಿಂದಲೂ, ಹಂದಿಯ ಕಿವಿಗಳಂತಿರುವ ಕೊಕ್ಕೆಗಳಿಂದಲೂ ಕೂಡಿದ ಈ ತೀಕ್ಷ್ಣಬಾಣಗಳು ಯಾರಿಗೆ ಸೇರಿದುವು? ವಜ್ರಾಯುಧಕ್ಕೂ, ಸಿಡಿಲಿಗೂ ಸಮಾನವಾದ ಸ್ಪರ್ಶವೇಗವುಳ್ಳವುಗಳಾಗಿ, ಅಗ್ನಿಜ್ವಾಲೆಯಂತೆ ಕಾಂತಿಯುಳ್ಳವುಗಳಾಗಿ, ಚಿನ್ನದ ಹಿಡಿಗಳಿಂದ ಶೋಭಿಸುವ ಪ್ರತ್ಯೇಕವಾದ ಈ ಏಳುನೂರು ಬಾಣಗಳು ಯಾರಿಗೆ ಸಂಬಂಧಪಟ್ಟುವು? ಇದೋ ಇತ್ತಲಾಗಿ ಹಸುವಿನ ಚರ್ಮದಿಂದ ಮಾಡಿದ ಚೀಲದಲ್ಲಿರುವ ಈ ಉದ್ದವಾದ ಬಾಣವು ಯಾರದು? ಇದೋ, ಇತ್ತಲಾಗಿ ನುಣುಪಾಗಿಯೂ ದೃಢವಾಗಿಯೂ ಸೋಡುವುದಕ್ಕೆ ಅಂದವಾಗಿಯೂ ಇರುವ ದಂಡಾಯುಧವು ಕಾಣುತ್ತಿರುವುದಲ್ಲವೇ? ಇದು ಯಾರಿಗೆ ಸೇರಿದುದು? ಹುಲಿಯ ಚರ್ಮದಲ್ಲಿ ಹುದುಗಿಸಿಟ್ಟಿರುವ ಈ ದಿವ್ಯಶಂಖವು ಯಾರದು? ಹುಲಿಯ ಗುರುತುಗಳುಳ್ಳ ಈ ಐದು ಕತ್ತಿಗಳು ಇಲ್ಲಿ ಯಾರಿಗಾಗಿ ಇಡಲ್ಪಟ್ಟವೆ? ಹುಲಿಯ ಚರ್ಮದಲ್ಲಿ ಮುಚ್ಚಿಡಲ್ಪಟ್ಟ ಈ ಶುದ್ಧವಾದ ಕತ್ತಿಯು ಯಾರದು? ಕರೀಸೈದಿಲೆಯಂತೆ ಬಣ್ಣವುಳ್ಳುದಾಗಿ, ಎಲ್ಲಕ್ಕಿಂತಲೂ ಮಹತ್ತಾಗಿಯೂ ದೊಡ್ಡದಾಗಿಯೂ ಇರುವ ಈ ಕತ್ತಿಯು ಯಾರದು? ಶುದ್ಧವಾಗಿಯೂ, ಹರಿತವಾದ ಅಲಗುಳ್ಳುದಾಗಿಯೂ ಇರುವ ಇದೊಂದು ಖಡ್ಗವು ಸಿಂಹದ ಚರ್ಮದಲ್ಲಿ ಮುಚ್ಚಿಡಲ್ಪಟ್ಟಿರುವುದಲ್ಲವೇ? ಇದು ಯಾರದು? ಎತ್ತಿನ ಚರ್ಮದಿಂದ ಮಾಡಿದ ಚೀಲದಲ್ಲಿಡಲ್ಪಟ್ಟ ಈ ಮಹಾಖಡ್ಗವು ಯಾರದು? ಈ ಕತ್ತಿಯ ಒರೆಯನೇಲೆ ಐದು ಸೂರ್ಯಪ್ರತಿಮೆಗಳು ಕೆತ್ತಲ್ಪಟ್ಟಿದೆಯಲ್ಲದೆ, ಕೊಂಬಿನಿಂದ ಮಾಡಿದ ಅಂದವಾದ ಹಿಡಿಯಿಂದ ಒಪ್ಪುತ್ತಿರುವುದು. ಕರೀ ಚುಕ್ಕೆಯುಳ್ಳ ಜಿಂಕೆಯ ಚರ್ಮದಲ್ಲಿಡಲ್ಪಟ್ಟು, ಎಣ್ಣೆಹಾಕಿ ಸಾಣೆಹಿಡಿದ ಈ ಮಹಾಖಡ್ಗವು ಯಾರದು? ತಕ್ಕ ಪ್ರಮಾಣದಿಂದಲೂ, ಒಳ್ಳೇ ಬಣ್ಣದಿಂದಲೂ ಶೋಭಿಸುತ್ತಿರುವ ಈ ಕತ್ತಿಯಿಂದ ಒಂದಾವರ್ತಿ ಪೆಟ್ಟುತಿಂದ ಆನೆಯಾದರೂ ಬದುಕಲಾರದೆಂದೆಣಿಸುವೆನು: ಓ ಬೃಹನ್ನಳೇ! ನನಗೆ ಇವೆಲ್ಲವನ್ನೂ ಕ್ರಮವಾಗಿ ತಿಳಿಸಬೇಕು. ಮಹ

ತ್ತಾದ ಈ ಆಯುಧಸಮೂಹವನ್ನು ನೋಡಿ ನನಗೆ ಅತ್ಯಾಶ್ಚರ್ಯವುಂಟಾಗಿದೆ'' ಎಂದನು.

ಇದು ನಾಲ್ವತ್ತೊಂದನೆಯ ಅಧ್ಯಾಯವು.

ಅರ್ಜುನನು ತನ್ನ ಮತ್ತು ತನ್ನ ಸಹೋದರರ ಆಯುಧಗಳನ್ನೆಲ್ಲ ಪ್ರತ್ಯೇಕವಾಗಿ ಉತ್ತರನಿಗೆ ತೋರಿಸಿದುದು.

ಈ ಪ್ರಶ್ನೆಗಳನ್ನು ಕೇಳಿ ಅರ್ಜುನನು, ಭಯದಿಂದಲೂ, ಶಂಕೆಯಿಂದಲೂ ಕಳವಳಿಸುತ್ತಿರುವ ಆ ಉತ್ತರನಿಗೆ ಮೃದುವಾಕ್ಯಗಳಿಂದ ನಂಬಿಕೆ ಹುಟ್ಟುವಂತೆ ಹೀಗೆಂದು ಹೇಳುವನು ''ಓ ರಾಜಕುಮಾರಾ! ನೀನು ಮೊದಲು ಯಾವ ಧನುಸ್ಸನ್ನು ತೋರಿಸಿದೆಯೋ, ಶತ್ರುಸೈನ್ಯವನ್ನೆಲ್ಲ ಧ್ವಂಸ ಮಾಡತಕ್ಕ ಆ ದಿವ್ಯ ಧನುಸ್ಸೇ ಗಾಂಡೀವವೆಂದು ಪ್ರಸಿದ್ಧವಾದ ಅರ್ಜುನನ ಬಿಲ್ಲು. ಇದಕ್ಕೆ ಎಲ್ಲಿಯೂ ಭಯವಿಲ್ಲ. ಇದನ್ನು ಜೇಬೊಬ್ಬರಿಂದ ಮುರಿಯುವುದಕ್ಕೂ, ಗಾಯಪಡಿಸುವುದಕ್ಕೂ ಸಾಧ್ಯವಿಲ್ಲ. ಸುವರ್ಣಮಯವಾಗಿ, ಕಾಂತಿಯುಕ್ತವಾಗಿ, ಎಲ್ಲಾ ಆಯುಧಗಳಿಗೂ ಮೇಲೆನಿಸಿಕೊಂಡ ಈ ದಿವ್ಯಧನುಸ್ಸು ದೇವತೆಗಳ ಸಂಬಂಧವುಳ್ಳದು. ಈ ಧನುಸ್ಸೊಂದೇ ಲಕ್ಷ ಆಯುಧಗಳಿಗೆ ಸಮಾನವಾದುದು. ರಾಜ್ಯವನ್ನು ಅಭಿವೃದ್ಧಿಗೊಳಿಸತಕ್ಕುದು. ಅನೇಕ ವರ್ಷಗಳವರೆಗೆ ದೇವದಾನವ ಗಂಧರ್ವರಿಂದ ಪೂಜಿತವಾದುದು. ಇದರಿಂದಲೇ ಅರ್ಜುನನು ಯುದ್ಧದಲ್ಲಿ ದೇವಾಸುರರನ್ನು ಜಯಿಸುತ್ತಿರುವನು. ಇದನ್ನು ಪೂರ್ವದಲ್ಲಿ ಬ್ರಹ್ಮನು ಒಂದು ವರ್ಷಕಾಲದವರೆಗೆ ತನ್ನಲ್ಲಿ ಇಟ್ಟುಕೊಂಡಿದ್ದನು. ಈ ಧನುಸ್ಸು ರುದ್ರನಲ್ಲಿ ಅರುವತ್ತುನಾಲ್ಕು ವರುಷಗಳೂ, ಇಂದ್ರನಲ್ಲಿ ಎಂಭತ್ತೈದು ವರ್ಷಗಳೂ, ಚಂದ್ರನಲ್ಲಿ ಐದುಸಾವಿರ ವರ್ಷಗಳೂ, ವರುಣನಲ್ಲಿ ನೂರುವರ್ಷಗಳೂ ಇದ್ದಿತು. ಆಮೇಲೆ ಈ ಮಂಗಳಕರವಾದ ಧನುಸ್ಸನ್ನು ಅಗ್ನಿಯು ಪ್ರೀತಿಯಿಂದ ತೆಗೆದುಕೊಂಡನು. ಗುಣಜ್ಞನಾದ ಆ ಅಗ್ನಿಯು, ಈ ಗಾಂಡೀವವನ್ನು ಅರ್ಜುನನಿಗೆ ಕೊಟ್ಟನು. ಕಳೆದ ಅರುವತ್ತೈದು ವರ್ಷಗಳಿಂದ

ಇದನ್ನು ಅರ್ಜುನನೇ ಧರಿಸಿದ್ದನು. ಉತ್ತರಕುಮಾರಾ! ಇದೋ! ಈ ಉತ್ತಮ ಧನುಸ್ಸನ್ನು ನೋಡು! ಇದೂ ಆ ಗಾಂಡೀವದಂತೆಯೇ ವೀರ್ಯವುಳ್ಳದು. ಮಹಾ ವೇಗವುಳ್ಳದು. ನೀಲೋತ್ಪಲವರ್ಣವುಳ್ಳ ಈ ಧನುಸ್ಸು ಮಹಾತ್ಮನಾದ ಯುಧಿಷ್ಠಿರನಿಗೆ ಸಂಬಂಧಪಟ್ಟದು. ಇದರ ಬೆನ್ನಿನಲ್ಲಿ ಸುವರ್ಣಮಯವಾದ ಚುಕ್ಕಿಗಳು ಎಷ್ಟು ಅಂದವಾಗಿ ಕೆತ್ತಲ್ಪಟ್ಟಿರುವವು ನೋಡು. ಇದೋ! ಚಿನ್ನದ ಪಿಡಿಯುಳ್ಳ ದೃಢವಾದ ಈ ಧನುಸ್ಸು ಭೀಮಸೇನನದು. ಇದು ಅತ್ಯಂತ ಪ್ರಖ್ಯಾತಿಹೊಂದಿದುದು. ಇದರ ಬೆನ್ನಿನಲ್ಲಿ ಚಿನ್ನದಿಂದ ಕೆತ್ತಲ್ಪಟ್ಟ ಸಾವಿರ ಉಡುಗಳೂ, ಹದಿನಾಲ್ಕು ಹುಲಿಗಳೂ ಕಾಣುವುದು ನೋಡು. ಅಲ್ಲದೆ, ಉದ್ದವಾದ ಕೊಂಬುಳ್ಳ ಎತ್ತುಗಳ ಆಕೃತಿಯೂ ಬೆನ್ನಿನಲ್ಲಿ ಕೆತ್ತಲ್ಪಟ್ಟಿವೆ. ಇದರಿಂದಲೇ ಭೀಮನು ಹಿಂದೆ ಪೂರ್ವದಿಕ್ಕನ್ನೆಲ್ಲಾ ಜಯಿಸಿಬಂದನು. ಇದರ ಹಿಂಭಾಗದಲ್ಲಿ ಕುಶಾಗ್ನಿಯಂತೆ ಜ್ವಲಿಸುತ್ತಿರುವ ಬೇರೆಬೇರೆಯಾದ ರೇಖೆಗಳು ಕಾಣುತ್ತಿರುವುದನ್ನು ನೋಡು. ಇದು ದೇವತೆಗಳಿಂದಲೂ, ಮನುಷ್ಯರಿಂದಲೂ ಪೂಜಿಸಲ್ಪಟ್ಟುದು. ಒಂದು ತಾಳೆಯ ಮರದ ಪ್ರಮಾಣಕ್ಕಿರುವ ಉತ್ತಮವಾದ ಈ ಭೀಮನ ಧನುಸ್ಸು ಲೋಕಪ್ರಸಿದ್ಧವಾದುದು. ರತ್ನಗಳಿಂದಲೂ, ಸುವರ್ಣದಿಂದಲೂ ಅಲಂಕೃತವಾದ ಈ ಬಿಲ್ಲನ್ನು ಬೇರೆಯಾರೂ ಬಗ್ಗಿಸಲಾರರು. ಇದನ್ನು ಮುರಿಯುವುದಕ್ಕೂ ಬೇರೆಯವರಿಗೆ ಸಾಧ್ಯವಿಲ್ಲ. ಇದೋ! ನೂರು ಕಣ್ಣುಗಳಿಂದ ಶೋಭಿಸುವ ಸುವರ್ಣಮಯವಾದ ನವಿಲುಗಳ ಆಕಾರದಿಂದ ಚಿತ್ರಿತವಾದ ಈ ಧನಸ್ಸು ಧೀಮಂತನೂ, ಮಾದ್ರೀಪುತ್ರನೂ ಆದ ನಕುಲನದು. ಇದೋ! ಅರಿಸಿನದ ಬಣ್ಣವುಳ್ಳದಾಗಿ, ಆ ನಕುಲನ ಬಿಲ್ಲಿಗೆ ಸಮಾನವಾದ ಈ ಧನುಸ್ಸು ಪಾಂಡವರಲ್ಲಿ ಎಲ್ಲರಿಗಿಂತಲೂ ಕಿರಿಯವನೂ, ಮಹಾತ್ಮನೂ ಆದ ಸಹದೇವನದು. ಇದೋ! ಈ ಬಾಣಗಳನ್ನು ನೋಡು. ಇವು ಪರ್ವತಗಳನ್ನಾದರೂ ಬೇಧಿಸಬಲ್ಲವು. ಅತ್ಯಂತ ದೃಢವಾದುವು. ಒಳ್ಳೇ ಕಾಂತಿಯುಕ್ತಗಳಾಗಿಯೂ, ಹರಿತವಾದ ಅಲಗುಗಳುಳ್ಳವಾಗಿಯೂ, ಆಕಾರದಲ್ಲಿ ದೊಡ್ಡವುಗಳಾಗಿಯೂ ಇರುವ ಈ ಬಾಣಗಳು ಭೀಮಸೇನನಿಗೆ ಸೇರಿದುವು. ಭೀಮಸೇನನ ಕೈಯಿಂದ ಪ್ರಯೋಗಿಸಲ್ಪಟ್ಟ ಈ ಬಾಣಗಳು ಆನೆಗಳನ್ನಾದರೂ ಕೊಲ್ಲಬ

ಲ್ಲುವು. ಇದೋ! ಇಲ್ಲಿ ಚಿನ್ನದ ಕಡ್ಡಿಗಳುಳ್ಳುದಾಗಿಯೂ, ಯಮದಂಡಕ್ಕೆ ಸಮಾನವಾಗಿಯೂ, ಇಂದ್ರನ ವಜ್ರಾಯುಧದಂತೆಯೂ, ಸಿಡಿಲಿನಂತೆಯೂ ಕಾಂತಿಯುಳ್ಳವುಗಳಾಗಿಯೂ ಇರುವ ಮಂಗಳಕರಗಳಾದ ಈ ಬಾಣಗಳು ಯಾವುವುಂಟೋ ಅವೆಲ್ಲವೂ ನಕುಲನ ಬಾಣಗಳು. ಎಲೈ ರಾಜಕುಮಾರಾ! ಇದೋ! ನೆಟ್ಟಗಿರುವ ಅಲಗುಗಳಿಂದ ಕೂಡಿ ಕಾಂತಿಯಿಂದ ಜ್ವಲಿಸುತ್ತಿರುವ ಈ ಬಾಣಗಳು ಯಾರದೆಂದು ನೀನು ಕೇಳಿದೆಯಲ್ಲವೇ? ಇದು ಸಹದೇವನವು. ಹರಿತವಾದ ಮೊನೆಯುಳ್ಳ ಈ ಬಾಣಗಳಿಗೆ ವರಾಹಕರ್ಣಗಳೆಂದು ಹೆಸರು. ಇದೋ! ಇಲ್ಲಿ ಹಸುವಿನ ಚರ್ಮದಿಂದ ಮಾಡಿದ ಚೀಲದಲ್ಲಿ ಇಡಲ್ಪಟ್ಟಿರುವ ಈ ದೀರ್ಘವಾದ ಬಾಣವು ಯಾವುದುಂಟೋ ಇದು ಅರ್ಜುನನ ಬಾಣವು. ಇದು ಮಹಾ ಭಯಂಕರವಾದುದು. ಎಂತಹ ಭಾರವನ್ನಾದರೂ ಸಹಿಸಬಲ್ಲುದು. ಇದೋ! ಇಲ್ಲಿ ಹುಲಿಯಚರ್ಮದಲ್ಲಿ ಡಲ್ಪಟ್ಟಿರುವ ಸ್ವಚ್ಛವಾದ ಈ ಖಡ್ಗವು ಧೀಮಂತನಾದ ಯುಧಿಷ್ಠಿರನದು. ಇದೋ! ಇತ್ತಲಾಗಿ ವ್ಯಾಘ್ರಚರ್ಮದ ಒರೆಯಲ್ಲಿಡಲ್ಪಟ್ಟು, ಐದು ಹುಲಿಯ ಚಿಹ್ನವುಳ್ಳ ಈ ಖಡ್ಗವು ಭೀಮನದು. ಇದರಿಂದ ಭೀಮನು ಕೊಬ್ಬಿದ ಎಷ್ಟೋ ಆನೆಗಳ ತಲೆಗಳನ್ನು ಭೇದಿಸಿರುವನು. ಇದೋ! ಇತ್ತಲಾಗಿ ಕರೀ ನೈದಿಲೆಯಂತೆ ಕಾಂತಿಯುಳ್ಳುದಾಗಿ, ಸಿಂಹದ ಚರ್ಮದಲ್ಲಿ ಮುಚ್ಚಿಡಲ್ಪಟ್ಟಿರುವ ಅತಿ ಸ್ವಚ್ಛವಾದ ಮತ್ತು ತೀಕ್ಷ್ಣಧಾರೆಯುಳ್ಳ ಈ ಖಡ್ಗವು ಅರ್ಜುನನದು. ಇದು ಎಷ್ಟು ಮನೋಹರವಾಗಿ, ಎಷ್ಟು ಹರಿತವಾದ ಮೊನೆಯುಳ್ಳುದಾಗಿದೆ ನೋಡು. ಇದು ಶತ್ರುಸೈನ್ಯಗಳನ್ನೆಲ್ಲ ನಿಮಿಷಮಾತ್ರದಲ್ಲಿ ಧ್ವಂಸಮಾಡಬಲ್ಲ ಶಕ್ತಿಯುಳ್ಳದು. ಇದೋ! ಇತ್ತಲಾಗಿ ಜಿಂಕೆಯ ಚರ್ಮದಲ್ಲಿಡಲ್ಪಟ್ಟು, ಅಂದವಾದ ಹಿಡಿಯುಳ್ಳುದಾಗಿ, ಅಗ್ನಿಯಂತೆ ಜ್ವಲಿಸುತ್ತಿರುವ ಈ ಖಡ್ಗವಾವುದುಂಟೋ ಅದು ನಕುಲನದು. ಇದೋ! ಇಲ್ಲಿ ಪಿಂಗಳವರ್ಣವಾಗಿ, ರತ್ನದ ಹಿಡಿಗಳಿಂದ ವಿಚಿತ್ರವಾಗಿ ಕಾಣುವ ಈ ಖಡ್ಗವು ಸಹದೇವನದು. ಇದು ಎಷ್ಟೇ ಭಾರವನ್ನಾದರೂ ತಡೆಯಬಲ್ಲುದು. ಇದು ಬಹಳ ಮೇಲಾದ ಖಡ್ಗವೆನಿಸಿದುದರಿಂದ, ಚೆನ್ನಾಗಿ ಒರೆಯಲ್ಲಿ ಮುಚ್ಚಿಡಲ್ಪಟ್ಟಿರುವುದು. ಉತ್ತರಾ! ಇಲ್ಲಿ ನೋಡು. ಸಮಸ್ತ ಶತ್ರುಗಳನ್ನೂ ನಿಮಿಷಮಾತ್ರದಲ್ಲಿ ಧ್ವಂಸಮಾಡತಕ್ಕ ಈ ದೊಡ್ಡ ದಂಡಾ

ಯುಧವುಂಟಲ್ಲವೇ? ಇದು ಭೀಮನದು'' ಎಂದನು. ಓ ಜನಮೇಜಯ ರಾಜಾ! ಅರ್ಜುನನು ಉತ್ತರನಿಗೆ ಈ ವಿಧವಾಗಿ ತಮ್ಮ ಆಯುಧಗಳನ್ನೂ, ಬತ್ತಳಿಕೆಗಳನ್ನೂ, ಎಣೆಯಿಲ್ಲದ ಕಾಂತಿಯಿಂದ ಜ್ವಲಿಸುತ್ತಿರುವ ಖಡ್ಗಗಳನ್ನೂ ಬೇರೆಬೇರೆಯಾಗಿ ತೋರಿಸಿ, ಆ ವಿವರಗಳನ್ನೆಲ್ಲ ತಿಳಿಸಿದನು.

ಇದು ನಾಲ್ವತ್ತೆರಡನೆಯ ಅಧ್ಯಾಯವು.

ಅರ್ಜುನನು ಉತ್ತರನಿಗೆ ತನ್ನ ನಿಜಸ್ಥಿತಿಯನ್ನು ತಿಳಿಸಿ, ತಾನೇ ಅರ್ಜುನನೆಂದೂ, ಕಂಕವಲಲಾರಿಗಳು ತನ್ನ ಸಹೋದರರೆಂದೂ ಹೇಳಿದುದು. ಉತ್ತರನ ಸಂಬಿಕೆಗಾಗಿ ತನ್ನ ದಶನಾಮಗಳನ್ನು ತಿಳಿಸಿದುದು.

ಓ ಜನಮೇಜಯರಾಜಾ! ಅರ್ಜುನನು ಇಷ್ಟು ಹೇಳಿದರೂ ಮಂದ ಬುದ್ಧಿಯುಳ್ಳ ಉತ್ತರನು, ಆತನೇ ಅರ್ಜುನನೆಂದು ತಿಳಿದುಕೊಳ್ಳಲಾರದೆ ಹೋದನು. ತಿರುಗಿ ಅವನನ್ನು ಕುರಿತು ಹೀಗೆಂದು ಪ್ರಶ್ನೆಮಾಡುವನು. ''ಓ ಬೃಹನ್ನಳೇ! ಮಹಾತ್ಮರಾದ ಮತ್ತು ಒಳ್ಳೇ ಕೈಚಳಕವುಳ್ಳ ಆ ಪಾಂಡವರ ಆಯುಧಗಳೆಲ್ಲವನ್ನೂ ತೋರಿಸಿದೆಯಲ್ಲವೇ? ಇಷ್ಟು ಮನೋಹರಗಳಾಗಿಯೂ, ಸುವರ್ಣಮಯಗಳಾಗಿಯೂ ಇರುವ ಆಯುಧಗಳನ್ನೆಲ್ಲಾ ಇಲ್ಲಿ ಬಿಟ್ಟು, ಆ ಪಾಂಡವರು ಈಗ ಎಲ್ಲಿರುವರು? ಅವರು ಮಹಾಶೂರರು. ಯಾರಿಗೂ ಸೋಲದವರು. ಧರ್ಮಜ್ಞರು. ಬಂಧುಗಳಲ್ಲಿ ಪ್ರೇಮವುಳ್ಳವರು. ಆ ಕುಂತೀಪುತ್ರರು ಈಗ ಯಾವ ದೇಶದಲ್ಲಿ ವಾಸಿಸುವರು? ಅಯ್ಯೋ! ಕಾಂತಿಯಿಂದ ಜ್ವಲಿಸುತ್ತಿರುವ ಇಂತಹ ದಿವ್ಯಬಾಣಗಳನ್ನೆಲ್ಲ ಹೀಗೆ ಇಲ್ಲಿ ಬಿಟ್ಟುಹೋಗಿರುವರಲ್ಲಾ? ಆಹಾ! ಇವು ಎಷ್ಟು ಪ್ರಕಾಶಮಾನವಾಗಿರುವುವು! ಯಮಧರ್ಮರಾಜನಿಗೆ ಮಗನೆನಿಸಿ, ಧರ್ಮರಾಜನೆಂದು ಪ್ರಖ್ಯಾತನಾದ ಆ ಯುಧಿಷ್ಠಿರನು ಈಗ ಎಲ್ಲಿರುವನು? ಆ ಕುಂತೀಪುತ್ರನಾದರೋ ಧರ್ಮಶೀಲನು. ಧರ್ಮಾತ್ಮನು, ಧರ್ಮಗಳಿಗೆ ನೆಲೆಯಾದ

ವನು! ಧರ್ಮಗಳಿಲ್ಲವನ್ನೂ ಬಲ್ಲವನು! ಧರ್ಮಾಧ್ಯಕ್ಷನು! ಧರ್ಮಮೂರ್ತಿಯೆನಿಸಿದವನು! ಧರ್ಮನಿಷ್ಠನು! ತಾನು ಧರ್ಮಗಳನ್ನು ಮಾಡುವುದಲ್ಲದೆ, ಧರ್ಮವನ್ನು ರಕ್ಷಿಸತಕ್ಕವನು. ಧರ್ಮನಾರಾಯಣನು. ಸತ್ಯ, ಆರ್ಜವ, ಕ್ಷಮೆ ಮುಂತಾದ ಸದ್ಗುಣಗಳಿಗೆಲ್ಲಾ ಆಧಾರನು. ದಯಾಶೀಲನು. ಅಂತಹ ಮಹಾತ್ಮನು ಈಗ ಇರುವುದೆಲ್ಲಿ? ಓ ಬೃಹನ್ನಳೇ! ಭೀಮಾರ್ಜುನರಿಬ್ಬರೂ ನನ್ನ ಸೋದರರಮಾವಂದಿರು. ಸರ್ವಾಸ್ತ್ರಗಳಲ್ಲಿಯೂ ನಿಪುಣರಾದ ನಕುಲಸಹದೇವರೂ ನನಗೆ ಸೋದರಮಾವಂದಿರು. ಮಹಾತ್ಮರಾದ ಅವರೆಲ್ಲರೂ ಎಂತಹ ಶತ್ರುಗಳನ್ನೂ ನಾಶಮಾಡಬಲ್ಲ ಸಾಮರ್ಥ್ಯವುಳ್ಳವರಾದರೂ, ಪಗಡೆಯಾಟದಲ್ಲಿ ತಮ್ಮ ರಾಜ್ಯವನ್ನು ಕಳೆದುಕೊಂಡು ಕಾಡಿಗೆ ಹೊರಟುಹೋದುದಾಗಿ ಕೇಳುವೆನು. ಸ್ತ್ರೀಯರಿಗೆಲ್ಲ ರತ್ನಪ್ರಾಯಳೆನಿಸಿಕೊಂಡಿದ್ದ ಪಾಂಚಾಲಪುತ್ರಿಯಾದ ದ್ರೌಪದಿಯನ್ನು ಕೂಡ, ಪಾಂಡವರು ಪಗಡೆಯಾಟದಲ್ಲಿ ಸೋತುದಾಗಿಯೂ, ಕೊನೆಗೆ ಅವಳೂ ಆ ಪಾಂಡವರೊಡನೆ ಕಾಡಿಗೆ ಹೋದುದಾಗಿಯೂ ಕೇಳಿದೆನು. ಹೀಗೆ ಆ ಪಾಂಡವರೆಲ್ಲರೂ, ತಮಗೆ ಧರ್ಮಾರ್ಜಿತವಾದ ರಾಜ್ಯವನ್ನೆಲ್ಲ ಕಳೆದುಕೊಂಡು, ಕಾಡುಪಾಲಾಗಿರುವರೆಂದು ಹೇಳುವರಲ್ಲವೆ? ಅವರ ಸಂಗತಿಯು ನಿನಗೇನಾದರೂ ತಿಳಿದಿರುವುದಾದರೆ, ಆ ಮಹಾತ್ಮರೆಲ್ಲಿರುವರೆಂಬುದನ್ನು ನನಗೆ ತಿಳಿಸು! ಬೃಹನ್ನಳೇ! ಅದರ ವಾಸ್ತವಾಂಶವನ್ನು ನೀನು ತಿಳಿಸಬೇಕು. ಮಹಾತ್ಮರಾದ ಅವರ ಶಸ್ತ್ರಾಸ್ತ್ರಗಳೆಲ್ಲವೂ ಇಲ್ಲಿಗೆ ಬಂದುದು ಹೇಗೆ? ಇವೆಲ್ಲವೂ ಆ ಪಾಂಡವರ ಆಯುಧಗಳೆಂಬುದನ್ನು ನೀನು ಹೇಗೆ ತಿಳಿದೆ? ಇದರ ತತ್ವವನ್ನೆಲ್ಲ ನನಗೆ ತಿಳಿಸಬೇಕು" ಎಂದನು.

ಓ ಜನಮೇಜಯರಾಜಾ! ಉತ್ತರನು ಕೇಳಿದ ಈ ಪ್ರಶ್ನೆಗಾಗಿ, ಅರ್ಜುನನು ತನ್ನಲ್ಲಿ ತಾನು ನಗುತ್ತ, ಅವನನ್ನು ಕುರಿತು "ರಾಜಕುಮಾರಾ! ನಿನಗೆ ಎಲ್ಲವನ್ನೂ ವಿವರಿಸಿ ತಿಳಿಸುವೆನು. ಆದರೆ, ನೀನು ಭಯಪಡಬಾರದು. ಈಗ ನಿನ್ನ ಭಯಕ್ಕೇನೂ ಕಾರಣವಿರುವುದಿಲ್ಲ. ಧೈರ್ಯದಿಂದಿರು. ನಾವೇ ಆ ಪಾಂಡವರು. ನಾವು ಹನ್ನೆರಡು ವರ್ಷಗಳ ವನವಾಸವನ್ನು ಮುಗಿಸಿಕೊಂಡೇ ನಿಮ್ಮಲ್ಲಿಗೆ ಬಂದೆವು. ಅದರಮೇಲೆ ಒಂದು

ವರ್ಷ ಕಾಲವನ್ನು ನಾವು ಅಜ್ಞಾತವಾಸದಿಂದ ಕಳೆಯಬೇಕಾದುದರಿಂದ, ನಮ್ಮ ವೇಷವನ್ನು ಮರೆಸಿಕೊಂಡು ನಿಮ್ಮಲ್ಲಿರುತಿದ್ದೆವು. ಉತ್ತರಾ! ನೀನು ಮನಸ್ಸಿನಲ್ಲಿ ಶಂಕೆಯನ್ನು ಬಿಟ್ಟು ಸಾವಧಾನವಾಗಿ ಕೇಳು. ಎಲ್ಲವನ್ನೂ ತಿಳಿಸುವೆನು. ಆ ಐದುಮಂದಿ ಪಾಂಡವರಲ್ಲಿ ನಾನೇ ಅರ್ಜುನನು. ಕಂಕನೆಂದು ಹೆಸರಿಟ್ಟುಕೊಂಡಿರುವ ಆ ಸನ್ಯಾಸಿಯೇ ನಮ್ಮಣ್ಣನಾದ ಯುಧಿಷ್ಠಿರನು. ನಿನ್ನ ತಂದೆಗೆ ಆಡಿಗೆಮಾಡುತ್ತಿರುವ ವಲಲನೇ ಭೀಮಸೇನನು. ಕುದುರೆಗಳ ಲಾಯದಲ್ಲಿರುವವನೇ ನಕುಲನು. ಗೋಪಾಲಕರಿಗೆ ಯಜಮಾನನಾದವನು ನಮ್ಮೆಲ್ಲರಿಗೂ ಕಿರಿಯವನಾದ ಸಹದೇವನು. ನಿಮ್ಮ ಅಂತಃಪುರದಲ್ಲಿರುವ ಸೈರಂಧ್ರಿಯೆಂಬವಳೇ ದ್ರೌಪದಿ. ಅವಳ ದೆಸೆಯಿಂದಲೇ ನಿನ್ನ ಪ್ರಾವನಾದ ಕೀಚಕನು ಹತನಾದನು. ಕೀಚಕನನ್ನು ಅವನ ತಮ್ಮಂದಿರೊಡನೆ ಸೇರಿಸಿ ಕೊಂದವನು ನನ್ನ ಅಣ್ಣನಾದ ಭೀಮಸೇನನೇ!" ಎಂದನು. ಈ ಮಾತನ್ನು ಕೇಳಿದಾಗ ಉತ್ತರನ ಮನಸ್ಸಿನಲ್ಲಿ ಉಂಟಾದ ಆಶ್ಚರ್ಯವನ್ನು ಕೇಳಬೇಕೆ? ಅವನು ಬೆಜ್ಜರಬಿದ್ದು, ಎವೆಮುಚ್ಚದೆ ಸ್ವಲ್ಪಹೊತ್ತಿನವರೆಗೆ ಅರ್ಜುನನ ಮುಖವನ್ನು ನೋಡುತ್ತ ಸುಮ್ಮನೆ ನಿಂತುಬಿಟ್ಟನು. ಆಮೇಲೆ ಮೆಲ್ಲಗೆ ಚೇತರಿಸಿಕೊಂಡು ಕುಗ್ಗಿದ ಕಂಠದಿಂದ ಅರ್ಜುನನನ್ನು ಕುರಿತು ಹೀಗೆಂದು ಹೇಳುವನು. "ಓ ಬೃಹನ್ನಳೇ! ನನಗೆ ಇನ್ನೂ ನಿನ್ನ ಮಾತಿನಲ್ಲಿ ನಂಬಿಕೆಯಿಲ್ಲ. ನಾನು ಕಥೆಗಳಲ್ಲಿ ಅರ್ಜುನನಿಗೆ ಬೇರೆಬೇರೆ ಹತ್ತು ಹೆಸರುಂಟೆಂದು ಕೇಳಿದ್ದೆನು. ನೀನು ಈಗ ಹೇಳಿದುದರಲ್ಲಿ ನನಗೆ ನಂಬಿಕೆ ಹುಟ್ಟಬೇಕಾದರೆ, ಆ ದಶ ನಾಮಗಳನ್ನು ತಿಳಿಸು" ಎಂದನು. ಅದಕ್ಕಾ ಅರ್ಜುನನು "ಉತ್ತರಾ! ಹಾಗಿದ್ದರೆ ಕೇಳು! ನೀನು ಹಿಂದೆ ನನ್ನ ವಿಷಯವಾಗಿ ಕೇಳಿದ ನನ್ನ ದಶನಾಮಗಳನ್ನೇ ತಿಳಿಸುವೆನು. ಸ್ವರ್ಗಾಧಿಪತಿಯಾದ ಇಂದ್ರನು ಸ್ವರ್ಗದಲ್ಲಿ ನನಗೆ:—

"ಅರ್ಜುನಃ ಫಲ್ಗುನಃಪಾರ್ಥಃ ಕಿರೀಟೀ ಶ್ವೇತವಾಹನಃ
ಭೀಭತ್ಸುರ್ವಿಜಯೋಜಿಷ್ಣು ಸ್ಸವ್ಯಸಾಚೀ ಧನಂಜಯಃ"

(ಅರ್ಜುನ, ಫಲ್ಗುನ, ಪಾರ್ಥ, ಕಿರೀಟಿ, ಶ್ವೇತವಾಹನ, ಭೀಭತ್ಸು, ವಿಜಯ, ಜಿಷ್ಣು, ಸವ್ಯಸಾಚಿ, ಧನಂಜಯರೆಂದು) ಈ ಹತ್ತು ಹೆಸ

ರುಗಳನ್ನು ಕೊಟ್ಟನು. ದೇವಶ್ರೇಷ್ಠರೆಲ್ಲರೂ ನನಗೆ ಆ ಹೆಸರುಗಳನ್ನೇ ಸ್ಥಿರಗೊಳಿಸಿದರು'' ಎಂದನು. ಆಗ ಉತ್ತರನು ''ಓ ಅನಘಾ! ನೀನು ಈಗ ಹೇಳಿದ ದಶನಾಮಗಳೂ ನಿನಗೆ ಅನ್ವರ್ಥವಾಗಿ, ನಿನ್ನ ಗುಣಗಳಿಂದಲೇ ಬಂದುವಷ್ಟೆ? ಲೋಕಪ್ರಖ್ಯಾತಗಳಾದ ಈ ಹೆಸರುಗಳನ್ನೇ ನಾನೂ ಕೇಳಿದ್ದೆನು. ನಿನಗೆ ವಿಜಯನೆಂಬ ಹೆಸರು ಹೇಗೆ ಬಂದಿತು? ಶ್ವೇತವಾಹನನೆಂಬ ಹೆಸರು ಬರಲು ಕಾರಣವೇನು? ಸವ್ಯಸಾಚಿಯೆಂದೂ, ಜಿಷ್ಣುವೆಂದೂ, ಭೀಭತ್ಸುವೆಂದೂ ನಿನಗೆ ಹೆಸರಿಟ್ಟ ಕಾರಣಗಳಾವುವು? ಓ! ಸಾರಥೀ! ಅರ್ಜುನನೆಂದೂ, ಫಲ್ಗುನನೆಂದೂ, ಪಾರ್ಥನೆಂದೂ, ಕಿರೀಟಿಯೆಂದೂ ನಿನಗೆ ಹೇಗೆ ಹೆಸರುಗಳಾದುವು? ಈ ಹೆಸರುಗಳೆಲ್ಲ ಅರ್ಜುನನಿಗೆ ಬರುವುದಕ್ಕೆ ಕಾರಣಗಳೇನೋ ಉಂಟೆಂಬುದನ್ನು ಮಾತ್ರ ನಾನು ಕೇಳಿದ್ದೆನು. ಅವರ ವಿವರವನ್ನು ತಿಳಿಯದೆ ನನ್ನ ಮನಸ್ಸು ಸಂದೇಹದಿಂದ ಅತ್ತಿತ್ತ ಕಳವಳಿಸುತ್ತಿರುವುದು. ಅಲ್ಲದೆ, ನಿನ್ನ ವಿಷಯದಲ್ಲಿಯೂ ನನಗೆ ನಿಶ್ಚಯವಾದ ಸ್ಥಿರಬುದ್ಧಿಯಿಲ್ಲದೆ, ನೀನು ಅರ್ಜುನನೋ ಅಲ್ಲವೋ ಎಂದು ಸಂಶಯಗ್ರಸ್ತವಾಗಿದೆ. ಆದುದರಿಂದ, ಬೃಹನ್ನಳೇ! ಬೇಗನೆ ಆ ವಿವರವನ್ನು ತಿಳಿಸು'' ಎಂದನು. ಅದಕ್ಕಾ ಅರ್ಜುನನು ''ಓ ರಾಜಕುಮಾರಾ! ಹಾಗಿದ್ದರೆ ಕೇಳು. ನಾನು ಅನೇಕದೇಶಗಳನ್ನು ಜಯಿಸಿ, ಅಲ್ಲಲ್ಲಿಂದ ಅಪರಿಮಿತವಾದ ಧನವನ್ನು ಸೇರಿಸಿತಂದು, ಆ ಧನರಾಶಿಯ ಮಧ್ಯದಲ್ಲಿ ಇದ್ದುದನ್ನು ನೋಡಿ ನನಗೆ ಧನಂಜಯನೆಂದು ಹೆಸರಿಟ್ಟರು. ನಾನು ಯಾವಾಗ ಯುದ್ಧಕ್ಕೆ ಹೋದರೂ, ಯುದ್ಧದಿಂದ ಶತ್ರುಗಳನ್ನು ಜಯಿಸದೆ ಹಿಂತಿರುಗುವವನಲ್ಲ. ಹೀಗೆ ಯಾವಾಗಲೂ ಶತ್ರುಜಯವನ್ನು ಮಾಡಿಕೊಂಡೇ ಬರುತ್ತಿದ್ದ ನನ್ನನ್ನು ವಿಜಯನೆಂದು ಹೇಳುವರು. ನಾನು ಶತ್ರುಗಳೊಡನೆ ಯುದ್ಧಕ್ಕಾಗಿ ಹೋಗುವಾಗ, ಸುವರ್ಣಾಲಂಕೃತಗಳಾದ ನಾಲ್ಕು ಬಿಳಿಯ ಕುದುರೆಗಳಿಂದ ಹೂಡಿದ ರಥದಲ್ಲಿ ಕುಳಿತು ಹೋಗುವುದನ್ನು ನೋಡಿ ನನ್ನನ್ನು ಶ್ವೇತವಾಹನನೆನ್ನುವರು. ನನ್ನ ತಲೆಯಮೇಲೆ ಸೂರ್ಯಸಮಾನವಾದ ಕಿರೀಟವು ಶೋಭಿಸುತ್ತಿರುವುದು. ಯುದ್ಧಕಾಲದಲ್ಲಿ ಈ ಕಿರೀಟವನ್ನು ಧರಿಸಿ ರಥದಮೇಲೆ ಕುಳಿತುಕೊಳ್ಳುವೆನು. ಸೂರ್ಯಾಗ್ನಿಗಳಿಗೆ ಸಮಾನ ಕಾಂತಿಯುಳ್ಳದಾಗಿಯೂ,

ಮನೋಹರವಾಗಿಯೂ ಚಿನ್ನದ ಕುಸುರಿಗಳಿಂದಲಂಕೃತವಾಗಿಯೂ ಇರುವ ಈ ಕಿರೀಟವು ದೇವೇಂದ್ರನಿಂದ ನನಗೆ ಕೊಡಲ್ಪಟ್ಟಿತು. ಆ ಕಿರೀಟವು ಇತರರಿಗೆ ಅಬೇಧ್ಯವಾದುದು. ಇಂತಹ ಕಿರೀಟಧಾರಿಯಾದುದರಿಂದ ನನ್ನನ್ನು ಕಿರೀಟಿಯೆನ್ನುವರು. ನಾನು ರಣರಂಗದಲ್ಲಿ ಯುದ್ಧಮಾಡುವಾಗ, ಅಸಹ್ಯವಾದ ಅಥವಾ ಜುಗುಪ್ಸಾವಹನಾದ ಯಾವ ಕಾರ್ಯವನ್ನೂ ಎಂದಿಗೂ ಮಾಡತಕ್ಕವನಲ್ಲ. ಆದುದರಿಂದ ದೇವತೆಗಳಲ್ಲಿಯೂ, ಮನುಷ್ಯರಲ್ಲಿಯೂ ನನಗೆ ಭೀಭತ್ಸುವೆಂಬ ಹೆಸರು ಪ್ರಸಿದ್ಧವಾಯಿತು. ಯುದ್ಧದಲ್ಲಿ ನಾನು ನನ್ನ ಗಾಂಡೀವ ಧನುಸ್ಸನ್ನು ಹಿಡಿದು ಬಾಣಪ್ರಯೋಗ ಮಾಡುವಾಗ, ನನ್ನ ಎರಡು ಕೈಗಳೂ ಸಮಾನವಾಗಿ ಕೆಲಸಮಾಡುತ್ತಿರುವುವು. ಅದರಲ್ಲಿಯೂ ನನ್ನ ಎಡದ ಕೈಯು ಅಧಿಕಲಾಘವವನ್ನು ತೋರಿಸುವುದು. ಇದರಿಂದ ನನ್ನನ್ನು ಸವ್ಯಸಾಚಿಯೆಂದು ಕರೆಯುವರು. ಸಮುದ್ರಾಂತವಾದ ಸಮಸ್ತ ಭೂಮಿಯಲ್ಲಿಯೂ ನನ್ನ ವರ್ಣಕ್ಕೆ ಸಮಾನವಾದ ದೇಹವರ್ಣವು ಬೇರೊಬ್ಬರಿಗಿಲ್ಲವು. ಒಳ್ಳೇ ರೂಪಾತಿಶಯದಿಂದ ಕೂಡಿದ ಶುದ್ಧದೇಹವುಳ್ಳ ನನ್ನನ್ನು ಅರ್ಜುನನೆಂದು ಕರೆಯುವುದಕ್ಕೆ ಇದೇ ಕಾರಣವಾಯಿತು. ಓ ರಾಜಕುಮಾರಾ? ಪೂರ್ವೋತ್ತರ ಫಲ್ಗುನೀ ನಕ್ಷತ್ರಗಳ (ಉಬ್ಬೆ ಮತ್ತು ಉತ್ತರೆ) ಸಂಧಿಕಾಲದಲ್ಲಿ, ಹಗಲುಹೊತ್ತು ಹಿಮಾಲಯಪರ್ವತದ ತಪ್ಪಲಲ್ಲಿ ಹುಟ್ಟಿದವನಾದುದರಿಂದ ನನ್ನನ್ನು ಫಲ್ಗುನನೆಂದು ಹೇಳುವರು. ನನ್ನ ಅಣ್ಣನಾದ ಯುಧಿಷ್ಠಿರನ ಕಣ್ಣಿದಿರಾಗಿ ನನ್ನ ಶರೀರದಲ್ಲಿ ಗಾಯವನ್ನುಂಟುಮಾಡಿದರಾಗಲಿ, ಆ ಯುಧಿಷ್ಠಿರನ ಮೈಯಲ್ಲಿ ಸ್ವಲ್ಪ ರಕ್ತವು ಜಿನುಗುವಂತೆ ಮಾಡಿದರಾಗಲಿ ಅಂಥವನ ವಂಶವನ್ನೇ ನಾನು ಹಾನಿಗೊಳಿಸುವೆನು. ಇದರಲ್ಲಿ ಸಂದೇಹವಿಲ್ಲ. ಎಲ್ಲರೂ ಒಟ್ಟಾಗಿ ಬಂದರೂ, ನಾನು ಅವರನ್ನು ಜಯಿಸುವೆನೇ ಹೊರತು ಅವರಿಂದ ನನಗೆ ಎಂದಿಗೂ ಪರಾಭವವಾಗಲಾರದು. ಈ ಕಾರಣದಿಂದ ದೇವತೆಗಳಲ್ಲಿಯೂ ಮನುಷ್ಯರಲ್ಲಿಯೂ ನನಗೆ ಜಿಷ್ಣುವೆಂಬ ಹೆಸರು ಪ್ರಸಿದ್ಧವಾಯಿತು. ನನ್ನ ತಾಯಿಗೆ ಪೃಥೆಯೆಂದು ಹೆಸರು. ಅದರಿಂದ ನನಗೆ ಪಾರ್ಥನೆಂಬ ಹೆಸರಾಯಿತು. ಓ ಉತ್ತರಾ! ಹಿಂದೆ ನಾನು ಶ್ರೀಕೃಷ್ಣನೊಡನೆ ಸೇರಿ ಖಾಂಡವವನದಲ್ಲಿ ದೇವ, ದಾನವ, ಗಂಧರ್ವರನ್ನೂ, ಪಿಶಾ

ಚರನ್ನೂ, ನಾಗರನ್ನೂ, ರಾಕ್ಷಸರನ್ನೂ ಜಯಿಸಿ ಅಗ್ನಿಯನ್ನು ತೃಪ್ತಿಗೊಳಿಸಿದೆನು. ನಾನು ಆ ಸಂದರ್ಭದಲ್ಲಿ ದೇವರಾಜನಾದ ಇಂದ್ರನೊಡನೆ ಯುದ್ಧಮಾಡುವಾಗ, ಒಮ್ಮೆ ಮೂರ್ಛಿತನಾಗಿ ಬಿದ್ದುಬಿಟ್ಟೆನು. ಆಗ ದೇವಶ್ರೇಷ್ಠರೆನಿಸಿದ ಬ್ರಹ್ಮಮಹರ್ಷಿಗಳಿಬ್ಬರೂ ಬಂದು ಮೂರ್ಛಿತನಾಗಿ, ನೆಲದ ಮೇಲೆ ಬಿದ್ದಿದ್ದ ನನ್ನನ್ನು ನೋಡಿ ವರವನ್ನು ಕೊಟ್ಟು ಅನುಗ್ರಹಿಸಲು ನಾನು ಒಡನೆಯೇ ಮೂರ್ಛೆತಿಳಿದೆದ್ದೆನು. ನಾನು ಅವರಿಗೆ ತಲೆಬಾಗಿ ನಮಸ್ಕರಿಸುತ್ತಾ ನಿಂತಿದ್ದಾಗ, ಅವರಿಬ್ಬರೂ ಪ್ರೀತಿಯಿಂದ ನನಗೆ ಕೃಷ್ಣನೆಂಬ ಹೆಸ್ರೊಂದನ್ನೆಯ ಹೆಸರನ್ನಿಟ್ಟರು. ಅಲ್ಲದೆ, ನನ್ನ ಪರಾಕ್ರಮಕ್ಕೂ, ನನ್ನ ಕಾರ್ಯಗಳಿಗೂ ಅವರಿಬ್ಬರೂ ಸಂತುಷ್ಟರಾಗಿ ಸಮಸ್ತ ದೇವತೆಗಳ ನಡುವೆ ನನ್ನನ್ನು ಕುರಿತು, 'ಅಪ್ಪಾ, ಪಾರ್ಥಾ! ನಿನಗೆ ಇಷ್ಟವಾದ ವರವನ್ನು ಕೇಳು' ಎಂದು ತಾವಾಗಿ ಹೇಳಿದರು. ಆಗ ನಾನು ಅವರಿಂದ ಅನೇಕ ದಿವ್ಯಾಸ್ತ್ರಗಳನ್ನು ಪಡೆದುಕೊಂಡೆನು. ಆಗಲೇ ನನಗೆ ಬ್ರಹ್ಮಾಸ್ತ್ರ, ಪಾಶುಪತಾಸ್ತ್ರ, ಸ್ಥೂಣಾಕರ್ಣ, ಐಂದ್ರ, ವಾರುಣ, ವಾಯವ್ಯ, ಆಗ್ನೇಯ, ವೈಷ್ಣವನೇ ಮೊದಲಾದ ಅನೇಕಾಸ್ತ್ರಗಳು ಲಭಿಸಿದುವು. ಆಮೇಲೆ ನಾನು ಇಂದ್ರನ ರಥವನ್ನೇರಿ, ಇಂದ್ರಸಾರಥಿಯಾದ ಮಾತಲಿಯನ್ನೇ ನನ್ನ ಸಾರಥಿಯನ್ನಾಗಿ ಮಾಡಿಕೊಂಡು, ಬೇರೆ ಯಾರಿಗೂ ದುರ್ಜಯರಾದ ನಿವಾತಕವಚರೆಂಬ ರಾಕ್ಷಸರನ್ನೂ ಕೊಂದೆನು. ಓ ಉತ್ತರಕುಮಾರಾ! ಆ ರಾಕ್ಷಸರು ಸಾಮಾನ್ಯರೆಂದು ತಿಳಿಯಬೇಡ. ಅವರು ಯಾರಿಗೂ ಅಭೇದ್ಯವಾದ ಯುದ್ಧಕವಚವನ್ನು ಧರಿಸಿದವರು. ಅನೇಕ ವರಗಳನ್ನು ಪಡೆದು ಕೊಬ್ಬಿದವರು. ಅವರು ಯುದ್ಧಕ್ಕೆ ಬಂದಮೇಲೆ ಹಿಂತಿರುಗತಕ್ಕವರಲ್ಲ. ಅಂತಹ ಮೂರುಕೋಟಿ ರಾಕ್ಷಸರನ್ನು ನಾನೊಬ್ಬನೇ ಯುದ್ಧದಲ್ಲಿ ಜಯಿಸಿ, ದೇವತೆಗಳನ್ನು ಸಂತೋಷಗೊಳಿಸಿದೆನು. ಆಗ ಪೂಜ್ಯನಾದ ದೇವೇಂದ್ರನು ನನಗೆ ತನ್ನ ಕೈಯಿಂದಲೇ ಒಂದು ಕಿರೀಟವನ್ನು ತಂದಿಟ್ಟನು. ಆಗ ನನಗೆ ದೇವತೆಗಳು ಶತ್ರುಸೈನ್ಯಭೇದಕವಾದ ಒಂದು ಶಂಖವನ್ನು ಕೊಟ್ಟರು. ಮತ್ತು ಓ ರಾಜಪುತ್ರಾ! ಸಮುದ್ರದ ಕೊನೆಯಲ್ಲಿರುವ ಹಿರಣ್ಯಪುರವೆಂಬ ನಗರದಲ್ಲಿ ವಾಸಮಾಡುತ್ತಿದ್ದ ಅರುವತ್ತು ಸಾವಿರ ದಾನವರನ್ನು ಕೊಂದು ಯುದ್ಧದಲ್ಲಿ ಜಯವನ್ನು ಪಡೆದೆನು. ನಾನು ರಣ-

ರಂಗದಲ್ಲಿ ಸ್ವಲ್ಪವಮಾತ್ರವೂ ಕಳವಳವಿಲ್ಲದೆ, ರಥಾರೂಢನಾಗಿ ಶತ್ರುಗಳು ನೂರುಮಂದಿಯಿದ್ದರೂ ನಿರ್ಭಯವಾಗಿ ನಿಂತು ಇದಿರಿಸುವೆನು. ಎಂತಹ ಸಂದರ್ಭಗಳಲ್ಲಿಯೂ ನಾನು ಶತ್ರುಗಳಿಂದ ಅವಮಾನಿತನಾದವನಲ್ಲ. ಎಂತಹ ಕಠಿನದಶೆಯಲ್ಲಿಯೂ ನಾನು ಶತ್ರುಗಳಿದಿರಿಗೆ ದಿಗ್ಭ್ರಾಂತನಾಗ ತಕ್ಕವನಲ್ಲ. ಹಿಂದೊಮ್ಮೆ ಗಂಧರ್ವರಾಜನು ಯುದ್ಧದಲ್ಲಿ ದುರ್ಯೋಧನನನ್ನು ಜಯಿಸಿ, ಅವನ ಸಹೋದರರೊಡನೆ ಅವನನ್ನೂ ಸೆರೆಹಿಡಿದು, ಹಿಂಗಟ್ಟುಕಟ್ಟಿ ಎತ್ತಿಕೊಂಡು ಹೋಗುತ್ತಿದ್ದಾಗ, ನಾನೇ ಹದಿನಾಲ್ಕು ಸಾವಿರಮಂದಿ ಗಂಧರ್ವರನ್ನೂ ಸೋಲಿಸಿ ದುರ್ಯೋಧನನನ್ನು ಬಿಡಿಸಿದೆನು. ಉತ್ತರಾ! ಈಗ ನಾನು ಹೇಳಿದ ದಶನಾಮಗಳನ್ನು ದಿನದಿನವೂ ಯಾವನು ಬಾಯಿಂದ ಹೇಳುವನೋ, ಅವನಿಗೆ ಅಪಮೃತ್ಯುಗಳೆಲ್ಲವೂ ತಪ್ಪುವುವು. ಕ್ರೂರವ್ಯಗಳು ಅವನನ್ನು ಕಣ್ಣೆತ್ತಿ ನೋಡಲಾರವು. ಶತ್ರುಗಳು ಅವನನ್ನು ನಿಗ್ರಹಿಸಲಾರರು. ಉತ್ತರಾ! ಇನ್ನು ನಿನ್ನ ಮನಸ್ಸಿನ ಭಯವನ್ನು ಬಿಡು. ಶತ್ರುದುಸ್ಸಹವಾದ ನನ್ನವೀರ್ಯವನ್ನು ಈಗ ನೀನೂ ನೋಡುವೆ. ಗುಂಪಾಗಿ ಬಂದಿರುವ ಈ ಕೌರವಸೈನ್ಯವೆಲ್ಲವನ್ನೂ ನೋಡಿ ನೀನೇನೂ ಹೆದರಬೇಕಾಗಿಲ್ಲ. ನಿರ್ಭಯವಾಗಿ ನಿಂತಿರು. ಆ ದುರ್ಯೋಧನನೂ, ಕರ್ಣ, ಕೃಪ, ಭೀಷ್ಮ, ದ್ರೋಣಾಶ್ವತ್ಥಾಮರೂ ನೋಡುತ್ತಿರುವಾಗಲೇ ಈ ಕೌರವರನ್ನು ಜಯಿಸಿ, ನಮ್ಮ ಗೋವುಗಳನ್ನೆಲ್ಲಾ ಹಿಂತಿರುಗಿಸುವೆನು ನೋಡು" ಎಂದನು.

ಇದು ನಾಲ್ವತ್ತುಮೂರನೆಯ ಅಧ್ಯಾಯವು.

ಉತ್ತರನು ಬೃಹನ್ನಳೆಯನ್ನು ಅರ್ಜುನನೆಂದು ತಿಳಿದಮೇಲೆ, ತಾನು ಅಜ್ಞಾನದಿಂದ ಅವನಲ್ಲಿ ಮಾಡಿದ ಅಪರಾಧಕ್ಕಾಗಿ ಮನ್ನಣೆಯನ್ನು ಬೇಡಿದುದು. ಅರ್ಜುನನು ತನ್ನ ಸಪ್ತಂಸಕತ್ವಪ್ರಾಪ್ತಿಗೆ ಕಾರಣವನ್ನು ತಿಳಿಸಿದುದು.

ಓ ಜನಮೇಜಯರಾಜಾ! ಉತ್ತರನು ಬೃಹನ್ನಳೆಯ ನಿಜಸ್ಥಿತಿಯನ್ನು ತಿಳಿದುಕೊಂಡಮೇಲೆ, ಅವನ ಮುಂದೆ ಕೈಮುಗಿದು ಪ್ರಣಾಮ

ಮಾಡಿ "ಓ ಧನಂಜಯಾ! ಭೂಮಿಂಜಯನೆಂಬ ಹೆಸರುಳ್ಳ ನಾನು ನಮಸ್ಕರಿಸುವೆನು. ಭಾಗ್ಯವಶದಿಂದ ನಾನು ನಿನ್ನನ್ನು ನೋಡುವಂತಾಯಿತು. ನಿಮ್ಮೆಲ್ಲರಿಗೆ ಶುಭಾಗಮವು. ಓ ಮಹಾಬಾಹೂ! ಮಹಾಪುರುಷ ಲಕ್ಷಣ ಸೂಚಕವಾದ ಕಣ್ಣುಳ್ಳವನೇ! ಗಜಶ್ರೇಷ್ಠಕ್ಕೆ ಸಮಾನನಾದವನೇ! ನಾನು ಅಜ್ಞಾನದಿಂದಲೂ, ಆತುರದಿಂದಲೂ ನಿನ್ನಲ್ಲಿ ಆಡಿದ ಮಾತುಗಳೇನಿದ್ದರೂ, ಅವನ್ನು ನೀನು ಮನಸ್ಸಿನಲ್ಲಿಡದೆ ನನ್ನನ್ನು ಮನ್ನಿಸಬೇಕು. ನೀನು ಹಿಂದೆ ನಡೆಸಿದ ಬೇರೊಬ್ಬರಿಗೆ ಸಾಧ್ಯವಲ್ಲದ ವಿಚಿತ್ರಕಾರ್ಯಗಳನ್ನು ಕೇಳಿದಮೇಲೆ, ನನಗೆ ಈ ಯುದ್ಧಭಯವು ಸಂಪೂರ್ಣವಾಗಿ ಬಿಟ್ಟುಹೋಯಿತು. ನಿನ್ನಲ್ಲಿ ಈಗ ನನಗೆ ಅಸಾಧಾರಣಭಕ್ತಿ ಹುಟ್ಟಿದೆ. ನಾನು ನಿನ್ನ ದಾಸನು. ನನ್ನನ್ನು ದಯೆಯಿಂದ ನೋಡಬೇಕು. ನಿನಗೆ ಸಾರಥ್ಯದಿಂದ ನಾನು ಹಿಂದೆ ಯಾವ ಪ್ರತಿಜ್ಞೆಯನ್ನು ಮಾಡಿದ್ದೆನೋ, ಆ ನನ್ನ ಪ್ರತಿಜ್ಞೆಯು ಈಗ ಪೂರ್ಣವಾದಂತೆಯೇ! ನನ್ನ ಸಂತೋಷಕ್ಕೆ ಪಾರವಿಲ್ಲದಂತಿದೆ. ನಾನು ಇಂದ್ರಪುತ್ರನಾದ ಅರ್ಜುನನಿಗೆ ಯುದ್ಧದಲ್ಲಿ ಸಾರಥಿಯಾಗುವೆನೆಂದು ಜಂಭದಿಂದ ಹೇಳಿಕೊಳ್ಳುತ್ತಿದ್ದೆನು. ಈಗ ನಿನಗೆ ಸಾರಥ್ಯವನ್ನು ಮಾಡುವುದರಿಂದ, ಆ ನನ್ನ ಪ್ರತಿಜ್ಞೆಯು ಪೂರ್ಣವಾಯಿತು. ಈಗ ನನ್ನ ಮನಸ್ಸಿಗೆ ನೆಮ್ಮದಿಯುಂಟಾಯಿತು. ನಾನು ದೊಡ್ಡ ಭಾಗ್ಯಕ್ಕೆ ಪಾತ್ರನಾದೆನು. ಓ ವೀರಾಗ್ರಣೀ! ಸಾರಥಿಯಾದ ನನ್ನೊಡನೆ ಈ ದೊಡ್ಡ ರಥವನ್ನೇರಿ, ಯುದ್ಧದಲ್ಲಿ ದುರ್ಯೋಧನನನ್ನು ಜಯಿಸಿ, ನಮ್ಮ ಗೋವುಗಳನ್ನು ಹಿಂತಿರುಗಿಸು" ಎಂದನು. ಅದಕ್ಕಾ ಅರ್ಜುನನು "ಓ ರಾಜಕುಮಾರಾ! ನಿನ್ನ ಮಾತುಗಳಿಗಾಗಿ ನಾನು ಸಂತೋಷಪಟ್ಟೆನು. ಇನ್ನು ನೀನು ಭಯಪಡಬೇಕಾದುದಿಲ್ಲ. ಈ ಯುದ್ಧದಲ್ಲಿ ನಿನ್ನ ಶತ್ರುಗಳೆಲ್ಲರನ್ನೂ ನಿಮಿಷಮಾತ್ರದಲ್ಲಿ ಓಡಿಸುವೆನು. ನೀನು ಮನಸ್ಸಿನಲ್ಲಿ ನೆಮ್ಮದಿಯಿಂದಿರು. ಈ ಯುದ್ಧದಲ್ಲಿ ಶತ್ರುಗಳೊಡನೆ ನಾನು ಯುದ್ಧ ಮಾಡುವ ರೀತಿಯನ್ನೂ, ಆಗ ನನ್ನ ಭಯಂಕರವಾದ ಅಟ್ಟಹಾಸವನ್ನೂ ನೋಡು. ಉತ್ತರಾ! ನನ್ನ ಗಾಂಡೀವಧನುಸ್ಸನ್ನೂ, ದೇವದತ್ತವೆಂಬ ಶಂಖವನ್ನೂ, ಚಿನ್ನದ ಹಿಡಿಗಳುಳ್ಳ ಬಾಣಗಳನ್ನೂ, ಬತ್ತಳಿಕೆಗಳನ್ನೂ ಬೇಗನೆ ರಥದಲ್ಲಿ ತಂದಿಡು. ಚಿನ್ನದ ಕಟ್ಟುಳ್ಳ ಒಂದು ಕತ್ತಿ

ಯನ್ನೂ ತಂದಿಡು. ನಾನೇ ಕುರುಗಳೊಡನೆ ಯುದ್ಧಮಾಡಿ ಗೋವುಗಳನ್ನು ಬಿಡಿಸಿ ನಿನ್ನ ತಂದೆಯನ್ನು ಸಂತೋಷಗೊಳಿಸುವೆನು. ನಾವು ಜಯೋತ್ಸಾಹದಿಂದ ತಿರುಗಿ ಪುರಪ್ರವೇಶಮಾಡುವೆವು. ಉತ್ತರಕುಮಾರಾ! ನೀನೇನೂ ಹೆದರಬೇಕಾದುದಿಲ್ಲ. ನನ್ನಿಂದ ರಕ್ಷಿತವಾದ ಈ ರಥಮಧ್ಯವು ನಿನಗೆ ನಿನ್ನ ನಗರದಂತೆಯೇ ಇರುವುದೆಂದು ತಿಳಿ. ನೀನು ಈಗ ಈ ಯುದ್ಧರಥದಲ್ಲಿ ಕುಳಿತರೂ ನಿನ್ನ ನಗರದಲ್ಲಿದ್ದಂತೆಯೇ ನಿರ್ಭಯವಾಗಿರಬಹುದು. ನನ್ನ ಮನಸ್ಸಂಕಲ್ಪವೆಂಬ ಅಗುಳಿಗಳಿಂದಲೂ, ನನ್ನ ತೋಳುಗಳೆಂಬ ಪ್ರಾಕಾರ ತೋರಣಗಳಿಂದಲೂ, ಮೂತಿಗಳೆಂಬ ಬತ್ತಳಿಕೆಗಳಿಂದಲೂ, ನಾನಾತರದ ವಿಚಿತ್ರ ಧನುಷ್ಟಂಕಾರಗಳೆಂಬ (ಜನರ) ಕೋಲಾಹಲದಿಂದಲೂ, ಚಕ್ರನೇಮಿಧ್ವನಿಯೆಂಬ ದುಂದುಭಿವಾದ್ಯಗಳಿಂದಲೂ, ಬಾಣಸಮೂಹಗಳೆಂಬ ಮೇಲ್ಕಟ್ಟುಗಳಿಂದಲೂ, ನನ್ನ ಸಿಂಹನಾದವೆಂಬ ಕೂಗಾಟದಿಂದಲೂ ಕೂಡಿದ ಈ ರಥಮಧ್ಯವೇ ನಿನಗೆ ಸುಖನಿವಾಸವಾದ ನಗರವೆಂದು ತಿಳಿದು ಧೈರ್ಯದಿಂದಿರು. ಗಾಂಡೀವಧಾರಿಯಾದ ನಾನು ಈ ರಥವನ್ನೇರಿ ಕುಳಿತಮೇಲೆ, ಯುದ್ಧದಲ್ಲಿ ಎಂತಹ ಶತ್ರುಸೈನ್ಯಗಳಿಗೂ ನನ್ನನ್ನು ಜಯಿಸಲಸಾಧ್ಯವೆಂದು ತಿಳಿ. ಇನ್ನು ನಿನ್ನ ಅಂಜಿಕೆಯನ್ನು ಸಂಪೂರ್ಣವಾಗಿ ಬಿಟ್ಟುಬಿಡು'' ಎಂದನು.

ಅದಕ್ಕಾ ಉತ್ತರನು, ''ಓ ಧನಂಜಯಾ! ಇನ್ನು ಹೆಚ್ಚುಮಾತಿನಿಂದೇನು? ಒಂದೇ ಮಾತನ್ನು ಹೇಳುವೆನು ಕೇಳು. ಇನ್ನುಮೇಲೆ ಸಾಕ್ಷಾದ್ದೇವೇಂದ್ರನೇ ನನ್ನಿದಿರಿಗೆ ಬಂದರೂ ನಾನು ಹೆದರುವನಲ್ಲ. ಯಮ, ವಾಯು, ಕುಬೇರರಲ್ಲಿ ಯಾರೇ ಬಂದರೂ ನನಗೆ ಭಯವಿಲ್ಲ. ನೂರಾರು ಮಂದಿ ಭೀಷ್ಮದ್ರೋಣರು ಬಂದು ನಿಂತರೂ ಇವರಿಗೆಲ್ಲಾ ನಾನು ಅಂಜುವವನಲ್ಲ. ಯುದ್ಧದಲ್ಲಿ ನೀನು ಹಿಂಜರಿಯುವವನಲ್ಲವೆಂಬುದನ್ನು ನಾನೂ ಬಲ್ಲೆನು. ನೀನು ಯುದ್ಧದಲ್ಲಿ ಸಾಕ್ಷಾನ್ನಾರಾಯಣನಿಗೂ, ದೇವೇಂದ್ರನಿಗೂ ಸಮಾನನೆಂಬುದನ್ನೂ ಬಲ್ಲೆನು. ಆದರೆ ನನಗೆ ಒಂದು ವಿಧವಾದ ಸಂಶಯವು ಮಾತ್ರ ಇನ್ನೂ ಬಿಟ್ಟುಹೋಗಿಲ್ಲ. ಅದೊಂದನ್ನು ಮಾತ್ರ ಈಗಲೂ ಆಲೋಚಿಸುತ್ತ ನನ್ನ ಬುದ್ಧಿಯು ಕಳವಳಿಸುತ್ತಿರುವುದು.

ನಿಶ್ಚಯಜ್ಞಾನವು ಹುಟ್ಟದಿರುವುದು. ಯಾವುದೂ ಬುದ್ಧಿಗೆ ತೋರದಂತಿದೆ. ಏಕೆಂದರೆ, ಅಂತಹ ಉತ್ತಮವಾದ ಮೈಕಟ್ಟಿನಿಂದಲೂ, ರೂಪದಿಂದಲೂ, ಶುಭಲಕ್ಷಣಗಳಿಂದಲೂ ಕೂಡಿದ ನಿನಗೆ, ಯಾವ ಪ್ರಾರಬ್ಧ ಕರ್ಮಫಲದಿಂದ ಇಂತಹ ನಪುಂಸಕತ್ವವು ಪ್ರಾಪ್ತವಾಯಿತೋ ತಿಳಿಯಲಿಲ್ಲ. ಗಂಧರ್ವರಾಜನಿಗೆ ಸಮಾನವಾದ ತೇಜಸ್ಸುಳ್ಳ ನಿನ್ನನ್ನು ನೋಡಿದರೆ, ಕ್ಲೀಬ(ನಪುಂಸಕ) ವೇಷದಿಂದ ಸಂಚರಿಸುತ್ತಿರುವ ಶೂಲಪಾಣಿಯೋ, ಅಥವಾ ದೇವೇಂದ್ರನೋ ಎಂದು ಮನಸ್ಸಿಗೆ ತೋರುವುದು. ಈ ಸ್ಥಿತಿಯು ನಿನಗೆ ಹೇಗೆ ಪ್ರಾಪ್ತವಾಯಿತು?'' ಎಂದನು. ಆದಕ್ಕಾ ಅರ್ಜುನನು ''ಓ ರಾಜಕುಮಾರಾ! ಇದರ ನಿಜಾಂಶವನ್ನು ತಿಳಿಸುವೆನು ಕೇಳು. ನನ್ನ ಅಣ್ಣನ ಆಜ್ಞೆಯಿಂದ ಒಂದು ವರ್ಷಕಾಲದವರೆಗೆ ಬ್ರಹ್ಮಚರ್ಯವ್ರತವನ್ನು ನಾನು ಅನುಷ್ಠಿಸಬೇಕಾಯಿತು. ನಾನು ನಪುಂಸಕನಲ್ಲ. ಧರ್ಮಕ್ಕೆ ಕಟ್ಟುಬಿದ್ದು, ಪರಾಧೀನನಾಗಿ, ಈ ಸ್ಥಿತಿಯಲ್ಲಿರುವೆನು. ನನಗೆ ಈ ನಪುಂಸಕವೇಷವು ಊರ್ವಶಿಯ ಶಾಪದಿಂದ ಬಂದುದು. ಹಿಂದೊಮ್ಮೆ ನಾನು ನನ್ನ ಅಣ್ಣನಾದ ಯುಧಿಷ್ಠಿರನ ನಿಯಮಾನುಸಾರವಾಗಿ, ದೇವಲೋಕಕ್ಕೆ ಹೋದೆನು. ಅಲ್ಲಿನ ಸುಧರ್ಮಾಸಭೆಯಲ್ಲಿ ಇಂದ್ರನ ಮುಂದೆ ಅತ್ಯಂತ ರೂಪವತಿಯಾದ ಊರ್ವಶಿಯೆಂಬವಳು ನರ್ತನಮಾಡುತ್ತಿದ್ದುದನ್ನು ಕಂಡೆನು. ಅವಳ ರೂಪಕ್ಕೆ ವಿಸ್ಮಿತನಾಗಿ ನಾನು ಎವೆಯಿಕ್ಕದೆ ಅವಳನ್ನೇ ನೋಡುತ್ತಿದ್ದೆನು. ಓ ರಾಜಕುಮಾರಾ! ಆ ಊರ್ವಶಿಯೆಂಬವಳು ನಮ್ಮ ವಂಶಕ್ಕೆ ಕೂಟಸ್ಥಳು. ಅಂತವಳು ರಾತ್ರಿ ನನ್ನೊಡನೆ ರಮಿಸಬೇಕೆಂಬ ಆಶೆಯಿಂದ ನನ್ನ ಹಾಸಿಗೆಯ ಬಳಿಗೆ ಬಂದಳು. ಆದರೆ, ಅವಳನ್ನು ಕಂಡೊಡನೆ ನಾನು ತಾಯಿಯಂತೆ ಗೌರವಿಸಿ ನಮಸ್ಕರಿಸಿದೆನೇ ಹೊರತು ಅವಳ ಅಭಿಪ್ರಾಯಕ್ಕೆ ಸಮ್ಮತಿಸಲಿಲ್ಲ. ಆಗ ಅವಳು ನನ್ನಲ್ಲಿ ಕೋಪಗೊಂಡು, 'ನೀನು ಶಿಖಂಡಿಯಾ'ಗೆಂದು ನನ್ನನ್ನು ಶಪಿಸಿದಳು. ಇದನ್ನು ಕೇಳಿದೊಡನೆ ದೇವೇಂದ್ರನು ನನ್ನನ್ನು ಕರೆಸಿಕೊಂಡು 'ಓ ವತ್ಸ ಪಾರ್ಥ! ಇದಕ್ಕಾಗಿ ನೀನು ಹೆದರಬೇಡ! ಈ ಷಂಡತ್ವವೇ ಮುಂದೆ ನಿನಗೆ ಅಜ್ಞಾತವಾಸಕಾಲದಲ್ಲಿ ಉಪಕಾರಕವಾಗುವುದು' ಎಂದು ನನ್ನನ್ನು ಸಮಾಧಾನಪಡಿಸಿ ಕಳುಹಿಸಿಬಿಟ್ಟನು. ಓ ರಾಜಕುಮಾರಾ! ಈಗ ನಾನು

ಆ ವ್ರತವನ್ನು ಪೂರ್ಣವಾಗಿ ಅನುಷ್ಠಿಸಿ ಮುಗಿಸಿದುದಾಯಿತು. ಈಗ ನಾನು ಆ ವ್ರತಾನುಷ್ಠಾನದಿಂದ ಕೃತಕೃತ್ಯನಾಗಿರುವೆನೆಂದು ತಿಳಿ'' ಎಂದನು. ಅದಕ್ಕಾ ಉತ್ತರನು, ''ಓ ಮಹಾಬಾಹೂ! ಈಗ ನಾನು ಅನುಗೃಹೀತನಾದೆನು. ನನ್ನ ಊಹೆಯು ಈಗ ಸಾರ್ಥಕವಾಯಿತು. ನಿನ್ನಂತಹ ಪುರುಷಶ್ರೇಷ್ಠರಿಗೆ ಈ ವಿಧವಾದ ನಪುಂಸಕತ್ವವು ಹೇಗೆತಾನೇ ಉಂಟಾದೀತು? ಇನ್ನು ನಾನು ಯುದ್ಧದಲ್ಲಿ ದೇವತೆಗಳೊಡನೆಯಾದರೂ ಹೋರಾಡಬಲ್ಲೆನು. ನಿನ್ನಿಂದ ನನಗೆ ಪೂರ್ಣಸಹಾಯವು ದೊರೆತು, ಈಗ ನನ್ನ ಭಯವು ಎಲ್ಲಿಯೋ ಹೋಯಿತು. ಮುಂದೇನುಮಾಡಬೇಕೆಂಬು ದನ್ನು ಆಜ್ಞಾಪಿಸು. ನಾನೇ ನಿನಗೆ ಕುದುರೆಗಳನ್ನು ನಡೆಸುವೆನು. ನಾನೂ ಸಾರಥ್ಯಕಾರ್ಯದಲ್ಲಿ ಶಿಕ್ಷೆಯನ್ನು ಹೊಂದಿದವನೇ! ಕೃಷ್ಣನಿಗೆ ದಾರುಕನೂ ಇಂದ್ರನಿಗೆ ಮಾತಲಿಯೂ ಹೇಗೋ ಹಾಗೆ, ಸಾರಥ್ಯದಲ್ಲಿ ನಾನು ಸುಶಿಕ್ಷಿತ ನೆಂದು ತಿಳಿ. ಇದೋ! ರಥಕ್ಕೆ ಕಟ್ಟಿರುವ ಈ ಉತ್ತಮಾಶ್ವಗಳು ಯುದ್ಧ ದಲ್ಲಿ ದುರ್ಜಯಗಳು. ಮಹಾಬಲವುಳ್ಳವು. ಎಂತಹ ಕಷ್ಟವನ್ನಾದರೂ ಸಹಿಸಬಲ್ಲುವು. ಇಂತಹ ಕುದುರೆಗಳು ನಿನ್ನಂತವನಿಗೇ ಯೋಗ್ಯವಾದವು ಗಳು. ಈ ಕುದುರೆಗಳಲ್ಲಿ ಬಲಗಡೆಗೆ ಕಟ್ಟಿರುವ ಈ ಅಶ್ವರತ್ನವು ಸುಗ್ರೀವ ವೆಂಬ ಲೋಕಪ್ರಸಿದ್ಧವಾದ ಕುದುರೆಗೆ ಸಮಾನವಾದುದು. ಇದು ಓಡು ವಾಗ ನೆಲದಮೇಲೆ ಕಾಲಿಡುವುದನ್ನೇ ಯಾರೂ ಅರಿಯಲಾರರು. ಇದೋ! ಎಡಗಡೆಗೆ ಕಟ್ಟಿರುವ ಈ ಮಂಗಳಕರವಾದ ಕುದುರೆಯು, ವೇಗದಲ್ಲಿ ಮೇಘಪುಷ್ಪವೆಂಬ ಪ್ರಸಿದ್ಧಾಶ್ವಕ್ಕೆ ಸಮಾನವಾದುದು. ಈ ಎರಡು ಕುದುರೆಗಳಿಗೆ ಹಿಂದಿರುವ ಕುದುರೆಗಳಲ್ಲಿ ಬಲಭಾಗದ ಕುದುರೆಯು ಬಲಾಹ ಕವೆಂಬ ಕುದುರೆಗಿಂತಲೂ ತೇಜಸ್ಸಿನಲ್ಲಿಯೂ, ವೀರ್ಯದಲ್ಲಿಯೂ ಮೇಲೆ ನಿಸಿದೆ. ಅದರೊಡನೆ ಈ ಎಡಪಕ್ಕದಲ್ಲಿರುವ ನಾಲ್ಕನೆಯ ಕುದುರೆಯು, ವೇಗದಲ್ಲಿ ಶೈಬ್ಯವೆಂಬ ಕುದುರೆಗೆ ಸಮಾನವೆನಿಸಿರುವುದು. ಆದುದರಿಂದ, ಓ ಕಿರೀಟೀ! ಈ ಮಹಾರಥವೂ, ಈ ಕುದುರೆಗಳೂ ನಿನಗೇ ಯೋಗ್ಯವಾ ದವು. ಇಂತಹ ರಥವನ್ನೇರಿ ಯುದ್ಧಮಾಡುವುದಕ್ಕೂ ನೀನೊಬ್ಬನೇ ಯೋಗ್ಯನೆಂದು ನಾನು ಭಾವಿಸುವೆನು. ಅರ್ಜುನಾ! ಇನ್ನು ನೀನು ಈ

ರಥವನ್ನೇರಿ, ದೈತ್ಯರನ್ನು ದೇವರಾಜನು ಹೇಗೋಹಾಗೆ ಸಮಸ್ತ ಶತ್ರು ಗಳನ್ನಿದಿರಿಸಿ ಯುದ್ಧಮಾಡು'' ಎಂದನು.

ಎಲೈ ಜನಮೇಜಯರಾಜನೇ ಕೇಳು! ಒಡನೆಯೇ ಅರ್ಜುನನು ರಥ ದಿಂದ ಕೆಳಗಿಳಿದು, ದೇವತೆಗಳನ್ನು ಧ್ಯಾನಿಸಿ ಕೈಮುಗಿದು, ತನ್ನ ಗಾಂಡೀವ ಧನುಸ್ಸನ್ನು ಕೈಗೆ ತೆಗೆದುಕೊಂಡನು. ಆಮೇಲೆ ತಾನು ತೋಳುಗಳಲ್ಲಿ ತೊಟ್ಟಿದ್ದ ಶಂಖದ ಬಳೆಗಳನ್ನು ಕಳಚಿ ಬಿಸಾಡಿದನು. ದುಂದುಭಿ ಧ್ವನಿಯಂತೆ ಧ್ವನಿಯುಳ್ಳ ತನ್ನ ಕೈಗಳಿರಡಕ್ಕೂ ಕೈಚೀಲಗಳನ್ನಿಟ್ಟು ಕೊಂಡನು. ತನಗೆ ಇಂದ್ರನಿಂದ ಕೊಡಲ್ಪಟ್ಟಿದ್ದ ದಿವ್ಯಕುಂಡಲಗಳಿರ ಡನ್ನೂ ತೊಟ್ಟುಕೊಂಡನು. ಮೃದುವಾಗಿಯೂ, ನುಣುಪಾಗಿಯೂ ಇದ್ದ ತನ್ನ ತಲೆಕೂದಲುಗಳನ್ನು ಒಂದು ಬಿಳಿಯ ಬಟ್ಟೆಯಿಂದ ಮೇಲಕ್ಕೆತ್ತಿ ಕಟ್ಟಿದನು. ಆಮೇಲೆ ಪೂರ್ವಾಭಿಮುಖವಾಗಿ ನಿಂತು, ಶುಚಿಯಾಗಿ, ಸ್ಥಿರ ಮನಸ್ಸಿನಿಂದ ಎಲ್ಲಾ ಅಸ್ತ್ರದೇವತೆಗಳನ್ನೂ ಧ್ಯಾನಿಸಿದನು. ಒಡನೆಯೇ ಆ ಅಸ್ತ್ರಗಳೆಲ್ಲವೂ ನಿಜಾಕಾರದಿಂದ ಕಾಣಿಸಿಕೊಂಡು, ಕೈಮುಗಿದು ನಿಂತು ಅರ್ಜುನನನ್ನು ಕುರಿತು 'ಓ ಇಂದ್ರಪುತ್ರಾ! ಇದೋ! ನಾವು ನಿನ್ನ ಕಿಂಕರ ರಾಗಿರುವೆವು' ಎಂದು ಹೇಳಲು, ಅರ್ಜುನನು ತನ್ನ ಆ ಅಸ್ತ್ರದೇವತೆಗ ಳನ್ನು ನಮಸ್ಕರಿಸಿ, ಕೈಯಿಂದ ಸ್ಪರ್ಶಿಸಿ 'ಓ ಮಹಾಸ್ತ್ರಗಳೇ! ಇನ್ನು ನೀವೆಲ್ಲರೂ ಈ ಯುದ್ಧಕಾಲದಲ್ಲಿ ನನ್ನ ಮನಸ್ಸಿನಲ್ಲಿ ನೆಲೆಯಾಗಿರಿ' ಎಂದನು. ಆಮೇಲೆ ಅರ್ಜುನನು ಮಹೋತ್ಸಾಹದಿಂದ ಅಸ್ತ್ರಗಳನ್ನು ಕೈಗೆ ತೆಗೆದುಕೊಂಡನು. ತನ್ನ ಗಾಂಡೀವವೆಂಬ ಧನುಸ್ಸನ್ನು ನಾಣೇರಿಸಿ, ಒಂದಾವರ್ತಿ ಅದರ ನಾಣನ್ನು ತಟ್ಟಿದನು. ಆ ನಾಣನ್ನು ತಟ್ಟಿದ ಧ್ವನಿ ಯು ಬೆಟ್ಟದಿಂದ ಬೆಟ್ಟವನ್ನು ಹೊಡೆಯುವುದರಿಂದುಂಟಾದ ಶಬ್ದದಂತೆ ಕೇಳಿಸಿತು. ಭೂಮಿಯಮೇಲೆ ಸಿಡಿಲು ಬಡಿದಂತಾಯಿತು. ನಾನಾದಿಕ್ಕು ಗಳಲ್ಲಿಯೂ ಬಿರುಗಾಳಿಯು ಬೀಸಿದಂತಾಯಿತು. ಆಕಾಶದ ಪಕ್ಷಿಗಳೆ ಲ್ಲವೂ ದಿಗ್ಭ್ರಮೆಹಿಡಿದಂತೆ ತತ್ತಳಿಸುತ್ತಿದ್ದುವು. ದೊಡ್ಡ ಮರಗಳೆ ಲ್ಲವೂ ನಡುಗಿಹೋದುವು. ಸಿಡಿಲಿಗೂ, ಗರುಡಗರ್ಜನೆಗೂ ಸಮಾನ ವಾದ ಈ ಮಹಾಧ್ವನಿಯನ್ನು ಕೇಳಿ ಕೌರವರೆಲ್ಲರೂ ಭಯದಿಂದ ನಡುಗಿ

ದರು. ಅವರಿಗೆ ಮೊದಲಿದ್ದ ಯುದ್ಧೋತ್ಸಾಹವೇ ಬಿಟ್ಟುಹೋಯಿತು. ಇಂದ್ರನು ತನ್ನ ವಜ್ರಪಾತದಿಂದ ಭೂಮಿಯಲ್ಲಿ ಸಿಡಿಲನ್ನು ಹುಟ್ಟಿಸುವಂತೆ, ಅರ್ಜುನನು ತನ್ನೆರಡು ಕೈಗಳಿಂದಲೂ ಆ ಧನುಸ್ಸನ್ನು ಎಳೆದೆಳೆದು ಟಂಕಾರಧ್ವನಿಯನ್ನು ಮಾಡುತ್ತಿದ್ದನು. ಹೀಗೆ ರಥದಲ್ಲಿದ್ದ ಹಾಗೆಯೇ ಅರ್ಜುನನು ಅಶನಿಘೋಷದಂತಿರುವ ತನ್ನ ಧನುಷ್ಟಂಕಾರದಿಂದ ವೀರರಾದ ಶತ್ರುಗಳನ್ನು ಹೆದರಿಸುತ್ತಿದ್ದನು. ಆಗ ಉತ್ತರನು ಅರ್ಜುನನನ್ನು ಕುರಿತು "ಓ ಪಾಂಡವಶ್ರೇಷ್ಠಾ! ನೀನಾದರೋ ಇಲ್ಲಿ ಏಕಾಕಿಯಾಗಿರುವೆ. ಅಲ್ಲಿ ಸಮಸ್ತ ಶಸ್ತ್ರಾಸ್ತ್ರಗಳಲ್ಲಿಯೂ ನಿಪುಣರಾದ ಅನೇಕ ಮಹಾರಥರು ಒಟ್ಟಾಗಿ ಸೇರಿ ಬಂದಿರುವರು. ನೀನು ಈ ಯುದ್ಧದಲ್ಲಿ ಅವರನ್ನು ಜಯಿಸುವ ಬಗೆ ಹೇಗೆ? ಇಲ್ಲಿ ನೀನು ಅಸಹಾಯನಾಗಿರುವೆ. ಆ ಕೌರವರಾದರೋ ಅನೇಕ ಸೇನಾಸಮೂಹಗಳೊಡನೆ ಬಂದಿರುವರು. ಇದರಿಂದ ನನ್ನ ಮನಸ್ಸಿಗೇನೋ ಭೀತಿಯು ತೋರುತ್ತಿರುವುದು" ಎಂದನು. ಆಗ ಅರ್ಜುನನು ಅಟ್ಟಹಾಸದಿಂದ ನಕ್ಕು, ಉತ್ತರನನ್ನು ಕುರಿತು "ಓ ರಾಜಕುಮಾರಾ! ನೀನು ಹೆದರಬೇಡ. ನನಗೆ ಸಹಾಯವಿಲ್ಲವೆಂದು ನೀನು ಚಿಂತಿಸಬೇಕಾದುದಿಲ್ಲ. ಹಿಂದೆ ಮಹಾಬಲಾಢ್ಯರಾದ ಗಂಧರ್ವರೊಡನೆ ನಾನು ಘೋಷಯಾತ್ರೆಯಲ್ಲಿ ಹೋರಾಡಿ ಜಯಿಸಲಿಲ್ಲವೇ? ಖಾಂಡವವನದಲ್ಲಿ ದೇವದಾನವರೊಡನೆ ಯುದ್ಧಮಾಡಿ ಜಯಿಸಲಿಲ್ಲವೇ? ಆಗ ನನಗೆ ಯಾರು ಸಹಾಯಕರಾಗಿದ್ದರು? ದೇವೇಂದ್ರನ ಸಹಾಯಕ್ಕಾಗಿ ನಾನು ಮಹಾಬಲವುಳ್ಳ ನಿವಾತಕವಚರೊಡನೆಯೂ, ಪೌಲೋಮರೊಡನೆಯೂ ಯುದ್ಧಮಾಡಿದಾಗ ನನ್ನ ಸಹಾಯಕ್ಕಿದ್ದವರಾರು? ಹಿಂದೆ ದ್ರೌಪದೀಸ್ವಯಂವರ ಕಾಲದಲ್ಲಿ ಅನೇಕ ರಾಜರೊಡನೆ ಯುದ್ಧಮಾಡಿ ನಾನು ಅವರನ್ನು ಜಯಿಸಲಿಲ್ಲವೇ? ಆಗ ನನ್ನ ಸಹಾಯಕ್ಕೆ ಯಾರಿದ್ದರು? ಓ ರಾಜಕುಮಾರಾ! ನಿನಗೆ ಆ ಚಿಂತೆಯೇಕೆ? ಆಚಾರ್ಯನಾದ ದ್ರೋಣನನ್ನೂ, ಶುಕ್ರನನ್ನೂ, ಅಗ್ನಿ, ಯಮ, ವರುಣ, ಕುಬೇರಾದಿ ದಿಕ್ಪಾಲಕರನ್ನೂ, ಕೃಪಾಚಾರ್ಯನನ್ನೂ, ಲಕ್ಷ್ಮೀಪತಿಯಾದ ಶ್ರೀವಿಷ್ಣುವನ್ನೂ, ಪಿನಾಕಪಾಣಿಯಾದ ಪರಮಶಿವನನ್ನೂ ಸೇವಿಸಿ, ಅವರ ಅನುಗ್ರಹಬಲವನ್ನು ಪಡೆದ ನಾನು, ಈ ಕೌರವ

ರೊಡನೆ ಯುದ್ಧಮಾಡಲಾರೆನೆ? ಉತ್ತರಾ! ನಿನ್ನ ಮನಸ್ಸಿನ ಕಳವಳವನ್ನು ಬಿಟ್ಟುಬಿಡು! ಬೇಗನೆ ರಥವನ್ನು ಹೊರಡಿಸು" ಎಂದನು.

ಇದು ನಾಲ್ವತ್ತುನಾಲ್ಕನೆಯ ಅಧ್ಯಾಯವು.

ಅರ್ಜುನನು ಯುದ್ಧಪ್ರಯಾಣಕಾಲದಲ್ಲಿ ಉತ್ತರನ ಸಿಂಹಧ್ವಜವನ್ನು ರಥದಿಂದಿಳಿಸಿ, ತನ್ನ ವಾನರಧ್ವಜವನ್ನೇರಿಸಿದುದು. ತನ್ನ ರಂಬಿಸಿಗೆ ಭಯಪಟ್ಟು ಮೂರ್ಛಿತನಾದ ಉತ್ತರನಿಗೆ ಧೈರ್ಯ ಹೇಳಿ ಮುಂದೆ ಹೊರಟುದು.

ಓ ಜನಮೇಜಯರಾಜಾ! ಕೇಳು. ಅರ್ಜುನನು ಉತ್ತರನನ್ನು ಸಾರಥಿಯನ್ನಾಗಿ ಮಾಡಿಕೊಂಡು, ಬನ್ನಿಮರವನ್ನು ಒಂದಾವರ್ತಿ ಪ್ರದಕ್ಷಿಣೆಮಾಡಿ, ಅಲ್ಲಲ್ಲಿದ್ದ ಆಯುಧಗಳೆಲ್ಲವನ್ನೂ ತೆಗೆದುಕೊಂಡನು. ಉತ್ತರನ ಸಿಂಹಧ್ವಜವನ್ನೂ, ತನ್ನ ಸಹೋದರರ ಆಯುಧಗಳನ್ನೂ ಆ ಬನ್ನಿಯಮರದಲ್ಲಿ ನಡುವೆ ಇಡಿಸಿದನು. ಆಮೇಲೆ ಸುವರ್ಣಮಯವಾದ ಬಾಲವುಳ್ಳ ವಾನರಾಕೃತಿಯಿಂದ ಕೂಡಿ, ವಿಶ್ವಕರ್ಮನಿರ್ಮಿತವಾಗಿ, ಮಾಯಾಮಯವೆನಿಸಿದ ದಿವ್ಯವಾದ ತನ್ನ ಧ್ವಜವನ್ನೂ, ಅಗ್ನಿಯು ಹಿಂದೆ ತನ್ನಲ್ಲಿ ತೋರಿಸಿದ ಅನುಗ್ರಹವನ್ನೂ ಮನಸ್ಸಿನಲ್ಲಿ ಧ್ಯಾನಿಸಿಕೊಂಡನು. ಒಡನೆಯೇ ಅಗ್ನಿಯು ಅರ್ಜುನನ ಮನೋಭೀಷ್ಟವನ್ನು ತಿಳಿದು (ರಕ್ಷಕಗಳಾದ) ಕೆಲವುಭೂತಗಳನ್ನು ಆ ಧ್ವಜದಲ್ಲಿ ನೆಲೆಗೊಳಿಸಿದನು. ಆಮೇಲೆ ಅರ್ಜುನನು ತನ್ನ ವಾನರಧ್ವಜವನ್ನು ನಾಟಿ, ಒಂದಾವರ್ತಿ ತನ್ನ ಗಾಂಡೀವ ಧನುಸ್ಸಿನ ನಾಣನ್ನು ತಟ್ಟಿ ಶಬ್ದಮಾಡಿದನು. ಒಡನೆಯೇ ವಿಚಿತ್ರಾಕಾರವುಳ್ಳದೂ, ಮಹಾಬಲವುಳ್ಳದೂ, ಮನೋಹರವಾದ ದಿವ್ಯರೂಪವುಳ್ಳದೂ ಆದ ಒಂದು ವಾನರವು ಪತಾಕೆಯೊಡನೆಯೂ, ಬತ್ತಳಿಕೆಯೊಡನೆಯೂ ಆಕಾಶದಿಂದ ರಥಕ್ಕೆ ಹಾರಿ ಕುಳಿತಿತು. ಆಮೇಲೆ ಅರ್ಜುನನು ಯುದ್ಧಸನ್ನಾಹದೊಡನೆ ರಥದಲ್ಲಿ ಕುಳಿತು ಕೈಚೀಲಗಳನ್ನೂ, ಬಿಲ್ಲುಬಾಣಗಳನ್ನೂ ಧರಿಸಿ ಉತ್ತರದಿಕ್ಕಿಗಿದಿರಾಗಿ ಹೊರಟನು. ಸ್ವಲ್ಪದೂರದವರೆಗೆ ಮುಂದೆ

ಹೋಗಿ ಕೌರವಸೈನ್ಯವನ್ನು ಸಮಿಾಪಿಸಿದೊಡನೆ, ದೇವದತ್ತವೆಂಬ ಮಹಾ ಧ್ವನಿಯುಳ್ಳ ತನ್ನ ದಿವ್ಯಶಂಖವನ್ನು ಬಾಯಲ್ಲಿಟ್ಟು ಊದಿದನು. ಚಂದ್ರನಂತೆಯೂ, ಮೊಲ್ಲೆಯ ಹೂವಿನಂತೆಯೂ ಶುದ್ಧಶ್ವೇತವರ್ಣವಾಗಿದ್ದ ಶಂಖವನ್ನು ಬಾಯಲ್ಲಿಟ್ಟು, ಕೌರವಸೈನ್ಯವೆಲ್ಲವೂ ಭಯಪಡುವಂತೆ ಮಹಾಧ್ವನಿಯನ್ನು ಹುಟ್ಟಿಸುವ ಪ್ರಯತ್ನದಿಂದ ಊದುವಾಗ, ಗಾಳಿಯಿಂದ ತುಂಬಿ ಉಬ್ಬಿದ ಅವನ ಕೆನ್ನೆಗಳೂ, ಕಂಠದಲ್ಲಿ ಮೇಲಕ್ಕೆದ್ದ ನರಗಳೂ, ಕಮಲದಂತೆ ಕೆಂಪೇರಿದ ಕಣ್ಣುಗಳೂ, ಕುಗ್ಗಿ ಉಬ್ಬಿದ ಗಂಟಲೂ, ನರಗಳಿದ್ದ ಹಣೆಯೂ, ಒಳಕ್ಕೆಳೆಯಲ್ಪಟ್ಟ ಎದೆ ಮತ್ತು ಕಿಬ್ಬೊಟ್ಟೆಗಳೂ ಅವನ ಆಕೃತಿಗೆ ಒಂದು ಅಪೂರ್ವಶೋಭೆಯನ್ನುಂಟುಮಾಡಿದುವು.

ತ್ರೈಲೋಕ್ಯವೂ ನಡುಗುವಂತೆ ತನ್ನ ಸರ್ವಪ್ರಯತ್ನದಿಂದ ಹತ್ತು ಬಗೆಯ ಪ್ರಾಣಾದಿವಾಯುಗಳನ್ನೂ ತುಂಬಿ ಆ ಶಂಖವನ್ನೂದಿದಾಗ, ಅದು ಮೇಘಧ್ವನಿಯಂತೆ ನಾನಾಕಡೆಗೂ ವ್ಯಾಪಿಸಿತು. ಹೀಗೆ ಆ ಅರ್ಜುನನ ಶಂಖಧ್ವನಿಯೂ, ಧನುಷ್ಟಂಕಾರಧ್ವನಿಯೂ, ಧ್ವಜದಲ್ಲಿದ್ದ ವಾನರನ ಸಿಂಹನಾದವೂ, ರಥನೇಮಿ ಧ್ವನಿಯೂ ಒಂದಾಗಿ ಸೇರಿ, ಪ್ರಪಂಚವನ್ನೇ ನಡುಗಿಸುವಂತಾಯಿತು. ಅರ್ಜುನನ ಈ ಶಂಖಧ್ವನಿಗೆ ಭಯಪಟ್ಟು ರಥದ ಕುದುರೆಗಳು ಮುಗ್ಗುರಿಸಿದುವು. ಉತ್ತರನೂಕೂಡ ಭಯಪಟ್ಟು ರಥದಲ್ಲಿ ನಿಶ್ಚೇಷ್ಟನಾಗಿ ಕುಳಿತುಬಿಟ್ಟನು. ಆಗ ಅರ್ಜುನು ತಾನೇ ಕುದುರೆಗಳ ಹಗ್ಗವನ್ನು ಹಿಡಿದೆಳೆದು, ಅವುಗಳನ್ನು ಸರಿಯಾಗಿ ನಿಲ್ಲಿಸಿಟ್ಟನು. ಆಗ ಆ ರಥಮಧ್ಯದಲ್ಲಿ ಅರ್ಜುನನು ಮೇರುವಿನ ಉತ್ತರಭಾಗದಲ್ಲಿ ಸೂರ್ಯನು ಹೇಗೋ ಹಾಗೆ ಪ್ರಕಾಶಿಸುತ್ತಿದ್ದನು. ತನ್ನ ಶಂಖಧ್ವನಿಗೂ, ಧನುಷ್ಟಂಕಾರಧ್ವನಿಗೂ ಹೆದರಿ ಪ್ರಜ್ಞೆಯಿಲ್ಲದವನಂತೆ ನಿಶ್ಚೇಷ್ಟನಾಗಿದ್ದ ಉತ್ತರನನ್ನು ನೋಡಿ ಅರ್ಜುನನು ಅವನ ಬೆನ್ನನ್ನು ತಟ್ಟಿ, ಅವನನ್ನಪ್ಪಿಕೊಂಡು ಸಮಾಧಾನಪೂರ್ವಕವಾಗಿ "ಓ ರಾಜಕುಮಾರಾ! ಹೆದರಬಾರದು. ನೀನು ಕ್ಷತ್ರಿಯನಲ್ಲವೇ? ಪುರುಷಶ್ರೇಷ್ಠನೆನಿಸಿಕೊಂಡ ನೀನು ಶತ್ರುಗಳ ನಡುವೆ ಹೀಗೆ ಭಯಪಡುವುದೆಂದರೇನು? ನೀನು ಎಷ್ಟೋ ಕಡೆಯಲ್ಲಿ ಶಂಖಶಬ್ದಗಳನ್ನೂ, ಭೇರೀಧ್ವನಿಗಳನ್ನೂ, ಸೇನಾವ್ಯೂಹಗಳಿಂದ

ಹೊರಡುವ ಆನೆಗಳ ಕೂಗನ್ನೂ ನಿತ್ಯವೂ ಕೇಳಿದವನಲ್ಲವೇ? ಈಗ ಈ ಶಂಖಧ್ವನಿಯನ್ನು ಕೇಳಿ ಕೇವಲ ಪ್ರಾಕೃತ ಮನುಷ್ಯನಂತೆ ಭಯಪಡುವುದೆಂದರೇನು?'' ಎಂದನು. ಅದಕ್ಕಾ ಉತ್ತರನು, ''ಓ ಅರ್ಜುನಾ! ನಾನು ಸೇನಾವ್ಯೂಹಗಳಲ್ಲಿ ಆಗಾಗ ಎಷ್ಟೋ ತರದ ಶಂಖಧ್ವನಿಗಳನ್ನೂ, ಭೇರೀಧ್ವನಿಗಳನ್ನೂ, ಆನೆಗಳ ಗರ್ಜನೆಗಳನ್ನೂ ಎಷ್ಟೋ ಸಾರಿ ಕೇಳಿದುದುಂಟು, ಆದರೆ, ಇಂತಹ ಶಂಖಧ್ವನಿಯನ್ನು ನಾನು ಹಿಂದೆ ಕೇಳಿದವನಲ್ಲ. ಇಂತಹ ಧನುಸ್ಸಿನ ಘೋಷವನ್ನೂ ನಾನು ಯಾವಾಗಲೂ ಕೇಳಿಲ್ಲ. ಎಲೈ ಪುರುಷಶ್ರೇಷ್ಠನೇ! ಈ ನಿನ್ನ ಶಂಖಧ್ವನಿಯೂ, ನಿನ್ನ ಧನುಷ್ಟಂಕಾರಧ್ವನಿಯೂ, ನಿನ್ನ ಧ್ವಜದಲ್ಲಿರುವ ಅಮಾನುಷಗಳಾದ ಭೂತಗಳ ಧ್ವನಿಯೂ, ರಥಚಕ್ರಧ್ವನಿಯೂ ನನ್ನ ಮನಸ್ಸಿಗೆ ಏನೂ ತೋರದಂತೆ ಮಾಡಿದೆ! ನನಗೆ ದಿಗ್ಭ್ರಮೆಹಿಡಿದಂತಾಗಿ, ನನ್ನ ಹೃದಯವು ನಡುಗುತ್ತಿದೆ! ಸಮಸ್ತದಿಕ್ಕುಗಳೂ ಧ್ವಜದಿಂದಲೇ ಮರೆಸಿಹೋಗಿ, ನನಗೆ ದಿಕ್ಕೇತೋರದಂತಾಗಿದೆ. ನಿನ್ನ ಗಾಂಡೀವ ಧ್ವನಿಯಿಂದ ನನ್ನ ಕಿವಿಗಳೆರಡೂ ಕಿವುಡುಬಿದ್ದಿವೆ'' ಎಂದನು.

ಓ ಜನಮೇಜಯರಾಜಾ! ಹೀಗೆ ಉತ್ತರನು ಭಯದಿಂದ ತತ್ತಳಿಸುತ್ತ, ಒಂದಾವರ್ತಿ ಧ್ವಜವನ್ನೂ, ಮತ್ತೊಮ್ಮೆ ಶಂಖವನ್ನೂ, ಇನ್ನೊಮ್ಮೆ ಗಾಂಡೀವಧನುಸ್ಸನ್ನೂ, ಮತ್ತೊಮ್ಮೆ ಅರ್ಜುನನನ್ನೂ ಬಾರಿಬಾರಿಗೂ ನೋಡಿನೋಡಿ ಮನಸ್ಸಿನಲ್ಲಿ ನಡುಗುತ್ತಿದ್ದನು. ಹಾಗೆಯೇ ಮೂರ್ಛೆಬೀಳುತ್ತಿದ್ದನು. ಆಗ ಅರ್ಜುನನು ಉತ್ತರನನ್ನು ಕುರಿತು, ''ಓ ಮಹಾಬಾಹೂ! ಹೀಗೇಕೆ ಕಳವಳಿಸುವೆ? ಧೈರ್ಯವನ್ನು ತಂದುಕೊಳ್ಳುವವನಾಗು! ರಥದಮೇಲೆ ಬಲವಾಗಿ ಕಾಲುಗಳನ್ನೂರಿ, ಕುದುರೆಯ ಹಗ್ಗಗಳನ್ನು ದೃಢವಾಗಿ ಹಿಡಿದಿರು! ನಾನು ತಿರುಗಿ ಮತ್ತೊಮ್ಮೆ ಶಂಖವನ್ನೂದುವೆನು'' ಎಂದು ಮೊದಲೇ ಉತ್ತರನಿಗೆ ಎಚ್ಚರಿಕೆಯನ್ನು ಹೇಳಿ, ಪರ್ವತಗಳನ್ನೂ, ಪರ್ವತಗುಹೆಗಳನ್ನೂ, ಎಲ್ಲಾ ದಿಕ್ಕುಗಳನ್ನೂ, ಗುಡ್ಡಗಳನ್ನೂ ಭೇದಿಸುವಂತೆ ಬಲವಾಗಿ ಶಂಖವನ್ನೂದಿದನು. ಧನುಸ್ಸಿನ ನಾಣನ್ನು ಮಿಡಿದನು. ಉತ್ಸಾಹದಿಂದ ಕೈಗಳನ್ನೂ ತಟ್ಟಿದನು. ಅರ್ಜುನನ

ಈ ಜ್ಯಾಘೋಷದಿಂದಲೂ, ತಲಘೋಷದಿಂದಲೂ ಸಮಸ್ತ ಭೂತಗಳೂ ಮೂರ್ಛಿಬೀಳುವಂತಾದುವು. ಉತ್ತರನುಕೂಡ ರಥದಮೇಲೆ ಎಲ್ಲಿಯೋ ಒಂದುಕಡೆ ಭಯದಿಂದ ಮೈಯ್ಯುಡುಗಿಸಿಕೊಂಡು ಕುಳಿತುಬಿಟ್ಟನು. ತಿರುಗಿ ಅರ್ಜುನನು ಅವನಿಗೆ ಧೈರ್ಯವನ್ನು ಹೇಳಿ ಸಮಾಧಾನಪಡಿಸಿದನು. ಅರ್ಜುನನ ಶಂಖಧ್ವನಿಯಿಂದಲೂ, ರಥನೇಮಿಧ್ವನಿಯಿಂದಲೂ ಗಾಂಡೀವ ಧ್ವನಿಯಿಂದಲೂ ಭೂಮಿಯೆಲ್ಲವೂ ಮರಳಿಮರಳಿ ನಡುಗುವಂತಾಯಿತು.

ಇದು ನಾಲ್ವತ್ತೈದನೆಯ ಅಧ್ಯಾಯವು.

ಈ ಶಂಖಧ್ವನಿ ಮೊದಲಾದುವುಗಳನ್ನು ಕೇಳಿ ದ್ರೋಣನು ಅವನು ಅರ್ಜುನನೆಂದೇ ನಿಶ್ಚಯಿಸಿಕೊಂಡು, ಅದನ್ನು ದುರ್ಯೋಧನನಿಗೆ ತಿಳಿಸಿ, ತಮ್ಮಮುಂದೆ ಕಾಣುತ್ತಿದ್ದ ದುರ್ನಿಮಿತ್ತಗಳನ್ನೂ ಅವನಿಗೆ ತೋರಿಸಿದುದು.

ಓ ಜನಮೇಜಯರಾಜಾ! ಕೇಳು. ಶಸ್ತ್ರಧಾರಿಗಳಲ್ಲಿ ಮೇಲೆನಿಸಿದ ದ್ರೋಣಾಚಾರ್ಯನು, ತಮ್ಮಿದಿರಿಗೆ ನಡೆಯುತ್ತಿದ್ದ ಈ ಅರ್ಭಟಗಳನ್ನೆಲ್ಲಾ ನೋಡಿ ರಾಜನಾದ ದುರ್ಯೋಧನನನ್ನು ಕುರಿತು ಹೀಗೆಂದು ಹೇಳುವನು. "ಓ ರಾಜೇಂದ್ರಾ! ಆ ರಥಘೋಷವನ್ನೂ, ಆ ಶಂಖಧ್ವನಿಯನ್ನೂ, ಆ ಧ್ವನಿಯಿಂದ ಭೂಮಿಯು ನಡುಗುತ್ತಿರುವುದನ್ನೂ ನೋಡಿದರೆ, ನಮ್ಮಿದಿರಾಗಿ ನಿಂತವನು ಸವ್ಯಸಾಚಿಯೆನಿಸಿದ ಆ ಅರ್ಜುನನೇಹೊರತು ಬೇರೆಯಲ್ಲವೆಂದೇ ತೋರುವುದು. ಅಲ್ಲದೆ, ಓ ಮಹಾರಾಜಾ! ನಮ್ಮ ಮುಂದೆ ಉತ್ಪಾತಸೂಚನೆಗಳೆಲ್ಲವೂ ಕಾಣುತ್ತಿರುವುವು. ಈಗ ನಮ್ಮ ಸೈನ್ಯಕ್ಕೆ ಜಯವುಂಟಾಗುವಹಾಗೆ ತೋರಲಿಲ್ಲ. ನಮ್ಮ ಶಸ್ತ್ರಗಳಿಗೆ ಮೊದಲಿದ್ದ ಪ್ರಕಾಶವಿಲ್ಲದೆ ಮಸುಕಾಗಿರುವುವು. ನಮ್ಮ ವಾಹನಗಳೆಲ್ಲವೂ ಹರ್ಷಶೂನ್ಯವಾಗಿವೆ. ಶುಭಕರಗಳಾದ ನಮ್ಮ ಅಗ್ನಿಗಳು ಚೆನ್ನಾಗಿ ಉರಿಸಿದರೂ ಜ್ವಲಿಸದೆ ಪ್ರಕಾಶಹೀನವಾಗಿರುವುವು. ಮೃಗಗಳು ಸೂರ್ಯನಿಗಿದಿರಾಗಿ

ಘೋರಧ್ವನಿಯಿಂದ ಅರಚುತ್ತಿರುವುವು. ಪಕ್ಷಿಗಳೆಲ್ಲವೂ ಬಲದಕಡೆಗೇ ತಿರುಗುತ್ತಿವೆ. ಇವೆಲ್ಲವೂ ಮುಂದೆ ನಮಗೆ ಮಹಾಭಯವನ್ನು ಸೂಚಿಸುವುವು. ಇದೊಂದು ನರಿಯು ನಮ್ಮ ಸೈನ್ಯಗಳ ನಡುವೆ ಊಳಿಡುತ್ತಾ ಓಡುತ್ತಿರುವುದು ನೋಡು. ಕಾಡೆಯ ಹಕ್ಕಿಗಳು ಆಕಾಶದಲ್ಲಿ ಮಹಾಭಯಸೂಚಕವಾಗಿ ಅರಚುತ್ತಿರುವುವು. ಇದಲ್ಲದೆ, ನಿನ್ನೆಲ್ಲರ ದೇಹದಲ್ಲಿರುವ ಕೂದಲುಗಳೂ ಕೂಡ ಪುಳುಕಿತವಾವುದೆ ಕಾಣುತ್ತಿವೆ. ನಮ್ಮ ಸೈನ್ಯದಲ್ಲಿರುವ ಆನೆಗಳೆಲ್ಲವೂ ಸ್ವಲ್ಪವೂ ಚಟುವಟಿಕೆಯಿಲ್ಲದೆ ಮಂಕುಹಿಡಿದಂತಾಗಿ, ದೇಹದಲ್ಲಿ ಉಷ್ಣವಿಲ್ಲದೆ, ಆಡಿಗಡಿಗೆ ಆಕಳಿಸುತ್ತಿರುವುವು. ಮತ್ತು ಆಗಾಗ ಸ್ಖಲ್ಪವಾಗಿ ನಿಂತುಬಿಡುವುವು. ನಮ್ಮ ಸೈನ್ಯದ ಕುದುರೆಗಳು ಕಣ್ಣೀರನ್ನು ಸುರಿಸುತ್ತಾ, ಬಾರಿಬಾರಿಗೂ ಮಲಮೂತ್ರಗಳನ್ನು ಸುರಿಸುತ್ತಿರುವುವು. ಭೂಮಿಯು ರಕ್ತದಿಂದ ನೆನೆದಂತೆ ಕಾಣುವುದು. ದಿಕ್ಕುಗಳೆಲ್ಲಾ ಹೊಗೆಯಾಡುತ್ತಿರುವುವು. ಸೂರ್ಯನು ಪ್ರಕಾಶರಹಿತನಾಗಿ ಮಹಾಭಯವನ್ನು ಸೂಚಿಸುತ್ತಿರುವನು. ನಮ್ಮ ಆನೆಗಳೂ, ಯೋಧರುಗಳೂ ಈಗಾಗಲೇ ಭಯದಿಂದ ನಡುಗುವಂತಿವೆ. ಓ ರಾಜಾ! ನಮ್ಮ ಸೈನ್ಯವು ಈಗಲೇ ಪರಾಭವವನ್ನು ಹೊಂದಿದಂತಾಗಿದೆ. ಯುದ್ಧವಾಡುವುದಕ್ಕೆ ಯಾವನಿಗೂ ಉತ್ಸಾಹವಿಲ್ಲ. ಯೋಧರೆಲ್ಲರೂ ಮುಂಕುಹಿಡಿದಂತಾಗಿ, ಮುಖದಲ್ಲಿ ಕಳೆಯಿಲ್ಲದೆ ಬಾರಿಬಾರಿಗೂ ದಕ್ಷಿಣದಿಕ್ಕನ್ನೇ ನೋಡುವರು. ಮೃಗಪಕ್ಷಿಗಳೆಲ್ಲವೂ ನಮಗೆ ಎಡಪಾರ್ಶ್ವದಿಂದಲೇ ಹೋಗುವುವು. ಎಷ್ಟು ಬಲವಾಗಿ ನುಡಿಸಿದರೂ, ನಮ್ಮ ರಣವಾದ್ಯಗಳು ಜೆನ್ನಾಗಿ ನುಡಿಯುದಿಲ್ಲ. ಓ ರಾಜಾ! ನಮ್ಮ ರಥಾಗ್ರಗಳಲ್ಲಿ ಕಾಗೆಗಳು ಬಂದು ಕುಳಿತಿರುವುವು ನೋಡು. ಇದು ಬಹಳ ಹಾನಿಸೂಚಕವು.

ಓ ಕೌರವೇಂದ್ರಾ! ಅದೋ! ಅಲ್ಲಿ ಮೇಘಧ್ವನಿಯಂತಿರುವ ಗಂಭೀರಧ್ವನಿಯೊಡನೆ ವೇಗದಿಂದ ಬರುವ ರಥವನ್ನು ನೋಡು! ಆ ರಥವನ್ನು ನೋಡಿದರೆ ಅವನು ಅರ್ಜುನನಲ್ಲದೆ ಬೇರೆಯವನಲ್ಲ. ಆ ರಥದ ಕುದುರೆಗಳ ಧ್ವನಿಯನ್ನು ಕೇಳು. ಅದೋ ಧ್ವಜದಲ್ಲಿರುವ ವಾನರನ ಮಹಾಧ್ವನಿಯು ಕೇಳಿಸುವುದು ನೋಡು. ಆ ಶಂಖಧ್ವನಿಯಿಂದ ನನ್ನ ಕಿವಿ

ಗಳು ಕಿವುಡುಬಿದ್ದಿವೆ. ನಮ್ಮ ಸೈನ್ಯವೆಲ್ಲವೂ ಭೀತಿಗೊಂಡಿದೆ. ಆದುದರಿಂದ, ಇವನು ಅರ್ಜುನನೇ ಹೊರತು ಬೇರೆಯವನಲ್ಲ. ಎಲೈ ಮಹಾರಥರೇ! ಇನ್ನು ನಾವೆಲ್ಲರೂ ಶತ್ರುಸೂದನನಾದ ಈ ದುರ್ಯೋಧನನನ್ನು ಮುಂದಿಟ್ಟುಕೊಂಡು, ಸಮಸ್ತ ಶಸ್ತ್ರಸನ್ನಾಹಗಳೊಡನೆ ಸಿದ್ಧವಾಗಿರಬೇಕು. ನಮ್ಮ ಸೈನ್ಯಗಳನ್ನೆಲ್ಲಾ ವ್ಯೂಹವಾಗಿ ನಿಲ್ಲಿಸಿ, ಈಗ ಸೆರೆಹಿಡಿದ ಗೋವುಗಳನ್ನು ಹಿಂದೆ ಬಿಟ್ಟುಕೊಳ್ಳಬೇಕು. ನಮ್ಮ ಸೈನ್ಯಗಳನ್ನು ನೂರಾಗಿ ವಿಭಾಗಿಸಿ, ನಮ್ಮ ನಮ್ಮ ಧ್ವಜಗಳನ್ನೇರಿಸಿ ಮುಂದೆ ನಿಲ್ಲಬೇಕು. ಆದರೇನು? ಆ ಧನಂಜಯನು ತನ್ನ ಕ್ರೂರಬಾಣಗಳಿಂದ ಈ ನಮ್ಮ ಸೈನ್ಯವನ್ನೆಲ್ಲಾ ನೋಯಿಸಿ, ಸಮಸ್ತ ರಾಜರ ಶಿರಸ್ಸನ್ನೂ ತನ್ನ ಎಡಗಾಲಿಂದ ಮೆಟ್ಟಿಹೋಗುವುದರಲ್ಲಿ ಸಂದೇಹವಿಲ್ಲ. ಆದರೂ ನಾವು ಎಲ್ಲಾ ದಿಕ್ಕುಗಳಲ್ಲಯೂ ಸೇನಾದುರ್ಗಗಳನ್ನು ಕಲ್ಪಿಸಿ, ಎಚ್ಚರಿಕೆಯಿಂದ ಯುದ್ಧ ಮಾಡುವೆವು" ಎಂದನು.

ಇದು ನಾಲ್ವತ್ತಾರನೆಯ ಅಧ್ಯಾಯವು.

ದ್ರೋಣನ ಮಾತಿನಿಂದ ಅರ್ಜುನನೆಂಬುದನ್ನು ತಿಳಿದು ಕೌರವಸೈನ್ಯವೆಲ್ಲವೂ ಯುದ್ಧೋತ್ಸಾಹವನ್ನು ಬಿಟ್ಟು ಚಿಂತಾಕುಲವಾಗಿ ಸುಮ್ಮನಿರುವುದನ್ನು ನೋಡಿ, ದುರ್ಯೋಧನನು ದ್ರೋಣನನ್ನು ನಿರಾಕರಿಸಿ, ಸೈನ್ಯವನ್ನು ಯುದ್ಧಕ್ಕೆ ಪ್ರೋತ್ಸಾಹಿಸಿದುದು.

ಓ ಜನಮೇಜಯರಾಜಾ! ಕೇಳು! ಆಮೇಲೆ ದುರ್ಯೋಧನನು ಭೀಷ್ಮ, ದ್ರೋಣ, ಕೃಪರನ್ನು ನೋಡಿ ಹೀಗೆಂದು ಹೇಳುವನು. "ಎಲೈ ಆಚಾರ್ಯರೇ! ಈ ವಿಚಾರವನ್ನು ನಾನೂ, ಕರ್ಣನೂ ಅನೇಕಾವರ್ತಿ ಚರ್ಚಿಸಿಯೇ ಇರುವೆವು. ಆದರೂ ಮತ್ತೊಮ್ಮೆ ಹೇಳುವೆನು. ಅದನ್ನು ಎಷ್ಟುಸಾರಿ ಹೇಳಿಯೂ ನನಗೆ ತೃಪ್ತಿಯಿಲ್ಲದಿದೆ. ನಮ್ಮಿಂದ ಜೂಜಿನಲ್ಲಿ ಪರಾಜಿತರಾದ ಆ ಪಾಂಡವರು ಹನ್ನೆರಡು ವರ್ಷಗಳು ಕಾಡಿನಲ್ಲಿದ್ದು, ಆಮೇಲೆ ಯಾವುದಾದರೂ ದೇಶದಲ್ಲಿ ಯಾರಿಗೂ ತಿಳಿಯದಂತೆ ಒಂದು ವರ್ಷದ

ಅಜ್ಞಾತವಾಸದಲ್ಲಿರಬೇಕೆಂಬುದಲ್ಲವೇ ನಮ್ಮ ತೀರ್ಮಾನವು? ಅವರು ಅಜ್ಞಾತವಾಸದಲ್ಲಿರಬೇಕಾದ ಹದಿಮೂರನೆಯ ವರ್ಷವು ಇನ್ನೂ ಮುಗಿದಿಲ್ಲವು. ಇಷ್ಟರಲ್ಲಿಯೇ ಅರ್ಜುನನು ನಮ್ಮ ಕಣ್ಣಿಗೆ ಬಿದ್ದಿರುವನು. ಅಜ್ಞಾತವಾಸಕಾಲವು ತೀರುವುದರೊಳಗಾಗಿ ಅರ್ಜುನನು ನಮ್ಮಿದಿರಿಗೆ ಬಂದಿರುವುದು ನಿಜವಾದರೆ, ಆ ಪಾಂಡವರು ತಿರುಗಿ ಹನ್ನೆರಡುವರ್ಷಗಳವರೆಗೆ ಕಾಡಿನಲ್ಲಿದ್ದೇ ತೀರಬೇಕು. ಆದರೆ, ಒಂದುವೇಳೆ ಆ ಪಾಂಡವರು ರಾಜ್ಯದಾಸೆಯಿಂದ ಆತುರಪಟ್ಟು, ಅಜ್ಞಾತವಾಸವು ಮುಗಿಯುವುದಕ್ಕೆ ಮೊದಲೇ ಬಂದಿದ್ದರೂ ಇರಬಹುದು. ಹಾಗಿಲ್ಲವೇ, ನಾವೇ ಬುದ್ಧಿವ್ಯಾಮೋಹದಿಂದ ಯಥಾರ್ಥವನ್ನು ತಿಳಿಯದೆ ಮೋಸಹೋಗಿದ್ದರೂ ಇರಬಹುದು. ಈ ವಿಚಾರದಲ್ಲಿರುವ ನ್ಯೂನಾತಿರೇಕಗಳೆಲ್ಲವೂ ನಮ್ಮ ಆಚಾರ್ಯನಾದ ಭೀಷ್ಮನಿಗೆ ತಿಳಿದಿರಬೇಕು. ಕಾರ್ಯಗಳು ತೊಡಕಾಗಿ ಬಂದಿರುವಾಗ ಯಾರಿಗಾದರೂ ಸಂದೇಹವುಂಟಾಗುವುದೇನೋ ಸಹಜವೇ. ಇಂತಹ ಸಂದರ್ಭದಲ್ಲಿ ನಾವು ಒಂದು ವಿಧವಾಗಿ ಎಣಿಸಿದರೆ, ಆ ಕಾರ್ಯವು ಬೇರೆ ವಿಧವಾಗಿ ತಿರುಗುವುದುಂಟು. ನಾವು ಉತ್ತರನನ್ನು ಹುಡುಕಿಕೊಂಡು ಮತ್ಸ್ಯಸೇನೆಯೊಡನೆ ಯುದ್ಧಕ್ಕಾಗಿ ಬಂದಿರುವಾಗ, ಅರ್ಜುನನು ತಾನಾಗಿಯೇ ನಮ್ಮಿದಿರಿಗೆ ಬರುವಪಕ್ಷದಲ್ಲಿ, ಅದಕ್ಕಿಂತಲೂ ನಮಗೆ ಆಗಬೇಕಾದ ಕಾರ್ಯವೇನಿದೆ? ಪಾಂಡವರನ್ನು ಹುಡುಕುವುದಕ್ಕಾಗಿ ಆ ತ್ರಿಗರ್ತರನ್ನು ಕಳುಹಿಸಿರುವೆವು. ಏಕೆಂದರೆ, ಆ ಸುಶರ್ಮನು ಹಿಂದೆ ಅನೇಕಾವರ್ತಿ ಮತ್ಸ್ಯರಾಜನಿಂದ ಪರಾಭವವನ್ನು ಹೊಂದಿದವನು. ಆ ಸಂದರ್ಭಗಳಲ್ಲಿ ತ್ರಿಗರ್ತರು ಬಹಳ ಭಯಪಟ್ಟು ನಮ್ಮಲ್ಲಿ ಶರಣಾಗತರಾಗಿ, ಅಭಯವನ್ನು ಪ್ರಾರ್ಥಿಸಿದುದರಮೇಲೆ, ನಾವೂ ಅವರಿಗೆ ವಾಗ್ದಾನವನ್ನು ಮಾಡಿದ್ದೆವು. ಈಗ ಆ ಉದ್ದೇಶಪೂರ್ತಿಗಾಗಿಯೇ ಮತ್ಸ್ಯದೇಶದವರ ದೊಡ್ಡ ಗೋಧನವನ್ನು ಹಿಡಿಯುವುದಕ್ಕಾಗಿ ಅವರನ್ನು ಮೊದಲು ಕಳುಹಿಸಬೇಕಾಯಿತು. ಅಷ್ಟವಿಂಶತಿಥಿಯ ಮಧ್ಯಾಹ್ನದಲ್ಲಿ ಅವರು ವಿರಾಟನ ಗೋವುಗಳನ್ನು ಹಿಡಿಯಬೇಕೆಂದೂ, ಮಾರನೆಯ ದಿನದ ನವವಿಂಶತಿಥಿಯ ಸೂರ್ಯೋದಯದೊಳಗೆ ಬೇರೊಂದು ಕಡೆಯಿಂದ ನಾವು ಗೋವುಗಳನ್ನು ಹಿಡಿಯುವುದಕ್ಕಾಗಿ ಆ ವಿರಾಟನಗರಕ್ಕೆ ದಂಡೆತ್ತಬೇಕೆಂದೂ ನಿರ್ಣಯವಾಯಿತು.

ಇದೇ ನಮ್ಮೊಳಗೆ ನಾವು ಆಲೋಚಿಸಿ ನಡೆಸಿದ ತೀರ್ಮಾನವು. ಪಾಂಡವರನ್ನು ಕಂಡುಹಿಡಿಯುವುದಕ್ಕಾಗಿ ನಾವು ಅನ್ಯೋನ್ಯವಾಗಿ ಕಲೆತೇ ಈ ಆಲೋಚನೆಯನ್ನು ಮಾಡಿದೆವು. ಆ ತ್ರಿಗರ್ತರೇ ಇಷ್ಟರಲ್ಲಿ ಗೋವುಗಳನ್ನಟ್ಟಿಕೊಂಡು ಹೋಗಿದ್ದರೂ ಇರಬಹುದು. ಇಲ್ಲವೇ ಪರಾಜಯವನ್ನಾದರೂ ಹೊಂದಿರಬೇಕು. ಹಾಗೂ ಇಲ್ಲದಿದ್ದರೆ ಆ ತ್ರಿಗರ್ತರು ನಮ್ಮನ್ನು ವಂಚಿಸಿ ವಿರಾಟನೊಡನೆಯೇ ಸಂಧಿಮಾಡಿಕೊಂಡರೂ ಮಾಡಿಕೊಳ್ಳಬಹುದು. ಆ ಮತ್ಸ್ಯರಾಜನು ಪುರಜನರನ್ನೂ, ಆ ತ್ರಿಗರ್ತರನ್ನೂ ಕರೆದುಕೊಂಡು, ಸಮಸ್ತ ಸೈನ್ಯಗಳೊಡನೆ ನಮ್ಮನ್ನೇ ಇದಿರಿಸಿ ಯುದ್ಧ ಮಾಡುವುದಕ್ಕೂ ನಿಲ್ಲಬಹುದು. ಹಾಗಿಲ್ಲವೇ, ಆ ವಿರಾಟಸೈನ್ಯದಲ್ಲಿ ಮಹಾವೀರ್ಯವುಳ್ಳ ಯಾವನಾದರೂ ಒಬ್ಬನು, ಏಕಾಕಿಯಾಗಿಯೇ ನಮ್ಮನ್ನು ಜಯಿಸುವುದಕ್ಕಾಗಿ ಇಲ್ಲಿಗೆ ಬಂದಿದ್ದರೂ ಇರಬಹುದು. ವಿರಾಟನೇ ತಾನಾಗಿ ಬಂದಿದ್ದರೂ ಇರಬಹುದು. ಇಲ್ಲಿ ಬಂದವನು ಮತ್ಸ್ಯರಾಜನೇ ಆಗಿದ್ದರೂ, ಒಂದುವೇಳೆ ಆ ಅರ್ಜುನನೇ ಆಗಿದ್ದರೂ, ನಾವೆಲ್ಲರೂ ಒಂದಾಗಿ ಸೇರಿ ಅವರೊಡನೆ ಯುದ್ಧಮಾಡಬೇಕಾದುದು ನಮ್ಮ ಕರ್ತವ್ಯವು. ಇದೇ ನಮ್ಮ ಪ್ರತಿಜ್ಞೆ. ಹೀಗಿರುವಾಗ, ಅರ್ಜುನನೇ ಇಲ್ಲಿಗೆ ಬಂದಿದ್ದಪಕ್ಷದಲ್ಲಿ, ನಮ್ಮ ಕಡೆಯ ಭೀಷ್ಮ, ದ್ರೋಣ, ಕೃಪಾಚಾರ್ಯರುಗಳೂ, ಕರ್ಣನೂ, ವಿಕರ್ಣನೂ, ದ್ರೋಣಪುತ್ರನಾದ ಅಶ್ವತ್ಥಾಮನೂ ಒಳ್ಳೆಯ ರಥಿಕರೆನಿಸಿಕೊಂಡಿದ್ದು, ಈ ಸಮಯದಲ್ಲಿ ದಿಗ್ಭ್ರಮೆಹಿಡಿದವರಂತೆ ತಮ್ಮ ರಥಗಳಮೇಲೆ ನಿಂತಿರುವುದೇಕೆ? ಎಲೈ ವೀರರೇ! ಕ್ಷತ್ರಿಯರಾದ ನಮಗೆ ಯುದ್ಧಕ್ಕಿಂತಲೂ ಶ್ರೇಯಸ್ಕರವಾದುದು ಬೇರೊಂದಿಲ್ಲ. ಆದುದರಿಂದ, ಮನಸ್ಸನ್ನು ಸಾವಧಾನವಾಗಿ ಮಾಡಿಕೊಂಡು ಉತ್ಸಾಹದಿಂದ ನಿಲ್ಲಿರಿ! ನಮಗೆ ಈಗ ಸಮಸ್ತಲೋಕವೇ ಇದಿರಾಗಿ ಬಂದರೂ, ನಾವು ಯುದ್ಧಮಾಡಲೇ ಬೇಕು. ಇಂದ್ರನೊಡಗೂಡಿದ ದೇವತೆಗಳೊಡನೆಯಾಗಲಿ, ವಜ್ರಪಾಣಿಯಾದ ಇಂದ್ರನೊಡನೆಯಾಗಲಿ, ಯಮನೊಡನೆಯಾಗಲಿ, ಯುದ್ಧವು ಪ್ರಾಪ್ತವಾದರೂ ನಾವು ಯುದ್ಧಮಾಡಲೇ ಬೇಕು. ಈಗ ಈಗೋಧನವನ್ನು ಬಿಟ್ಟು, ಯಾವನೊಬ್ಬನಾದರೂ ನಮ್ಮ ಹಸ್ತಿನಪುರಕ್ಕೆ ಹಿಂತಿರುಗಿಹೋಗುವುದೆಂದರೇನು? ನಮ್ಮ ಬಾಣಪ್ರಹಾರದಿಂದ ನೊಂದು

ದುರ್ಗಮವಾದ ಕಾಡುದಾರಿಯನ್ನು ಹಿಡಿದೋಡುವ ಕಾಲಾಳ್ಗಳಲ್ಲಿಯಾಗಲಿ, ಕುದುರೆಯ ಸೈನ್ಯದಲ್ಲಿಯಾಗಲಿ ಯಾವನು ತಾನೇ ಬದುಕಿಹೋಗುವನು? ಈಗ ನೀವು ಈ ದ್ರೋಣಾಚಾರ್ಯರನ್ನು ಹೊರಗಾಗಿಸಿಯೇ ಸರಿಯಾದ ಯುದ್ಧನೀತಿಯನ್ನು ಅವಲಂಬಿಸಬಾರದೇಕೆ? ಏಕೆಂದರೆ, ಅವರ ಅಭಿಪ್ರಾಯವೇನೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಅವರು ನಮ್ಮೆಲ್ಲರನ್ನೂ ಹೆದರಿಸುವಂತಿದೆ. ಅವರಿಗೆ ಅರ್ಜುನನಲ್ಲಿಯೇ ವಿಶ್ವಾಸವು ಹೆಚ್ಚು. ಈಗ ಅರ್ಜುನನು ನಮ್ಮ ಕಣ್ಣಿಗೆ ಬಿದ್ದು ಬಿಟ್ಟುದರಿಂದ, ಅವನ ಅಪಾಯವನ್ನು ತಪ್ಪಿಸುವುದಕ್ಕಾಗಿಯೇ ದ್ರೋಣನು ಈ ಉಪಾಯವನ್ನು ಹಿಡಿದಿರುವನು. ನಮ್ಮ ಸೇನೆಗಳು ಚದರಿಹೋಗುವಂತೆ ನೀವು ನೋಡಿಕೊಳ್ಳಬೇಕು. ನಮ್ಮ ಸೈನ್ಯವಾದರೋ ಈಗ ದುರ್ಗಮವಾದ ಈ ವನಪ್ರದೇಶಕ್ಕೆ ಬಂದಿರುವುದು. ಇದು ಅನಾಥವಾಗಿ ಶತ್ರುವಶವಾಗದಂತೆ ನೀವು ನೀತಿಯನ್ನು ಹಿಡಿಯಬೇಕು. ಬರೀ ಕುದುರೆಗಳ ಕೂಗಾಟವು ಕೇಳಿಸಿದಮಾತ್ರಕ್ಕೆ ಅದರಿಂದ ಶತ್ರುವಿಗೆ ಪ್ರಶಂಸೆಯೇನಾಯಿತು? ಕುದುರೆಗಳು ನಿಂತ ಕಡೆ ನಿಂತಿದ್ದರೂ, ಓಡುತ್ತಿದ್ದರೂ ಆಗಾಗ ಕೂಗುತ್ತಲೇ ಇರುವುವು. ಗಾಲಿಗಳು ಯಾವಾಗಲೂ ಬೀಸುತ್ತಲೇ ಇರುವುವು. ಇಂದ್ರನು ಯಾವಾಗಲೂ ಇಷ್ಟಬಂದಂತೆ ಮಳೆಯನ್ನು ಸುರಿಸುವನು. ಆಗಾಗ ಮೇಘಗಳು ಗುಡುಗುತ್ತಲೇ ಇರುವುವು. ಈ ಗುಟ್ಟುಬೆದರಿಕೆಗಳನ್ನೆಲ್ಲ ತೋರಿಸಿ ದ್ರೋಣಾಚಾರ್ಯನು ಪಾಂಡವರ ವಿಷಯದಲ್ಲಿ ನಮಗೆಲ್ಲ ಭಯವನ್ನು ಹುಟ್ಟಿಸುವಂತಿದೆ. ಓ ದ್ರೋಣಾಚಾರ್ಯಾ! ನಮ್ಮ ಸೈನ್ಯದ ಮುಂದೆ ಹೀಗೆ ಅಸಂಬದ್ಧವಾದ ಏನೇನೋ ಮಾತುಗಳನ್ನಾಡಿ, ನಮ್ಮ ಕಡೆಯ ಜನರೆಲ್ಲರನ್ನೂ ನೀನು ಹೆದರಿಸುತ್ತಿರುವೆ. ಕುದುರೆಯನ್ನು ಕಳೆದುಕೊಂಡು ಅದನ್ನು ಹುಡುಕುವುದಕ್ಕಾಗಿ ಬಂದವರು, ತಮ್ಮ ಕಿವಿಗೆ ಬಿದ್ದ ಶಬ್ದಗಳನ್ನೆಲ್ಲಾ ಕುದುರೆಯ ಕೂಗನ್ನಾಗಿಯೇ ಭಾವಿಸುವಂತೆ ನಿಮಗೆಲ್ಲ ಪಾರ್ಥನ ಬೆಜ್ಜರ ಹಿಡಿದಂತಿದೆ. ಆ ಪಾರ್ಥನಾದರೂ ಇಲ್ಲಿ ಏನು ಮಾಡುವುದಿದೆ? ಅವನನ್ನು ನೀವು ಹೀಗೆ ಪ್ರಶಂಸಿಸಲು ಕಾರಣವೇನು? ನೀವು ಅವನಲ್ಲಿರುವ ಪ್ರೀತಿಯಿಂದಲೋ, ನಮ್ಮಲ್ಲಿ ದ್ವೇಷದಿಂದಲೋ, ಕೋಪದಿಂದಲೋ ಹೀಗೆ ಅರ್ಜುನನನ್ನು ನಿಷ್ಕಾರಣವಾಗಿ ಪ್ರಶಂಸಿಸುವಿರಿ! ಇದಕ್ಕೆ ಬೇರೆ

ಕಾರಣವಿಲ್ಲ. ನಿಮ್ಮಂತಹ ಆಚಾರ್ಯರು ಯಾವಾಗಲೂ ಇತರರಲ್ಲಿ ಕರುಣಾ ಸ್ವಭಾವವುಳ್ಳವರು. ಶಾಸ್ತ್ರಗಳನ್ನೋದಿ ತಿಳಿದವರು. ಮುಂದಿನ ಅಪಾಯದಮೇಲೆಯೇ ದೃಷ್ಟಿಯುಳ್ಳವರು. ನಿಮ್ಮಂಥವರನ್ನಿಟ್ಟುಕೊಂಡು ಇಂತಹ ಭಯಂಕರವಾದ ಯುದ್ಧಸಮಯದಲ್ಲಿ ಆಲೋಚನೆಗಳನ್ನು ಮಾಡಲೇಬಾರದು. ವಿಚಿತ್ರವಾದ ಉಪ್ಪರಿಗೆಗಳಲ್ಲಿಯೂ, ಅನ್ನಪಾನಾದಿ ಗೋಷ್ಠಿಗಳಲ್ಲಿಯೂ ವಿನೋದವಾಗಿದ್ದಾಗ, ನಿಮ್ಮಂತಹ ಪಂಡಿತರಿಂದ ಚಿತ್ರವಿಚಿತ್ರಗಳಾದ ಕಥೆಗಳನ್ನು ಕೇಳುತ್ತಿರಬಹುದು. ಅಂತಹ ಕಾಲದಲ್ಲಿ ನಿಮ್ಮ ಕೌಶಲ್ಯವು. ಜನಗಳ ಮುಂದೆ ಆಶ್ಚರ್ಯಕರವಾದ ಅನೇಕ ಕೌಶಲಗಳಿಂದ ಬಾಣಗಳನ್ನೂ, ಅಸ್ತ್ರಗಳನ್ನೂ ಬಿಲ್ಲಿನಲ್ಲಿ ಪ್ರಯೋಗಿಸಿ ತೋರಿಸುವುದರಲ್ಲಿ ನಿಮ್ಮಂತವರು ಪಂಡಿತರು. ಮತ್ತು ಇತರರ ನಡತೆಗಳಲ್ಲಿ ತಪ್ಪುಗಳನ್ನು ಹುಡುಕುವುದರಲ್ಲಿಯೂ, ಪಕ್ವಮಾಡಿದ ಅನ್ನಪಾನಾದಿಗಳಲ್ಲಿ ದೋಷಹೇಳುವುದರಲ್ಲಿಯೂ ನೀವು ಪಂಡಿತರು. ನಿಮಗೆ ಅಂತಹ ಕಾರ್ಯಗಳಲ್ಲಿಯೇ ನೈಪುಣ್ಯವು ಹೆಚ್ಚು. ಶತ್ರುಗಳ ಗುಣಗಳನ್ನೇ ಕೊಂಡಾಡತಕ್ಕ ಇಂತಹ ಪಂಡಿತರನ್ನೆಲ್ಲ ಈ ಯುದ್ಧಕಾಲಗಳಲ್ಲಿ ದೂರದಲ್ಲಿರಿಸಿಯೇ ಶತ್ರುವಧಕ್ಕೆ ಬೇಕಾದ ನೀತಿಯನ್ನು ನಡೆಸಬೇಕು. ಆದುದರಿಂದ ಎಲೈ ವೀರರೇ! ಈ ಗೋವುಗಳನ್ನು ಹೊರಡಿಸಿಕೊಂಡು ಹೋಗಿರಿ. ನಮ್ಮ ಸೈನ್ಯವನ್ನು ಬೇಗನೆ ವ್ಯೂಹವಾಗಿ ನಿಲ್ಲಿಸಿರಿ. ಶತ್ರುಗಳೊಡನೆ ನಾವು ಯುದ್ಧಮಾಡತಕ್ಕ ಸ್ಥಳದಲ್ಲಿ, ಒಳ್ಳೆಯ ಸಮರ್ಥರಾದ ರಕ್ಷಕರನ್ನು ಕಾವಲಿರಿಸಿರಿ'' ಎಂದನು.

ಇದು ನಾಲ್ವತ್ತೇಳನೆಯ ಅಧ್ಯಾಯವು.

ಕರ್ಣನು ಆತ್ಮಶ್ಲಾಘನಪೂರ್ವಕವಾಗಿ ಅರ್ಜುನನನ್ನು ನಿರಾಕರಿಸಿ, ಸಲ್ಲದ ಪ್ರತಿಜ್ಞೆಯನ್ನು ಮಾಡಿದುದು.

ಆಗ ಕರ್ಣನು ಅಲ್ಲಿದ್ದವರನ್ನು ನೋಡಿ ಹೀಗೆಂದು ಹೇಳುವನು. ''ಇಲ್ಲಿರುವ ಆಯುಷ್ಮಂತರಾದ ನಮ್ಮ ಕಡೆಯ ವೀರರೆಲ್ಲರಿಗೂ ಮನಸ್ಸಿ

ನಲ್ಲಿ ಏನೋ ಒಂದು ಭಯವುಂಟಾದಹಾಗಿದೆ. ಇಲ್ಲಿರತಕ್ಕವರಿಗೆ ಯುದ್ಧದಲ್ಲಿಯೂ ಮನಸ್ಸಿಲ್ಲದಂತೆ ತೋರುತ್ತಿದೆ. ಈಗ ಇಲ್ಲಿ ಬಂದಿರುವವನು ಜಮದಗ್ನಿಪುತ್ರನಾದ ಪರಶುರಾಮನೇ ಆಗಿರಲಿ, ದೇವೇಂದ್ರನಾದ ಪುರಂದರನೇ ಆಗಲಿ, ಅರ್ಜುನನೇ ವಾಸುದೇವಸಹಿತನಾಗಿ ಇಲ್ಲಗೆ ಬಂದಿದ್ದರೂ ಇರಲಿ! ಸಮುದ್ರವೇಲೆಯು ಜಲವೇಗವನ್ನು ಹೇಗೋ ಹಾಗೆ ನಾನು ಅವರನ್ನು ತಡೆಯುವೆನು. ಪ್ರಕಾಶವಾದ ಅಲಗುಗಳಿಂದಲೂ, ಚಿನ್ನದ ಹಿಡಿಗಳಿಂದಲೂ ಕೂಡಿ, ಅರ್ಜುನನ ಆಯುಸ್ಸನ್ನು ತೀರಿಸತಕ್ಕ ನನ್ನ ಬಾಣಗಳು, ಈಗಲೇ ಸೂರ್ಯನನ್ನು ಮರೆಸುವಂತೆ ವ್ಯಾಪಿಸಲಿ. ನನ್ನ ಧನುಸ್ಸಿನಿಂದ ಪ್ರಯೋಗಿಸಲ್ಪಟ್ಟ ಬಗ್ಗಿದ ಗಿಣ್ಣುಳ್ಳ ಬಾಣಗಳು ಬುಸುಗುಟ್ಟುವ ಸರ್ಪಗಳಂತೆ ಮುಂದೆಹೋದಮೇಲೆ ಅವು ವಿಫಲವಾಗಿ ಹಿಂತಿರುಗತಕ್ಕವುಗಳಲ್ಲ. ನಾನು ದೃಢವಾದ ಹಿಡಿಗಳುಳ್ಳ ಈ ಬಾಣವನ್ನು ಹೆದೆಯಲ್ಲಿ ಸೇರಿಸಿ, ನಾಣನ್ನು ತಟ್ಟುವಾಗ, ಆ ತಲಘೋಷವೇ ಭೇರೀ ಧ್ವನಿಯಂತೆ ಕೇಳಿಸುವುವು. ಅಷ್ಟೇಕೆ? ಎಲೈ ಕುರುವೀರರೇ! ನಾನು ಬಿಟ್ಟ ಬಾಣಗಳಿಂದ ನಮ್ಮ ವೈರಿಗಳಾದ ಆ ಮತ್ಸ್ಯದೇಶದವರ ರಥಗಳು ಒಂದೊಂದು ಸಲಕ್ಕೆ ಒಂದೊಂದರಂತೆಯೂ, ನಾಲ್ಕು, ಐದು, ಕೆಲವು ವೇಳೆ ಆರುವತ್ತು ಮತ್ತು ಕೆಲವು ಕಡೆಗಳಲ್ಲಿ ನೂರುನೂರಾಗಿ ಬೀಳುವುದನ್ನಾದರೂ ನೋಡಿರಿ. ಎಣ್ಣೆಹಾಕಿ ತೀಡಿದ ಮತ್ತು ಗರಿಯುಳ್ಳ ನನ್ನ ಬಾಣಗಳು, ಈಗ ನನ್ನ ಕೈಯಿಂದ ಹೊರಟು, ಆಕಾಶವನ್ನೆಲ್ಲಾ ಮಿಂಚುಹುಳಗಳಂತೆ ವ್ಯಾಪಿಸಲಿ. ಆ ಅರ್ಜುನನ ಧ್ವಜಾಗ್ರದಲ್ಲಿರುವ ವಾನರವು ನನ್ನ ಭಲ್ಲಾಯುಧದಿಂದ ಹೊಡೆಯಲ್ಪಟ್ಟು, ಭಯಂಕರವಾಗಿ ಅರಚುತ್ತಾ ಈಗಲೇ ನೆಲಕ್ಕೆ ಬೀಳಲಿ. ಮತ್ತು ಆ ಅರ್ಜುನನ ಧ್ವಜದಲ್ಲಿರುವ ಭೂತಗಳೆಲ್ಲವೂ, ನನ್ನ ಬಾಣಪ್ರಹಾರಕ್ಕೆ ಹೆದರಿ, ದಿಕ್ಕುದಿಕ್ಕಿಗೆ ಪಲಾಯನಮಾಡುವ ಕೋಲಾಹಲವು ಆಕಾಶವನ್ನು ವ್ಯಾಪಿಸಲಿ. ನಾನು ಕೋಪಗೊಂಡು ಅಸ್ತ್ರವನ್ನು ಬಿಟ್ಟರೆ, ಅದರ ಜ್ವಾಲೆಯು ಈ ಸಮಸ್ತ ಭೂಮಿಯನ್ನೇ ದಹಿಸುವುದು. ಈಗ ಯುದ್ಧರಂಗದಲ್ಲಿ ಏಕಾಕಿಯಾಗಿ ಬಂದು ನಿಂತಿರುವ ಅರ್ಜುನನನ್ನು ಜಯಿಸುವುದೇನು ದೊಡ್ಡದು? ಆ ಅರ್ಜುನನು ಕಳೆದ ಹದಿಮೂರು ವರ್ಷಗಳ ಕಾಲದಿಂದ ಮನಸ್ಸನ್ನು ತಡೆ

ದಿಟ್ಟುಕೊಂಡಿದ್ದು, ಈಗ ಯುದ್ಧದಾತುರದಿಂದ ಬಂದಿರುವನು. ಇರಲಿ! ಅವನ ಶಕ್ತಿಯನ್ನು ನನ್ನಲ್ಲಿ ತೋರಿಸಲಿ. ಒಳ್ಳೇ ಗುಣಶಾಲಿಯಾದ ಬ್ರಾಹ್ಮಣನಂತೆ, ಅವನು ಈಗ ನನ್ನ ಬಾಣಕ್ಕೆ ಒಳ್ಳೇ ಸತ್ಪಾತ್ರನಾಗಿ ಸಿಕ್ಕಿರುವನು. ಸ್ವಧೆಯನ್ನು ಪರಿಗ್ರಹಿಸುವಂತೆ ನನ್ನ ಬಾಣಪರಂಪರೆಯನ್ನು ಅವನು ಪರಿಗ್ರಹಿಸಲಿ. ಆ ಅರ್ಜುನನು ಮಹಾ ಧನುರ್ಧಾರಿಯೆಂದು ಲೋಕಪ್ರಖ್ಯಾತನಾಗಿದ್ದರೂ ಇರಬಹುದು. ಆದರೆ, ನಾನು ಅವನಿಗಿಂತ ಯಾವ ಭಾಗದಲ್ಲಿಯೂ ಕಡಿಮೆಯಾದವನಲ್ಲ. ನನ್ನ ಕೈಯಿಂದ ಪ್ರಯೋಗಿಸಲ್ಪಟ್ಟ ಅಗ್ನಿಜ್ವಾಲೆಗೆ ಸಮಾನವಾದ ತೇಜಸ್ಸುಳ್ಳ ಈ ಬಾಣಗಳು, ಮುಂದೆಹೋದಮೇಲೆ ವಿಫಲವಾಗಿ ಹಿಂತಿರುಗಿ ಬರತಕ್ಕವುಗಳಲ್ಲ. ನನ್ನ ಕೈಯಿಂದ ಹೊರಟು, ಅತ್ತಿತ್ತ ನಾನಾ ಕಡೆಗೂ ವ್ಯಾಪಿಸಿದ ಬಾಣಗಳ ಧ್ವನಿಯು, ಮೊರೆಯುತ್ತಿರುವ ದುಂಬಿಯ ಧ್ವನಿಗಳಂತೆ ರಣರಂಗವೆಲ್ಲವನ್ನೂ ವ್ಯಾಪಿಸಲಿ. ಹದ್ದಿನ ಗರಿಗಳಿಂದ ಕೂಡಿ, ಸಾಣೆಯಿಕ್ಕಿ ಹರಿತವಾದ ನನ್ನ ಬಾಣಗಳು ಆಕಾಶವನ್ನೆಲ್ಲಾ ವ್ಯಾಪಿಸಿ, ಶಲಭಗಳ ಛಾಯೆಯಂತೆ ಜನರಿಗೆ ಕಾಣಿಸಲಿ. ನನ್ನ ಧನುಸ್ಸಿನಿಂದ ಬಿಡಲ್ಪಟ್ಟ ತೀಕ್ಷ್ಣ ಬಾಣಗಳು, ಹುತ್ತವನ್ನು ಹುಗುವ ಸರ್ಪಗಳಂತೆ ಅರ್ಜುನನ ಶರೀರದಲ್ಲಿ ಹೊಕ್ಕು ಅವನ ಮರ್ಮಸ್ಥಾನಗಳನ್ನು ಮುಟ್ಟಲಿ. ನವಿಲುಗರಿಗಳಿಂದ ಕೂಡಿದ ಈ ನನ್ನ ಬಾಣಗಳು, ನವಿಲುಗಳನ್ನು ಹಿಂಬಾಲಿಸಿಹೋಗುವ ನವಿಲುಗಳಂತೆ, ಒಂದರ ಹಿಂದೆ ಒಂದಾಗಿ ಹೋಗಿ ಮೇಲೆ ಬೀಳುವುದರಿಂದುಂಟಾಗುವ ಮಹಾಧ್ವನಿಯು, ಗುಂಪುಗುಂಪಾಗಿ ಹಾರಿಬರುತ್ತಿರುವ ಪಕ್ಷಿಗಳ ಕೋಲಾಹಲದಂತೆ ಕೇಳಿಬರಲಿ. ಎಲೈ ಕೌರವವೀರರೇ! ಹಿಂದೆ ನಾನು ಧೃತರಾಷ್ಟ್ರಪುತ್ರನಾದ ಈ ದುರ್ಯೋಧನನಿಗೆ ಅರ್ಜುನನನ್ನು ಕೊಲ್ಲುವುದಾಗಿ ಯಾವ ಪ್ರತಿಜ್ಞೆಯನ್ನು ಮಾಡಿಕೊಟ್ಟಿನೋ, ಈಗ ಆ ಪ್ರತಿಜ್ಞೆಯ ಭಾರವನ್ನು ನಾನು ತೀರಿಸಿದೆನೆಂದು ತಿಳಿಯಿರಿ. ವಜ್ರಾಯುಧದಂತೆ ಸ್ಪರ್ಶವೇಗವುಳ್ಳ ಮತ್ತು ಇಂದ್ರನಿಗೆಣೆಯಾದ ಪರಾಕ್ರಮವುಳ್ಳ ಪಾರ್ಥನನ್ನು, ಆನೆಯನ್ನು ಕೊಳ್ಳಿಯಿಂದ ಹೇಗೋ ಹಾಗೆ, ನಿಮಿಷಮಾತ್ರದಲ್ಲಿ ಹೆದರಿಸಿ ಓಡಿಸುವೆನು ನೋಡಿರಿ. ಬಾಣಗಳೆಂಬ ಮಹಾಜ್ವಾಲೆಗಳಿಂದಲೂ, ಕತ್ತಿ, ಗದೆ, ಶಕ್ತಿಗಳೆಂಬ ಕಟ್ಟಿಗೆಗಳಿಂದಲೂ ಕೂಡಿ, ನಮ್ಮ ಸೈನ್ಯ

ವನ್ನು ದಹಿಸಲಿರುವ ಆ ಅರ್ಜುನನೆಂಬ ಬೆಂಕಿಯನ್ನು ಈ ಕ್ಷಣಮಾತ್ರದಲ್ಲಿ ಆರಿಸಿಬಿಡುವೆನು ನೋಡಿರಿ. ಲೋಕದಲ್ಲಿರುವ ಎಲ್ಲಾ ರಥಿಕರಿಗೂ ಅತಿ ರಥನೆನಿಸಿಕೊಂಡು, ಎಲ್ಲಾ ಶಸ್ತ್ರಧಾರಿಗಳಲ್ಲಿ ಮೇಲೆನಿಸಿದ ಆ ಅರ್ಜುನನನ್ನು ನಾನು, ಗರುಡನು ಹಾವನ್ನು ಹೇಗೋ ಹಾಗೆ ಹಿಡಿಯುವುದನ್ನಾದರೂ ನೋಡಿರಿ. ಮೈಮೇಲೆ ಚಿತ್ರವಿಚಿತ್ರವಾಗಿ ಬೀಳುವ ನನ್ನ ಭಲ್ಲಾಯುಧಗಳಿಂದಲೂ, ಕ್ಷುದ್ರಕಗಳೆಂಬ ಆಯುಧಗಳಿಂದಲೂ ಆ ಅರ್ಜುನನು ತನ್ನ ದೇಹದಲ್ಲಿಯೇ ಸ್ವಾಧೀನತಪ್ಪಿ, ಹಿಂದುಮುಂದು ತೋರದಂತಾಗುವನು. ಈಗಲೇ ನಾನು ನನ್ನ ಬಾಣಗಳಿಂದ ಆ ಅರ್ಜುನನ ತಲೆಯನ್ನು ಹಾರಿಸಿ, ದುರ್ಯೋಧನನ ಮನಸ್ಸಿನಲ್ಲಿ ಬಹುಕಾಲದಿಂದಿದ್ದ ದುಃಖವನ್ನು ನಿಶ್ಶೇಷವಾಗಿ ನೀಗಿಸುವೆನು. ಈಗ ನನ್ನ ಧನುಸ್ಸಿನಿಂದ ಪ್ರಯೋಗಿಸಲ್ಪಟ್ಟ, ಬಗ್ಗಿದ ಗಿಣ್ಣುಗಳುಳ್ಳ ಈಟಿಗಳಿಂದ ಆ ಅರ್ಜುನನು ತನ್ನ ರಥವನ್ನೂ, ರಥಾಶ್ವಗಳನ್ನೂ ಕಳೆದುಕೊಂಡು ಬುಸುಗುಟ್ಟುವ ಸರ್ಪದಂತೆ, ಸಂಕಟದಿಂದ ತತ್ತಳಿಸುವುದನ್ನು ಕೌರವರೆಲ್ಲರೂ ನೋಡಲಿ. ನಾನು ಋಷಿಶ್ರೇಷ್ಠನಾದ ಆ ಪರಶುರಾಮನಿಂದಲೇ ದಿವ್ಯಾಸ್ತ್ರಗಳನ್ನು ಪಡೆದವನು. ಆ ಅಸ್ತ್ರಬಲದಿಂದಲೂ, ನನ್ನ ವೀರ್ಯಬಲದಿಂದಲೂ, ನಾನು ದೇವೇಂದ್ರನನ್ನಾದರೂ ಇದಿರಿಸಬಲ್ಲೆನು. ಅವನ ಮಗನಾದ ಈ ಅರ್ಜುನನು ನನಗೊಂದು ಲಕ್ಷ್ಯವೇ? ಆ ಅರ್ಜುನನ ಧ್ವಜಾಗ್ರದಲ್ಲಿರುವ ವಾನರನು ನನ್ನ ಭಲ್ಲಾಯುಧದಿಂದ ಹತನಾಗಿ, ಕ್ರೂರಧ್ವನಿಯಿಂದರಚುತ್ತ, ಈಗಲೇ ಕೆಳಕ್ಕೆ ಬೀಳಲಿ. ಕೌರವರೆಲ್ಲರೂ ಈಗ ಸೆರೆಹಿಡಿದ ಗೋವುಗಳನ್ನು ಸಾಗಿಸಿಕೊಂಡು ತಮ್ಮ ಇಷ್ಟಬಂದಂತೆ ಪಟ್ಟಣಕ್ಕೆ ಹಿಂತಿರುಗಲಿ. ಇಲ್ಲವೇ, ಅವರು ರಥದಲ್ಲಿಯೇ ಕುಳಿತುಕೊಂಡು ನನ್ನ ಯುದ್ಧಚಾತುರ್ಯವನ್ನು ನೋಡುತ್ತಿರಲಿ. ನಾನೊಬ್ಬನೇ ಈ ಯುದ್ಧವನ್ನು ನೋಡಿಕೊಳ್ಳುವೆನು" ಎಂದನು.

ಇದು ನಾಲ್ವತ್ತೆಂಟನೆಯ ಅಧ್ಯಾಯವು.

ಕೃಪನು ಅರ್ಜುನನನ್ನು ಪ್ರಶಂಸೆಮಾಡಿ, ಕರ್ಣನನ್ನು ನಿಂದಿಸಿದುದು. ತಮ್ಮಲ್ಲಿ ಯಾವನೂ ಏಕಾಕಿಯಾಗಿ ಅರ್ಜುನನನ್ನು ಇದಿರಿಸುವುದು ಸಾಧ್ಯವಲ್ಲವೆಂದು ನಿಶ್ಚಯಿಸಿ, ಎಲ್ಲರೂ ಒಟ್ಟಾಗಿ ಯುದ್ಧಕ್ಕೆ ಸಿದ್ಧವಂತೆ ನಿರ್ಧರಿಸಿದುದು.

ಓ ಜನಮೇಜಯರಾಜಾ! ಕೇಳು! ಕರ್ಣನು ಹೇಳಿದ ಆತ್ಮಪ್ರಶಂಸೆಯನ್ನು ಕೇಳಿ, ನೀತಿಜ್ಞನೂ, ಕೌರವವೀರರಿಗೆ ಆಚಾರ್ಯನೂ ಆದ ಕೃಪನು ಕರ್ಣನನ್ನು ನೋಡಿ ಹೀಗೆಂದು ಹೇಳುವನು. "ಓ ರಾಧೇಯಾ! ಯಾವಾಗಲೂ ನಿನಗೆ ಯುದ್ಧದಲ್ಲಿಯೇ ಆತುರವು ಹೆಚ್ಚು. ಕಾರ್ಯಗಳ ಸ್ವಭಾವವನ್ನು ನೀನು ತಿಳಿದವನಲ್ಲ. ಮುಂದಿನ ಪರಿಣಾಮವನ್ನೂ ನೀನು ಯೋಚಿಸುವಹಾಗಿಲ್ಲ. ಶಾಸ್ತ್ರಗಳ ಆಧಾರದಮೇಲೆ ಆಲೋಚಿಸಿ ನಡೆಸಬೇಕಾದ ಅನೇಕನೀತಿಗಳುಂಟು. ಆ ನೀತಿಗಳಲ್ಲಿ ಬಹುಕಾಲದ ಅನುಭವವುಳ್ಳ ವಿದ್ವಾಂಸರು ಯುದ್ಧವು ಮಹಾಪಾಪವೆಂದು ತಿಳಿಸಿರುವರು. ದೇಶಕಾಲಗಳನ್ನು ಚೆನ್ನಾಗಿ ವಿಮರ್ಶಿಸಿ ನಡೆಸತಕ್ಕ ಯುದ್ಧವೇ ಜಯಕ್ಕೆ ಕಾರಣವಾಗುವುದು. ಹಾಗಿಲ್ಲದೆ, ಪ್ರತಿಕೂಲಕಾಲದಲ್ಲಿ ಮಾಡಿದ ಯುದ್ಧವು ಅನರ್ಥಗಳಿಗೆ ಮೂಲವಾಗುವುದು. ಒಳ್ಳೇ ಕಾಲದೇಶಗಳಲ್ಲಿ ತೋರಿಸತಕ್ಕ ಪರಾಕ್ರಮ ಕಾರ್ಯವೇ ಮಂಗಳವನ್ನುಂಟುಮಾಡುವುದು. ಆದುದರಿಂದ ದೇಶಕಾಲಗಳು ಅನುಕೂಲವಾಗಿದ್ದಾಗಲೇ ಕಾರ್ಯಗಳನ್ನು ನಡೆಸಬೇಕು. *ರಥಕಾರನೊಬ್ಬನು ತಾನು ಬಹಳ ಶ್ರಮಪಟ್ಟು ರಥವನ್ನು ಮಾಡಿದೆನೆಂದೂ, ಆದರಿಂದ ನಿಜವಾಗಿ ಜಯವುಂಟಾಗುವುದೆಂದೂ ಹೇಳಿದಮಾತ್ರಕ್ಕೆ ವಿವೇಕಿಗಳಾದವರು ಅದನ್ನು ನಂಬಬಹುದೆ? ಅದರಂತೆಯೇ ಬುದ್ಧಿಶಾಲಿಯಾದವನು ಕಾಲದೇಶಗಳನ್ನು ಯೋಚಿಸದೆ, ಆತುರಪಡಬಾರದು. ಈಗಿನ ಕಾಲದೇಶಗಳನ್ನು ಯೋಚಿಸಿದರೆ, ಅರ್ಜುನನೊಡನೆ

* ಇದು ಸಾಮಾನ್ಯವಾಕ್ಯದಂತೆ ತೋರಿದರೂ ರಥಕಾರ ಕುಲದವನಾದ ಕರ್ಣನನ್ನೇ ಉದ್ದೇಶಿಸಿ ಹೇಳಿದ ಮರ್ಮಭೇದಕ ವಾಕ್ಯವು. "ನಿನ್ನ ಮಾತನ್ನು ನಂಬಿ ಯುದ್ಧಕ್ಕೆ ಮುಂದಾಗುವುದು" ಅವಿವೇಕವೆಂದು ಇಲ್ಲಿನ ಭಾವವು.

ಈಗ ಯುದ್ಧಮಾಡುವುದೇ ಉಚಿತವಲ್ಲ. ಅವನು ಏಕಾಕಿಯಾಗಿ ಬಂದಿರುವನೆಂದು ನಾವು ಅಲಕ್ಷ್ಯಮಾಡುವಹಾಗೆಯೂ ಇಲ್ಲ. ಅವನು ಏಕಾಕಿಯಾಗಿಯೇ ಶತ್ರುಗಳನ್ನು ನಿಗ್ರಹಿಸಬಲ್ಲನು. ಹಿಂದೆ ಅವನು ಏಕಾಕಿಯಾಗಿಯೇ ಕೌರವರನ್ನು ಗಂಧರ್ವರಿಂದ ಕಾಪಾಡಿದನು. ಏಕಾಕಿಯಾಗಿಯೇ ಅಗ್ನಿಯನ್ನು ತೃಪ್ತಿಗೊಳಿಸಿದನು. ತಾನೊಬ್ಬನೇ ಐದು ವರ್ಷಗಳಕಾಲ ಬ್ರಹ್ಮಚರ್ಯವನ್ನು ಅನುಷ್ಠಿಸಿದನು. ಏಕಾಕಿಯಾಗಿಯೇ ಸುಭದ್ರೆಯನ್ನು ತನ್ನ ರಥದಮೇಲೇರಿಸಿಕೊಂಡು ಯಾದವರನ್ನೆಲ್ಲಾ ಓಡಿಸಿ, ಕೃಷ್ಣನನ್ನೂ ತನ್ನೊಡನೆ ದ್ವಂದ್ವಯುದ್ಧಕ್ಕಾಗಿ ಧೈರ್ಯದಿಂದ ಕರೆದನು. ಅವನು ಏಕಾಕಿಯಾಗಿಯೇ ವನವಾಸಕಾಲದಲ್ಲಿ ಸೈಂಧವನನ್ನು ಜಯಿಸಿ ದ್ರೌಪದಿಯನ್ನು ಬಿಡಿಸಿಕೊಂಡುಬಂದನು. ಅವನು ಏಕಾಕಿಯಾಗಿಯೇ ಐದು ವರ್ಷಗಳವರೆಗೆ ಇಂದ್ರನನ್ನಾಶ್ರಯಿಸಿ ಅಲ್ಲಿಂದ ಮಂತ್ರಾಸ್ತ್ರಗಳನ್ನು ಸಂಪಾದಿಸಿತಂದನು. ಅವನು ಏಕಾಕಿಯಾಗಿಯೇ ಶತ್ರುಗಳನ್ನು ಜಯಿಸಿ, ಕೌರವರಿಗೆಲ್ಲಾ ಕೀರ್ತಿಯನ್ನು ತಂದನು. ಅವನು ಏಕಾಕಿಯಾಗಿಯೇ ಚಿತ್ರಸೇನನೆಂಬ ಗಂಧರ್ವರಾಜನನ್ನೂ, ಎಂತವರಿಗೂ ದುರ್ಜಯವಾದ ಅವನ ಸೇನೆಯನ್ನೂ ಯುದ್ಧದಲ್ಲಿ ಜಯಿಸಿದನು. ಅವನು ಏಕಾಕಿಯಾಗಿಯೇ ಪಾಂಚಾಲಿಯ ಸ್ವಯಂವರ ಕಾಲದಲ್ಲಿ ಅನೇಕ ಕ್ಷತ್ರಿಯರನ್ನು ಜಯಿಸಿ, ಅವಳನ್ನು ತನ್ನ ಕೈ ಸೇರಿಸಿಕೊಂಡುಹೋದನು. ಓ ಕರ್ಣಾ! ಆಗ ನೀನು ಎಲ್ಲಿ ಅಡಗಿಕೊಂಡಿದ್ದೆಯೋ ತಿಳಿಯದು. ಮತ್ತು ವೀರನಾದ ಅರ್ಜುನನು ನಿವಾತಕವಚರೆಂದೂ, ಕಾಲಕೇಯರೆಂದೂ ಹೆಸರುಗೊಂಡ ದಾನವರನ್ನು ತಾನೊಬ್ಬನೇ ಯುದ್ಧದಲ್ಲಿ ಕೊಂದು ಕೆಡಹಿರುವನು. ಆ ದಾನವರಾದರೋ ದೇವತೆಗಳಿಗೂ ದುರ್ಜಯರಾಗಿದ್ದವರು. ಓ ಕರ್ಣಾ! ಆ ಅರ್ಜುನನಂತೆ ನೀನು ಬೇರೊಬ್ಬರ ಸಹಾಯವಿಲ್ಲದೆ ಏಕಾಕಿಯಾಗಿ ಇಂತಹ ಯಾವುದಾದರೊಂದು ಕೆಲಸವನ್ನು ಮಾಡಿರುವೆಯಾ? ಆ ಪಾಂಡವರಲ್ಲಿ ಒಬ್ಬೊಬ್ಬನೂ ಅಸಹಾಯನಾಗಿಯೇ ಹೋಗಿ ಎಷ್ಟೋ ರಾಜರನ್ನು ಜಯಿಸಿ ಸ್ವಾಧೀನಪಡಿಸಿಕೊಂಡಿರುವನು. ಹಾಗೆ ನೀನು ಯಾವ ಕೆಲಸವನ್ನು ಮಾಡಿರುವೆ? ಅಷ್ಟೇಕೆ? ಸಾಕ್ಷಾತ್ ದೇವೇಂದ್ರನಾದರೂ ಯುದ್ಧದಲ್ಲಿ ಆ ಅರ್ಜುನನಿಗಿದಿರಾಗಿ ನಿಲ್ಲಲಾರನು. ಅರ್ಜುನನೊಡನೆ ಯುದ್ಧ

ಕ್ಕಾಗಿ ನಿಲ್ಲಬೇಕೆಂಬವನು ಮೊದಲೇ ಔಷಧಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಕರ್ಣಾ! ಈಗ ನೀನು ಅರ್ಜುನನೊಡನೆ ಯುದ್ಧಕ್ಕೆ ಆತುರಪಡುವುದನ್ನು ನೋಡಿದರೆ, ಕೋಪಗೊಂಡ ಹಾವಿನ ಹಲ್ಲನ್ನು ಕೀಳುವುದಕ್ಕಾಗಿ ಅದರ ಬಾಯಿಯೊಳಗೆ ನಿನ್ನ ಬಲಗೈಯ ತೋರುಬೆರಳನ್ನು ದೂಡುತ್ತಿರುವೆ. ಕಾಡಿನಲ್ಲಿ ತನ್ನ ಹಿಂಡನ್ನು ಕಾಣದೆ ಏಕಾಕಿಯಾಗಿ ಅಲೆಯುತ್ತಿರುವ ಮದದಾನೆಯಮೇಲೆ, ಅಂಕುಶವೂ ಇಲ್ಲದೆ ಕುಳಿತು ಪುರ ಪ್ರವೇಶಮಾಡಬೇಕೆಂದೆಳಸುವೆ. ಓ ಕರ್ಣಾ! ಈಗ ನೀನು ತುಪ್ಪದಿಂದಲೂ, ಮಿದುಳಿಂದಲೂ, ವಸೆಯಿಂದಲೂ ಹುತಮಾಡಲ್ಪಟ್ಟ ದೊಡ್ಡ ಅಗ್ನಿಕುಂಡದ ಮಧ್ಯದಲ್ಲಿ ತುಪ್ಪದಲ್ಲಿ ನೆನೆಸಿದ ನವಿರುಬಟ್ಟೆಯನ್ನುಟ್ಟು ಪ್ರವೇಸಿಸಲೆಳಸುವೆ. ಓ ಕರ್ಣಾ! ಯಾವನುತಾನೇ ತನ್ನ ದೇಹವನ್ನು ಹಗ್ಗಗಳಿಂದ ಬಿಗಿದು, ಕಲ್ಲನ್ನು ಕತ್ತಿಗೆ ಕಟ್ಟಿಕೊಂಡು ತನ್ನ ಕೈಗಳಿಂದಲೇ ಸಮುದ್ರವನ್ನು ದಾಟಬೇಕೆಂದೆಳಸುವನು? ಈ ಪೌರುಷವು ಯಾವ ಕೆಲಸಕ್ಕೆ ಬಂದೀತು? ಅಸ್ತ್ರಗಳನ್ನೇನೂ ತಿಳಿಯದವನು ಒಳ್ಳೇ ಅಸ್ತ್ರಕೌಶಲವುಳ್ಳವನನ್ನೂ, ಬಲಹೀನನು ಬಲಾಢ್ಯನನ್ನೂ ಇದಿರಿಸುವಂತೆ ಈಗ ಅರ್ಜುನನನ್ನು ಇದಿರಿಸಬೇಕೆಂದು ಅಪೇಕ್ಷಿಸುವವರನ್ನು ಕೇವಲ ಬುದ್ಧಿಯಿಲ್ಲದವರೆಂದೇ ಹೇಳಬೇಕು. ಈ ಅರ್ಜುನನಾದರೋ ಕಳೆದ ಹದಿಮೂರು ವರ್ಷಗಳಿಂದ ಅನೇಕ ಕಷ್ಟಗಳನ್ನನುಭವಿಸಿ ಬಂದವನು. ಅವನಿಗೆ ಈ ಕಷ್ಟಗಳೆಲ್ಲ ನಮ್ಮಿಂದಲೇ ಉಂಟಾದುವು. ಕಟ್ಟನ್ನು ಕಳಚಿಬಿಟ್ಟ ಸಿಂಹದಂತೆ ಈಗ ಅವನು ಹೊರಗೆ ಬಂದಿರುವನು. ಈಗ ನಮ್ಮನ್ನು ಅವನು ನಿಶ್ಶೇಷವಾಗಿ ತೀರಿಸದೆ ಬಿಟ್ಟುಹೋಗುವನಲ್ಲ. ಬಾವಿಯಲ್ಲಿ ಮರೆಯಾಗಿರುವ ಬೆಂಕಿಯಂತೆ ಅವನು ಮೈ ಮರೆಸಿಕೊಂಡು ಏಕಾಂತವಾಗಿದ್ದವನು. ಅಂತವನನ್ನು ಈಗ ನಾವು ಅಜ್ಞಾನದಿಂದ ಇದಿರಿಸಿ ಬಂದೆವು. ಇದು ಮುಂದೆ ನಮ್ಮ ಮಹಾಭಯಕ್ಕೆ ಕಾರಣವಾಗಿದೆ. ದೊಡ್ಡ ಹತ್ತಿಯರಾಶಿಯಲ್ಲಿ ವ್ಯಾಪಿಸಿ ಪ್ರಬಲವಾಗಿ ಉರಿಯುತ್ತಿರುವ ಬೆಂಕಿಯನ್ನು ಆಡಗಿಸಬೇಕೆಂದರೆ ಒಬ್ಬನಿಂದ ಸಾಧ್ಯವೇ? ಅರ್ಜುನನನ್ನು ಇದಿರಿಸುವುದಕ್ಕೆ ನಿನ್ನೊಬ್ಬನಿಂದ ಎಂದಿಗೂ ಸಾಧ್ಯವಿಲ್ಲ. ಆದುದರಿಂದ ನಾವೆಲ್ಲರೂ ಒಟ್ಟಾಗಿ ಸೇರಿಯೇ ಆ ಅರ್ಜುನನೊಡನೆ ಯುದ್ಧಕ್ಕೆ ನಿಲ್ಲಬೇಕು. ಬಹಳ ಎಚ್ಚ

ರಿಕೆಯಿಂದ ನಮ್ಮ ಪರಾಕ್ರಮವನ್ನು ತೋರಿಸಬೇಕು. ನಮ್ಮ ಸೇನೆಗಳೆಲ್ಲವನ್ನೂ ಸರಿಯಾದ ಕಟ್ಟುಪಾಡಿನಿಂದ ನಿಲ್ಲಿಸಬೇಕು. ನಮ್ಮ ಶಸ್ತ್ರಾಸ್ತ್ರಗಳೆಲ್ಲವೂ ಸಿದ್ಧವಾಗಿರಬೇಕು. ಈಗ ಯುದ್ಧಕ್ಕೆ ಸಿದ್ಧನಾಗಿ ಬಂದು ನಿಂತಿರುವ ಆ ಅರ್ಜುನನನ್ನು, ವಜ್ರಪಾಣಿಯಾದ ಇಂದ್ರನನ್ನು ಅಸುರರು ಹೇಗೋ ಹಾಗೆ, ರಥಿಕರಾದ ನಾವು ಆರು ಮಂದಿಯೂ ಸೇರಿ ಅವನನ್ನಿದಿರಿಸಬೇಕು. ದ್ರೋಣಾಚಾರ್ಯನು, ಅವನ ಮಗನಾದ ಈ ಅಶ್ವತ್ಥಾಮನು, ಈ ದುರ್ಯೋಧನನು, ಈ ಭೀಷ್ಮಾಚಾರ್ಯನು, ನೀನು ಮತ್ತು ನಾನು, ಈ ಆರು ಮಂದಿಯೂ ಸೇರಿಯೇ ಸುತ್ತಲೂ ಅವನ ರಥವನ್ನು ಆವರಿಸಿಕೊಂಡು, ಎಲ್ಲರೂ ಸೇರಿ ಅವನೊಡನೆ ಯುದ್ಧಮಾಡುವೆವು. ಓ ಕರ್ಣಾ! ವ್ಯರ್ಥವಾಗಿ ನೀನು ಈ ಸಾಹಸವನ್ನು ಮಾಡಬೇಡ. ನಾವೆಲ್ಲರೂ ಒಟ್ಟಾಗಿ ಸೇರದೆ ಆ ಅರ್ಜುನನನ್ನು ಜಯಿಸುವುದಕ್ಕೆ ಎಂದಿಗೂ ಸಾಧ್ಯವಿಲ್ಲ. ನಾವೆಲ್ಲರೂ ಸೇರಿ ಅವನನ್ನು ಜಯಿಸುವುದಕ್ಕೆ ಯುತ್ನಿಸುವೆವು'' ಎಂದನು.

ಇದು ನಾಲ್ವತ್ತೊಂಭತ್ತನೆಯ ಅಧ್ಯಾಯವು.

ಕೃಪನು ತನ್ನನ್ನು ಧಿಕ್ಕರಿಸಿದುದಕ್ಕಾಗಿ ಕರ್ಣನು ಅವನನ್ನು ನಿಂದಿಸಿದುದು. ಕೃಪನ ನಿಂದೆಯನ್ನು ಕೇಳಲಾರದೆ, ಅಶ್ವತ್ಥಾಮನು ಕರ್ಣ ದುರ್ಯೋಧನರಿಬ್ಬರನ್ನೂ ನಿಂದಿಸಿದುದು.

ಓ ಜನಮೇಜಯರಾಜಾ! ಕೇಳು! ಕೃಪನ ಮಾತುಗಳು ಕರ್ಣನಿಗೆ ದುಸ್ಸಹವಾದುವು. ಕೃಪನು ತನಗೆ ಆರೀತಿಯಾಗಿ ಹೇಳಿದ ಬುದ್ಧಿವಾದಗಳನ್ನೇ ನಿಂದೆಯಾಗಿ ತಿಳಿದುಕೊಂಡು, ಕರ್ಣನು ಕೋಪದಿಂದ ಬ್ರಾಹ್ಮಣ ಜಾತಿಯನ್ನೇ ನಿಂದಿಸತೊಡಗಿ ಹೀಗೆಂದು ಹೇಳುವನು. ''ಆಚಾರ್ಯರಿಗೆ ಆ ಅರ್ಜುನನಲ್ಲಿರುವ ಭಯದಿಂದಲೇ ಈ ಭಕ್ತಿಯುಂಟಾಗಿದೆಯೆಂದು ನನಗೆ ತೋರಿದೆ. ಶತ್ರುವಿಗೆ ಭಯಪಡತಕ್ಕವರು ಯುದ್ಧಕ್ಕೇ ಬರಬಾರದು. ಅರ್ಜುನನನ್ನು ನಾನು ನೋಡಿಕೊಳ್ಳಬಲ್ಲೆನು. ಓ ಕೃಪಾಚಾರ್ಯಾ!

ನಿನ್ನಲ್ಲಿ ವರುಣಾಸ್ತ್ರ, ಆಗ್ನೇಯಾಸ್ತ್ರ, ಯಮಾಸ್ತ್ರ, ವಾಯವ್ಯಾಸ್ತ್ರ, ಬಹ್ಮ ಶಿರೋನಾಮಕಾಸ್ತ್ರವೆಂಬ ಯಾವ ದಿವ್ಯಾಸ್ತ್ರಗಳಿದ್ದರೇನು? ಬಲವೂ, ಧೈರ್ಯವೂ ಇಲ್ಲದ ನಿನಗೆ ಅವೆಲ್ಲವೂ ವ್ಯರ್ಥವೇ! ಮಹಾರಥರೆನಿಸಿಕೊಂಡ ಈ ತಂದೆಮಕ್ಕಳಿಬ್ಬರೂ (ದ್ರೋಣಾಶ್ವತ್ಥಾಮರು) ತಮ್ಮ ಮಿತ್ರನಿಗೆ ಮಾಡಬೇಕಾದ ಮಹೋಪಕಾರವನ್ನು ಈಗ ಸಲಿಸಿದಂತಾಯಿತು. ನೀನೂ ಸ್ವಾಮಿಯ ಉಪ್ಪನ್ನು ತಿಂದು ಅದನ್ನು ದಕ್ಕಿಸಿಕೊಂಡಂತಾಯಿತು. ಇನ್ನು ನಿಮ್ಮ ಇಷ್ಟಬಂದಹಾಗೆ ಹೋಗಬಹುದಲ್ಲವೆ? ಓ ಬ್ರಾಹ್ಮಣಾ! ನಿನಗೆ ಈ ಯುದ್ಧವೇಕೆ? ಎಲ್ಲಿಯಾದರೂ ಭಿಕ್ಷೆಗೆ ಹೋಗು! ಯಜ್ಞವಾಗುವ ಸ್ಥಳಗಳನ್ನು ಹುಡುಕಿಕೊಂಡು ಹೋಗು. ನಿಮಂತ್ರಣಕ್ಕಾಗಿ ಕೂಗಿದಕಡೆಗೆ ಹೋಗಿ ಪುಷ್ಕಳವಾಗಿ ಭೋಜನಮಾಡು. ಇಲ್ಲಿ ಬಂದು ನಮ್ಮನ್ನು ಈ ಯುದ್ಧವಿಷಯದಲ್ಲಿ ಹೆದರಿಸಬೇಡ. ನನ್ನಲ್ಲಿರುವ ಭಾರ್ಗವಾಸ್ತ್ರವನ್ನು ಪ್ರಯೋಗಿಸಿದ ಪಕ್ಷದಲ್ಲಿ ಈ ಸಮಸ್ತ ಭೂಮಿಯನ್ನೇ ದಹಿಸಿಬಿಡುವುದು. ಪಾಂಡುಪುತ್ರರಲ್ಲೊಬ್ಬನಾದ ಅರ್ಜುನನನ್ನು ಜಯಿಸುವುದೆಷ್ಟುಮಾತ್ರವು? ಅರ್ಜುನನನ್ನು ನಂಬಿ ಬಂದಿರುವ ಈ ಮತ್ಸ್ಯಸೈನಿಕರೆಲ್ಲರೂ, ಹಿಂದೆ ಮಹಾಬಲಶಾಲಿಗಳೆನಿಸಿಕೊಂಡು, ಶತ್ರುಸೈನ್ಯಗಳನ್ನೆಲ್ಲ ಧ್ವಂಸಮಾಡುತ್ತಿದ್ದ ಕೀಚಕರ ದಾರಿಯನ್ನೇ ಹಿಡಿಯುವರು. ನಾನು ಆ ಮತ್ಸ್ಯರನ್ನು ನೋಡಿಕೊಳ್ಳುವೆನು. ನೀನು ಮನೆಗೆ ಹೋಗಬಹುದು. ಯಾವಾಗಲೂ ಇತರರಲ್ಲಿ ಕನಿಕರದಿಂದಲೇ ಮಾತಾಡುವ ಸ್ವಭಾವವುಳ್ಳ ನಿಮಗೆ ಯಾವಾಗಲೂ ವೇದಗಳನ್ನೋದತಕ್ಕ ಈ ಯುದ್ಧರಂಗದಲ್ಲಿ ಕೆಲಸವೇನಿದೆ?'' ಎಂದನು.

ಕರ್ಣನು ಹೇಳಿದ ಈ ಧಿಕ್ಕಾರದ ವಾಕ್ಯಗಳನ್ನು ಕೇಳಿ, ಮಹಾಪರಾಕ್ರಮಿಯೆನಿಸಿಕೊಂಡ ಅಶ್ವತ್ಥಾಮನಿಗೆ ದುಸ್ಸಹವಾದ ಕೋಪವುಂಟಾಯಿತು. ವಾಗ್ಮಿಗಳಲ್ಲಿ ಮೇಲೆನಿಸಿಕೊಂಡ ಆ ದ್ರೋಣಪುತ್ರನು ಕರ್ಣ ದುರ್ಯೋಧನರಿಬ್ಬರನ್ನೂ ನೋಡುತ್ತಾ, '' ಓ ರಾಧೇಯಾ! ಇನ್ನೂ ನಾವು ಗೋವುಗಳನ್ನು ಜಯಿಸಲಿಲ್ಲ. ನಾವು ಶತ್ರುಗಳ ಎಲ್ಲೆಯನ್ನಾದರೂ ದಾಟಿಲ್ಲ. ನಾವು ಕ್ಷೇಮದಿಂದ ನಮ್ಮ ಹಸ್ತಿನಾಪುರಕ್ಕೆ ಹೋಗಿ ಸೇರಲೂ

ಇಲ್ಲ. ಇಷ್ಟರಲ್ಲಿಯೇ ಹೀಗೆ ನೀನು ನಿನ್ನ ಪರಾಕ್ರಮವನ್ನು ಹೊಗಳಿಕೊಳ್ಳುತ್ತಿರುವೆ. ಬ್ರಾಹ್ಮಣೋತ್ತಮರು ಅನೇಕ ಧರ್ಮಶಾಸ್ತ್ರಗಳನ್ನು ಓದಿರುವುದೇನೋ ನಿಶ್ಚಯವೇ. ಆ ಶಾಸ್ತ್ರಗಳಲ್ಲಿ ಎಲ್ಲಿಯಾದರೂ ಜೂಜಾಟದಿಂದ ಶತ್ರುರಾಜರನ್ನು ಜಯಿಸಬಹುದೆಂದು ಹೇಳಿದೆಯೇನು? ದೊಡ್ಡದೊಡ್ಡ ಯುದ್ಧಗಳನ್ನು ಜಯಿಸಿ, ವಿಶೇಷ ಧನವನ್ನು ಸಂಪಾದಿಸಿ, ಸಮಸ್ತ ಭೂಮಿಯನ್ನು ಜಯಿಸಿದ ವೀರರಾದರೂ ಹೀಗೆ ಜಂಭವನ್ನು ಹೇಳಿಕೊಳ್ಳಲಾರರು. ಅಗ್ನಿಯು ಬಾಯಿಂದಾಡದೆ ಪದಾರ್ಥಗಳನ್ನು ಪಕ್ವಮಾಡುವನು. ಸೂರ್ಯನು ನಿಶ್ಶಬ್ದವಾಗಿಯೇ ತನ್ನ ಪ್ರಕಾಶವನ್ನು ತೋರಿಸುವನು. ಈ ಭೂಮಿಯುಕೂಡ ಚರಚರಾತ್ಮಕವಾದ ಈ ಸಮಸ್ತ ಪ್ರಪಂಚವನ್ನೂ ಬಾಯಿಂದ ಮಾತಾಡದೆ ಧರಿಸುತ್ತಿರುವುದು. ಬ್ರಾಹ್ಮಣರಾದ ನಮಗೆ ಭೋಜನದಲ್ಲಿಯೇ ಕೌಶಲವೇ ಹೊರತು ಯುದ್ಧದಲ್ಲಿಲ್ಲವೆಂದು ಹೇಳಿದೆಯಲ್ಲವೇ? ನಿನಗಾದರೂ ಯುದ್ಧಕ್ಕೆ ಅಧಿಕಾರವೆಲ್ಲಿಯದು? ನಿನ್ನ ಜಾತಿ ಯಾವುದು? ಮಹರ್ಷಿಗಳಿಂದ ಬ್ರಾಹ್ಮಣಾದಿ ಚತುರ್ವರ್ಣಗಳಿಗೆ ಬೇರೆಬೇರೆ ವಿಧವಾದ ಕರ್ಮಗಳು ವಿಧಿಸಲ್ಪಟ್ಟಿವೆ. ಕೆಲವರಿಗೆ ಧನವನ್ನು ಪಡೆಯುವುದಕ್ಕೂ ಆ ಕರ್ಮಗಳೇ ಸಾಧನವೆನಿಸಿವೆ. ಆ ಕರ್ಮಗಳಿಂದ ತಾನು ದೂಷಿತನಾಗದಂತೆ ಅವುಗಳನ್ನು ನಡೆಸಬೇಕು. ಇಂತಹ ಕರ್ಮಗಳನ್ನು ಮಹರ್ಷಿಗಳು ಅವರವರಿಗೆ ಬೇರೆಬೇರೆಯಾಗಿ ವಿಧಿಸಿರುವರು. ಬ್ರಾಹ್ಮಣನಿಗೆ ವೇದಾಧ್ಯಯನ, ಯಜನ, ಯಾಜನಗಳಿಗೆ ಅಧಿಕಾರವುಂಟು. ಕ್ಷತ್ರಿಯನು ಸಮೃದ್ಧವಾದ ಧನವನ್ನು ಸಂಪಾದಿಸಿ ತಂದು ಯಾಗಮಾಡಬಹುದು. ಅವನು ಇತರರಿಂದ ಯಾಗಮಾಡಿಸಬಾರದು. ವೈಶ್ಯನು ಧನವನ್ನು ಸಂಗ್ರಹಿಸಿ ಕೃಷಿವಾಣಿಜ್ಯಗಳನ್ನು ನಡೆಸಬಹುದು. ಶೂದ್ರನು ಈ ಮೂರು ವರ್ಣದವರಿಗೆ ಶುಶ್ರೂಷಾದಿಗಳನ್ನು ಮಾಡುತ್ತಾ ಸಹಾಯಕನಾಗಿರಬೇಕು. ಶೂದ್ರನು ವೈತಸವೃತ್ತಿಯನ್ನು ಹಿಡಿದು, ಇತರ ಮೂರು ವರ್ಣದವರಿಗೆ ಯಾವಾಗಲೂ ತಗ್ಗಿ ನಡೆಯುತ್ತಿರಬೇಕು. ಈ ಶಾಸ್ತ್ರವಿಧಿಗನುಸಾರವಾಗಿ ನಡೆದೇ ಅನೇಕರಾಜರು ಮಹಾಭಾಗ್ಯವನ್ನು ಪಡೆದು, ದೊಡ್ಡ ಭೂಮಿಯನ್ನು ಜಯಿಸಿ, ಅನೇಕ ಯಜ್ಞಗಳನ್ನು ನಡೆಸಿರುವರು. ಓ ಸೂತಾ! ಮೇಲೆ ಹೇಳಿದ ಜಾತಿ

ಗಳಲ್ಲಿ ನಿನ್ನ ಜಾತಿಯಾವುದು? ನಿನಗೆ ಮಂತ್ರಗಳಾವುವು? ನಿನ್ನ ಕರ್ಮಗಳಾವುವು? ತನ್ನ ಪ್ರಭುವಾದ ರಾಜನಮುಂದೆ ಸ್ವೇಚ್ಛೆಯಾಗಿ ಹರಟುವುದು, ಅವನಿಂದ ಬೇಕಾದ ಭೋಗಗಳನ್ನನುಭವಿಸುವುದು, ತನ್ನ ಸ್ವಾಮಿಯನ್ನೇ ಅಡಗಿಸಿ ಆಳುವುದು. ಇಂತಹ ಕರ್ಮಗಳನ್ನವಲಂಬಿಸಿದ ನಿನ್ನ ಕಾರ್ಯವು ಯಾವ ವರ್ಣಗಳಿಗೆ ವಿಹಿತವಾಗಿದೆ?'' ಎಂದನು. ಓ ಜನಮೇಜಯರಾಜಾ! ಹೀಗೆ ಅಶ್ವತ್ಥಾಮನು ಎಲ್ಲಾ ಕುರುಗಳ ಮುಂದೆ ಕೋಪದಿಂದ ಈ ಮಾತುಗಳನ್ನಾಡಿ, ತಿರುಗಿ ದುರ್ಯೋಧನನನ್ನು ನಿರ್ದೇಶಿಸಿ, ''ಯಾವ ಕ್ಷತ್ರಿಯನು ತಾನೇ ಜೂಜಿನಲ್ಲಿ ರಾಜ್ಯವನ್ನು ಪಡೆದು, ಅದಕ್ಕಾಗಿ ತನ್ನನ್ನು ತಾನು ಹೀಗೆ ಹೊಗಳಿಕೊಳ್ಳುವನು? ಈ ಧೃತರಾಷ್ಟ್ರಪುತ್ರನೂ ಅಂತಹ ಕ್ರೂರಸ್ವಭಾವವುಳ್ಳವನೇ! ದಯಾಶೂನ್ಯನು! ಅನುಚಿತವಾದ ಮಾರ್ಗದಿಂದ ಹಣವನ್ನು ಪಡೆದು, ಹೀಗೆ ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುತ್ತಿರುವನು? ವಿವೇಕಿಯಾದವನು ಹೀಗೆ ಮಾಡುವನೇ? ಪಕ್ಷಿಗಳನ್ನು ಹಿಡಿಯುವ ಬೇಡರಂತೆ ಕಪಟದಿಂದಲೂ, ವಂಚನೋಪಾಯಗಳಿಂದಲೂ ಸಂಪಾದಿಸಿದ ಹಣಕ್ಕಾಗಿ ಇಷ್ಟೊಂದು ಹೆಮ್ಮೆಯುಂಟೇ?

ಓ ದುರ್ಯೋಧನರಾಜಾ! ನೀನು ಹಿಂದೆ ಎಂದಾದರೂ ಆ ಧನಂಜಯನನ್ನಾಗಲಿ, ನಕುಲನನ್ನಾಗಲಿ, ಕೊನೆಗೆ ಸಹದೇವನನ್ನಾಗಲಿ ದ್ವಂದ್ವಯುದ್ಧದಲ್ಲಿ ಜಯಿಸಿದುದುಂಟೇ? ನಿನಗೆ ಅವರ ಧನವೆಲ್ಲಾ ಸೇರಿದುದು ಹೇಗೆ? ಆ ಧರ್ಮರಾಜನನ್ನಾಗಲಿ, ಬಲಶಾಲಿಗಳಲ್ಲಿ ಮೇಲೆನಿಸಿದ ಆ ಭೀಮನನ್ನಾಗಲಿ, ನೀನು ಯಾವ ಯುದ್ಧದಲ್ಲಿ ಜಯಿಸಿದೆ? ಯಾವ ಯುದ್ಧದಲ್ಲಿ ನೀನು ಅವರನ್ನು ಜಯಿಸಿ, ಆ ಇಂದ್ರಪ್ರಸ್ಥವನ್ನು ನೀನು ಕೈವಶ ಮಾಡಿಕೊಂಡೆ? ಅಲ್ಪ ಕಾರ್ಯದಲ್ಲಿಯೇ ಅಸಕ್ತಿಯುಳ್ಳ ಓ ದುರ್ಯೋಧನಾ! ಹಿಂದೆ ಏಕವಸ್ತ್ರಧಾರಿಣಿಯಾಗಿ, ರಜಸ್ವಲೆಯಾಗಿದ್ದ ಆ ದ್ರೌಪದಿಯನ್ನು ಸಭೆಗೆ ಎಳೆದು ತರಿಸಿದೆಯಲ್ಲವೆ? ನೀನು ಅವಳನ್ನು ಜಯಿಸುವುದಕ್ಕಾಗಿ ಆಗ ನಡೆಸಿದ ಯುದ್ಧವೆಂತದು? ವಾಸನೆಯಲ್ಲಿ ಅಪೇಕ್ಷೆಯುಳ್ಳವನು ಗಂಧದ ಮರವನ್ನು ಬುಡಸಹಿಸವಾಗಿ ಕತ್ತರಿಸುವಂತೆ, ಹಣದಾಶೆ

ಯುಳ್ಳ ನೀನು, ಕೇವಲ ಕ್ಷುದ್ರಮಾರ್ಗವನ್ನು ಹಿಡಿದು, ಆ ಪಾಂಡವರ ದೊಡ್ಡ ಬುಡವನ್ನೇ ಕಿತ್ತುಹಾಕುವುದಕ್ಕೆ ಯತ್ನಿಸಿದೆ. ಆಗ ವಿದುರನು ನಿನಗೆ ಹೇಳಿದುದೇನು? (ಈ ದ್ಯೂತವೇ ನಿಮ್ಮ ನಾಶಕ್ಕೆ ಮೂಲವೆಂದು ಹೇಳಿದ್ದನಲ್ಲವೆ?) ಮನುಷ್ಯರಿಗಾಗಲಿ, ಇರುವೆ ಮುಂತಾದ ಅತಿಸೂಕ್ಷ್ಮ ಕ್ರಿಮಿಕೀಟಗಳಿಗಾಗಲಿ, ಎಲ್ಲಾ ಪ್ರಾಣಿಗಳಿಗೂ ಅವುಗಳ ಶಕ್ತಿಗನುಸಾರ ಸಾರವಾಗಿ ಕೋಪವೆಂಬುದಿದ್ದೇ ಇರುವುದು. ಆದುದರಿಂದ, ದ್ರೌಪದಿ ಗುಂಟಾದ ಪರಾಭವವನ್ನು ಧರ್ಮರಾಜನಾದರೂ ಸಹಿಸಿಕೊಂಡು ಸುಮ್ಮನಿರಲಾರನು. ಅಷ್ಟೇಕೆ? ಧೃತರಾಷ್ಟ್ರಪುತ್ರರ ನಾಶಕ್ಕಾಗಿಯೇ ಧನಂಜಯನು ಮುಂದೆ ಕಾಣಿಸಿಬಿಟ್ಟನೆಂದು ತಿಳಿ! ಕರ್ಣಾ! ನೀನು ಪಂಡಿತನಾಗಿದ್ದು, ಆಚಾರ್ಯರನ್ನು ಹೀಗೆ ಅವಮಾನಗೊಳಿಸುತ್ತಿರುವೆ. ಅರ್ಜುನನಾದರೋ ಈಗ ನಮ್ಮಮೇಲೆ ಹಗೆತೀರಿಸಿಕೊಳ್ಳಬೇಕೆಂದೇ ಬಂದಿರುವನು. ಅವನು ನಮ್ಮಲ್ಲಿ ಯಾರನ್ನೂ ಈಗ ಉಳಿಸುವವನಾಗಿಲ್ಲ. ಅಷ್ಟೇಕೆ? ದೇವತೆಗಳಾಗಲಿ, ದಾನವರಾಗಲಿ, ಗಂಧರ್ವರಾಗಲಿ, ಯಕ್ಷರಾಗಲಿ, ರಾಕ್ಷಸರಾಗಲಿ, ಆ ಅರ್ಜುನನಿಗೆದಿರಾಗಿ ನಿಲ್ಲಲು ಭಯಪಟ್ಟು ಯುದ್ಧಕ್ಕೆ ಹಿಂಜರಿಯುವರು. ಆ ಅರ್ಜುನನು ಏಕಾಕಿಯಾಗಿದ್ದರೂ, ಯಾವಯಾವನು ಯುದ್ಧದಲ್ಲಿ ತನಗಿದಿರಾಗುವನೋ, ಅವನನ್ನು ಗರುಡನು ತನ್ನ ವೇಗದಿಂದ ವೃಕ್ಷವನ್ನು ಮುರಿದು ಕೆಡಹುವಂತೆ ಕೊಂದು ಕೊನೆಮುಟ್ಟಿಸಿಬಿಡುವನು. ಕರ್ಣಾ! ವೀರ್ಯದಲ್ಲಿ ನಿನಗಿಂತಲೂ ಅರ್ಜುನನು ಮೇಲಾದವನು. ಬಿಲ್ಲಿನಲ್ಲಿ ದೇವರಾಜನಿಗೆ ಸಮಾನನು. ಯುದ್ಧದಲ್ಲಿ ವಾಸುದೇವನಿಗೆಣೆಯಾದವನು. ಅಂತವನನ್ನು ಲೋಕದಲ್ಲಿ ಯಾವನು ತಾನೇ ಪೂಜಿಸದಿರುವನು? ದೇವತೆಗಳನ್ನು ದೈವಶಕ್ತಿಯಿಂದಲೂ, ಮನುಷ್ಯರನ್ನು ಮಾನವ ಶಕ್ತಿಯಿಂದಲೂ, ಅಸ್ತ್ರಗಳನ್ನು ಅಸ್ತ್ರಶಕ್ತಿಯಿಂದಲೂ ನಿಗ್ರಹಿಸಬಲ್ಲ ಆ ಅರ್ಜುನನಿಗೆ ಸಮಾನನಾದ ಪುರುಷನು ಲೋಕದಲ್ಲಿ ಬೇರೊಬ್ಬನಾವನಿರುವನು! ಹೊಟ್ಟೆಯಲ್ಲಿ ಹುಟ್ಟಿದ ಪುತ್ರನಿಗಿಂತಲೂ ಶಿಷ್ಯನು ಕಡಿಮೆಯಾದವನಲ್ಲವೆಂದು ಧರ್ಮಜ್ಞರು ಹೇಳುವರು ನನ್ನ ತಂದೆಗೆ ಅರ್ಜುನನಲ್ಲಿ ಅಷ್ಟೊಂದು ಪ್ರೀತಿ ಹುಟ್ಟಲು ಇದೂ ಒಂದು ಮುಖ್ಯ ಕಾರಣವು. ಓ ದುರ್ಯೋಧನಾ! ಹಿಂದೆ ನೀನು ಜೂಜಾಡಿ ಪಾಂಡವ

ರನ್ನು ಜಯಿಸಿದಂತೆಯೂ, ಅವರಿಂದ ಇಂದ್ರಪ್ರಸ್ಥವನ್ನು ಕಿತ್ತುಕೊಂಡಂತೆಯೂ, ದ್ರೌಪದಿಯನ್ನು ಸಭೆಗೆ ಎಳೆದುತಂದಂತೆಯೂ, ಈಗಲೂ ಅರ್ಜುನನೊಡನೆ ಯುದ್ಧಮಾಡುವುದಾದರೆ ಮಾಡು. ಇದೋ! ನಿನಗೆ ಒಳ್ಳೆಯ ಮಂತ್ರಾಲೋಚನೆಗಳನ್ನು ಹೇಳತಕ್ಕ ನಿನ್ನ ಮಾವನು ಸಮೀಪದಲ್ಲಿರುವನು. ಇವನು ಒಳ್ಳೇ ಪ್ರಾಜ್ಞನು. ಕ್ಷತ್ರಧರ್ಮವನ್ನೆಲ್ಲ ತಿಳಿದವನು. ಕಪಟದ್ಯೂತವನ್ನಾಡುವುದರಲ್ಲಿ ನಿಪುಣನು. ಹಿಂದೆ ಜೂಜಿನ ಸಭೆಯಲ್ಲಿ ಹೇಗೋ ಹಾಗೆ, ಈಗಲೂ ನಿನ್ನ ಜಯಕ್ಕಾಗಿ ಈ ನಿನ್ನ ಮಾವನನ್ನೇ ಮುಂದೆ ಬಿಡು. ಅವನು ಅದೇತರದ ಯುದ್ಧವನ್ನು ಮಾಡಲಿ. ಓ ಕೌರವ ರಾಜಾ! ಅರ್ಜುನನ ಕೈಯಲ್ಲಿರುವ ಗಾಂಡೀವವು ದಾಳಗಳನ್ನೆಸೆಯುವುದೆಂದು ತಿಳಿಯಬೇಡ. ಅದು ಈಗ ಕೃತ ದ್ವಾಪರಗಳನ್ನೆಸೆಯುವುದಕ್ಕಾಗಿ ಬಂದಿಲ್ಲ. (ದಾಳದಲ್ಲಿ ನಾಲ್ಕು ಮತ್ತು ಎರಡು ಸಂಖ್ಯೆಗಳನ್ನು ತೋರಿಸತಕ್ಕ ಪಕ್ಕಗಳಿಗೆ ಕ್ರಮವಾಗಿ ಕೃತ ದ್ವಾಪರಗಳೆಂದು ಹೆಸರು) ಉರಿಯುತ್ತಿರುವ ವಿಧವಿಧಗಳಾದ ತೀಕ್ಷ್ಣಬಾಣಗಳನ್ನು ಎಸೆಯುವುದಕ್ಕಾಗಿ ಬಂದಿದೆ. ಆ ಗಾಂಡೀವದಿಂದ ಪ್ರಯೋಗಿಸಲ್ಪಟ್ಟ ಹದ್ದಿನ ಗರಿಗಳುಳ್ಳ ಮತ್ತು ತೇಜೋವಿಶಿಷ್ಟಗಳಾದ ಬಾಣಗಳಿಗೆ ನಡುವೆ ಎಲ್ಲಿಯೂ ಅಡ್ಡಿಯಿರುವುದಿಲ್ಲ. ಪರ್ವತಗಳನ್ನಾದರೂ ಭೇದಿಸಿಕೊಂಡು ಹೋಗಬಲ್ಲುವು. ಯಮನಾಗಲಿ, ವಾಯುವಾಗಲಿ, ಮೃತ್ಯುವಾಗಲಿ, ಬಡಬಾಗ್ನಿಯಾಗಲಿ ಒಂದುವೇಳೆ ತಮಗೆ ಬಲಿಯಾಗಿ ಸಿಕ್ಕಿದವರನ್ನು ಸ್ವಲ್ಪ ಮಟ್ಟಿಗೆ ಉಳಿಸಿದರೂ ಉಳಿಸಬಹುದು. ಅರ್ಜುನನು ಕೋಪಗೊಂಡರೆ ಉಳಿಸಲಾರನು. ಕೌರವರಾಜಾ! ನಿನ್ನ ಶಕುನಿಮಾವನೊಡನೆ ಸೇರಿ, ಆ ಸಭೆಯಲ್ಲಿ ಜೂಜಾಡಿದಂತೆ ಈಗಲೂ ಅವನೊಡನೆಯೇ ಸೇರಿ ಅದೇ ತರದ ಯುದ್ಧವನ್ನಾರಂಭಿಸು. ಆಗ ನೀನು ಸುರಕ್ಷಿತವಾಗಿ ಬದುಕಿಹೋಗಬಹುದು. ಇಲ್ಲಿ ನಿನ್ನ ಆಚಾರ್ಯನು ಯಥೇಷ್ಟವಾಗಿ ಯುದ್ಧಮಾಡಲಿ! ನಾನುಮಾತ್ರ ಅರ್ಜುನನಿಗಿದಿರಾಗಿ ಯುದ್ಧಮಾಡತಕ್ಕವನಲ್ಲ. ಆ ಹಸುಗಳಿರತಕ್ಕ ಸ್ಥಳಕ್ಕೆ ಮತ್ಸ್ಯರಾಜನೇನಾದರೂ ಬಂದಪಕ್ಷದಲ್ಲಿ, ಆಗ ಅವನನ್ನು ನಾವು ನೋಡಿಕೊಳ್ಳುವೆವು'' ಎಂದನು.

ಇದು ಐವತ್ತನೆಯ ಅಧ್ಯಾಯವು.

ಭೀಷ್ಮನು ಕೋಪಗೊಂಡ ಅಶ್ವತ್ಥಾಮನಿಗೆ ಸಮಾಧಾನವನ್ನು ಹೇಳಿದುದು. ದುರ್ಯೋಧನಕರ್ಣರಿಬ್ಬರೂ ಭೀಷ್ಮನ ಮಾತಿಗಾಗಿ ಕೃಪದ್ರೋಣರಲ್ಲಿ ಕ್ಷಮೆಯನ್ನು ಕೇಳಿದುದು.

ಓ ಜನಮೇಜಯರಾಜಾ! ಆಗ ಭೀಷ್ಮಾಚಾರ್ಯನು ಅಶ್ವತ್ಥಾಮನ ಕೋಪವನ್ನು ನೋಡಿ, ಆ ಸಮಸ್ತ ಕೌರವಸಭೆಯಮುಂದೆ ದುರ್ಯೋಧನನನ್ನು ಕುರಿತು, ಧರ್ಮಯುಕ್ತವಾದ ಮಾತಿನಿಂದ ಹೀಗೆಂದು ಹೇಳುವನು. "ಓ ದುರ್ಯೋಧನರಾಜಾ! ಈ ದ್ರೋಣಾಚಾರ್ಯನು ನ್ಯಾಯವಾಗಿಯೇ ಹೇಳಿದನು. ಕೃಪಾಚಾರ್ಯನೂ ಚೆನ್ನಾಗಿ ಯೋಚಿಸಿಯೇ ಹೇಳಿರುವನು. ಆಚಾರ್ಯಪುತ್ರನಾದ ಈ ಅಶ್ವತ್ಥಾಮನೂಕೂಡ ವಿಷಯಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ನಿಶ್ಚಯವನ್ನೇ ನುಡಿದಿರುವನು. ಇವರೆಲ್ಲರೂ ದೂರದೃಷ್ಟಿಯಿಂದ ವಿಷಯಗಳನ್ನು ಚೆನ್ನಾಗಿ ಆಲೋಚಿಸಿರುವರು. ಈ ಕರ್ಣನಾದರೋ, ಕೇವಲ ಕ್ಷತ್ರಧರ್ಮವನ್ನು ಹಿಡಿದು, ಯುದ್ಧಕ್ಕಾಗಿ ಆತುರಪಡುತ್ತಿರುವನು. ವಿವೇಕಿಯಾದವನು ಈ ಆಚಾರ್ಯನ ಮಾತನ್ನು ಎಂದಿಗೂ ನಿರಾಕರಿಸಲಾರನು. ರಾಜಾ! ದೇಶಕಾಲಗಳನ್ನು ಚೆನ್ನಾಗಿ ಯೋಚಿಸಿ ಯುದ್ಧಮಾಡಬೇಕೆಂಬುದೇ ನನಗೂ ಉಚಿತವೆಂದು ತೋರಿದೆ. ಸೂರ್ಯಸಮಾನ ತೇಜಸ್ಸುಳ್ಳ ಮತ್ತು ಶಸ್ತ್ರಾಸ್ತ್ರ ಸಮೃದ್ಧಿಯುಳ್ಳ ಐದುಮಂದಿ ಪ್ರಬಲಶತ್ರುಗಳಿದ್ದು, ಅಂತಹ ಶತ್ರುಗಳಿಗೆ ಅಭ್ಯುದಯಕಾಲವು ತೋರಿಬಂದಾಗ, ವಿವೇಕಿಯಾದ ಯಾವನಿಗೆ ತಾನೇ ಬುದ್ಧಿಯು ಕಳವಳಿಸದಿರುವುದು. ಧರ್ಮವನ್ನು ಬಲ್ಲವರಾಗಿದ್ದರೂ ಕೂಡ ಕಾರ್ಯಾಲೋಚನೆಯಲ್ಲಿ ಎಲ್ಲರಿಗೂ ಬುದ್ಧಿಯು ಚಂಚಲವಾಗುವುದು ಸಹಜವು. ಅಂತಹ ಸಂದರ್ಭದಲ್ಲಿ ರಾಜನಿಗೆ ಕಾರ್ಯಾಕಾರ್ಯನಿಶ್ಚಯವು ತೋರುವುದಿಲ್ಲ. ಎಲೈ ಕೌರವವೀರರೇ! ಧೃತರಾಷ್ಟ್ರಪುತ್ರನಾದ ಈ ದುರ್ಯೋಧನನಾದರೂ, ವಿವೇಕಿಯಂತೆ ಕಾಣುವುದಿಲ್ಲ. ಧನಂಜಯನನ್ನು ಕಣ್ಣಿದಿರಾಗಿ ಕಂಡೂ, ತತ್ವವನ್ನು ತಿಳಿದುಕೊಳ್ಳಲಾರದೆ ಹೋದನು. ಬುದ್ಧಿಯಿಲ್ಲದವನಂತೆ, ಕೇವಲ ಕೋಪಕ್ಕೆ ವಶನಾಗಿ, ಆ ಅರ್ಜುನನ ವಾಸನೆಯನ್ನಾದರೂ ಕಂಡುಕೊಳ್ಳಲಾರದೆ, ಆತುರಪಡುತ್ತಿರುವನು" ಎಂದು

ಹೇಳಿ, ಆಮೇಲೆ ಕೋಪದಿಂದ ನಿಂತಿದ್ದ ಅಶ್ವತ್ಥಾಮನಕಡೆಗೆ ತಿರುಗಿ ಅವನಿಗೆ ಕೈಮುಗಿಯುತ್ತ ಸಮಾಧಾನಪೂರ್ವಕವಾಗಿ ಹೀಗೆಂದು ಹೇಳುವನು. "ಓ ಆಚಾರ್ಯಪುತ್ರಾ! ಈಗ ಕರ್ಣನು ಹೇಳಿದ ಮಾತುಗಳು ನಿಮ್ಮನ್ನು ರೇಗಿಸಿ, ನಿಮಗೆ ವೀರ್ಯೋತ್ಸಾಹವನ್ನು ಹುಟ್ಟಿಸುವುದಕ್ಕಾಗಿಯೇ ಹೊರತು ನಿಮ್ಮಲ್ಲಿ ತಿರಸ್ಕಾರಭಾವದಿಂದಲ್ಲ. ಆದುದರಿಂದ ನೀನು ತಾಳ್ಮೆಯನ್ನು ವಹಿಸಬೇಕು. ಈಗ ಮಹತ್ತಾದ ಕಾರ್ಯವು ನಮ್ಮ ಮುಂದೆ ಬಿದ್ದಿದೆ. ಕುಂತೀಪುತ್ರನಾದ ಅರ್ಜುನನು ನಮ್ಮನ್ನು ನಿರಿಸುವುದಕ್ಕಾಗಿ ಬಂದಿರುವನು. ನಮ್ಮಲ್ಲಿ ಆಂತರ್ಕಲಹಕ್ಕೆ ಇದು ಕಾಲವಲ್ಲ. ಏನಿದ್ದರೂ ನೀನು ಈಗ ಮನ್ನಿಸಬೇಕು. ಆಚಾರ್ಯನೂ, ಕೃಪನೂ ಕೋಪವನ್ನು ಬಿಟ್ಟು ಕ್ಷಮೆಯನ್ನು ವಹಿಸಬೇಕು. ಎಲೈ ಬ್ರಾಹ್ಮಣೋತ್ತಮರೇ! ನಿಮ್ಮಲ್ಲಿರುವ ಅಸ್ತ್ರಕೌಶಲ್ಯವಾದರೋ, ಸೂರ್ಯನಲ್ಲಿರುವ ಬೆಂಕಿಯಂತೆಯೂ, ಚಂದ್ರನಲ್ಲಿರುವ ಕಾಂತಿಯಂತೆಯೂ ಸರ್ವವಿಧದಲ್ಲಿಯೂ ಬೇರೊಬ್ಬರಿಗೆ ಅಧೃಷ್ಯವಾದುದು. ನಿಮ್ಮಲ್ಲಿ ಬ್ರಾಹ್ಮಣ್ಯವೂ, ಬ್ರಹ್ಮಾಸ್ತ್ರವೂ ಚಂದ್ರಾದಿತ್ಯಪ್ರಭೆಗಳಂತೆ ಸ್ಥಿರವಾಗಿ ನೆಲೆಗೊಂಡಿರುವುವು. ಒಬ್ಬನಲ್ಲಿ ನಾಲ್ಕು ವೇದಗಳನ್ನೂ ಕಾಣಬಹುದು. ಬೇರೊಬ್ಬನಲ್ಲಿ ಕ್ಷತ್ರಿಯ ತೇಜಸ್ಸನ್ನು ಕಾಣಬಹುದು. ಭರತಕುಲಕ್ಕೆಲ್ಲ ಆಚಾರ್ಯನಾದ ಈ ದ್ರೋಣನನ್ನೂ, ಅವನ ಮಗನಾದ ಈ ಅಶ್ವತ್ಥಾಮನನ್ನೂ ಬಿಟ್ಟರೆ, ಬೇರೊಬ್ಬನಲ್ಲಿ ಇವೆರಡೂ ಒಂದಾಗಿ ಸೇರಿರುವುದನ್ನು ನಾವು ಇದುವರೆಗೆ ಕೇಳಿಲ್ಲವು. ಧನುರ್ವೇದದೊಡನೆ ವೇದಾಂತಗಳೂ, ಪುರಾಣೇತಿಹಾಸಗಳೂ ಇವರಿಗೆ ಕಂಠಗತವಾಗಿರುವುವು. ಈ ವಿಷಯದಲ್ಲಿ ಜಮದಗ್ನಿಪುತ್ರನಾದ ಆ ಪರಶುರಾಮನೊಬ್ಬನನ್ನು ಬಿಟ್ಟರೆ, ಈ ದ್ರೋಣನಿಗಿಂತಲೂ ಮೇಲಾದವನು ಬೇರೊಬ್ಬನಿಲ್ಲವೆಂದೇ ನನ್ನ ಅಭಿಪ್ರಾಯವು. ಬ್ರಹ್ಮಾಸ್ತ್ರವೂ, ವೇದಗಳೂ ಹೀಗೆ ಬೇರೆ ಯಾವನಲ್ಲಿಯೂ ಒಂದಾಗಿ ಕಲೆತಿರುವುದಿಲ್ಲ. ಆದುದರಿಂದ ಈಗ ನೀವೆಲ್ಲರೂ ತಾಳ್ಮೆಯನ್ನು ವಹಿಸಬೇಕು. ಇದು ನಮ್ಮಲ್ಲಿ ಆಂತಃಕಲಹಕ್ಕೆ ಕಾಲವಲ್ಲ. ಈಗ ನಾವೆಲ್ಲರೂ ಸೇರಿಯೇ ಇಂದ್ರಪುತ್ರನಾದ ಆ ಅರ್ಜುನನೊಡನೆ ಯುದ್ಧಕ್ಕೆ ನಿಲ್ಲುವೆವು. ವಿದ್ವಾಂಸರು ಯಾವಯಾವುದನ್ನು ಸೈನ್ಯವ್ಯಸನಗಳೆಂದು ನಿರೂಪಿಸಿರುವರೋ ಆ ವ್ಯಸನಗಳಲ್ಲಿ ಸ್ವ

ಯೂಧಕಲಹವೆಂಬುದೇ ಎಲ್ಲಕ್ಕಿಂತಲೂ ಅತಿ ಪಾಪಿಷ್ಠ (ಕ್ರೂರ) ವೆನಿಸಿದೆ" ಎಂದನು.

ಆಗ ಅಶ್ವತ್ಥಾಮನು "ಪುರುಷಶ್ರೇಷ್ಠಾ! ಈ ಸಮಯದಲ್ಲಿ ಇಂತಹ ಕಲಹದ ಮಾತುಗಳನ್ನಾಡುವುದೇನೋ ಉಚಿತವಲ್ಲವೆಂಬುದನ್ನು ನಾವೂ ಬಲ್ಲೆವು. ಆದರೆ, ನಮ್ಮ ತಂದೆಯು ಕೋಪಾವೇಶದಿಂದ ಇಲ್ಲಿ ಆ ಅರ್ಜುನನ ಗುಣಗಳನ್ನು ಎತ್ತಿಹೇಳಿದನು. ಆದರೇನು? ಶತ್ರುವಾದರೂ ಅವನಲ್ಲಿರುವ ಗುಣಗಳನ್ನು ಹೇಳಿಯೇ ತೀರಬೇಕು. ಗುರುವಾಗಿದ್ದರೂ ಅವನಲ್ಲಿರುವ ದೋಷಗಳನ್ನು ಹೇಳದೆ ಬಿಡಬಾರದು. ಶಿಷ್ಯನ ವಿಷಯದಲ್ಲಿಯೂ, ಪುತ್ರನ ವಿಷಯದಲ್ಲಿಯೂ, ಎಲ್ಲಾ ಸಂದರ್ಭದಲ್ಲಿಯೂ, ಸರ್ವ ಪ್ರಯತ್ನದಿಂದಲೂ ಹಿತವನ್ನೇ ಹೇಳಬೇಕಾದುದು ಅವಶ್ಯವು. ಆದುದಾಯಿತು! ಈಗ ಆಚಾರ್ಯನು ಕ್ಷಮೆಯನ್ನು ತಂದುಕೊಳ್ಳಲಿ! ಎಲ್ಲರೂ ಶಾಂತಿಯನ್ನು ವಹಿಸಲಿ! ಮುಖ್ಯವಾಗಿ ಈಗ ಆಚಾರ್ಯನು ವಿರೋಧಿಸದಿದ್ದರೆ ಕಾರ್ಯವೆಲ್ಲ ಅನುಕೂಲಿಸಿದಂತೆಯೇ" ಎಂದನು. ಓ ಜನಮೇಜಯರಾಜಾ! ಈ ಮಾತನ್ನು ಕೇಳಿದಮೇಲೆ, ದುರ್ಯೋಧನನೂ, ಕರ್ಣನೂ, ಭೀಷ್ಮನನ್ನು ಮುಂದಿಟ್ಟುಕೊಂಡು, ದ್ರೋಣನಲ್ಲಿಯೂ, ಕೃಪನಲ್ಲಿಯೂ ಮನ್ನಣೆಯನ್ನು ಕೇಳಿಕೊಂಡರು. ಆಗ ದ್ರೋಣನು ಅವರನ್ನು ಕುರಿತು "ಈ ಭೀಷ್ಮನು ಮೊದಲು ಹೇಳಿದ ಒಂದು ಮಾತಿನಿಂದಲೇ ನಾನು ಪ್ರಸನ್ನನಾಗಿ ಬಿಟ್ಟೆನು. ಇನ್ನು ಮುಂದಿನ ಕಾರ್ಯವನ್ನು ನೋಡಿರಿ! ಮುಖ್ಯವಾಗಿ ಈ ಯುದ್ಧದಲ್ಲಿ ಪಾರ್ಥನು ತನ್ನ ಸಾಹಸದಿಂದಾಗಲಿ, ಅಥವಾ ನಮ್ಮ ಅನವಧಿಂದಾಗಲಿ, ಈ ದುರ್ಯೋಧನನ ಮೇಲೆ ಬೀಳದಂತೆ ನಾವು ಎಚ್ಚರಗೊಂಡಿರಬೇಕು. ವನವಾಸಕಾಲವೆಲ್ಲ (ಅಜ್ಞಾತವಾಸಾವಧಿಯೊಡನೆ) ಮುಗಿಯದಿದ್ದ ಪಕ್ಷದಲ್ಲಿ ಅರ್ಜುನನು ಇಲ್ಲಿ ಕಾಣಿಸಿಕೊಳ್ಳಲಾರನು. ತನ್ನ ಭಾಗ್ಯವನ್ನೆಲ್ಲ ಕಳೆದುಕೊಂಡ ಆ ಪಾರ್ಥನು ಈಗ ತಾಳ್ಮೆಯಿಂದ ಸುಮ್ಮನಿರಲಾರನು. ಆದುದರಿಂದ ಬಹುಕಾಲದಿಂದ ಕಾದಿದ್ದ ಧನಂಜಯನು ನಮ್ಮ ರಾಜನನ್ನು ಬಂದು ಹಿಡಿಯದಂತೆಯೂ, ನಮ್ಮ ಸೈನ್ಯವನ್ನು ಸೋಲಿಸದಂತೆಯೂ, ನಾವು ನೀತಿಯನ್ನು ಹಿಡಿಯು

ಬೇಕು. ಭೀಷ್ಮಾಚಾರ್ಯಾ! ದುರ್ಯೋಧನನು ಮೊದಲು ಇದೇ ಮಾತನ್ನಾಡಿರುವನು. ಅದನ್ನೂ ಮನಸ್ಸಿನಲ್ಲಿಟ್ಟುಕೊಂಡು, ಮುಂದೆ ನಡೆಸಬೇಕಾದ ಮಾರ್ಗವನ್ನು ನೀನು ತಿಳಿಸಬೇಕು'' ಎಂದನು.

ಇದು ಐವತ್ತೊಂದನೆಯ ಅಧ್ಯಾಯವು.

ಭೀಷ್ಮನು ದುರ್ಯೋಧನನಿಗೆ ಪಾಂಡವರ ಅಜ್ಞಾತವಾಸದ ಕಾಲಾವಧಿಯು ತೀರಿಹೋಯಿತೆಂದು ತಿಳಿಸಿ, ಪಾಂಡವರೊಡನೆ ಸಂಧಿಮಾಡಿಕೊಳ್ಳುವುದಕ್ಕಾಗಿ ಪ್ರೇರಿಸಿದುದು. ದುರ್ಯೋಧನನು ಸಮ್ಮತಿಸದಿರಲು, ಅವನನ್ನು ಗೋವುಗಳೊಡನೆ ಹೊರದುವಂತೆ ಹೇಳಿ, ದ್ರೋಣಾದಿಗಳೊಡನೆ ತಾನು ಯುದ್ಧಕ್ಕೆ ಮುಂದಾದುದು.

ಓ ಜನಮೇಜಯರಾಜಾ! ಕೇಳು! ಆಮೇಲೆ ಭೀಷ್ಮನು ಅಲ್ಲಿದ್ದವರೆಲ್ಲರನ್ನೂ ಕುರಿತು ಹೀಗೆಂದು ಹೇಳುವನು. ''ಓ ಕೌರವವೀರರೇ, ಕಾಲಪ್ರಮಾಣವನ್ನು ಹೇಳುವೆನು ಕೇಳಿರಿ. ಕಲೆಗಳೂ, ಕಾಷ್ಠಗಳೂ, ಮುಹೂರ್ತಗಳೂ ಸೇರಿ ದಿನಗಳಾಗುವುವು. ಪಕ್ಷಗಳೂ, ಮಾಸಗಳೂ, ನಕ್ಷತ್ರಗಳೂ, ಋತುಗಳೂ ಸೇರಿ ಸಂವತ್ಸರಗಳೆನಿಸುವುವು. ಹೀಗೆ ಕಾಲವಿಭಾಗದಿಂದ ಕಾಲಚಕ್ರವು ನಡೆಯುವುದು. ಈ ಕಾಲಗಳಲ್ಲಿ ಹೆಚ್ಚುಕಡಿಮೆಯಿಂದಲೂ, ಜ್ಯೋತಿರ್ಗ್ರಹಗಳಲ್ಲಿ ಕಂಡುಬರುವ ಬದಲಾವಣೆಗಳಿಂದಲೂ ಐದೈದು ವರ್ಷಗಳಿಗೆ ಎರಡು ತಿಂಗಳ ಅಧಿಕಮಾಸಗಳು ಏರ್ಪಡುವುವು. ಆ ರೀತಿಯಾಗಿ ನೋಡಿದರೆ, ಪಾಂಡವರು ನಗರವನ್ನು ಬಿಟ್ಟುಹೋದ ಈ ಹದಿಮೂರು ವರ್ಷಗಳ ಕಾಲಕ್ಕೆ ಐದು ತಿಂಗಳುಗಳೂ, ಹನ್ನೆರಡು ದಿನಗಳೂ ಅಧಿಕವಾಗುವುದೆಂದು ನನ್ನ ಬುದ್ಧಿಗೆ ತೋರಿದೆ. ಆದುದರಿಂದ, ನಿನ್ನೆಯ ದಿನಕ್ಕೇ ಪಾಂಡವರ ಅಜ್ಞಾತವಾಸಪ್ರತಿಜ್ಞೆಯ ದಿನವು ತೀರಿಹೋಯಿತು. ಈ ಕಾರಣದಿಂದಲೇ ಅರ್ಜುನನು ಈಗ ಧೈರ್ಯದಿಂದ ಹೊರಗೆ ಬಂದಿರುವನು. ಆ ಪಾಂಡವರು ಹಿಂದೆ ಯಾವಯಾವ ಶಪಥದ

ಮೇಲೆ ಹೋಗಿದ್ದರೋ, ಅವೆಲ್ಲವನ್ನೂ ಅವರು ಸರಿಯಾಗಿ ಅನುಷ್ಠಿಸಿ, ತಮ್ಮ ಪ್ರತಿಜ್ಞೆಯು ಪೂರೈಸಿತೆಂಬುದನ್ನು ತಿಳಿದೇ, ಈಗ ಹೊರಗೆ ಬಂದಿರುವರು. ಆ ಐದುಮಂದಿಯೂ ಮಹಾತ್ಮರು! ಧರ್ಮಾರ್ಥಗಳನ್ನು ಚೆನ್ನಾಗಿ ತಿಳಿದವರು! ಧರ್ಮಮೂರ್ತಿಯಾದ ಯುಧಿಷ್ಠಿರನೇ ಅವರಿಗೆ ನಿಯಾಮಕನಾಗಿರುವಾಗ, ಅವರು ಹೇಗೆತಾನೇ ಧರ್ಮದಲ್ಲಿ ದಾರಿತಪ್ಪಿ ನಡೆಯುವರು? ಆ ಧರ್ಮರಾಜನಾದರೋ ಕಾಮವಶದಿಂದಾಗಲಿ, ಕ್ರೋಧವಶದಿಂದಾಗಲಿ, ಲೋಭದಿಂದಾಗಲಿ, ಇವುಗಳಿಂದುಂಟಾದ ಭಯದಿಂದಾಗಲಿ, ಸ್ನೇಹದಿಂದಾಗಲಿ, ಮೋಹದಿಂದಾಗಲಿ, ಎಂದಿಗೂ ಧರ್ಮವನ್ನು ವಿಾರಿಹೋಗಲಾರನು. ಆ ಕುಂತೀಪುತ್ರರು ಆಶೆಯಿಲ್ಲದವರು. ಬೇರೊಬ್ಬರಿಂದ ಸಾಧ್ಯವಿಲ್ಲದ ಕಾರ್ಯವನ್ನು ಮಾಡಿದವರು. ರಾಜ್ಯವನ್ನಾದರೂ ಅವರು ಅಧರ್ಮದಿಂದ ಪಡೆಯಲಪೇಕ್ಷಿಸುವವರಲ್ಲ. ಇದಕ್ಕೆ ಮೊದಲೇ ಅವರು ನಮ್ಮಮೇಲೆ ತಮ್ಮ ಪರಾಕ್ರಮವನ್ನು ತೋರಿಸುವುದಕ್ಕೆ ಆತುರವುಳ್ಳವರಾಗಿದ್ದರು. ಆದರೆ, ಧರ್ಮಪಾಶಕ್ಕೆ ಕಟ್ಟುಬಿದ್ದು, ತಮ್ಮ ಕ್ಷತ್ರಿಯವ್ರತವನ್ನು ವಿಾರಿ ನಡೆಯಲಿಲ್ಲ. ಸುಳ್ಳೆಂಬುದು ಪಾಂಡವರಲ್ಲಿ ಯಾವಾಗಲೂ ಪರಾಭವವನ್ನೇ ಹೊಂದುತ್ತಿರುವುದು. ಅವರು ಮರಣವನ್ನಾದರೂ ಬಯಸುವರೇ ಹೊರತು, ಅನೃತವನ್ನು ಆದರಿಸುವವರಲ್ಲ. ಆದರೆ ಉಚಿತಕಾಲದಲ್ಲಿ ಅವರು ತಮ್ಮ ಕಾರ್ಯಸಾಧನೆಯನ್ನುಮಾತ್ರ ಬಿಡುವವರಲ್ಲ. ಆ ಸಂದರ್ಭದಲ್ಲಿ ವಜ್ರಪಾಣಿಯಾದ ಇಂದ್ರನೇ ಬೆಂಬಲವಾಗಿ ಬಂದರೂ ಅವರು ವೈರಿಗಳನ್ನು ನಿಗ್ರಹಿಸದೆ ಬಿಡುವವರಲ್ಲ. ಅಂತಹ ಮಹಾವೀರ್ಯವುಳ್ಳವರು ಆ ಪಾಂಡವರೆಂದು ತಿಳಿ! ಹಾಗಿದ್ದರೂ ಈಗ ನಾವು ಈ ಯುದ್ಧದಲ್ಲಿ ಅರ್ಜುನನನ್ನಿದಿರಿಸಬೇಕಾದುದವಶ್ಯವು. ಆದುದರಿಂದ ತತ್ಕಾಲಕ್ಕೆ ನಮಗೆ ಶ್ರೇಯಸ್ಕರವಾಗಿಯೂ, ಲೋಕದಲ್ಲಿ ಸಾಧುಗಳಿಂದ ಅನುಷ್ಠಿತವಾಗಿಯೂ ಇರುವ ಮಾರ್ಗವನ್ನು ನಾವು ಶೀಘ್ರದಲ್ಲಿಯೇ ಅವಲಂಬಿಸಬೇಕು. ನಮ್ಮ ಪ್ರಯೋಜನವು ಶತ್ರುವಿನ ಕೈವಶವಾಗದಂತೆ ನೋಡಿಕೊಳ್ಳಬೇಕು. ಓ ದುರ್ಯೋಧನಾ! ಯುದ್ಧದಲ್ಲಿ ಯಾವಾಗಲೂ ಜಯವೇ ಉಂಟಾಗುವುದೆಂದು ನಾವು ಎಂದಿಗೂ ಎಣಿಸಬಾರದು. ಈಗಲಾದರೋ, ಅರ್ಜುನನೇ ನಮ್ಮಿದಿರಾಗಿ ಬಂದುಬಿಟ್ಟಿರುವನು. ಇಬ್ಬರಿಗೆ

ಕೈಕಲೆತಮೇಲೆ ಬದುಕುವುದಾಗಲಿ, ಸಾಯುವುದಾಗಲಿ, ಜಯವಾಗಲಿ, ಅಪಜಯವಾಗಲಿ ಅವರಲ್ಲಿ ಯಾವನಾದರೊಬ್ಬನಿಗೆ ಸಿದ್ಧವೇ! ಇದನ್ನು ನಾವು ಎಲ್ಲೆಲ್ಲಿಯೂ ಕಾಣುತ್ತಿರುವೆವು. ಆದುದರಿಂದ, ಈಗ ನೀನು ಯುದ್ಧಕ್ಕೆ ಬೇಕಾದ ಕಾರ್ಯವನ್ನಾಗಲಿ, ಧರ್ಮಕ್ಕನುಕೂಲವಾದ ಕಾರ್ಯವನ್ನಾಗಲಿ, ಯಾವುದೋ ಒಂದನ್ನು ಬೇಗನೆ ನಡೆಸಿಯೇ ತೀರಬೇಕು. ಈಗ ನಮ್ಮದಿರಾಗಿ ಬಂದಿರುವ ಅರ್ಜುನನಾದರೋ ಸಾಮಾನ್ಯನಲ್ಲ. ತಾನೊಬ್ಬನಾಗಿಯೇ ಯುದ್ಧದಲ್ಲಿ ತನ್ನ ಬಾಣಗಳಿಂದ ಭೂಮಿಯನ್ನೇ ದಹಿಸಬಲ್ಲನು. ಇನ್ನು ಅವನು ತನ್ನ ಸಹೋದರರೊಡನೆ ಸೇರಿಬಂದರೆ ಕೌರವರನ್ನು ಜಯಿಸುವನೆಂಬುದನ್ನು ಕೇಳಬೇಕೆ? ಆದುದರಿಂದ ಓ ಕುರುಶ್ರೇಷ್ಠ! ಈಗಲೂ ನಿನಗೆ ಇಷ್ಟವಿದ್ದರೆ ಅವನೊಡನೆ ಸಂಧಿಯನ್ನು ಮಾಡಿಕೊಳ್ಳುವನಾಗು" ಎಂದನು.

ಆಗ ದುರ್ಯೋಧನನು ಭೀಷ್ಮನನ್ನು ನೋಡಿ, "ತಾತಾ! ನಾನೇನೋ ಪಾಂಡವರಿಗೆ ರಾಜ್ಯವನ್ನು ಕೊಡುವವನಲ್ಲ. ಅಷ್ಟೇಕೆ? ನಮ್ಮ ರಾಜ್ಯದಲ್ಲಿ ಒಂದು ಗ್ರಾಮವನ್ನಾಗಲಿ, ಸೇನೆಯನ್ನಾಗಲಿ, ನಮ್ಮ ಸೇವಕರನ್ನಾಗಲಿ, ಕೊನೆಗೆ ಅಲ್ಪಸ್ವಲ್ಪ ದ್ರವ್ಯವನ್ನಾಗಲಿ ಅವರಿಗೆ ಕೊಡುವುದಿಲ್ಲ. ಈಗ ಯುದ್ಧಕ್ಕೆ ಬೇಕಾದ ಕಾರ್ಯವು ಯಾವುದುಂಟೋ, ಅದನ್ನೇ ನೀವು ನಡೆಸಬೇಕು" ಎಂದನು. ಓ ಜನಮೇಜಯರಾಜಾ! ಹೀಗೆ ಭೀಷ್ಮನೂ, ದುರ್ಯೋಧನನೂ ಹೇಳಿ ಮುಗಿಸಿದಮೇಲೆ ಬ್ರಾಹ್ಮಣೋತ್ತಮನಾದ ದ್ರೋಣನು ಕಾಲೋಚಿತವಾದ ಮತ್ತು ಸಾರವಾದ ಒಂದು ಮಾತನ್ನು ಹೇಳತೊಡಗಿದನು. "ಪಿತಾಮಹಾ! ನಾನೂ ಈಗ ಇದೊಂದು ಮಾತನ್ನು ಹೇಳಬೇಕಾಗಿದೆ. ಲೋಕದಲ್ಲಿ ನಿನಗಿಂತಲೂ ಮೇಲೆನಿಸಿದ ಪ್ರಾಜ್ಞನು ಬೇರೊಬ್ಬನಿಲ್ಲ. ಹಾಗಿದ್ದರೂ ನಿನಗೆ ಸಮ್ಮತವಾದರೆ ನನ್ನದೊಂದು ಆಲೋಚನೆಯನ್ನು ಕೇಳು. ಸರ್ವವಿಧದಿಂದಲೂ ರಾಜನಿಗೆ ಶ್ರೇಯಸ್ಸನ್ನೇ ತಿಳಿಸುವುದು ನಮ್ಮ ಕರ್ತವ್ಯವು. ಈಗ ಯುದ್ಧವನ್ನು ಮಾಡುವುದೇ ನಿಶ್ಚಯವಾದರೆ, ನಮ್ಮ ಸೈನ್ಯದಲ್ಲಿ ನಾಲ್ಕನೆಯ ಒಂದು ಭಾಗವನ್ನು ಸಂಗಡ ಕರೆದುಕೊಂಡು, ರಾಜನು ಈಗಲೇ ಹೊರಟುಹೋಗಲಿ! ಸೈನ್ಯದಲ್ಲಿ ಮು

ತ್ತೊಂದು ಕಾಲುಭಾಗವು ಗೋವುಗಳನ್ನು ಸಾಗಿಸಿಕೊಂಡು ಹೋಗಲಿ! ಉಳಿದ ಅರ್ಧಭಾಗದಿಂದಲೇ ನಾವು ಇಲ್ಲಿ ಪಾಂಡವರನ್ನಿದಿರಿಸುವೆವು. ನಾನೂ, ಭೀಷ್ಮನೂ, ಕರ್ಣನೂ, ಕೃಪನೂ, ನನ್ನ ಮಗನಾದ ಅಶ್ವತ್ಥಾಮನೂ, ನಾವೈದುಮಂದಿಯೇ ಇಲ್ಲಿ ಅರ್ಜುನನೊಡನೆ ಯುದ್ಧಕ್ಕೆ ನಿಲ್ಲುವೆವು. ಇದರಿಂದ ನಮ್ಮ ರಾಜನಿಗೂ ಅಪಾಯವೇನೂ ಇರದು. ಅವನು ಅಧೈರ್ಯಕ್ಕಾಗಲಿ, ಅವಮಾನಕ್ಕಾಗಲಿ ಈಡಾಗುವ ಸಂಭವವೂ ತಪ್ಪುವುದು. ಇಲ್ಲಿ ನಮ್ಮಿದಿರಾಗಿ ತಿರುಗಿ ವಿರಾಟನೇ ಬಂದರೂ, ಸಾಕ್ಷಾದ್ದೇವೇಂದ್ರನೇ ಬಂದರೂ, ಸಮುದ್ರವೇಲೆಯು ಸಮುದ್ರವೇಗವನ್ನು ಹೇಗೋಹಾಗೆ ನಾನು ಅವರನ್ನು ತಡೆಯುವೆನು'' ಎಂದನು. ಓ ಜನಮೇಜಯರಾಜಾ! ಮಹಾತ್ಮನಾದ ದ್ರೋಣನ ಮಾತು ಎಲ್ಲರಿಗೂ ಉಚಿತವೆಂದು ತೋರಿತು. ದುರ್ಯೋಧನನೂ ಅದಕ್ಕೆ ಸಮ್ಮತಿಸಿ, ಅದರಂತೆಯೇ ನಿರ್ಧರಿಸಿದನು. ಭೀಷ್ಮನು ಮೊದಲು ದುರ್ಯೋಧನನನ್ನು ಕಾಲುಪಾಲು ಸೈನ್ಯದೊಡನೆ ಹೊರಡಿಸಿ, ಬೇರೊಂದು ಸೈನ್ಯವಿಭಾಗದೊಡನೆ ಗೋವುಗಳನ್ನೂ ಕಳುಹಿಸಿಬಿಟ್ಟನು. ಆಮೇಲೆ ಭೀಷ್ಮನು ದ್ರೋಣನನ್ನು ಕುರಿತು, ''ಆಚಾರ್ಯಾ! ನೀವು ಈ ವ್ಯೂಹಕ್ಕೆ ಮಧ್ಯಭಾಗದಲ್ಲಿರಬೇಕು. ಕೃಪನೂ, ಅಶ್ವತ್ಥಾಮನೂ ಕ್ರಮವಾಗಿ ಎಡಬಲಪಾರ್ಶ್ವಗಳನ್ನು ರಕ್ಷಿಸುತ್ತಿರಲಿ! ಶತ್ರುದುರ್ಜಯರೂ, ಬಲಾಢ್ಯರೂ ಆದ ವಿಕರ್ಣ ದುರ್ಮುಖ ಶಕುನಿ ದುಸ್ಸಹರೆಂಬೀ ನಾಲ್ವರೂ ದ್ರೋಣನ ಅಕ್ಕಪಕ್ಕಗಳಲ್ಲಿದ್ದು, ಅವನ ಪಾರ್ಶ್ವರಕ್ಷಕರಾಗಿರಲಿ. ಸೂತಪುತ್ರನಾದ ಕರ್ಣನು ವೃಥವಾದ ಯುದ್ಧಕವಚವನ್ನು ತೊಟ್ಟು ಎಲ್ಲರಿಗೂ ಮುಂದಾಗಿ ನಿಲ್ಲಲಿ. ನಾನು ಸಮಸ್ತ ಸೈನ್ಯಕ್ಕೂ ರಕ್ಷಕನಾಗಿ ಹಿಂಭಾಗದಲ್ಲಿ ನಿಲ್ಲುವೆನು. ಶೂರರೂ, ಮಹಾಧನುರ್ಧಾರಿಗಳೂ, ಮಹಾಬಲಾಢ್ಯರೂ ಆದ ಮಹಾರಥರೆಲ್ಲರೂ ಸೇರಿ ಸರ್ವಪ್ರಯತ್ನದಿಂದ ಈಗ ಬಂದಿರುವ ಅರ್ಜುನನನ್ನು ಯುದ್ಧದಲ್ಲಿ ಇದಿರಿಸಬೇಕು'' ಎಂದನು. ಭೀಷ್ಮನು ಶತ್ರುದುರ್ಭೇದ್ಯಗಳಾದ ವಜ್ರಗರ್ಭ, ವ್ರೀಹಿಮುಖ, ಪದ್ಮ, ಚಂದ್ರಾರ್ಧಮಂಡಲವೆಂಬ ಸೇನಾವ್ಯೂಹಗಳನ್ನು ಕಟ್ಟಿ, ಅದರ ಹಿಂಭಾಗದಲ್ಲಿ ತಾನು ಆಯುಧಧಾರಿಯಾಗಿ, ಸುವರ್ಣ

ಮಯವಾದ ತನ್ನ ತಾಲಧ್ವಜ (ತಾಳೆಯ ಮರದ ಗುರುತುಳ್ಳ ಧ್ವಜ) ವನ್ನೇರಿಸಿ ರಥದಲ್ಲಿ ಕುಳಿತಿದ್ದನು.

ಇದು ಐವತ್ತೆರಡನೆಯ ಅಧ್ಯಾಯವು.

ಇಂದ್ರನು ಕುರುಪಾಂಡವರ ಈ ಯುದ್ಧವನ್ನು ನೋಡ ಬೇಕೆಂದು ದೇವಗಣಗಳೊಡನೆ ಸುದರ್ಶನವೆಂಬ ವಿಮಾನವನ್ನೇರಿ ಬಂದುದು.

ಹೀಗೆ ಕುರುಪಾಂಡವರಿಗೆ ಯುದ್ಧಾರಂಭವಾದ ಸಂಗತಿಯನ್ನು ಕೇಳಿ ದೇವೇಂದ್ರನು, ಸಮಸ್ತ ದೇವಗಣಗಳನ್ನೂ ಸುದರ್ಶನವೆಂಬ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಅರ್ಜುನನಿದ್ದ ಸ್ಥಳಕ್ಕೆ ಬಂದು ಸೇರಿದನು. ಆ ವಿಮಾನದ ಅಂದವನ್ನು ಕೇಳಬೇಕೆ? ನಡುವೆ ಸಾವಿರಕಂಬಗಳು! ಅದರ ನಡುವೆ ದೊಡ್ಡದೊಂದು ದೇವಸಭೆಯು ನೆರೆದಿರುವುದು. ದ್ವಾದಶಾದಿತ್ಯರೊಂದು ಕಡೆ! ಅಷ್ಟವಸುಗಳೊಂದು ಕಡೆ! ಅಶ್ವಿನೀದೇವತೆಗಳೊಂದು ಕಡೆ! ಮರುದ್ಗಣಗಳೊಂದು ಕಡೆ! ಹೀಗೆ ನೆರೆದಿರುವರು. ಆ ವಿಮಾನಕ್ಕೆ ಸುವರ್ಣದಿಂದಲೂ, ಸ್ಫಟಿಕದಿಂದಲೂ ಚಿತ್ರಿತಗಳಾದ ಬಿಳಿಯ ಚಕ್ರಗಳು! ದಿವ್ಯರೂಪವುಳ್ಳ ವಿಚಿತ್ರವಾದ ಛತ್ರಗಳು! ಆ ಛತ್ರಗಳಲ್ಲಿ ರತ್ನಮಯವಾದ ವಿಚಿತ್ರಾಲಂಕಾರಗಳು ಶೋಭಿಸುತ್ತಿರುವುವು. ನಾನಾವಿಧವಾದ ಆಕಾರಗಳಿಂದ ಕೂಡಿದ ಮಂಗಳಕರಗಳಾದ ಆ ಛತ್ರಗಳು, ಬೇರೆ ಬೇರೆ ಸಾಲಾಗಿ ದಿವ್ಯಕಾಂತಿಯಿಂದ ಬೆಳಗುತ್ತಿರುವುವು. ಇದಲ್ಲದೆ ಆ ವಿಮಾನದಲ್ಲಿ ಇಂದ್ರ, ಅಗ್ನಿ, ಸೋಮ, ಯಮ, ವರುಣ, ಧಾತೃ, ವಿಧಾತೃ, ಮಿತ್ರ, ಕುಬೇರ, ವಿಷ್ಣು, ಸವಿತೃ ಮೊದಲಾದ ಅನೇಕ ದೇವಶ್ರೇಷ್ಠರ ಸುವರ್ಣಮಯಮಾಲಿಕೆಗಳೂ, ನಾನಾಬಗೆಯ ಪುಷ್ಪಹಾರಗಳೂ ವಿಚಿತ್ರಕಾಂತಿಯಿಂದ ಬೆಳಗುತ್ತಿರುವುವು. ದಿವ್ಯರತ್ನಗಳಿಂದಲಂಕೃತವಾದ ಆ ವಿಮಾನವಲ್ಲಿ, ದಿವ್ಯಗಂಧಯುಕ್ತಗಳಾದ ಮಾಲಿಕೆಗಳು ತೂಗಾಡುತ್ತಿರುವುವು. ಆ ವಿಮಾನಕ್ಕೆ ನಾನಾಕಡೆಯಿಂದಲೂ ದಿವ್ಯಗಂಧ ವಿಶಿಷ್ಟವಾದ ಗಾಳಿಯು ಬೀಸುತ್ತಿರುವುದು. ಋತುಗಳೆಲ್ಲವೂ ಆಕಾರದೊಡನೆ ತಾವಾಗಿಯೇ ಪುಷ್ಪ

ಗಳನ್ನು ಹಿಡಿದಿರುವುವು. ಸಪ್ತ ಪ್ರಜಾಧಿಪತಿಗಳೂ, ಸಪ್ತ ಋಷಿಗಳೂ, ದೇವ ಋಷಿಗಳೂ, ಇತರ ದೇವತೆಗಳೂ ದೇವರಾಜನಾದ ಇಂದ್ರನನ್ನು ಸುತ್ತಿ ಸೇವಿಸುತ್ತಿರುವರು. ಆ ವಿಮಾನವನ್ನು ಕೆಸರಾಗಲಿ, ಧೂಳಾಗಲಿ ಸ್ವಲ್ಪಮಾತ್ರವೂ ಸ್ಪರ್ಶಿಸಲಾರದು. ಸೂರ್ಯನು ಎಷ್ಟೇ ತೀವ್ರವಾಗಿದ್ದರೂ ತನ್ನ ಉಷ್ಣವನ್ನು ಅದರಲ್ಲಿ ತೋರಿಸಲಾರನು. ಸದಾ ಸುಗಂಧವಿಶಿಷ್ಟವಾದ ಗಾಳಿಯು ಅದರಲ್ಲಿ ಬೀಸುತ್ತಿರುವುದು. ಅದರಿಂದ ನೋಡುವವರಿಗೆ ಸಮಸ್ತ ದಿಕ್ಕುಗಳೂ, ಆಕಾಶವೂ ಅತ್ಯಂತ ರಮಣೀಯವಾಗಿ ಕಾಣುತ್ತಿರುವುದು. ಹೀಗೆ ದಿವ್ಯಕಾಂತಿಯಿಂದ ಬೆಳಗುತ್ತಿರುವ ಕಾಮಗಮನವುಳ್ಳ ಆ ದಿವ್ಯವಿಮಾನವನ್ನೇರಿ ಬಂದು ದೇವತೆಗಳೆಲ್ಲರೂ ಆಕಾಶದಲ್ಲಿ ಸೇರಿದರು. ಆ ವಿಮಾನದಲ್ಲಿ ಸ್ವರ್ಗಸ್ಥರಾದ ಅನೇಕ ಪೂರ್ವ ರಾಜಋಷಿಗಳೂ ಬಂದು ನೆರೆದಿದ್ದರು. ರಾಜಶ್ರೇಷ್ಠನಾದ ಶ್ವೇತನೂ, ವಸುಮನಸ್ಸೂ, ಭದ್ರನೂ, ಪ್ರದರ್ಶನನೂ, ನೃಗ, ನಹುಷ, ಯಯಾತಿ, ಮಾಂಧಾತೃಗಳೂ, ಭರತನೂ, ಅಷ್ಟಕನೂ, ಕುರು, ಶಿಬಿ, ಪುರೂರವಸ್ಸು, ಧುಂಧೋದ್ಭವ, ಕಾರ್ತವೀರ್ಯಾರ್ಜುನ, ಸಗರ, ದಿಲೀಪ, ಕೇರಳ, ಪೂರು, ಶರ್ಯಾತಿ, ಸೋಮಕ, ಹರಿಶ್ಚಂದ್ರ, ರಘು, ದಶರಥ, ಭಗೀರಥ, ಮೊದಲಾದ ಪೂರ್ವರಾಜರೆಲ್ಲರೂ ಸೇರಿದ್ದರು. ಅಲ್ಲದೆ, ಮಹಾರಾಜನಾದ ಪಾಂಡುವೂ ಕೂಡ ಚಾಮರವ್ಯಜನಾದಿ ರಾಜೋಪಚಾರಗಳಿಂದ ಶೋಭಿಸುತ್ತ, ರಾಜಸೂಯಲಕ್ಷಣವಾದ ಛತ್ರದೊಡನೆ ಆ ವಿಮಾನದಲ್ಲಿ ಕುಳಿತಿದ್ದನು. ಇನ್ನೂ ಪುಣ್ಯಶೀಲರೂ, ಯಶಸ್ವಿಗಳೂ ಆದ ಹಲವು ಮಂದಿ ಪೂರ್ವರಾಜರು ಅದರಲ್ಲಿದ್ದರು. ಮತ್ತು ಎಲ್ಲಾ ಅಪ್ಸರೋಗಣಗಳೂ, ಯಕ್ಷ, ರಾಕ್ಷಸ, ಗರುಡ, ಗಂಧರ್ವ, ದಾನವ ಪನ್ನಗಾದಿ ದೇವಜಾತಿಗಳೂ, ತಮ್ಮತಮ್ಮ ಗಣಗಳ ಅಧಿಪತಿಗಳೊಡನೆ ಆ ಯುದ್ಧವನ್ನು ನೋಡಬೇಕೆಂಬ ಆಶೆಯಿಂದ ಬಂದು ನೆರೆದಿದ್ದರು. ಹೀಗೆ ದೇವಲೋಕವಾಸಿಗಳೆಲ್ಲರೂ ವಿಮಾನಾರೂಢರಾಗಿ ಬಂದು, ಒಂದು ಕಡೆ ಏಕಾಕಿಯಾದ ಅರ್ಜುನನಿಗೂ, ಮತ್ತೊಂದು ಕಡೆ ಅನೇಕ ಸೇನಾಸಮೂಹಗಳೊಡನೆ ಬಂದಿರುವ ಕೌರವರಿಗೂ ನಡೆಯುವ ಯುದ್ಧವನ್ನು ಆತುರದಲ್ಲಿ ನಿರೀಕ್ಷಿಸುತ್ತಿದ್ದರು.

ಇದು ಐವತ್ತುಮೂರನೆಯ ಅಧ್ಯಾಯವು.

ಅರ್ಜುನನು ಸೇನಾಮಧ್ಯದಲ್ಲಿ ದುರ್ಯೋಧನನಿಲ್ಲದುದನ್ನು ನೋಡಿ ಅವನನ್ನು ಕಂಡುಹಿಡಿಯುವುದಕ್ಕಾಗಿ ಉತ್ತರನಿಗೆ ರಥವನ್ನು ಬಿಡುವಂತೆ ಹೇಳಿದುದು. ಎರಡು ಬಾಣಗಳ ಮೂಲಕವಾಗಿ ದ್ರೋಣಾದಿಗಳ ಪಾದಕ್ಕೆ ನಮಸ್ಕರಿಸಿ, ಕುಶಲಪ್ರಶ್ನೆಯನ್ನೂ ಮಾಡಿದುದು.

ಓ ಜನಮೇಜಯರಾಜಾ! ಹೀಗೆ ಕೌರವಸೈನ್ಯದ ಮಹಾರಥರು ತಮ್ಮ ಸೇನೆಯನ್ನು ವ್ಯೂಹಗಳಾಗಿ ನಿಲ್ಲಿಸಿರಲು, ಅತ್ತಲಾಗಿ ಅರ್ಜುನನು ದಿಕ್ಕುಗಳೆಲ್ಲ ಮೊಳಗುವಂತಿರುವ ರಥಘೋಷದೊಡನೆ ವೇಗದಿಂದ ಮುಂದೆ ಬರುತಿದ್ದನು. ಇಷ್ಟರಲ್ಲಿಯೇ ಇತ್ತಲಾಗಿ ಕೌರವಸೈನಿಕರಿಗೆ ಅರ್ಜುನನ ಧ್ವಜಾಗ್ರವು ಸ್ಪಷ್ಟವಾಗಿ ಗೋಚರಿಸಿತು. ಅಲ್ಲಿದ್ದ ವಾನರಧ್ವಜವನ್ನು ನೋಡಿದರು. ಅರ್ಜುನನ ರಥಘೋಷವೂ, ಆ ಅರ್ಜುನನು ಆಗಾಗ ಮಿಡಿಯುತ್ತಿದ್ದ ಗಾಂಡೀವ ಧನುಸ್ಸಿನ ಧ್ವನಿಯೂ ಅವರ ಕಿವಿಗೆ ಬಿದ್ದಿತು. ಅರ್ಜುನನು ಮೂರು ಹರಿದಾರಿಯವರೆಗೆ ಮುಂದೆ ಬಂದು, ಕೌರವರ ಸೈನ್ಯದ ಮುಂಭಾಗವನ್ನು ನೋಡಿ ಉತ್ತರನನ್ನು ಕುರಿತು ಹೀಗೆಂದು ಹೇಳುವನು. "ಉತ್ತರಕುಮಾರಾ! ಇದಕ್ಕೆ ಮೊದಲು ಸೈನ್ಯದ ನಡುವೆ ಇದ್ದ ದುರ್ಯೋಧನನು ಈಗ ಅಲ್ಲಿ ಕಾಣಿಸುವುದಿಲ್ಲ. ಅವನ ಕಡೆಯ ಸೈನಿಕರಾದರೋ, ದಕ್ಷಿಣಭಾಗದ ಸೈನ್ಯದಲ್ಲಿ ಒಂದು ಶಾಖೆಯನ್ನು ತೆಗೆದುಕೊಂಡು, ಉತ್ತರದಿಕ್ಕಿನ ಕಡೆಗಾಗಿ ಹೊರಡುತ್ತಿರುವರು. ಆದುದರಿಂದ ಈಗ ನೀನು ಅನೇಕ ಧನುರ್ಧಾರಿಗಳಿಂದ ರಕ್ಷಿತವಾದ ಈ ರಥಸೈನ್ಯವನ್ನು ಬಿಟ್ಟು, ಆ ಗೋವುಗಳಿರುವ ಸ್ಥಳಕ್ಕಿದಿರಾಗಿ ರಥವನ್ನು ನಡೆಸು. ಅಲ್ಲಿ ಒಂದು ವೇಳೆ ಶತ್ರುವನ್ನು ಕಾಣಬಹುದು. ಆ ಹಸುಗಳಿರುವ ಸ್ಥಳವನ್ನು ಸುತ್ತಿಕೊಂಡು, ದಾಟಿ ಅವುಗಳ ಮುಂದೆ ಹೋಗಿ ಅಲ್ಲಿಂದ ಅವುಗಳನ್ನು ಬೇಗನೆ ಇತ್ತಲಾಗಿ ತಿರುಗಿಸಿಬಿಡುವೆವು. ಓ ಪ್ರಭೂ! ಈ ಕೌರವಸೈನಿಕರು ನಮ್ಮ ಗೋವುಗಳನ್ನು ಅತ್ತಕಡೆಗೆ ತಿರುಗಿಸಿಕೊಂಡು ಹೋಗುವುದರೊಳಗಾಗಿಯೇ ನಾನು ಅವುಗಳನ್ನು ಈ ಕಡೆಗೆ ತಿರುಗಿಸುವೆನು" ಎಂದನು. ಓ ಜನಮೇಜಯರಾಜಾ! ಅರ್ಜುನನು ಹೀಗೆಂದು ಉತ್ತರನಿಗೆ ಹೇಳಿ, ಎಡಪಾರ್ಶ್ವದಿಂದ

ಬೇಗನೆ ರಥವನ್ನು ಬಿಡಿಸಿಕೊಂಡು ಹೋದನು. ಆಮೇಲೆ ತನ್ನಿದಿರಾಗಿ ನಿಂತಿದ್ದ ಗುರುಗಳಾದ ಭೀಷ್ಮಾದಿಗಳನ್ನು ಕಂಡು, ಅವರಿಗೆ ನಮಸ್ಕಾರ ಮಾಡಬೇಕೆಂದುದ್ದೇಶಿಸಿ, ಎರಡೆರಡು ಬಾಣಗಳಿಂದ ಅವರೊಬ್ಬೊಬ್ಬರ ಪಾದಗಳಿಗೂ ಪ್ರಣಾಮಮಾಡಿದನು. ಮೊದಲು ಆಚಾರ್ಯನಾದ ದ್ರೋಣನ ಪಾದಗಳೆರಡಕ್ಕೂ ಪ್ರಣಾಮರೂಪವಾಗಿ ಎರಡು ಬಾಣಗಳನ್ನು ಬಿಟ್ಟನು. ಆಮೇಲೆ ಕೃಪಾಚಾರ್ಯನನ್ನೂ, ಅದರಿಂದಾಚೆಗೆ ಭೀಷ್ಮಾಚಾರ್ಯನನ್ನೂ ಎರಡೆರಡು ಬಾಣಗಳಿಂದ ಅಭಿವಾದನ ಮಾಡಿದನು. ಇವೆಲ್ಲವನ್ನೂ ನೋಡಿ ದ್ರೋಣಾಚಾರ್ಯನು, ತನ್ನ ಕಡೆಯವರನ್ನು ಕರೆದು ಹೀಗೆಂದು ಹೇಳುವನು. "ಮಹಾರಥನಾದ ಈ ಅರ್ಜುನನು ಗಾಂಡೀವವನ್ನು ಹಿಡಿದು ಬಂದಿರುವುದನ್ನು ನೋಡಿದಮೇಲೆ, ಯಾವನೊಬ್ಬನಿಗೂ ಅವನಿಗಿದಿರಾಗಿ ನಿಂತು ಯುದ್ಧಮಾಡಲು ಧೈರ್ಯವಿರದು. ಬಂದವನು ತನ್ನ ಜೀವವನ್ನೂ ರಕ್ಷಿಸಿಕೊಳ್ಳಲಾರನು. ಆ ಅರ್ಜುನನೋ ಮಹಾವೀರನು! ಶೂರನು! ಯುದ್ಧದಲ್ಲಿ ಎಂತವರಿಗೂ ದುರ್ಜಯನು. ಅದೋ! ಅವನ ಧ್ವಜಾಗ್ರವು ದೂರದಿಂದಲೇ ಚೆನ್ನಾಗಿ ಕಾಣಿಸುತ್ತಿದೆ. ಮಿಂಚು ಗುಡುಗುಗಳಿಂದ ಕೂಡಿದ ಮೇಘದಂತೆ ಅವನ ಧ್ವಜಾಗ್ರದ ವಾನರನು ಅಟ್ಟಹಾಸದಿಂದ ಕೂಗುತ್ತಿರುವನು. ಅರ್ಜುನನೂ ರಥದಲ್ಲಿ ಕುಳಿತು, ಗಾಂಡೀವವನ್ನು ಧ್ವನಿಮಾಡುತ್ತಿರುವನು. ಅವನ ರಥಾಶ್ವಗಳು ಗಂಭೀರಧ್ವನಿಯಿಂದ ಕೂಗುವುದನ್ನು ಕೇಳಿರಿ. ಆ ಪಾರ್ಥನ ರಥನೇಮಿಧ್ವನಿಯೂಕೂಡ ಮೇಘಧ್ವನಿಯಂತೆ ಅತಿಭಯಂಕರವಾಗಿ ಕೇಳಿಸುತ್ತಿದೆ. ಇಂದ್ರಪುತ್ರನಾದ ಅರ್ಜುನನು ಆ ರಥದಮೇಲೆ ಕುಳಿತು ಭೂಮಿಯನ್ನೇ ಭೇದಿಸುವಂತೆ ಬರುತ್ತಿರುವುದನ್ನು ನೋಡಿರಿ. ನಮ್ಮನ್ನು ಕಂಡು, ಬಾಣಗಳಿಂದಲೇ ನಮ್ಮನ್ನು ಸತ್ಕರಿಸುತ್ತಿರುವನು. ಶ್ರೀಮಂತನೂ, ಧೀರನೂ, ಆದ ಆ ಪಾಂಡವನು ಬಿಟ್ಟ ಎರಡು ಬಾಣಗಳು, ಇದೋ! ಈ ನನ್ನ ಎರಡುಕಾಲುಗಳ ಮೇಲೆ ಬಂದು ಬಿದ್ದಿವೆ. ಬೇರೆ ಎರಡು ಬಾಣಗಳು (ನನ್ನ ಮೇಲೆ ಪುಷ್ಪಾರ್ಚನೆಯನ್ನು ಮಾಡಿದಂತೆ) ನನ್ನ ರಥಾಗ್ರಕ್ಕೆ ಬಂದು ನಾಟಿಕೊಂಡಿವೆ. ಬೇರೆ ಎರಡು ಬಾಣಗಳು ನನ್ನನ್ನು ಕುಶಲಪ್ರಶ್ನೆ ಮಾಡುವಂತೆ, ನನ್ನ ಎರಡು ಕಿವಿಗಳನ್ನು ಮುಟ್ಟಿಕೊಂಡು ಹೋದುವು. ಧರ್ಮ

ಜ್ಞನಾದ ಈ ಪಾರ್ಥನು ಬಹುಕಾಲದಮೇಲೆ ನಮ್ಮ ದೃಷ್ಟಿಗೆ ಗೋಚರಿಸಿದನು. ಇವನು ಈಗ ಅಧಿಕಕಾಂತಿಯಿಂದ ಜ್ವಲಿಸುವಂತಿರುವನು. ತನ್ನ ವನವಾಸವನ್ನು ಮುಗಿಸಿಕೊಂಡು ಅನೇಕ ದುಷ್ಕರ ಕಾರ್ಯವನ್ನು ಮಾಡಿ ಈಗಲೇ ಬಂದ ಈತನು ಬಾಣಪ್ರಯೋಗಮೂಲಕವಾಗಿ ನನ್ನನ್ನು ನಮಸ್ಕರಿಸುತ್ತಿರುವನು. ಇದಕ್ಕೆ ಮೊದಲು ಅನೇಕ ಕಷ್ಟಗಳನ್ನನುಭವಿಸಿ, ಕೋಪಾವೇಶದಿಂದ ಬಂದಿರುವ ಈತನು ಈ ನಮ್ಮ ಭಾರತಸೈನ್ಯವನ್ನೆಲ್ಲ ತಾನೊಬ್ಬನೇ ನಾಶಮಾಡದೆ ಬಿಡಲಾರನು. ಇದು ನಿಶ್ಚಯವು. ಹನ್ನೆರಡು ವರ್ಷಗಳು ವನವಾಸದಲ್ಲಿದ್ದು, ಹದಿಮೂರನೆಯ ವರ್ಷವನ್ನು ಯಾರಿಗೂ ತಿಳಿಯದಂತೆ ಅಜ್ಞಾತವಾಸದಲ್ಲಿ ಕಳೆದು ಬಂದ ಆ ಕಿರೀಟಿಯು, ಅಂಧಕಾರವನ್ನು ನೀಗಿಸಿ, ಆಗಲೇ ಉದಿಸಿಬಂದ ಸೂರ್ಯನಂತೆ ರಥದಲ್ಲಿ ಕಂಗೊಳಿಸುತ್ತಿರುವನು. ರಥದಮೇಲೆ ಕುಳಿತು, ಬಾಣಗಳನ್ನೂ, ಬತ್ತಳಿಕೆಯನ್ನೂ, ಶಂಖವನ್ನೂ, ಖಡ್ಗವನ್ನೂ, ಧನುಸ್ಸನ್ನೂ ಹಿಡಿದು, ಹಾರ ಕಿರೀಟ ಕವಚಾದಿಗಳಿಂದಲಂಕೃತನಾಗಿರುವ ಈ ಅರ್ಜುನನು, ಯಜ್ಞದಲ್ಲಿ ಘೃತ ಸಿಕ್ತವಾದ ಅಗ್ನಿಯಂತೆ ಬೆಳಗುತ್ತಿರುವುದನ್ನು ನೋಡಿರಿ'' ಎಂದನು.

ಇದು ಐವತ್ತುನಾಲ್ಕನೆಯ ಅಧ್ಯಾಯವು.

ಅರ್ಜುನನು ಗೋವುಗಳನ್ನು ದುರ್ಯೋಧನನು ಅಟ್ಟಿಕೊಂಡು ಹೋಗಿರಬೇಕೆಂಬ ಸಂಶಯದಿಂದ ಹಸುಗಳಿದ್ದ ಕಡೆಗೆ ರಥವನ್ನು ಬಿಟ್ಟುದು. ಭೀಷ್ಮನು ಅರ್ಜುನನನ್ನು ಬೆನ್ನಟ್ಟಿದುದು. ಅರ್ಜುನನು ಸೈನ್ಯವನ್ನು ಹೊಡೆದಟ್ಟಿ ಗೋವುಗಳನ್ನು ಹಿಂತಿರುಗಿಸಿದುದು.

ಓ ಜನಮೇಜಯರಾಜಾ! ಕೇಳು! ಅರ್ಜುನನು ವೇಗದಿಂದ ಮುಂದೆಬಿದ್ದು ಬರುವಾಗ, ತಪಿಸುತ್ತಿರುವ ಸೂರ್ಯನನ್ನು ಹೇಗೋಹಾಗೆ ಶತ್ರುಗಳಿಗೆ ಅವನ ತೇಜಸ್ಸು ನೋಡಲಸಾಧ್ಯವಾಯಿತು. ಆಗ ಅರ್ಜುನನು ಮುಂದೆ ಕಾಣಿಸಿದ ರಥಸೈನ್ಯವನ್ನು ನೋಡಿ, ತನ್ನ ಸಾರಥಿಯಾದ ಉತ್ತರನನ್ನು ಕುರಿತು, '' ಉತ್ತರಾ! ರಥವನ್ನು ಮುಂದೆ ಬಿಡು. ನಮ್ಮ

ಬಾಣವು ಶತ್ರುಸೇನೆಗೆ ಮುಟ್ಟುವಷ್ಟು ದೂರದಲ್ಲಿ ಕುದುರೆಗಳನ್ನು ನಿಲ್ಲಿಸು. ಆ ಸೇನಾವ್ಯೂಹದಲ್ಲಿ ನನ್ನ ಶತ್ರುವಾದ ಸುಯೋಧನನು ಎಲ್ಲಿರುವನೋ ನೋಡುವೆನು. ಅವನ ಧ್ವಜದ ಗುರುತನ್ನು ನಾನು ಚೆನ್ನಾಗಿ ಬಲ್ಲೆನು. ಅದು ವೈಡೂರ್ಯಾದಿ ರತ್ನಖಚಿತವಾಗಿ, ಎತ್ತರವಾಗಿರುವುದರಿಂದ, ಅದನ್ನು ದೂರದಿಂದಲೇ ಕಾಣಬಹುದು. ಗರ್ವಿಷ್ಠನೂ ದುರ್ಬುದ್ಧಿಯುಳ್ಳವನೂ ಆದ ಆ ನನ್ನ ವೈರಿಯು ಈಗ ನನ್ನ ಕಣ್ಣಿಗೆ ಬಿದ್ದರೆ ಸಾಕು. ಈಶ್ವರನೇ ಅವನ ಸಹಾಯಕ್ಕೆ ಬಂದರೂ ಅವನನ್ನೂ ಯಮನಬಳಿಗೆ ಕಳುಹಿಸಿಬಿಡುವೆನು. ಈಗ ನಾವು ಬೇರೆ ಯಾರನ್ನೂ ಗಮನಿಸದೆ, ಮದೋನ್ಮತ್ತನಾದ ಆ ದುರ್ಯೋಧನನನ್ನೇ ಕಂಡುಹಿಡಿಯಬೇಕು. ಸಿಂಹವು ಕ್ಷುದ್ರಮೃಗವನ್ನು ನೋಡಿದಾಗ ಅದರ ತಲೆಯನ್ನು ಮೆಟ್ಟಿಹಿಡಿಯುವಂತೆ ಅವನನ್ನು ಹಿಡಿಯುವೆನು. ಗಾಂಡೀವ ಪ್ರಯುಕ್ತಗಳಾದ ಬಾಣಗಳಿಂದ ಅವನನ್ನೇ ಮೊದಲು ಕೊಲ್ಲುವೆನು. ಅವನನ್ನು ಕೊಂದರೆ, ಇತರರೆಲ್ಲರೂ ಪರಾಜಿತರಾದಂತೆಯೇ! ಆ ಶಕುನಿಯೊಡನೆ ಸೇರಿಸಿ ಆ ದುರ್ಯೋಧನನನ್ನು ಈಗಲೇ ನಾನು ನನ್ನ ಬಾಣಗಳಿಂದ ಅಡಗಿಸಿಬಿಡುವೆನು. ಅಡಬಾರದ ಮಾತುಗಳನ್ನಾಡುತ್ತ, ಕೌರವ ವಂಶಕ್ಕೇ ಕಳಂಕಪ್ರಾಯನಾದ ಆ ದುರ್ಯೋಧನನನ್ನು ಮೊದಲು ಅಡಗಿಸಬೇಕು. ಮುಂದಿರುವ ಆ ಸೈನ್ಯದಲ್ಲಿ ಅವನಿರುವ ಹಾಗೆ ತೋರಲಿಲ್ಲ. ಈಗ ಆ ಸೈನ್ಯವು ನಮಗೆ ಬೇಕಾದ ವಸ್ತುವಿಲ್ಲದೆ ಶೂನ್ಯಪ್ರಾಯವಾಗಿ ಕಾಣುತ್ತಿರುವುದು. ಈಗ ನಾವು ಹೆದರದೆ ಆ ದುರ್ಯೋಧನನನ್ನೇ ಬೆನ್ನಟ್ಟಿ ಹಿಡಿಯಬೇಕು. ಮುಂದೆ ನೋಡಿದರೆ ಸೇನಾಮಧ್ಯದಲ್ಲಿ ಆಚಾರ್ಯನಿರುವನು. ಅವನ ಹಿಂದೆ ಅಶ್ವತ್ಥಾಮನಿರುವನು. ಕೃಪ ಕರ್ಣರಿಬ್ಬರೂ ಮುಂದೆ ನಿಂತಿರುವರು. ಭೂರಿಶ್ರವಸ್ಸು, ಸೋಮದತ್ತ, ಬಾಹ್ಲಿಕ, ಜಯದ್ರಥರೆಂಬೀ ನಾಲ್ವರೂ, ಸಾಲ್ವರಾಜನಾದ ದ್ಯುಮತ್ಸೇನನೂ, ವೃಷಸೇನನೂ, ಶಕುನಿಯೂ, ಕಳಿಂಗದೇಶದ ದಶಾರ್ಣನೂ ಎಡಪಾರ್ಶ್ವದಲ್ಲಿರುವರು. ಕುರುಶ್ರೇಷ್ಠನಾಗಿ ನಮ್ಮೆಲ್ಲರಿಗೂ ಪಿತಾಮಹನೆನಿಸಿದ ಭೀಷ್ಮನು, ದೃಢವಾದ ಯುದ್ಧಕವಚವನ್ನು ತೊಟ್ಟು, ಅರ್ಧಸೈನ್ಯದೊಡನೆ ಹಿಂಭಾಗದಲ್ಲಿರುವನು. ದುರ್ಯೋಧನನುಮಾತ್ರ ಅಲ್ಲಿ ಕಾಣಿಸುವುದಿಲ್ಲ. ಅವನೆಲ್ಲಿರಬಹುದು? ಉತ್ತರಾ! ಈ ರಥಸೈನ್ಯವು ಹಾಗಿ

ರಲಿ! ಆ ದುರ್ಯೋಧನನೆಲ್ಲಿರುವನೋ ಹುಡುಕುವೆವು ನಡೆ.! ರಥವನ್ನು ಮುಂದೆ ಬಿಡು! ಮೊದಲು ನಾವು ಅವನನ್ನು ನಿಗ್ರಹಿಸಬೇಕು. ಇಲ್ಲದಿದ್ದರೆ ಅವನು ಗೋವುಗಳನ್ನು ಅಟ್ಟಿಕೊಂಡು ಹೊರಟುಹೋಗುವನು. ಆದುದರಿಂದ ನೀನು ಈಗಲೇ ಆ ಗೋವುಗಳಿರುವ ಕಡೆಗೆ ರಥವನ್ನು ಬಿಡು. ದುರ್ಯೋಧನನು ಅಲ್ಲಿಯೇ ಇರಬೇಕು" ಎಂದನು. ಅರ್ಜುನನು ಹೀಗೆಂದು ಹೇಳಿ ಉತ್ತರನನ್ನು ತ್ವರೆಪಡಿಸಿ, ಧನುಸ್ಸನ್ನು ಕೈಯಲ್ಲಿ ಹಿಡಿದು ಅತಿವೇಗದಿಂದ ರಥವನ್ನು ಮುಂದೆ ಬಿಡಿಸಿದನು. ಇತ್ತಲಾಗಿ ಕೌರವ ಸೈನ್ಯದಲ್ಲಿ ಭೀಷ್ಮನು ಅರ್ಜುನನ ಅಭಿಪ್ರಾಯವನ್ನು ತಿಳಿದುಕೊಂಡು, ತನ್ನ ಕಡೆಯವರನ್ನು ನೋಡಿ "ಆಹಾ! ನಾವು ಇವನನ್ನು ನೋಡಿ ಬಹುಕಾಲವಾಯಿತು. ಧರ್ಮಜ್ಞನಾದ ಈತನು ಈಗ ಅಪೂರ್ವಕಾಂತಿಯಿಂದ ಜ್ವಲಿಸುತ್ತಿರುವನು. ಇವನು ದುರ್ಯೋಧನನ ಮೇಲೆ ಬಹುಕಾಲದಿಂದಿದ್ದ ವೈರವನ್ನು ತೀರಿಸಿಕೊಳ್ಳುವುದಕ್ಕಾಗಿ ಅವನನ್ನೇ ಮೊದಲು ಹುಡುಕಿಕೊಂಡು ಹೋಗುವಂತಿದೆ. ಸಿಂಹವು ಮೃಗಕ್ಕಾಗಿ ಹೊಂಚುಹಾಕುವಂತೆ, ನಮ್ಮ ರಾಜನನ್ನು ಬಡಿಯುವುದಕ್ಕಾಗಿಯೇ ಆತನು ಆತುರಪಡುತ್ತಿರುವನು. ಆ ದುರ್ಯೋಧನನನ್ನು ಬಿಟ್ಟು ಇತರರನ್ನು ದಿರಿಸುವುದು ಅವನಿಗೆ ಇಷ್ಟವಿಲ್ಲವೆಂದೂ ತೋರುತ್ತಿದೆ. ಆದುದರಿಂದ ಈಗ ನಾವೂ ಅವನನ್ನು ಬೆನ್ನಟ್ಟಿ ಹೋಗಬೇಕು. ಕೋಪಗೊಂಡ ಇವನೊಡನೆ ಆ ದುರ್ಯೋಧನನೊಬ್ಬನೇ ನಿಂತು ಯುದ್ಧಮಾಡಲಾರನು. ಅಷ್ಟೇಕೆ? ಕೋಪಗೊಂಡ ಅರ್ಜುನನ ಮುಂದೆ ಮಹಾದೇವನೆನಿಸಿಕೊಂಡ ಈಶ್ವರನೊಬ್ಬನು, ದೇವಕೀಪುತ್ರನಾದ ಕೃಷ್ಣನೊಬ್ಬನು, ತನ್ನ ಪುತ್ರಸಹಿತನಾದ ದ್ರೋಣಾಚಾರ್ಯನೊಬ್ಬನು, ಈ ಮೂವರನ್ನು ಬಿಟ್ಟರೆ ಜೇರೆ ಯಾವನೂ ಏಕಾಕಿಯಾಗಿ ಯುದ್ಧಕ್ಕೆ ನಿಲ್ಲಲಾರನು. ಈಗ ದುರ್ಯೋಧನನು ಈ ಅರ್ಜುನನ ಕೈಗೆ ಸಿಕ್ಕಿ ಪ್ರಾಣವನ್ನು ನೀಗಿದರೆ, ಆಗ ನಮಗೆ ಈ ಹಸುಗಳಿಂದೇನು? ವಿಶೇಷಧನದಿಂದ ತಾನೇ ನಮಗೇನಾಗುವುದು?" ಎಂದು ಹೇಳಿ, ಒಡನೆಯೇ ದುರ್ಯೋಧನನನ್ನು ಕಾಪಾಡುವುದಕ್ಕಾಗಿ ತನ್ನ ಸೇನೆಯೊಡನೆ ಅರ್ಜುನನನ್ನು ಬೆನ್ನಟ್ಟಿ ಹೋದನು. ಇಷ್ಟರಲ್ಲಿಯೇ ಅತ್ತಲಾಗಿ ಅರ್ಜುನನು ಸ್ವಲ್ಪ ಮುಂದೆ ಬಂದಮೇಲೆ ಸಾರಥಿಯನ್ನು ಕುರಿತು, "ಓ ರಾಜಕುಮಾರಾ!

ರಥವೇಗವನ್ನು ತಗ್ಗಿಸು! ಇದೋ! ನಮ್ಮ ಗೋವುಗಳು ಮುಂದೆ ಕಾಣಿಸುತ್ತಿರುವುವು. ಅದೋ! ಆ ಮಂದೆಯನ್ನು ದಾಟಿಕೊಂಡು ಕೌರವ ಸೈನ್ಯದ ಉತ್ತರಭಾಗದಿಂದ ರಥವನ್ನು ಬಿಡು. ಈಗ ನಾನು ಆ ಹಸುಗಳ ಮಂದೆಯನ್ನು ತಡೆದು ಆ ದುರ್ಯೋಧನನೊಡನೆ ಯುದ್ಧಮಾಡುವೆನು. ಅವರು ಗೊಲ್ಲರನ್ನೂ, ಗೋವುಗಳನ್ನೂ ಆತುರದಿಂದ ಓಡಿಸಿಕೊಂಡು ಹೋಗುತ್ತಿರುವರು. ನಾವು ಬೇಗನೆ ಮುಂದೆಹೋಗಿ ಅವೆಲ್ಲವನ್ನೂ ಬಿಡಿಸಿ ತರಬೇಕು. ಉತ್ತರಾ! ಈ ಸೇನೆಯು ಹಾಗಿರಲಿ. ಪೂರ್ವಾಭಿಮುಖವಾಗಿ ಹೊರಡು. ಅತಿರಥರಾದ ಆ ಕೌರವರೆಲ್ಲರೂ, ಇಂದ್ರನ ಪರಾಕ್ರಮವನ್ನು ದಾನವರು ಹೇಗೋಹಾಗೆ ಈ ಯುದ್ಧದಲ್ಲಿ ನನ್ನ ಪರಾಕ್ರಮವನ್ನು ನೋಡಲಿ'' ಎಂದನು.

ಆಮೇಲೆ ಅರ್ಜುನನು ಶತ್ರುಗಳಿಗೆ ತಿಳಿಯುವಂತೆ ಗಟ್ಟಿಯಾಗಿ ತನ್ನ ಹೆಸರನ್ನು ಹೇಳಿಕೊಳ್ಳುತ್ತಾ ಬಾಣಗಳನ್ನು ಬಿಡಲಾರಂಭಿಸಿದನು. ಮಿಡಿತೆಗಳಿಂದ ಆಕಾಶವೂ, ವರ್ಷಧಾರೆಯಿಂದ ಪರ್ವತವೂ ಆವರಿಸಲ್ಪಡುವಂತೆ ಅರ್ಜುನನ ಬಾಣಗಳಿಂದ ಅಂತರಿಕ್ಷವೆಲ್ಲವೂ ಎಡೆಬಿಡದೆ ಮುಚ್ಚಿತು. ಈ ಬಾಣಗಳಿಂದ ಕೌರವಸೈನಿಕರಿಗೆ ಗೋವುಗಳಿದ್ದ ಕಡೆಯೇ ಕಾಣದಂತಾಯಿತು. ಭೂಮಿಯಾಗಲಿ, ಅಂತರಿಕ್ಷವಾಗಲಿ, ದಿಕ್ಕುಗಳಾಗಲಿ, ಯಾವುದೂ ತಿಳಿಯದಂತಾಯಿತು. ಈ ಸಮಯದಲ್ಲಿ ಅರ್ಜುನನು ಮತ್ತಷ್ಟು ಉತ್ಸಾಹಗೊಂಡು, ತನ್ನ ವೀರ್ಯಾತಿಶಯವನ್ನು ತೋರಿಸುವಂತೆ, ಮೇಲೆ ಮೇಲೆ ಕೌರವಸೈನ್ಯವನ್ನು ಹೊಡೆಯುತ್ತಿದ್ದನು. ಕೌರವಸೈನ್ಯಕ್ಕೆ ಮುಂದು ಬಿದ್ದು ಹೋಗುವುದಕ್ಕಾಗಲಿ, ಹಿಂತಿರುಗಿ ಓಡಿಹೋಗುವುದಕ್ಕಾಗಲಿ ಬುದ್ಧಿಯೇ ತೋರದಂತಾಯಿತು. ಅರ್ಜುನನ ಹಸ್ತಲಾಘವವನ್ನು ಅವರೂ ಆಶ್ಚರ್ಯದಿಂದ ಕೊಂಡಾಡುತ್ತಿದ್ದರು. ಇಷ್ಟರಲ್ಲಿಯೇ ಅರ್ಜುನನು ಕುರುಸೈನ್ಯಕ್ಕೆ ಭಯವನ್ನು ಹುಟ್ಟಿಸುವಂತೆ ತನ್ನ ಶಂಖವನ್ನೂದಿದನು. ಬಿಲ್ಲಿನ ನಾಣನ್ನು ತಟ್ಟಿ, ತಲಘೋಷವನ್ನೂ ಮಾಡಿದನು. ಈ ಶಬ್ದವನ್ನು ಕೇಳಿ ಸಮಸ್ತಭೂತಗಳೂ ತಬ್ಬಿಬ್ಬಾದುವು. ಅರ್ಜುನನ ಶಂಖಧ್ವನಿ, ಧನುಷ್ಟಂಕಾರ ಧ್ವನಿ, ಅವನ ಧ್ವಜದಲ್ಲಿದ್ದ ದಿವ್ಯಭೂತಗಳ ಧ್ವನಿ, ಇವು

ಗಳೊಡನೆ ಆಕಾಶದಲ್ಲಿ ದೇವತೆಗಳ, ಭೂಮಿಯಲ್ಲಿ ಮನುಷ್ಯರ ಕೋಲಾ ಹಲಗಳೆಲ್ಲವೂ ಒಂದಾಗಿ ಸೇರಿ ಪ್ರಬಲಧ್ವನಿಯಾಯಿತು. ಈ ಧ್ವನಿಯನ್ನು ಕೇಳಿ ಗೋವುಗಳೆಲ್ಲವೂ ಭಯದಿಂದ ಬಾಲವನ್ನೆತ್ತಿಕೊಂಡು ಕೂಗುತ್ತ ದಕ್ಷಿಣಾಭಿಮುಖವಾಗಿ ಓಡಿಬಿಟ್ಟುವು. ಆಗ ಅರ್ಜುನನು ಅಲ್ಲಿದ್ದ ಗೊಲ್ಲರನ್ನು ಕರೆದು, ಗೋವುಗಳನ್ನು ಆಟ್ಟಿಕೊಂಡು ಹೋಗುವಂತೆ ಪ್ರೇರಿಸಿದನು. ಮತ್ತು ಉತ್ತರನನ್ನು ನೋಡಿ, "ಓ ಸಾರಥೀ! ಬೇಗನೆ ರಥವನ್ನು ಆ ಹಸುಗಳ ಮುಂಭಾಗಕ್ಕೆ ಬಿಡು. ಗೋವುಗಳನ್ನೆಲ್ಲ ಹಿಂತಿರುಗಿಸು. ಆ ಕೌರವ ಸೈನಿಕರು ವೇಗದಿಂದ ಬರುವಷ್ಟರಲ್ಲಿ ಈ ಕೆಲಸವನ್ನು ಮಾಡಬೇಕು. ಆ ಹಸುಗಳಿಗೂ, ಸೈನ್ಯಕ್ಕೂ ಉತ್ತರಪಾರ್ಶ್ವದಿಂದ ಬೇಗನೆ ರಥವನ್ನು ಬಿಡು. ಈಗ ಅವರು ನನ್ನ ವೀರ್ಯವನ್ನು ನೋಡಲಿ" ಎಂದು ಉತ್ತರನನ್ನು ಪ್ರೋತ್ಸಾಹಿಸಿದನು. ಇತ್ತಲಾಗಿ ಕೌರವರಾದರೋ ಅರ್ಜುನನು ತಾನಾಗಿ ಮುಂದೆಬಿದ್ದು ಬರುವುದು ತಮಗೆ ಅನುಕೂಲವೆಂದೇ ಭಾವಿಸಿ, ತಾವೂ ವೇಗದಿಂದ ಮುಂದೆ ಹೋದರು. ಮಹತ್ತಾದ ಗಜಾಶ್ವ ಸೈನ್ಯಗಳನ್ನೂ, ಬಿಲ್ಲು, ಕತ್ತಿ, ಬಾಣ ಮುಂತಾದ ಆಯುಧಗಳನ್ನು ಹಿಡಿದ ಕಾಲಾಳುಗಳನ್ನೂ ಸೇರಿಸಿಕೊಂಡು ಬರುತ್ತಿದ್ದ ಆ ಕೌರವಸೈನ್ಯವು, ಆಕಾಶದಲ್ಲಿ ಮಿಂಚಿನೊಡಗೂಡಿದ ಮಹಾಮೇಘಪರಂಪರೆಯಂತೆ ಶೋಭಿಸುತ್ತಿತ್ತು. ಹೀಗೆ ಬರುತ್ತಿರುವ ಆ ಕೌರವಸೈನ್ಯವನ್ನು ನೋಡಿದೊಡನೆಯೇ ಪಾರ್ಥನು ತನ್ನ ಬಾಣಗಳಿಂದ ಅದನ್ನು ನಿವಾರಿಸತೊಡಗಿದನು. ಕ್ರಮಕ್ರಮವಾಗಿ ಅರ್ಜುನನು ಆ ಶತ್ರುಸೇನೆಯನ್ನೋಡಿಸಿ, ಗೋವುಗಳನ್ನೆಲ್ಲಾ ತನ್ನ ಕಡೆಗೆ ತಿರುಗಿಸಿಕೊಂಡು, ದುರ್ಯೋಧನನಿಗಿದಿರಾಗಿ ಹೋಗುತ್ತಿರಲು ಕೌರವವೀರರೆಲ್ಲರೂ ತಿರುಗಿ ಅವನನ್ನಿದಿರಿಸುವುದಕ್ಕಾಗಿ ಆತುರದಿಂದ ಬಂದರು. ಇಷ್ಟರಲ್ಲಿ ಗೋವುಗಳು ವೇಗದಿಂದ ಮತ್ಸ್ಯದೇಶದಕಡೆಗೆ ಓಡಿಬಿಟ್ಟುವು. ಅಲ್ಲಿದ್ದ ಗೋಪಾಲಕರೆಲ್ಲರೂ ತಮಗೆ ಪ್ರಿಯವನ್ನುಂಟುಮಾಡಿದ ಆ ಅರ್ಜುನನನ್ನು ನೋಡಿ ಸಂತೋಷದಿಂದುಕ್ಕುತ್ತಾ ಅಲ್ಲಲ್ಲಿದ್ದ ಗೋವುಗಳನ್ನು ಆಟ್ಟಿಕೊಂಡು ನಗರಕ್ಕೆ ಹೋಗಿ ಸೇರಿದರು.

ಇದು ಐವತ್ತೈದನೆಯ ಅಧ್ಯಾಯವು.

ಅರ್ಜುನನು ಉತ್ತರನಿಗೆ ದ್ರೋಣ ಕರ್ಣಾದಿಗಳ ಧ್ವಜದಲ್ಲಿರುವ ಅಸಾಧಾರಣ ಚಿಹ್ನಗಳನ್ನು ತೋರಿಸಿ, ಅವರವರ ಹೆಸರನ್ನು ತಿಳಿಸಿದುದು.

ಓ ಜನಮೇಜಯರಾಜಾ! ಆಮೇಲೆ ಇತ್ತಲಾಗಿ ಕೌರವಸೈನ್ಯದಲ್ಲಿ ಘೋರರೂಪಿಗಳೂ, ಮಹಾಧನುರ್ಧಾರಿಗಳೂ ಆದ ಮೂರುಸಾವಿರ ಮಂದಿ ರಥಿಕರು ಸುತ್ತಲೂ ಅರ್ಜುನನನ್ನು ಆವರಿಸಿಕೊಂಡರು. ಕರ್ಣನು ಸಾವಿರ ರಥಗಳೊಡನೆ ಅರ್ಜುನನನ್ನು ಆವರಿಸಿದನು. ಭೀಷ್ಮನು ಸಹಸ್ರ ರಥಗಳೊಡನೆ ಬಂದನು. ದುರ್ಯೋಧನನು ತನ್ನ ತಮ್ಮಂದಿರೆಲ್ಲರನ್ನೂ ಸೇರಿಸಿಕೊಂಡು, ಸಾವಿರ ರಥಗಳೊಡನೆ ಅರ್ಜುನನ ಹಿಂಭಾಗದಿಂದ ಬಂದನು. ಅನೇಕ ಕಾಲಾಳುಗಳೂ ಕೂಡ, ಕುದುರೆಯ ಸೈನ್ಯಗಳೊಡನೆ ಅಲ್ಲಲ್ಲಿ ಅವಕಾಶವಿದ್ದ ಸ್ಥಳಗಳನ್ನೆಲ್ಲಾ ಆವರಿಸಿ ನಿಂತರು. ತೋಮರಗಳಿಂದಲೂ, ಅಂಕುಶಗಳಿಂದಲೂ ತಿವಿದು ಮುಂದೆ ಬಿಡಲ್ಪಟ್ಟ ಭಯಂಕರ ರೂಪವುಳ್ಳ ಗಜಸೈನ್ಯಗಳೂ ಮುಂದೆ ನುಗ್ಗಿ ಬಂದುವು. ಹೀಗೆ ದೊಡ್ಡ ಸೇನಾಸಮೂಹವು ಸುತ್ತಲೂ ಆವರಿಸಿಕೊಳ್ಳುತ್ತಿರುವುದನ್ನು ನೋಡಿ ಅರ್ಜುನನು, ಸಾರಥಿಯಾದ ಉತ್ತರನನ್ನು ಕುರಿತು ಹೀಗೆಂದು ಹೇಳುವನು. "ಓ ರಾಜಕುಮಾರಾ! ಅದೋ! ಮುಂದೆ ನೋಡು! ಧ್ವಜದಲ್ಲಿ ಸುವರ್ಣಮಯವಾದ ವೇದಿಕೆಯ ಗುರುತು ಕಾಣುವುದಲ್ಲವೆ! ಕೆಂಪುಕುದುರೆಗಳನ್ನು ಹೂಡಿದ ಆ ರಥದಮೇಲೆ ಕುಳಿತಿರುವವನೇ ಆಚಾರ್ಯನಾದ ದ್ರೋಣನು. ಅವನು ಮಹಾಶೂರನು. ಅತ್ಯಂತ ಚತುರನು. ಬಹಳ ಧೀಮಂತನು. ಆತನು ಬ್ರಹ್ಮಜ್ಞಾನಿಯು ಮಾತ್ರವಲ್ಲದೆ, ಯುದ್ಧದಲ್ಲಿಯೂ ಎಣೆಯಿಲ್ಲದ ಸಾಮರ್ಥ್ಯವುಳ್ಳವನು. ಬಹುದೂರಕ್ಕೆ ಬಾಣವನ್ನು ಪ್ರಯೋಗಿಸಬಲ್ಲನು. ಮಹಾರಥನು. ಬಹಳ ಶಾಂತಸ್ವಭಾವವುಳ್ಳವನು. ಉತ್ತರಾ! ಆಚಾರ್ಯನಾದ ಅವನನ್ನು ಪ್ರದಕ್ಷಿಣಮಾಡು. (ಬ್ರಹ್ಮ ಕ್ಷತ್ರಿಯಗಳೆಂಬ) ಸನಾತನ ಧರ್ಮಗಳೆರಡೂ ಪರಸ್ಪರವಿರೋಧವಿಲ್ಲದಂತೆ ಹೊಂದಿಕೊಂಡಿರುವುದು ಆ ಆಚಾರ್ಯನೊಬ್ಬನಲ್ಲಿಯೇ! ಆ ದ್ರೋಣಾಚಾರ್ಯನು ನನಗೆ ಯುದ್ಧೋತ್ಸಾಹ ಹುಟ್ಟುವಂತೆ ನನ್ನ ದೇಹದಮೇಲೆ ಬಾಣಗಳನ್ನು ಪ್ರ

ಯೋಗಿಸಿದಾಗ ಮಾತ್ರವೇ ಅವರಮೇಲೆ ನಾನು ಕೈಯೆತ್ತುವೆನು. ಹಾಗಿಲ್ಲದಪಕ್ಷದಲ್ಲಿ ಅವರನ್ನಿದಿರಿಸುವುದರಲ್ಲಿ ನನ್ನ ಮನಸ್ಸು ಮುಂದಾಗುವುದಿಲ್ಲ. ಓ ಸಾರಥೀ! ಭರತವಂಶದ ಆಚಾರ್ಯರಲ್ಲಿ ಮುಖ್ಯನೆನಿಸಿದ ಮಹಾತ್ಮನಾದ ಆ ಬಾಹ್ಮಣೋತ್ತಮನೊಡನೆ ನಾನು ಯುದ್ಧಮಾಡುವಾಗ, ರಥವನ್ನು ನೀನು ಮೆಲ್ಲಗೆ ನಡೆಸಬೇಕು. ಅದೋ! ಅಲ್ಲಿ ಮತ್ತೊಂದು ಧ್ವಜಾಗ್ರದಲ್ಲಿ ಎಲ್ಲಾ ದಿಕ್ಕುಗಳಿಗೂ ಕಾಣುವಂತೆ ಒಂದು ಸಿಂಹದ ಬಾಲವು ದೊಡ್ಡದಾಗಿ ಕಾಣುತ್ತಿರುವುದು ನೋಡು! ಆ ರಥದ ಮೇಲಿರುವವನೇ ಆಚಾರ್ಯಪುತ್ರನಾದ ಅಶ್ವತ್ಥಾಮನು. ಬಾಲಸೂರ್ಯನಂತೆ ಕಾಂತಿಯುಕ್ತವಾದ ಆ ಧ್ವಜದ ಶಿಖರವನ್ನು ನೋಡು. ಆ ಅಶ್ವತ್ಥಾಮನು ಎಂತಹ ಸೈನ್ಯಗಳಿಗೂ ದುರ್ಜಯನು. ಇಂದ್ರನೊಡಗೂಡಿದ ದೇವತೆಗಳಾದರೂ ಅವನನ್ನು ಜಯಿಸಲಾರರು. ಅವನೊಡನೆ ಯುದ್ಧವು ಸಂಭವಿಸಿದಾಗಲೂ ಮೆಲ್ಲಗೆ ರಥವನ್ನು ನಡೆಸು. ಅದೋ! ಅಲ್ಲಿ ಸುವರ್ಣಮಯವಾದ ಎತ್ತಿನ ಗುರುತುಳ್ಳ ಮತ್ತೊಂದು ಧ್ವಜವು ಕಾಣಿಸುವುದು ನೋಡು. ಅವನೇ ಆಚಾರ್ಯರಲ್ಲಿ ಉತ್ತಮನೆನಿಸಿದ ಮತ್ತು ಮಹಾರಥನಾದ ಕೃಪಾಚಾರ್ಯನು. ಆತನೂ ವೀರ್ಯದಲ್ಲಿ ದ್ರೋಣನಿಗೆ ಸಾಟಿಯಾದವನು. ಅವನು ನನ್ನ ತಂದೆಗೆ ಪರಮಮಿತ್ರನು. ಅವನೊಡನೆ ಯುದ್ಧಮಾಡುವಾಗಲೂ ನೀನು ರಥವನ್ನು ಮೆಲ್ಲಗೆ ನಡೆಸಬೇಕು. ಅದೋ! ಅತ್ತಲಾಗಿ ದೂರದಿಂದಲೇ ಮಿಂಚಿನಂತೆ ಹೊಳೆಯುತ್ತಿರುವ ಧ್ವಜವು ಕಾಣುವುದು ನೋಡು! ಸುವರ್ಣಮಯವಾದ ಶಂಖಗಳಿಂದಲೂ, ಆನೆಗಳನ್ನು ಬಿಗಿಯುವ ಕಕ್ಷ್ಯೆಗಳಿಂದಲೂ ಅಲಂಕೃತವಾದ ಆ ಧ್ವಜವು ಸೂರ್ಯಪುತ್ರನಾದ ಕರ್ಣನದು. ಧನುರ್ಧಾರಿಗಳಿಗೆಲ್ಲ ಇವನು ಆದರ್ಶಭೂತನು. ಇವನು ನಮ್ಮಲ್ಲಿ ಯಾವಾಗಲೂ ದೃಢವೈರವುಳ್ಳವನು. ಯಾವಾಗಲೂ ಕಟುವಾಗಿ ಮಾತಾಡುವ ಸ್ವಭಾವವುಳ್ಳವನು. ಇವನ ಬಲದಿಂದಲೇ ದುರ್ಯೋಧನನೂ, ಶಕುನಿಯೂ, ನಮ್ಮನ್ನು ರಾಜ್ಯದಿಂದೋಡಿಸಿ, ಈಗ ಯುದ್ಧಕ್ಕಾಗಿ ಮುಂದಾಗಿರುವರು. ಮುಖ್ಯವಾಗಿ ಆ ಕರ್ಣನಿಗೆ ನನ್ನ ಮೇಲೆ ಕಣ್ಣು! ದುರ್ಜಯನಾದ ಆತನು ಯಾವಾಗಲೂ ನನ್ನೊಡನೆ ಸ್ಪರ್ಧಿಸುವನು. ಮಹಾರಥನಾದ ಆತನು ಜಮದಗ್ನಿಪುತ್ರನಾದ ಪರಶು

ರಾಮನ ಶಿಷ್ಯನು. ಇವನು ಆ ಪರಶುರಾಮನಲ್ಲಿಯೇ ಅಸ್ತ್ರವಿದ್ಯೆಯನ್ನು ಕಲಿತು, ಸರ್ವಾಸ್ತ್ರವಿಶಾರದನಾಗಿ, ಶಸ್ತ್ರಧಾರಿಗಳೊಳಗೆಲ್ಲ ಮೇಲೆನಿಸಿರುವನು. ಯುದ್ಧದಲ್ಲಿ ಎಣೆಯಿಲ್ಲದ ವೀರ್ಯವುಳ್ಳವನು. ಲಕ್ಷ್ಯಗಳನ್ನು ಬಹಳ ಬಲವಾಗಿ ಭೇದಿಸತಕ್ಕವನು. ಮಹಾಪರಾಕ್ರಮಿ! ಉತ್ತರಾ! ಈಗ ನಾನು ಸೂತಕುಲದವನಾದ ಈತನೊಡನೆ ಯುದ್ಧಮಾಡುವೆನು. ಬಲಿಯೂ, ಇಂದ್ರನೂ ಕಲೆತಂತೆ, ನಾವಿಬ್ಬರೂ ಯುದ್ಧಮಾಡುವ ರೀತಿಯನ್ನು ಈಗಲೇ ನೀನು ನೋಡುವೆ. ಮಹಾರಥನಾದ ಈ ಸೂತಪುತ್ರನೊಡನೆ ಯುದ್ಧಮಾಡುವಾಗ, ರಥವನ್ನು ನೀನು ಬಹು ಚಾಕಚಕ್ಯದಿಂದ ಬೇಗನೆ ನಡೆಸುತ್ತಿರಬೇಕು. ಅದೋ! ಆತ್ತಲಾಗಿ ಯಾವ ಧ್ವಜಾಗ್ರದಲ್ಲಿ ರತ್ನಮಯವಾದ ಸರ್ಪಾಕೃತಿಯು ಕಾಣಿಸುತ್ತಿರುವುದೋ, ಅದೇ ಯಶಸ್ವಿಯಾದ ದುರ್ಯೋಧನನ ರಥವು. ಆ ದುರ್ಯೋಧನನು ಲಕ್ಷ್ಯಗಳನ್ನು ಚೆನ್ನಾಗಿ ಗುರಿಹಿಡಿದು, ದೃಢವಾಗಿ ಹೊಡೆಯತಕ್ಕವನು. ಒಳ್ಳೇ ಕೈಚಳಕವುಳ್ಳವನು. ಪ್ರತಾಪಶಾಲಿಯು. ಅವನೊಡನೆ ನಾನು ಯುದ್ಧಮಾಡುವಾಗಲೂ ರಥವನ್ನು ಬೇಗನೆ ನಡೆಸಬೇಕು. ಅದೋ! ಅಲ್ಲಿ ಬಿಳುಪಾದ ಐದು ಮಟ್ಟಿಗಳಿಂದ ಕೂಡಿ, ವೈಡೂರ್ಯಮಯವಾದ ಅಡಿಮರವುಳ್ಳ ತಾಳವೃಕ್ಷದ ಗುರುತು ಧ್ವಜದಲ್ಲಿ ಕಾಣಿಸುತ್ತಿರುವುದಲ್ಲವೆ? ಅದೇ ನಮ್ಮೆಲ್ಲರಿಗೂ ಪಿತಾಮಹನಾದ ಭೀಷ್ಮಾಚಾರ್ಯನ ರಥವು. ಕೈಚೀಲವನ್ನಿಟ್ಟುಕೊಂಡು, ದೊಡ್ಡ ಬಿಲ್ಲನ್ನು ಹಿಡಿದು, ಸೈನ್ಯಗಳಿಗೆಲ್ಲ ಉತ್ಸಾಹವನ್ನು ಹುಟ್ಟಿಸುತ್ತಿರುವ ಆ ಭೀಷ್ಮಾಚಾರ್ಯನನ್ನು ಹಿಂದೊಮ್ಮೆ ಪರಶುರಾಮನೂ ಯುದ್ಧದಲ್ಲ ಸೋಲಿಸಲಾರದೆ ಹೋದನು. ಅವನು ಬಹಳ ಹಸ್ತಲಾಘವವುಳ್ಳವನು. ಬಹುವೇಗದಿಂದ ಲಕ್ಷ್ಯವನ್ನು ಭೇದಿಸತಕ್ಕವನು. ಅತಿಶಯ ಪ್ರತಾಪವುಳ್ಳವನು. ಸಮಸ್ತ ಸೈನ್ಯಗಳಿಗೂ ಅವನೇ ಪ್ರಮುಖನೆನಿಸಿರುವನು. ಶಸ್ತ್ರಧಾರಿಗಳೊಳಗೆಲ್ಲ ಮೇಲೆನಿಸಿದವನು. ಜಯಲಕ್ಷ್ಮಿಯು ಅವನ ಸ್ವಾಧೀನದಲ್ಲಿರುವಳು. ಇವನು ದುರ್ಯೋಧನನಿಗೆ ವಶವರ್ತಿಯಾಗಿರುವನು. ಆದರೆ, ಈಗಲೇ ನಾವು ಇವನನ್ನಿದಿರಿಸಬೇಕಾದುದಿಲ್ಲ. ಈಗ ನಮಗೇನೂ ಇವನಿಂದ ಅಡ್ಡಿಯಾಗಲಾರದು" ಎಂದು ಅರ್ಜುನನು ಉತ್ತರನಿಗೆ, ಅವರವರ ಆಕೃತಿಯಿಂದಲೂ, ಧ್ವಜಚಿಹ್ನೆಗಳಿಂದಲೂ, ಶತ್ರು

ವೀರರನ್ನು ನಿರ್ದೇಶಿಸಿ ತೋರಿಸಿ, ತಿರುಗಿ ಯುದ್ಧದಲ್ಲಿ ಆತುರವುಳ್ಳವನಾದನು.

ಇದು ಐವತ್ತಾರನೆಯ ಅಧ್ಯಾಯವು.

ಅರ್ಜುನನಿಗೆ ಭೀಷ್ಮದ್ರೋಣಾದಿಗಳೊಡನೆ ಯುದ್ಧವು.
ಕರ್ಣನು ಅರ್ಜುನನಿಂದ ಪರಾಜಿತನಾಹುದು.

ಜನಮೇಜಯರಾಜಾ! ಇತ್ತಲಾಗಿ ಅಶ್ವತ್ಥಾಮನು ಸೂತಪುತ್ರನಾದ ಕರ್ಣನನ್ನು ನೋಡಿ, ಮುಗುಳ್ನಗೆಯೊಡನೆ "ಕರ್ಣಾ! ನೀನು ಇದಕ್ಕೆ ಮೊದಲು ಜನರೆಲ್ಲರ ಮುಂದೆ, ಬಾಯಿಗೆ ಬಂದಹಾಗೆ ಅಸಂಬದ್ಧವಾಗಿ ಏನೇನೋ ಹೆಮ್ಮೆಯನ್ನು ಕೊಚ್ಚಿಕೊಂಡಿಯಲ್ಲವೆ? 'ನನಗೆ ಯುದ್ಧದಲ್ಲಿ ಯಾವನೂ ಇದಿರಿಲ್ಲ'ವೆಂದು ಹೇಳಿದೆ. ಇದೋ! ಈಗ ಒಳ್ಳೆಯ ಸಮಯವು ಒದಗಿಬಂದಿದೆ! ಸಮಸ್ತಭೂತಗಳನ್ನೂ ಕೊನೆಗಾಣಿಸತಕ್ಕ ಯಮನಂತೆ, ಅದೋ! ಅರ್ಜುನನು ರಣಾಗ್ರಕ್ಕೆ ಬಂದು ಸಿಂಹದಂತೆ ಆರ್ಭಟಿಸುತ್ತಿರುವನು. ನೀನು ನಿಜವಾದ ಶೂರನಾಗಿದ್ದರೆ ಈ ಯುದ್ಧದಲ್ಲಿ ನಿನ್ನ ಕೈಯನ್ನು ತೋರಿಸು. ಆಗ ಸಭೆಯಲ್ಲಿ ನೀನು ತೋರಿಸಿದ ಪೌರುಷವೇನೂ ಈಗ ಕೆಲಸಕ್ಕೆ ಬಾರದು. ಅದ್ಭುತಕಾರ್ಯವುಳ್ಳ ಅರ್ಜುನನೊಡನೆ ನಿನಗೆ ಯುದ್ಧಕ್ಕೆ ನಿಲ್ಲುವ ಸಾಮರ್ಥ್ಯವಿಲ್ಲದಿದ್ದರೆ, ಈ ನಿನ್ನ ಮಿತ್ರನಾದ ದುರ್ಯೋಧನನನ್ನೂ, ಅವನ ಮಾವನಾದ ಶಕುನಿಯನ್ನೂ ತಿರುಗಿ ಆ ಸಭೆಗೇ ಕರೆದುಕೊಂಡು ಹೋಗಿ, ಅಲ್ಲಿ ನೀವು ಸುಖವಾಗಿ ನಿಮ್ಮ ದುರ್ಮಂತ್ರಗಳನ್ನು ಆಲೋಚಿಸಿ" ಎಂದನು. ಈ ಮಾತನ್ನು ಕೇಳಿ ಕರ್ಣನಿಗೆ ಅತ್ಯಾಕ್ರೋಶವುಂಟಾಯಿತು. ನಟ್ಟ ಕಣ್ಣುಗಳಿಂದ ಅಶ್ವತ್ಥಾಮನನ್ನು ದುರದುರನೆ ನೋಡುತ್ತಾ, ಕೌರವರೆಲ್ಲರೂ ಕೇಳುತ್ತಿರುವಾಗ ಹೀಗೆಂದು ಹೇಳುವನು. "ಅಶ್ವತ್ಥಾಮಾ! ಭೀಭತ್ಸುವಿಗಾಗಲಿ, ದೇವಕೀಪುತ್ರನಾದ ಕೃಷ್ಣನಿಗಾಗಲಿ ನಾನು ಹೆದರುವೆನೆಂದೆಣಿಸಬೇಡ! ಕೊನೆಗೆ ಆ ಪಾಂಡವರೆಲ್ಲರಿಗೂ ನಾನು ಹೆದರತಕ್ಕವನಲ್ಲ. ನಾನು ಯಾವಾಗಲೂ ಕ್ಷತ್ರಧರ್ಮವನ್ನು ಅನುಸರಿಸತಕ್ಕವನು. ಬಲಾಧಿಕರೂ, ಧನು

ವಿದ್ಯೆಯಂದಲೇ ಬದುಕುವವರೂ, ಗರ್ಜನಸ್ವಭಾವವುಳ್ಳವರೂ ಆದ ನನ್ನಂಥವರಿಗೆ ದರ್ಪವಿರುವುದು ಸಹಜವೇ! ನಮ್ಮಂತವರ ಸ್ವರವೂ ತಗ್ಗುವ ಹಾಗಿಲ್ಲ. ಅರ್ಜುನನೊಡನೆ ಈಗ ನಾನು ಯುದ್ಧಮಾಡುವುದನ್ನಾದರೂ ನೋಡು. ಜಯವೆಂಬುದು ನನಗೇ ಸಿದ್ಧವು" ಎಂದನು. ಓ ಜನಮೇಜಯರಾಜಾ! ಇಷ್ಟರಲ್ಲಿಯೇ ಅತ್ತಲಾಗಿ ಅರ್ಜುನನು, ದಿವ್ಯಾಸ್ತ್ರಗಳನ್ನು ಸಿದ್ಧಪಡಿಸಿಕೊಂಡು, ಅಟ್ಟಹಾಸದೊಡನೆ ಮುಂದೆಬಂದನು. ಆಗ ಮಂದಬುದ್ಧಿಯುಳ್ಳ ದುರ್ಯೋಧನನು, ದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಮಹಾಬಲವುಳ್ಳ ಕರ್ಣನನ್ನು ನೋಡಿ "ಕರ್ಣಾ! ನಾವು ಮಾಡಿದುದು ತಪ್ಪಾಯಿತು. ಅರ್ಜುನನು ಮತ್ಸ್ಯರಾಜಧಾನಿಯಲ್ಲಿರುವನೆಂದು ತಿಳಿಯದೆ ನಾವು ಇಲ್ಲಿಗೆ ಬಂದು, ಆ ವಿರಾಟರಾಜನ ಅಪರಿಮಿತವಾದ ಗೋಧನವನ್ನೆಲ್ಲ ಹಿಡಿದುಬಿಟ್ಟಿವು. ಈಗ ಅರ್ಜುನನು ಇಲ್ಲಿರುವುದು ನಿಜವಾಯಿತು. ಈಗಲಾದರೂ ನಾವು ಯುದ್ಧಕ್ಕೆ ನಿಲ್ಲದೆ, ಆ ಗೋಧನವನ್ನೆಲ್ಲ ಇಲ್ಲಿಯೇ ಬಿಟ್ಟು, ನಮ್ಮ ಪುರಕ್ಕೆ ಹೊರಟುಹೋಗುವುದೇ ಮೇಲೆಂದು ತೋರುತ್ತಿದೆ. ನಮಗೆ ಅದರಿಂದ ಇಹಪರಗಳಲ್ಲಿ ಅಪಕೀರ್ತಿಯಾದರೂ ತಪ್ಪಲಿ! ಅಥವಾ ನಾವು ಕ್ಷತ್ರಿಯಧರ್ಮವನ್ನೇ ಪಟ್ಟಾಗಿ ಹಿಡಿದುನಿಲ್ಲಬೇಕು. ಯುದ್ಧಕ್ಕಿಂತಲೂ ಕ್ಷತ್ರಿಯರಿಗೆ ಶ್ರೇಯಸ್ಕರವಾದ ಧರ್ಮವಿಲ್ಲ. ಆದುದರಿಂದ ಅರ್ಜುನನೊಡನೆ ಯುದ್ಧವನ್ನೇ ಮಾಡುವೆವು. ಓಡಿಹೋಗುವುದೇನೋ ನಮಗೆ ಉಚಿತವಲ್ಲ!" ಎಂದು ಹೇಳುತ್ತ, ಕೊನೆಗೆ ಅರ್ಜುನನ್ನು ಇದಿರಿಸುವುದೇ ಸರಿಯೆಂದು ನಿರ್ಧರಿಸಿಕೊಂಡನು. ಒಡನೆಯೇ ಬೆಂಕಿಯಮೇಲೆ ಬೀಳುವ ಶಲಭಗಳಂತೆ ಹತ್ತುಸಾವಿರ ಮಂದಿ ಬಿಲ್ಲಾಳುಗಳು ಪಾರ್ಥನನ್ನು ಇದಿರಿಸಿಹೋದರು. ಜೀನುಹಾಕಿದ ಅಶ್ವಸೈನ್ಯಗಳೂ ಪದಾತಿಗಳ ಬೆಂಗಾವಲಿನೊಡನೆ ಮುಂದೆ ನುಗ್ಗಿದುವು. ಅಂಕುಶಗಳನ್ನೂ, ತೋಮರಗಳನ್ನೂ ಹಿಡಿದ ಒಳ್ಳೇ ಗಜಶಿಕ್ಷಕರಿಂದ ನಡೆಸಲ್ಪಟ್ಟ ಭಯಂಕರಾಕಾರವುಳ್ಳ ಆನೆಗಳೂ ವೇಗದಿಂದ ಮುಂದೆ ಹೊರಟುವು. ಭೀಷ್ಮನೂ, ದ್ರೋಣನೂ, ಕರ್ಣನೂ, ದುರ್ಯೋಧನನೂ, ಧನುರ್ವೇದವಿಶಾರದನಾದ ಅಶ್ವತ್ಥಾಮನೂ, ಈ ಐದುಮಂದಿ ಮಹಾರಥರೂ, ಧನುರ್ಬಾಣಗಳನ್ನು ಹಿಡಿದು ಕೋಪದಿಂದ ಅರ್ಜುನನನ್ನು ಆವರಿಸಿಕೊಂಡರು. ಮೇಘಗಳು

ಮಳೆಯನ್ನು ಕರೆಯುವಂತೆ ಎಲ್ಲರೂ ಪ್ರಬಲವಾದ ಬಾಣವರ್ಷವನ್ನು ಕರೆಯುತ್ತಾ, ಅರ್ಜುನನು ಯುದ್ಧಕ್ಕೆ ಬಂದುದು ತಮಗೆ ಪರಮಲಾಭವೆಂದು ತಿಳಿದು, ಉತ್ಸಾಹದಿಂದ ಅವನನ್ನು ಸುತ್ತಿಕೊಂಡರು. ಹತ್ತು ದಿಕ್ಕುಗಳೂ ಮೊಳಗುವಂತೆ, ಮಹಾಘೋಷದಿಂದ ಬಾಣಗಳನ್ನು ವರ್ಷಿಸುತ್ತಿದ್ದರು. ಆಗ ಅರ್ಜುನನು ಇವರೆಲ್ಲರ ಆರ್ಭಟವನ್ನು ನೋಡಿ ನಗುತ್ತ, ದಿವ್ಯಾಸ್ತ್ರಪ್ರಯೋಗದೊಡನೆ ಅವರೆಲ್ಲರನ್ನೂ ಇದಿರಿಸಿದನು. ಸೂರ್ಯನು ತನ್ನ ಕಿರಣಗಳಿಂದ ಸಮಸ್ತ ಭೂಮಿಯನ್ನೂ ಆವರಿಸುವಂತೆ, ಅರ್ಜುನನು ಗಾಂಡೀವಪ್ರಯುಕ್ತಗಳಾದ ತನ್ನ ಬಾಣಗಳಿಂದ, ದಿಕ್ಕುಗಳನ್ನೆಲ್ಲ ಮರೆಸಿಬಿಟ್ಟನು. ಆಗ ಅರ್ಜುನನ ಬಾಣಗಳು ಕೌರವಸೈನ್ಯದಲ್ಲಿದ್ದ ರಥಗಳನ್ನೂ, ಅಶ್ವಗಳನ್ನೂ, ಧ್ವಜಗಳನ್ನೂ, ಕವಚಧಾರಿಗಳಾದ ವೀರರನ್ನೂ ಪೈಯಲ್ಲಿ ಎರಡಂಗುಲದಷ್ಟಾದರೂ ಅವಕಾಶವಿಲ್ಲದಂತೆ ಪೂರ್ಣವಾಗಿ ನಾಟಿಕೊಂಡುವು. ಈ ಪ್ರಬಲಯುದ್ಧದಲ್ಲಿಯೂ ಕೂಡ, ಅರ್ಜುನನ ಅದೃಷ್ಟಬಲದಿಂದಲೂ, ಸಾರಥಿಯಾದ ಉತ್ತರನ ಮತ್ತು ರಥಾಶ್ವಗಳ ಶಿಕ್ಷಾಬಲದಿಂದಲೂ, ಅರ್ಜುನಪ್ರಯುಕ್ತಗಳಾದ ದಿವ್ಯಾಸ್ತ್ರಗಳ ನಿರರ್ಗಳವಾದ ವೇಗದಿಂದಲೂ, ಆ ಪಾರ್ಥನ ಧ್ವಜದಲ್ಲಿಯೂ, ಗಾಂಡೀವದಲ್ಲಿಯೂ ಇರುವ ದಿವ್ಯವಾದೊಂದು ಮಾಯಾಶಕ್ತಿಯಿಂದಲೂ, ಅರ್ಜುನನ ರಥಕ್ಕೇನೂ ಅಪಾಯವೂ, ಅಡ್ಡಿಯೂ ಇಲ್ಲದೆ, ಅದು ಮನೋವೇಗದಿಂದ ಅತ್ತಿತ್ತ ತಡೆಯಿಲ್ಲದೆ ಸಂಚರಿಸುತಿದ್ದಿತು. ಅತಿದೂರದಲ್ಲಿಯಾಗಲಿ, ಸವಿಾಪದಲ್ಲಿಯಾಗಲಿ, ದುರ್ಗಮವಾವ ಸ್ಥಳದಲ್ಲಿಯಾಗಲಿ, ಹಳ್ಳತಿಟ್ಟುಗಳಲ್ಲಿಯಾಗಲಿ, ಸಮಭೂಮಿಯಲ್ಲಿಯಾಗಲಿ, ಮನೋಗತಿಯಂತೆ ಆ ರಥದ ಗತಿಗೆ ತಡೆಯೇ ಇರಲಿಲ್ಲ. ಯುದ್ಧಗಳಲ್ಲಿ ಇಂತಹ ರಥಗತಿಗಳೆಲ್ಲವನ್ನೂ ಎಷ್ಟೋ ಸಾರಿ ನೋಡಿ ಅನುಭವವುಳ್ಳ ವೀರರೂ ಕೂಡ, ಅರ್ಜುನನ ವೀರ್ಯವನ್ನೂ, ಬಲವನ್ನೂ, ಅವನ ಆಯಾ ರಥಗತಿಗಳನ್ನೂ ನೋಡಿ ಭಯದಿಂದನಡುಗುತ್ತ, ತಮ್ಮ ರಥಗಳೊಡನೆ ಹಿಂತಿರುಗಿಹೋಗವುದಕ್ಕೂ ಪ್ರಯತ್ನಿಸಿದರು. ಪ್ರಜಾನಾಶಕ್ಕಾಗಿ ತಲೆದೋರಿದ ಕಾಲಾಗ್ನಿಯಂತೆ ಜ್ವಲಿಸುತ್ತಿರುವ ಆ ಅರ್ಜುನನ್ನು ಕಣ್ಣಿಂದ ನೋಡುವುದಕ್ಕೂ ಶತ್ರುಗಳಿಗೆ ಸಾಧ್ಯವಿಲ್ಲದಂತಾಯಿತು. ಅರ್ಜುನನ ಬಾಣಗಳಿಂದ ಆ ಕೌರವಸೈನ್ಯಗಳೆಲ್ಲವೂ, ಸೂರ್ಯ

ಕಿರಣಗಳಿಂದ ವ್ಯಾಪ್ತವಾದ ಮಹಾಮೇಘಗಳಂತೆ ಚದರಿಹೋದುವು. ಅ ರ್ಜುನನ ಬಾಣಪ್ರಹಾರಗಳಿಂದ ಕೌರವಸೈನ್ಯವೆಲ್ಲ ರಕ್ತದಿಗ್ದವಾಗಿ ವಸಂತ ಕಾಲದಲ್ಲಿ ಪುಷ್ಪಿತಗಳಾದ ಅಶೋಕವೃಕ್ಷಗಳಂತಾದುವು. ಅರ್ಜುನನ ಸಾವಿ ರಾರು ಬಾಣಗಳಿಂದ ಛಿನ್ನಭಿನ್ನಗಳಾದ ಛತ್ರಗಳೂ, ಪತಾಕೆಗಳೂ ಗಾಳಿ ಯಿಂದ ಹಾರಿಸಲ್ಪಟ್ಟು ಅತ್ತಿತ್ತ ತೂರಾಡುತಿದ್ದುವು. ಅರ್ಜುನನ ವೀರ್ಯಕ್ಕೆ ಹೆದರಿ ಸೈನ್ಯಗಳೆಲ್ಲವೂ ದಶದಿಕ್ಕುಗಳಿಗೆ ಪಲಾಯನಮಾಡಿದುವು. ಕೌರವ ಸೈನ್ಯದಲ್ಲಿ ರಥಕ್ಕೆ ಕಟ್ಟಿದ್ದ ಕುದುರೆಗಳೆಲ್ಲ, ಅರ್ಜುನನ ಬಾಣಗಳಿಂದ ರಥದ ಮೂಕೆಯು ಮುರಿದು ಬೀಳಲು, ರಣರಂಗವನ್ನು ಬಿಟ್ಟು ಸಿಕ್ಕಿದ ಕಡೆ ಓಡಿಹೋಗುತಿದ್ದುವು. ಕೆಲವು ಕುದುರೆಗಳಿಗೆ ಬಾಣಗಳಿಂದ ಮುಂಗಾಲು ಗಳು ಮುರಿದು, ಅವು ಅಲ್ಲಲ್ಲಿಯೇ ತಲೆಕೆಳಗಾಗಿ ಮುಗ್ಗುರಿಸಿ ನೆಲಕ್ಕೆ ಉರುಳುತ್ತಿದ್ದುವು. ಅರ್ಜುನನ ಕಡೆಯ ಆನೆಗಳು, ಕೌರವಸೈನ್ಯದ ಆನೆ ಗಳನ್ನು ಕಣ್ಣು, ಮೂಗು, ಕೊಂಬು, ತುಟಿ ಮುಂತಾದ ಮರ್ಮಸ್ಥಾನ ಗಳಲ್ಲಿ ಅಪ್ಪಳಿಸಿ ಕೆಡಹುತ್ತ ಬರಲು, ಕೌರವರ ಆನೆಗಳೆಲ್ಲ ಪ್ರಜ್ಞೆತಪ್ಪಿ ನೆಲಕ್ಕೆ ಬಿದ್ದು, ಮೇಘಗಳಿಂದ ಆಕಾಶವು ಹೇಗೋಹಾಗೆ, ರಣಭೂಮಿ ಯೆಲ್ಲ ಗಜಶರೀರಗಳಿಂದ ತುಂಬಿಹೋಯಿತು. ಬಡಬಾಮುಖದಿಂದುಂಟಾ ಗುವ ಕಾಲಾಗ್ನಿಯಂತೆಯೂ, ಕಾಲಪಕ್ವವಾದ ಚರಾಚರಾತ್ಮಕವಾದ ಸಮಸ್ತ ಪ್ರಪಂಚವನ್ನೂ ಪ್ರಳಯಕಾಲದಲ್ಲ ದಹಿಸುವ ಲಯಾಗ್ನಿಯಂತೆ ಯೂ, ಪಾರ್ಥನು ಅಟ್ಟಹಾಸದಿಂದ ನಗುತ್ತ, ತನ್ನ ಅಸ್ತ್ರಚ್ಛಾಲೆಯಿಂದ ಲೂ, ತನ್ನ ಧನುಸ್ಸಿನ ಘೋಷದಿಂದಲೂ ಕೌರವಸೈನ್ಯವನ್ನೆಲ್ಲಾ ದಹಿ ಸುತ್ತ ಬಂದನು. ಅದೃಷ್ಟಬಲದಿಂದಲೂ, ತನ್ನ ವೀರ್ಯಪ್ರಭಾವದಿಂದ ಲೂ ಹೀಗೆ ಅರ್ಜುನನು ದುರ್ಯೋಧನನ ಸೈನ್ಯವನ್ನೆಲ್ಲ ಉಲ್ಲೋಲ ಕಲ್ಲೋಲವಾಗಿ ಮಾಡಿ, ಪ್ರಾಯಕವಾಗಿ ರಾತ್ರಿಯು ಸಮಸ್ತ ಪ್ರಾಣಿಗಳ ಚೇಷ್ಟೆಯನ್ನೆಲ್ಲ ಅಡಗಿಸಿಬಿಡುವಂತೆ, ಕೌರವಸೈನಿಕರ ಯುದ್ಧೋತ್ಸಾಹ ವನ್ನೆಲ್ಲ ಒಮ್ಮೆಯೇ ಉಡುಗಿಸಿಬಿಟ್ಟನು. ಒಬ್ಬೊಬ್ಬ ಇವನು ಶತ್ರು ಗಳನ್ನು ಮಹಾವೇಗದಿಂದಿರಿಸುವನು. ಮತ್ತೊಬ್ಬೊಬ್ಬ ಶತ್ರುಗಳೂ ವೇಗ ದಿಂದ ಅವನಮೇಲೆ ಬೀಳುವರು. ದೃಢವಾಗಿಯೂ, ಅಮೋಘವಾಗಿ ಯೂ, ಅತಿಮಾನುಷಗಳಾಗಿಯೂ ಇದ್ದ ಅರ್ಜುನನ ಬಾಣಗಳನ್ನು ನೋಡಿ

ಕೌರವರಿಗೆ ಭೀತಿ ಹುಟ್ಟಿತು. ಪಕ್ಷಿಗಳ ಗರಿಗಳಿಂದ ಕೂಡಿ, ಶತ್ರುಗಳ ಪ್ರಾಣಗಳನ್ನೂ, ರಕ್ತವನ್ನೂ ಹೀರತಕ್ಕ ಆ ಅರ್ಜುನನ ಬಾಣಗಳು ಪಕ್ಷಿಗಳಂತೆ ಆಕಾಶವನ್ನೆಲ್ಲಾ ವ್ಯಾಪಿಸಿದುವು. ಅರ್ಜುನನ ಗಾಂಡೀವ ಪ್ರಯುಕ್ತಗಳಾದ ಬಾಣಗಳು ಆಕಾಶದಲ್ಲಿ ಗರುಡವೇಗದಿಂದ ಹೊರಟು ಬಂದು, ಶತ್ರುಗಳ ಮರ್ಮಸ್ಥಾನಗಳಲ್ಲಿ ನಾಟುತ್ತಿದ್ದುವು. ಆ ಅರ್ಜುನನ ಬಾಣಗಳಿಂದ ಶತ್ರುಗಳ ಕವಚಗಳು, ಸಾರಥಿ, ಕುದುರೆಗಳಿಗೆ ತೊಡಿಸಿದ ಭೂಷಣಾದಿಗಳು, ಸೂರ್ಯಸಮಾನವಾದ ಕಿರೀಟಗಳು, ರಥದ ಮೇಲಿನ ಹುಲಿಬೊಗಲು, ಮುಂತಾಗಿ ಇನ್ನೂ ರಥದ ಸರ್ವಾವಯವಗಳೂ ಮಂಜಿನಿಂದ ಪ್ರಾಣಿಗಳು ಹೇಗೋ ಹಾಗೆ ಮುಚ್ಚಿಹೋದುವು. ಶತ್ರುಗಳು ಒಂದಾವರ್ತಿಯಾದರೂ ಈ ವಿಧವಾದ ಹಸ್ತಲಾಘವವನ್ನು ಅರ್ಜುನನ ಮೇಲೆ ತೋರಿಸಲಾರದೆ ಹೋದರು. ಹೀಗೆ ಶತ್ರುಗಳಿಗೆ ದುರ್ನಿವಾರವಾದ ಅರ್ಜುನನ ರಥವು ತಿರುಗಿತಿರುಗಿ ಶತ್ರುಗಳನ್ನು ದಿರಿಸುತಿದ್ದಿತು. ಅವನ ಬಾಣಗಳಿಗೆ ಶತ್ರುಶರೀರಗಳಲ್ಲಿ ಹೇಗೆ ತಡೆಯಿಲ್ಲದೆ ನಾಟುತಿದ್ದುವೋ, ಹಾಗೆಯೇ ಅವನ ರಥಕ್ಕೂ ಎಲ್ಲಿಯೂ ತಡೆಯಿರಲಿಲ್ಲ. ಎರಡು ಭಾಗವಾಗಿದ್ದ ಆ ಶತ್ರುಸೈನ್ಯಗಳಲ್ಲಿ ರಥವು ತಡೆಯಿಲ್ಲದೆ ಸಂಚರಿಸುತಿತ್ತು. ಮಹಾಸಮುದ್ರದಲ್ಲಿ ನಲಿಯುವ ಅತಿವೇಗವುಳ್ಳ ದೊಡ್ಡ ಸರ್ಪದಂತೆ, ಅರ್ಜುನನು ದಟ್ಟವಾದ ಆ ಶತ್ರುಸೈನ್ಯಮಧ್ಯದಲ್ಲಿ ತಡೆಯಿಲ್ಲದೆ ನಲಿದಾಡುತಿದ್ದನು. ಎಡೆಬಿಡದೆ ಬಾಣಪ್ರಯೋಗಮಾಡುತಿದ್ದ ಆ ಅರ್ಜುನನ ಜ್ಯಾಘೋಷವು, ಬೇರೆ ಎಲ್ಲಾ ಧ್ವನಿಗಳನ್ನೂ ಅಡಗಿಸಿ ತಾನೇ ತಾನಾಗಿ ಕೇಳಿಸುತಿದ್ದಿತು. ಎಡೆಬಿಡದೆ ಹೊರಡುವ ಅರ್ಜುನನ ಬಾಣಗಳಿಂದ, ಅಲ್ಲಿದ್ದ ಆನೆಗಳೆಲ್ಲ ಸೂರ್ಯರಶ್ಮಿಯಿಂದಾವೃತವಾದ ಮೇಘಗಳಂತೆ ಕಾಣಿಸುತಿದ್ದುವು. ಅರ್ಜುನನು ನಾನಾಕಡೆಗಳಿಗೆ ವೇಗದಿಂದ ತಿರುಗುತ್ತ, ಎಡಬಲಗೈಗಳಿರಡರಿಂದಲೂ ಎಡೆಬಿಡದೆ ಬಾಣವನ್ನು ಪ್ರಯೋಗಿಸುತ್ತಿದ್ದುದರಿಂದ, ಅವನ ಬಿಲ್ಲು ರಣರಂಗದಲ್ಲಿ ಯಾವಾಗಲೂ ಚಕ್ರಾಕಾರವಾಗಿಯೇ ಕಾಣಿಸುತಿತ್ತು. ರೂಪವಿಲ್ಲದ ಕಡೆಗೆ ದೃಷ್ಟಿಯು ಬೀಳದಂತೆ, ಅರ್ಜುನನ ಬಾಣಗಳಲ್ಲಿ ಒಂದಾದರೂ ಲಕ್ಷ್ಯವಿಲ್ಲದಕಡೆಗೆ ಬಿದ್ದು ವ್ಯರ್ಥವಾಗಲಿಲ್ಲ. ಸಾವಿರಾನೆಗಳು ಒಟ್ಟಾಗಿ ನುಗ್ಗಿ ಒಂದು ವನವನ್ನು ಮುರಿದರೆ ಹೇಗೋ ಹಾಗೆ, ಅರ್ಜುನನ

ಕಿರಣಗಳಿಂದ ವ್ಯಾಪ್ತವಾದ ಮಹಾಮೇಘಗಳಂತೆ ಚದರಿಹೋದುವು. ಅ ರ್ಜುನನ ಬಾಣಪ್ರಹಾರಗಳಿಂದ ಕೌರವಸೈನ್ಯವೆಲ್ಲ ರಕ್ತದಿಗ್ದವಾಗಿ ವಸಂತ ಕಾಲದಲ್ಲಿ ಪುಷ್ಪಿತಗಳಾದ ಅಶೋಕವೃಕ್ಷಗಳಂತಾದುವು. ಅರ್ಜುನನ ಸಾವಿ ರಾರು ಬಾಣಗಳಿಂದ ಛಿನ್ನಭಿನ್ನಗಳಾದ ಛತ್ರಗಳೂ, ಪತಾಕೆಗಳೂ ಗಾಳಿ ಯಿಂದ ಹಾರಿಸಲ್ಪಟ್ಟು ಅತ್ತಿತ್ತ ತೂರಾಡುತಿದ್ದುವು. ಅರ್ಜುನನ ವೀರ್ಯಕ್ಕೆ ಹೆದರಿ ಸೈನ್ಯಗಳೆಲ್ಲವೂ ದಶದಿಕ್ಕುಗಳಿಗೆ ಪಲಾಯನಮಾಡಿದುವು. ಕೌರವ ಸೈನ್ಯದಲ್ಲಿ ರಥಕ್ಕೆ ಕಟ್ಟಿದ್ದ ಕುದುರೆಗಳಿಲ್ಲ, ಅರ್ಜುನನ ಬಾಣಗಳಿಂದ ರಥದ ಮೂಕೆಯು ಮುರಿದು ಬೀಳಲು, ರಣರಂಗವನ್ನು ಬಿಟ್ಟು ಸಿಕ್ಕಿದ ಕಡೆ ಓಡಿಹೋಗುತಿದ್ದುವು. ಕೆಲವು ಕುದುರೆಗಳಿಗೆ ಬಾಣಗಳಿಂದ ಮುಂಗಾಲು ಗಳು ಮುರಿದು, ಅವು ಅಲ್ಲಲ್ಲಿಯೇ ತಲೆಕೆಳಗಾಗಿ ಮುಗ್ಗುರಿಸಿ ನೆಲಕ್ಕೆ ಉರುಳುತ್ತಿದ್ದುವು. ಅರ್ಜುನನ ಕಡೆಯ ಆನೆಗಳು, ಕೌರವಸೈನ್ಯದ ಆನೆ ಗಳನ್ನು ಕಣ್ಣು, ಮೂಗು, ಕೊಂಬು, ತುಟಿ ಮುಂತಾದ ಮರ್ಮಸ್ಥಾನ ಗಳಲ್ಲಿ ಅಪ್ಪಳಿಸಿ ಕೆಡಹುತ್ತ ಬರಲು, ಕೌರವರ ಆನೆಗಳೆಲ್ಲ ಪ್ರಜ್ಞೆತಪ್ಪಿ ನೆಲಕ್ಕೆ ಬಿದ್ದು, ಮೇಘಗಳಿಂದ ಆಕಾಶವು ಹೇಗೋಹಾಗೆ, ರಣಭೂಮಿ ಯೆಲ್ಲ ಗಜಶರೀರಗಳಿಂದ ತುಂಬಿಹೋಯಿತು. ಬಡಬಾಮುಖದಿಂದುಂಟಾ ಗುವ ಕಾಲಾಗ್ನಿಯಂತೆಯೂ, ಕಾಲಪಕ್ವವಾದ ಚರಾಚರಾತ್ಮಕವಾದ ಸಮಸ್ತ ಪ್ರಪಂಚವನ್ನೂ ಪ್ರಳಯಕಾಲದಲ್ಲಿ ದಹಿಸುವ ಲಯಾಗ್ನಿಯಂತೆ ಯೂ, ಪಾರ್ಥನು ಅಟ್ಟಹಾಸದಿಂದ ನಗುತ್ತ, ತನ್ನ ಅಸ್ತ್ರಚಾಪಲೆಯಿಂದ ಲೂ, ತನ್ನ ಧನುಸ್ಸಿನ ಘೋಷದಿಂದಲೂ ಕೌರವಸೈನ್ಯವನ್ನೆಲ್ಲಾ ದಹಿ ಸುತ್ತ ಬಂದನು. ಅದೃಷ್ಟಬಲದಿಂದಲೂ, ತನ್ನ ವೀರ್ಯಪ್ರಭಾವದಿಂದ ಲೂ ಹೀಗೆ ಅರ್ಜುನನು ದುರ್ಯೋಧನನ ಸೈನ್ಯವನ್ನೆಲ್ಲ ಉಲ್ಲೋಲ ಕಲ್ಲೋಲವಾಗಿ ಮಾಡಿ, ಪ್ರಾಯಕವಾಗಿ ರಾತ್ರಿಯು ಸಮಸ್ತ ಪ್ರಾಣಿಗಳ ಚೇಷ್ಟೆಯನ್ನೆಲ್ಲ ಅಡಗಿಸಿಬಿಡುವಂತೆ, ಕೌರವಸೈನಿಕರ ಯುದ್ಧೋತ್ಸಾಹ ವನ್ನೆಲ್ಲ ಒಮ್ಮೆಯೇ ಉಡುಗಿಸಿಬಿಟ್ಟನು. ಒಮ್ಮೊಮ್ಮೆ ಇವನು ಶತ್ರು ಗಳನ್ನು ಮಹಾವೇಗದಿಂದಿರಿಸುವನು. ಮತ್ತೊಮ್ಮೆ ಶತ್ರುಗಳೂ ವೇಗ ದಿಂದ ಅವನಮೇಲೆ ಬೀಳುವರು. ದೃಢವಾಗಿಯೂ, ಅಮೋಘವಾಗಿ ಯೂ, ಅತಿಮಾನುಷಗಳಾಗಿಯೂ ಇದ್ದ ಅರ್ಜುನನ ಬಾಣಗಳನ್ನು ನೋಡಿ

ಕೌರವರಿಗೆ ಭೀತಿ ಹುಟ್ಟಿತು. ಪಕ್ಷಿಗಳ ಗರಿಗಳಿಂದ ಕೂಡಿ, ಶತ್ರುಗಳ ಪ್ರಾಣಗಳನ್ನೂ, ರಕ್ತವನ್ನೂ ಹೀರತಕ್ಕ ಆ ಅರ್ಜುನನ ಬಾಣಗಳು ಪಕ್ಷಿಗಳಂತೆ ಆಕಾಶವನ್ನೆಲ್ಲಾ ವ್ಯಾಪಿಸಿದುವು. ಅರ್ಜುನನ ಗಾಂಡೀವ ಪ್ರಯುಕ್ತಗಳಾದ ಬಾಣಗಳು ಆಕಾಶದಲ್ಲಿ ಗರುಡವೇಗದಿಂದ ಹೊರಟು ಬಂದು, ಶತ್ರುಗಳ ಮರ್ಮಸ್ಥಾನಗಳಲ್ಲಿ ನಾಟುತ್ತಿದ್ದುವು. ಆ ಅರ್ಜುನನ ಬಾಣಗಳಿಂದ ಶತ್ರುಗಳ ಕವಚಗಳು, ಸಾರಥಿ, ಕುದುರೆಗಳಿಗೆ ತೊಡಿಸಿದ ಭೂಷಣಾದಿಗಳು, ಸೂರ್ಯಸಮಾನವಾದ ಕಿರೀಟಗಳು, ರಥದ ಮೇಲಿನ ಹುಲಿಬೊಗಲು, ಮುಂತಾಗಿ ಇನ್ನೂ ರಥದ ಸರ್ವಾವಯವಗಳೂ ಮಂಜಿನಿಂದ ಪ್ರಾಣಿಗಳು ಹೇಗೋ ಹಾಗೆ ಮುಚ್ಚಹೋದುವು. ಶತ್ರುಗಳು ಒಂದಾವರ್ತಿಯಾದರೂ ಈ ವಿಧವಾದ ಹಸ್ತಲಾಘವವನ್ನು ಅರ್ಜುನನ ಮೇಲೆ ತೋರಿಸಲಾರದೆ ಹೋದರು. ಹೀಗೆ ಶತ್ರುಗಳಿಗೆ ದುರ್ನಿವಾರವಾದ ಅರ್ಜುನನ ರಥವು ತಿರುಗಿತಿರುಗಿ ಶತ್ರುಗಳನ್ನು ದಿರಿಸುತಿದ್ದಿತು. ಅವನ ಬಾಣಗಳಿಗೆ ಶತ್ರುಶರೀರಗಳಲ್ಲಿ ಹೇಗೆ ತಡೆಯಿಲ್ಲದೆ ನಾಟುತಿದ್ದುವೋ, ಹಾಗೆಯೇ ಅವನ ರಥಕ್ಕೂ ಎಲ್ಲಿಯೂ ತಡೆಯಿರಲಿಲ್ಲ. ಎರಡು ಭಾಗವಾಗಿದ್ದ ಆ ಶತ್ರುಸೈನ್ಯಗಳಲ್ಲಿ ರಥವು ತಡೆಯಿಲ್ಲದೆ ಸಂಚರಿಸುತಿತ್ತು. ಮಹಾಸಮುದ್ರದಲ್ಲಿ ನಲಿಯುವ ಅತಿವೇಗವುಳ್ಳ ದೊಡ್ಡ ಸರ್ಪದಂತೆ, ಅರ್ಜುನನು ದಟ್ಟವಾದ ಆ ಶತ್ರುಸೈನ್ಯಮಧ್ಯದಲ್ಲಿ ತಡೆಯಿಲ್ಲದೆ ನಲಿದಾಡುತಿದ್ದನು. ಎಡೆಬಿಡದೆ ಬಾಣಪ್ರಯೋಗಮಾಡುತಿದ್ದ ಆ ಅರ್ಜುನನ ಜ್ಯಾಘೋಷವು, ಬೇರೆ ಎಲ್ಲಾ ಧ್ವನಿಗಳನ್ನೂ ಅಡಗಿಸಿ ತಾನೇ ತಾನಾಗಿ ಕೇಳಿಸುತಿದ್ದಿತು. ಎಡೆಬಿಡದೆ ಹೊರಡುವ ಅರ್ಜುನನ ಬಾಣಗಳಿಂದ, ಅಲ್ಲಿದ್ದ ಆನೆಗಳೆಲ್ಲ ಸೂರ್ಯರಶ್ಮಿಯಿಂದಾವೃತವಾದ ಮೇಘಗಳಂತೆ ಕಾಣಿಸುತಿದ್ದುವು. ಅರ್ಜುನನು ನಾನಾಕಡೆಗಳಿಗೆ ವೇಗದಿಂದ ತಿರುಗುತ್ತ, ಎಡಬಲಗೈಗಳಿರಡರಿಂದಲೂ ಎಡೆಬಿಡದೆ ಬಾಣವನ್ನು ಪ್ರಯೋಗಿಸುತ್ತಿದ್ದುದರಿಂದ, ಅವನ ಬಿಲ್ಲು ರಣರಂಗದಲ್ಲಿ ಯಾವಾಗಲೂ ಚಕ್ರಾಕಾರವಾಗಿಯೇ ಕಾಣಿಸುತಿತ್ತು. ರೂಪವಿಲ್ಲದ ಕಡೆಗೆ ದೃಷ್ಟಿಯು ಬೀಳದಂತೆ, ಅರ್ಜುನನ ಬಾಣಗಳಲ್ಲಿ ಒಂದಾದರೂ ಲಕ್ಷ್ಯವಿಲ್ಲದಕಡೆಗೆ ಬಿದ್ದು ವ್ಯರ್ಥವಾಗಲಿಲ್ಲ. ಸಾವಿರಾನೆಗಳು ಒಟ್ಟಾಗಿ ನುಗ್ಗಿ ಒಂದು ವನವನ್ನು ಮುರಿದರೆ ಹೇಗೋ ಹಾಗೆ, ಅರ್ಜುನನ

ರಥಮಾರ್ಗಕ್ಕೆ ರಣದಲ್ಲಿ ಅಡ್ಡಿಯೇ ಇಲ್ಲದಂತೆ ಅತಿಭಯಂಕರವಾಯಿತು. ತನ್ನ ಮಗನಾದ ಪಾರ್ಥನಿಗೆ ಜಯವನ್ನು ಕೋರಿ, ದೇವೇಂದ್ರನೇ ಸಮಸ್ತ ದೇವತೆಗಳೊಡನೆ ಬಂದು ತಮ್ಮನ್ನು ಹೊಡೆಯುತ್ತಿರುವನೆಂದು ಶತ್ರುಗಳೆಲ್ಲರಿಗೂ ಅನುಮಾನವು ಹುಟ್ಟುವಂತಾಯಿತು. ಮತ್ತು ಅರ್ಜುನನ ಬಾಣ ಪ್ರಹಾರವನ್ನು ನೋಡಿ ಪ್ರಜೆಗಳನ್ನು ನುಂಗುವ ಕಾಲಯಮನೇ ಅರ್ಜುನನ ರೂಪದಿಂದ ಬಂದಿರುವನೆಂದೂ ಶತ್ರುಗಳಿಗೆ ತೋರಿತು. ಪಾರ್ಥನು ಬಾಣಗಳನ್ನು ಮೈಗೆ ಗುರಿಯಿಟ್ಟು ಹೊಡೆಯದಿದ್ದಾಗಲೂ, ಅವನ ಘೋರ ಪರಾಕ್ರಮವನ್ನು ನೋಡಿದಮಾತ್ರದಿಂದಲೇ ನೂರಾರು ಕೌರವಸೈನ್ಯಗಳು ಹತವಾಗಿ ಬೀಳುತಿದ್ದುವು. ಕಾಲವಿಪಾಕದಿಂದ ಓಷಧಿಗಳು ಬಾಡಿ ಬಗ್ಗಿ ಹೋಗುವಂತೆ, ಅರ್ಜುನನ ಭಯದಿಂದ ಕೌರವರ ತಲೆಗಳು ಬಗ್ಗಿಕೋದುವು. ಆಗ ಅರ್ಜುನನು ಅತ್ಯಂತ ಕೋಪಾವೇಶದಿಂದ, ಬಂದವರನ್ನು ಭಯದಿಂದ ಓಡಿಹೋಗುವಂತೆ ಮಾಡಿದನು. ಅರ್ಜುನನ ಬಾಣಗಳಿಂದ ಭೇದಿಸಲ್ಪಟ್ಟ ಕುರುಸೈನ್ಯಗಳ ದೇಹದಿಂದ ಸುರಿದ ರಕ್ತವು ಭೂಭಾಗವನ್ನೆಲ್ಲ ಕೆಂಪಾಗಿ ಕಾಣಿಸಿತು. ಅರ್ಜುನನಿಂದ ಕೊಲ್ಲಲ್ಪಟ್ಟ ಅನೇಕವೀರರು, ದೇಹದೊಳಗಿನ ರಕ್ತಸ್ರಾವದಿಂದಲೂ, ಗಾಳಿಗೆ ಹಾರಿಬಂದ ರಕ್ತಬಿಂದುಗಳಿಂದಲೂ, ರಕ್ತದಲ್ಲಿ ತೊಯ್ದು ನೆಲದ ಧೂಳಿಗಳಿಂದಲೂ, ರಕ್ತದಿಗ್ಧಗಳಾದ ಆಯುಧಗಳ ಸ್ಪರ್ಶದಿಂದಲೂ ಕೇವಲ ರಕ್ತಮಯ ದೇಹವುಳ್ಳವರಾಗಿ ಕೊನೆಗೆ ರಕ್ತಪ್ರವಾಹದಲ್ಲಿಯೇ ಮುಳುಗಿ ಸಾಯುತ್ತಿದ್ದರು. ಗಾಳಿಗೆ ಹಾರಿದ ರಕ್ತಬಿಂದುಗಳಿಂದ ಆಕಾಶದಲ್ಲಿ ಸೂರ್ಯರಶ್ಮಿಗಳೆಲ್ಲವೂ ಕೆಂಪಾಗಿ, ಆಕಾಲದಲ್ಲಿ ಸಂಧ್ಯಾರಾಗವನ್ನು ಕಾಣಿಸಿತು. ಸೂರ್ಯನಾದರೂ ಅಸ್ತಗಿರಿಯನ್ನು ಹೊಂದಿ ಹಿಂತಿರುಗಿ ಬರುವನು. ಅರ್ಜುನನಾದರೋ ಯುದ್ಧಕ್ಕೆ ಹೋದಮೇಲೆ ಶತ್ರುವನ್ನು ಗೆಲ್ಲದೆ ಹಿಂತಿರುಗಲಾರನು. ಹೀಗೆ ಅರ್ಜುನನು ತನ್ನ ದಿವ್ಯಾಸ್ತ್ರಗಳಿಂದ ಅನೇಕಶೂರರನ್ನೂ, ಧನುರ್ಧಾರಿಗಳನ್ನೂ ಇದಿರಿಸಿ ಸೋಲಿಸಿದನು. ದ್ರೋಣನನ್ನು ಎಪ್ಪತ್ತು ಬಾಣಗಳಿಂದಲೂ, ಶಕುನಿಯನ್ನು ಎಂಭತ್ತು ಬಾಣಗಳಿಂದಲೂ, ಅಶ್ವತ್ಥಾಮನನ್ನು ಏಳು ಬಾಣಗಳಿಂದಲೂ, ದುಸ್ಸಹನನ್ನು ಹತ್ತು ಬಾಣಗಳಿಂದಲೂ ಹೊಡೆದನು. ಹಾಗೆಯೇ ಹನ್ನೆರಡುಬಾಣಗಳಿಂದ ದುಶ್ಶಾಸನನನ್ನೂ,

ಮೂರು ಬಾಣಗಳಿಂದ ಕೃಪನನ್ನೂ, ಆರುವತ್ತು ಬಾಣಗಳಿಂದ ಭೀಷ್ಮನನ್ನೂ ಅವರವರ ಎದೆಗೆ ಗುರಿಯಿಟ್ಟು ಹೊಡೆದನು. ಆಮೇಲೆ ಇಂದ್ರಪುತ್ರನಾದ ಅರ್ಜುನನು, ಶತ್ರುಸೇನೆಯ ಮಧ್ಯದಲ್ಲಿದ್ದ ಕರ್ಣನನ್ನು ಹರಿತವಾಗಿಯೂ, ಕೆಂಪಾಗಿಯೂ, ಇದ್ದ "ಕರ್ಣಿ" ಯೆಂಬ ಒಂದು ಕವಲು ಬಾಣದಿಂದ ಹೊಡೆದನು. ದೃಢಧನುರ್ಧಾರಿಯಾದ ಅರ್ಜುನನ ಸರ್ವವೇಗದಿಂದ ಬಿಡಲ್ಪಟ್ಟ ಆ ತೀಕ್ಷ್ಣಬಾಣವು ಕರ್ಣನ ಕವಚವನ್ನು ಭೇದಿಸಿಕೊಂಡು, ದೇಹದಲ್ಲಿ ಹೊಕ್ಕು, ಅದರಿಂದಾಚೆಗೆ ಭೂಮಿಯಲ್ಲಿಯೂ ನಾಟಿಕೊಂಡಿತು. ಆಮೇಲೆ ಅರ್ಜುನನು ನಾಲ್ಕು ಕ್ಷುರಾಯುಧಗಳಿಂದ ಕರ್ಣನ ನಾಲ್ಕು ಕುದುರೆಗಳನ್ನು ಹೊಡೆದನು. ಒಂದು ಬಾಣದಿಂದ ಅವನ ಸಾರಥಿಯ ತಲೆಯನ್ನು ಕೆಳಕ್ಕೆ ಕೆಡಹಿದನು. ಒಂದು ಅರ್ಧಚಂದ್ರ ಬಾಣದಿಂದ ಅವನ ಕೈಯಲ್ಲಿದ್ದ ಧನುಸ್ಸನ್ನು ಕತ್ತರಿಸಿದನು. ಸರ್ವಶಾಸ್ತ್ರವಿಶಾರದನೆನಿಸಿಕೊಂಡು, ಮಹಾಪ್ರಭಾವವುಳ್ಳ ಆ ಕರ್ಣನಿಗೆ ರಥವೂ, ಕುದುರೆಗಳೂ, ಸಾರಥಿಯೂ, ಕೈಯಲ್ಲಿದ್ದ ಧನುಸ್ಸೂ ಹೋದುದನ್ನು ನೋಡಿ, ಸೈನ್ಯಗಳೆಲ್ಲವೂ ಭಯಪಟ್ಟು ಚದರಿಹೋಯಿತು. ಅನೇಕ ಸೈನ್ಯವು ನಷ್ಟವೂ ಆಯಿತು.

ಇದು ಐವತ್ತೇಳನೆಯ ಅಧ್ಯಾಯವು.

ಅರ್ಜುನನು ವಿಕರ್ಣಾದಿಗಳನ್ನೋಡಿಸಿ, ಕರ್ಣನ ತಮ್ಮನನ್ನು ಕೊಂದುದು. ಕರ್ಣನು ಪರಾಜಿತನಾಗಿ ರಣರಂಗವನ್ನು ಬಿಟ್ಟು ಹೋದುದು.

ಜನಮೇಜಯರಾಜಾ! ಕೇಳು! ಹೀಗೆ ಅರ್ಜುನನಿಂದ ಪರಾಜಿತವಾಗಿ ಭಯಪಟ್ಟು ಓಡಿಹೋದ ಸೈನ್ಯವೆಲ್ಲವೂ ಮಹಾಪ್ರವಾಹದಂತೆ ಕೂಗಿಡುತ್ತ, ಭೀಷ್ಮನ ಬಳಿಗೆ ಓಡಿಹೋಗಿ, ಸಮುದ್ರವೇಗವು ಅದರ ತೀರದಲ್ಲಿ ತಡೆದು ನಿಲ್ಲುವಂತೆ ಅಲ್ಲಿ ನಿಂತುಹೋಯಿತು. ಆಗ ಭೀಷ್ಮನು ಆ ಸೈನ್ಯಕ್ಕೆಲ್ಲ ಧೈರ್ಯವನ್ನು ಹೇಳಿ, ತಿರುಗಿ ಅವೆಲ್ಲವನ್ನೂ ಒಂದಾಗಿ ಸೇರಿಸಿಟ್ಟನು. ಯುದ್ಧವಿದ್ಯೆಯಲ್ಲಿ ನಿಪುಣನೂ, ಎಂತವರಿಗೂ ದುರ್ಜಯನೂ ಆದ ಆ

ಭೀಷ್ಮನು, ಶತ್ರುಸೈನ್ಯಕ್ಕೆ ಅಭೇದ್ಯವಾಗುವಂತೆ ರಥ ಗಜ ತುರಗಗಳನ್ನೆಲ್ಲ ವ್ಯೂಹರೂಪವಾಗಿ ಜೋಡಿಸಿ, ಒಳ್ಳೇ ಶೂರರನ್ನು ಅಲ್ಲಲ್ಲಿ ಕಾವಲಿಟ್ಟನು. ಕೃಪ, ಕರ್ಣ, ದ್ರೋಣ, ದುರ್ಯೋಧನರೊಡನೆ ತಾನೂ ಅದಕ್ಕೆ ರಕ್ಷಕನಾಗಿ ನಿಂತನು. ಆ ಸೈನ್ಯವನ್ನು ಬೇರೊಬ್ಬರಿಂದ ಚದರಿಸುವುದಕ್ಕಾಗಲಿ, ಅದರಲ್ಲಿ ಪ್ರವೇಶಿಸುವುದಕ್ಕಾಗಲಿ ಸಾಧ್ಯವಿಲ್ಲದಂತೆ ಮಾಡಿಟ್ಟನು. ಹೀಗೆ ಕೌರವಸೈನ್ಯವು ವ್ಯೂಹವಾಗಿ ಕಟ್ಟಲ್ಪಟ್ಟಿರುವುದನ್ನೂ, ಅಲ್ಲಲ್ಲಿ ಎತ್ತರವಾದ ಧ್ವಜಗಳು ಮೇಲೇರಿಸಲ್ಪಟ್ಟಿರುವುದನ್ನೂ ನೋಡಿ ಅತ್ತಲಾಗಿ ಅರ್ಜುನನು ಉತ್ತರನೊಡನೆ ಹೀಗೆಂದು ಹೇಳುವನು. "ಉತ್ತರಾ! ಜಾಗರೂಕನಾಗಿರು! ಕುದುರೆಗಳ ಹಗ್ಗವನ್ನು ಬಲವಾಗಿ ಹಿಡಿದು, ಎಚ್ಚರದಿಂದ ಕುದುರೆಗಳನ್ನು ಮುಂದಕ್ಕೆ ಬಿಡು! ಮುಂದೆ ಚೆನ್ನಾಗಿ ಗಮನಿಸಿ ನೋಡುತ್ತಿರು. ಈಗ ನಾನು ತಿರುಗಿ ಕರ್ಣನೊಡನೆ ಯುದ್ಧಕ್ಕೆ ನಿಲ್ಲುವೆನು. ಅದೋ! ಅಲ್ಲಿ ನೋಡು! ಆ ರಥದಮೇಲಿನ ಧ್ವಜಸ್ತಂಭದಲ್ಲಿ, ಬಹಳ ಅಂದವಾಗಿ, ನಾನಾಬಗೆಯಲ್ಲಿ ಚಿತ್ರಿತವಾಗಿ, ಅಗ್ನಿಯಂತೆ ಪ್ರಕಾಶವಿಶಿಷ್ಟವಾದ ಆನೆಯನ್ನು ಕಟ್ಟುವ ಸರಪಳಿಯು ಆಡುತ್ತಿರುವುದು ನೋಡು. ಅಲ್ಲಿರುವುದೇ ಆ ಕರ್ಣನ ಪ್ರಬಲವಾದ ಸೈನ್ಯವು. ಚೆನ್ನದ ಕುಚ್ಚುಳ್ಳ ಹಗ್ಗಗಳಿಂದ ಅಲಂಕೃತಗಳಾದ ನಮ್ಮ ಬಿಳೀರಥಾಶ್ವಗಳನ್ನು ಬೇಗನೆ ಅಲ್ಲಿಗೆ ಬಿಡು. ಅಲ್ಲಿ ನಾನು ಈಗ ನನ್ನ ಯಾವಚ್ಛಕ್ತಿಯನ್ನೂ ತೋರಿಸುವೆನು ನೋಡು. ಅಲ್ಲಿರುವ ರಥಿಕವೀರರ ಗುಂಪಿನಿಂದ ನಮ್ಮ ರಥವನ್ನು ನಡೆಸು. ಸೂತಪುತ್ರನಾದ ಆ ಕರ್ಣನು, ಆನೆಯು ಆನೆಯೊಡನೆಯೇ ಹೋರಾಡುವುದಕ್ಕೆ ಹೋಗುವಂತೆ, ಯಾವಾಗಲೂ ನನ್ನೊಡನೆಯೇ ಯುದ್ಧವನ್ನಪೇಕ್ಷಿಸುತ್ತಿರುವನು. ದುರ್ಯೋಧನನ ಆಶ್ರಯ ಬಲದಿಂದ ಕೊಬ್ಬಿದ ಆ ಸೂತಪುತ್ರನ ಬಳಿಗೆ ಬೇಗನೆ ರಥವನ್ನು ಬಿಡು. ಮೊದಲು ಅವನನ್ನು ನಾನು, ಇಂದ್ರನು ವೃತ್ರನನ್ನು ಹೇಗೋಹಾಗೆ ಆ ರಥಮಧ್ಯದಲ್ಲಿಯೇ ಕೆಳಕ್ಕುರುಳಿಸುವೆನು" ಎಂದನು. ಈ ಮಾತನ್ನು ಕೇಳಿದೊಡನೆ ಉತ್ತರನು, ವೇಗಶಾಲಿಗಳಾದ ಕುದುರೆಗಳನ್ನು ತಟ್ಟಿ, ಮುಂದಿದ್ದ ರಥಸೈನ್ಯವನ್ನೆಲ್ಲ ಭೇದಿಸಿಕೊಂಡು, ಅರ್ಜುನನನ್ನು ಮುಂದಕ್ಕೆ ತಂದು ಬಿಟ್ಟನು. ಹೀಗೆ ಅರ್ಜುನನು ಉಗ್ರತೇಜಸ್ಸಿನಿಂದ ಕರ್ಣನನ್ನು ಇದಿರಿಸಿ

ಬರುವುದನ್ನು ನೋಡಿ, ಅನೇಕ ರಥವೀರರು ಗುಂಪಾಗಿ ಸೇರಿಕೊಂಡು, ಹುಲಿಯ ಬಾಯಿಗೆ ಸಿಕ್ಕಿಬಿದ್ದ ಎತ್ತನ್ನು ಹೇಗೋಹಾಗೆ, ಆ ಕರ್ಣನನ್ನು ಅಪಾಯದಿಂದ ರಕ್ಷಿಸುವುದಕ್ಕಾಗಿ ಆತುರದಿಂದ ಮುಂದುಬಿದ್ದು ಬಂದರು. ಒಳ್ಳೇ ಯೌವನಬಲವುಳ್ಳ ಚಿತ್ರಾಂಗದನು, ಚಿತ್ರರಥನು, ಸಂಗ್ರಾಮಜಿತ್ತು, ದುಸ್ಸಹನು, ಚಿತ್ರಸೇನನು, ವಿವಿಂಶತಿ, ದುರ್ಮುಖನು, ದುರ್ಜಯನು, ವಿಕರ್ಣನು, ದುಶ್ಶಾಸನನು, ಶಕುನಿ, ಶೋಣನು, ನಿಷೇಧನು, ಮುಂತಾದವರೆಲ್ಲ ಒಟ್ಟಾಗಿ ಕರ್ಣನ ಬೆಂಬಲಕ್ಕಾಗಿ ಓಡಿಬಂದರು. ಮಹಾಬಲಾಢ್ಯರಾದ ರಾಜಪುತ್ರರೆಲ್ಲ ಅರ್ಜುನನು ಕರ್ಣನಮೇಲೆ ಯುದ್ಧಕ್ಕೆ ಬರುವುದನ್ನು ಕಂಡೊಡನೆ, ತಮ್ಮತಮ್ಮ ಸಹೋದರರೆಲ್ಲರನ್ನೂ ಕೂಡಿಸಿಕೊಂಡು ಬಿಲ್ಲು ಬಾಣಗಳನ್ನು ಹಿಡಿದು, ಅರ್ಜುನನಮೇಲೆ ಬಾಣಜ್ವಾಲೆಗಳನ್ನು ನಾನಾಕಡೆಗಳಿಂದ ಸುರಿಯತೊಡಗಿದರು. ಅತ್ತಲಿಂದ ಅರ್ಜುನನೂ ಕೂಡ, ನಾಣೆಂಬ ತಂತಿಗಳಿಂದಲೂ, ಪ್ರಾಸಗಳೆಂಬ ಉಪವೀಣೆಗಳಿಂದಲೂ ಬಾಣಸಮೂಹಗಳೆಂಬ ಕೋಣ (ವಾದ್ಯವನ್ನು ನುಡಿಸುವ ಸಾಧನ) ಗಳಿಂದಲೂ, ಕೈಗಳೆಂಬ ಬಿರಡೆಗಳಿಂದಲೂ, ಬಿಲ್ಲೆಂಬ ದಂಡಿಯಿಂದಲೂ ಕೂಡಿದ ವೀಣೆಯನ್ನು ಶತ್ರುಗಳನಡುವೆ ನುಡಿಸುತಿದ್ದನು. ಹೀಗೆ ದೊಂಬಿಯುದ್ಧವು ನಡೆಯುತ್ತಿರುವಾಗ, ವಿಕರ್ಣನು ಭಯಂಕರವಾದ ತನ್ನ ರಥವನ್ನು ಮುಂದೆ ಬಿಟ್ಟುಕೊಂಡು, ಬಾಣವರ್ಷವನ್ನು ಕರೆಯುತ್ತ ಅರ್ಜುನನನ್ನು ಇದಿರಿಸಿದನು. ಒಡನೆಯೇ ಅರ್ಜುನನು ಚಿನ್ನದ ಕಟ್ಟುಗಳಿಂದಲೂ, ದೃಢವಾದ ಹೆದೆಯಿಂದಲೂ ಕೂಡಿದ ಆ ವಿಕರ್ಣನ ಧನುಸ್ಸನ್ನು ಕತ್ತರಿಸಿ, ಅವನ ಧ್ವಜವನ್ನು ಮುರಿದುಹಾಕಲು, ವಿಕರ್ಣನು ವೇಗದಿಂದ ಹಿಂದೆ ಸರಿದು ಓಡಿಹೋದನು. ಹೀಗೆ ಅತಿಮಾನುಷಕೃತ್ಯಗಳನ್ನು ತೋರಿಸುತ್ತ ಶತ್ರುಗಳನ್ನು ಗುಂಪುಗುಂಪಾಗಿ ಓಡಿಸುತ್ತಿರುವ ಅರ್ಜುನನ ವೀರ್ಯವನ್ನು ನೋಡಿ ಸಹಿಸಲಾರದೆ, ಶತ್ರುಂತಪನೆಂಬವನು ಕೂರ್ಮನಖವೆಂಬ ಬಾಣದಿಂದ ಅರ್ಜುನನನ್ನು ಹೊಡೆದನು. ಶತ್ರುಂತಪನ ಬಾಣದಿಂದ ನೊಂದ ಅರ್ಜುನನು, ವೀರಾವೇಶದಿಂದ ಶತ್ರುಸೈನ್ಯದ ನಡುವೆ ಪ್ರವೇಶಿಸಿ, ಆ ಶತ್ರುಂತಪನನ್ನು ಐದು ಬಾಣಗಳಿಂದಲೂ, ಅವನ ಸಾರಥಿಯನ್ನು ಹತ್ತು ಬಾಣಗಳಿಂದಲೂ ಹೊಡೆದನು. ಅರ್ಜುನನ ಬಾಣವು ಯುದ್ಧಕವಚ

ವನ್ನೂ ಭೇದಿಸಿಕೊಂಡು, ಮೈಯಲ್ಲಿ ನಾಟಲು, ಶತ್ರುಂತಪನು ಒಡನೆಯೇ ಗತಪ್ರಾಣನಾಗಿ, ಬಿರುಗಾಳಿಯ ಬಡಿತಕ್ಕೆ ಸಿಕ್ಕಿ ಬೆಟ್ಟದಮೇಲಿಂದ ಕೆಳಕ್ಕೆ ಮುರಿದುಬಿಳುವ ದೊಡ್ಡ ಮರದಂತೆ ಕೆಳಕ್ಕೆ ಬಿದ್ದುಬಿಟ್ಟನು. ಹೀಗೆ ರಥಿಕೋತ್ತಮನಾದ ಅರ್ಜುನನ ಪ್ರಹಾರದಿಂದ ನೊಂದ ಮಹಾರಥಿಕರೆಲ್ಲರೂ, ಪ್ರಳಯಕಾಲದಲ್ಲಿ ಮಹಾವಾತಕ್ಕೆ ಸಿಕ್ಕಿದ ಅರಣ್ಯದಂತೆ ಭಯದಿಂದ ನಡುಗಿಹೋದರು. ಇಂದ್ರಪುತ್ರನಾದ ಆ ಅರ್ಜುನನಿಂದ ಪತರಾದ ಅನೇಕ ವೀರರು, ಭೂಷಣಾಲಂಕೃತಗಳಾದ ತಮ್ಮ ಶರೀರಗಳೊಡನೆಯೂ, ಸುವರ್ಣಚಿತ್ರಿತಗಳಾದ ಉಕ್ಕಿನ ಕವಚಗಳೊಡನೆಯೂ ನೆಲಕ್ಕುರುಳುತಿದ್ದರು. ಹಿಮವತ್ಪರ್ವತದ ಕಾಡಿನಲ್ಲಿ ಚೆನ್ನಾಗಿ ಕೊಬ್ಬಿ ಬೆಳೆದ ಆನೆಗಳಂತೆ ರಣರಂಗದಲ್ಲಿ ಬಿದ್ದು ತಿರುಗಿ ಏಳದಂತೆ ದೀರ್ಘನಿದ್ರೆ ಮಾಡಿದರು. ಹೀಗೆ ಅರ್ಜುನನು ಶತ್ರುಗಳನ್ನು ಕೊಲ್ಲುತ್ತ ಬೇಸಗೆಯ ಕೊನೆಯಲ್ಲಿ ಕಾಡುಗಳನ್ನು ದಹಿಸುವ ಕಾಡುಗಿಚ್ಚಿನಂತೆ ರಣರಂಗದಲ್ಲಿ ಶತ್ರುದುಸ್ಸಹವಾದ ತೇಜಸ್ಸಿನಿಂದ ದಿಕ್ಕು ವಿದಿಕ್ಕುಗಳಲ್ಲೆಲ್ಲ ತಾನೇ ತಾನಾಗಿ ಸಂಚರಿಸುತಿದ್ದನು. ವಸಂತಕಾಲದಲ್ಲಿ ಬಿರುಗಾಳಿಯೆದ್ದು, ತರಗೆಲೆಗಳನ್ನೂ, ನೆಲದ ಧೂಳನ್ನೂ ಆಕಾಶಕ್ಕೆ ಹೊಡೆದುಕೊಂಡು ಹೋಗುವಂತೆ ಅತಿರಥನಾದ ಆ ಅರ್ಜುನನು ರಥಸ್ಥನಾಗಿಯೇ ಶತ್ರುಗಳನ್ನು ತನ್ನ ಬಾಣಗಳಿಂದ ತೂರಿಬಿಡುತಿದ್ದನು. ಮತ್ತು ಆ ಕಿರೀಟಿಯು, ಕರ್ಣನ ಒಡಹುಟ್ಟಿದವನೂ, ಕೆಂಪುಬಣ್ಣದ ರಥಾಶ್ವವುಳ್ಳವನೂ ಆದ ಸಂಗ್ರಾಮಜಿತ್ತೆಂಬವನ ತಲೆಯನ್ನು ಒಂದೇ ಬಾಣದಿಂದ ಕತ್ತರಿಸಿ ಕೆಡಹಿದನು. ತನ್ನ ಸಹೋದರನ ಸಾವನ್ನು ಕಂಡೊಡನೆ ವೀರ್ಯಮದದಿಂದ ಕೊಬ್ಬಿದ ಕರ್ಣನು, ಸಿಂಹವನ್ನಿದಿರಿಸುವುದಕ್ಕಾಗಿ ಉದ್ದವಾದ ಕೊಂಬುಗಳೊಡನೆ ಮುಂದೆ ನುಗ್ಗುವ ಮಹಾ ಗಜದಂತೆ ಅರ್ಜುನನನ್ನು ಇದಿರಿಸಿ ಬಂದು, ಹನ್ನೆರಡು ಬಾಣಗಳಿಂದ, ಅರ್ಜುನನನ್ನೂ, ಅವನ ಎಲ್ಲಾ ಕುದುರೆಗಳನ್ನೂ, ಸಾರಥಿಯಾದ ಉತ್ತರನನ್ನೂ ಪ್ರಹರಿಸಿದನು. ಆದರೇನು? ಇಷ್ಟರಲ್ಲಿಯೇ ಮಹಾ ಧನುರ್ಧಾರಿಯಾದ ಅರ್ಜುನನು ತನ್ನ ಬಾಣಗಳಿಂದ ಕರ್ಣನ ವೈಯನ್ನೆಲ್ಲ ಮುಚ್ಚಿ, ಶತ್ರುಗಳನ್ನೆಲ್ಲ ಮುಂದೆ ಬಾರದಂತೆ ತಡೆದು ನಿಲ್ಲಿಸಿದನು. ಮತ್ತು ಆ ಕಿರೀಟಿಯು ಆ ಕರ್ಣನಿಗೆ ಹಿಂದೆ ಮುಂದೆ ಬೆಂಗಾವಲಾಗಿ ಬರುತ್ತಿದ್ದ ಸೈನಿಕರನ್ನೆಲ್ಲ ಕೊಂದು, ಸರ್ವ

ವನ್ನು ಹಿಡಿಯುವುದಕ್ಕಾಗಿ ರೆಕ್ಕೆಗಳನ್ನು ಬಿಚ್ಚಿಕೊಂಡು ಬರುವ ಗರುಡ ನಂತೆ ವೇಗದಿಂದ ಕರ್ಣನನ್ನು ಸಮೀಪಿಸಿದನು. ಎಲ್ಲಾ ಧನುರ್ಧಾರಿಗಳಲ್ಲಿ ಮೇಲೆನಿಸಿಕೊಂಡವರೂ, ಮಹಾಬಲಾಢ್ಯರೂ, ಎಂತಹ ಶತ್ರುಗಳಿಗೂ ಹಿಂಜರಿಯದೆ ಎದೆಗೊಟ್ಟು ನಿಲ್ಲತಕ್ಕವರೂ ಆದ ಕರ್ಣಾರ್ಜುನರಿಬ್ಬರೂ ಕೈ ಕಲೆತಿರುವುದನ್ನು ನೋಡಿ, ಅವರ ಯುದ್ಧವನ್ನು ನೋಡುವ ಕುತೂಹಲದಿಂದ, ಸೇನೆಯೆಲ್ಲ ಯುದ್ಧಕಾರ್ಯವನ್ನು ಬಿಟ್ಟು ಸುಮ್ಮನೆ ನಿಂತುಬಿಟ್ಟಿತು. ಒಡನೆಯೇ ಅರ್ಜುನನು, ತಮ್ಮಲ್ಲಿ ಯಾವಾಗಲೂ ವೈರವನ್ನೇ ಬೆಳೆಸತಕ್ಕ ವನೂ, ಕೋಪಸ್ವಭಾವಪ್ರಕೃತಿಯವನೂ ಆದ ಕರ್ಣನನ್ನು ಕೋಪದಿಂದ ನೋಡುತ್ತ, ಮೇಘವು ಪ್ರಬಲವಾದ ಮಳೆಯನ್ನು ಕರೆಯುವಂತೆ ಬಾಣವರ್ಷದಿಂದ ಆ ಕರ್ಣನನ್ನೂ, ಅವನ ರಥವನ್ನೂ, ರಥಾಶ್ವಗಳನ್ನೂ, ಸಾರಥಿಯನ್ನೂ ಕ್ಷಣಮಾತ್ರದಲ್ಲಿ ಮುಚ್ಚಿಬಿಟ್ಟನು. ಹೀಗೆ ಬಾಣವರ್ಷದಿಂದ ಕರ್ಣನ ರಥವು ಇವ್ವ ಕಡೆಯೇ ತಿಳಿಯದಂತೆ ಮರೆಸಿಹೋದುದನ್ನು ನೋಡಿ, ಕೌರವಸೈನ್ಯದಲ್ಲಿದ್ದ ಭೀಷ್ಮಾದಿ ವೀರರು, ತಮ್ಮ ರಥ, ರಥಾಶ್ವ, ಗಜ ಸೈನ್ಯಗಳೊಡನೆ, ಆತುರದಿಂದ ಹಾಹಾಕಾರಗಳನ್ನು ಮಾಡುತ್ತ ಮುಂಬಿ ಬಂದರು. ಆವಲೆ, ಇಷ್ಟರಲ್ಲಿಯೇ ಮಹಾ ಬಲಶಾಲಿಯಾದ ಕರ್ಣನು, ತನ್ನ ಬಾಣಗಳಿಂದ ಅರ್ಜುನನ ಬಾಣಗಳೆಲ್ಲವನ್ನೂ ನಿಗ್ರಹಿಸಿ, ಕಿಡಿಗಳನ್ನುರಚುವ ಬೆಂಕಿಯಂತೆ ಧನುರ್ಬಾಣಗಳೊಡನೆ ನಿಂತು, ವೀರ್ಯದಿಂದ ಜ್ವಲಿಸುವಂತಿದ್ದನು. ಇದನ್ನು ನೋಡಿ ಕೌರವಸೈನ್ಯದಲ್ಲಿ ನಾನಾ ಕಡೆಗಳಿಂದ ಕರತಾಳಧ್ವನಿಗಳೂ, ಶಂಖ, ಭೇರೀ ಪಣವಾದಿ ವಾದ್ಯಘೋಷಗಳೂ, ಸಂತೋಷಸಿಂಹನಾದಗಳೂ, ಗರ್ಜನೆಗಳೂ ತೋಳುಗಳನ್ನು ತಟ್ಟುವ ಧ್ವನಿಯೂ ಪ್ರಬಲವಾಯಿತು. ಎಲ್ಲರೂ "ಭಲೆ ಭಲೆ" ಎಂದು ಕರ್ಣನನ್ನು ಕೊಂಡಾಡುತ್ತಿದ್ದರು. ಆಮೇಲೆ ಕರ್ಣನು, ಬಾಲವನ್ನಾಡಿಸುತ್ತಿರುವ ಕಪಿಧ್ವಜದಿಂದಲೂ, ಗಾಂಡೀವಧನುಷ್ಟಂಕಾರದಿಂದಲೂ ಇದಿರಾಗುತ್ತಿರುವ ಅರ್ಜುನನ ರಥವನ್ನೂ, ಅರ್ಜುನನನ್ನೂ ನೋಡಿ ಒಂದಾವರ್ತಿ ಗರ್ಜಿಸಿದನು. ಅರ್ಜುನನು ಕೂಡ ಕರ್ಣನ ಗರ್ಜನೆಯನ್ನು ಕೇಳಿ ಅವನ ರಥಾಶ್ವ, ಧ್ವಜ ಸಾರಥಿಗಳೊಡನೆ ಅವನನ್ನೂ ಬಾಣಗಳಿಂದ ಪ್ರಹರಿಸಿ, ಭೀಷ್ಮ, ದ್ರೋಣ, ಕೃಪರನ್ನು ನೋಡಿ ಸಂತೋಷದಿಂದ ಸಿಂಹನಾದ

ಮಾಡಿದನು. ಇತ್ತಲಿಂದ ಕರ್ಣನೂ, ಅತ್ತಲಿಂದ ಅರ್ಜುನನೂ ಒಬ್ಬರ ಮೇಲೊಬ್ಬರು ತೀಕ್ಷ್ಣಬಾಣಗಳನ್ನು ಪ್ರಯೋಗಿಸಿ, ಅವರಿದ್ದ ಕಡೆಯೇ ತಿಳಿಯದಂತೆ ಮರೆಸುತ್ತಿದ್ದರು. ಅಸ್ತ್ರಜ್ಞರಾದ ಅವರಿಬ್ಬರೂ ಹೀಗೆ ಬಾಣವರ್ಷಗಳಿಂದ ಮಾಡುವ ಯುದ್ಧವು ನೋಡುವವರಿಗೆ ಭಯಂಕರವಾಗಿ ಕಾಣಿಸಿತು. ಕ್ಷಣಮಾತ್ರದಲ್ಲಿಯೇ ಅವರಿಬ್ಬರೂ ಪ್ರತಿಬಾಣಗಳನ್ನು ತಮ್ಮ ಬಾಣಗಳಿಂದ ನಿವಾರಿಸಿ, ರಾಹುವಿನಿಂದ ಮುಕ್ತರಾದ ಚಂದ್ರಸೂರ್ಯರಂತೆ ಜನಗಳಿಗೆ ಕಾಣಿಸಿಕೊಂಡರು. ಅರ್ಜುನನ ಬಾಣದಿಂದ ಹತರಾದ ಅನೇಕ ರಥಿಕರು, ಸುವರ್ಣಮಯವಾದ ತಮ್ಮ ಉಕ್ಕಿನ ಕವಚಗಳೊಡನೆ, ಹಿಮವತ್ಪರ್ವತದಲ್ಲಿ ಕತ್ತರಿಸಿಬಿದ್ದ ಮರಗಳಂತೆ ನೆಲಕ್ಕುರುಳಿಬಿದ್ದರು. ಹೀಗೆ ಅರ್ಜುನನು ಯುದ್ಧದಲ್ಲಿ ಶತ್ರುಗಳನ್ನು ಹೊಡೆದು ಕೆಡಹುತ್ತಾ, ಕಾಡಿನಲ್ಲಿ ದಾವಾಗ್ನಿಯಂತೆ ಯುದ್ಧರಂಗದಲ್ಲಿ ದಿಕ್ಕುವಿದಿಕ್ಕುಗಳಲ್ಲೆಲ್ಲಾ ತಡೆಯಿಲ್ಲದೆ ಸಂಚರಿಸುತ್ತಿದ್ದನು. ಇಂದ್ರನು ತನ್ನ ವೈರಿಗಳಾದ ದಾನವರನ್ನು ಹೇಗೋ ಹಾಗೆ ಅನೇಕ ರಥಿಕರನ್ನು ರಣರಂಗದಿಂದೋಡಿಸಿ, ಇನ್ನೂ ಉಳಿದ ಶತ್ರುಸೈನಿಕರನ್ನು ಬಾಣವರ್ಷದಿಂದ ಮರೆಸುತ್ತಿದ್ದನು. ಆಮೇಲೆ ಅರ್ಜುನನು ಉತ್ಸಾಹದಿಂದ ಗರ್ಜಿಸುತ್ತಾ ಕರ್ಣನನ್ನು ನೋಡಿ, "ಓ ಕರ್ಣಾ! ಹಿಂದೆ ನೀನು ಸಭಾಮಧ್ಯದಲ್ಲಿ 'ಯುದ್ಧದಲ್ಲಿ ನನಗೆ ಸಮಾನರಿಲ್ಲ' ವೆಂದು ಅಸಂಬದ್ಧವಾದ ಎಷ್ಟೋ ಮಾತುಗಳನ್ನಾಡಿದೆಯಲ್ಲವೇ? ಈಗ ಅದರ ನಿಜವನ್ನು ತಿಳಿಯತಕ್ಕ ಕಾಲವು ಬಂದಿದೆ. ಸಭೆಯಲ್ಲಿ ಅಷ್ಟೊಂದು ಪೌರುಷವನ್ನು ಹೇಳಿ, ಧರ್ಮಮಾರ್ಗವನ್ನು ಬಿಟ್ಟು, ನೀನು ಯಾವ ಕಾರ್ಯವನ್ನು ಮಾಡಬೇಕೆಂದಿರುವೆಯೋ, ಅದು ನಿನ್ನಿಂದ ಸಾಗಲಾರದೆಂದು ನನಗೆ ಚೆನ್ನಾಗಿ ತಿಳಿದಿದೆ. ಹಿಂದೆ ನೀನು ಕುರುಗಳ ಮುಂದೆ ಯುದ್ಧದಲ್ಲಿ ನನಗೆ ಸಾಟಿಯಿಲ್ಲನೆಂದು ಹೇಳಿದ ಮಾತನ್ನು ಈಗ ನನ್ನೊಡನೆ ಯುದ್ಧದಲ್ಲಿ ಸತ್ಯವಾಗಿ ಮಾಡು. ಓ ರಾಧೇಯಾ! ಹಿಂದೆ ದ್ಯೂತಸಭೆಯಲ್ಲಿ ನಿನ್ನಿಂದ ಕಷ್ಟಕ್ಕೊಳಗಾಗಿಸಲ್ಪಟ್ಟಿದ್ದ ಪಾಂಚಾಲಿಯನ್ನು ನಾನೂ ಕಣ್ಣಾರೆ ನೋಡಿದ್ದೆನು. ಆಗ ನಾನು ಧರ್ಮಪಾಶಕ್ಕೆ ಕಟ್ಟುಬಿದ್ದು ಸಹಿಸಬೇಕಾಯಿತು. ಆ ಪಾಪಕ್ಕೆ ಈಗ ಫಲವನ್ನು ಹೊಂದುವೆ ಕರ್ಣಾ! ಮುಂದೆ ಬಾ! ನನ್ನೊಡನೆ ಯುದ್ಧಮಾಡು. ಈ ಕುರುಗಳೆಲ್ಲರೂ ತಮ್ಮ

ಸೈನ್ಯಗಳೊಡನೆ ನಮ್ಮ ಯುದ್ಧವನ್ನು ನೋಡಲಿ. ಸ್ವಲ್ಪ ಮೊದಲು ನೀನು ನನಗೆ ಹೆದರಿ ರಣರಂಗದಿಂದ ಓಡಿಹೋದವನಲ್ಲವೇ? ಹೀಗೆ ಅವಮಾನಿತನಾಗಿ, ತಮ್ಮನು ಸತ್ತುದನ್ನೂ ಕಣ್ಣಾರೆ ನೋಡಿ, ಇನ್ನೂ ನೀನು ಬದುಕಿರುವೆಯಲ್ಲಾ. ನೀನು ಹೊರತು ಬೇರೆ ಯಾವನುತಾನೇ ಇಂತಹ ಅವಮಾನಕ್ಕೀಡಾಗಿ ಸಾಧುಗಳ ಮುಂದೆ ತನಗೆ ಸಮಾನನಿಲ್ಲವೆಂದು ಹೇಳಿಕೊಳ್ಳುವನು" ಎಂದನು. ಅದಕ್ಕಾ ಕರ್ಣನು, "ಓ ಪಾರ್ಥಾ! ಬರೀ ಮಾತುಗಳಿಂದೇನು? ಅದನ್ನು ಕಾರ್ಯದಲ್ಲಿ ನಡೆಸು. ನೀನು ಮಾತಿನಲ್ಲಿ ನನಗಿಂತಲೂ ನಿಪುಣನೇ. ಆದರೆ ಕಾರ್ಯದಲ್ಲಿಲ್ಲ. ಹಿಂದೆ ನೀನು ಸಹನವನ್ನು ವಹಿಸಿದುದೆಲ್ಲವೂ ಕೈಲಾಗದಿದ್ದುದಕ್ಕಾಗಿಯೇ ಹೊರತು ಬೇರೆಯಲ್ಲ. ನೀನು ಧರ್ಮಪಾಶಕ್ಕೆ ಕಟ್ಟುಬಿದ್ದು ಸುಮ್ಮನಿರಬೇಕಾಯಿತೆಂದು ಹೇಳಿದೆಯಲ್ಲವೇ? ಈಗಲೂ ನೀನು ಅದೇ ಪಾಶಕ್ಕೆ ಬದ್ಧನಾಗಿದ್ದರೂ ಬದ್ಧನಲ್ಲವೆಂದು ತಪ್ಪಾಗಿ ತಿಳಿದುಕೊಂಡಿರುವೆ. ನೀನು ಪ್ರತಿಜ್ಞೆಮಾಡಿದಂತೆ ನಿನ್ನ ವನವಾಸಕಾಲವನ್ನು ಇನ್ನೂ ಸರಿಯಾಗಿ ಮುಗಿಸಿಲ್ಲ. ಅನೇಕ ಕಷ್ಟವನ್ನನುಭವಿಸಿದ ನೀನು ಹಣದಾಸೆಯಿಂದ ಈಗ ಪ್ರತಿಜ್ಞಾಭಂಗಕ್ಕೆ ಪ್ರಯತ್ನಿಸಿರುವೆ. ಓ ಪಾರ್ಥಾ! ಇಂದ್ರನೇ ಸಾಕ್ಷಾತ್ತಾಗಿ ಬಂದು ನಿನಗಾಗಿ ಯುದ್ಧಕ್ಕೆ ನಿಂತರೂ, ಪರಾಕ್ರಮಿಯಾದ ನಾನು ಹಿಂಜರಿಯುವವನಲ್ಲ. ಅರ್ಜುನಾ! ನೀನು ಉದ್ದೇಶಿಸಿದ ಕಾರ್ಯವು ಸಮಾಪ್ತಿಸಿತು. ನನ್ನೊಡನೆ ಯುದ್ಧಮಾಡು! ನಿನ್ನ ಬಲವನ್ನು ನೋಡುವೆನು' ಎಂದನು.

ಕರ್ಣನು, ಅರ್ಜುನನಿಗೆ ಹೀಗೆಂದು ಹೇಳಿ, ಉಕ್ಕಿನ ಕವಚಗಳನ್ನೂ ಭೇದಿಸತಕ್ಕ ತೀಕ್ಷ್ಣ ಬಾಣಗಳನ್ನು ಪ್ರಯೋಗಿಸುತ್ತ ಅರ್ಜುನನಿಗಿದಿರಾಗಿ ಹೋದನು. ಮಹಾರಥನಾದ ಅರ್ಜುನನೂಕೂಡ ಉತ್ಸಾಹದಿಂದಲೇ ಆ ಬಾಣಗಳನ್ನು ಪ್ರತಿಗ್ರಹಿಸಿ, ಮೇಘವು ದೊಡ್ಡ ಮಳೆಯನ್ನು ಕರೆಯುವಂತೆ ಬಾಣವರ್ಷವನ್ನು ಕರೆಯುತ್ತ ಗಾಂಡೀವಧ್ವನಿಯೊಡನೆ ಮುಂದೆ ಬಂದನು. ಕರ್ಣನನ್ನು ಕೊಲ್ಲಜೇಕೆಂದು ಅರ್ಜುನನು ಅನೇಕ ಬಾಣಗಳನ್ನು ಬಿಟ್ಟನು. ಪರ್ವತವು ವಾಯುವೇಗವನ್ನು ಹೇಗೋಹಾಗೆ ಕರ್ಣನು ಅವೆಲ್ಲವನ್ನೂ ತಡೆದು ನಿಂತನು. ದೇವಾಸುರರಿಗೆ ಹೇಗೋಹಾಗೆ

ಅವರಿಬ್ಬರಿಗೂ ಪ್ರಬಲ ಯುದ್ಧವು ನಡೆಯಿತು. ಅವರ ಬಾಣಗಳು ಆಕಾಶವನ್ನೆಲ್ಲ ನಿಬಿಡವಾಗಿ ತುಂಬಿತು. ಮೇಘಗಳೆಲ್ಲವೂ ನಾನಾಕಡೆಗೆ ಚದರಿದುವು. ಭೂಮಿಯಿಂದ ಪ್ರಬಲವಾದ ರಜೋವರ್ಷವು ಉಂಟಾಯಿತು. ಸೂರ್ಯನ ಕಾಂತಿಯು ಮರೆಸಿಹೋಯಿತು. ಗಾಳಿಯು ಬೀಸದಂತಾಯಿತು. ಆಕಾಶವೆಲ್ಲ ಬಾಣದಲ್ಲಿ ಮುಚ್ಚಿ ಕತ್ತಲೆ ಕವಿದಂತಾಯಿತು. ಗಾಂಡೀವಧ್ವನಿಯೂ, ಕರ್ಣನ ಬಿಲ್ಲಿನ ಧ್ವನಿಯೂ, ಕಾಡುಗಿಚ್ಚಿನಲ್ಲಿ ಬೇಯುವ ಬಿದುರು ಮೆಳೆಗಳ ಛಟಛಟಾತ್ಕಾರದಂತೆ ಭಯಂಕರನಾಗಿ ಕೇಳಿಸಿತು. ಅರ್ಜುನನು ಕುದುರೆಗಳನ್ನೂ, ಆನೆಗಳನ್ನೂ, ರಥಗಳನ್ನೂ ಕೆಡಹುತ್ತ, ಶತ್ರುಸೈನ್ಯವನ್ನೆಲ್ಲ ಕಲಕಿ, ಕರ್ಣನನ್ನು ಬಾಣಗಳಿಂದ ಹೊಡೆಯುತಿದ್ದನು. ಕರ್ಣನ ಕೈಯ್ಯಲ್ಲಿದ್ದ ಧನುಸ್ಸನ್ನೂ ಕತ್ತರಿಸಿದನು. ಧನುಸ್ಸು ಮುರಿದಮೇಲೆ ಕರ್ಣನು ಒಂದು ಶಕ್ತ್ಯಾಯುಧವನ್ನು ಪ್ರಯೋಗಿಸಿದನು. ಅದನ್ನೂ ಅರ್ಜುನನು ತೀಕ್ಷ್ಣಬಾಣಗಳಿಂದ ಭೇದಿಸಿದನು. ಆಮೇಲೆ ಕರ್ಣನಿಗೆ ಅಂಗರಕ್ಷಕರಾಗಿದ್ದ ಅನೇಕವೀರರು ನಾನಾಕಡೆಗಳಿಂದ ಮೇಲೆಬಿದ್ದು ಬರಲು, ಅವರನ್ನೂ ಅರ್ಜುನನು ಬಾಣಗಳಿಂದ ಯಮಪುರಿಗೆ ಕಳುಹಿಸಿದನು. ಅರ್ಜುನನ ಬಾಣಗಳಿಗಿದಿರಾಗಿ ಸಿಕ್ಕಿದ ಎಷ್ಟೋ ಆನೆಗಳು ನೆಲಕ್ಕುರುಳಿಬಿದ್ದುವು. ಚಿನ್ನದ ಹೊರಜಿಗಳೊಡನೆ ವಿಚಿತ್ರಬಾಣಗಳಿಂದ ನಾಟಿದ ದೇಹವುಳ್ಳ ಆನೆಗಳು, ಕಾಡುಗಿಚ್ಚು ಹತ್ತಿಕೊಂಡು ಉರಿಯುವ ಬೆಟ್ಟಗಳಂತೆ ಕಾಣುತ್ತಿದ್ದುವು. ಅರ್ಜುನನು ಮಾಡತಕ್ಕ ಈ ಅಮಾನುಷಕೃತ್ಯಗಳನ್ನು ನೋಡಿ ಸಹಿಸಲಾರದೆ ಕರ್ಣನು ಆ ಅರ್ಜುನನನ್ನೇ ಗುರಿಮಾಡಿ ಬಾಣಗಳನ್ನು ಬಿಡತೊಡಗಿದನು. ನಾಲ್ಕು ಬಾಣಗಳಿಂದ ಅರ್ಜುನನ ನಾಲ್ಕು ಕುದುರೆಗಳನ್ನು ಪ್ರಹರಿಸಿದನು. ಆರು ಬಾಣಗಳಿಂದ ಸಾರಥಿಯನ್ನೂ, ತಿರುಗಿ ಹತ್ತು ಬಾಣಗಳಿಂದ ಕುದುರೆಗಳನ್ನೂ, ಅರುವತ್ತು ಬಾಣಗಳಿಂದ ಅರ್ಜುನನ್ನೂ, ಮೂರು ಬಾಣಗಳಿಂದ ಧ್ವಜವನ್ನೂ ಹೊಡೆದನು. ಬಾಣಜ್ವಾಲೆಗಳೆಂಬ ಕಿಡಿಗಳಿಂದಲೂ, ಭಯಂಕರವಾದ ಘೋಷವೆಂಬ ಛಟಛಟತ್ಕಾರದಿಂದಲೂ, ಕೋಪವೆಂಬ ಕಟ್ಟಿಗೆಯಿಂದಲೂ, ಧ್ವಜವೆಂಬ ಶಿಖೆಯಿಂದಲೂ ಕೂಡಿದ ಕರ್ಣನೆಂಬ ಅಗ್ನಿಯು, ಅಸ್ತ್ರಗಳೆಂಬ ಗಾಳಿಯಿಂದ ಪ್ರಬಲವಾಗಿ, ಅರ್ಜುನನೆಂಬ ಪೊದೆಯನ್ನು ದಹಿಸು

ತ್ತಿರುವಂತೆ ಕಾಣಿಸಿತು. ಆದರೇನು? ಚಕ್ರನೇಮಿ ಧ್ವನಿ ಮತ್ತು ಶಂಖ ಧ್ವನಿಗಳೆಂಬ ಗುಡುಗುಗಳಿಂದಲೂ, ಧ್ವಜವೆಂಬ ಮಿಂಚಿನಿಂದಲೂ ಶಸ್ತ್ರಾಸ್ತ್ರಗಳೆಂಬ ವರ್ಷಧಾರೆಯಿಂದಲೂ ಕೂಡಿದ ಅರ್ಜುನನೆಂಬ ಮೇಘವು, ಕರ್ಣಾಗ್ನಿಯನ್ನು ಕ್ಷಣಮಾತ್ರದಲ್ಲಿ ಆರಿಸಿಬಿಟ್ಟಿತು. ಇಷ್ಟರಲ್ಲಿ ಕರ್ಣನ ಬಾಣಗಳಿಂದ ಬಹಳವಾಗಿ ನೊಂದ ಅರ್ಜುನನು, ಮಲಗಿದ್ದು ಎಚ್ಚರಗೊಂಡ ಸಿಂಹದಂತೆ ವೇಗದಿಂದೆದ್ದು, ಕರ್ಣನನ್ನು ತೀರಿಸಿಬಿಡಬೇಕೆಂದು ಆತುರಗೊಂಡನು. ಒಡನೆಯೇ ಬ್ರಹ್ಮದೇವತಾತ್ಮಕವಾದ ಒಂದು ಅಸ್ತ್ರವನ್ನು ಧ್ಯಾನಿಸಿ, ಕರ್ಣನ ರಥವನ್ನು ದಹಿಸುವಂತೆ ಬಾಣಗಳನ್ನು ಪ್ರಯೋಗಿಸುತ್ತಾ, ಸೂರ್ಯನು ಕಿರಣಗಳಿಂದ ಲೋಕವನ್ನು ಹೇಗೋ ಹಾಗೆ ಸುತ್ತಲೂ ಮುಚ್ಚಿಬಿಟ್ಟನು. ಆನೆಯಿಂದ ಪ್ರಹರಿಸಲ್ಪಟ್ಟ ಸಿಂಹದಂತೆ ಅರ್ಜುನನು ಕರ್ಣನ ಪೆಟ್ಟಿಗೆ ಸಹಿಸಲಾರದೆ, ಬತ್ತಳಿಕೆಯಿಂದ ತೀಕ್ಷ್ಣ ಬಾಣಗಳನ್ನು ತೆಗೆದುಕೊಂಡು, ಕಿವಿಯವರೆಗೆ ನಾಣನ್ನೆಳೆದು, ಬಾಣಗಳನ್ನು ಕರ್ಣನ ಮೇಲೆ ಬಿಟ್ಟನು. ಇಂದ್ರನು ತನ್ನ ವಜ್ರಪ್ರಹಾರಗಳಿಂದ ಪರ್ವತವನ್ನು ಭೇದಿಸುವಂತೆ, ಅರ್ಜುನನು ತನ್ನ ಬಾಣಗಳಿಂದ ಕರ್ಣನ ತೋಳು, ತಲೆ, ಹಣೆ, ಎದೆ, ಹೆಗಲು, ಕಂಠ ಮೊದಲಾದ ಪ್ರತಿ ಅವಯವಗಳನ್ನೂ ಭೇದಿಸುತ್ತಿದ್ದನು. ಈ ಬಾಣದ ವೇಗವನ್ನು ಸಹಿಸಲಾರದೆ, ಕರ್ಣನು ಆನೆಯಿಂದ ಪರಾಜಿತವಾದ ಆನೆಯಂತೆ ನೋವನ್ನು ತಡೆಯಲಾರದೆ ರಣರಂಗವನ್ನು ಬಿಟ್ಟು ಓಡಿಹೋದನು.

ಇದು ಐವತ್ತೈಂಟನೆಯ ಅಧ್ಯಾಯವು.

ದ್ರೋಣಾಚಾರ್ಯನ ಯುದ್ಧವು. ಅರ್ಜುನನ ಬಾಣದಿಂದ ದ್ರೋಣನಿಗೆ ಗಾಯವಾದುದನ್ನು ನೋಡಿ, ಅಶ್ವತ್ಥಾಮನು ಅರ್ಜುನನನ್ನು ದಿರಿಸಿದುದು. ಈ ಸಮಯದಲ್ಲಿ ದ್ರೋಣನು ಯುದ್ಧರಂಗವನ್ನು ಬಿಟ್ಟು ಹೋದುದು.

ಓ ಜನಮೇಜಯರಾಜಾ! ಕೇಳು! ಕರ್ಣನು ಪರಾಜಿತನಾಗಿ ಓಡಿದುದನ್ನು ನೋಡಿ ಅರ್ಜುನನು ಉತ್ತರನನ್ನು ಕುರಿತು "ರಾಜಕುಮಾರಾ! ಧೈರ್ಯದಿಂದಿರು. ಈ ಯುದ್ಧದಲ್ಲಿ ನಮಗೇ ಜಯವು ಸಿದ್ಧವು. ಶತ್ರು

ಗಳಿಗೆ ಭಯವುಂಟಾಗುವಹಾಗೆ ನಾನು ಮತ್ತೊಮ್ಮೆ ಶಂಖವನ್ನೂದುವೆನು. ನೀನು ಆ ಧ್ವನಿಯನ್ನು ಕೇಳಿ ಎದೆಗುಂದದೆ, ಮತ್ತು ಕಳವಳಿಸದೆ, ನಿನ್ನ ಎದೆಯಲ್ಲಿಯಾಗಲಿ, ಕಣ್ಣುಗಳಲ್ಲಿಯಾಗಲಿ ಭಯವಿಕಾರಗಳೇನನ್ನೂ ಕಾಣಿಸದೆ, ನಮ್ಮ ಆಚಾರ್ಯನಾದ ದ್ರೋಣನಿದ್ದಲ್ಲಿಗೆ ಬೇಗನೆ ರಥವನ್ನು ಬಿಡು'' ಎಂದನು. ಹೀಗೆ ಅರ್ಜುನನು, ರಣರಂಗದಲ್ಲಿ ವಿನೋದದಾಟದಂತೆ ಯುದ್ಧಮಾಡುತ್ತಿದ್ದಾಗ, ಅವನಿಗೆ ಬಲವೂ, ಧೈರ್ಯವೂ, ವೀರ್ಯವೂ, ಹಸ್ತಲಾಘವವೂ ಮೇಲೆಮೇಲೆ ಹೆಚ್ಚುತ್ತಲೇ ಬಂದುವು. ಈ ಆಶ್ಚರ್ಯವನ್ನು ನೋಡಿ ಉತ್ತರನಿಗೆ ಮನಸ್ಸಿನಲ್ಲಿ ಒಂದು ಭಯವು ತೋರಿತು. ಆಗ ಉತ್ತರನು ಅರ್ಜುನನನ್ನು ಕುರಿತು, ''ಅರ್ಜುನಾ! ಪರಂಪರೆಯಾಗಿ ತೀಕ್ಷ್ಣಬಾಣಗಳನ್ನು ಎರಚುತ್ತಿರುವ ನಿನ್ನ ದಿವ್ಯಾಸ್ತ್ರಗಳ ಪ್ರಭಾವವನ್ನೂ, ಅದ್ಭುತ ಪರಾಕ್ರಮವನ್ನೂ ನೋಡಿ, ನನ್ನ ಮನಸ್ಸಿಗೇನೋ ಮೋಹವುಂಟಾಗುತ್ತಿದೆ. ನನ್ನ ಮನಸ್ಸು ಭಯದಿಂದ ಒಂದು ನೆಲೆಯಲ್ಲಿಲ್ಲದೆ ಅತ್ತಿತ್ತ ತೂಗಾಡುತ್ತಿದೆ. ಈ ಗಾಂಡೀವ ಧ್ವನಿಯಂತಿರುವ ಚಾಪಘೋಷವನ್ನು ನಾನು ಹಿಂದೆ ಯಾವಾಗಲೂ ಕೇಳಿದುದಿಲ್ಲ. ವಿಧವಿಧವಾಗಿ ಧನುಸ್ಸನ್ನೆಳೆದು ಬಿಡತಕ್ಕ ನಿನ್ನ ಬಾಹುಬಲವೂ ನನಗೆ ಅತ್ಯಾಶ್ಚರ್ಯಕರವಾಗಿದೆ. ನಿನ್ನ ತೇಜಸ್ಸು ತ್ರಿವಿಕ್ರಮರೂಪಿಯಾದ ವಿಷ್ಣುವಿನ ತೇಜಸ್ಸಿನಂತೆ ದುಷ್ಕರವಾದುದು'' ಎಂದನು. ಆಗ ಉತ್ತರನಿಗೆ, ವಿಚಿತ್ರವಾದ ಆ ಗಾಂಡೀವವನ್ನೂ, ಅರ್ಜುನನು ಅದರಲ್ಲಿ ಸಂಧಾನಮಾಡಿ ಅತಿವೇಗದಿಂದ ಬಿಡತಕ್ಕ ಬಾಣಗಳನ್ನೂ ನೋಡಿ, ಮೇಲೆಮೇಲೆ ಭೀತಿಯು ಹೆಚ್ಚುತ್ತಿತ್ತು. ಆಗ ಉತ್ತರನು ಆ ಯುದ್ಧದ ಮಧ್ಯದಲ್ಲಿಯೇ ಅರ್ಜುನನನ್ನು ಕುರಿತು ''ಓ ಪಾರ್ಥಾ! ನಿನ್ನ ಕುದುರೆಗಳನ್ನು ನಡೆಸುವುದಕ್ಕೆ ಇನ್ನುಮೇಲೆ ನಿನ್ನಿಂದಾಗದು'' ಎಂದನು. ಆಗ ಅರ್ಜುನನು ನಸುನಗುತ್ತ ಅವನನ್ನು ಕುರಿತು ''ಓ ರಾಜಕುಮಾರಾ! ನಾನು ಸಹಾಯಕ್ಕಿರುವಾಗ ನಿನಗೇನು ಭಯವಿದೆ? ಮುಂದೆ ನಡೆ! ಕುದುರೆಗಳನ್ನು ತಟ್ಟಿಬಿಡು'' ಎಂದನು. ಅರ್ಜುನನು ಇಷ್ಟು ಧೈರ್ಯವನ್ನು ಹೇಳಿದ ಮೇಲೆ, ಉತ್ತರನು ಬೇಗನೆ ಕುದುರೆಗಳನ್ನು ಮುಂದೆ ಬಿಟ್ಟನು. ಅರ್ಜುನನೂ ಕೂಡ, ಧನುಸ್ಸನ್ನೆಳೆದು ಬಲವಾಗಿ ನಾಣನ್ನು ತಟ್ಟಿ ಶಬ್ದಮಾಡುತ್ತ

ತಿರುಗಿ ಉತ್ತರನನ್ನು ಕುರಿತು "ಉತ್ತರಾ! ನಾನಿರುವಾಗ ನೀನು ಹೀಗೆ ಯುದ್ಧಮಧ್ಯದಲ್ಲಿ ಭಯವನ್ನು ತೋರಿಸಬಾರದು! ನೀನು ರಾಜಕುಮಾರನಲ್ಲವೆ? ನಿನಗೆ ಮಂಗಳವಾಗಲಿ! ನೀನು ಉತ್ತಮವಾದ ಮತ್ಸ್ಯವಂಶದಲ್ಲಿ ಹುಟ್ಟಿದವನು. ದೊಡ್ಡ ಕ್ಷತ್ರಿಯಕುಲದವನು. ನೀನು ಹೀಗೆ ಧೈರ್ಯಗೆಡಬಾರದು. ಮನಸ್ಸನ್ನು ದೃಢಮಾಡಿಕೊಂಡು ರಥವನ್ನು ಸರಿಯಾಗಿ ನಡೆಸು. ಇಲ್ಲಿ ನಾನು ಅನೇಕ ರಾಜರನ್ನು ದಿರಿಸಿ ಯುದ್ಧಮಾಡಬೇಕಾಗಿದೆಯಲ್ಲವೆ!" ಎಂದು ಹೇಳುತ್ತಿರುವಾಗಲೇ, ಮುಂದೆ ದ್ರೋಣಾಚಾರ್ಯನು ಯುದ್ಧಸನ್ನದ್ಧನಾಗಿ ಬಂದಿರುವುದನ್ನು ಕಂಡನು. ಆಗ ಅರ್ಜುನನು ತಿರುಗಿ ಉತ್ತರನನ್ನು ಕುರಿತು "ಕುಮಾರಾ! ಅದೋ! ಅಲ್ಲಿ ಎತ್ತರವಾದ ಸುವರ್ಣದಂಡವುಳ್ಳ ಧ್ವಜದಲ್ಲಿ, ಅಗ್ನಿಜ್ವಾಲೆಯಂತೆ ಬೆಳಗುತ್ತಿರುವ ಸುವರ್ಣವೇದಿಕೆಯ ಗುರುತು ಕಾಣಿಸುತ್ತಿರುವುದು ನೋಡು. ಅನೇಕ ಪತಾಕೆಗಳಿಂದ ಅಲಂಕೃತವಾದ ಆ ಧ್ವಜವಿರುವ ಸ್ಥಳಕ್ಕೆ ರಥವನ್ನು ಬಿಡು. ಆ ರಥದಲ್ಲಿರುವವನೇ ಆಚಾರ್ಯನಾದ ದ್ರೋಣನು. ಮಹಾತ್ಮನಾದ ಅವನೊಡನೆ ನಾನು ಯುದ್ಧಮಾಡಬೇಕಾಗಿದೆ. ಅದೋ! ಆ ರಥಕ್ಕೆ ಕಟ್ಟಿರುವ ಕೆಂಪು ಕುದುರೆಗಳನ್ನು ನೋಡು. ಅವು ಬಹಳ ಚೆನ್ನಾಗಿ ರಥವನ್ನೆಳೆಯತಕ್ಕವು. ಎಲ್ಲಾ ಬಗೆಯ ಗತಿವಿಶೇಷಗಳಲ್ಲಿಯೂ ಸುಶಿಕ್ಷಿತಗಳಾಗಿರುವುವು. ಸಮಸ್ತ ಶಸ್ತ್ರಾಸ್ತ್ರಗಳನ್ನು ಬಲ್ಲವರಲ್ಲಿ ಮೇಲೆನಿಸಿದ ಶೂರನಾದ ದ್ರೋಣನು ಆ ರಥದಲ್ಲಿಯೇ ಇರುವನು. ಅವನು ನುಣುಪಾದ ವೈಡೂರ್ಯದಂತೆ ದೇಹಕಾಂತಿಯುಳ್ಳವನು. ಕೆಂಪಾದ ಕಣ್ಣುಳ್ಳವನು. ಪ್ರಿಯವಾದ ನೋಟವುಳ್ಳವನು. ಸೂರ್ಯನಂತೆ ತೇಜಸ್ವಿಯು. ಬಲ ವೀರ್ಯಗಳಿಂದ ತುಂಬಿದವನು. ಸಮಸ್ತ ಲೋಕದ ಧನುರ್ಧಾರಿಗಳಲ್ಲಿ ಮೇಲೆನಿಸಿದವನು. ಸರ್ವಲೋಕ ಪೂಜಿತನು. ಬುದ್ಧಿಯಲ್ಲಿಯೂ, ನೀತಿಯಲ್ಲಿಯೂ ಶುಕ್ರ ಬೃಹಸ್ಪತಿಗಳಿಗೆ ಸಮಾನನು. ಅಂಗೋಪಾಂಗಗಳಿಂದಲೂ, ಲಕ್ಷಣಗಳಿಂದಲೂ ಕೂಡಿದ ನಾಲ್ಕು ವೇದಗಳೂ, ಸಮಸ್ತವಾದ ಧನುರ್ವೇದವೂ, ಬ್ರಹ್ಮಾಸ್ತ್ರವೂ, ಪುರಾಣೇತಿಹಾಸಗಳೂ, ಅರ್ಥಶಾಸ್ತ್ರವೂ, ಮಾನವಧರ್ಮಶಾಸ್ತ್ರವೂ, ಇವೆಲ್ಲವೂ ಭರದ್ವಾಜಪುತ್ರನಾದ ಆತನಲ್ಲಿ ನೆಲೆಗೊಂಡಿರುವುವು. ಕ್ಷಮೆ, ದಮೆ, ಸತ್ಯ, ಶೌಚ, ಋಜುತ್ವ,

ಮೃದುತ್ವ, ಮುಂತಾದ ಸಮಸ್ತ ಗುಣಗಳಿಗೂ ಅವನು ಆಧಾರಭೂತನು. ಅವನಿಗೆ ಯಾವಾಗಲೂ ನನ್ನಲ್ಲಿ ಅಸಾಧಾರಣ ವಿಶ್ವಾಸವುಂಟು. ನನಗೂ ಅವನಲ್ಲಿ ಅಸಾಧಾರಣ ಭಕ್ತಿಯುಂಟು. ಆದರೂ ಈಗ ಕ್ಷತ್ರಿಯಧರ್ಮವನ್ನು ಮುಂದಿಟ್ಟುಕೊಂಡು, ಅವನೊಡನೆ ನಾನು ಯುದ್ಧಕ್ಕೆ ನಿಲ್ಲಬೇಕಾಗಿದೆ. ಆ ಆಚಾರ್ಯನಿರುವ ಸ್ಥಳಕ್ಕೆ ನಮ್ಮ ಮಹಾರಥವನ್ನು ಬಿಡು. ಈಗ ನಮ್ಮಿಬ್ಬರಿಗೂ ನಡೆಯುವ ಅದ್ಭುತವಾದ ಮತ್ತೊಂದು ಯುದ್ಧವನ್ನು ನೀನು ನೋಡುವೆ'' ಎಂದನು.

ಉತ್ತರನು ಈ ಮಾತನ್ನು ಕೇಳಿದೊಡನೆ ರಥವನ್ನು ಮುಂದೆ ಬಿಟ್ಟನು. ದ್ರೋಣನಿದ್ದಲ್ಲಿಗೆ ಅರ್ಜುನನ ರಥವು ಬಹುಬೇಗನೆ ಬಂದು ನಿಂತಿತು. ಅರ್ಜುನನ ರಥವು ಬರುತ್ತಿರುವುದನ್ನು ನೋಡಿ ದ್ರೋಣನೂ ಕೂಡ, ಮದದಾನೆಯು ಮದದಾನೆಯನ್ನಿದಿರಿಸುವಂತೆ ವೇಗದಿಂದ ಮುಂದೆ ಬಂದನು. ದ್ರೋಣನು ಸುವರ್ಣರಥದಮೇಲೆ ಕುಳಿತು ತನ್ನನ್ನಿದಿರಿಸಿಬರುವುದನ್ನು ನೋಡಿ, ಆಚಾರ್ಯನಾದ ಅವನಿಗೆ ಕೈ ಮುಗಿದು ಹೀಗೆಂದು ಹೇಳುವನು. ''ಓ ಆಚಾರ್ಯಾ! ಶತ್ರುದುರ್ಜಯಾ! ನಾವು ವನವಾಸವನ್ನು ಮುಗಿಸಿ ಬಂದೆವು. ಕೌರವರಿಗೆ ತಕ್ಕ ಪ್ರತೀಕಾರವನ್ನು ಮಾಡುವುದಕ್ಕಾಗಿ ನಿರೀಕ್ಷಿಸುತಿದ್ದೆವು. ಈಗ ಯುದ್ಧಕ್ಕಾಗಿ ಬಂದಿರುವ ನನ್ನಮೇಲೆ ಕೋಪಿಸಬಾರದು. ನಾನು ಮೊದಲೇ ನಿನ್ನಿಂದ ಪ್ರಹೃತನಾದುದರಿಂದ ಈಗ ನಿನ್ನಮೇಲೆ ಕೈಮಾಡಬೇಕಾಗಿದೆ. ಅದಕ್ಕಾಗಿ ನೀನು ನನ್ನನ್ನು ಮನ್ನಿಸಬೇಕು.'' ಎಂದು ಹೇಳಿ, ತನ್ನ ಶಂಖವನ್ನು ಬಲವಾಗಿ ಊದಿದನು. ಭೇರೀಪಟಹಾದಿವಾದ್ಯಗಳೂ ಅದರ ಸಂಗಡಲೇ ಮೊಳಗಿದುವು. ಸಾಗರವೇ ಉಕ್ಕಿಬಂದಂತಿದ್ದ ಆ ಮಹಾಘೋಷಕ್ಕೆ ಸೈನ್ಯವೆಲ್ಲ ತಬ್ಬಿಬ್ಬಾಯಿತು. ಇಷ್ಟರಲ್ಲಿಯೇ ದ್ರೋಣನು ಇಪ್ಪತ್ತು ಬಾಣಗಳನ್ನು ಅರ್ಜುನನ ಮೇಲೆ ಪ್ರಯೋಗಿಸಿದನು. ಆ ಬಾಣಗಳು ಸವಿಾಪಕ್ಕೆ ಬರುವಷ್ಟರಲ್ಲಿಯೇ ಹಸ್ತಲಾಘವವುಳ್ಳ ಅರ್ಜುನನು, ಅವುಗಳನ್ನು ತನ್ನ ಬಾಣಗಳಿಂದ ಕತ್ತರಿಸಿಕೆಡಹಿದನು. ಆಗ ವೀರ್ಯವಂತನಾದ ದ್ರೋಣನು ತನ್ನ ಹಸ್ತಲಾಘವದಿಂದ ಒಂದೇ ಸಾರಿಗೆ ಸಹಸ್ರ ಬಾಣಗಳನ್ನು ಪ್ರಯೋಗಿಸಿ ಅರ್ಜುನನ ರಥ

ವನ್ನು ಮರೆಸಿಬಿಟ್ಟನು. ದ್ರೋಣಾರ್ಜುನರಿಬ್ಬರಿಗೂ ಹೀಗೆ ಭಯಂಕರವಾದ ಯುದ್ಧವು ನಡೆಯಿತು. ಅತ್ತಲಾಗಿ ಅರ್ಜುನನ ರಥಕ್ಕೆ ಕಟ್ಟಿದ್ದ ಹಂಸವರ್ಣವುಳ್ಳ ಬಿಳೀ ಕುದುರೆಗಳೂ, ಇತ್ತಲಾಗಿ ದ್ರೋಣನ ಕೆಂಪುಕು ದುರೆಗಳೂ ಇದಿರುಬಿದ್ದು, ಒಂದನ್ನೊಂದು ತಿವಿಯುವಂತೆ ಕಲೆತುದನ್ನು ಜನರೆಲ್ಲರೂ ಆಶ್ಚರ್ಯಭರಿತರಾಗಿ ನೋಡುತ್ತಿದ್ದರು. ದ್ರೋಣನು ತನ್ನ ರಥದಿಂದ ಪಾರ್ಥನ ರಥವನ್ನು ಘಟ್ಟಿಸುತ್ತ, ವೀರ್ಯೋತ್ಸಾಹದಿಂದ ಅವನನ್ನು ಇದಿರಿಸಿದನು. ದ್ರೋಣಾರ್ಜುನರ ಧ್ವಜಗಳೆರಡೂ ಒಂದನ್ನೊಂದು ಅಪ್ಪಿಕೊಂಡಂತಾಯಿತು. ಇದನ್ನು ನೋಡಿ ಕೌರವಸೈನ್ಯವೆಲ್ಲವೂ ಬೆಜ್ಜರಗೊಂಡು ನಡುಗಿಹೋಯಿತು. ದ್ರೋಣಾರ್ಜುನರಿಬ್ಬರೂ ಅನ್ಯೋನ್ಯವಾಗಿ ಒಬ್ಬರಮೇಲೊಬ್ಬರು ಜ್ವಲಿಸುವಂತಿರುವ ತೀವ್ರಬಾಣಗಳನ್ನು ಬಿಡುತ್ತಿರಲು, ಅವರಿಬ್ಬರಿಗೂ ಪ್ರಬಲಯುದ್ಧವು ಪ್ರವರ್ತಿಸಿತು. ಇಬ್ಬರೂ ಮಹಾ ವೀರ್ಯವುಳ್ಳವರು. ಇಬ್ಬರೂ ವೇಗವುಳ್ಳವರು. ಇಬ್ಬರೂ ಪ್ರಸಿದ್ಧ ಕಾರ್ಯವುಳ್ಳವರು. ಇಬ್ಬರೂ ಜಯಾಭಿಲಾಷೆಯಿಂದ ತಮ್ಮ ಸರ್ವಶ್ರಮವನ್ನೂ ತೋರಿಸತಕ್ಕವರು. ಇಬ್ಬರೂ ಮಹಾರಥಿಕರು. ಇಬ್ಬರೂ ಶತ್ರುಪುರವನ್ನು ಜಯಿಸತಕ್ಕವರು. ಇಂತಹ ಆಚಾರ್ಯ ಶಿಷ್ಯರಿಬ್ಬರೂ, ಒಬ್ಬರ ಮೇಲೊಬ್ಬರು ಬಾಣಗಳನ್ನೆಸೆಯುತ್ತಿರುವುದನ್ನು ನೋಡಿ ಅಲ್ಲಿದ್ದ ರಾಜರೆಲ್ಲರಿಗೂ ಮನಸ್ಸು ತಬ್ಬಿಬ್ಬಾಯಿತು. ಜನರೆಲ್ಲರೂ ಆಶ್ಚರ್ಯಭರಿತರಾದರು. ಈ ಸಂಭವವನ್ನು ನೋಡಿ ಅಲ್ಲಲ್ಲಿ ಜನರು ಗುಂಪುಗುಂಪಾಗಿ ನಿಂತು "ಆಹಾ! ಅರ್ಜುನನೊಬ್ಬನು ಹೊರತು, ಈ ದ್ರೋಣಾಚಾರ್ಯನಿಗಿದಿರಾಗಿ ಬೇರೆ ಯಾವನು ತಾನೇ ಯುದ್ಧಕ್ಕೆ ನಿಲ್ಲಬಲ್ಲನು? ಆಹಾ! ಕ್ಷತ್ರಿಯಧರ್ಮವೆಂಬುದು ಮಹಾ ಕ್ರೂರವಾದುದು. ಅರ್ಜುನನು ತನ್ನ ಗುರುವಿನಮೇಲೆಯೇ ಆಯುಧವನ್ನೆತ್ತಿ ನಿಂತನಲ್ಲವೆ?" ಎಂದು ತಮ್ಮೊಳಗೆ ಆಡಿಕೊಳ್ಳುತ್ತಿದ್ದರು. ಇತ್ತಲಾಗಿ ದ್ರೋಣಾರ್ಜುನರಿಬ್ಬರೂ, ಸಮೀಪದಲ್ಲಿ ಸಂಧಿಸಿ, ಯಾರೂ ಸೋಲದಂತೆ ಒಬ್ಬರನ್ನೊಬ್ಬರು ಬಾಣಗಳಿಂದ ಮುಚ್ಚುತ್ತಿದ್ದರು. ಏಕಕಾಲದಲ್ಲಿ ಉದಿಸಿಬಂದ ಲಯಕಾಲದ ಸೂರ್ಯರಂತೆ ಇಬ್ಬರೂ ಜ್ವಲಿಸುತಿದ್ದರು. ದ್ರೋಣನಿಗೆ ಮೇಲೆಮೇಲೆ ಕೋಪವು ಹೆಚ್ಚಿತು. ಸುವರ್ಣಪೃಷ್ಠವುಳ್ಳ ತನ್ನ ಧನುಸ್ಸನ್ನು ಟಂಕಾರ ಮಾಡುತ್ತ,

ತನ್ನ ಬಾಣಗಳೆಂಬ ಬಲೆಯಿಂದ ಅರ್ಜುನನ ರಥವನ್ನೆಲ್ಲ ಮುಚ್ಚಿಬಿಟ್ಟನು. ಚೆನ್ನಾಗಿ ಸಾಣೆಯಿಕ್ಕಿ ಹೊಳೆಯುತ್ತಿರುವ ತನ್ನ ಬಾಣಪರಂಪರೆಗಳಿಂದ ದಿಕ್ಕುಗಳನ್ನೆಲ್ಲ ಮರೆಸಿಬಿಟ್ಟನು. ಅತ್ತಲಾಗಿ ಅರ್ಜುನನೂ ಹಿಂಜರಿಯದೆ, ಪರ್ವತದಮೇಲೆ ಮೇಘವು ಮಳೆಯನ್ನು ಕರೆದಂತೆ, ಮಹಾವೇಗವುಳ್ಳ ನೂರಾರು ಬಾಣಗಳಿಂದ ದ್ರೋಣನ ರಥದಮೇಲೆ ಬಾಣವರ್ಷವನ್ನು ಕರೆದನು. ತಿರುಗಿ ದ್ರೋಣನು ಅರ್ಜುನನ ರಥವನ್ನು ತನ್ನ ವಿಚಿತ್ರ ಬಾಣಗಳಿಂದ ಮುಚ್ಚಿದನು. ಅತ್ತಲಾಗಿ ಅರ್ಜುನನೂ ಮೇಲೆಮೇಲೆ ಕೋಪಗೊಂಡು, ಶತ್ರುನಾಶಕವಾದ ಗಾಂಡೀವವೆಂಬ ತನ್ನ ದಿವ್ಯ ಧನುಸ್ಸಿನಿಂದ, ಚಿತ್ರವಿಚಿತ್ರಗಳಾದ ಹಲವು ಬಾಣಗಳನ್ನು ಬಿಟ್ಟು, ದ್ರೋಣನ ರಥವನ್ನು ಮುಚ್ಚಿದುದಲ್ಲದೆ, ದ್ರೋಣನಿಂದ ಬಿಡಲ್ಪಟ್ಟ ಬಾಣಗಳನ್ನೆಲ್ಲ ನಡುದಾರಿಯಲ್ಲಿಯೇ ನಿಗ್ರಹಿಸಿದನು. ಮಹಾರಥನೆನಿಸಿದ ಅರ್ಜುನನು, ಆಗ ರಥಸಹಿತನಾಗಿ, ನಿಂತಲ್ಲಿ ನಿಲ್ಲದೆ ಸಂಚರಿಸುತ್ತ ಏಕಕಾಲದಲ್ಲಿ ತನ್ನ ಅಸ್ತ್ರಗಳಿಂದ ಅನೇಕ ದಿಕ್ಕುಗಳನ್ನು ತುಂಬಿಬಿಟ್ಟನು. ಆಗ ಆ ಅರ್ಜುನನು ತಾನು ಬಾಣಗಳನ್ನು ತೆಗೆಯುವುದಾಗಲಿ, ಬಿಲ್ಲಿನಲ್ಲಿ ಸೇರಿಸುವುದಾಗಲಿ, ಅವುಗಳನ್ನು ಪ್ರಯೋಗಿಸುವುದಾಗಲಿ, ಯಾರಿಗೂ ತಿಳಿಯದಂತೆ ತನ್ನ ಹಸ್ತಲಾಘವವನ್ನು ತೋರಿಸುತಿದ್ದನು. ಆಕಾಶವನ್ನೆಲ್ಲ ಅರ್ಜುನನ ಬಾಣಚ್ಛಾಯೆಯೊಂದೇ ಮರೆಸಿಬಿಟ್ಟಿತು. ಮುಂಜಿನಲ್ಲಿ ಮುಚ್ಚಿಹೋದ ಬೆಟ್ಟದಂತೆ ದ್ರೋಣನು ಬಾಣಗಳಲ್ಲಿ ಮುಚ್ಚಿಹೋಗಿ, ಅವನಿದ್ದ ಸ್ಥಳವೇ ತಿಳಿಯದಂತಾಯಿತು. ಅತ್ತಲಾಗಿ ಅರ್ಜುನನ ದೇಹವೂ ಕೂಡ, ದ್ರೋಣನ ನೂರಾರು ಬಾಣಗಳಿಂದ ನಾಟಲ್ಪಟ್ಟು, ಕಿರಣಾವೃತವಾದ ಸೂರ್ಯಬಿಂಬದಂತೆ ಕಾಣಿಸುತಿತ್ತು. ದ್ರೋಣನೂ ಕೂಡ, ಅರ್ಜುನನ ಬಾಣಗಳನ್ನೆಲ್ಲ ತನ್ನ ಬಾಣಗಳಿಂದಡಗಿಸಿ, ರಾತ್ರಿಯ ಅಂಧಕಾರವನ್ನು ನೀಗಿಸಿ, ಆಕಾಶದಲ್ಲಿ ಉದಿಸಿ ಬರುವ ಸೂರ್ಯನಂತೆ ಕಾಣಿಸಿಕೊಂಡನು. ದ್ರೋಣಾರ್ಜುನರಿಬ್ಬರೂ ಅಗ್ನಿಚಕ್ರದಂತೆ ಕುಂಡಲಾಕಾರವುಳ್ಳ ಭಯಂಕರವಾದ ದೊಡ್ಡ ಬಿಲ್ಲುಗಳನ್ನೆಳೆದು, ಪರಂಪರೆಯಾಗಿ ಬಾಣಗಳನ್ನು ಬಿಡುತ್ತಿರಲು, ಅವರ ಹಸ್ತಲಾಘವವನ್ನು ಜನರೆಲ್ಲರೂ ಆಶ್ಚರ್ಯದಿಂದ ನೋಡುತ್ತಿದ್ದರು. ಸಿಡಿಲಿನಂತೆ ಘೋರವಾದ ದ್ರೋಣನ ಧನುಷ್ಟಂಕಾರಶಬ್ದವು ಸಮಸ್ತ

ದಿಕ್ಕುಗಳನ್ನೂ ಮೊಳಗಿಸುತ್ತ, ಸೈನ್ಯಗಳೆಗೆಲ್ಲ ಆತ್ಯಾಶ್ಚರ್ಯಕರವಾಗಿ ಕೇಳಿಸಿತು. ದ್ರೋಣನು ಅಗ್ನಿಸಮಾನಗಳಾದ ಮತ್ತು ಸುವರ್ಣಮಯಗಳಾದ ಬಾಣಗಳಿಂದ ದಿಕ್ಕುಗಳನ್ನೂ, ಸೂರ್ಯಪ್ರಭೆಯನ್ನೂ ಮರೆಸಿಬಿಟ್ಟನು. ಆಕಾಶದಲ್ಲಿ ಎಲ್ಲಿ ನೋಡಿದರೂ ಚಿನ್ನದ ಹಿಡಿಗಳುಳ್ಳ ಬಾಣಸಮೂಹಗಳೇ ಹಾರಾಡುತಿದ್ದುವು. ದ್ರೋಣನ ಧನುಸ್ಸಿನಿಂದ ಹೊರಟ ಬಾಣಪರಂಪರೆಗಳೆಲ್ಲ ಆಕಾಶದಲ್ಲಿ ದೀರ್ಘವಾದ ಒಂದೇ ರೇಖಾಕಾರವಾಗಿ, ಹಾರಾಡುತ್ತಿರುವ ಹಂಸಶ್ರೇಣಿಯಂತೆ ಕಾಣಿಸಿತು. ಆ ದ್ರೋಣಾರ್ಜುನರಿಬ್ಬರೂ ಸುವರ್ಣಮಯಗಳಾದ ಬಾಣಗಳಿಂದ ಆಕಾಶವೆಲ್ಲವನ್ನೂ ಉಲ್ಕೆಗಳಿಂದ (ಆಕಾಶದ ಕೊಳ್ಳಿ) ತುಂಬಿದಂತೆ ಮಾಡಿದರು. ಹದ್ದಿನ ಗರಿಗಳುಳ್ಳ ಅವರ ಬಾಣಗಳ ಸಾಲು, ಶರತ್ಕಾಲದಲ್ಲಿ ಆಕಾಶದಲ್ಲಿ ಹಾರಿಹೋಗುವ ಸಾರಸಪಕ್ಷಿಗಳ ಸಾಲಿನಂತೆ ಕಾಣಿಸುತಿತ್ತು. ಆಗಿನ ದ್ರೋಣಾರ್ಜುನರ ಯುದ್ಧವು, ವೃತ್ರ ವಾಸವರ ಯುದ್ದದಂತೆ ಮಹಾ ಘೋರವಾಗಿ, ಆತ್ಯಾಶ್ಚರ್ಯಕರವಾಗಿ, ಮತ್ತು ಹೀಗೆಂದು ಊಹಿಸುವುದಕ್ಕೂ ಅಸಾಧ್ಯವೆನಿಸಿತು. ಮದದಾನೆಗಳು ಕೊಂಬುಗಳಿಂದ ತಿವಿದಾಡುವಂತೆ, ಅವರಿಬ್ಬರೂ ಆಕರ್ಣಾಕೃಷ್ಟವಾದ ಬಾಣಗಳಿಂದ ಹೊಡೆದಾಡಿದರು. ದ್ರೋಣಾಚಾರ್ಯರಿಂದ ಪ್ರಯೋಗಿಸಲ್ಪಟ್ಟ ತೀಕ್ಷ್ಣ ಬಾಣಗಳನ್ನು ಅರ್ಜುನನು ತನ್ನ ಬಾಣಗಳಿಂದ ಅಲ್ಲಲ್ಲಿಯೇ ಮುರಿಯುತ್ತ ಬಂದುದಲ್ಲದೆ, ತನ್ನಲ್ಲಿರುವ ಇಂದ್ರತೇಜಸ್ಸನ್ನು ತೋರಿಸುತ್ತ ಕ್ಷಣಮಾತ್ರದಲ್ಲಿ ಬಾಣಗಳಿಂದ ಆಕಾಶವನ್ನೆಲ್ಲ ಮರೆಸಿದನು. ತನ್ನನ್ನು ಹೊಡೆಯಬೇಕೆಂದು ಪ್ರಯತ್ನಿಸುತಿದ್ದ ಅರ್ಜುನನನ್ನು ದ್ರೋಣನೂ ತನ್ನ ಬಾಣಗಳಿಂದ ನಿವಾರಿಸಿದನು. ಯುದ್ಧವಿಶಾರದನಾದ ತನ್ನ ಶಿಷ್ಯನೊಡನೆ ಯುದ್ಧಕ್ರೀಡೆಯನ್ನಾಡುವುದರಲ್ಲಿ ದ್ರೋಣನಿಗೆ ಸಂತೋಷವು ಮೇಲೆಮೇಲೆ ಹೆಚ್ಚಿತು. ಆ ಗುರುಶಿಷ್ಯರಿಬ್ಬರೂ ಬ್ರಹ್ಮಾದಿ ದಿವ್ಯಾಸ್ತ್ರಗಳಿಂದ ಒಬ್ಬರನ್ನೊಬ್ಬರು ಪ್ರಹರಿಸುತ್ತಿದ್ದರು. ರಣಶೂರನಾದ ಪಾರ್ಥನು, ತನ್ನ ವೀರ್ಯವನ್ನು ಪ್ರಕಾಶಗೊಳಿಸುವ ಅನೇಕಾಸ್ತ್ರಗಳಿಂದ ದ್ರೋಣನನ್ನು ಹೊಡೆದು, ಅವನು ಪ್ರಯೋಗಿಸಿದ ಅಸ್ತ್ರಗಳೆಲ್ಲವನ್ನೂ ತನ್ನ ಅಸ್ತ್ರಗಳಿಂದ ನಿವಾರಿಸಿದನು. ಪುರುಷಶ್ರೇಷ್ಠರೆನಿಸಿದ ಅವರಿಬ್ಬರೂ ಒಬ್ಬರ ಪರಾಕ್ರಮವನ್ನು ಮತ್ತೊಬ್ಬರು ಸಹಿಸಲಾರದೆ, ಕೋಪ

ದಿಂದ ತಮ್ಮತಮ್ಮ ಅಸ್ತ್ರಪ್ರಭಾವಗಳನ್ನು ತೋರಿಸುತಿದ್ದಾಗ, ಅವರ ಯುದ್ಧವು ಬಲಿಗೂ, ಇಂದ್ರನಿಗೂ ನಡೆದ ಯುದ್ಧದಂತೆ ಅದ್ಭುತವಾಗಿದ್ದಿತು. ಅವರಿಬ್ಬರೂ ತಮ್ಮತಮ್ಮ ದಿವ್ಯಾಸ್ತ್ರಪ್ರಭಾವಗಳನ್ನು ತೋರಿಸತೊಡಗಿದರು. ದ್ರೋಣನು ಬಿಟ್ಟ ಐಂದ್ರ, ವಾಯವ್ಯ, ಆಗ್ನೇಯಾದ್ಯಸ್ತ್ರಗಳನ್ನೆಲ್ಲ, ಆಗಾಗಲೇ ಅರ್ಜುನನು ಪ್ರತ್ಯಸ್ತ್ರಗಳಿಂದ ನುಂಗಿಬಿಡುತಿದ್ದನು. ಅವರ ಬಾಣಗಳಿಂದ ಆಕಾಶವೆಲ್ಲವೂ ಒಂದೇ ಕತ್ತಲೆಯಾಯಿತು. ಅರ್ಜುನನ ಬಾಣಪಾತಧ್ವನಿಯು ಪರ್ವತಗಳ ಮೇಲೆ ಸಿಡಿಲು ಬಿದ್ದಂತೆ ಕೇಳಿಸಿತು. ಅರ್ಜುನನ ಬಾಣಗಳಿಂದ ಪ್ರಹರಿಸಲ್ಪಟ್ಟ ರಥ ಗಜಾಶ್ವ ಪದಾತಿ ಸೈನ್ಯಗಳೆಲ್ಲ ರಕ್ತದಿಗ್ಧವಾಗಿ ಹೂಗಳಿಂದ ತುಂಬಿದ ಮುತ್ತುಗದ ಮರಗಳಂತೆ ಕಾಣಿಸಿದುವು. ಆಗ ಅರ್ಜುನನ ಬಾಣಗಳಿಂದ ತೋಳ್ಬಳೆಗಳೊಡನೆ ತುಂಡಾಗಿ ಬಿದ್ದ ತೋಳುಗಳೂ, ಮುರಿದುಬಿದ್ದ ಮಹಾರಥಗಳೂ, ಸುವರ್ಣಾಲಂಕೃತಗಳಾದ ಧ್ವಜಗಳೂ, ಅಲ್ಲಲ್ಲಿ ಸತ್ತುಬಿದ್ದ ಯೋಧರುಗಳೂ ಆ ರಣಾಂಗದ ಅಷ್ಟಗಲಕ್ಕೂ ತುಂಬಿಹೋದುವು. ದ್ರೋಣಾರ್ಜುನರಿಬ್ಬರೂ ಕೈಕಲೆತಾಗ, ಅಲ್ಲಿದ್ದ ಸೈನ್ಯಕ್ಕೆಲ್ಲ ಮನಸ್ಸು ನಡುಗುವಂತಾಯಿತು. ಆ ವೀರರಿಬ್ಬರೂ ಧನುಸ್ಸನ್ನೆಳೆದು ಒಬ್ಬರನ್ನೊಬ್ಬರು ದಹಿಸಿಬಿಡುವಂತೆ ಬಿಟ್ಟ ಬಾಣಗಳು ಅವರ ದೇಹಗಳನ್ನು ಮರೆಸಿಬಿಟ್ಟವು. ಇಷ್ಟರಲ್ಲಿಯೇ ಅಂತರಿಕ್ಷದಿಂದ ದ್ರೋಣನ್ನು ಪ್ರಶಂಸೆಮಾಡುವ ಶಬ್ದಗಳು ಕೇಳಬಂದುವು. "ಆಹಾ! ದ್ರೋಣನು ಈಗ ಮಾಡಬಾರದ ದುಷ್ಕರಕಾರ್ಯವನ್ನು ಮಾಡುವನು! ಅರ್ಜುನನಾದರೋ ಮಹಾವೀರನು. ಹಿಡಿದ ಪಟ್ಟನ್ನು ಬಿಡುವವನಲ್ಲ. ಇವನನ್ನಿದಿರಿಸಿಲು ಯಾರಿಗೂ ಸಾಧ್ಯವಲ್ಲ. ಎಂತಹ ಶತ್ರುಗಳನ್ನಾದರೂ ನಿಗ್ರಹಿಸಬಲ್ಲವನು. ಸಮಸ್ತ ದಾನವರನ್ನೇ ಜಯಿಸಿದವನು. ಮಹಾರಥರಲ್ಲಿ ಮೇಲೆನಿಸಿದವನು. ಇಂತವನೊಡನೆ ಯುದ್ಧಕ್ಕೆ ನಿಂತುದು ದುಷ್ಕರಕಾರ್ಯವು" ಎಂದು ಆಕಾಶಚಾರಿಗಳು ಹೇಳುತ್ತಿದ್ದರು. ಅರ್ಜುನನ ಹಸ್ತಲಾಘವವನ್ನೂ, ಬಾಣಪ್ರಯೋಗದಲ್ಲಿ ಅವನಿಗಿರುವ ಸುಶಿಕ್ಷೆಯನ್ನೂ, ಬಹುದೂರಕ್ಕೆ ಬಾಣಬಿಡುವ ಶಕ್ತಿಯನ್ನೂ, ಎಂತಹ ಕಷ್ಟದಶೆಯಲ್ಲಿಯೂ ಭ್ರಾಂತನಾಗದಂತಿರುವ ಮನೋದಾರ್ಢ್ಯವನ್ನೂ ನೋಡಿ ದ್ರೋಣನೂ ಆಶ್ಚರ್ಯಪಡುತಿದ್ದನು. ಆ ದ್ರೋಣಾ

ರ್ಜುನರ ಯುದ್ಧವು ಲೋಕವನ್ನೇ ಕ್ಷೋಭಗೊಳಿಸುವಂತೆ ಅತಿ ಘೋರವಾಯಿತು. ಆಮೇಲೆ ಅರ್ಜುನನು ಗಾಂಡೀವವೆಂಬ ತನ್ನ ದಿವ್ಯ ಧನುಸ್ಸನ್ನು ಹಿಡಿದು, ಎರಡು ಕೈಗಳಿಂದಲೂ ಬಾಣಪ್ರಯೋಗಮಾಡಶೊಡಗಿದನು. ಅವನ ಬಾಣವರ್ಷವು ಮಿಡಿತೆಗಳ ಹಿಂಡಿನಂತೆ ಗಗನವನ್ನೆಲ್ಲ ವ್ಯಾಪಿಸಿತು. ಅವನ ಬಾಣಮಾರ್ಗದಲ್ಲಿ ವಾಯುಸಂಚಾರಕ್ಕೂ ಎಡೆಯಿಲ್ಲದಂತಾಯಿತು. ಅವನು ಬಿಲ್ಲಿನಲ್ಲಿ ಬಾಣಗಳನ್ನು ಸಂಧಾನಮಾಡುವುದಕ್ಕೂ, ಅವುಗಳನ್ನು ಪ್ರಯೋಗಿಸುವುದಕ್ಕೂ ನಡುವೆ ಸ್ವಲ್ಪಮಾತ್ರವಾದರೂ ಅವಕಾಶವೇ ಕಾಣಿಸುತ್ತಿರಲಿಲ್ಲ. ಹೀಗೆ ಬೇಗಬೇಗನೆ ಅಸ್ತ್ರಪ್ರಯೋಗಳಿಂದ ಭಯಂಕರ ಯುದ್ಧವು ನಡೆಯುತ್ತಿರುವಾಗ, ಪಾರ್ಥನು ಇನ್ನೂ ಅಧಿಕವೇಗದಿಂದ ಅನೇಕವಿಧ ಬಾಣಗಳನ್ನು ಪ್ರಯೋಗಿಸಿದನು. ಲಕ್ಷೋಪಲಕ್ಷ ಸಂಖ್ಯೆಯಿಂದ ಅರ್ಜುನನ ಬಾಣಗಳು ದ್ರೋಣನ ರಥದಮೇಲೆ ಬಿದ್ದು, ಅವನನ್ನು ಮುಚ್ಚಿದುವು. ದ್ರೋಣನ ರಥವು ಬಾಣದಿಂದ ಮರೆಸಿಹೋದುದನ್ನು ನೋಡಿ, ಸೈನ್ಯಗಳಲ್ಲಿ ದೊಡ್ಡ ಹಾಹಾಕಾರವುಂಟಾಯಿತು. ಬಾಣಪ್ರಯೋಗದಲ್ಲಿ ಅರ್ಜುನನ ಹಸ್ತಲಾಘವವನ್ನು ಇಂದ್ರನೂ, ಗಂಧರ್ವರೂ, ಅಪ್ಸರಸ್ಸುಗಳೂ, ಕೊಂಡಾಡಿದರು. ಇಷ್ಟರಲ್ಲಿಯೇ ದ್ರೋಣಪುತ್ರನಾದ ಅಶ್ವತ್ಥಾಮನು, ತನ್ನ ತಂದೆಯು ಬಾಣವರ್ಷದಲ್ಲಿ ಮುಚ್ಚಿಹೋದುದನ್ನು ನೋಡಿ, ಅನೇಕ ರಥಿಕಸಮೂಹದೊಡನೆ ಮುಂಬೆ ಬಂದು, ಬಾಣವರ್ಷಗಳಿಂದ ಅರ್ಜುನನನ್ನು ತಡೆದನು. ಅಶ್ವತ್ಥಾಮನಿಗೆ ಅರ್ಜುನನಮೇಲೆ ಮಹತ್ತಾದ ಕೋಪವಿದ್ದರೂ, ಅರ್ಜುನನ ವೀರಕಾರ್ಯವನ್ನು ನೋಡಿ ಮನಸ್ಸಿನಲ್ಲಿಯೇ "ಭಲೆ ಭಲೆ" ಎಂದು ಕೊಂಡಾಡಿದನು. ವರ್ಷಾಕಾಲದ ಮೇಘವು ಮಳೆಯನ್ನು ಕರೆಯುವಂತೆ, ಅಶ್ವತ್ಥಾಮನು ಕೋಪಾವೇಶದಿಂದ ಸಾವಿರಾರು ಬಾಣಗಳನ್ನು ಅರ್ಜುನನಮೇಲೆ ಬಿಡುತ್ತ, ಅವನನ್ನು ಅಡ್ಡಗಟ್ಟಿ ದ್ರೋಣನಿದ್ದಲ್ಲಿಗೆ ಬಂದನು. ಇಷ್ಟರಲ್ಲಿ ಅರ್ಜುನನು, ತನ್ನ ಬಾಣಗಳಿಂದ ಬಹಳವಾಗಿ ನೊಂದಿದ್ದ ದ್ರೋಣನಿಗೆ ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಅವಕಾಶಕೊಡುವುದಕ್ಕಾಗಿ ತನ್ನ ಬಾಣಪ್ರಯೋಗವನ್ನು ಸ್ವಲ್ಪಹೊತ್ತು ನಿಲ್ಲಿಸಿಟ್ಟನು. ಇದೇ ಸಮಯದಲ್ಲಿ ದ್ರೋಣನು ಅರ್ಜುನನ ಬಾಣಗಳಿಂದ ತನ್ನ ಧ್ವಜವೂ, ಕವಚವೂ, ರಥವೂ

ಮುರಿದುಹೋಗಲು, ಗಾಯಪಟ್ಟ ದೇಹದೊಡನೆ ಯುದ್ಧವನ್ನು ಬಿಟ್ಟು ಹೊರಟುಹೋದನು. ಅಶ್ವತ್ಥಾಮನು, ತನ್ನ ತಂದೆಗೆ ಉಂಟಾದ ಪರಾಜಯವನ್ನು ನೋಡಿ ಸಹಿಸಲಾರದೆ ಕೋಪಾವೇಶದಿಂದ ದಂಡಪಾಣಿಯಾದ ಯಮನಂತೆ ತಾನೇ ಮುಂದೆಬಂದು ಯುದ್ಧಕ್ಕೆ ನಿಂತನು.

ಇದು ಐವತ್ತೊಂಭತ್ತನೆಯ ಅಧ್ಯಾಯವು.

ಅಶ್ವತ್ಥಾಮನ ಪರಾಜಯವು.

ಓ ಜನಮೇಜಯರಾಜಾ! ಕೇಳು! ಅಶ್ವತ್ಥಾಮನು ಅಷ್ಟು ತೀವ್ರ ಕೋಪದಿಂದ ಮುಂದೆ ಬರುತ್ತಿರುವಾಗ, ಪರ್ವತವು ಬಿರುಗಾಳಿಯ ವೇಗವನ್ನು ತಡೆಗಟ್ಟುವಂತೆ, ಅರ್ಜುನನು ಅವನನ್ನು ಇದಿರಿಸಿ ತಡೆದನು. ಮೇಘವು ಮಳೆಯನ್ನು ಸುರಿಯುವಂತೆ ಒಬ್ಬರಮೇಲೊಬ್ಬರು ಬಾಣವರ್ಷವನ್ನು ಕರೆದರು. ದೇವಾಸುರ ಯುದ್ಧದಂತೆ ಅವರಿಬ್ಬರಿಗೂ ಪ್ರಬಲ ಯುದ್ಧವಾಯಿತು. ವೃತ್ರವಾಸವದಂತೆ ಇಬ್ಬರೂ ಬಾಣವರ್ಷಗಳಿಂದ ಹೋರಾಡಿದರು. ಅವರಿಬ್ಬರ ಬಾಣಗಳಿಂದ ಸೂರ್ಯಪ್ರಕಾಶವೇ ಮರೆಸಿಹೋಯಿತು. ಗಾಳಿಯು ಬೀಸದಂತಾಯಿತು. ಆಕಾಶವನ್ನೆಲ್ಲ ಬಾಣಛ್ಛಾಯೆಯೊಂದೇ ಆವರಿಸಿತು. ಅವರ ಬಾಣಪಾತಧ್ವನಿಯು, ಉರಿಯುವ ಬಿದಿರುಮೆಳೆಗಳ ಛಟಾಛಟಾತ್ಕಾರದಂತೆ ಭಯಂಕರವಾಗಿ ಕೇಳಿಸಿತು. ಅರ್ಜುನನು ತನ್ನ ಬಾಣಘಾತದಿಂದ ಅಶ್ವತ್ಥಾಮನ ಕುದುರೆಗಳ ವೇಗವನ್ನೆಲ್ಲ ಅಡಗಿಸಿಬಿಟ್ಟನು. ಆ ಕುದುರೆಗಳಿಗೆ ಮೂರ್ಛೆಬಂದಂತಾಗಿ ಅವುಗಳಿಗೆ ದಿಕ್ಕೇ ತೋರದಂತಾಯಿತು. ಇಷ್ಟರಲ್ಲಿ ಅಶ್ವತ್ಥಾಮನು ಸರಿಯಾದ ಸಮಯವನ್ನು ನೋಡಿಕೊಂಡಿದ್ದು, ಮುಂದೆ ಬರುತ್ತಿದ್ದ ಅರ್ಜುನನ ಬಿಲ್ಲಿನ ನಾಣನ್ನು ಒಂದು ಬಾಣದಿಂದ ಕತ್ತರಿಸಿಬಿಟ್ಟನು. ಬೇರೆ ಮನುಷ್ಯರಿಗೆ ಸಾಧ್ಯವಲ್ಲದ ಈ ಕಾರ್ಯವನ್ನು ನೋಡಿ ದೇವತೆಗಳು "ಭಲೆ! ಭಲೆ!" ಎಂದು ಅಶ್ವತ್ಥಾಮನನ್ನು ಕೊಂಡಾಡಿದರು. ಅಲ್ಲದೆ, "ಈ ಅಶ್ವತ್ಥಾಮನು

ಹೊರತು, ಬೇರೆ ಯಾವನೂ ಅರ್ಜುನನ ಮುಂದೆ ಹೀಗೆ ಯುದ್ಧಕ್ಕೆ ನಿಲ್ಲಲಾರನು'' ಎಂದು ಜನಗಳು ಕೊಂಡಾಡುತ್ತಿದ್ದರು.

ಇಷ್ಟರಲ್ಲಿಯೇ ದ್ರೋಣಪುತ್ರನಾದ ಅಶ್ವತ್ಥಾಮನು, ಸ್ವಲ್ಪ ಹಿಂದಕ್ಕೆ ಸರಿದು, ತಿರುಗಿ ಬಿಲ್ಲನ್ನೆಳೆದು, ಅರ್ಜುನನ ಎದೆಗೆ ಗುರಿಯಿಟ್ಟು ಬಾಣವನ್ನು ಹೊಡೆದನು. ಆಮೇಲೆ ಮಹಾಬಾಹುವಾದ ಪಾರ್ಥನು ಅಶ್ವತ್ಥಾಮನನ್ನು ನೋಡಿ, ಗಟ್ಟಿಯಾಗಿ ನಕ್ಕು, ತನ್ನ ಗಾಂಡೀವಕ್ಕೆ ಬೇರೊಂದು ನಾಣನ್ನು ಕಟ್ಟಿ ಯುದ್ಧಕ್ಕೆ ಸಿದ್ಧನಾದನು. ಮದವೇರಿದ ಆನೆಯಂತೆ ಕೋಪದಿಂದ ಯುದ್ಧಾಭಿಮುಖನಾಗಿ ಬರುತ್ತಿದ್ದ ಅರ್ಜುನನನ್ನು ನೋಡಿ, ದ್ರೌಣಿಯು, ಕೋಪದಿಂದ ''ಬಾ! ಯುದ್ಧಕ್ಕೆ ಬಂದು ನಿಲ್ಲು'' ಎಂದು ಆರ್ಭಟಿಸಿ ಕರೆದನು. ಮತ್ತು ಒಂದು ಅರ್ಧಚಂದ್ರಬಾಣದಿಂದ ಅರ್ಜುನನನ್ನು ಹೊಡೆಯಲು, ಅರ್ಜುನನು ಸರ್ಪಸಮಾನಗಳಾದ ಕೆಲವು ತೀಕ್ಷ್ಣಬಾಣಗಳಿಂದ ಅಶ್ವತ್ಥಾಮನ ಬಿಲ್ಲನ್ನು ಕಡಿದು, ಅವನ ರಥಾಶ್ವಗಳನ್ನೂ, ಸಾರಥಿಯನ್ನೂ ಬಲವಾಗಿ ಹೊಡೆದನು. ಒಡನೆಯೇ ಅಶ್ವತ್ಥಾಮನು ಬೇರೊಂದು ರಥವನ್ನೇರಿ, ಮದಗಜವು ಮದಗಜವನ್ನಿದಿರಿಸುವಂತೆ ಯುದ್ಧಕ್ಕಿದಿರಾದರು. ಲೋಕೈಕವೀರರಾದ ಅವರಿಬ್ಬರಿಗೆ ಪ್ರಬಲವಾದ ಯುದ್ಧವು ನಡೆಯಿತು. ಆ ವೀರರ ಯುದ್ಧಕೌಶಲವನ್ನು ನೋಡಿ ಕೌರವರೆಲ್ಲರೂ ಆಶ್ಚರ್ಯಮಗ್ನರಾದರು. ಹೋರಾಟಕ್ಕೆ ನಿಂತ ಮಹಾಗಜಗಳಂತೆ ಒಬ್ಬರಮೇಲೊಬ್ಬರು ಅಗ್ನಿಜ್ವಾಲೆಗಳಂತಿರುವ ಬಾಣಗಳನ್ನು ಹೊಡೆದು, ಜಯಾಭಿಲಾಷೆಯಿಂದ ಹೊಡೆದಾಡುತ್ತಿದ್ದರು. ಆದರೇನು? ಅರ್ಜುನನಿಗೆ ದೇವತೆಗಳಿಂದ ಲಬ್ಧವಾದ ಎರಡು ಅಕ್ಷಯ ತೂಣೀರಗಳು (ಬತ್ತಳಿಕೆಗಳು) ಇದ್ದುದರಿಂದ, ಅವುಗಳ ಬಲದಿಂದ ಅವನು ವಿಚ್ಛಿತ್ತಿಯಿಲ್ಲದೆ ಬಾಣಗಳನ್ನು ಬಿಡುತ್ತ, ಪರ್ವತದಂತೆ ನಿಶ್ಚಲವಾಗಿ ನಿಂತಿದ್ದನು. ಅಶ್ವತ್ಥಾಮನಿಗಾದರೋ ಬತ್ತಳಿಕೆಯಲ್ಲಿ ಬಾಣಗಳು ಬೇಗನೆ ತೀರಿಹೋದುದರಿಂದ ಅವನ ಕೈ ನಿಂತುಹೋಯಿತು. ಅರ್ಜುನನಿಗೆ ಮೇಲಿಮೇಲೆ ಬಾಣಗಳು ಅಧಿಕವಾಗುತಿದ್ದುವು.

ಇದು ಅರುವತ್ತನೆಯ ಅಧ್ಯಾಯವು.

ಅರ್ಜುನನಿಗೆ ಏಕಕಾಲದಲ್ಲಿ ದ್ರೋಣಾದಿಗಳೆಲ್ಲರೊಡನೆ ಯುದ್ಧವು.

ಓ ಜನಮೇಜಯರಾಜಾ! ಕೇಳು! ಇಷ್ಟರಲ್ಲಿಯೇ ಶಸ್ತ್ರಧಾರಿಗಳಲ್ಲಿ ಮೇಲೆನಿಸಿದ ಮಹಾರಥನಾದ ಕೃಪಾಚಾರ್ಯನು ಅರ್ಜುನನನ್ನೆದಿರಿಸುವುದಕ್ಕೆ ಬಂದನು. ಇದನ್ನು ನೋಡಿ ಅರ್ಜುನನೂ, ಅಶ್ವತ್ಥಾಮನ ರಥವನ್ನು ಬಿಟ್ಟು, ಕೃಪಾಚಾರ್ಯನ ರಥವಿದ್ದಕಡೆಗೆ ವೇಗದಿಂದ ಬಂದನು. ಮಹಾರಥರಾದ ಅವರಿಬ್ಬರೂ, ಮಳೆಗಾಲದ ಮೇಘಗಳು ಒಂದನ್ನೊಂದು ಇದಿರಿಸುವಂತೆ ಕಾಣಿಸಿದರು. ಅರ್ಜುನನು ಲೋಕಪ್ರಖ್ಯಾತವಾದ ತನ್ನ ಗಾಂಡೀವವನ್ನು ತೆಗೆದುಕೊಂಡು, ಬಾಣಪರಂಪರೆಗಳಿಂದ ಕೃಪನನ್ನು ಪ್ರಹರಿಸುತ್ತ ಬಂದನು. ಕೃಪನೂ ತನ್ನ ಧನುಸ್ಸನ್ನು ತೆಗೆದು ಬಾಣಗಳನ್ನು ಬಿಡುತ್ತ ಅರ್ಜುನನಿಗಿದಿರಾದನು. ಕೃಪನು ತನ್ನ ದೃಢವಾದ ಬಿಲ್ಲನ್ನು ಹಿಡಿದು, ಮಳೆಗಾಲದಲ್ಲಿ ಮೇಘವು ಮಳೆಸುರಿಸುವಂತೆ ರಕ್ತವನ್ನು ಹೀರತಕ್ಕ ಬಾಣಗಳನ್ನು ನೂರುಸಾವಿರ ಲೆಕ್ಕದಿಂದ ಅರ್ಜುನನ ಮೇಲೆ ವರ್ಷಿಸಿದನು ಆ ಕೃಪನ ಬಾಣಪ್ರಯೋಗವು ಅವನ ಕಡೆಯವರೆಲ್ಲರಿಗೂ ಸಂತೋಷಕರವಾಗಿದ್ದಿತು. ಅತ್ತಲಾಗಿ ಅರ್ಜುನನು ಕೂಡ ರಣರಂಗದಲ್ಲಿ ಚಿತ್ರಗತಿಗಳಿಂದ ಸಂಚರಿಸುತ್ತ, ತನ್ನ ಬಲವಾದ ಬಿಲ್ಲಿನಿಂದ ದಿಕ್ಕುವಿದಿಕ್ಕುಗಳನ್ನೆಲ್ಲ ಮರೆಸುವಂತೆ ಬಾಣಗಳನ್ನು ಪ್ರಯೋಗಿಸಿದನು. ಆಕಾಶವೆಲ್ಲ ಒಂದೇ ನೆಳಲಾಗಿ ಬಾಣಸಮೂಹಗಳಿಂದ ಮರೆಸಿಹೋಯಿತು. ಮೇಘವು ವರ್ಷಧಾರೆಯಿಂದ ಬೆಟ್ಟವನ್ನು ಹೇಗೋಹಾಗೆ ಅರ್ಜುನನು ನೂರಾರು ಬಾಣಗಳಿಂದ ಕೃಪನನ್ನು ಮರೆಸಿಬಿಟ್ಟನು. ಅಗ್ನಿಜ್ವಾಲೆಯಂತಿರುವ ಬಾಣಗಳ ಪ್ರಹಾರದಿಂದ ಕೋಪಗೊಂಡ ಕೃಪಾಚಾರ್ಯನು, ಹೊಗೆಯಿಲ್ಲದ ಬೆಂಕಿಯಂತೆ ಉರಿಯುತ್ತ, ಸಾವಿರಾರು ಬಾಣಗಳನ್ನು ಪಾರ್ಥನಮೇಲೆ ಪ್ರಯೋಗಿಸಿ, ದೊಡ್ಡದೊಂದು ಸಿಂಹನಾದವನ್ನು ಮಾಡಿದನು. ಆಮೇಲೆ ಅರ್ಜುನನು ಚಿನ್ನದ ಹಿಡಿಯುಳ್ಳ ಒಂದು ತೀಕ್ಷ್ಣಬಾಣದಿಂದ ಕೃಪನ ಧ್ವಜವನ್ನು ಕತ್ತರಿಸಿ ಕೆಡಹಿದನು. ಸೂರ್ಯಸಮಾನಗಳಾದ ಇನ್ನೂ ಅನೇಕ ಬಾಣಗಳನ್ನು ತೆಗೆದು, ಕೃಪನ ರಥಕ್ಕೆ ಕಾವ

ಲಾಗಿದ್ದ ಮಹಾರಥರನೇಕರನ್ನು ಹೊಡೆದನು. ಚಂದ್ರಕೇತು, ಸುಕೇತು, ಚಿತ್ರಾಶ್ವ, ಮಣಿಮಂತ, ಮುಂಜಮೌಳಿ, ಹೇಮವರ್ಣ, ಸುರಥ, ಅತಿರಥ, ಸುಷೇಣ, ಅರಿಷ್ಟ, ನೃಕೇತು, ಮುಂತಾದ ಆ ರಥರಕ್ಷಕರೆಲ್ಲರೂ ತಮ್ಮ ತಮ್ಮ ಸೈನ್ಯಗಳೊಡನೆ ಹತರಾಗಿ ಸತ್ತುಬಿದ್ದರು. ನಿಮಿಷಮಾತ್ರದಲ್ಲಿ ಅವರನ್ನೆಲ್ಲ ಕೊಂದಮೇಲೆ ತಿರುಗಿ ಅರ್ಜುನನು, ಬೇರೆ ಹದಿಮೂರು ಬಾಣಗಳನ್ನು ತೆಗೆದುಕೊಂಡು, ಒಂದರಿಂದ ಕೃಪನ ರಥವೇಗವನ್ನೂ, ನಾಲ್ಕು ಬಾಣಗಳಿಂದ ನಾಲ್ಕು ಕುದುರೆಗಳನ್ನೂ, ಆರನೆಯ ಬಾಣದಿಂದ ಕೃಪನ ರಥವನ್ನು ನಡೆಸುತ್ತಿದ್ದ ಸಾರಥಿಯ ತಲೆಯನ್ನೂ, ಮೂರು ಬಾಣಗಳಿಂದ ರಥದ ಮೂಕೆಯನ್ನೂ, ಎರಡು ಬಾಣಗಳಿಂದ ರಥದ ಅಚ್ಚನ್ನೂ, ಹನ್ನೆರಡನೆಯ ಬಾಣದಿಂದ ಬಾಣಸಹಿತವಾಗಿ ಕೃಪನ ಕೈಯ್ಯಲ್ಲಿದ್ದ ಧನುಸ್ಸನ್ನೂ ಕತ್ತರಿಸಿ, ಹದಿಮೂರನೆಯ ಬಾಣವನ್ನು ಕೃಪನ ಎದೆಗೆ ಗುರಿಯಿಟ್ಟು ಹೊಡೆದನು. ಆಗ ತನ್ನ ರಥಾಶ್ವ ಸಾರಥಿಗಳೆಲ್ಲರೂ ಹೋಗಿ, ಕೈಯಲ್ಲಿದ್ದ ಬಿಲ್ಲೂ ಕತ್ತರಿಸಿಹೋದುದಕ್ಕಾಗಿ ಕೃಪನು ಕೋಪಗೊಂಡು ಸೂರ್ಯಾಗ್ನಿ ತೇಜಸ್ಸುಳ್ಳ ಒಂದು ಶಕ್ತಿಯನ್ನು ತೆಗೆದು ಅರ್ಜುನನಮೇಲೆ ಬೀಸಿದನು. ಆ ಶಕ್ತಿಯು ಬರುತ್ತಿದ್ದಾಗಲೇ ಅರ್ಜುನನು ಅರ್ಧಚಂದ್ರ ಮುಖವುಳ್ಳ ಹತ್ತು ಬಾಣಗಳಿಂದ ಅದನ್ನು ಕತ್ತರಿಸಿಬಿಟ್ಟನು. ಅದು ಹತ್ತು ತುಂಡಾಗಿ ನೆಲಕ್ಕೆ ಬಿದ್ದಿತು. ಇತ್ತಲಾಗಿ ಕೃಪನು, ತನ್ನ ಶಕ್ತ್ಯಾಯುಧವೂ ವಿಫಲವಾಗಿ, ರಥವೂ ಹೋಗಿ, ತನಗೂ ಬಾಣದಿಂದ ಪೆಟ್ಟಾದುದನ್ನು ಸಹಿಸಲಾರದೆ, ಒಡನೆಯೇ ರಥದಿಂದ ಕೆಳಕ್ಕೆ ದುಮುಕಿ, ತನ್ನ ರೂಪದಿಂದ ಕೆತ್ತಿದ ಒಂದು ದೊಡ್ಡ ಗದೆಯನ್ನು ಅರ್ಜುನನಮೇಲೆ ಬೀಸಿದನು. ಆ ಗದೆಯನ್ನೂ ಅರ್ಜುನನು ತನ್ನ ಬಾಣಗಳಿಂದ ತಡೆದು, ಅದು ತಾನು ಬಂದ ದಾರಿಯನ್ನೇ ಹಿಡಿದುಹೋಗುವಂತೆ ಮಾಡಿದನು. ಆಮೇಲೆ ಕೃಪನು ಒಂದು ಕತ್ತಿಯನ್ನೂ, ಗುರಾಣಿಯನ್ನೂ ಹಿಡಿದು ಪಾಂಡವನನ್ನು ಹೊಡೆಯುವುದಕ್ಕೋಸ್ಕರ ವೇಗದಿಂದ ಮುಂದೆ ಹೋದನು. ಕೌರವರಿಗೆ ಪರಮಾಚಾರ್ಯನೂ ಯುದ್ಧದಲ್ಲಿ ಸುಶಿಕ್ಷಿತನೂ ಆದ ಕೃಪನು, ರಣರಂಗದಲ್ಲಿ ಕತ್ತಿ ಗುರಾಣಿಗಳನ್ನು ಹಿಡಿದು, ನಿಂತಲ್ಲಿ ನಿಲ್ಲದೆ ಗಗನಚಾರಿಯಂತೆ ವೇಗದಿಂದ ಸುತ್ತಾಡುತ್ತಿದ್ದನು. ಇಷ್ಟರಲ್ಲಿಯೇ ಅರ್ಜುನನು ಕ್ಷುರಪ್ರಗ

ಳೆಂಬ ಹತ್ತು ಬಾಣಗಳಿಂದ ಕೃಪನ ಕೈಯಲ್ಲಿದ್ದ ಕತ್ತಿ ಗುರಾಣಿಗಳೆರಡನ್ನೂ ಕತ್ತರಿಸಿದನು. ಇದು ಬಹಳ ಆಶ್ಚರ್ಯಕರವಾಯಿತು. ತನ್ನ ಕತ್ತಿ ಗುರಾಣಿಗಳೆರಡೂ ಹೋದುದಕ್ಕಾಗಿ ಕೃಪನು ಬಹಳ ದುಃಖಿತನಾಗಿ, ಕೋಪದಿಂದ ತುಟಿಗಳನ್ನು ಕಚ್ಚುತ್ತ, ದೀರ್ಘವಾಗಿ ನಿಟ್ಟುಸಿರುಬಿಟ್ಟು ಯುದ್ಧದಿಂದ ತಪ್ಪಿಸಿಕೊಂಡುಹೋಗುವುದಕ್ಕೆ ಉದ್ದೇಶಿಸಿದನು. ಆದರೆ ತಿರುಗಿ ಕೃಪನು "ಆದುದಾಗಲಿ" ಎಂದು ಹೇಳುತ್ತ, ತನ್ನ ಸೋದರಳಿಯನಾದ ಅಶ್ವತ್ಥಾಮನ ರಥಕ್ಕೆ ಹಾರಿ ಕುಳಿತು, ಯುದ್ಧಕ್ಕಾಗಿ ತಿರುಗಿ ಧನುಸ್ಸನ್ನು ತೆಗೆದುಕೊಂಡನು. ಕೃಪನಿಗೆ ಅರ್ಜುನನಿಂದುಂಟಾದ ಈ ಪರಾಭವವನ್ನು ನೋಡಿ ಭೀಷ್ಮನಿಗೆ ಆಕ್ರೋಶವು ಹುಟ್ಟಿತು. ಆಗ ಭೀಷ್ಮನು ದ್ರೋಣನನ್ನು ಕುರಿತು, "ಆಚಾರ್ಯ! ನಾವು ಒಬ್ಬೊಬ್ಬರಾಗಿ ಯುದ್ಧಕ್ಕೆ ನಿಂತರೆ, ಅರ್ಜುನನು ಜಯಿಸುವುದೇನೋ ನಿಶ್ಚಯವೇ. ಆದುದರಿಂದ ನಾನೂ, ನೀನೂ, ಕರ್ಣನೂ, ಅಶ್ವತ್ಥಾಮನೂ, ಕೃಪನೂ ಇನ್ನೂ, ಅನೇಕ ಶೂರರೂ ಒಟ್ಟಾಗಿ ಸೇರಿ, ಯುದ್ಧದಲ್ಲಿ ಅರ್ಜುನನನ್ನು ಜಯಿಸಬೇಕು" ಎಂದನು. ಒಡನೆಯೇ ಭೀಷ್ಮನ ಮಾತಿನಂತೆ ದ್ರೋಣಾದಿರಥಿಕರೆಲ್ಲರೂ ಒಂದಾಗಿ ಸೇರಿ ಅರ್ಜುನನನ್ನು ದಿಗಿಸಿದರು. ಪರ್ವತಗಳಮೇಲೆ ಮಂಜು ಕವಿದಂತೆ ಅರ್ಜುನನು ಆ ಮಹಾರಥರೆಲ್ಲರನ್ನೂ ತನ್ನ ಬಾಣಗಳಿಂದ ಮುಚ್ಚಿದನು. ಈ ಗೊಡೆದಾಟದಲ್ಲಿ ಒಂದು ಕಡೆ ಆನೆಗಳ ಗರ್ಜನೆಗಳು, ಮತ್ತೊಂದು ಕಡೆ ಕುದುರೆಗಳ ಹೇಷಾರವಗಳು, ಇನ್ನೊಂದು ಕಡೆ ಶಂಖಧ್ವನಿಗಳು, ಇವೆಲ್ಲವೂ ಸೇರಿ ಒಂದೇ ಗದ್ದಲವಾಯಿತು. ಅರ್ಜುನನ ತೀಕ್ಷ್ಣ ಬಾಣಗಳು ಆನೆ ಕುದುರೆಗಳ ಲೋಹಕವಚಗಳನ್ನು ಭೇದಿಸಿಕೊಂಡು, ನೂರಾರು ಸಂಖ್ಯೆಯಿಂದ ನೆಲಕ್ಕೆ ನಾಟುತ್ತಿದ್ದುವು. ವೇಗದಿಂದ ಬಾಣಗಳನ್ನು ಬಿಡುತ್ತಿದ್ದ ಅರ್ಜುನನು ಶರತ್ಕಾಲದಲ್ಲಿ ಮಧ್ಯಾಹ್ನದ ಸೂರ್ಯನಂತೆ ಜ್ವಲಿಸುತ್ತಿದ್ದನು. ಬಾಣಗಳ ಪೆಟ್ಟನ್ನು ತಡೆಯಲಾರದೆ ಕುದುರೆಗಳು ಹೊರೆಗಳನ್ನು ಕಳೆದು ಉತ್ತರಾಭಿಮುಖವಾಗಿ ಓಡಲಾರಂಭಿಸಿದುವು. ಅಶ್ವಸೈನಿಕರು ಕುದುರೆಯ ಬೆನ್ನುಗಳಿಂದ ಕೆಳಗೆ ಬಿದ್ದರು. ಕಾಲಾಲುಗಳು ಅಲ್ಲಲ್ಲಿ ಭೂಮಿಯಮೇಲೆ ಸತ್ತುಬೀಳುತ್ತಿದ್ದರು. ಆ ಸೈನಿಕರ ಮೈಮೇಲಿದ್ದ ತಾಮ್ರ ಮತ್ತು ಬೆಳ್ಳಿಯ ಕವಚಗಳಮೇಲೆ ಅರ್ಜುನನ ಬಾಣಗಳು ಬೀಳು

ವುದರಿಂದಾದ ಧ್ವನಿಗಳು ಅತಿಪ್ರಬಲವಾಗಿ ಕೇಳಿಸುತ್ತಿತ್ತು. ಕೈಯಿಂದ ಶಸ್ತ್ರಗಳು ಜಾರಿಬಿದ್ದುದನ್ನೂ ತಿಳಿಯದೆ, ಕುದುರೆಗಳಿಂದ ಕೆಳಗೆ ಬಿದ್ದ ರಾಹುತರ ಶರೀರಗಳು ಯುದ್ಧಭೂಮಿಯಷ್ಟನ್ನೂ ಮರೆಸಿದುವು. ಅರ್ಜುನನೂ ತನ್ನ ಬಾಣಗಳಿಂದ ರಥವೆಲ್ಲವನ್ನೂ ಶೂನ್ಯವನ್ನಾಗಿ ಮಾಡಿದನು. ಮನುಷ್ಯದೇಹದಿಂದ ಭೂಮಿಯೆಲ್ಲವನ್ನೂ ಹರಡಿದನು. ಯುದ್ಧರಂಗದಲ್ಲಿ ಕುಣಿದಾಡುವವನಂತೆ ಅರ್ಜುನನು ಅನೇಕಕ್ಷತ್ರಿಯರ ತಲೆಗಳನ್ನು ಉರುಳಿಸಿಬಿಟ್ಟನು. ಸಿಡಿಲಿನ ಧ್ವನಿಯಂತಿರುವ ಗಾಂಡೀವ ಧ್ವನಿಯನ್ನು ಕೇಳಿಯೇ ಸೈನ್ಯಗಳು ಭಯಪಟ್ಟು ಬೆದರಿ ಅಲ್ಲಲ್ಲಿ ಅಡಗಿಕೊಂಡುವು. ಕಡುಕುಗಳಿಂದಲೂ, ತಲೆಪಾಗುಗಳಿಂದಲೂ, ಸುವರ್ಣಮಾಲಿಕೆಗಳಿಂದಲೂ ಕೂಡಿದ ಎಷ್ಟೋ ತಲೆಗಳು ರಣರಂಗದಲ್ಲಿ ಬಿದ್ದಿದ್ದುವು. ಅರ್ಜುನನ ಬಾಣಗಳಿಂದ ಕತ್ತರಿಸಲ್ಪಟ್ಟ ತೋಳುಗಳು ಕೈಯಲ್ಲಿ ಹಿಡಿದ ಬಿಲ್ಲುಗಳೊಡನೆಯೂ, ಕೈಬಳೆಗಳೊಡನೆಯೂ ಬಿದ್ದಿದ್ದುವು. ಅರ್ಜುನನು ತನ್ನ ತೀಕ್ಷ್ಣಬಾಣಗಳಿಂದ ಹಾರಿಸಿದ ತಲೆಗಳು ಆಕಾಶದಿಂದ ಕಲ್ಲುಮಳೆಗಳು ಬೀಳುವಂತೆ ಉದಿರುತ್ತಿದ್ದುವು. ಹೀಗೆ ಅರ್ಜುನನು ತನ್ನ ರೌದ್ರಾವೇಶವನ್ನು ತೋರಿಸುತ್ತ ಶತಸಹಸ್ರಸಂಖ್ಯೆಯ ಶೂರರನ್ನು ಕೊಂದು ಕೆಡಹಿದನು. ಹಿಂದೆ ವನವಾಸಾದಿಗಳಿಂದ ಹದಿಮೂರುವರ್ಷಗಳವರೆಗೆ ತನ್ನಲ್ಲಿಯೇ ಅಡಗಿಸಿಕೊಂಡಿದ್ದ ಕೋಪಾಗ್ನಿಯನ್ನು, ಆಗಿನ ಯುದ್ಧದಲ್ಲಿ ಅರ್ಜುನನು ಕೌರವರಮೇಲೆ ಉರುಬಿಬಿಟ್ಟನು. ಹೀಗೆ ಸೈನ್ಯವನ್ನೆಲ್ಲ ದಹಿಸುತ್ತಿರುವ ಅರ್ಜುನನ ಪರಾಕ್ರಮವನ್ನು ನೋಡಿ ದುರ್ಯೋಧನನ ಕಡೆಯ ಯೋಧರೆಲ್ಲ ಶಾಂತಿಯನ್ನು ವಹಿಸಿ ಸುಮ್ಮನಾದರು. ಅರುವತ್ತು ವಯಸ್ಸಿನ ಮದದಾನೆಯು, ನೊದೆಹುಲ್ಲಿನ ವನಕ್ಕೆ ನುಗ್ಗಿದಂತೆ ಅರ್ಜುನನು ಸೈನ್ಯವನ್ನೆಲ್ಲ ತನ್ನ ಶಸ್ತ್ರತೇಜಸ್ಸಿನಿಂದ ಅಡಗಿಸಿಬಿಟ್ಟನು. ಹೀಗೆ ಸೈನ್ಯವನ್ನೆಲ್ಲ ಓಡಿಸಿ, ಮಹಾರಥರನ್ನು ಅಂಜಿಸಿ ಅರ್ಜುನನು ಜಯಶಾಲಿಯಾಗಿ ಹಿಂತಿರುಗಿದನು. ಇವನು ದಾರಿಯಲ್ಲಿ ಸಿಕ್ಕಿದವರನ್ನು ಹೊಡೆಯುತ್ತ ಬಂದಾಗ, ರಣರಂಗದಲ್ಲಿ ನರಗಳು ಮತ್ತು ರಕ್ತಗಳೆಂಬ ಅಲೆಗಳಿಂದಲೂ, ಅಸ್ಥಿಗಳೆಂಬ ಪಾಚಿಗಳಿಂದಲೂ, ಬಿಲ್ಲುಬಾಣಗಳೆಂಬ ದೋಣಿಗಳಿಂದಲೂ, ರಕ್ತಮಾಂಸಗಳೆಂಬ ಕೆಸರಿನಿಂದಲೂ, ರಥಗಳೆಂಬ ಹಡಗುಗಳಿಂದಲೂ,

ಆಂತ್ರಗಳೆಂಬ ಹಾವುಗಳಿಂದಲೂ, ತಲೆಕೂದಲುಗಳೆಂಬ ಪಾಚಿಯ ಗಿಡ ಗಳಿಂದಲೂ, ಸಣ್ಣ ದೊಡ್ಡ ಕತ್ತಿಗಳೆಂಬ ಮೀನುಗಳಿಂದಲೂ, ಬಿಳಿಯ ಚಾಮರಗಳು ಮತ್ತು ತಲೆಪಾಗುಗಳೆಂಬ ನೊರೆಗಳಿಂದಲೂ, ಕುದುರೆಗಳೆಂಬ ಸುಳಿಗಳಿಂದಲೂ, ಮುಂಡಗಳೆಂಬ ನೀರುಮನುಷ್ಯರಿಂದಲೂ, ಕಾಗೆ ಹದ್ದು ಗಳ ಕೂಗುಗಳೆಂಬ ಕ್ರೌಂಚಸಾರಸಪಕ್ಷಿಗಳ ಧ್ವನಿಯಿಂದಲೂ, ಸಿಂಹನಾದ ವೆಂಬ ಪ್ರವಾಹಘೋಷದಿಂದಲೂ, ಶಂಖಧ್ವನಿಯೆಂಬ ದೊಡ್ಡ ಮೊರೆತ ದಿಂದಲೂ, ವೀರರ ತಲೆಗಳೆಂಬ ಕಮಲಗಳಿಂದಲೂ, ಬಿಲ್ಲುಬಾಣಗಳೆಂಬ ಹೊಡಕೆಗಳಿಂದಲೂ, ಕಾಲಾಳುಗಳೆಂಬ ದೊಡ್ಡ ಮೀನುಗಳಿಂದಲೂ, ಆನೆ ಯ ತಲೆಗಳೆಂಬ ಆಮೆಗಳಿಂದಲೂ, ನರಿಗಳೆಂಬ ಜಲಮೃಗಗಳಿಂದಲೂ, ಮಾಂಸ ಮತ್ತು ಮದ್ಯಗಳೆಂಬ ಕೆಸರಿನಿಂದಲೂ ಕೂಡಿದ ಘೋರವಾದ ಒಂದು ನದಿಯು ಪ್ರವಹಿಸುತಿತ್ತು. ಆ ನದಿಯು ಅಪಾರವಾಗಿಯೂ, ತಡೆಯಲಸಾಧ್ಯವಾಗಿಯೂ, ರಕ್ತವೆಂಬ ಜಲದಿಂದ ಪೂರ್ಣವಾಗಿಯೂ, ನಾನಾ ಶಾಖೆಗಳಾಗಿ ವ್ಯಾಪಿಸಿದಂತಿದ್ದಿತು. ಆ ರಕ್ತನದಿಯಲ್ಲಿ ಆನೆಗಳ ಶರೀರಗಳೇ ದೊಡ್ಡ ದ್ವೀಪಗಳಂತೆಯೂ, ಅಶ್ವದೇಹಗಳು ದೊಡ್ಡ ಬಂಡೆ ಗಳಂತೆಯೂ, ರಥಸಮೂಹಗಳೇ ದೊಡ್ಡ ಮರಗಳಂತೆಯೂ ಕಾಣಿಸುತಿ ದ್ದುವು. ಯಮಸಾಗರವನ್ನು ಸೇರತಕ್ಕ ಆ ರಕ್ತನದಿಯು, ನೋಡುವವ ರಿಗೆ ಅತ್ಯಂತ ಭಯಂಕರವಾಗಿತ್ತು. ಹೀಗೆ ಅರ್ಜುನನು, ಆ ರಣ ರಂಗದಲ್ಲಿ ಭೀರುಗಳಿಗೆ ದುಸ್ತರವಾದ, ಶೂರರಿಗೆ ಸಂಚಾರಯೋಗ್ಯವಾದ ಒಂದು ದೊಡ್ಡ ರಕ್ತನದಿಯನ್ನು ಕಲ್ಪಿಸಿದನು. ಆ ಯುದ್ಧದಲ್ಲಿ ಅರ್ಜು ನನು ಬತ್ತಳಿಕೆಯಿಂದ ಬಾಣವನ್ನು ತೆಗೆಯುವುದಕ್ಕೂ, ಅದನ್ನು ಬಿಲ್ಲಿನಲ್ಲಿ ಸೇರಿಸುವುದಕ್ಕೂ, ಬಿಲ್ಲನ್ನೆಳೆಯುವುದಕ್ಕೂ, ಬಾಣಗಳನ್ನು ಬಿಡುವುದ ಕ್ಕೂ ನಡುವೆ ಅವಕಾಶವಿದ್ದಂತೆಯೇ ಕಾಣುತ್ತಿರಲಿಲ್ಲ.

ಇದು ಅರುವತ್ತೊಂದನೆಯ ಅಧ್ಯಾಯವು.

ಭೀಷ್ಮಾರ್ಜುನರು ಯುದ್ಧಕ್ಕೆ ಎದಿರಾದುದನ್ನು ನೋಡಿ ದೇವತೆಗಳು ಅವರನ್ನು ಕೊಂಡಾಡಿದುದು.

ಜನಮೇಜಯರಾಜಾ ! ಕೇಳು ! ಅರ್ಜುನನು ಹೀಗೆ ಆ ಸೈನ್ಯವನ್ನೆಲ್ಲ ತನ್ನ ಉಗ್ರಪರಾಕ್ರಮದಿಂದ ಭಯಪಡಿಸಿ ಓಡಿಸಿಬಿಟ್ಟಮೇಲೆ ಭೀಷ್ಮನನ್ನು ಎದಿರಿಸಿ ಬಂದನು. ಭೀಷ್ಮನಿಗೆ ಎದಿರಾದೊಡನೆ ಅರ್ಜುನನು ಅವನಲ್ಲಿ ತನಗಿದ್ದ ಭಯಭಕ್ತಿಗಳಿಂದ, ಮೊದಲು ನಾಲ್ಕು ಬಾಣಗಳನ್ನು ಬಿಲ್ಲಿಗೆ ಸಂಧಾನಮಾಡಿ, ಅವುಗಳಲ್ಲಿ ಎರಡು ಬಾಣಗಳನ್ನು, ಅವನಿಗೆ ಪಾದವಂದನರೂಪವಾಗಿ ಅವನ ಕಾಲುಗಳಿಗೆ ಬಿಟ್ಟನು. ಮತ್ತೆರಡು ಬಾಣಗಳು ಭೀಷ್ಮನ ಎರಡು ಕಿವಿಗಳ ಮಾರ್ಗವಾಗಿ ಹೋಗಿ ಕುಶಲಪ್ರಶ್ನೆಯನ್ನು ಮಾಡಿದುವು. ಭೀಷ್ಮನೂ ಕೂಡ " ಕುಂತೀಪುತ್ರನಿಗೆ ಜಯವಾಗಲಿ " ಎಂದು ಆಶೀರ್ವದಿಸಿದನು. ಇಷ್ಟರಲ್ಲಿಯೇ ಕರ್ಣನ ಮಗನಾದ ವೃಷಸೇನನೆಂಬವನು, ಯುದ್ಧೋದ್ಯತನಾಗಿ ಬರುತ್ತಿರುವ ಪುರುಷಸಿಂಹನಾದ ಅರ್ಜುನನೊಡನೆ ತಾನು ಯುದ್ಧಮಾಡಬೇಕೆಂಬ ಆಸೆಯಿಂದ, ಬೇಗನೆ ಮುಂದೆ ಬಂದು ಅರ್ಜುನನನ್ನು ಎದಿರಿಸಿದನು. ಆ ವೃಷಸೇನನಾದರೋ ಯುದ್ಧದಲ್ಲಿ ಲೋಕಪ್ರಸಿದ್ಧನಾದ ವೀರನು. ಬಿಂಬದಿಂದ ಪ್ರತಿಬಿಂಬವು ಹೇಗೋ ಹಾಗೆ ಶೌರ್ಯ ವೀರ್ಯಾದಿ ಸರ್ವವಿಧಗಳಲ್ಲಿಯೂ ಕರ್ಣನಿಗೆ ಸಮಾನನಾಗಿ ಹುಟ್ಟಿದವನು. ಇಂತಹ ವೃಷಸೇನನು ಆತುರದಿಂದ ತನ್ನೊಡನೆ ಯುದ್ಧಕ್ಕೆ ಬಂದುದನ್ನು ನೋಡಿ ಅರ್ಜುನನು ಸ್ವಲ್ಪಹೊತ್ತಿನವರೆಗೆ ಅವನ ಪರಾಕ್ರಮವನ್ನೂ, ಹಸ್ತಲಾಘವವನ್ನೂ ನೋಡುತ್ತಿದ್ದು, ಇನ್ನೂ ಬಾಲನಾದ ಅವನ ಪರಾಕ್ರಮಕ್ಕೆ ಸಂತೋಷಪಟ್ಟನು. ಆಮೇಲೆ ಅರ್ಜುನನು ಹದ್ದಿನ ಗರಿಗಳುಳ್ಳ ಹರಿತವಾದ ಒಂದು ಬಾಣವನ್ನು ಆ ವೃಷಸೇನನ ಕೈಯಲ್ಲಿದ್ದ ಬಿಲ್ಲಿಗೆ ಗುರಿಯಿಟ್ಟು ಹೊಡೆದು, ಸುವರ್ಣಾಲಂಕೃತವಾದ ಆ ಧನುಸ್ಸನ್ನು ಕತ್ತರಿಸಿ, ಐದು ಬಾಣಗಳನ್ನು ಅವನ ಎದೆಗೆ ಗುರಿಯಿಟ್ಟು ಹೊಡೆದನು. ಪಾರ್ಥನ ಬಾಣದಿಂದ ಬಹಳವಾಗಿ ನೊಂದ ವೃಷಸೇನನು ಒಡನೆಯೇ ರಥದಿಂದ ಧುಮುಕಿ ಓಡಿಹೋದನು. ಇಷ್ಟರಲ್ಲಿಯೇ ಇದನ್ನು ನೋಡುತಿದ್ದ ದುಶ್ಶಾಸನ, ವಿಕರ್ಣ, ಶಕುನಿ, ವಿವಿಂಶತಿಯೆಂಬೀ ನಾಲ್ವರೂ ಒಟ್ಟಾಗಿ ಸೇರಿ,

ಇದಿರಾಗಿ ಬರುತ್ತಿದ್ದ ಅರ್ಜುನನನ್ನು ಅವರಿಸಿಕೊಂಡರು. ಒಡನೆಯೇ ಅರ್ಜುನನು ಅತಿವೇಗದಿಂದ ಹಲವು ಬಾಣಗಳನ್ನು ಪ್ರಯೋಗಿಸಿ ಅವರ ಧ್ವಜವನ್ನೂ, ಧನುಸ್ಸನ್ನೂ, ರಥದ ನೊಗವನ್ನೂ ಕತ್ತರಿಸಿ ಕೆಡಹಿದನು. ಅವರು ಕೈಯ್ಯಲ್ಲಿದ್ದ ಧನುಸ್ಸನ್ನೂ, ಧ್ವಜವನ್ನೂ ಕಳೆದುಕೊಂಡು ಅರ್ಜುನನ ಬಾಣವೇಗವನ್ನು ತಡೆಯಲಾರದೆ ರಣರಂಗದಿಂದ ಓಡಿಹೋದರು. ಆಗ ಅರ್ಜುನನು ನಗುತ್ತ, ಉತ್ತರನನ್ನು ನೋಡಿ "ಓ ಸಾರಥೀ! ಅದೋ! ಸುವರ್ಣಮಯವಾದ ತಾಳೆಯ ಮರಗಳ ಗುರುತುಳ್ಳ ಎತ್ತರವಾದ ಒಂದು ಧ್ವಜವು, ಮೇಘಗಳನಡುವೆ ಮಿಂಚಿನಂತೆ ಥಳಥಳಿಸುತ್ತಿರುವುದು ನೋಡು! ನಮ್ಮ ರಥವನ್ನೂ ಅಲ್ಲಿಗೆ ಬಿಡು. ಅವನೇ ಶಂತನುಪುತ್ರನಾದ ಪೂಜ್ಯನಾದ ಭೀಷ್ಮನು. ಅವನ ಸಮೀಪಕ್ಕೆ ಹೋಗುವೆವು ನಡೆ. ನಿನಗೆ ಅವನ ದಿವ್ಯಾಸ್ತ್ರಪ್ರಭಾವಗಳನ್ನು ತೋರಿಸುವೆನು. ಘೋರರೂಪವುಳ್ಳವುಗಳೂ, ವಿಚಿತ್ರಗಳೂ, ಬಹಳ ಹಗುರವಾದವುಗಳೂ, ಬಹಳ ಭಾರವುಳ್ಳವುಗಳೂ, ಆದ ವಿವಿಧಾಸ್ತ್ರಗಳು ಅವನಲ್ಲಿರುವುವು. ನಮ್ಮ ಬಾಲ್ಯದಿಂದಲೂ ಅವನೇ ನಮ್ಮನ್ನು ಕಾಪಾಡಿದವನು. ಯಾವಾಗಲೂ ನಮಗೆ ಶ್ರೇಯಸ್ಸನ್ನೇ ಬಯಸುವನು. ನಿತ್ಯವೂ ನಮ್ಮ ಯೋಗಕ್ಷೇಮವನ್ನು ವಿಚಾರಿಸತಕ್ಕವನು. ರಾಜಕುಮಾರಾ! ಬಾಲ್ಯದಲ್ಲಿ ಅವನ ತೊಡೆಯಲ್ಲಿಯೇ ಬೆಳೆದ ನಾನು, ಈಗ ಆ ಮಹಾತ್ಮನಿಗಿದಿರಾಗಿ ನಿಂತು ಯುದ್ಧಮಾಡಬೇಕಾಗಿದೆ. ಅವನು ಹಗಲು ರಾತ್ರಿಯೂ ಕೌರವರಿಗೂ ನಮಗೂ, ಸಮಾಧಾನವಾಗಬೇಕೆಂದೇ ಕೋರುತ್ತಿರುವನು" ಎಂದನು. ಸಾರಥಿಯಾದ ಉತ್ತರನು ಅರ್ಜುನನ ಈ ಮಾತನ್ನು ಕೇಳಿದೊಡನೆ ಭೀಷ್ಮನ ರಥವಿದ್ದ ಕಡೆಗೆ ತನ್ನ ರಥವನ್ನು ಬಿಟ್ಟನು. ಪ್ರಬಲವಾದ ಗಾಳಿಯಿಂದ ಪ್ರೇರಿತವಾದ ಮಹಾಮೇಘದಂತೆ ಅರ್ಜುನನ ರಥವು ವೇಗದಿಂದ ತನಗಿದಿರಾಗಿ ಬರುವುದನ್ನು ನೋಡಿ ಗಾಂಗೇಯನೂ ಕೂಡ ಸೂರ್ಯತೇಜಸ್ಸುಳ್ಳ ತನ್ನ ರಥದೊಡನೆ ಮುಂದೆ ಬಂದನು. ಆಗ ಭೀಷ್ಮನು ಮುಂದಿದ್ದ ಅರ್ಜುನನನ್ನು ನೋಡಿ ಒಂದು ಗೂಳಿಯು ಮತ್ತೊಂದು ಗೂಳಿಯನ್ನು ಇದಿರಿಸುವಂತೆ ಯುದ್ಧಕ್ಕಾಗಿ ಅವನನ್ನು ಇದಿರಿಸಿದನು. ಹೀಗೆ ಕೌರವಸೈನ್ಯದ ಯೋಧರೆಲ್ಲರೂ ಅರ್ಜುನನ ಬಾಣಗಳಿಂದ ಕೊಲ್ಲಲ್ಪಡುತ್ತಿರುವಾಗ, ಪಿತಾಮಹನಾದ ಆ ಭೀಷ್ಮನು ಸುವ

ರ್ಣಾಲಂಕೃತವಾದ ತನ್ನ ಬಿಲ್ಲನ್ನೂ, ಮರ್ಮಭೇದಕಗಳಾದ ತೀಕ್ಷ್ಣಬಾಣಗಳನ್ನೂ ಹಿಡಿದು ವೇಗದಿಂದ ಮುಂದಾದನು. ತಲೆಯಮೇಲೆ ಬಿಳುಪಾದ ಶ್ವೇತಚ್ಛತ್ರವು ಶೋಭಿಸುತ್ತಿರಲು, ಸೂರ್ಯಬಿಂಬವನ್ನು ಶಿಖರದಲ್ಲಿ ಉಳ್ಳ ಪರ್ವತಶ್ರೇಷ್ಠದಂತೆ ಕಾಣುತ್ತ, ತನ್ನ ಕಡೆಯವರಿಗೆಲ್ಲ ಉತ್ಸಾಹವು ಹುಟ್ಟುವಂತೆ ಶಂಖಧ್ವನಿಯನ್ನು ಮಾಡಿ, ಬಲಪಾರ್ಶ್ವವಾಗಿ ಬಂದು ಅರ್ಜುನನನ್ನು ತಡೆದನು. ಇದನ್ನು ನೋಡಿ ಅರ್ಜುನನು ಸಂತೋಷದಿಂದ, ತನಗೆ ಇಷ್ಟನಾದ ಅತಿಥಿಯನ್ನು ಹೇಗೋಹಾಗೆ ಭೀಷ್ಮನನ್ನು ಆದರಿಸಿ ದೇವದತ್ತವೆಂಬ ತನ್ನ ಶಂಖವನ್ನೂದಿದನು. ಭೀಷ್ಮಾರ್ಜುನರಿಬ್ಬರ ಶಂಖನಾದಗಳು ಭೂಮ್ಯಾಕಾಶಗಳನ್ನೆಲ್ಲ ವ್ಯಾಪಿಸಿ, ದಿಕ್ಕುಗಳನ್ನೆಲ್ಲ ಮೊಳಗಿಸಿದುವು. ಇಷ್ಟರಲ್ಲಿಯೇ ಆಕಾಶದಲ್ಲಿ ಇಂದ್ರಾದಿದೇವತೆಗಳೆಲ್ಲರೂ ಭೀಷ್ಮಾರ್ಜುನರಿಬ್ಬರೂ ಯುದ್ಧಕ್ಕಿದಿರಾದುದನ್ನು ನೋಡಿ ತಮ್ಮೊಳಗೆ ತಾವು "ಆಹಾ! ಅರ್ಜುನನು ತನ್ನ ಶಸ್ತ್ರತೇಜಸ್ಸಿನಿಂದ ಈಗಲೇ ಕೌರವಸೈನ್ಯಗಳನ್ನೆಲ್ಲ ಛಿನ್ನಭಿನ್ನವಾಗಿ ಮಾಡಿದನು. ಈಗ ಸರ್ವಾಸ್ತ್ರಕುಶಲರೂ, ವೀರಾಗ್ರಣಿಗಳೂ, ಯುದ್ಧದಲ್ಲಿ ಬಹಳ ಎಚ್ಚರಿಕೆಯುಳ್ಳವರೂ, ಕುರುಶ್ರೇಷ್ಠರೂ ಆದ ಈ ಭೀಷ್ಮಾರ್ಜುನರಿಬ್ಬರೂ ಯುದ್ಧಕ್ಕಿದಿರಾಗಿರುವರು. ಇಬ್ಬರೂ ದೇವ ಮನುಷ್ಯ ಲೋಕಗಳಲ್ಲೆಲ್ಲ ತಮ್ಮ ಪರಾಕ್ರಮ ಕಾರ್ಯಗಳಿಂದ ಹೆಸರುಗೊಂಡವರು. ಇಬ್ಬರೂ ಯುದ್ಧದಲ್ಲಿ ಅಧಿಕಪರಿಚಯುವುಳ್ಳವರು. ಇಬ್ಬರೂ ಕಾಂತಿಯಿಂದ ಜ್ವಲಿಸುವ ಉತ್ತಮ ಧನುಸ್ಸನ್ನು ಹಿಡಿದವರು. ಇಬ್ಬರೂ ಮನುಷ್ಯರಲ್ಲಿ ಹುಲಿಗಳಂತಿರುವರು. ಇಬ್ಬರೂ ಸೂರ್ಯನಿಗೂ, ಅಗ್ನಿಗೂ ಸಮಾನವಾದ ಪರಾಕ್ರಮವೇಗವುಳ್ಳವರು. ಇಬ್ಬರೂ ಸಾಕ್ಷಾನ್ಮಹಾವಿಷ್ಣುವಿಗೂ, ಕಾರ್ತವೀರ್ಯಾರ್ಜುನನಿಗೂ ಸಾಟಿಯಾದವರು. ಇಬ್ಬರೂ ಪ್ರಸಿದ್ಧಕಾರ್ಯವುಳ್ಳವರು. ಇಬ್ಬರೂ ಮಹಾ ಬಲಾಢ್ಯರು. ಇಬ್ಬರೂ ಶಸ್ತ್ರಾಸ್ತ್ರಗಳನ್ನು ಬಲ್ಲವರೊಳಗೆಲ್ಲ ಮೇಲೆನಿಸಿದವರು. ಅಗ್ನಿ, ಇಂದ್ರ, ಸೋಮ, ಯಮ, ಕುಬೇರ, ಮಿತ್ರ, ವರುಣಾದಿಗಳ ವೀರ್ಯವನ್ನೆಲ್ಲ ಇವರಿಬ್ಬರ ಪರಾಕ್ರಮಕ್ಕೆ ಹೋಲಿಸಬಹುದು. ಈ ಭೀಷ್ಮನನ್ನು ಬಿಟ್ಟರೆ, ಬೇರೆ ಯಾವ ಕ್ಷತ್ರಿಯನು ತಾನೇ ಕುಂತೀಪುತ್ರನಾದ ಅರ್ಜುನನೊಡನೆ ಇಷ್ಟು ಧೈರ್ಯದಿಂದ ದ್ವಂದ್ವಯುದ್ಧಕ್ಕೆ ನಿಲ್ಲಬಲ್ಲನು?" ಎಂದು ಹೇಳುತ್ತ ಆ

ಭೀಷ್ಮಾರ್ಜುನರನ್ನು ಬಹಳವಾಗಿ ಕೊಂಡಾಡುತಿದ್ದರು. ಇತ್ತಲಾಗಿ ರಣಗಂಗದಲ್ಲಿ ದೇವರಾಜಸೈನ್ಯದಂತೆ ಪ್ರಬಲವಾದ ಕೌರವಸೈನ್ಯವೂಕೂಡ, ತೂರ್ಯ ಶಂಖಾದಿ ನಾನಾವಿಧ ವಾದ್ಯಘೋಷಗಳಿಂದಲೂ, ಸಿಂಹನಾದಗಳಿಂದಲೂ, ಕುರುಶ್ರೇಷ್ಠನಾದ ಭೀಷ್ಮನನ್ನು ಗೌರವಿಸುತ್ತಿತ್ತು.

ಇದು ಅರುವತ್ತೆರಡನೆಯ ಅಧ್ಯಾಯವು.

ಭೀಷ್ಮ ಪರಾಜಯವು.

ಜನಮೇಜಯರಾಜಾ! ಕೇಳು! ಆಮೇಲೆ ಭೀಷ್ಮನು, ಸರ್ಪಗಳಂತಿರುವ ಎಂಟು ಕ್ರೂರ ಬಾಣಗಳನ್ನು ಅರ್ಜುನನ ಧ್ವಜಕ್ಕೆ ಗುರಿಯಿಟ್ಟು ಹೊಡೆದನು. ಆ ಬಾಣಗಳು ಧ್ವಜದಲ್ಲಿದ್ದ ಕಪಿಗೂ, ಧ್ವಜಾಗ್ರದಲ್ಲಿದ್ದ ಭೂತಗಳಿಗೂ ತಾಗಿದುವು. ಆಮೇಲೆ ಭೀಷ್ಮನು ಹತ್ತು ಬಾಣಗಳಿಂದ ಅರ್ಜುನನ ಸಾರಥಿಯನ್ನೂ, ಕುದುರೆಗಳನ್ನೂ ಹೊಡೆದನು. ಬೇರೆ ಮೂರು ಉಕ್ಕಿನ ಬಾಣಗಳನ್ನು ಅರ್ಜುನನ ಎದೆಗೆ ಗುರಿಯಿಟ್ಟು ಹೊಡೆದನು. ಆಮೇಲೆ ಅರ್ಜುನನು ಭೀಷ್ಮನಮೇಲೆ ಕೆಲವು ಬಾಣಗಳನ್ನು ಪ್ರಯೋಗಿಸಿ, ಬೇರೆ ಹತ್ತು ಬಾಣಗಳಿಂದ ಭೀಷ್ಮನ ಧ್ವಜವನ್ನೂ, ಸಾರಥಿಯನ್ನೂ ಹೊಡೆದನು. ಭೀಷ್ಮಾರ್ಜುನರಿಗೆ ನಡೆದ ಆ ಯುದ್ಧವು, ವೃತ್ರ ವಾಸವರ ಯುದ್ಧದಂತೆ ನೋಡುವವರಿಗೆ ಭಯಂಕರವಾಗಿ, ಮೈಯಲ್ಲಿ ರೋಮಾಂಚವನ್ನು ಹುಟ್ಟಿಸುವಂತಿದ್ದಿತು. ಮೇಘಗಳಿಂದ ಬಿದ್ದ ಜಲಧಾರೆಗಳಿಂದ ಹೇಗೋಹಾಗೆ, ಭೀಷ್ಮಾರ್ಜುನರ ಬಾಣಸಮೂಹಗಳಿಂದ ಆಕಾಶವೆಲ್ಲವೂ ಮರೆಸಿತು. ಭೀಷ್ಮಾರ್ಜುನರ ಬಾಣಗಳು ಅಂತರಿಕ್ಷದಲ್ಲಿ ಒಂದಕ್ಕೊಂದಕ್ಕೆ ತಗುಲಿ, (ಆದರಿಂದುಂಟಾದ ಕಿಡಿಗಳೊಡನೆ) ಮಳೆಗಾಲದ ಮಿಂಚುಹುಳಗಳಂತೆ ಕಾಣಿಸಿದುವು. ಎರಡುಕೈಗಳಿಂದಲೂ ಎಡೆಬಿಡದೆ ಬಾಣವನ್ನು ಬಿಡುತ್ತ ಅರ್ಜುನನು ಕೈಯಲ್ಲಿ ಹಿಡಿದಿದ್ದ ಗಾಂಡೀವವು ಭಯಂಕರವಾದ ಅಲಾತಚಕ್ರದಂತೆ ಕಾಣಿಸಿತು. ಮೇಘವು ವರ್ಷಧಾರೆಯಿಂದ ಪರ್ವತವನ್ನು ಮುಚ್ಚುವಂತೆ ಅರ್ಜುನನು ಬಾಣಧಾರೆಯಿಂದ ಭೀಷ್ಮನನ್ನು ಮರೆಸಿದನು. ಆದರೇನು? ಭೀಷ್ಮನು ಆ ಬಾಣಗಳನ್ನೆಲ್ಲ ತನ್ನ ಬಾಣಗಳಿಂದ

ಕತ್ತರಿಸಿ, ಅರ್ಜುನನನ್ನೂ ಬಾಣಗಳಿಂದ ತಡೆದನು. ಭೀಷ್ಮನ ಬಾಣಗಳೆಲ್ಲವೂ ಅರ್ಜುನನ ರಥಕ್ಕೆ ತಗುಲಿ ತುಂಡಾಗಿ ಬಿದ್ದು ಹೋದುವು. ಚಿನ್ನದ ಹಿಡಿಗಳಿಂದಲೂ, ಗರಿಗಳಿಂದಲೂ ಕೂಡಿದ ಭೀಷ್ಮಾರ್ಜುನರ ತೀಕ್ಷ್ಣ ಬಾಣಗಳು ಆಕಾಶವನ್ನೆಲ್ಲ ಆವರಿಸಿದುವು. ಆಮೇಲೆ ಅರ್ಜುನನು ಅಸಂಖ್ಯಾತಗಳಾದ ಕ್ರೂರ ಬಾಣಗಳನ್ನು ಭೀಷ್ಮನಮೇಲೆ ಪ್ರಯೋಗಿಸಲು, ಭೀಷ್ಮನೂ ಅಷ್ಟೇ ಬಾಣಗಳನ್ನು ಅರ್ಜುನನಮೇಲೆ ಬಿಟ್ಟನು. ಮತ್ತು ವತ್ಸದಂತಗಳೆಂಬ ಶಸ್ತ್ರಗಳಿಂದ ರಥ, ರಥಾಶ್ವ, ಸಾರಥಿಗಳೊಡನೆ ಅರ್ಜುನನನ್ನು ಮುಚ್ಚಿದುದಲ್ಲದೆ, ಬಾಣಜಾಲಗಳಿಂದ, ಎಲ್ಲಾ ದಿಕ್ಕುಗಳನ್ನೂ, ಆಕಾಶವನ್ನೂ ಮರೆಸಿಬಿಟ್ಟನು. ಇದನ್ನು ನೋಡಿ ಅಂತರಿಕ್ಷದಲ್ಲಿ ದೇವತೆಗಳೂ, ಋಷಿಗಳೂ, ಗಂಧರ್ವರೂ ಆಶ್ಚರ್ಯಭರಿತರಾಗಿ "ಭಲೆ! ಭಲೆ! ಭೀಷ್ಮನು ಯಾರಿಗೂ ಸಾಧ್ಯವಲ್ಲದ ದುಷ್ಕರಕಾರ್ಯವನ್ನು ಮಾಡಿದನು. ಅರ್ಜುನನನ್ನೂ ಹೀಗೆ ತನ್ನ ಬಾಣಗಳಿಂದ ತಡೆದನಲ್ಲವೆ? ಅರ್ಜುನನೋ ಮಹಾ ಬಲಾಢ್ಯನು! ಅತ್ಯಂತ ಹಸ್ತಲಾಘವವುಳ್ಳವನು! ಸಮರ್ಥನು! ದೇವಕೀಪುತ್ರನಾದ ಕೃಷ್ಣನೊಬ್ಬನು, ಮಹಾಬಲಶಾಲಿಯೂ, ಆಚಾರ್ಯಶ್ರೇಷ್ಠನೂ ಆದ ದ್ರೋಣನೊಬ್ಬನು, ಭೀಷ್ಮನೊಬ್ಬನು, ಈ ಮೂವರು ಹೊರತು ಬೇರೆ ಯಾವನು ತಾನೇ ಈ ಅರ್ಜುನನನ್ನು ಹೀಗೆ ತಡೆಯಬಲ್ಲನು?" ಎಂದು ಕೊಂಡಾಡುತಿದ್ದರು. ಪುರುಷಶ್ರೇಷ್ಠರೆನಿಸಿದ ಆ ಭೀಷ್ಮಾರ್ಜುನರಿಬ್ಬರೂ, ಒಬ್ಬರು ಪ್ರಯೋಗಿಸಿದ ಅಸ್ತ್ರಗಳನ್ನು ಮತ್ತೊಬ್ಬರು ಪ್ರತ್ಯಸ್ತ್ರಗಳಿಂದ ನಿಗ್ರಹಿಸುತ್ತ ಆಗ ನಡೆಸಿದ ಯುದ್ಧಕ್ರೀಡೆಗಳು, ಎಲ್ಲಾ ಭೂತಗಳ ಕಣ್ಣಿಗೂ ಸಂತೋಷಕರವಾದ ಒಂದು ನೋಟವಾಯಿತು. ಅವರಿಬ್ಬರೂ ಅನ್ಯೋನ್ಯವಾಗಿ ಪ್ರಾಜಾಪತ್ಯ, ಐಂದ್ರ, ಆಗ್ನೇಯ, ಕೌಬೇರ, ವಾರುಣ, ಯಾಮ್ಯ, ವಾಯವ್ಯಾದಿ ದಿವ್ಯಾಸ್ತ್ರಗಳನ್ನು ಒಬ್ಬರ ಮೇಲೊಬ್ಬರು ಪ್ರಯೋಗಿಸುತ್ತಿದ್ದರು. ಮಹಾತ್ಮರಾದ ಅವರಿಬ್ಬರ ಅಸ್ತ್ರಚಾತುರ್ಯವನ್ನು ನೋಡಿ ಸಮಸ್ತ ಭೂತಗಳೂ ಆಶ್ಚರ್ಯಗೊಂಡು "ಪಾರ್ಥಾ! ಭಲೆ! ಭಲೆ! ಭೀಷ್ಮಾಚಾರ್ಯಾ! ಭಲೆ! ಭಲೆ! ಮನುಷ್ಯರಲ್ಲಿ ಬೇರೆ ಯಾವನೂ ಇಂತಹ ಅಸ್ತ್ರಸಾಮರ್ಥ್ಯವನ್ನು ಯುದ್ಧದಲ್ಲಿ ತೋರಿಸಲಾರನು" ಎಂದುವು. ಇಷ್ಟರಲ್ಲಿ ಅರ್ಜುನನು ತನ್ನ ಧನುಸ್ಸನ್ನೆತ್ತಿ

ಒಂದು ತೀಕ್ಷ್ಣ ಬಾಣದಿಂದ ಭೀಷ್ಮನ ಕೈಯಲ್ಲಿದ್ದ ಚಿನ್ನದ ಕಟ್ಟುಳ್ಳ ಬಿಲ್ಲನ್ನು ತುಂಡುಮಾಡಿದನು. ಆದರೇನು? ಎವೆಹಾರುವಷ್ಟರಲ್ಲಿಯೇ ಭೀಷ್ಮನು ಬೇರೊಂದು ಬಿಲ್ಲನ್ನು ತೆಗೆದುಕೊಂಡು, ನಾಣೇರಿಸಿ, ಅನೇಕ ಬಾಣಗಳನ್ನು ಅರ್ಜುನನಮೇಲೆ ಬಿಟ್ಟನು. ಅರ್ಜುನನೂ ಭೀಷ್ಮನಮೇಲೆ ಎಡೆಬಿಡದೆ ಬಾಣವರ್ಷವನ್ನು ಕರೆದನು. ಓ ಜನಮೇಜಯರಾಜಾ! ದಿವ್ಯಾಸ್ತ್ರವಿಶಾರದರೆನಿಸಿದ ಆ ಭೀಷ್ಮಾರ್ಜುನರಿಬ್ಬರೂ, ಒಬ್ಬರಮೇಲೊಬ್ಬರು ಎಡೆಬಿಡದೆ ಬಾಣಗಳನ್ನು ವರ್ಷಿಸುವಾಗ, ಬಲಾಬಲಗಳಲ್ಲಿ ಯಾರು ಹೆಚ್ಚು, ಯಾರು ಕಡಿಮೆಯೆಂಬ ವ್ಯತ್ಯಾಸವೇ ತಿಳಿಯದಂತಾಯಿತು. ಆಮೇಲೆ ಅರ್ಜುನನು ತಿರುಗಿ ತನ್ನ ಬಾಣಗಳಿಂದ ಎಲ್ಲಾ ದಿಕ್ಕುಗಳನ್ನೂ ಭೀಷ್ಮನನ್ನೂ ಮರೆಸಿದನು. ಭೀಷ್ಮನೂ ಅದಕ್ಕೆಮೇಲೆ ಬಾಣಗಳನ್ನು ಪ್ರಯೋಗಿಸಿದನು. ಒಮ್ಮೆ ಅರ್ಜುನನಿಗಿಂತಲೂ ಭೀಷ್ಮನು ಮೇಲೆಂದು ತೋರುವುದು! ಮತ್ತೊಮ್ಮೆ ಭೀಷ್ಮನಿಗಿಂತಲೂ ಅರ್ಜುನನೇ ಮೇಲೆಂದು ತೋರುವುದು! ಹೀಗೆ ಒಬ್ಬರನ್ನೊಬ್ಬರು ವಿಾರಿಸುತ್ತ ಲೋಕಕ್ಕೆ ಆಶ್ಚರ್ಯವನ್ನುಂಟುಮಾಡುತಿದ್ದರು. ಅರ್ಜುನನ ಬಾಣಗಳಿಂದ ಹತರಾದ ಭೀಷ್ಮನ ರಥರಕ್ಷಕರು, ಆ ಅರ್ಜುನನ ರಥದ ನಾನಾಕಡೆಗಳಲ್ಲಿಯೂ ಸತ್ತುಬಿದ್ದಿದ್ದರು. ಶತ್ರುಗಳ ಸುಳಿವೇ ಇಲ್ಲದಂತೆ ಮಾಡುವ ಉದ್ದೇಶದಿಂದ ಅರ್ಜುನನು ಬಿಟ್ಟ ಗಾಂಡೀವಪ್ರಯುಕ್ತಗಳಾದ ಚಿನ್ನದ ಹೊದಿಕೆಯುಳ್ಳ ತೀಕ್ಷ್ಣ ಬಾಣಗಳು ಆಕಾಶದಲ್ಲೆಲ್ಲ ಹಂಸಶ್ರೇಣಿಗಳಂತೆ ಕಾಣಿಸುತಿದ್ದುವು. ಆಶ್ಚರ್ಯಕರವಾದ ಅರ್ಜುನನ ಈ ದಿವ್ಯಾಸ್ತ್ರ ಪ್ರಯೋಗಚಾತುರ್ಯವನ್ನು, ಅಂತರಿಕ್ಷದಲ್ಲಿ ಇಂದ್ರಾದಿದೇವತೆಗಳೆಲ್ಲರೂ ಕುತೂಹಲದಿಂದ ನೋಡುತಿದ್ದರು. ಆಗ ಚಿತ್ರಸೇನನೆಂಬ ಗಂಧರ್ವರಾಜನು ಅರ್ಜುನನ ಈ ಅಸ್ತ್ರಚಾತುರ್ಯಕ್ಕಾಗಿ ಬಹಳ ಸಂತೋಷಗೊಂಡು ದೇವರಾಜನಾದ ಇಂದ್ರನೊಡನೆ "ಮಹೇಂದ್ರಾ! ಅದೋ! ಒಂದಕ್ಕೊಂದು ಪೋಣಿಸಿದಂತೆ, ಸಾಲಾಗಿ ಅಂತರಿಕ್ಷದಲ್ಲಿ ಹೋಗುತ್ತಿರುವ ಆ ಅರ್ಜುನನ ಬಾಣಗಳ ಗತಿವೈಚಿತ್ರ್ಯವನ್ನು ನೋಡು. ಇದನ್ನು ಮನುಷ್ಯರು ಯಾರೂ ನಂಬುವಹಾಗಿಲ್ಲ. ಏಕೆಂದರೆ, ಮನುಷ್ಯರಲ್ಲಿ ಯಾರಲ್ಲಿಯೂ ಇಂತಹ ಅಸ್ತ್ರಚಾತುರ್ಯವಿಲ್ಲ. ಈ ದಿವ್ಯಾಸ್ತ್ರಗಳ ಸೇರುವೆಯು ಲೋಕಾಶ್ಚರ್ಯಕರವಾಗಿದೆ. ಆಕಾಶದಲ್ಲಿ

ತಪಿಸುತ್ತಿರುವ ಮಧ್ಯಾಹ್ನದ ಸೂರ್ಯನನ್ನು ಹೇಗೋಹಾಗೆ, ಶತ್ರುಸೈನ್ಯಗಳು ಅರ್ಜುನನನ್ನು ಕಣ್ಣೆತ್ತಿಯೂ ನೋಡಲಾರವು. ಇಬ್ಬರೂ ಮಹಾತ್ಮರು. ಇಬ್ಬರೂ ಪ್ರಸಿದ್ಧಕಾರ್ಯವುಳ್ಳವರು. ಇಬ್ಬರೂ ಆಶ್ಚರ್ಯಪರಾಕ್ರಮವುಳ್ಳವರು. ಇಬ್ಬರೂ ಶತ್ರುದುರಾಸದರು'' ಎಂದನು. ಈ ಮಾತನ್ನು ಕೇಳಿ ದೇವೇಂದ್ರನೂಕೂಡ, ಆ ಭೀಷ್ಮಾರ್ಜುನರ ಯುದ್ಧಕ್ಕೆ ಮೆಚ್ಚಿ, ಪುಷ್ಪವೃಷ್ಟಿಯಮೂಲಕವಾಗಿ ಅವರಿಬ್ಬರನ್ನೂ ಗೌರವಿಸಿದನು.

*[ಇಷ್ಟರಲ್ಲಿಯೇ ಅಶ್ವತ್ಥಾಮನು ಆತುರದಿಂದ ಕರ್ಣನ ಬಳಿಗೆ ಬಂದು ''ರಾಧೇಯಾ! ಹಿಂದೆ ನೀನು 'ನಾನೊಬ್ಬನೇ ಪಾಂಡವರೆಲ್ಲರನ್ನೂ ಕೊಲ್ಲುವೆ'ನೆಂದು ನನ್ನ ಮುಂದೆ ಸಭಾಮಧ್ಯದಲ್ಲಿ ಹೇಳಿದವನಲ್ಲವೆ? ಈಗ ನೀನೇಕೆ ಆ ಕಾರ್ಯವನ್ನು ಮಾಡದೆ ಭಯದಿಂದ ಓಡಿಹೋಗುತ್ತಿರುವೆ? ನಿನ್ನನ್ನು ನಂಬಿಕೊಂಡಲ್ಲವೇ ಕೌರವರೆಲ್ಲರೂ ಪಾಂಡವರನ್ನು ಇದಿರಿಸಲು ಪ್ರಯತ್ನಿಸಿದರು. ಈಗ ನೀನು ಯುದ್ಧಮಾಡಿ ಅರ್ಜುನನನ್ನು ಜಯಿಸಬಾರದೇಕೆ?'' ಎಂದನು. ಅಶ್ವತ್ಥಾಮನ ಈ ಮಾತನ್ನು ಕೇಳಿ ದುರ್ಯೋಧನನು ಕೋಪಗೊಂಡು, ಕರ್ಣನಿಗೆ ಪ್ರಿಯವನ್ನುಂಟುಮಾಡುವುದಕ್ಕಾಗಿ ಅಶ್ವತ್ಥಾಮನೊಡನೆ ''ಓ ಬ್ರಾಹ್ಮಣಾ! ನೀನು ಪ್ರಸಿದ್ಧಪರಾಕ್ರಮವುಳ್ಳ ಆ ಕರ್ಣನನ್ನು ಹೀಗೆ ಹಾಸ್ಯಮಾಡಿ ಅವನ ಮಾನವನ್ನು ಕಳೆಯಬಾರದು. ಕ್ಷತ್ರಿಯರಿಗೆ ಮಾನಭಂಗದಿಂದ ಬಲಹಾನಿಯುಂಟಾಗುವುದು. ಶೂರರಾದವರು ಬಾಯಿಂದಲೂ ಆಡುವರು. ಕೆಲಸವನ್ನೂ ಮಾಡುವರು. ತಮ್ಮ ಪರಾಕ್ರಮಕ್ಕೆ ತಕ್ಕಂತೆ ಯುದ್ಧದಲ್ಲಿಯೂ ಹೋರಾಡುವರು. ಆದುದರಿಂದ ನೀನು ಈಗ ಕರ್ಣನನ್ನು ಹೀಗೆ ಹೀಗಳೆಯುವುದು ನ್ಯಾಯವಲ್ಲ'' ಎಂದನು. ಈ ಮಾತನ್ನು ಕೇಳಿದಮೇಲೆ ಅಶ್ವತ್ಥಾಮನು ಸುಮ್ಮನಾದನು.]

ಇಷ್ಟರಲ್ಲಿ ಭೀಷ್ಮನು, ಬಿಲ್ಲಿಗೆ ಬಾಣಗಳನ್ನು ಸಂಧಾನಮಾಡಿ ನಿಂತಿದ್ದ ಅರ್ಜುನನಮೇಲೆ ಬಾಣಗಳನ್ನು ಪ್ರಯೋಗಿಸಿದನು. ಇದನ್ನು ನೋಡಿ ಅರ್ಜುನನು ಒಂದು ಬಾಣದಿಂದ ಭೀಷ್ಮನ ಬಿಲ್ಲನ್ನು ಕತ್ತರಿಸಿ,

* ಈ ಪಾಠವು ಕೆಲವು ಪುಸ್ತಕದಲ್ಲಿ ಮಾತ್ರ ಇದೆ.

ಹತ್ತು ಬಾಣಗಳನ್ನು ಭೀಷ್ಮನ ಎದೆಗೆ ಹೊಡೆದನು. ಈ ಬಾಣಗಳಿಂದ ಭೀಷ್ಮನು ಬಹಳವಾಗಿ ನೊಂದು, ತನ್ನ ರಥದ ಮೂಕೆಯನ್ನೊರಗಿ ಕೊಂಡು, ಬಹಳ ಹೊತ್ತಿನವರೆಗೆ ಹಾಗೆಯೇ ಪ್ರಜ್ಞೆತಪ್ಪಿದಂತಾಗಿ ಕುಳಿತು ಬಿಟ್ಟನು. ಇದನ್ನು ನೋಡಿ ಭೀಷ್ಮನ ಸಾರಥಿಯು, ಯುದ್ಧಧರ್ಮವನ್ನು ನೆನೆಸಿಕೊಂಡು, ವಿಪತ್ತಿಗೆ ಸಿಕ್ಕಿಬಿದ್ದ ಮಹಾರಥನಾದ ಆ ಭೀಷ್ಮನನ್ನು ಅಪಾಯದಿಂದ ರಕ್ಷಿಸುವುದಕ್ಕಾಗಿ, ರಥವನ್ನು ಬೇರೆಕಡೆಗೆ ಬಿಟ್ಟುಕೊಂಡು ಹೋದನು. ಭೀಷ್ಮನಾದರೋ, ಪರಾಕ್ರಮದಲ್ಲಿಯೂ, ಧೈರ್ಯದಲ್ಲಿಯೂ ವೀರ್ಯದಲ್ಲಿಯೂ, ಬಲದಲ್ಲಿಯೂ, ಯುದ್ಧದಲ್ಲಿಯೂ, ಸತ್ವದಲ್ಲಿಯೂ, ಎಲ್ಲಾ ಶಸ್ತ್ರಾಸ್ತ್ರಗಳಲ್ಲಿಯೂ, ಹಸ್ತಲಾಘವದಲ್ಲಿಯೂ, ದೂರದಿಂದ ಲಕ್ಷ್ಯ ಗಳನ್ನು ಹೊಡೆಯುವುದರಲ್ಲಿಯೂ ಲೋಕದಲ್ಲಿ ಎಣೆಯಿಲ್ಲದವನು. ತಂದೆ ಯಿಂದ ಅನೇಕವರಗಳನ್ನು ಪಡೆದವನು. ಎಂತಹ ಶ್ರಮವನ್ನಾದರೂ ತಡೆಯಬಲ್ಲವನು. ಎಂತಹ ವೈರಿಗಳನ್ನಾದರೂ ಜಯಿಸಬಲ್ಲವನು. ಖೇದ ವಿಲ್ಲದವನು. ಇಚ್ಛಾಧೀನವಾದ ಮರಣವುಳ್ಳವನು. ಶೂರನು. ಪಿತೃಶುಶ್ರೂ ಷೆಯಲ್ಲಿ ನಿರತನಾಗಿದ್ದವನು. ಅಂತಹ ಮಹಾತ್ಮನು, ದುರ್ಯೋಧನನ ಹಿತಕ್ಕಾಗಿ ಅರ್ಜುನನೊಡನೆ ಯುದ್ಧಕ್ಕೆ ನಿಂತರೂ ಪಾಂಡವರ ಶ್ರೇಯ ಸ್ಸಿಗಾಗಿ ತಾನು ಸೋತವನಂತೆ ಯುದ್ಧರಂಗದಿಂದ ಹಿಂತಿರುಗಿದನು.

ಇದು ಅರುವತ್ತುಮೂರನೆಯ ಅಧ್ಯಾಯವು.

ಅರ್ಜುನನು ದ್ರೋಣನೇ ಮೊದಲಾದ ಐದು ಮಂದಿ ರಥಿಕರನ್ನು ಇದಿರಿಸಿದುದು.

ಓ ಜನಮೇಜಯರಾಜಾ! ಕೇಳು! ಅರ್ಜುನನು ಹೀಗೆ ಯುದ್ಧ ದಲ್ಲಿ ಕೌರವರೆಲ್ಲರೂ ನೋಡುತ್ತಿದ್ದಹಾಗೆಯೇ ಭೀಷ್ಮನನ್ನು ಜಯಿಸಿ, ತಿರು ಗಿ ಯುದ್ಧಕ್ಕಾಗಿ ಐದು ಮಂದಿ ಮಹಾರಥರನ್ನು ಇದಿರಿಸಿಹೋದನು. ಆಗ ಅರ್ಜುನನು ತನ್ನ ಎರಡು ಬತ್ತಳಿಕೆಗಳನ್ನೂ ಗಮನಿಸಿನೋಡಿ, ಬಾಣ ಗಳನ್ನು ತೆಗೆದು ಸಿದ್ಧವಾಗಿಟ್ಟುಕೊಂಡು, ಗಾಂಡೀವವನ್ನು ನೀವುತ್ತ, ತಿರು ಗಿ ಕರ್ಣನನ್ನಿದಿರಿಸಿದನು. ಇದನ್ನು ನೋಡುತ್ತಿದ್ದ ಅಶ್ವತ್ಥಾಮನೇ

ಕರ್ಣನನ್ನು ಕುರಿತು, "ಕರ್ಣಾ! ಹಿಂದೆ ನೀನು ಸಭಾಮಧ್ಯದಲ್ಲಿ ಯುದ್ಧದಲ್ಲಿ ನನಗೆ ಸಮಾನರಿಲ್ಲವೆಂದು ಅಸಂಬದ್ಧವಾದ ಹಲವು ಮಾತುಗಳನ್ನಾಡಿದೆಯಲ್ಲವೆ? ಈಗ ಅದಕ್ಕೆ ತಕ್ಕ ಸಮಯವು ಒದಗಿಬಂದಿದೆ. ಅಲ್ಲಿ ಅರ್ಜುನನು ಕೋಪಗೊಂಡ ಯಮನಂತೆ ಬರುತ್ತಿರುವನು. ಅದೋ! ಸವಿಾಪಕ್ಕೂ ಬಂದುಬಿಟ್ಟಿರುವನು. ಸಿಂಹದಂತೆ ಉತ್ಸಾಹದಿಂದ ಗರ್ಜಿಸುತ್ತಿರುವನು. ನೀನು ಶೂರನಾಗಿದ್ದರೆ ಓಡಿಹೋಗಬಾರದು. ಅರ್ಜುನನಿಗಿದಿರಾಗಿ ಯುದ್ಧಮಾಡು" ಎಂದನು. ಆದಕ್ಕೆ ಕರ್ಣನು "ಓ ದ್ರೋಣಪುತ್ರ! ನಾನು ಈ ಅರ್ಜುನನಿಗಾಗಲಿ, ದೇವಕೀಪುತ್ರನಿಗೇ ಆಗಲಿ, ಪಾಂಡವರೆಲ್ಲರೂ ಒಟ್ಟಾಗಿ ಸೇರಿ ಯುದ್ಧಕ್ಕೆ ಬಂದರಾಗಲಿ ಹೆದರುವೆನೆಂದೆಣಿಸಬೇಡ. ನಾನು ಕ್ಷತ್ರಿಯಧರ್ಮವನ್ನೇ ಅನುಸರಿಸುವವನು. ಬಲಾಧಿಕರೂ, ಧನುರ್ವಿದ್ಯೆಯಿಂದಲೇ ಉಪಜೀವಿಸತಕ್ಕವರೂ, ಶೂರರೂ ಆದ ನಮಗೆ ಶತ್ರುಗಳನ್ನು ನೋಡುವಾಗಲೇ ದರ್ಪವುಂಟಾಗುವುದೂ ಸಹಜವು. ನಮ್ಮ ಸ್ವರವಾದರೂ ಕುಗ್ಗುವುದಿಲ್ಲ. ಈಗ ಅರ್ಜುನನಿಗೆ ಯುದ್ಧದಲ್ಲಿ ನಾನೂ ಸಮಾನನೆಂದೇ ತಿಳಿ. ಆದರೆ ದೈವಗತಿಯನ್ನು ಮಿಾರುವುದಕ್ಕೆ ಮಾತ್ರ ಯಾರಿಂದಲೂ ಸಾಧ್ಯವಿಲ್ಲ" ಎಂದನು. ಆದಕ್ಕೆ ಅಶ್ವತ್ಥಾಮನು "ಓ ಕರ್ಣಾ! ನೀನು ಹೇಳಿದುದು ವಾಸ್ತವವೇ. ಶೂರರಿಗೆ ಮಾತಿಗೆ ತಕ್ಕಂತೆ ಪೌರುಷವೂ ಇದ್ದಪಕ್ಷದಲ್ಲಿ, ಆಗ ಮಾತಾಡುವುದರಲ್ಲಿ ದೋಷವೇನಿದೆ? ಅದು ಲೋಕದಲ್ಲಿ ಉತ್ತಮವಾದ ಗುಣವೆನಿಸುವುದು. ಆದುದರಿಂದ ನೀನು ಹಿಂದೆ ಆಡಿದುದಕ್ಕೆ ತಕ್ಕಂತೆ ನಿರ್ಭಯವಾಗಿ ಪಾರ್ಥನನ್ನೆದಿರಿಸು. ಯುದ್ಧರಂಗದಿಂದ ಮಾತ್ರ ಓಡಿಹೋಗಬೇಡ. ಯುದ್ಧದಲ್ಲಿ ಸಾಟಿಯಿಲ್ಲವೆಂದು ಹೇಳಿದ ಮಾತನ್ನು ಮರೆಯಬೇಡ" ಎಂದನು. ಇಷ್ಟರಲ್ಲಿಯೇ ಐದುಮಂದಿ ಮಹಾರಥರೂ ಆ ಯುದ್ಧದಲ್ಲಿ ತಮ್ಮ ಪ್ರಾಣವನ್ನಾದರೂ ಕೊಡುವುದಕ್ಕೆ ನಿಶ್ಚಯಿಸಿಕೊಂಡು, ಬಾಣಗಳನ್ನು ಬಿಡುತ್ತ, ನಾಲ್ಕು ಕಡೆಗಳಿಂದಲೂ ಅರ್ಜುನನನ್ನು ಮುತ್ತಿಕೊಂಡರು. ಅರ್ಜುನನು ಅಲ್ಲಿಗೆ ಬಂದುದು ತಮಗೆ ಒಂದು ದೊಡ್ಡ ಲಾಭವೆಂದೇ ತಿಳಿದು, ಮಳೆಗಾಲದ ಮೇಘಗಳಂತೆ ಬಾಣಗಳನ್ನು ವರ್ಷಿಸುತ್ತ ಅರ್ಜುನನನ್ನು ನಾನಾಕಡೆಯಿಂದ ಹೊಡೆಯುತ್ತ ಬಂದರು. ಆಗಲೂ ಶಸ್ತ್ರಧಾರಿಗಳಲ್ಲಿ ಮೇಲೆನಿಸಿದ

ಅರ್ಜುನನು ಅಟ್ಟಹಾಸದಿಂದ ನಗುತ್ತ, ತನ್ನ ದಿವ್ಯಾಸ್ತ್ರಪ್ರಯೋಗದೊಡನೆ ಅವರೆಲ್ಲರನ್ನೂ ಇದಿರಿಸಿದನು. ಸೂರ್ಯನು ತನ್ನ ಕಿರಣಗಳಿಂದ ಭೂಮಿಯನ್ನೆಲ್ಲ ಆವರಿಸುವಂತೆ, ಗಾಂಡೀವಪ್ರಯುಕ್ತಗಳಾದ ಬಾಣಗಳಿಂದ ದಿಕ್ಕುಗಳನ್ನೆಲ್ಲ ಆವರಿಸಿದನು. ಅಲ್ಲಿ ರಥಗಳಿಗಾಗಲಿ, ಆನೆಗಳಿಗಾಗಲಿ, ಕುದುರೆಗಳಿಗಾಗಲಿ ಎರಡಂಗುಲದಷ್ಟಾದರೂ ವೈಯಲ್ಲಿ ಅವಕಾಶವಿಲ್ಲದೆ ಅರ್ಜುನನ ಬಾಣಗಳು ನಾಟಿಕೊಂಡವು. ಆಗ ಅಲ್ಲಿದ್ದ ಯುದ್ಧವೀರರಿಗೆ ತಮ್ಮ ಬುದ್ಧಿಯೇ ತಮಗೆ ಸ್ವಾಧೀನವಿಲ್ಲದಂತಾಯಿತು. ಆನೆಗಳೂ, ಕುದುರೆಗಳೂ ಭಯದಿಂದೋಡಿ ಎಲ್ಲೆಲ್ಲಿಯೋ ಆವಿತುಕೊಂಡವು. ಹೊಡಕೆಯ ಕಾಡಿಗೆನುಗ್ಗಿದ ಮದದಾನೆಯಂತೆ ಅರ್ಜುನನು ತನ್ನ ಶಸ್ತ್ರಬಲದಿಂದ ಎಲ್ಲರನ್ನೂ ಅರೆದುಬಿಟ್ಟನು. ಗಾಂಡೀವಧ್ವನಿಯಿಂದ ಭೂಮಿಯೆಲ್ಲವೂ ನಡುಗಿತು. ಧೃತರಾಷ್ಟ್ರಪುತ್ರರ ಮನಸ್ಸಿಗೆ ಶೂಲವನ್ನಿರಿದಂತಾಯಿತು. ಇಷ್ಟರಲ್ಲಿಯೇ ಅರ್ಜುನನು ಶತ್ರುಸೈನ್ಯಗಳ ನಡುವೆ ಪ್ರವೇಶಿಸಿ, ಸಾರಥಿಯಾದ ಉತ್ತರನನ್ನು ನೋಡಿ ‘‘ಉತ್ತರಾ! ಕುದುರೆಗಳ ಹಗ್ಗವನ್ನು ಬಿಗಿಹಿಡಿದು ಮೆಲ್ಲಗೆ ರಥವನ್ನು ನಡೆಸು. ಈಗ ನಾನು ಅಶ್ವತ್ಥಾಮನೊಡನೆ ಯುದ್ಧಮಾಡುವೆನು. ಯಾರಿಗೂ ಸೋಲದ ಆ ಆಚಾರ್ಯಪುತ್ರನೊಡನೆ ಯುದ್ಧಮಾಡಬೇಕಾಗಿದೆ. ಇದಕ್ಕೆ ಮೊದಲೇ ಒಮ್ಮೆ ನಾನು ಅವನೊಡನೆ ಯುದ್ಧಮಾಡಿದ್ದೆನು. ಅದೋ! ಆತನು ನನ್ನ ಹಿಂಭಾಗದಲ್ಲಿರುವನು’’ ಎಂದು ತೋರಿಸಿದನು. ಈ ಮಾತನ್ನು ಕೇಳಿ ಉತ್ತರನು ಅಶ್ವತ್ಥಾಮನ ರಥವಿದ್ದಕಡೆಗೆ ಕುದುರೆಗಳನ್ನೋಡಿಸಿದನು. ಇದನ್ನು ನೋಡುತ್ತಿದ್ದ ಕರ್ಣನು ಸಮೀಪದಲ್ಲಿದ್ದವರಿಗೆ ಕೇಳುವಂತೆ, ‘‘ಓಹೋ! ಈಗಾಗಲೇ ಅರ್ಜುನನು ಬಾಣದಿಂದ ಪೀಡಿತನಾಗಿ, ನೋವನ್ನು ತಡೆಯಲಾರದೆ ಬೇರೆಕಡೆಗೆ ಓಡುವಂತಿದೆ. ನಾನೂ ಅಲ್ಲಿಗೆ ಹೋಗುವೆನು. ಈಗ ಅವನನ್ನು ಜೀವದೊಂದಿಗೆ ಬಿಡಬಾರದು’’ ಎಂದನು. ಆಗ ದ್ರೋಣಾಚಾರ್ಯನು ಆ ಕರ್ಣನ ಮಾತಿಗೆ ನಗುತ್ತ, ‘‘ಕರ್ಣಾ! ಮಹಾತ್ಮನಾದ ಆ ಇಂದ್ರಪುತ್ರನು ಭಯದಿಂದ ಓಡಿಹೋದವನಲ್ಲ. ಭಯಪಟ್ಟವರಾಗಲಿ, ಬಹಳ ನೊಂದವರಾಗಲಿ ಈ ರೀತಿಯಾಗಿ ತಿರುಗಿಹೋಗಲಾರರು. ಅತ್ಯಂತ ಕೊಪ್ಪೋದ್ರೇಕದಿಂದ ಬರುತ್ತಿರುವ ಆ ಅರ್ಜುನನನ್ನು ಈಗ ನೀನು ಇದಿರಿಸುವೆ

ಯಾದರೆ, ನಿನ್ನನ್ನು ಅವನು ಸುಮ್ಮನೆ ಜೀವದಿಂದ ಬಿಡಲಾರನು. ಅವನು ಅನೇಕಶಸ್ತ್ರಾಸ್ತ್ರಗಳನ್ನು ಬಲ್ಲವನು. ಹಿಂದೆ ಅವನ ಕೈಗೆ ಸಿಕ್ಕಿಬಿದ್ದ ದುರ್ಯೋಧನನು ಹೇಗೋ ಅದೃಷ್ಟವಶದಿಂದ ತಪ್ಪಿಬಂದನು. ಅದೃಷ್ಟವಶದಿಂದ ಹಸುಗಳೂ ತಪ್ಪಿಸಿಕೊಂಡು ಹೋದುವು. ನೀನೂ ದೈವಾಧೀನದಿಂದ ತಪ್ಪಿ ಬಂದೆ! ಈಗ ನೀನು ಯುದ್ಧಕ್ಕೆ ನಿಂತು ಮಾಡುವುದೇನು? ಒಂದು ಕ್ರೋಶದಷ್ಟು ದೂರದವರೆಗೆ ನಾವು ಹಿಂತಿರುಗಿ ಹೋಗಿ, ನಮ್ಮ ಸೈನ್ಯಗಳಿಗೆ ಸಮಾಧಾನವನ್ನು ಹೇಳಿ ಕರೆತರುವೆವು. ಆ ಸೈನ್ಯಗಳನ್ನೆಲ್ಲ ಸೇರಿಸಿಟ್ಟುಕೊಂಡು ತಿರುಗಿ ಎಲ್ಲರೂ ಯುದ್ಧಕ್ಕೆ ನಿಲ್ಲಿರಿ'' ಎಂದನು.

ಇದು ಅರುವತ್ತುನಾಲ್ಕನೆಯ ಅಧ್ಯಾಯವು.

ಅರ್ಜುನನು ಉತ್ತರನಿಗೆ ತನ್ನ ಪರಾಕ್ರಮವನ್ನು ತಿಳಿಸಿ ಧೈರ್ಯವನ್ನು ಹೇಳುತ್ತ, ಭೀಷ್ಮಾದಿಗಳಿರುವ ಸ್ಥಳಕ್ಕೆ ರಥವನ್ನು ಬಿಡುವಂತೆ ಪ್ರೋತ್ಸಾಹಿಸಿದುದು. ದುರ್ಯಾಸನಾದಿಗಳನ್ನು ಜಯಿಸಿ ಭೀಷ್ಮನೊಡನೆ ತಿರುಗಿ ಯುದ್ಧಕ್ಕೆ ಸಿದ್ಧವಾದುದು.

ಓ ಜನಮೇಜಯರಾಜಾ! ಕೇಳು! ಕರ್ಣನು ಪರಾಜಿತನಾಗಿ ಹಿಂದಾದುದನ್ನು ತಿಳಿದು, ಅರ್ಜುನನು ಉತ್ತರನನ್ನು ಕುರಿತು ''ಓ ಸಾರಥೀ! ನಮ್ಮ ರಥವನ್ನು ಅದೋ! ಮುಂದೆ ಶಸ್ತ್ರಧಾರಿಗಳಾದ ರಥಿಕರಿರುವ ರಥಗಳಬಳಿಗೆ ನಡೆಸು. ಅಲ್ಲಿ ನಮ್ಮೆಲ್ಲರಿಗೂ ಪಿತಾಮಹನಾದ ಭೀಷ್ಮನು ನನ್ನೊಡನೆ ಯುದ್ಧವನ್ನಪೇಕ್ಷಿಸಿ, ಯುದ್ಧಕವಚವನ್ನು ಧರಿಸಿ ರಥದಲ್ಲಿ ಕುಳಿತಿರುವನು. ವಜ್ರ ವೈಡೂರ್ಯಗಳಿಂದ ಅಲಂಕೃತವಾದ ಸುವರ್ಣಮಯವಾದ ತಾಳಧ್ವಜವು, ಗಾಳಿಯಿಂದ ತೂಗಾಡುತ್ತ ಅಲ್ಲಿ ಪ್ರಕಾಶಿಸುತ್ತಿರುವುದು ನೋಡು. ಈಗ ನಾನು ಆ ಧನುರ್ಧಾರಿಗಳೆಲ್ಲರ ರಥಸಮೂಹಗಳನ್ನೆಲ್ಲ ಎಷ್ಟು ತೀವ್ರವಾಗಿ ಹೊಡೆಯುವೆನೋ ನೋಡು. ಅವರ ಬಿಲ್ಲು, ಬಿಲ್ಲಿನ ಹೆದೆ, ಕವಚ ಮುಂತಾದುವುಗಳನ್ನೆಲ್ಲ ಅಪಹರಿಸುವೆನು ನೋಡು. ಈಗ ನಾನು ಚಿತ್ರವಿಚಿತ್ರವಾಗಿ ದಿವ್ಯಾಸ್ತ್ರಪ್ರಯೋಗವಮಾಡುವ ರೀತಿಯನ್ನಾ

ದರೂ ನೋಡು. ವರ್ಷಾಕಾಲದಲ್ಲಿ ಮೇಘದಿಂದ ಹೊಳೆಯುವ ಮಿಂಚಿನಂತೆ, ಚಿನ್ನದ ಕಟ್ಟುಳ್ಳ ನನ್ನ ಗಾಂಡೀವವನ್ನು ಕುರುಗಳೆಲ್ಲ ನೋಡಲಿ. ಉತ್ತರಾ! ನಾನು ಬಾಣಗಳನ್ನು ಎಡದಿಂದ ಬಿಡುವೆನೋ ಬಲದಿಂದ ಬಿಡುವೆನೋ ಎಂಬುದನ್ನೇ ಶತ್ರುಗಳು ತಿಳಿದುಕೊಳ್ಳಲಾರರು. ಅಸ್ತ್ರಗಳೆಂಬ ಜಲಪ್ರವಾಹದಿಂದಲೂ, ಕುದುರೆಗಳೆಂಬ ಸುಳಿಗಳಿಂದಲೂ, ಆನೆಗಳೆಂಬ ಮೊಸಳೆಗಳಿಂದಲೂ, ರಥಗಳೆಂಬ ಮಡುಗಳಿಂದಲೂ ಕೂಡಿ, ನಮ್ಮ ವೈರಿಗಳೆಲ್ಲರನ್ನೂ ಪರಲೋಕಕ್ಕೆ ಎಳೆದುಕೊಂಡು ಹೋಗತಕ್ಕ ಮಹಾನದಿಯೊಂದನ್ನು ಈಗ ನಾನು ಹರಿಯಿಸುವೆನು ನೋಡು! ಕೈ, ಕಾಲು, ತಲೆ, ಬೆನ್ನು, ತೋಳು, ಶಂಖುಗಳೆಂಬ ಚರಾಚರ ವರ್ಗಗಳಿಂದ ಕೂಡಿದ ಕೌರವಸೈನ್ಯವೆಂಬ ದೊಡ್ಡ ಕಾಡನ್ನು ನನ್ನ ಬಾಣಗಳಿಂದ ಕತ್ತರಿಸಿ ಕೆಡಹುವೆನು. ಈಗ ನಾನು ನನ್ನ ಬತ್ತಳಿಕೆಯಿಂದ ತೆಗೆದು ಪ್ರಯೋಗಿಸುವ ಬಾಣಗಳು, ಕೌರವರನ್ನೆಲ್ಲ ದಹಿಸುವ ರೀತಿಯನ್ನಾದರೂ ನೋಡು. ಧ್ವಜಗಳೆಂಬ ವೃಕ್ಷಗಳಿಂದಲೂ, ಬಾಣಗಳೆಂಬ ಹುಲ್ಲಿನಿಂದಲೂ, ಆನೆ ಕುದುರೆಗಳೆಂಬ ಕಾಡುಮೃಗಗಳಿಂದಲೂ, ರಥಗಳೆಂಬ ಸಿಂಹಗಳಿಂದಲೂ, ಬಿಲ್ಲುಗಳೆಂಬ ಬಲೆಗಳಿಂದಲೂ ಕೂಡಿದ ಕೌರವಸೇನೆಯೆಂಬ ವನವನ್ನು ನನ್ನ ಅಸ್ತ್ರಜ್ವಾಲೆಯಿಂದ ಸುಟ್ಟುಬಿಡುವೆನು. ಯುದ್ಧದಲ್ಲಿ ಏಕಾಕಿಯಾಗಿಯೇ ಆ ಕುರುಸೈನ್ಯವನ್ನು ದಿರಿಸಿ ಜಯಿಸಬಲ್ಲ ನನಗೆ, ದಾವಾಗ್ನಿಗೆ ಕಾಡಿನಲ್ಲಿ ಹೇಗೋ ಹಾಗೆ ನಿರಂಕುಶವಾದ ನೂರಾರುಮಾರ್ಗಗಳು ತಾನಾಗಿ ಏರ್ಪಡುವುವು. ಗೂಡುಗಳಲ್ಲಿ ಅಡಗಿರುವ ಪಕ್ಷಿಗಳನ್ನು ಹೇಗೋ ಹಾಗೆ ನಾನು ಆ ಶತ್ರುಗಳನ್ನು ಅವರ ರಥಗಳೆಂಬ ಗೂಡುಗಳಿಂದ ಪರಲೋಕಗಳಿಗೆ ಓಡಿಸುವೆನು. ಸಮಭೂಮಿಗಳಲ್ಲಿಯಾಗಲಿ, ವಿಷಮಪ್ರದೇಶಗಳಲ್ಲಿಯಾಗಲಿ ನಾನು ನಿಶ್ಚಲವಾಗಿ ರಥದಲ್ಲಿ ಕುಳಿತು, ನನ್ನ ದಾರಿಗಡ್ಡಲಾಗಿರುವ ಪರ್ವತವನ್ನಾದರೂ ಭೇದಿಸುವೆನು. ನಾನು ಹಿಂದೆ ಇಂದ್ರನ ಸಹಾಯಕ್ಕಾಗಿ ಮಾತಲಿಯನ್ನು ಸಾರಥಿಯನ್ನಾಗಿ ಮಾಡಿಕೊಂಡು, ಬಲಗರ್ವಿತರಾದ ನಿವಾತಕವಚರನ್ನು ದಿರಿಸಿ, ಯುದ್ಧದಲ್ಲಿ ನನಗಿದಿರಾದವರನ್ನೂ, ಭಯದಿಂದ ಓಡಿದವರನ್ನೂ, ನನ್ನ ಗಾಂಡೀವಪ್ರಯುಕ್ತಗಳಾದ ಅಸ್ತ್ರಗಳಿಂದ ನಾನಾಕಡೆಗಳಲ್ಲಿ ಹೊಡೆದು ಕೊಂದು, ಸಮುದ್ರಕ್ಕೆ ಆಚೆಯ ದಡ

ದಲ್ಲಿದ್ದ ಹಿರಣ್ಯಪುರವನ್ನು ನಾಶಮಾಡಿದೆನು. ಉಗ್ರಧನುಸ್ಸುಳ್ಳ ಅರು ವತ್ತುಸಾವಿರ ರಥಿಕರನ್ನು ಕೊಂದು, ಭಯಂಕರರೂಪಿಗಳಾದ ಪೌಲೋಮ ಕಾಲಕೇಯರೆಂಬ ರಾಕ್ಷಸರನ್ನು ನನ್ನ ರೌದ್ರಾಸ್ತ್ರದಿಂದ ಧ್ವಂಸಮಾಡಿದೆನು. ಓ ಸಾರಥೀ! ನಾನು ಇಂದ್ರನಿಂದ ದೃಢಮುಷ್ಟಿಯನ್ನೂ, ಬ್ರಹ್ಮನಿಂದ ಹಸ್ತಲಾಘವವನ್ನೂ, ಮನುಪ್ರಜಾಪತಿಯಿಂದ ಬಹಳ ಚಮತ್ಕಾರವಾಗಿ ಯೂ, ವಿಚಿತ್ರವಾಗಿಯೂ ಇರುವ ಯುದ್ಧನೈಪುಣ್ಯವನ್ನೂ ಕಲಿತಿರುವೆನು. ರುದ್ರನಿಂದ ಪಾಶುಪತಾಸ್ತ್ರವನ್ನೂ, ವರುಣನಿಂದ ವಾರುಣಾಸ್ತ್ರವನ್ನೂ, ಹಾಗೆಯೇ ಸೂರ್ಯಾಗ್ನಿ, ಯಮ, ವಾಯು ಮೊದಲಾದ ಬೇರೆಬೇರೆ ದೇವ ತೆಗಳಿಂದ ಆಯಾ ದೇವತಾತ್ಮಕಗಳಾದ ಅಸ್ತ್ರಗಳನ್ನೂ ಪಡೆದಿರುವೆನು. ಉತ್ತರಾ! ಬೇರೆ ಯಾವ ಮನುಷ್ಯನು ತಾನೇ ಈ ನನ್ನ ಪರಾಕ್ರಮವನ್ನು ತಡೆದುಕೊಳ್ಳಬಲ್ಲನು? ಈಗ ನಾನು ಗಾಂಡೀವಪ್ರಯುಕ್ತಗಳಾದ ಬಾಣ ಗಳಿಂದ ಧನುರ್ಧಾರಿಗಳ ಆ ರಥಗಳನ್ನೆಲ್ಲ ಉರುಳಿಸುವ ರೀತಿಯನ್ನಾದರೂ ನೋಡು" ಎಂದನು.

ಓ ಜನಮೇಜಯರಾಜಾ! ಅರ್ಜುನನು ಇಷ್ಟು ಮಾತುಗಳನ್ನು ಹೇಳಿದಮೇಲೆ, ಉತ್ತರನಿಗೆ ಮನಸ್ಸಿನಲ್ಲಿದ್ದ ಭೀತಿಯು ತಗ್ಗಿ ಧೈರ್ಯ ವುಂಟಾಯಿತು. ಒಡನೆಯೇ ಆ ಭೀಷ್ಮನಿದ್ದ ರಥಗಳ ಮಧ್ಯಕ್ಕೆ ತನ್ನ ರಥವನ್ನು ಬಿಟ್ಟನು. ಇಷ್ಟರಲ್ಲಿಯೇ ಅರ್ಜುನನು ತನ್ನ ಧನುಸ್ಸಿನ ಬಾಣ ನ್ನು ಮಿಡಿಯುತ್ತ, ರಥಿಕರಲ್ಲಿ ಮೇಲೆನಿಸಿದ ಮತ್ತು ಶತ್ರುದುರ್ಜಯನಾದ ಭೀಷ್ಮನನ್ನಿದಿರಿಸಿದನು. ಇದನ್ನು ನೋಡಿ ದುಶ್ಶಾಸನನು, ಭಯಂಕರ ಧನುಸ್ಸನ್ನೂ ವಿಚಿತ್ರಾಭರಣಗಳನ್ನೂ ಅಂದವಾದ ಕುಂಡಲಗಳನ್ನೂ ಧರಿ ಸಿದ ಒಳ್ಳೆಯ ಯೌವನವುಳ್ಳ ವೀರರೊಡಗೂಡಿ ಧನುಷ್ಟಂಕಾರದೊಡನೆ ಅರ್ಜುನನನ್ನು ಇದಿರಿಸಿ ತಡೆದನು. ದುಶ್ಶಾಸನನನ್ನು ಹಿಂಬಾಲಿಸಿ ವಿಕ ರ್ಣನೂ, ವೃಷಸೇನನೂ, ವಿವಿಂಶತಿಯೂ ಅರ್ಜುನನನ್ನು ಮುತ್ತಿಕೊಂಡ ರು. ದುಶ್ಶಾಸನನು ಆರುವತ್ತು ಬಾಣಗಳನ್ನು ಅರ್ಜುನನ ಎಡಪಾರ್ಶ್ವಕ್ಕೆ ಬಿಟ್ಟನು. ಅತ್ತಲಿಂದ ಅರ್ಜುನನು ಬಾಣಗಳನ್ನು ಪ್ರಯೋಗಿಸುತ್ತಿದ್ದರೂ, ದುಶ್ಶಾಸನನು ನಿರ್ಭಯವಾಗಿ ಮುಂದೆಬಿದ್ದು, ಸಾರಥಿಯಾದ ಉತ್ತರನನ್ನು

ಒಂದು ಬಾಣದಿಂದ ಹೊಡೆದನು. ಎರಡನೆಯ ಬಾಣದಿಂದ ಅರ್ಜುನನನ್ನು ಎದೆಯಮೇಲೆ ಹೊಡೆದನು. ಇಷ್ಟರಲ್ಲಿಯೇ ಅರ್ಜುನನು ಹದ್ದಿನ ಗರಿಯುಳ್ಳ ಒಂದು ತೀಕ್ಷ್ಣಬಾಣದಿಂದ ದುಶ್ಶಾಸನನ ಬಿಲ್ಲನ್ನು ಕತ್ತರಿಸಿ, ಐದು ಬಾಣಗಳನ್ನು ಅವನ ಎದೆಯಮೇಲೆ ಹೊಡೆದನು. ಆ ಬಾಣಗಳಿಂದ ದುಶ್ಶಾಸನನು ಬಹಳವಾಗಿ ನೊಂದು ರಥಮಧ್ಯದಿಂದ ತಪ್ಪಿಸಿಕೊಂಡು ಓಡಿಹೋದನು. ಜಯಶೀಲನಾದ ಅರ್ಜುನನಾದರೋ, ರಣರಂಗದಲ್ಲಿ ತಡೆಯಿಲ್ಲದೆ ಎಲ್ಲಾ ಕಡೆಗಳಿಗೂ ನಿರಂಕುಶವಾಗಿ ಸಂಚರಿಸುತ್ತಿದ್ದನು. ಇಷ್ಟರಲ್ಲಿ ವಿಕರ್ಣನು ತೀಕ್ಷ್ಣಬಾಣಗಳಿಂದ ಅರ್ಜುನನನ್ನು ಪ್ರಹರಿಸಿದನು. ಕೂಡಲೇ ಅರ್ಜುನನು ಒಂದು ತೀಕ್ಷ್ಣಬಾಣವನ್ನು ಅವನ ಹಣೆಗೆ ಗುರಿಯಿಟ್ಟು ಬಲವಾಗಿ ಹೊಡೆಯಲು, ಆ ಪ್ರಹಾರಕ್ಕೆ ನೊಂದು ವಿಕರ್ಣನೂ ಭಯಪಟ್ಟು ಓಡಿಹೋದನು. ಇದನ್ನು ನೋಡಿ ದುಸ್ಸಹ, ವಿವಿಂಶತಿಗಳೆಂಬವರಿಬ್ಬರೂ ತೀಕ್ಷ್ಣಬಾಣಗಳಿಂದ ಅರ್ಜುನನನ್ನು ಪ್ರಹರಿಸಿದರು. ಅರ್ಜುನನು ಅವರಿಬ್ಬರನ್ನೂ ಏಕಕಾಲದಲ್ಲಿ ಎರಡು ತೀಕ್ಷ್ಣಬಾಣಗಳಿಂದ ಹೊಡೆದು, ಅವರ ರಥಾಶ್ವಗಳನ್ನೂ ಕೊಂದುಬಿಟ್ಟನು. ಆಗ ಅವರ ಅನುಚರರಾಗಿ ಬಂದಿದ್ದ ಯೋಧರು, ಅವರಿಬ್ಬರನ್ನೂ ಬೇರೆ ರಥಗಳಮೇಲೆ ಏರಿಸಿಕೊಂಡು ರಣರಂಗದಿಂದ ಸಾಗಿಸಿಬಿಟ್ಟರು. ಹೀಗೆಯೇ ಅರ್ಜುನನು ಇತರ ಧೃತರಾಷ್ಟ್ರಪುತ್ರರೆಲ್ಲರನ್ನೂ ಯುದ್ಧದಿಂದೋಡಿಸಿ, ಯುದ್ಧರಂಗದಲ್ಲಿ ತಾನೇ ತಾನಾಗಿ ಬೆಳಗುತ್ತಿದ್ದನು. ಗುರಿತಪ್ಪದೆ ಬಾಣಗಳನ್ನು ಬಿಡುವ ಸಾಮರ್ಥ್ಯವುಳ್ಳ ಮತ್ತು ಪ್ರತಾಪಶಾಲಿಯಾದ ಪಾರ್ಥನ ಬಾಣಗಳಿಂದ ಅನೇಕ ವೀರರ ತಲೆಗಳೂ, ತೋಳುಗಳೂ ಕತ್ತರಿಸಿ ಕೆಡಹಲ್ಪಟ್ಟಿದ್ದುವು. ಅನೇಕ ವೀರರು ವೇಷಭೂಷಣಗಳೊಡನೆಯೇ ರಣರಂಗದಲ್ಲಿ ಸತ್ತು ಮಲಗಿದ್ದರು. ಆಗ ರಣರಂಗದಲೆಲ್ಲ ಅಂದವಾದ ಮೂಗು, ಪ್ರಕಾಶಮಾನವಾದ ಕಣ್ಣು, ತಿದ್ದಿದ ಮಿಾಸೆ, ಥಳಥಳಿಸುವ ಮಕರಕುಂಡಲಗಳು, ಇವುಗಳಿಂದ ಅಲಂಕೃತಗಳಾಗಿ ಕಮಲಗಳಿಗೂ, ಸೂರ್ಯಚಂದ್ರರಿಗೂ ಸಮಾನವಾದ ಎಷ್ಟೋ ವೀರರ ತಲೆಗಳು ಕಡಿದುಬಿದ್ದಿದ್ದುವು. ಅನೇಕ ಸೈನ್ಯಗಳು ಭಯಪಟ್ಟು ನಾನಾಕಡೆಗೆ ಓಡಿದುವು. ಇದನ್ನು ನೋಡಿ ದುರ್ಯೋಧನನೂ, ಕರ್ಣನೂ, ಶಕುನಿಯೂ, ದ್ರೋಣನೂ, ಅಶ್ವತ್ಥಾಮನೂ, ಕೃಪನೂ

ಇವರೆಲ್ಲರೂ ಒಂದಾಗಿ ಸೇರಿ, ಅರ್ಜುನನನ್ನು ಇದಿರಿಸಬೇಕೆಂದು ಧನುಷ್ಟಂಕಾರಮಾಡುತ್ತ ಮುಂದೆ ಬಂದರು. ಆಲ್ಲಿ ಅವರು, ಗಾಳಿಯಿಂದ ತೂಗಾಡುತ್ತಿರುವ ವಾನರಧ್ವಜದಿಂದ ಶೋಭಿತವಾಗಿ, ಸೂರ್ಯನಂತೆ ಜ್ವಲಿಸುತ್ತಿರುವ ಅರ್ಜುನನ ರಥವು ತಮ್ಮ ದಾರಿಗಡ್ಡಲಾಗಿರುವುದನ್ನು ನೋಡಿ, ಕೋಪದಿಂದ ಅರ್ಜುನನ ರಥವನ್ನು ಆವರಿಸಿಕೊಂಡು ಮೇಘಗಳು ಬೆಟ್ಟದಮೇಲೆ ಮಳೆಯನ್ನು ಕರೆಯುವಂತೆ ಅರ್ಜುನನಮೇಲೆ ಎಲ್ಲರೂ ಒಟ್ಟಾಗಿ ಅಸ್ತ್ರವರ್ಷಗಳನ್ನು ಕರೆದರು. ಸಮೀಪವಾಗಿಯೇ ನಿಂತು, ಅವನಮೇಲೆ ಅನೇಕ ಬಾಣಗಳನ್ನು ಪ್ರಯೋಗಿಸಿದರು. ಆದರೇನು? ಅರ್ಜುನನು ಅಟ್ಟಹಾಸದಿಂದ ನಗುತ್ತ, ಹಿಂದೆ ತಾನು ಐದು ವರ್ಷ ಕಾಲದ ವರೆಗೆ ಅಭ್ಯಸಿಸಿದ ಐಂದ್ರಾಸ್ತ್ರವನ್ನು ಗಾಂಡೀವ ಧನುಸ್ಸಿಗೆ ಸೇರಿಸಿದನು. ಆಗ ಅರ್ಜುನನು ಪ್ರಯೋಗಿಸಿದ ಬಾಣಗಳು ಒಂದೆರಡು ಅಂಗುಲದಷ್ಟಾದರೂ ಅವಕಾಶವಿಲ್ಲದೆ ಶತ್ರುಗಳ ರಥಗಳನ್ನೂ, ರಥಾಶ್ವಗಳನ್ನೂ, ಚಕ್ರಗಳನ್ನೂ, ರಥದ ಅಚ್ಚುಗಳನ್ನೂ ಮುಚ್ಚಿಬಿಟ್ಟುವು. ಸೂರ್ಯನು ತನ್ನ ಕಿರಣಗಳಿಂದ ಸಮಸ್ತದಿಕ್ಕುಗಳನ್ನೂ ಆವರಿಸುವಂತೆ ಅರ್ಜುನನಿಂದ ಬಿಡಲ್ಪಟ್ಟ ಬಾಣಗಳು ಎಲ್ಲವನ್ನೂ ಮರೆಸಿಬಿಟ್ಟಿತು. ವಿಷ್ಣುಚಕ್ರದಂತೆ ಅರ್ಜುನನ ಕೈಯಲ್ಲಿ ಜ್ವಲಿಸುತ್ತಿದ್ದ ಗಾಂಡೀವವು ಮೇಘದಲ್ಲಿ ಮಿಂಚಿನಂತೆಯೂ, ಬೆಟ್ಟದಲ್ಲಿ ಕಾಡುಗಿಚ್ಚಿನಂತೆಯೂ ಕಾಣಿಸಿತು. ಮೇಘವು ಮಳೆಯನ್ನು ಸುರಿಯುವಾಗ, ಬೆಟ್ಟದಮೇಲೆ ಸಿಡಿಲುಬಡಿದಂತೆಯೂ, ಮಿಂಚುಹೊಡೆದಂತೆಯೂ, ಅರ್ಜುನನ ಗಾಂಡೀವವು ಎಲ್ಲಾ ದಿಕ್ಕುಗಳನ್ನೂ ಬೆಳಗಿತು. ಅರ್ಜುನನು ಐಂದ್ರಾಸ್ತ್ರವನ್ನು ಬಿಟ್ಟೊಡನೆ, ಎಲ್ಲಾ ರಥಿಕರೂ ಭಯದಿಂದ ನಡುಗಿದರು. ಯೋಧರೆಲ್ಲರೂ ಕೈಲಾಗದೆ ಸುಮ್ಮನಾದರು. ಅನೇಕರಿಗೆ ತಮ್ಮ ಬುದ್ಧಿಯೇ ತಮಗೆ ತಿಳಿಯದಂತಾಯಿತು. ಭೀಷ್ಮ ದ್ರೋಣರು ಮೊದಲಾಗಿ ಎಲ್ಲರೂ ಪ್ರಜ್ಞೆತಪ್ಪಿ ಮೋಹವಶರಾದರು. ಸೈನ್ಯಗಳೆಲ್ಲವೂ ಭಯದಿಂದ ಬೆದರಿ ನಾನಾದಿಕ್ಕುಗಳಿಗೆ ಓಡಿದುವು.

ಇದು ಅರುವತ್ತೈದನೆಯ ಅಧ್ಯಾಯವು.

ಅರ್ಜುನನು ಭೀತಿಗೊಂಡ ಉತ್ತರನಿಗೆ ಆಗಾಗ ಧೈರ್ಯವನ್ನು ಹೇಳುತ್ತ, ದುರ್ಯೋಧನನಿದ್ದಲ್ಲಿಗೆ ರಥವನ್ನು ಬಿಡುವಂತೆ ಹೇಳಿದುದು. ದುರ್ಯೋಧನನು ಬಾಣಪ್ರಹಾರದಿಂದ ನೊಂದು ಓಡಿಹೋಗುವಾಗ, ಅರ್ಜುನನು ಅವನನ್ನು ಮೂದಲಿಸಿ, ಹಾಸ್ಯಮಾಡಿ ಕರೆದುದು.

ಆಮೇಲೆ ಅರ್ಜುನನು ಉತ್ತರನನ್ನು ಕರೆದು "ಓ ಸಾರಥೀ! ಕುದುರೆಗಳನ್ನು ಈ ದಕ್ಷಿಣದಿಕ್ಕಿಗಿದಿರಾಗಿಯೇ ಬಿಟ್ಟುಕೊಂಡು ಹೋಗು. ಇದೋ! ಇಲ್ಲಿರುವ ವೀರರ ಕೋಲಾಹಲವು ಇನ್ನೂ ಅಧಿಕವಾಗುತ್ತಿರುವುದು. ಪೂರ್ವಾಭಿಮುಖವಾಗಿ, ಅದೋ! ಆಲ್ಲಿ ಅಶ್ವತ್ಥಾಮನ ರಥವಿರುವಕಡೆಗೆ ರಥವನ್ನು ನಡೆಸು. ನಾನು ಆಚಾರ್ಯಪುತ್ರನಾದ ಮತ್ತು ಯಶಸ್ವಿಯಾದ ಆತನನ್ನು ಈಗಲೇ ನೋಡಲೆಳಸುವೆನು" ಎಂದು ಹೇಳಿ, ತನ್ನ ಧನುಸ್ಸಿನ ಶಬ್ದದಿಂದ, ಅಲ್ಲಿದ್ದವರೆಲ್ಲರಿಗೂ ಮೋಹವುಂಟಾಗುವಂತೆ ಮಾಡಿ, ಆ ಕೌರವಸೈನ್ಯವನ್ನು ಪ್ರದಕ್ಷಿಣವಾಗಿ ಸುತ್ತಿಕೊಂಡು, ಅರ್ಧ ಕ್ರೋಶದವರೆಗೆ ವೇಗದಿಂದ ರಥವನ್ನು ಬಿಡಿಸಿಕೊಂಡು ಬಂದನು. ಅರ್ಜುನನ ರಥವು ಎಡೆಬಿಡದೆ ಬೀಸುತ್ತಿರುವ ಗಾಳಿಯಂತೆಯೂ, ವೇಗದಲ್ಲಿ ಗರುಡನಂತೆಯೂ, ಆಕಾಶದಲ್ಲಿಯೇ ಹಾರಿಬರುವಂತೆ, ವೇಗದಿಂದ ಸುತ್ತಿಕೊಂಡು ಬಂದಿತು. ಅರ್ಜುನನು ಅತ್ತಲಾಗಿ ತಿರುಗಿದೊಡನೆಯೇ ಒಂದು ಮುಹೂರ್ತದವರೆಗೆ ಸೈನ್ಯದಲ್ಲಿ ಶಬ್ದವು ಅಡಗಿದಂತಿತ್ತು. ಅರ್ಜುನನು ಬೇರೆಕಡೆಗೆ ಹೋದಾಗ, ಅವನ ಬಾಣಗಳಿಂದ ಬಹಳ ನೊಂದಿದ್ದ ಭೀಷ್ಮ ದ್ರೋಣಾದಿಗಳೆಲ್ಲರೂ ಒಂದಾಗಿ ಸೇರಿ, ಪಾರ್ಥನೆಲ್ಲಿರುವನೆಂದು ತಿಳಿಯದೆ, ತಮ್ಮ ಚತುರಂಗ ಸೈನ್ಯವನ್ನು ಮುಂದಿಟ್ಟುಕೊಂಡು ಹೊರಟರು. ಆಗ ಸೈನಿಕರೆಲ್ಲರೂ ತಮ್ಮೊಳಗೆ ಒಬ್ಬರಿಗೊಬ್ಬರು, "ಅದೃಷ್ಟವಶದಿಂದ ದುರ್ಯೋಧನನು ತಪ್ಪಿಸಿಕೊಂಡನು. ಒಂದು ಕ್ರೋಶದೂರದವರೆಗೆ ಆ ಸೈನ್ಯನೆಲ್ಲವೂ ಓಡಿಹೋಗಿದ್ದು, ಪ್ರಾಯಿಕವಾಗಿ ಹಿಂತಿರುಗಿಬಿಟ್ಟಿತು. ಆ ಸೈನ್ಯವನ್ನು ಹಿಂಬಾಲಿಸಿ ಅದನ್ನೂ ಕರೆತರಬೇಕು. ಆಶ್ಮಕೆಯೆಂಬ ನದಿಯ ತೀರದಲ್ಲಿ

ದುರ್ಗಮವಾದ ಒಂದು ವನವುಂಟು. ಆ ವನಕ್ಕೆ ಹೋಗುವೆವು'' ಎಂದು ಆಡಿಕೊಳ್ಳುತ್ತಿದ್ದರು. ಹೀಗೆ ಸೈನ್ಯವು ಚದರಿಹೋಗುತ್ತಿರುವುದನ್ನು ನೋಡಿ ದುರ್ಯೋಧನನು ದುಸ್ಸಹವಾದ ಕೋಪದಿಂದ ತನ್ನ ಸೈನ್ಯಗಳನ್ನು ಕಟ್ಟಿಕೊಂಡು, ಭೀಷ್ಮ, ದ್ರೋಣ, ಕೃಪಾದಿಗಳು ಬಹಳವಾಗಿ ತಡೆದರೂ ಕೇಳದೆ, ಅರ್ಜುನನನ್ನು ಹುಡುಕಿಕೊಂಡು ಹೊರಟನು. ಇದನ್ನು ನೋಡಿ ಅರ್ಜುನನು, ವಿಚಿತ್ರವಾಗಿಯೂ, ಮಹಾವೇಗವುಳ್ಳದಾಗಿಯೂ ಯಾರಿಂದಲೂ ಭೇದಿಸುವುದಕ್ಕೂ, ಮುರಿಯುವುದಕ್ಕೂ, ದಹಿಸುವುದಕ್ಕೂ ಸಾಧ್ಯವಲ್ಲದೆ, ಆದಿಶೇಷನ ಶರೀರಕ್ಕೆ ಸಮಾನವಾಗಿಯೂ, ಇದ್ದ ತನ್ನ ಗಾಂಡೀವಧನುಸ್ಸನ್ನು ನೋಡುತ್ತ ಹೀಗೆಂದು ಹೇಳುವನು. ''ಈ ಗಾಂಡೀವ ಧನುಸ್ಸು ಈಗ ಕೌರವರ ಅನೀತಿಯನ್ನು ಅಡಗಿಸತಕ್ಕ ಮಂಗಳಕರವಾದ ಮತ್ತು ಶತ್ರುನಿಗ್ರಾಹಕವಾದ ದಿವ್ಯಾಯುಧವು. ಇದು ಗಾಳಿಗಿಂತಲೂ ವೇಗವುಳ್ಳದು. ಎಂತಹ ಯುದ್ಧದಲ್ಲಿಯೂ ತಡೆಯಲಸಾಧ್ಯವಾದುದು. ಶತ್ರು ಸೈನ್ಯಗಳನ್ನು ಧ್ವಂಸಮಾಡತಕ್ಕುದು. ಯುದ್ಧದಲ್ಲಿ ವಜ್ರಾಯುಧಕ್ಕೆ ಸಮಾನವಾದುದು. ಶತ್ರುಸ್ತ್ರೀಯರಿಗೆ ವೈಧವ್ಯವನ್ನು ತರತಕ್ಕುದು. ಕುರುವಂಶದವರಾದ ನಮಗೆ ಸೌಖ್ಯವನ್ನು ತರತಕ್ಕುದು'' ಎಂದು ಹೇಳಿ, ಆ ಧನುಸ್ಸನ್ನು ನೋಡಿ, ''ಎಲೆ, ಧನುಸ್ಸೇ! ಆ ದುರ್ಯೋಧನನಿರುವ ಕಡೆಗೆ ಹೊರಡು. ತೀಕ್ಷ್ಣಬಾಣಗಳಿಂದ ಅವನನ್ನು ನಿಮಿಷಮಾತ್ರದಲ್ಲಿ ಕೆಡಹುವೆನು. ಆಚಾರ್ಯಪುತ್ರನಾದ ಅಶ್ವತ್ಥಾಮನನ್ನೂ, ಚೆನ್ನಾಗಿ ಯುದ್ಧಮಾಡತಕ್ಕ ಭೀಷ್ಮನನ್ನೂ, ಕರ್ಣ, ದ್ರೋಣ, ಕೃಪಾದಿಗಳೆಲ್ಲರನ್ನೂ ತಡೆದು, ಆ ದುರ್ಯೋಧನನ ತಲೆಯನ್ನು ಹಾರಿಸಿಬಿಡುವೆನು'' ಎಂದನು.

ಓ ಜನಮೇಜಯರಾಜಾ! ಅರ್ಜುನನ ಈ ಆರ್ಭಟವನ್ನೂ, ಅವನ ಕೈಯಲ್ಲಿರುವ ಮಹಾವೇಗವತ್ತಾದ ವಿಚಿತ್ರ ಧನುಸ್ಸನ್ನೂ, ತೀಕ್ಷ್ಣ ಬಾಣಗಳನ್ನೂ ನೋಡಿ ಉತ್ತರನಿಗೆ ಭಯವು ಹತ್ತಿತು. ಆ ಯುದ್ಧಮಧ್ಯದಲ್ಲಿಯೇ ಉತ್ತರನು ಅರ್ಜುನನನ್ನು ಕುರಿತು ''ಓ ಮಹಾತ್ಮಾ! ಇನ್ನು ನಾನು ನಿನ್ನ ಕುದುರೆಗಳನ್ನು ನಡೆಸುವುದಕ್ಕೆ ಶಕ್ತನಲ್ಲ. ನಾನು ಈ ಕುದುರೆಗಳನ್ನು ಹಿಡಿಯಲಾರೆನು'' ಎಂದನು. ಅದನ್ನು ಕೇಳಿ ಅರ್ಜುನನು

ನಗುತ್ತ, "ಓ ಉತ್ತರಾ! ನಾನು ಸಹಾಯಕ್ಕಿರುವಾಗ ನಿನಗೆ ಅಂಜಿಕೆಯೇನು? ಮುಂದೆ ನಡೆ! ಕುದುರೆಗಳನ್ನು ನಡೆಸು" ಎಂದನು. ಅರ್ಜುನನು ಹೀಗೆ ಧೈರ್ಯವನ್ನು ಹೇಳಿದಮೇಲೆ ಉತ್ತರನು ಕುದುರೆಗಳನ್ನು ವೇಗದಿಂದ ಮುಂದೆ ಬಿಟ್ಟನು. ಆ ಅರ್ಜುನನು ಆಗಾಗ ಧನುಸ್ಸನ್ನು ಟಂಕಾರಮಾಡುತ್ತ, ತನ್ನ ಯುದ್ಧೋತ್ಸಾಹವನ್ನು ಸೂಚಿಸಿದನು. ಗಾಂಡೀವಶಬ್ದದಿಂದಲೇ ಅನೇಕರು ಭಯಪಟ್ಟು ಅಲ್ಲಲ್ಲಿ ಕುಳಿತುಬಿಟ್ಟರು. ಇದಲ್ಲದೆ, ಅರ್ಜುನನು ಆಗಾಗ ಊದುವ ಶಂಖಧ್ವನಿಯೊಂದು, ಅವನ ಧ್ವಜದಲ್ಲಿರುವ ವಾನರನ ಆರ್ಭಟವೊಂದು, ಈ ಶಬ್ದಗಳೆಲ್ಲಾ ಸೇರಿ, ಮಹಾ ಭಯಂಕರವಾಯಿತು. ಅಲ್ಲಲ್ಲಿ ನಿಂತ ಕಡೆಯಲ್ಲಿಯೇ ಆ ಯೋಧರೆಲ್ಲರೂ ಭಯದಿಂದ ತಬ್ಬಿಬ್ಬಾಗಿ ಬೀಳುತಿದ್ದರು. ಆಗ ಅರ್ಜುನನು ಸಾರಥಿಯನ್ನು ಕುರಿತು, "ಉತ್ತರಾ! ಅದೋ! ಸೇನೆಯ ಮುಂಭಾಗದಲ್ಲಿ ಆ ಧೃತರಾಷ್ಟ್ರಪುತ್ರನು ಎಲ್ಲರಿಗಿಂತಲೂ ಅಧಿಕವಾದ ತೇಜಸ್ಸಿನಿಂದ ಜ್ವಲಿಸುತ್ತಿರುವನು ನೋಡು. ಅವನು ಬಹಳ ಗರ್ವಿಷ್ಠನು. ಪರಾಜಯವನ್ನು ಯಾವಾಗಲೂ ಸಹಿಸುವವನಲ್ಲ. ನನ್ನೊಡನೆ ಯುದ್ಧವನ್ನಪೇಕ್ಷಿಸಿ ಯುದ್ಧಮಾಡುವುದಕ್ಕಾಗಿ ಹಿಂತಿರುಗಿ ಬರುತ್ತಿರುವನು ನೋಡು. ತನ್ನ ತಮ್ಮಂದಿರೊಡನೆ ಅಲ್ಲಿ ಬರುತ್ತಿರುವ ಆ ದುರ್ಯೋಧನನಿಗಿದಿರಾಗಿ ಬಹಳ ಎಚ್ಚರಿಕೆಯಿಂದ ರಥವನ್ನು ಬಿಡು" ಎಂದನು. ಇಷ್ಟರಲ್ಲಿ ಕೌರವವೀರರನೇಕರು ವೇಗದಿಂದ ಮುಂದೆ ಬಂದು, ಇದಿರಾಗಿ ಬರುತ್ತಿದ್ದ ಅರ್ಜುನನನ್ನು ತಡೆದರು. ಅರ್ಜುನನಾದರೋ ಅವರನ್ನು ಲಕ್ಷ್ಯಮಾಡದೆ ನಗುತ್ತ, ದುರ್ಯೋಧನನಿಗೆ ಗುರಿಯಿಟ್ಟು ಎರಡು ಬಾಣಗಳನ್ನು ಹೊಡೆದನು. ಪೆಟ್ಟುತಿಂದ ಮದದಾನೆಯಂತೆ ಆ ದುರ್ಯೋಧನನು ಕೋಪದಿಂದ ಅರ್ಜುನನನ್ನು ಸಮೀಪಿಸಿ, ಕಿವಿಯವರೆಗೆ ಎಳೆದುಬಿಟ್ಟ ಒಂದು ತೀಕ್ಷ್ಣಬಾಣದಿಂದ ಅವನ ಹಣೆಯ ನಡುಭಾಗಕ್ಕೆ ಸರಿಯಾಗಿ ಹೊಡೆದನು. ಆ ಬಾಣದ ಗಾಯದಿಂದ ಅರ್ಜುನನ ಹಣೆಯಲ್ಲಿ ರಕ್ತವು ಸುರಿಯಲಾರಂಭಿಸಿತು. ಚಿನ್ನದ ಹಿಡಿಯುಳ್ಳ ಆ ಬಾಣವು ಹಣೆಯಲ್ಲಿ ನಾಟಿಕೊಂಡಿರಲು, ಆಗ ಅರ್ಜುನನು ಹಗಲಿನಲ್ಲಿ ಒಂದೇ ಕಿರಣದೊಡನೆ ಉದಿಸಿಬಂದ ಸೂರ್ಯನಂತೆ ಕಾಣಿಸಿದನು. ಆ ಬಾಣದ ಗಾಯದಿಂದ ಎಡೆಬಿಡದೆ ಸುರಿಯುತ್ತಿದ್ದ ಉಷ್ಣ

ವಾದ ರಕ್ತಧಾರೆಯು, ಸುವರ್ಣಪುಷ್ಪಗಳಿಂದ ವಿಚಿತ್ರವಾದ ಮಾಲಿಕೆಯಂತೆ ಶೋಭಿಸುತ್ತಿತ್ತು. ದುರ್ಯೋಧನನ ಬಾಣದ ಪೆಟ್ಟಿನಿಂದ ಕೋಪಗೊಂಡ ಅರ್ಜುನನು, ವಿಷಕ್ಕೂ, ಅಗ್ನಿಗೂ ಸಮಾನಗಳಾದ ಬಾಣಗಳನ್ನು ತೆಗೆದು ದುರ್ಯೋಧನನಮೇಲೆ ಪ್ರಯೋಗಿಸಿದನು. ದುರ್ಯೋಧನನೂ ಅರ್ಜುನನನ್ನು ಅನೇಕಬಾಣಗಳಿಂದ ಹೊಡೆದನು. ಪುರುಷಶ್ರೇಷ್ಠರಾದ ಅವರಿಬ್ಬರೂ ಒಬ್ಬರಿಗೊಬ್ಬರು ಸೋಲದೆ, ಆ ಯುದ್ಧದಲ್ಲಿ ಸಮವಾಗಿ ಹೊಡೆದಾಡುತಿದ್ದರು. ಇಷ್ಟರಲ್ಲಿಯೇ ವಿಕರ್ಣನೆಂಬವನು ಒಂದು ದೊಡ್ಡ ಮದದಾನೆಯನ್ನೇರಿ, ಆ ಆನೆಯ ಬೆಂಗಾವಲಿಗಾಗಿ ಅದರ ನಾಲ್ಕು ಪಕ್ಕಗಳಲ್ಲಿಯೂ ನಾಲ್ಕು ರಥಿಕರನ್ನಿಟ್ಟುಕೊಂಡು, ಅರ್ಜುನನನ್ನಿದಿರಿಸಿ ಬಂದನು. ಹೀಗೆ ವಿಕರ್ಣನು ಗಜಾರೂಢನಾಗಿ ಬರುವುದನ್ನು ಕಂಡೊಡನೆ, ಅರ್ಜುನನು ಆ ಆನೆಯ ಕುಂಭಸ್ಥಳಕ್ಕೂ, ಹಣೆಗೂ ನಡುವೆ ನಾಟುವಂತೆ ಒಂದು ಬಾಣವನ್ನು ಕಿವಿಯವರೆಗೆಳೆದು ವೇಗದಿಂದ ಬಿಟ್ಟನು. ಆ ಬಾಣವು, ಇಂದ್ರನಿಂದ ಪ್ರಯೋಗಿಸಲ್ಪಟ್ಟ ವಜ್ರಾಯುಧವು ಬೆಟ್ಟವನ್ನು ಹೇಗೋ ಹಾಗೆ, ಬೆಟ್ಟದಂತಿದ್ದ ಆ ಆನೆಯ ಮೈಯನ್ನು ಭೇದಿಸಿ, ಅದರ ಹಣೆಯಲ್ಲಿ ಹಿಡಿಯವರೆಗೆ ನಾಟಿಕೊಂಡಿತು. ಈ ಬಾಣದಿಂದ ನೊಂದ ಆನೆಯು ಬಹಳ ಬಾಧೆಯಿಂದ ಮೈ ನಡುಗುತ್ತ, ವಜ್ರಾಹತವಾದ ಪರ್ವತಶಿಖರದಂತೆ ನೆಲದಮೇಲೆ ಬಿದ್ದು ಬಿಟ್ಟಿತು. ಆನೆಯು ಸತ್ತುಬಿದ್ದ ಮೇಲೆ ವಿಕರ್ಣನು ಭಯದಿಂದ ಆ ಆನೆಯನ್ನು ಬಿಟ್ಟು ಕೆಳಕ್ಕಿಳಿದು, ನೂರೆಂಟು ಅಡಿಗಳ ದೂರದವರೆಗೆ ಓಡಿಹೋಗಿ, ವಿವಿಂಶತಿಯ ರಥವನ್ನೇರಿಕೊಂಡನು. ಅತ್ತಲಾಗಿ ಅರ್ಜುನನಾದರೋ ವಿಕರ್ಣನ ಆನೆಯನ್ನು ಕೊಂದಮೇಲೆ, ಅದೇ ವಿಧವಾದ ಮತ್ತೊಂದು ಬಾಣವನ್ನು ತೆಗೆದು ದುರ್ಯೋಧನನ ಎದೆಗೆ ಗುರಿಯಿಟ್ಟು ಹೊಡೆದನು. ಇದರಿಂದ ದುರ್ಯೋಧನನಿಗೆ ಪ್ರಬಲವಾದ ಗಾಯವಾಯಿತು. ಅರ್ಜುನನ ಬಾಣಗಳಿಂದ ವಿಕರ್ಣನ ಆನೆಯೂ ಸತ್ತು, ದುರ್ಯೋಧನನೂ ಗಾಯಪಟ್ಟು, ವಿಕರ್ಣನಿಗೂ ಅವನ ಪಾದರಕ್ಷಕರೊಡನೆ ಪರಾಭವವುಂಟಾದುದನ್ನು ಕೇಳಿ ಯೋಧರೆಲ್ಲರೂ ಭಯಪಟ್ಟು ವೇಗದಿಂದ ಓಡಲಾರಂಭಿಸಿದರು. ಆಗ ದುರ್ಯೋಧನನೂ ಕೂಡ ವಿಕರ್ಣನ ದೊಡ್ಡ ಆನೆಯು ಹತವಾಗಿ ಬಿದ್ದುದನ್ನೂ, ತನ್ನ ಕಡೆಯ

ಯೋಧರು ಭಯಪಟ್ಟೋಡುವುದನ್ನೂ ನೋಡಿ, ತಾನೂ ತಲೆತಪ್ಪಿಸಿ ಕೊಂಡು ಹೋಗುವುದಕ್ಕಾಗಿ ಅರ್ಜುನನಿಲ್ಲದಕಡೆಗೆ ರಥವನ್ನೋಡಿಸಿ ಕೊಂಡು ಹೋಗುತಿದ್ದನು. ಹೀಗೆ ಭಯದಿಂದ ಬೇರೆ ಕಡೆಗೆ ವೇಗದಿಂದೋ ಡುತ್ತಿರುವ ದುರ್ಯೋಧನನನ್ನು ನೋಡಿ ಅರ್ಜುನನಿಗೆ ಮತ್ತಷ್ಟು ಉತ್ಸಾ ಹವುಂಟಾಯಿತು. ದುರ್ಯೋಧನನೊಡನೆ ಯುದ್ಧಮಾಡಬೇಕೆಂಬ ಆಶೆ ಯಿಂದ ಅರ್ಜುನನು, ಮೊದಲೇ ತನ್ನ ಬಾಣದಿಂದ ನೊಂದು ರಕ್ತವನ್ನು ಕಾರುತ್ತಿದ್ದ ಆತನನ್ನು ಕೂಗಿ ಕರೆಯುತ್ತ ಅವನನ್ನು ಬೆನ್ನಟ್ಟಿದನು.

ಮಹಾಧನುರ್ಧಾರಿಯಾದ ದುರ್ಯೋಧನನು ಯುದ್ಧದಲ್ಲಿ ಅರ್ಜು ನನ ಬಾಣದಿಂದ ನೊಂದು ಓಡಿಹೋಗುವುದನ್ನು ನೋಡಿ, ಕುರುಸೈನ್ಯಗ ಳೆಲ್ಲಕ್ಕೂ ಭಯವುಂಟಾಯಿತು. ಆ ಸೈನಿಕರೆಲ್ಲರಿಗೂ ತಾವೂ ಯುದ್ಧವನ್ನು ಬಿಟ್ಟು ಓಡಿಹೋಗಬೇಕೆಂಬ ಆತುರವು ಹುಟ್ಟಿತು. ಅತ್ತಲಾಗಿ ಅರ್ಜುನ ನಾದರೋ ಬಲದರ್ಪದಿಂದ ಗೂಳಿಗಳ ನಡುವೆ ಸಿಂಹದಂತೆ ಆರ್ಭಟಿಸಿ ಕೂಗುತ್ತಿದ್ದನು. ಅವನ ಗಾಂಡೀವಶಬ್ದದಿಂದಲೇ ಅನೇಕರಥಿಕರು ರಥ ದಿಂದ ಕೆಳಕ್ಕೆ ಬಿಳುತಿದ್ದರು. ಅರ್ಜುನನ ಬಾಣಗಳಿಂದ ಪೀಡಿತರಾದ ಅನೇಕಯೋಧರು, ಸಿಂಹದ ಕೈಗೆ ಸಿಕ್ಕಿದ ಆನೆಯಂತೆ ತತ್ತಳಿಸುತಿದ್ದರು. ಅರ್ಜುನನು ಮೇಲೆಮೇಲೆ ಕೋಪದಿಂದ ಕೆಂಪೇರಿದ ಕಣ್ಣುಗಳುಳ್ಳವನಾಗಿ, ತಿರುಗಿ ಹನ್ನೆರಡು ಬಾಣಗಳಿಂದ ಕರ್ಣನನ್ನು ಹೆದರಿಸಿ, ಓಡುತ್ತಿರುವ ಕುರುಸೈನ್ಯಗಳ ಮಧ್ಯದಿಂದ ಏಕರಥನಾಗಿ ಬರುತಿದ್ದ ದುಶ್ಶಾಸನನನ್ನು ಕೋಪದಿಂದ ನೋಡಿದನು. ಅರ್ಜುನನ ಬಾಣದಿಂದ ನೊಂದ ಕರ್ಣನು ದುರ್ಯೋಧನನನ್ನೂ, ದುಷ್ಪ್ರಸಹನನ್ನೂ ನೋಡಿ, "ಓ ಮಿತ್ರರೇ! ಅದೋ! ಅರ್ಜುನನು ನಮ್ಮ ಕಣ್ಣಿಗೆ ಸಿಕ್ಕಿಬಿಟ್ಟನು. ನಾವು ಬೇಗನೆ ಹೋಗಿ ಅವನನ್ನು ಹಿಡಿಯಬೇಕು. ಇಲ್ಲಿಂದ ಹೋಗಿ ನಾವು ಅವನನ್ನು ಹಿಡಿದುಬಿಟ್ಟರೆ, ನಮ್ಮ ಕೆಲಸವನ್ನು ಮುಗಿಸಿದಂತಾಗುವುದು. ನಮಗೆ ಶ್ರೇಯಸ್ಸುಂಟು. ಅವನು ಈಗ ನಮ್ಮ ಕಣ್ಣಿಗೆ ಬಿದ್ದಿರುವುದರಿಂದ, ತಿರುಗಿ ಹನ್ನೆರಡು ವರ್ಷಗಳವರೆಗೆ ಅವನು ವನಕ್ಕೆ ಹೋಗಲೇಬೇಕು. ಪಾಂಡವರ ಪ್ರತಿಜ್ಞಾಕಾಲವು ಇನ್ನೂ ತೀರಿಲ್ಲವೆಂದೇ ನನಗೆ ತೋರಿದೆ" ಎಂದನು.

ಓ ಜನಮೇಜಯರಾಜಾ! ಅರ್ಜುನನ ಬಾಣದಿಂದ ನೊಂದ ಆ ವೀರರೆಲ್ಲರೂ ಹೀಗೆ ಒಬ್ಬರನ್ನೊಬ್ಬರು ಕರೆಯುತ್ತ ಓಡಿದರು. ಆಗ ಕರ್ಣನು, "ಅದೋ! ಪಾರ್ಥನು ಬರುವನು. ನಾವೆಲ್ಲರೂ ದುರ್ಯೋಧನನಿಗೆ ಬೆಂಗಾವಲಾಗಿ ಸುತ್ತಿಕೊಂಡು ಮುಂದೆ ಹೋಗುವೆವು. ಸರ್ವಾಸ್ತ್ರವಿದನೆಂದೂ, ಆನೆಯ ಸಲಗಕ್ಕೆ ಸಮಾನನೆಂದೂ, ಯುದ್ಧದಲ್ಲಿ ಶತ್ರುಸಂಹಾರಕನೆಂದೂ ಹೆಸರುಗೊಂಡ ಅರ್ಜುನನು ತಿರುಗಿ ನಮ್ಮನ್ನು ತಿರಿಸಲು ಬಂದಿರುವನು. ಈಗ ನಾವು ಭರತಕುಲಕ್ಕೆಲ್ಲಾ ಮೂಲಭೂತನಾದ ದುರ್ಯೋಧನನನ್ನು ರಕ್ಷಿಸಿಕೊಳ್ಳಬೇಕಾದುದು ಅವಶ್ಯಕರ್ತವ್ಯವು" ಎಂದನು. ಇಷ್ಟರಲ್ಲಿ ದುರ್ಯೋಧನನಾದರೋ, ದಂಡಪಾಣಿಯಾದ ಯಮನಂತೆ ವೇಗದಿಂದ ತನಗಿದಿರಾಗಿ ಬರುತ್ತಿದ್ದ ಅರ್ಜುನನನ್ನು ನೋಡಿ, ಭಯದಿಂದ ನಡುಗುತ್ತ, ದ್ರೋಣನೂ, ಕರ್ಣನೂ, ಕೃಪನೂ, ಭೀಷ್ಮನೂ, ಇದ್ದಲ್ಲಿಗೆ ಬಂದನು. ಹೀಗೆ ಭಯಗ್ರಸ್ತನಾಗಿ ಭೀಷ್ಮಾದಿಗಳಲ್ಲಿ ಮರೆಹೊಕ್ಕು ಪ್ರಾರ್ಥಿಸುತ್ತಿರುವ ದುರ್ಯೋಧನನನ್ನು ನೋಡಿ, ಅರ್ಜುನನು ಜಯೋತ್ಸಾಹದಿಂದ ಹೀಗೆಂದು ಹೇಳುವನು. "ಓ ದುರ್ಯೋಧನಾ! ಹೀಗೆ ಲೋಕದಲ್ಲಿ ಖ್ಯಾತಿಯನ್ನೂ, ಕೀರ್ತಿಯನ್ನೂ ಕೆಡಿಸಿಕೊಂಡು ಯುದ್ಧದಿಂದ ಹಿಂತಿರುಗಿ ಏಕೆ ಓಡಿಹೋಗುವೆ? ಈ ನಿನ್ನ ರಣವಾದ್ಯಗಳು ಹೀಗೆ ಭಯದಿಂದೋಡಿಹೋಗುವ ನಿನಗೆ ಸಂತೋಷವನ್ನುಂಟುಮಾಡಲಾರವು. ಓ ಕೌರವರಾಜಾ! ನೀನು ಹಟದಿಂದ ಕೈವಶಮಾಡಿಕೊಂಡಿರುವ ಈ ಅಖಂಡ ಭೂಮಿಯನ್ನಾಗಲಿ, ವಸ್ತ್ರವಾಹನಗಳನ್ನಾಗಲಿ, ಉತ್ತಮ ಭೋಜನಗಳನ್ನಾಗಲಿ, ಸುವಾಸನೆಯುಳ್ಳ ಚಂದನಗಳನ್ನಾಗಲಿ, ಯುದ್ಧದಿಂದ ಪಲಾಯನಮಾಡಿದ ನೀನು ಇನ್ನುಮೇಲೆ ಮನಸ್ತೃಪ್ತಿಯಿಂದ ಅನುಭವಿಸಲಾರೆ. ಸುವರ್ಣಮಾಲಿಕೆಗಳಾಗಲಿ, ಕುಂಡಲಗಳಾಗಲಿ, ವೈಡೂರ್ಯಹಾರಗಳಾಗಲಿ, ಯುದ್ಧದಿಂದೋಡಿಹೋದ ನಿನಗೆ ಹೇಗೆ ತೃಪ್ತಿಯನ್ನುಂಟುಮಾಡುವುವು? ಎಲ ಪಾಪೀ! ರಣರಂಗದಿಂದ ಭಯಪಟ್ಟೋಡುತ್ತಿರುವ ನಿನಗೆ ಈಗ ಈ ಶಂಖಧ್ವನಿಗಳುತಾನೇ ಹೇಗೆ ಪ್ರೀತಿಕರವಾಗಿರುವುವು? ಎಲೆ ಸುಯೋಧನಾ! ಯುದ್ಧದಿಂದೋಡಿದ ನಿನಗೆ ಚಂದನಾದ್ಯನುಲೇಪನಗಳಾಗಲಿ, ಸ್ತ್ರೀಯರ ಇಂಪಾದ ನುಡಿಗಳಾಗಲಿ, ಇಹಲೋಕದಲ್ಲಿಯೂ

ಪರಲೋಕದಲ್ಲಿಯೂ ಹೇಗೆ ತಾನೇ ಭೋಗಸಾಧನಗಳಾಗುವುವು? ಓ ಕೌರವಾ! ನಾನು ಆ ಧರ್ಮರಾಜನ ಆಜ್ಞಾಧೀನನಾಗಿ ಬಂದವನು. ಪಾಂಡವರಲ್ಲಿ ನಾನು ಮೂರನೆಯವನು. ಯುದ್ಧದಲ್ಲಿ ಸ್ಥಿರವಾಗಿ ನಿಲ್ಲತಕ್ಕವನು. ಎಲ್ಲಿ? ಇತ್ತಲಾಗಿ ತಿರುಗು! ನಿನ್ನ ಮುಖವನ್ನು ತೋರಿಸು. ಓ ಧಾರ್ತರಾಷ್ಟ್ರ! ಕ್ಷತ್ರಿಯಧರ್ಮವನ್ನು ನೆನಸಿಕೊಳ್ಳುವನಾಗು. ನೀನು ದುರ್ಯೋಧನನೆಂದು ಲೋಕದಲ್ಲಿ ಹೆಸರುಗೊಂಡವನು. ಈಗ ಆ ನಿನ್ನ ಹೆಸರು ವ್ಯರ್ಥವಾಯಿತು. ಮೋಸದಲ್ಲಿಯೇ ಬುದ್ಧಿಯುಳ್ಳ ನೀನು ಯುದ್ಧಕ್ಕೆ ಬಲುಸುಲಭನಾಗಿ, ಸುಯೋಧನನೆನಿಸಿದ್ದರೂ, ಹೆಸರಿಗೆಮಾತ್ರ ದುರ್ಯೋಧನನೆನಿಸಿರುವೆ. ಈಗ ರಣರಂಗವನ್ನು ಬಿಟ್ಟು ಭಯದಿಂದೋಡುತ್ತಿರುವ ನಿನಗೆ ಆ ದುರ್ಯೋಧನತ್ವವೆಲ್ಲಿಯದು? ಓ ಕುರುವೀರಾ! ಈಗ ನಿನಗೆ ಹಿಂದೆ ಮುಂದೆ ಯಾರೂ ರಕ್ಷಕರಿರುವಹಾಗೆ ತೋರುವುದಿಲ್ಲ. ನನ್ನ ಬಾಣವೇಗದಿಂದ ಬೆಂದ ನಿನ್ನ ಪ್ರಾಣಗಳನ್ನು ತಿರುಗಿ ನನ್ನೊಡನೆ ಯುದ್ಧದಿಂದ ಅಪ್ಯಾಯನಗೊಳಿಸು" ಎಂದನು.

ಇದು ಅರುವತ್ತಾರನೆಯ ಅಧ್ಯಾಯವು.

ಅರ್ಜುನನು ಮಾಡಿದ ಪರಿಹಾಸ್ಯಕ್ಕಾಗಿ ದುರ್ಯೋಧನನು ಹಿಂತಿರುಗಿ ಯುದ್ಧಕ್ಕೆ ನಿಂತುದು. ಅವನ ರಕ್ಷಣೆಗಾಗಿ ಬಂದ ಭೀಷ್ಮಾದಿಗಳೊಡನೆ ಅರ್ಜುನನು ಬಹಳ ಹೊತ್ತು ಯುದ್ಧಮಾಡಿ ಕೊನೆಗೆ ಸಮ್ಮೋಹನಾಸ್ತ್ರವನ್ನು ಬಿಟ್ಟುದು. ಉತ್ತರನು ಮೋಹಿತರಾಗಿ ಮಲಗಿದ್ದ ದ್ರೋಣಾದಿಗಳ ವಸ್ತ್ರವನ್ನು ತಂದುದು.

ಓ, ಜನಮೇಜಯರಾಜಾ! ಅಂಕುಶದಿಂದ ತಿವಿಯಲ್ಪಟ್ಟ ಮದದಾನೆಯಂತೆ, ಅರ್ಜುನನ ಪರಿಹಾಸದ ಮಾತುಗಳಿಂದ ನೊಂದ ದುರ್ಯೋಧನನು ಕೋಪದಿಂದ ಹಿಂತಿರುಗಿದನು. ಅತಿರಥನೆನಿಸಿಕೊಂಡ ಆತನು ಕಾಲಿಂದ ಮೆಟ್ಟಿದ ಸರ್ಪದಂತೆ ನೊಂದು, ತನ್ನ ರಥದೊಡನೆ ಹಿಂತಿರುಗಿ,

ಧನುಸ್ಸನ್ನು ಟಂಕಾರಮಾಡುತ್ತ, ಹಿಂದಿನ ಭಯವನ್ನು ಬಿಟ್ಟು, ಧೈರ್ಯವನ್ನು ತಂದುಕೊಂಡು ಹೀಗೆಂದು ಹೇಳುವನು.

"ಅರ್ಜುನಾ! ಇಂದ್ರನೇ ಯುದ್ಧಕ್ಕೆ ಬಂದರೂ ನಾನು ಹೆದರುವವನಲ್ಲವೆಂದು ತಿಳಿ. ಇದುವರೆಗೆ ನಿಮ್ಮನ್ನೆಲ್ಲಾ ಸೋಲಿಸಿ, ವಿಸ್ತಾರವಾದ ರಾಜ್ಯವನ್ನೂ, ಅಪರಿಮಿತವಾದ ಐಶ್ವರ್ಯವನ್ನೂ, ಅನೇಕಸುಖಗಳನ್ನೂ ಅನುಭವಿಸಿದ ನಾನು ಈಗ ಈ ಯುದ್ಧಕಾಲದಲ್ಲಿ ಓಡಿಹೋಗಬೇಕಾದುದೇಕೆ?" ಎಂದು ಹೇಳುತ್ತ, ವೇಗದಿಂದ ರಥವನ್ನು ಬಿಟ್ಟುಕೊಂಡು ಬಂದನು. ಕಾಲಿಂದ ಮೆಟ್ಟಿದ ಕೋಪಸ್ವಭಾವವುಳ್ಳ ಸರ್ಪದಂತೆ ರೇಗಿ, ತನ್ನ ರಥವನ್ನು ಅರ್ಜುನನ ರಥದೊಡನೆ ಸೇರಿಸುವಂತೆ ಸವಿಾಪಿಸಿ, ಯುದ್ಧವನ್ನಾರಂಭಿಸಿದನು. ದುರ್ಯೋಧನನು ಯುದ್ಧಕ್ಕೆ ನಿಂತುದನ್ನು ನೋಡಿ ಕರ್ಣನು ತನ್ನ ಧನುಸ್ಸನ್ನೂ ನಾಣೇರಿಸಿ, ಅವನ ದಕ್ಷಿಣಭಾಗದಲ್ಲಿ ಬೆಂಬಲವಾಗಿ ನಿಂತನು. ಗಾಂಧಾರರಾಜನಾದ ಶಕುನಿಯೂ, ಅಸ್ತ್ರಜ್ಞರಲ್ಲಿ ಮೇಲೆನಿಸಿದ ಅಶ್ವತ್ಥಾಮನೂ ದುರ್ಯೋಧನನ ಎಡಪಾರ್ಶ್ವದಲ್ಲಿ ರಕ್ಷಕರಾಗಿ ನಿಂತರು. ಭೀಷ್ಮಾಚಾರ್ಯನು ಚಿನ್ನದ ಕಟ್ಟುಳ್ಳ ತನ್ನ ಕುದುರೆಗಳನ್ನು ಹಿಂತಿರುಗಿಸಿಕೊಂಡು ಬಂದು, ಪಶ್ಚಿಮಭಾಗದಲ್ಲಿ ಆ ದುರ್ಯೋಧನನನ್ನು ರಕ್ಷಿಸುವುದಕ್ಕಾಗಿ ಸಿದ್ಧವಾಗಿ ನಿಂತನು. ದ್ರೋಣನೂ, ಕೃಪನೂ, ವಿವಿಂಶತಿಯೂ, ದುಶ್ಶಾಸನನೂ ಇವರೆಲ್ಲರೂ ವೇಗದಿಂದೋಡಿಬಂದು, ದುರ್ಯೋಧನನ ಮುಂಭಾಗದಲ್ಲಿ, ಧನುಸ್ಸಿನಲ್ಲಿ ಬಾಣಗಳನ್ನು ಸಂಧಾನಮಾಡಿ ನಿಂತರು. ಕೌರವರ ಸಮಸ್ತಸೈನ್ಯಗಳೂ ಪ್ರವಾಹವೇಗದಂತೆ ಹಿಂತಿರುಗಿಯುದ್ಧಕ್ಕಾಗಿ ಬರುವುದನ್ನು ನೋಡಿ, ಅರ್ಜುನನು, ಸೂರ್ಯನು ಮಹಾಮೇಘವನ್ನು ಹೇಗೋಹಾಗೆ ಆ ದೊಡ್ಡ ಸೈನ್ಯವನ್ನಿದಿರಿಸಿ ನಿಂತನು. ಕೌರವವೀರರೆಲ್ಲರೂ ಅರ್ಜುನನ ಸುತ್ತಲೂ ಮುತ್ತಿಕೊಂಡು ಮೇಘಗಳು ಬೆಟ್ಟದ ಮೇಲೆ ಮಳೆಯನ್ನು ಕರೆಯುವಂತೆ ಅರ್ಜುನನಮೇಲೆ ಅಸ್ತ್ರಗಳನ್ನು ಪ್ರಯೋಗಿಸತೊಡಗಿದರು. ಅರ್ಜುನನಾದರೋ ಆ ಅಸ್ತ್ರಗಳೆಲ್ಲವನ್ನೂ ತನ್ನ ಅಸ್ತ್ರದಿಂದ ತಡೆದು, ಇಂದ್ರಸಂಬಂಧವಾಗಿಯೂ, ಶತ್ರುಗಳಿಗೆ ತಡೆಯಲಸಾಧ್ಯವಾಗಿಯೂ ಇರುವ ಬೇರೊಂದು ಸಮ್ಮೋಹನಾಸ್ತ್ರವನ್ನು ಆವ

ರಮೇಲೆ ಬಿಟ್ಟನು. ಅರ್ಜುನನು ದೃಢವಾದ ಹಿಡಿಗಳುಳ್ಳ ತನ್ನ ತೀಕ್ಷ್ಣ ಬಾಣಗಳಿಂದ ದಿಕ್ಕು ವಿದಿಕ್ಕುಗಳನ್ನೆಲ್ಲ ಮರೆಸಿ, ಗಾಂಡೀವ ಶಬ್ದದಿಂದ ಎಲ್ಲರ ಮನಸ್ಸೂ ತತ್ತರಿಸುವಂತೆ ಮಾಡಿ, ಆ ದೊಡ್ಡ ಸೈನ್ಯವನ್ನೆಲ್ಲಾ ಬಹಳವಾಗಿ ನೋಯಿಸಿದನು. ಆಮೇಲೆ ಭಯಂಕರಧ್ವನಿಯುಳ್ಳ ದೇವದತ್ತವೆಂಬ ದಿವ್ಯಶಂಖವನ್ನು ಕೈಗೆತ್ತಿಕೊಂಡು, ಭೂಮ್ಯಾಕಾಶಗಳೊಡನೆ ದಿಕ್ಕು ವಿದಿಕ್ಕುಗಳೆಲ್ಲವೂ ಮೊಳಗುವಂತೆ ಆ ಶಂಖವನ್ನೂದಿದನು. ಅರ್ಜುನನ ಸಮ್ಮೋಹನಾಸ್ತ್ರದಿಂದುಂಟಾದ ಬಾಣಪರಂಪರೆಗಳು ತಾಗಿದೊಡನೆ ಕೌರವ ಯೋಧರೆಲ್ಲರೂ ಕೆಳಗೆ ಬಿದ್ದರು. ಅವರ ದೇಹವೇ ಅವರ ಸ್ವಾಧೀನವಿಲ್ಲದಂತಾಯಿತು. ಅವರ ಬಲವೂ, ವೇಗವೂ ಅಡಗಿ, ಕೈಕಾಲುಗಳಾಡದೆ, ಬರೀಗೋಡೆಗಳಂತೆ ಬಿದ್ದುಬಿಟ್ಟರು. ಅರ್ಜುನನ ಶಂಖಧ್ವನಿಯಿಂದ ಅನೇಕಕುರುವೀರರಿಗೆ ಕೈಯಲ್ಲಿದ್ದ ಬಿಲ್ಲುಗಳು ಬಿದ್ದುಹೋಗಲು ಹಾಗೆಯೇ ಮೈಮರೆತು ಬಿದ್ದರು. ಹೀಗೆ ಶತ್ರುಸೈನ್ಯಗಳೆಲ್ಲವೂ ಪ್ರಜ್ಞೆತಪ್ಪಿ ಹೋಗಿರುವುದನ್ನು ನೋಡಿ, ಆಗ ಅರ್ಜುನನಿಗೆ ಉತ್ತರೆಯು ಹೇಳಿದ ಮಾತು ನೆನಪಿಗೆ ಬಂದಿತು. ಆಗ ಅರ್ಜುನನು ಉತ್ತರನನ್ನು ಕುರಿತು, "ಓ ಸಾರಥೀ! ಕೌರವರೆಲ್ಲರೂ ಪ್ರಜ್ಞೆತಪ್ಪಿರುವರು. ಅವರು ಚೇತರಿಸಿಕೊಂಡು ಏಳುವಷ್ಟರಲ್ಲಿ, ನೀನು ರಥದಿಂದಿಳಿದು ಅಲ್ಲಿ ಹೋಗಿ, ಅವರ ವಸ್ತ್ರಗಳನ್ನು ತೆಗೆದುಕೊಂಡು ಬಾ. ದ್ರೋಣಕೃಪರಿಬ್ಬರೂ ಧರಿಸಿರತಕ್ಕ ಬಿಳಿಯ ವಸ್ತ್ರಗಳನ್ನೂ, ಕರ್ಣನು ಉಟ್ಟಿರತಕ್ಕ ಅಂದವಾದ ಪೀತಾಂಬರವನ್ನೂ, ದುರ್ಯೋಧನನ ಮತ್ತು ಅಶ್ವತ್ಥಾಮನ ಮೈಮೇಲಿರುವ ನೀಲವಸ್ತ್ರಗಳನ್ನೂ ತೆಗೆದುಕೊಂಡು ಬಾ. ಭೀಷ್ಮಾಚಾರ್ಯನನ್ನುಮಾತ್ರ ನೀನು ಮುಟ್ಟಬಾರದು. ಈಗಲೂ ಅವನುಮಾತ್ರ ಪ್ರಜ್ಞೆತಪ್ಪಿಲ್ಲವೆಂದು ನನಗೆ ತೋರಿದೆ. ಏಕೆಂದರೆ, ನನ್ನ ಸಮ್ಮೋಹನಾಸ್ತ್ರವನ್ನು ನಿವಾರಿಸತಕ್ಕ ರೀತಿಯನ್ನು ಅವನು ಚೆನ್ನಾಗಿ ಬಲ್ಲನು. ಆ ಭೀಷ್ಮಾಚಾರ್ಯನ ಕುದುರೆಗಳನ್ನು ನೀನು ಎಡಕ್ಕೆ ಬಿಟ್ಟುಕೊಂಡು ಮುಂದೆ ಹೋಗು. ಹಾಗೆ ನಡೆದುಕೊಳ್ಳಬೇಕಾದುದೇ ಧರ್ಮವು" ಎಂದನು. ಆಗ ಉತ್ತರನು ಕುದುರೆಗಳ ಹಗ್ಗವನ್ನು ಬಿಟ್ಟು, ರಥದಿಂದಿಳಿದು ಹೋಗಿ, ಅಲ್ಲಿ ಮಹಾರಥರ ಮೈಮೇಲಿದ್ದ ವಿಚಿತ್ರವರ್ಣಗಳುಳ್ಳ ನಾನಾತರದ ಬಟ್ಟೆಗಳನ್ನೆಲ್ಲ ತೆಗೆದುಕೊಂಡನು.

ಆ ವಸ್ತ್ರಗಳಲ್ಲಿ ಒಳ್ಳೆಯ ಬೆಲೆಯುಳ್ಳ ದುಕೂಲಗಳೂ, ಚೀನಾಂಬರಗಳೂ, ನಾನಾತರದ ಮನೋಹರಗಳಾದ ಪಟ್ಟೆಮಡಿಗಳೂ ಅನೇಕವಾಗಿದ್ದುವು. ವಸ್ತ್ರಗಳನ್ನು ಮಾತ್ರವಲ್ಲದೆ, ಆಯಾ ರಾಜರು ಧರಿಸಿದ್ದ ಹಾರಗಳನ್ನೂ, ರತ್ನಾಭರಣಗಳನ್ನೂ, ಸುವರ್ಣಭೂಷಣಗಳನ್ನೂ ಮಾಣಿಕ್ಯದಿಂದ ಕೆತ್ತಲ್ಪಟ್ಟ ತೋಳ್ಬಳೆಗಳನ್ನೂ, ಇತರಾಭರಣಗಳನ್ನೂ ಉತ್ತರನು ಕಳಚಿ ಕೊಂಡು, ಆ ವಸ್ತ್ರಾಭರಣಗಳೊಡನೆ ಬೇಗನೆ ಹಿಂತಿರುಗಿ ಬಂದು, ತಿರುಗಿ ತನ್ನ ರಥವನ್ನೇರಿದನು. ಆಮೇಲೆ ಅರ್ಜುನನು, ತನ್ನ ಸಮ್ಮೋಹನಾಸ್ತ್ರದಿಂದ ಪ್ರಜ್ಞೆತಪ್ಪಿ ಬೊಂಬೆಗಳಂತೆ ಬಿದ್ದಿರುವ ಆ ರಾಜರ ಸ್ಥಿತಿಯನ್ನು ನೋಡಿ, ತನ್ನಲ್ಲಿತಾನೇ ಆಶ್ಚರ್ಯಪಡುತ್ತ ಮೂಗಿನಮೇಲೆ ಬೆರಳಿಟ್ಟುಕೊಂಡು ನಕ್ಕನು. ಆಮೇಲೆ ಉತ್ತರನು ರಥಕ್ಕೆ ಕಟ್ಟಿದ್ದ ನಾಲ್ಕು ಕುದುರೆಗಳನ್ನು ತಟ್ಟಿಬಿಡಲು, ಆ ಶ್ವೇತಾಶ್ವಗಳು ಅರ್ಜುನನ ರಥವನ್ನು ಎಳೆದುಕೊಂಡು, ಆ ಶತ್ರುಸೈನ್ಯಮಧ್ಯದಿಂದ ತಿರುಗಿ ಓಡಲಾರಂಭಿಸಿದುವು.

ಹೀಗೆ ಅರ್ಜುನನು ಹೋಗುತ್ತಿರುವುದನ್ನು ತಿಳಿದು ಭೀಷ್ಮನು ಅವನಮೇಲೆ ಬಾಣಗಳನ್ನು ಬಿಡಲಾರಂಭಿಸಿದನು. ಅರ್ಜುನನು ಕೂಡ, ಹಿಂತಿರುಗಿ ಬಾಣಗಳನ್ನು ಬಿಟ್ಟು, ಭೀಷ್ಮನ ಕುದುರೆಗಳನ್ನು ಕೊಂದು, ಹತ್ತು ಬಾಣಗಳಿಂದ ಭೀಷ್ಮನನ್ನು ಹೊಡೆದನು. ಆಮೇಲೆ ಅರ್ಜುನನು ಭೀಷ್ಮನನ್ನು ಬಿಟ್ಟು, ಅವನ ಸಾರಥಿಯನ್ನುಮಾತ್ರ ಹೊಡೆದು, ಅಲ್ಲಿದ್ದ ರಥಸಮೂಹಗಳ ಮಧ್ಯದಿಂದ ಹೊರಗೆ ಬಂದು, ರಾಹುವನ್ನು ಭೇದಿಸಿಕೊಂಡು ಬಂದ ಸೂರ್ಯನಂತೆ ಪ್ರಕಾಶಿಸಿದನು. ಇಷ್ಟರಲ್ಲಿ ಇತ್ತಲಾಗಿ ದುರ್ಯೋಧನನಿಗೂ ಪ್ರಜ್ಞೆ ಬಂದಿತು. ಅರ್ಜುನನು ಯುದ್ಧದಿಂದ ತಪ್ಪಿಸಿಕೊಂಡು ಹೋಗುವುದನ್ನು ನೋಡಿ ಭೀಷ್ಮನನ್ನು ಕುರಿತು, "ಓ ಪಿತಾಮಹಾ! ಅದೋ! ಅರ್ಜುನನು ಹೇಗೋ ಪ್ರಯಾಸದಿಂದ ನಿಮ್ಮಿಂದ ತಪ್ಪಿಸಿಕೊಂಡು ಹೋಗುತ್ತಿರುವನು. ಅವನು ತಪ್ಪಿಸಿಕೊಂಡು ಹೋಗದಂತೆ ಬೇಗನೆ ತಡೆಯಿರಿ" ಎಂದನು. ಆಗ ಭೀಷ್ಮನು ನಗುತ್ತ, "ಕೌರವ ರಾಜಾ! ಈ ಉತ್ಸಾಹವು ಇದುವರೆಗೆ ಎಲ್ಲಿ ಹೋಗಿತ್ತು? ನಿನ್ನ ವೀರ್ಯವೆಲ್ಲಿ ಹೋಗಿತ್ತು? ಧನುರ್ಬಾಣಗಳನ್ನು ಬಿಟ್ಟುಬಿಟ್ಟು ಏತಕ್ಕಾಗಿ ಇದು

ವರೆಗೆ ನೀನು ಅಂತಹ ದೃಢವಾದ ಮೌನವನ್ನು ಹಿಡಿದಿದ್ದೆ ? ದುರ್ಯೋಧನಾ! ಇವೆಲ್ಲವನ್ನೂ ನೀನು ಚೆನ್ನಾಗಿ ವಿಮರ್ಶಿಸಿ ನೋಡು! ಆ ಬೀಭತ್ಸುವು ಎಂದಿಗೂ ಕ್ರೂರಕಾರ್ಯಕ್ಕೆ ಪ್ರವರ್ತಿಸುವವನಲ್ಲ. ಅವನ ಮನಸ್ಸು ಪಾಪದಲ್ಲಿ ಪ್ರವರ್ತಿಸಲಾರದು. ಸ್ವರ್ಗವೇ ಲಭಿಸುವಹಾಗಿದ್ದರೂ, ಅವನು ಧರ್ಮವನ್ನು ವಿಾರುವವನಲ್ಲ. ಆದರಿಂದಲೇ ನಾವು, ಈ ಯುದ್ಧದಲ್ಲಿ ಈಗಲೂ ಬದುಕಿರುವೆವು. ಅವನು ಧರ್ಮಬುದ್ಧಿಯಿಂದ ನಮ್ಮನ್ನು ಕೊಲ್ಲದೆ ಬಿಟ್ಟಿರುವನು. ಇನ್ನಾದರೂ ನೀನು ಬೇಗನೆ ಕುರುದೇಶಕ್ಕೆ ಹೋಗಿ ಸೇರು. ಅರ್ಜುನನು ಗೋವುಗಳನ್ನಟ್ಟಿಕೊಂಡು ಹೋಗಲಿ. ಆ ಅರ್ಜುನನ ಸಮ್ಮೋಹನಾಸ್ತ್ರದಿಂದ, ನೀವೆಲ್ಲರೂ ಇದುವರೆಗೆ ಮೈಮರೆತಿದ್ದಿರಿ. ನಿಮ್ಮ ಮೈಮೇಲಿನ ವಸ್ತ್ರಾಭರಣಗಳು ಹೋದುದೂ ನಿಮಗೆ ತಿಳಿಯದೆಹೋಯಿತು. ವಿರಾಟಪುತ್ರನಾದ ಉತ್ತರನು ಬಂದು ಅವನ್ನೆಲ್ಲ ಸೆಳೆದುಕೊಂಡು ಹೋದುದನ್ನು ನಾನು ನೋಡುತ್ತಿದ್ದೆನು. ನೀವು ಪ್ರಜ್ಞೆತಪ್ಪಿ ಬಿದ್ದಿದ್ದಾಗ ಅರ್ಜುನನಿಗೆ ನಿಮ್ಮನ್ನು ಕೊಲ್ಲಬೇಕೆಂದು ಇಷ್ಟವಿದ್ದರೆ, ಅವನು ಬಹು ಸುಲಭವಾಗಿ ಕೊಲ್ಲಬಹುದಾಗಿತ್ತು. ಧರ್ಮಬುದ್ಧಿಯುಳ್ಳ ಆ ಇಂದ್ರಪುತ್ರನು, ಧರ್ಮದೃಷ್ಟಿಯಿಂದಲೇ ನಿಮ್ಮನ್ನು ಕೊಲ್ಲದೆ ಬಿಟ್ಟನು. ಭಾಗ್ಯವಶದಿಂದ ಆ ಪಾರ್ಥನು ನಿಮ್ಮನ್ನು ಜೀವದಿಂದುಳಿಸಿರುವನು. ಈಗಲೂ ಕೌರವರೊಡನೆ ತಮಗೆ ಸಂಧಿಯಾಗಬೇಕೆಂಬುದೇ ಅವನ ಉದ್ದೇಶವು. ಆದುದರಿಂದ ದುರ್ಯೋಧನಾ! ಈ ಯುದ್ಧದಲ್ಲಿ ಹತಶೇಷರಾದ ಸೈನಿಕರೊಡನೆ ನೀವೆಲ್ಲರೂ ಗಜಪುರಿಗೆ ಹೋಗಿ ಸೇರಿಕೊಳ್ಳಿರಿ" ಎಂದನು.

ಓ ಜನಮೇಜಯರಾಜಾ! ಭೀಷ್ಮಾಚಾರ್ಯನು ತನ್ನ ಹಿತಕ್ಕಾಗಿ ಹೇಳಿದ ಮಾತು ದುರ್ಯೋಧನನಿಗೂ ಯುಕ್ತವೆಂದೇ ತೋರಿತು. ಅವನ ಮನಸ್ಸಿನಲ್ಲಿ ಅತ್ಯಂತಕೋಪವಿದ್ದರೂ ಭೀಷ್ಮನನ್ನು ಪ್ರಶಂಸೆಮಾಡುತ್ತ, ಯುದ್ಧದಲ್ಲಿ ಆಸೆಯನ್ನು ಬಿಟ್ಟು, ಸಂಕಟದಿಂದ ನಿಟ್ಟುಸಿರನ್ನು ಬಿಡುತ್ತ ಸುಮ್ಮನಿದ್ದನು. ಅತ್ತಲಾಗಿ ಅರ್ಜುನನೆಂಬ ಅಗ್ನಿಯು ಮೇಲೆಮೇಲೆ ವೃದ್ಧಿಹೊಂದುತ್ತಿರುವುದನ್ನು ನೋಡಿದಮೇಲೆ, ಕೌರವವೀರರೆಲ್ಲರಿಗೂ ದುರ್ಯೋಧನನನ್ನು ರಕ್ಷಿಸಿಕೊಂಡು ಹಿಂತಿರುಗಿ ಹೋಗುವುದೇ ಮೇಲೆಂದು

ತೋರಿತು. ಎಲ್ಲರೂ ಹಿಂತಿರುಗಿದರು. ಹೀಗೆ ಕೌರವಸೈನಿಕರು ಹಿಂತಿರುಗುತ್ತಿರುವುದನ್ನು ನೋಡಿ ಅರ್ಜುನನೂ ಸಂತುಷ್ಟಚಿತ್ತನಾದನು. ಆದರೂ ತಿರುಗಿ ಅವರನ್ನು ಯುದ್ಧಕ್ಕಾಗಿ ಕರೆಯುತ್ತ, ಸ್ವಲ್ಪಹೊತ್ತಿನವರೆಗೆ ಅವರನ್ನು ಹಿಂಬಾಲಿಸಿ ಹೋಗಿ, ಲೋಕವೆಲ್ಲವೂ ಮೊಳಗುವಂತೆ ಗಾಂಡೀವವನ್ನು ಧ್ವನಿಮಾಡುತ್ತಿದ್ದನು. ಆ ಸೈನಿಕರು ತಮ್ಮತಮ್ಮ ವಾಹನಗಳನ್ನೂ, ಧ್ವಜಗಳನ್ನೂ ಅಲ್ಲಲ್ಲಿಯೇ ಬಿಟ್ಟುಹೋಗುತ್ತಿರುವುದನ್ನು ನೋಡಿ ಅರ್ಜುನನು, ಘಟ್ಟಯಾಗಿ ನಗುತ್ತ, ತನ್ನ ಪೂರ್ಣಬಲದಿಂದ ಶಂಖವನ್ನೂದಿದನು. ಆ ಶಂಖಶಬ್ದವೊಂದು, ಅಂತರಿಕ್ಷದಲ್ಲಿ ಧ್ವಜದ ಶಬ್ದವೊಂದು, ಗಾಂಡೀವ ಧ್ವನಿಯೊಂದು, ಇವೆಲ್ಲ ಒಂದಾಗಿ ಸೇರಲು, ಕೌರವಸೈನಿಕರಿಗೆ ಮೇಲೆಮೇಲೆ ಭಯವು ಹೆಚ್ಚಿ, ತಮ್ಮ ಸಮಸ್ತಧನವನ್ನೂ ಬಿಟ್ಟು ಓಡಿಹೋದರು. ಅರ್ಜುನನುಕೂಡ, ವಿರಾಟನ ಗೋಧನವೆಲ್ಲವನ್ನೂ ಇತ್ತಲಾಗಿ ತಿರುಗಿಸಿ, ಅತ್ತಲಾಗಿ ಬಹುದೂರದವರೆಗೆ ಅವರನ್ನು ಹಿಂಬಾಲಿಸಿ ಹೋದನು. ಅರ್ಜುನನು ಉದಾರಬುದ್ಧಿಯುಳ್ಳವನಾದುದರಿಂದ, ತಾನು ಹಿಂತಿರುಗುವುದಕ್ಕಾಗಿ ಅವರ ಅನುಮತಿಯನ್ನು ಕೇಳಿ, ಗುರುಗಳಾದ ಭೀಷ್ಮಾದಿಗಳಿಗೆ ಬಾಣಗಳಿಂದ ಅಭಿವಾದನ ಮಾಡಿದನು. ಮೊದಲು ಪಿತಾಮಹನಾದ ಭೀಷ್ಮನಿಗೆ ಎರಡು ಬಾಣಗಳಿಂದ ಪಾದವಂದನವನ್ನು ಮಾಡಿದನು. ಹಾಗೆಯೇ ದ್ರೋಣನಿಗೂ, ಕೃಪನಿಗೂ, ಬೇರೆ ಎಲ್ಲಾ ಕುರುವಂಶದ ಮಾನ್ಯರಿಗೂ ಬಾಣಗಳಿಂದ ನಮಸ್ಕರಿಸಿದನು. ಆಮೇಲೆ ತನ್ನ ಬಾಣಗಳನ್ನು ದುರ್ಯೋಧನನ ರತ್ನಖಚಿತವಾದ ಕಿರೀಟಕ್ಕೆ ಹೊಡೆದು, "ಓ ದುರ್ಯೋಧನಾ! ರಾಜವಂಶದಲ್ಲಿ ಹುಟ್ಟಿದ ನಿನಗೆ ಈ ಕಿರೀಟದಿಂದೇನು? ನಿನಗೆ ಎಂದಿಗೂ ಈ ಕಿರೀಟವು ಧರಿಸತಕ್ಕುದಲ್ಲ" ಎಂದನು. ಆಗ ದುರ್ಯೋಧನನ ತಲೆಯಿಂದ ಬಿದ್ದ ರತ್ನಕಿರೀಟವನ್ನು ನೋಡಿ ಉತ್ತರನಿಗೆ ಬಹಳ ಆಶ್ಚರ್ಯವಾಗಿತು. ಓ ಜನಮೇಜಯರಾಜಾ! ಅರ್ಜುನನು ಹೀಗೆ ಶತ್ರುಗಳನ್ನೆಲ್ಲ ಜಯಿಸಿ, ಗೋವುಗಳನ್ನು ಹಿಂತಿರುಗಿಸಿಕೊಂಡು, ಮದವೇರಿದ ಆನೆಯಂತೆ ಹೋಗುತ್ತಿರುವುದನ್ನು ಕಣ್ಣಿಂದ ನೋಡುವುದಕ್ಕೂ ಧೈರ್ಯವಿಲ್ಲದೆ, ಕೌರವರೆಲ್ಲರೂ ತಾವು ಬಂದ ದಾರಿಯಲ್ಲಿ ಹಿಂತಿರುಗಿ ಹೊರಟುಹೋದರು. ಮಧ್ಯಾಹ್ನದ ಸೂರ್ಯನಂತೆ

ಅರ್ಜುನನ ತೇಜಸ್ಸು ಅವರ ಕಣ್ಣ್ಣನ್ನು ಚುಚ್ಚುತಿತ್ತು. ಹೀಗೆ ಯುದ್ಧ ವೀರನಾದ ಅರ್ಜುನನು ಕೌರವರನ್ನು ಜಯಿಸಿ, ಅವರವರ ವಸ್ತ್ರಗಳನ್ನೆಲ್ಲ ತೆಗೆಯಿಸಿಕೊಂಡು ಹಿಂತಿರುಗಿ ಬರುವಾಗ, ಸಂತೋಷದಿಂದ ಉತ್ತರನನ್ನು ನೋಡಿ, "ಓ ರಾಜಕುಮಾರಾ! ಇನ್ನು ಕುದುರೆಗಳನ್ನು ಹಿಂತಿರುಗಿಸು. ನಿನ್ನ ಗೋವುಗಳೆಲ್ಲವನ್ನೂ ಜಯಿಸಿ ತಂದುದಾಯಿತು. ನಮ್ಮ ಶತ್ರುಗಳೂ ಹೊರಟುಹೋದರು. ಇನ್ನು ನೀನು ಸಂತೋಷದಿಂದ ಪುರಪ್ರವೇಶವನ್ನು ಮಾಡಬಹುದು. ಈಗಲೇ ಪಟ್ಟಣದಲ್ಲಿ ನಿನ್ನ ಜಯವನ್ನು ಉದ್ಘೋಷಿಸುವಂತೆ ಮಾಡು. ನಿನ್ನ ಮೈಯನ್ನು ಗಂಧಾನುಲೇಪನದಿಂದಲಂಕರಿಸು. ನೀನು ಜಯಶೀಲನಾಗಿ ಸಂತೋಷದಿಂದ ಬಂದುದನ್ನು ನೋಡಿ ನಿನ್ನ ತಾಯಿಯೂ, ನಿನ್ನ ಬಂಧುಗಳೂ ಸಂತೋಷಪಡಲಿ" ಎಂದನು.

ಇದು ಅರುವತ್ತೇಳನೆಯ ಅಧ್ಯಾಯವು.

ಅರ್ಜುನನು ತಾವು ಪಾಂಡವರೆಂಬುದನ್ನು ಊರಿನಲ್ಲಿ ತಿಳಿಸ ಬಾರದೆಂದು ಉತ್ತರನಿಗೆ ಹೇಳಿ, ತಿರುಗಿ ತನ್ನ ಆಯುಧಗಳನ್ನು ಆ ಬನ್ನಿಯ ಮರದಲ್ಲಿಯೇ ಇರಿಸಿ, ಮೊದಲಿದ್ದ ಬೃಹನ್ನಳಾವೇಷದಿಂದ ಸಾರಥ್ಯಕ್ಕೆ ನಿಲ್ಲತ್ತುದು. ಅರ್ಜುನನ ಮಾತಿನಮೇಲೆ ಉತ್ತರನು ಪಟ್ಟಣದಲ್ಲಿ ತನ್ನ ಜಯವನ್ನು ಸಾರುವುದಕ್ಕಾಗಿ ದೂತರನ್ನು ಕಳುಹಿಸಿದುದು.

ಓ ಜನಮೇಜಯರಾಜಾ! ಕೇಳು! ಒಳ್ಳೇ ಜಾತಿಯ ವೃಷಭದಂತೆ ಧೀರದೃಷ್ಟಿಯುಳ್ಳ ಆ ಅರ್ಜುನನು, ಹೀಗೆ ಯುದ್ಧದಲ್ಲಿ ಶತ್ರುಗಳನ್ನೆಲ್ಲ ಜಯಿಸಿ, ವಿರಾಟನ ಗೋಧನವನ್ನೆಲ್ಲ ಹಿಂತಿರುಗಿಸಿಕೊಂಡು ಬಂದನು. ಅತ್ತಲಾಗಿ ಕೌರವ ಪ್ರಧಾನ ವೀರರೆಲ್ಲರೂ ಸೋತು, ತಮ್ಮ ಪಟ್ಟಣಕ್ಕೆ ಹಿಂತಿರುಗಿದಮೇಲೆ, ಇತ್ತಲಾಗಿ ಅಲ್ಲಲ್ಲಿ ದುರ್ಗಮವಾದ ಕಾಡುಗಳ ನಡುವೆ ಭಯದಿಂದ ಅವಿತುಕೊಂಡಿದ್ದ ಅನೇಕಸೈನಿಕರು ಅಲ್ಲಿಂದ ಅರ್ಜುನನ ಬಳಿಗೆ ಬಂದರು. ಆಗ ಅವರ ದುರವಸ್ಥೆಯನ್ನು ಕೇಳಬೇಕೆ? ವಿದೇಶಕ್ಕೆ ಬಂದ ಅವರೊಬ್ಬೊಬ್ಬರೂ ಅನ್ನನೀರಿಲ್ಲದೆ, ಹಸಿವು ಬಾಯಾರಿಕೆಗಳಿಂದ

ಪೀಡಿತರಾಗಿ, ಪ್ರಜ್ಞೆಯಿಲ್ಲದವರಂತೆ ಕಾಣುತ್ತಿರುವರು. ಕೆದರಿದ ತಲೆಯೊಡನೆ ಅರ್ಜುನನ ಮುಂದೆ ಕೈಮುಗಿದು ನಿಂತು ಹೀಗೆಂದು ದೈನ್ಯದಿಂದ ಪ್ರಾರ್ಥಿಸುವರು. "ಓ ಪಾರ್ಥ! ಈಗ ನಾವು ಮಾಡುವುದೇನು? ಮನಸ್ಸಿನೊಳಗೆ ಅಡಗಿರುವ ನಮ್ಮ ಪ್ರಾಣಗಳನ್ನು ನಿನ್ನಲ್ಲಿ ಯಾಚಿಸುವೆವು. ನಾವು ನಿನಗೆ ದಾಸಭೂತರು. ಅನಾಥರಾದ ನಮ್ಮನ್ನು ರಕ್ಷಿಸಬೇಕು" ಎಂದರು. ಅದಕ್ಕಾ ಅರ್ಜುನನು "ಓ ಸೈನಿಕರೆ! ನೀವು ನಿರ್ಭಯವಾಗಿ ಹೋಗಬಹುದು. ಅನಾಥರನ್ನೂ, ದುಃಖಿತರನ್ನೂ, ದೀನರನ್ನೂ, ಕೃಶರಾದವರನ್ನೂ, ವೃದ್ಧರನ್ನೂ, ಪರಾಜಿತರನ್ನೂ, ಆಯುಧವನ್ನು ಕೆಳಗಿಟ್ಟವರನ್ನೂ, (ಆಯುಧವಿಲ್ಲದವರನ್ನೂ) ಯುದ್ಧದಾಶೆಯಿಲ್ಲದವರನ್ನೂ, ಕೈಮುಗಿದವರನ್ನೂ ನಾನು ಎಂದಿಗೂ ಕೊಲ್ಲುವವನಲ್ಲ. ನೀವು ನನ್ನಲ್ಲಿ ನಂಬಿಕೆಯಿಂದ, ಮರಣಭಯವನ್ನು ಬಿಟ್ಟು, ನಿಶ್ಚಿಂತರಾಗಿ ಯಥೇಚ್ಛವಾಗಿ ಹೋಗಬಹುದು. ನನ್ನ ಪಾದರಜಸ್ಸಿನ ಪ್ರಭಾವದಿಂದ ನೀವು ಚಿರಕಾಲದವರೆಗೆ ಬದುಕಿರಿ" ಎಂದನು. ಈ ಅಭಯವಾಕ್ಯವನ್ನು ಕೇಳಿದೊಡನೆ, ಆ ಯೋಧರೆಲ್ಲರೂ ಒಂದಾಗಿ ಅರ್ಜುನನಿಗೆ ಆಯುಸ್ಸೂ, ಕೀರ್ತಿಯೂ, ಪ್ರಖ್ಯಾತಿಯೂ ಉಂಟಾಗಲೆಂದು ಹರಸಿ, ಅವನಿಗೆ ಕೈಮುಗಿದು, ತಮ್ಮ ಕುರುದೇಶಗಳಿಗೆ ಹಿಂತಿರುಗಿದರು. ಇತ್ತಲಾಗಿ ಅರ್ಜುನನು ತಾನು ಏಕಾಕಿಯಾಗಿಯೇ ಶತ್ರುಗಳನ್ನು ಕೊಂದು, ಕೌರವರನ್ನು ಓಡಿಸಿ ಜಯಶೀಲನಾದಮೇಲೆ, ಮಳೆಗಾಲದ ಮಹಾ ಮೇಘದಂತೆ ವಿರಾಟನಗರಕ್ಕೆ ಹಿಂತಿರುಗಿದನು. ಅಲ್ಲಿಂದ ಹೊರಡುವಾಗ ಅರ್ಜುನನು, ಸಾರಥಿಯಾದ ಉತ್ತರನನ್ನು ಕರೆದು, "ಅಪ್ಪಾ! ಉತ್ತರಾ! ನೀನು ಇಲ್ಲಿಂದ ತಂದೆಯಬಳಿಗೆ ಹೋದಮೇಲೆ, ಪಾಂಡವರಾದ ನಾವು ಇಲ್ಲಿ ವಾಸಮಾಡುತ್ತಿರುವ ಅಂಶವು ನಿನಗೆ ತಿಳಿದಿರುವುದಾಗಿ ನಿನ್ನ ತಂದೆಗೆ ಹೇಳಬಾರದು. ಏಕೆಂದರೆ, ಆ ಮಾತನ್ನು ಕೇಳಿದೊಡನೆ ಅವನು ಭಯದಿಂದ ಹಾಗೆಯೇ ಪ್ರಾಣವನ್ನು ಬಿಟ್ಟರೂ ಬಿಡಬಹುದು. ಕೌರವಸೈನ್ಯವನ್ನೆಲ್ಲ ನೀನೇ ಜಯಿಸಿದುದಾಗಿಯೂ, ನೀನೇ ಆ ಗೋವುಗಳನ್ನೆಲ್ಲ ಶತ್ರುಗಳಿಂದ ಬಿಡಿಸಿ ತಂದುದಾಗಿಯೂ ತಿಳಿಸಬೇಕು. ನೀನು ಪಟ್ಟಣಕ್ಕೆ ಹೋದಮೇಲೆ ಇಲ್ಲಿನ ಯುದ್ಧಕಾರ್ಯಗಳೆಲ್ಲ ನಿನ್ನಿಂದಲೇ ನಡೆದುದಾಗಿ ತಿಳಿಸು" ಎಂದನು.

ಆದಕ್ಕಾ ಉತ್ತರನು " ಓ ಸವ್ಯಸಾಚೀ! ನೀನು ಈಗಿನ ಯುದ್ಧದಲ್ಲಿ ನಡೆಸಿದ ಕಾರ್ಯವೇನೋ ಮುಚ್ಚಿಡಲು ಸಾಧ್ಯವಾದುದಲ್ಲ. ಅಂತಹ ಕಾರ್ಯವನ್ನು ಮಾಡುವುದಕ್ಕೆ ನನಗೆ ಶಕ್ತಿಯಿಲ್ಲವೆಂಬುದೂ ತಿಳಿದ ವಿಷಯವೇ. ಹಾಗಿದ್ದರೂ ನೀನಾಗಿ ಹೇಳುವವರೆಗೆ ನಾನು ನಿನ್ನ ವಿಷಯವಾಗಿ ಯಾರಲ್ಲಿಯೂ ಬಾಯಿಬಿಡುವುದಿಲ್ಲ" ಎಂದನು. ಓ ಜನಮೇಜಯರಾಜಾ! ಯುದ್ಧದಲ್ಲಿ ಗಾಯಪಟ್ಟ ಮೈಯುಳ್ಳ ಅರ್ಜುನನು, ಶತ್ರುಸೈನ್ಯವನ್ನು ಜಯಿಸಿ ಗೋಧನವನ್ನು ಹಿಂತಿರುಗಿಸಿದಮೇಲೆ, ಆ ಬನ್ನಿಯಮರದ ಬಳಿಗೆ ಬಂದುನಿಂತನು. ಒಡನೆಯೇ ಆ ಅರ್ಜುನನ ಧ್ವಜದಲ್ಲಿ ಅಗ್ನಿಯಂತೆ ಜ್ವಲಿಸುತಿದ್ದ ವಾನರನು, ಇತರ ರಕ್ಷಕಭೂತಗಳೊಡನೆ ಆಕಾಶಕ್ಕೆ ಹಾರಿ ಅದೃಶ್ಯನಾದನು. ತಿರುಗಿ ಉತ್ತರನ ಸಿಂಹಧ್ವಜವೇ ರಥದಮೇಲೇರಿಸಲ್ಪಟ್ಟಿತು. ಆಮೇಲೆ ಉತ್ತರನು ಪಾಂಡವರ ಆಯುಧಗಳನ್ನೂ, ಬತ್ತಳಿಕೆಗಳನ್ನೂ, ಧ್ವಜಗಳನ್ನೂ ಮೊದಲಿನಂತೆಯೇ ಬನ್ನಿಯಮರದಮೇಲೆ ಬಚ್ಚಿಟ್ಟು, ಅರ್ಜುನನನ್ನೇ ಸಾರಥಿಯನ್ನಾಗಿ ಮಾಡಿಕೊಂಡು, ತನ್ನ ಪಟ್ಟಣಕ್ಕೆ ಹೊರಡಲುದ್ಯುಕ್ತನಾದನು. ಇಷ್ಟರಲ್ಲಿ ಅರ್ಜುನನೂಕೂಡ ಹೀಗೆ ಉತ್ತಮವಾದ ಕಾರ್ಯವನ್ನು ನಡೆಸಿದಮೇಲೆ, ಮೊದಲಿನಂತೆ ಬೃಹನ್ನಳೆಯ ವೇಷವನ್ನೇ ಧರಿಸಿ, ಉತ್ತರನ ಕುದುರೆಗಳ ಹಗ್ಗವನ್ನು ಹಿಡಿದು ಮತ್ಸ್ಯಪುರಕ್ಕೆ ಹೊರಟನು. ಜನಮೇಜಯರಾಜಾ! ಅತ್ತಲಾಗಿ ಕೌರವರೆಲ್ಲರೂ ಯುದ್ಧದಲ್ಲಿ ಸೋತು, ಕೊಬ್ಬಡಗಿ, ಉಟ್ಟಿದ್ದ ಬಟ್ಟೆಗಳನ್ನೂ ಕಳೆದುಕೊಂಡು, ಒಬ್ಬರ ಮುಖವನ್ನೊಬ್ಬರು ನೋಡುತ್ತ ಹಸ್ತಿನಾವತಿಯನ್ನು ಸೇರಿದರು. ಇತ್ತಲಾಗಿ ಅರ್ಜುನನು ದಾರಿಯಲ್ಲಿ ಬರುತ್ತ ಉತ್ತರನನ್ನು ಕುರಿತು " ಓ ರಾಜಪುತ್ರಾ! ಈ ಗೋಧನಗಳನ್ನು ಸಮಸ್ತ ಗೋಪಾಲಕರೊಡನೆ ಅವುಗಳಿದ್ದ ಸ್ಥಳಕ್ಕೆ ಕಳುಹಿಸಿಬಿಡು. ಕುದುರೆಗಳನ್ನು ನೀರಿಗೆ ಬಿಟ್ಟು, ಅವುಗಳಿಗೆ ನೀರನ್ನು ಕುಡಿಸಿ, ದಣಿವಾರಿಸಿದಮೇಲೆ ಸಾಯಂಕಾಲಕ್ಕೆ ನಮ್ಮ ಪುರವನ್ನು ಪ್ರವೇಶಿಸುವೆವು. ಇಷ್ಟರಲ್ಲಿಯೇ ಈ ಗೋಪಾಲಕರು ಮುಂದಾಗಿ ಹೋಗಿ, ಯುದ್ಧದಲ್ಲಿ ನೀನು ಜಯಿಸಿದುದಾಗಿ ಪಟ್ಟಣದಲ್ಲಿ ಪ್ರಕಟಮಾಡಲಿ" ಎಂದನು. ಒಡನೆಯೇ ಉತ್ತರನು ಅರ್ಜುನನ ಮಾತಿನಮೇಲೆ ಬಹಳ ಆತುರದಿಂದ ದೂತರನ್ನು ಕರೆದು " ಓ ದೂತರೇ! ನೀವು

ಮುಂದಾಗಿ ಪುರಕ್ಕೆ ಹೋಗಿ ನಮ್ಮ ಜಯವನ್ನು ತಿಳಿಸಬೇಕು. ಕೌರವ ಸೈನ್ಯವನ್ನು ನಾನೇ ಜಯಿಸಿದೆನೆಂದೂ, ಶತ್ರುಗಳಿಂದ ಗೋವುಗಳನ್ನು ನಾನೇ ಬಿಡಿಸಿಕೊಂಡು ಬಂದೆನೆಂದೂ, ನಾನು ಮಾಡಿದ ಕಾರ್ಯವನ್ನು ನೀವು ಪಟ್ಟಣದಲ್ಲಿ ಯಥೇಚ್ಛವಾಗಿ ಅಲ್ಲಲ್ಲಿ ಉದ್ಘೋಷಿಸಿರಿ'' ಎಂದನು.

ಇದು ಅರುವತ್ತೆಂಟನೆಯ ಅಧ್ಯಾಯವು.

ಅತ್ತಲಾಗಿ ಸುಶರ್ಮನೊಡನೆ ಹೋಗಿದ್ದ ವಿರಾಟನು, ಜಯಶೀಲನಾಗಿ ನಾಲ್ಕುಮಂದಿ ಪಾಂಡವರೊಡನೆ ಹಿಂತಿರುಗಿ ಬಂದುದು. ಉತ್ತರನು ಕೌರವರೊಡನೆ ಉತ್ತರದಿಕ್ಕಿನಲ್ಲಿ ಯುದ್ಧಕ್ಕೆ ಹೋದುದನ್ನು ಕೇಳಿ ಭಯಪಟ್ಟು, ಅವನ ಸಹಾಯಕ್ಕಾಗಿ ಸೇನೆಗಳನ್ನು ಕಳುಹಿಸಿದುದು. ಇಷ್ಟರಲ್ಲಿ ದೂತರು ಬಂದು ಉತ್ತರನ ಜಯವನ್ನು ವಿರಾಟನಿಗೆ ತಿಳಿಸಿದುದು.

ಓ ಜನಮೇಜಯರಾಜಾ! ಅತ್ತಲಾಗಿ ದಕ್ಷಿಣದಿಕ್ಕಿನಲ್ಲಿ ಸುಶರ್ಮನೊಡನೆ ಯುದ್ಧಕ್ಕಾಗಿ ಸೇನಾಸಮೇತನಾಗಿ ಹೋಗಿದ್ದ ವಿರಾಟನು, ಅಲ್ಲಿ ಜಯಶೀಲನಾಗಿ, (ಅರ್ಜುನನು ಹೊರತು) ನಾಲ್ಕು ಮಂದಿ ಪಾಂಡವರೊಡನೆ, ಅಲ್ಲಿಂದ ಹಿಂತಿರುಗಿ, ಅಗಲೇ ಸಂತೋಷದಿಂದ ಪಟ್ಟಣಕ್ಕೆ ಬಂದು ಸೇರಿದನು. ಯುದ್ಧದಲ್ಲಿ ತ್ರಿಗರ್ತರನ್ನು ಜಯಿಸಿ, ಅವರು ಹಿಡಿದಿದ್ದ ಗೋವುಗಳನ್ನೆಲ್ಲ ಬಿಡಿಸಿ ತಂದ ವಿರಾಟನು, ಆಗ ಪಾಂಡವರೊಡಗೂಡಿ ಅಪೂರ್ವಕಾಂತಿಯಿಂದ ಬೆಳಗುತಿದ್ದನು. ಅನೇಕಪ್ರಜೆಗಳೂ, ಬ್ರಾಹ್ಮಣರೂ ಬಂದು ಸಂತೋಷದಿಂದ ಸುತ್ತಿಮುತ್ತಿ ಜಯಶೀಲನಾದ ಅವನನ್ನು ಗೌರವಿಸುತಿದ್ದರು. ವಿರಾಟನೂ ಕೂಡ, ಅವರೆಲ್ಲರನ್ನೂ ಸತ್ಕರಿಸಿ ಕಳುಹಿಸಿಬಿಟ್ಟು, ಅನೇಕ ಸ್ತ್ರೀಯರಿಂದ ತುಂಬಿದ ತನ್ನ ಅಂತಃಪುರಕ್ಕೆ ಬಂದನು. ಅಲ್ಲಿ ತನ್ನ ಮಗನಾದ ಉತ್ತರನನ್ನು ಕಾಣದೆ 'ಕುಮಾರನೆಲ್ಲಿ' ಎಂದು ಕೇಳಿದನು. ಅಲ್ಲಿದ್ದ ಹೆಂಗಸರೂ, ಕನ್ಯೆಯರೂ, ಮತ್ತು ಅಂತಃಪುರದಲ್ಲಿರತಕ್ಕ ಇತರರೂ ಬಹಳ ಸಂತೋಷದೊಡನೆ '' ಮಹಾರಾಜಾ! ಕೌರ

ವರು ನಮ್ಮ ಗೋವುಗಳನ್ನು ಅಪಹರಿಸಿಕೊಂಡು ಹೋದ ಸುದ್ದಿಯನ್ನು ಕೇಳಿ, ನಮ್ಮ ಉತ್ತರಕುಮಾರನು ಅವರೊಡನೆ ಯುದ್ಧಕ್ಕಾಗಿ ಆತುರದಿಂದ ತಾನೊಬ್ಬನೇ ಹೊರಟುಬಿಟ್ಟನು. ಬೃಹನ್ನಳೆಯನ್ನುಮಾತ್ರ ಸಹಾಯಕ್ಕೆ ಕರೆದುಕೊಂಡು ಹೊರಟುಹೋಗಿರುವನು. ಆ ಕೌರವಸೈನ್ಯದಲ್ಲಿ ಭೀಷ್ಮ, ದ್ರೋಣ, ಕೃಪ, ಕರ್ಣ, ದುರ್ಯೋಧನ, ಅಶ್ವತ್ಥಾಮರೆಂಬ ಆರು ಮಂದಿ ಮಹಾರಥಿಕರು ಬಂದಿರುವರೆಂದು ಕೇಳಿ, ಸಾಹಸದಿಂದ ಅವರನ್ನಿದಿರಿಸುವುದಕ್ಕಾಗಿ ಹೋದನು'' ಎಂದರು. ಈ ಮಾತನ್ನು ಕೇಳಿ ವಿರಾಟನ ಮನಸ್ಸು ಭಯದಿಂದ ತತ್ತಳಿಸಿತು. ತನ್ನ ಮಗನು ರಥಮಾತ್ರ ಸಹಾಯನಾಗಿ, ಶಿಖಂಡಿಯನ್ನು ಸಾರಥ್ಯಕ್ಕಿಟ್ಟುಕೊಂಡು ಹೋದುದನ್ನು ಕೇಳಿ ಬೆಜ್ಜರಬಿದ್ದು ವಿರಾಟನು, ಅಲ್ಲಿದ್ದ ಎಲ್ಲಾ ಮಂತ್ರಿವರ್ಗದೊಡನೆ '' ಆಹಾ! ಕುರುಗಳಲ್ಲಿಯಾದರೋ ಎಲ್ಲರೂ ಯುದ್ಧದಲ್ಲಿ ಮಹಾನಿಪುಣರು. ಅವರು ಲೀಲಾಮಾತ್ರದಿಂದ ನನ್ನ ಮಗನನ್ನು ಪರಾಭವಿಸಿ, ನಮ್ಮ ಲಕ್ಷೋಪಲಕ್ಷ ಗೋವುಗಳನ್ನೆಲ್ಲ ಸಾಗಿಸದೆ ಬಿಡಲಾರರು. ಆದುದರಿಂದ ಈಗಲೇ ನಮ್ಮ ಕಡೆಯ ವೀರರು, ದೊಡ್ಡ ಸೈನ್ಯದೊಡನೆ ನನ್ನ ಕುಮಾರನ ಬೆಂಬಲಕ್ಕಾಗಿ ಹೋಗಲಿ! ತ್ರಿಗರ್ತರಿಂದ ಗಾಯಪಡದೆ ಹಿಂತಿರುಗಿ ಬಂದ ಸೈನಿಕರೆಲ್ಲರನ್ನೂ ಕಳುಹಿಸಿರಿ'' ಎಂದನು. ಒಡನೆಯೇ ಆನೆಗಳು, ಕುದುರೆಗಳು, ರಥಗಳು, ನಾನಾಬಗೆಯ ರಣವಾದ್ಯಗಳು, ಇವೆಲ್ಲವನ್ನೂ ತಕ್ಕ ಸನ್ನಾಹಗಳೊಡನೆ ಹೊರಡಿಸಿದನು. ಯುದ್ಧಯೋಗ್ಯವಾದ ವಿಚಿತ್ರಾಲಂಕಾರಗಳೊಡನೆ ಸೈನ್ಯಗಳೆಲ್ಲ ಹೊರಟುವು. ಹೀಗೆ ವಿರಾಟನು ದೊಡ್ಡ ಚತುರಂಗ ಸೈನ್ಯವನ್ನು ತನ್ನ ಮಗನ ಸಹಾಯಕ್ಕಾಗಿ ಹೊರಡಿಸುತ್ತ '' ಎಲೆ ವೀರರೆ! ಬೇಗನೆ ಹೊರಡಿರಿ! ನನ್ನ ಮಗನು ಬದುಕಿರುವನೋ ಇಲ್ಲವೋ ಮೊದಲು ತಿಳಿದುಕೊಳ್ಳರಿ. ಅವನು ಯಾವನೋ ಒಬ್ಬ ಷಂಡನನ್ನು ಸಾರಥ್ಯಕ್ಕಿಟ್ಟುಕೊಂಡು ಸಾಹಸದಿಂದ ಯುದ್ಧಕ್ಕೆ ಹೊರಟಿರುವನು. ಅವನು ಇಷ್ಟರವರೆಗೆ ಬದುಕಿರುವನೆಂದೇ ನನಗೆ ತೋರಲಿಲ್ಲ'' ಎಂದನು. ಹೀಗೆ ಕಳವಳಿಸುತ್ತಿರುವ ವಿರಾಟನ ಮಾತನ್ನು ಕೇಳಿ ಸಮೀಪದಲ್ಲಿದ್ದ ಧರ್ಮರಾಜನು '' ಮಹಾರಾಜಾ! ಹೀಗೇಕೆ ಕಳವಳಿಸುವೆ? ಬೃಹನ್ನಳೆಯು ನಿಜವಾಗಿ ನಿನ್ನ ಮಗನ ಸಾರಥ್ಯಕ್ಕೆ ಹೋಗಿರುವುದಾದರೆ, ಶತ್ರುಗಳು ನಿನ್ನ ಗೋವು

ಗಳನ್ನು ಸಾಗಿಸಿಕೊಂಡು ಹೋಗಲಾರರು. ಇದು ನಿಶ್ಚಯವು. ನಿನ್ನ ಮಗನು ಆ ಬೃಹನ್ನಳೆಯನ್ನು ಸಾರಥ್ಯಕ್ಕಿಟ್ಟುಕೊಂಡಿರುವುದಾದರೆ, ಅನೇಕ ರಾಜರೊಡನೆ ಆ ಕೌರವರನ್ನು ಮಾತ್ರವೇ ಅಲ್ಲ! ದೇವದಾನವ, ಯಕ್ಷ ಪನ್ನಗರೆಲ್ಲರೂ ಸೇರಿ ಬಂದರೂ ನಿನ್ನ ಮಗನು ಅವರೆಲ್ಲರನ್ನೂ ಯುದ್ಧದಲ್ಲಿ ಜಯಿಸಲು ಸಮರ್ಥನೆಂದು ತಿಳಿ! ರಾಜಾ! ಅಷ್ಟೇಕೆ? ಆ ಕೌರವರಾಗಲಿ, ಇತರ ರಾಜರಾಗಲಿ, ತ್ರಿಗರ್ತರು ನಿನ್ನಿಂದ ಪರಾಜಿತರಾಗಿ ಓಡಿ ಹೋದುದನ್ನು ಕೇಳಿದೊಡನೆ, ತಾವಾಗಿಯೇ ಯುದ್ಧವನ್ನು ಬಿಟ್ಟು ಓಡಿ ಹೋಗುವರಲ್ಲದೆ ಹೇಗೂ ನಿಲ್ಲರಾರರು'' ಎಂದನು. ಇಷ್ಟರಲ್ಲಿಯೇ ಉತ್ತರನಿಂದ ಕಳುಹಿಸಲ್ಪಟ್ಟ ದೂತರು, ಬಹುವೇಗದಿಂದ ದಾರಿನಡೆದು, ನಗರವನ್ನು ಸೇರಿ, ಅನೇಕ ಮಂತ್ರಿಗಳನಡುವೆ ಇದ್ದ ವಿರಾಟನಿಗೆ, ಅವನ ಮಗನಾದ ಉತ್ತರನು ಜಯಶೀಲನಾಗಿ ಹಿಂತಿರುಗಿ ಬರುತ್ತಿರುವುದನ್ನು ತಿಳಿಸುತ್ತ, ''ಓ ರಾಜೇಂದ್ರಾ! ನಮ್ಮ ಗೋವುಗಳೆಲ್ಲ ಹಿಂತಿರುಗಿಸಲ್ಪಟ್ಟವು. ಕೌರವರು ಪರಾಜಿತರಾದರು. ಉತ್ತರನು ತನ್ನ ಸಾರಥಿಯೊಡನೆ ಕ್ಷೇಮದಿಂದ ಬರುತ್ತಿರುವನು'' ಎಂದರು.

ಈ ಮಾತನ್ನು ಕೇಳಿ ಕಂಕನು ''ಓ ರಾಜೇಂದ್ರಾ! ನಾನು ಮೊದಲೇ ಹೇಳಲಿಲ್ಲವೇ. ಭಾಗ್ಯವಶದಿಂದ ನಿನ್ನ ಗೋವುಗಳು ಹಿಂತಿರುಗಿಸಲ್ಪಟ್ಟವು. ಕುರುಗಳೂ ಪರಾಜಿತರಾದರು. ಭಾಗ್ಯವಶದಿಂದ ನಿನ್ನ ಮಗನು ಯುದ್ಧದಲ್ಲಿ ಜಯಶೀಲನಾದುದನ್ನು ಕೇಳುವೆವು. ಆದರೆ ಈಗ ನಿನ್ನ ಮಗನು ಕುರುಗಳನ್ನು ಜಯಿಸಿದುದೇನೂ ಆಶ್ಚರ್ಯವಲ್ಲ. ಬೃಹನ್ನಳೆಯು ಅವನಿಗೆ ಸಾರಥಿಯಾಗಿರುವಾಗ ಹೇಗಿದ್ದರೂ ಅವನಿಗೆ ಜಯವುಸಿದ್ಧವೇ. ಪ್ರಸಿದ್ಧ ಪರಾಕ್ರಮವುಳ್ಳ ಇಂದ್ರಸಾರಥಿಯಾದ ಮಾತಲಿಯಾಗಲಿ, ಕೃಷ್ಣ ಸಾರಥಿಯಾದ ದಾರುಕನಾಗಲಿ ಆ ಬೃಹನ್ನಳೆಗೆ ಸಾಟಿಯಲ್ಲ'' ಎಂದನು. ಓ ಜನವೇಜಯರಾಜಾ! ತನ್ನ ಮಗನಾದ ಉತ್ತರನ ವಿಜಯವಾರ್ತೆಯನ್ನು ಕೇಳಿ ವಿರಾಟನ ಸಂತೋಷಕ್ಕೆ ಪಾರವಿರಲಿಲ್ಲ. ರೋಮಾಂಚದಿಂದ ಅವನ ಮೈ ಉಬ್ಬಿಹೋಯಿತು. ಆ ಪ್ರಿಯವೃತ್ತಾಂತವನ್ನು ತಿಳಿಸಿದ ತನ್ನ ದೂತರಿಗೆ ಅನೇಕವಿಧವಾಗಿ ಧನಗಳನ್ನೂ, ರತ್ನ

ಗಳನ್ನೂ ಕೊಟ್ಟು ಸಂತೋಷಗೊಳಿಸಿದನು. ಆ ದೂತರೆಲ್ಲರೂ ಹೊರಟು ಹೋದಮೇಲೆ, ವಿರಾಟನು ತನ್ನ ಮಗನ ಜಯಕ್ಕಾಗಿ ಸಂತೋಷಗೊಂಡು ತನ್ನ ಮಂತ್ರಿಗಳನ್ನು ಕರೆದು, "ಓ ಅಮಾತ್ಯರೇ! ರಾಜಮಾರ್ಗಗಳನ್ನೆಲ್ಲ ಧ್ವಜಗಳಿಂದ ಅಲಂಕರಿಸಿರಿ ಪುಷ್ಪೋಪಹಾರಗಳಿಂದ ಎಲ್ಲಾ ಕಡೆಯಲ್ಲಿಯೂ ದೇವತೆಗಳನ್ನು ಪೂಜಿಸಿರಿ. ರಾಜಕುಮಾರರೂ, ಪ್ರಧಾನ ಯೋಧರೂ, ಒಳ್ಳೆಯ ಅಲಂಕೃತರಾದ ವೇಶ್ಯೆಯರೂ ಸಮಸ್ತ ಮಂಗಳ ವಾದ್ಯಗಳೊಡನೆ ನನ್ನ ಮಗನನ್ನು ಇದಿರುಗೊಂಡು ಹೋಗಲಿ. ನನ್ನ ಮಗನ ಜಯವನ್ನು ಕೊಂಡಾಡುವುದಕ್ಕಾಗಿ ಪುರವಾಸಿಗಳೂ, ಇತರ ಸ್ತ್ರೀ ಪುರುಷರೂ, ಶುಭ್ರ ವಸ್ತ್ರಗಳನ್ನುಟ್ಟುಕೊಂಡು ದಾರಿಗಿದಿರಾಗಿ ಹೋಗಲಿ. ಹೆಂಗಸರೆಲ್ಲರೂ ಗಂಧಮಾಲ್ಯಗಳಿಂದಲೂ, ಆಭರಣಗಳಿಂದಲೂ ಅಲಂಕೃತರಾಗಿ ಬರಲಿ. ಎಲ್ಲಾ ಗಣಿಕೆಯರೂ, ಕನ್ಯೆಯರೂ ಒಳ್ಳೆಯ ಅಲಂಕಾರಗಳನ್ನು ಮಾಡಿಕೊಂಡು, ರಮ್ಯವಾದ ವೇಷಗಳಿಂದ ನಮ್ಮ ಸಮಸ್ತ ಸೈನ್ಯಗಳೊಡನೆ ಜಯಶೀಲನಾದ ನನ್ನ ಪುತ್ರನನ್ನು ಹಿಂಬಾಲಿಸಿ ಬರಲಿ. ನನ್ನ ಕಿಂಕರರು ಈಗಲೇ ಮದದಾನೆಯನ್ನೇರಿಕೊಂಡು ಘಂಟೆಗಳನ್ನೂ, ಪಣವ ವಾದ್ಯಗಳನ್ನೂ ಬಾರಿಸುತ್ತ, ನಾಲ್ಕು ಬೀದಿಗಳು ಕೂಡುವ ಎಲ್ಲಾ ಚೌಕಗಳಲ್ಲಿಯೂ ನಮ್ಮ ಜಯವನ್ನು ಸಾರುತ್ತ ಬರಲಿ. ನನ್ನ ಮಗಳಾದ ಉತ್ತರೆಯು ಸರ್ವಾಭರಣಗಳಿಂದಲಂಕೃತಳಾಗಿ, ಇತರ ರಾಜಕುಮಾರಿಯರೆಲ್ಲರೊಡನೆ ತನ್ನ ಪ್ರಿಯಸಖಿಯಾದ ಬೃಹನ್ನಳೆಯನ್ನು ಇದಿರುಗೊಳ್ಳುವುದಕ್ಕೆ ಹೋಗಲಿ" ಎಂದನು. ಈ ರಾಜಾಜ್ಞೆಯನ್ನು ಕೇಳಿದೊಡನೆ ಪುರವಾಸಿಗಳೆಲ್ಲರೂ ಸಂತೋಷದಿಂದ ಮಂಗಳದ್ರವ್ಯಗಳನ್ನು ಕೈಯಲ್ಲಿ ಹಿಡಿದುಕೊಂಡು ಹೊರಟರು. ಸೂತಮಾಗಧರೂ, ಇನ್ನೂ ನಗರದಲ್ಲಿ ರತಕ್ಕ ಜನಗಳೆಲ್ಲರೂ ಹೊರಟರು. ಭೇರಿಗಳೂ, ತೂರ್ಯಗಳೂ, ಶಂಖಗಳೂ ನುಡಿಸಲ್ಪಟ್ಟುವು. ಸ್ತ್ರೀಯರೆಲ್ಲರೂ ಉತ್ತಮವೇಷಗಳಿಂದ ಸಿದ್ಧರಾಗಿ ಹೊರಟರು. ಹೊಗಳುಭಟರ ಸ್ತೋತ್ರಪಾಠಗಳೊಂದು ಕಡೆ! ಪಣವಾದಿ ಚರ್ಮವಾದ್ಯಗಳೊಂದು ಕಡೆ! ಕೊಳಲಿನ ಧ್ವನಿಯೊಂದು ಕಡೆ! ಕಂಚಿನ ತಾಳಗಳೊಂದು ಕಡೆ! ಮಧುರವಾದ ಗಾನವೊಂದು ಕಡೆ! ಇವೆಲ್ಲವುಗಳೊಡನೆ ಅನೇಕಸ್ತ್ರೀಯರು ಪಟ್ಟಣದಿಂದ ಹೊರಟರು. ವೇದಗಳ

ನ್ನೋದಿದವರೂ, ಶಾಂತಿಪ್ರಧಾನರೂ, ಅಧ್ಯಯನ ಕ್ರಮಗಳನ್ನೋದಿದ ವರೂ, ಸ್ವಸ್ತಿಕಾರ್ಯಗಳನ್ನೂ, ಮಂತ್ರಜಪಗಳನ್ನೂ, ಸಾಮಗಾನಗಳ ನ್ನೂ ಬಲ್ಲವರೂ ಆದ ಅನೇಕಬ್ರಾಹ್ಮಣರು ಉತ್ತರನನ್ನು ಇದಿರುಗೊಳ್ಳು ವುದಕ್ಕಾಗಿ ಹೊರಟು ಬಂದರು.

ಇದು ಅರುವತ್ತೊಂಭತ್ತನೆಯ ಅಧ್ಯಾಯವು.

ಉತ್ತರನ ಜಯವನ್ನು ಕೇಳಿದ ಸಂತೋಷಕ್ಕಾಗಿ ವಿರಾಟನು
ಕಂಕನೊಡನೆ ಪಗಡೆಯನ್ನಾರಂಭಿಸಿದುದು. ವಿರಾಟನು
ಉತ್ತರನನ್ನು ಹೊಗಳುತಿದ್ದಾಗ, ಬೃಹನ್ನಳೆಯನ್ನು
ಪ್ರಶಂಸೆಮಾಡಿದ ಧರ್ಮರಾಜನನ್ನು ವಿರಾಟನು
ದಾಳದಿಂದ ಹೊಪೆದುದು. ಸೈರಂಧ್ರಿಯು
ಧರ್ಮರಾಜನ ಗಾಯವನ್ನು ಒತ್ತಿ
ಹಿಡಿದುದು.

ಓ ಜನಮೇಜಯರಾಜಾ! ಹೀಗೆ ವಿರಾಟನು ತನ್ನ ಸೈನ್ಯವನ್ನೂ, ಕನ್ಯೆಯರನ್ನೂ, ಚೆನ್ನಾಗಿ ಅಲಂಕೃತರಾದ ವೇಶ್ಯೆಯರನ್ನೂ ಕಳುಹಿಸಿ ಕೊಟ್ಟು, ತನ್ನ ಮನಸ್ಸಿನ ಸಂತೋಷವನ್ನು ತಡೆಯಲಾರದೆ ಕಂಕನೊಡನೆ ಹೀಗೆಂದು ಹೇಳುವನು. "ಓ ಯತಿಶ್ರೇಷ್ಠಾ! ಅತ್ತಲಾಗಿ ನಾನು ಯುದ್ಧ ದಲ್ಲಿ ತ್ರಿಗರ್ತರನ್ನೆಲ್ಲ ಜಯಿಸಿ ಬಂದೆನು. ಈಗ ನನ್ನ ಮಗನು ಜಯಿಸಿದ ಮತ್ತೊಂದು ಸಂತೋಷವಾರ್ತೆಯೂ ಕಿವಿಗೆ ಬಿದ್ದಿತು. ಇನ್ನು ನಾವು ಅಂತಃಪುರಕ್ಕೆ ಹೋಗಿ ಸಂತೋಷವಾಗಿ ಪಗಡೆಯನ್ನಾಡುವೆವು. ಸೈರಂಧ್ರೀ! ಪಗಡೆಯ ಕಾಯಿಗಳನ್ನು ತಂದಿಡು. ಪಗಡೆಯ ಹಾಸನ್ನು ಹಾಸಿಡು. ಕುಳ್ಳಿರುವುದಕ್ಕೆ ಆಸನವನ್ನು ಕಲ್ಪಿಸು. ನೀನು ಬೀಸಣಿಗೆಯನ್ನು ಹಿಡಿದು ನಮ್ಮ ಪಕ್ಕದಲ್ಲಿಯೇ ನಿಂತು ಬೀಸುತ್ತಿರು" ಎಂದನು. ಈ ಮಾತನ್ನು ಕೇಳಿ ಧರ್ಮರಾಜನು, "ಓ ಮಹಾರಾಜಾ! ಜೂಜಾಡುವವನು ಸಂತೋಷದಿಂದಿದ್ದ ಕಾಲದಲ್ಲಿ, ಅಂತವನೊಡನೆ ಜೂಜಾಡಬಾರದೆಂದು ನಾನು ಕೇಳಿರುವೆನು. ನಿನಗಾದರೋ ಈಗ ಸಂತೋಷವು ಉಕ್ಕುತ್ತಿರು

ವುದು. ಈಗ ನಿನ್ನೊಡನೆ ಜೂಜಾಡುವುದು ನನಗೆ ಸಮ್ಮತವಿಲ್ಲ. ನಿನಗೆ ಪ್ರಿಯವಾದ ಬೇರೆ ಯಾವುದಾದರೂ ಕಾರ್ಯವನ್ನು ಹೇಳು ನಡೆಸುವೆನು. ಈಗ ಈ ಜನಗಳಮುಂದೆ ದ್ಯೂತವನ್ನಾಡುವುದು ನಮಗೆ ಉಚಿತವಲ್ಲ'' ಎಂದನು. ಅದಕ್ಕಾ ವಿರಾಟನು '' ಓ ಬ್ರಾಹ್ಮಣಾ ! ನಿನ್ನಿಂದ ನಾನೇನೂ ಧನವನ್ನಾಗಲಿ, ಸ್ತ್ರೀಯರನ್ನಾಗಲಿ, ಗೋವುಗಳನ್ನಾಗಲಿ, ಸುವರ್ಣವನ್ನಾಗಲಿ, ಬೇರೆ ಯಾವ ವಸ್ತುವನ್ನೇ ಆಗಲಿ, ಜೂಜಾಡಿ ಕಿತ್ತುಕೊಳ್ಳಬೇಕೆಂಬ ಉದ್ದೇಶವಿಲ್ಲ. ಸುಮ್ಮನೆ ವಿನೋದಕ್ಕಾಗಿ ಆಡುವುದೊಂದೇ ಹೊರತು ಬೇರೆಯಲ್ಲ'' ಎಂದನು. ಅದಕ್ಕಾ ಕಂಕನು '' ಎಲೈ ಮಾನ್ಯನೇ ! ಅನೇಕ ದೋಷಾಸ್ಪದವಾದ ಆ ಜೂಜಿನಿಂದ ಈಗ ನಿನಗೇನಾಗಬೇಕಾಗಿದೆ ? ಜೂಜಾಟದಲ್ಲಿ ಬಹಳ ದೋಷಗಳುಂಟು. ಆ ವ್ಯಸನವನ್ನು ಪೂರ್ಣವಾಗಿ ಬಿಟ್ಟುಬಿಡಬೇಕು. ಧರ್ಮರಾಜನಾದ ಯುಧಿಷ್ಠಿರನ ಗತಿಯನ್ನು ನೀನು ಕಂಡಾದರೂ, ಕೇಳಿಯಾದರೂ ಇಲ್ಲವೇ ? ಅವನು ರಾಜ್ಯವನ್ನೂ, ಅಪರಿಮಿತವಾದ ಧನವನ್ನೂ, ತನಗೆ ಪ್ರಿಯಭಾರ್ಯೆಯಾದ ಕೃಷ್ಣೆಯನ್ನೂ, ದೇವಸಮಾನರಾದ ಸಹೋದರರನ್ನೂ ಒಂದೇ ಪಣವಾಗಿಟ್ಟು ಎಲ್ಲವನ್ನೂ ಸೋತುಬಿಟ್ಟನು. ಈಗಲೂ ಆ ಪಾಂಡುಪುತ್ರನು ತಾನು ಮಾಡಿದ ಕೆಲಸಕ್ಕಾಗಿ ಪಶ್ಚಾತ್ತಾಪಪಡುತ್ತಿರುವನೆಂಬುದರಲ್ಲಿ ಸಂದೇಹವಿಲ್ಲ. ಅವನು ಸಮಸ್ತ ರತ್ನಗಳನ್ನೂ, ಧನಗಳನ್ನೂ ಕಳೆದುಕೊಂಡು, ಈಗ ಸಂಕಟಪಡುತ್ತಿರುವನು. ಜೂಜೆಂಬುದು ಮನುಷ್ಯನಿಗೆ ಸರ್ವಾಭೀಷ್ಟಗಳನ್ನೂ ಕೆಡಿಸುವುದು. ಸರ್ವಸ್ವವೂ ನಷ್ಟವಾಗುವುದು. ಮೇಲೆಮೇಲೆ ಮಾತುಗಳು ಕ್ರೂರವಾಗುವುವು. ಜೂಜಾಟದಲ್ಲಿ ವಿವೇಕಿಗಳು ಎಂದಿಗೂ ನಂಬಿಕೆಯನ್ನಿಡರು. ಜೂಜಿನಿಂದ ಒಂದೇ ದಿನದಲ್ಲಿ ಯುಧಿಷ್ಠಿರನು ಸರ್ವಸ್ವವನ್ನೂ ಕಳೆದುಕೊಂಡನು. ಆದುದರಿಂದ ನನಗೆ ಆ ಜೂಜಾಟದಲ್ಲಿ ಸ್ವಲ್ಪವೂ ಇಷ್ಟವಿಲ್ಲ. ಹಾಗಿದ್ದರೂ ನೀನು ಆಡಬೇಕೆಂದು ನಿರ್ಬಂಧಿಸುವುದಾದರೆ, ಅದು ನಿನಗೂ ಪ್ರಿಯವಾಗಿದ್ದರೆ, ನಿನಗಾಗಿ ಆಡುವೆನು'' ಎಂದನು. ಆ ಮೇಲೆ ಇಬ್ಬರೂ ಆಟಕ್ಕೆ ತೊಡಗಿದರು. ಆಡುತ್ತಿರುವಾಗ ನಡುವೆ ವಿರಾಟನು, ಧರ್ಮರಾಜನನ್ನು ಕುರಿತು, '' ಮುನಿವರ್ಯಾ ! ನೋಡಿದೆಯಲ್ಲವೆ ? ನನ್ನ ಮಗನು ಯುದ್ಧದಲ್ಲಿ ಅಂತಹ ಕುರುಗಳನ್ನೆಲ್ಲ ಜಯಿಸಿಬಿಟ್ಟನು. ಆ

ಕುರುಗಳಾದರೋ ಎಲ್ಲರೂ ಅಥಿರಥರು. ದೇವತೆಗಳಿಗೂ ದುರ್ಜಯರು'' ಎಂದನು. ಆಗ ಧರ್ಮರಾಜನು, ''ಓ ರಾಜಾ! ನಿನ್ನ ಗೋವುಗಳನ್ನು ಜಯಿಸಿದುದೂ, ಕೌರವರು ಪರಾಜಿತರಾದುದೂ ಭಾಗ್ಯವಶದಿಂದಲೇ ಹೊರತು ಬೇರೆಯಲ್ಲ. ನಿನ್ನ ಮಗನಾದ ಉತ್ತರನು ಕುರುಗಳನ್ನು ಜಯಿಸುವುದಾದರೆ, ಅದು ಅತ್ಯಾಶ್ಚರ್ಯವೆಂದೇ ನನಗೆ ತೋರಿದೆ. ಆದರೆ ಬೃಹನ್ನಳೆಯು ಯಾವನಿಗೆ ಸಾರಥಿಯೋ, ಅವನು ಹೇಗಿದ್ದರೂ ಜಯಿಸುವುದೇನೋ ನಿಶ್ಚಯವು'' ಎಂದನು. ಈ ಮಾತನ್ನು ಕೇಳಿ ವಿರಾಟನ ಮನಸ್ಸು ಕಲಗಿತು. ಕೋಪದಿಂದ ರೇಗಿ ಧರ್ಮರಾಜನನ್ನು ಕುರಿತು ''ಓ ಬ್ರಾಹ್ಮಣಾ! ನನ್ನ ಮಗನಾದರೋ ಮಹಾ ಧನುರ್ಧಾರಿ. ಬಹಳ ಧೀಮಂತನು. ಒಳ್ಳೆಯ ಯೋಧನು. ಅಂತವನು ಯುದ್ಧದಲ್ಲಿ ಕುರುಗಳನ್ನು ಜಯಿಸಿದನೆಂದರೆ ಆಶ್ಚರ್ಯವೇನಿದೆ?'' ಎಂದನು. ಅದಕ್ಕಾ ಯುಧಿಷ್ಠಿರನು, ''ಅಂತಹ ವೀರ್ಯವಂತನಾದವನು ಸಾರಥಿಯಾಗಿ ರಥದಲ್ಲಿ ಕುಳಿತು, ನಿನ್ನ ಮಗನು ಆ ದುಷ್ಕರಕಾರ್ಯವನ್ನು ತಾನೇ ಮಾಡಿದನೆಂದರೆ ಅದು ಆಶ್ಚರ್ಯವಲ್ಲದೆ ಮತ್ತೇನು?'' ಎಂದನು. ಆಗ ವಿರಾಟನು ''ಓ ಬ್ರಾಹ್ಮಣಾಧಮಾ! ನನ್ನ ಮಗನನ್ನು ಆ ಷಂಡನೊಡನೆ ಸಾಟಿಮಾಡಿ ಮಾತಾಡುತ್ತಿರುವೆ? ನನ್ನ ಮುಂದೆ ಇದನ್ನಾಡಬಹುದು, ಇದನ್ನಾಡಬಾರದು ಎಂಬೀ ವಿವೇಕವನ್ನೇ ತಿಳಿಯದೆ, ನೀನು ನನ್ನನ್ನು ಹೀಗೆ ಅವಮಾನಗೊಳಿಸುತ್ತಿರುವೆಯಾ! ನಾನು ಎಷ್ಟೋ ಪುರುಷರನ್ನು ನೋಡಿರುವೆನು. ಎಷ್ಟೋ ಮಂದಿ ಸಾರಥಿಗಳನ್ನೂ ನೋಡಿರುವೆನು. ಸಾರಥಿಯಾಗಿದ್ದವನು ಹಾಗೆ ಪರಾಕ್ರಮವನ್ನು ತೋರಿಸಿ ಯುದ್ಧಮಾಡಿದುದನ್ನು ನಾನು ಇದುವರೆಗೆ ನೋಡಿದುದಿಲ್ಲ. ಓ ಬ್ರಾಹ್ಮಣಾ! ಅರಸರಿಗೆ ಅಪ್ರಿಯವಾದ ಕಾರ್ಯವನ್ನು ಎಂದಿಗೂ ಮಾಡಬಾರದು. ರಾಜರಿಗೆ ಪ್ರಿಯವಾಗಿಯೂ, ಅನುಕೂಲವಾಗಿಯೂ ಇರುವ ಮಾತನ್ನೇ ಯಾವಾಗಲೂ ನುಡಿಯುತ್ತಿರಬೇಕು. ರಾಜರಿಗೆ ಅಪ್ರಿಯವನ್ನುಂಟುಮಾಡಿದವನು ಎಂದಿಗೂ ಸುಖವಾಗಿ ಬಾಳುವುದಿಲ್ಲ. ನೀನು ನನಗೆ ಸ್ನೇಹಿತನಾದುದರಿಂದ, ಈಗಮಾತ್ರ ನಾನೇನೋ ನಿನ್ನ ಅಪರಾಧವನ್ನು ಮನ್ನಿಸಿರುವೆನು. ನಿನಗೆ ಬದುಕಬೇಕೆಂಬ ಆಸೆಯಿದ್ದರೆ, ಇನ್ನುಮೇಲೆ ಇಂತಹ ಮಾತನ್ನಾಡಬೇಡ'' ಎಂದನು.

ಈ ಮಾತನ್ನು ಕೇಳಿ ಕಂಕನು ಗಟ್ಟಿಯಾಗಿ ನಕ್ಕು, ತಿರುಗಿ ವಿರಾಟನೊಡನೆ "ಓ ರಾಜೇಂದ್ರಾ! ಅಲ್ಲಿ ಉತ್ತರನೇ ಸಾರಥ್ಯವನ್ನು ಮಾಡಿರುವನೆಂಬುದರಲ್ಲಿ ಸಂದೇಹವಿಲ್ಲ! ಬೃಹನ್ನಳೆಯು ಜಯಿಸಿದಳೆಂದೇ ನೀನು ನಗರದಲ್ಲಿ ಜಯವನ್ನು ಸಾರಿಸು! ಈ ವಿಚಾರದಲ್ಲಿ ನನಗೊಂದು ನಿಮಿತ್ತವೂ ಕಂಡುಬಂದಿದೆ. ನನ್ನ ಊಹೆಯು ದೃಢವಾದುದೇ! ನನ್ನ ಮನಸ್ಸಿಗೆ ಈಗ ಏನು ತೋರಿದೆಯೋ ಅದು ಬೇರೆ ವಿಧವಾಗಿ ಆಗಿರಲಾರದು. ಆ ಕೌರವರೇನೂ ಸಾಮಾನ್ಯರಲ್ಲ. ಅಗ್ನಿ, ಸೋಮ, ವರುಣ, ಸೂರ್ಯ, ಕುಬೇರನೇ ಮೊದಲಾದ ದೇವತೆಗಳಿಂದಲೂ ಅವರನ್ನು ಜಯಿಸುವುದಕ್ಕಾಗದೆಂದು ತಿಳಿ. ಅಲ್ಲಿರುವವರೇನು ಸಾಮಾನ್ಯರೆ? ಶಂತನುಪುತ್ರನಾದ ಭೀಷ್ಮನು! ಎಂತವರಿಗೂ ದುರ್ಜಯರಾದ ದ್ರೋಣಕರ್ಣರು! ಅಶ್ವತ್ಥಾಮನು! ಈ ಮೊದಲಾದ ಮಹಾತ್ಮರೆಲ್ಲರೂ ಅಲ್ಲಿರುವರು. ವಿಕರ್ಣ, ಸೋಮದತ್ತ, ಜಯದ್ರಥ, ಭೂರಿಶ್ರವಸ್ಸು, ಶಲ, ಭೂರಿ, ಜಲಸಂಧಿ ಮೊದಲಾದ ಅನೇಕ ಶೂರರಿರುವರು. ದುರ್ಯೋಧನನೂ, ದುಷ್ಪ್ರಹಸನನೂ, ದುಶ್ಶಾಸನನೂ, ವಿವಿಂಶತಿಯೂ ಆ ಕಡೆಯಲ್ಲಿರುವರು. ವೃಷಸೇನ, ಅಶ್ವವೇಗ, ವಾಯುವೇಗ, ಸುವರ್ಚಸ್ಸು, ಬಾಹ್ಲೀಕ, ಶೂರಸೇನ, ಯುಯುತ್ಸು, ಶಕುನಿ, ಸಾಲ್ವರಾಜನಾದ ದ್ಯುಮತ್ಸೇನ, ಮೊದಲಾಗಿ ಇನ್ನೂ ನಾನಾದೇಶದ ಅರಸರೂ, ಬಹಳ ಮಂದಿ ಶೂರರೂ ಅಲ್ಲರುವರು. ಆಚಾರ್ಯರಲ್ಲಿ ಮುಖ್ಯನಾದ ಕೃಪನೊಡನೆ ಧನುರ್ಬಾಣಗಳನ್ನೂ, ಕತ್ತಿಗಳನ್ನೂ ಸಿದ್ಧವಾಗಿ ಹಿಡಿದು ಅನೇಕರಥಗಳಿಗೆ ಅಧಿಪತಿಗಳಾದ ರಥಿಕರಿರುವರು. ಮಹಾವೀರ್ಯವುಳ್ಳ ಎಷ್ಟೋ ಮಂದಿ ರಾಜಪುತ್ರರೂ, ಮಹಾರಥರೂ ಆ ಕಡೆಯಲ್ಲಿರುವರು. ಸಾಕ್ಷಾದ್ದೇವೇಂದ್ರನೇ ದೇವಗಣಗಳೊಡನೆ ಬಂದರೂ ಭೀಷ್ಮದ್ರೋಣರಿಂದ ರಕ್ಷಿತವಾದ ಆ ಕೌರವರನ್ನು ಜಯಿಸಲಾರನು. ಆ ಬೃಹನ್ನಳೆಯನ್ನು ಬಿಟ್ಟರೆ, ಬೇರೆ ಯಾವನು ತಾನೇ ಆ ಸೈನ್ಯಕ್ಕೆದಿರಾಗಿ ನಿಂತು ಯುದ್ಧಮಾಡಬಲ್ಲನು? ಬಾಹುಬಲದಲ್ಲಿ ಅವನಿಗೆ ಸಮಾನನಾದ ಮನುಷ್ಯನು ಬೇರೊಬ್ಬನಿಲ್ಲ. ಯುದ್ಧವನ್ನು ಕಂಡರೆ ಅವನಿಗೆ ಮೇಲಿಮೇಲೆ ಉತ್ಸಾಹವೂ, ಸಂತೋಷವೂ ಹೆಚ್ಚುತ್ತಿರುವುದು. ಅಂತಹ ವೀರಪುರುಷನು ಈ ಭೂಮಿಯಲ್ಲಿಯಾಗಲಿ, ಸ್ವರ್ಗಲೋಕದಲ್ಲಿಯಾಗಲಿ ಇರುವನೆಂದು ತಿಳಿದಿರುವೆಯಾ?"

ಎಂದನು. ಈ ಮಾತುಗಳನ್ನು ಕೇಳಿ ವಿರಾಟನಿಗೆ ಮನಸ್ಸು ಬಹಳ ಕ್ಷೋಭ ಹೊಂದಿತು. ಅವನ ಎದೆಯು ಒಡೆದುಬಂತಾಯಿತು. ಕಠಿನವಾಕ್ಯದಿಂದ ಆ ಕಂಕನನ್ನು ಧಿಕ್ಕರಿಸತೊಡಗಿದನು. ಮಹಾತ್ಮನಾದ ಧರ್ಮಪುತ್ರನೇ ಅವನೆಂಬುದನ್ನು ವಿರಾಟನು ಹೇಗೆತಾನೇ ಬಲ್ಲನು? ನಿಜವನ್ನು ತಿಳಿಯದ ವಿರಾಟನು ಕೋಪದಿಂದ ಆ ಯುಧಿಷ್ಠಿರನನ್ನು ನೋಡಿ "ಕಂಕಾ! ನನಗೆ ಪ್ರತಿಕೂಲವಾಗಿ ಮಾತನಾಡಬೇಡ. ನಾನು ಅನೇಕಾವರ್ತಿ ನಿನಗೆ ಬೇಡವೆಂದು ಹೇಳಿದರೂ, ನನ್ನ ಮಾತನ್ನು ನೀನು ಕೇಳುವವನಾಗಿಲ್ಲ. ಮೇಲೆ ನಿಯಾಮಕನೊಬ್ಬನಿಲ್ಲದಿದ್ದರೆ, ಎಂತವನೂ ಧರ್ಮಕ್ಕೆ ಕಟ್ಟುಬಿದ್ದು ನಡೆಯಲಾರನು" ಎಂದು ಹೇಳುತ್ತ, ಮನಸ್ಸಿನ ಕೋಪವನ್ನು ತಡೆಯಲಾರದೆ, ಕೈಯಲ್ಲಿದ್ದ ದಾಳವನ್ನೆತ್ತಿ ಧರ್ಮರಾಜನ ಬಲಗಡೆಯ ಕಿವಿಯ ಬುಡಕ್ಕೆ ಬಲವಾಗಿ ಹೊಡೆದನು. ತಕ್ಷಕನೆಂಬ ಸರ್ಪದ ಶರೀರದಂತೆ ಉದ್ದವಾದ ತನ್ನ ಬಲತೋಳನ್ನೆತ್ತಿ ವಿರಾಟನು "ಇನ್ನುಮೇಲೆ ಇಂತಹ ಮಾತುಗಳನ್ನಾಡಬೇಡ" ಎಂದು ಹೆದರಿಸಿ, ಬಲವಾಗಿ ಬೀಸಿ ಹೊಡೆದಾಗ, ಧರ್ಮರಾಜನಿಗೆ ಮೂಗಿನಿಂದ ರಕ್ತವು ಸುರಿಯಲಾರಂಭಿಸಿತು. ಇಷ್ಟು ಪ್ರಬಲವಾದ ದಾಳದ ಪೆಟ್ಟು ಬಿದ್ದರೂ, ಧರ್ಮರಾಜನು ಬಾಯೆತ್ತದೆ, ಸಭಾಪದಲ್ಲಿ ದುಃಖಿತೆಯಾಗಿ ನಿಂತಿದ್ದ ದ್ರೌಪದಿಯನ್ನು ಕಣ್ಣೆತ್ತಿ ನೋಡಿದನು. ಧರ್ಮರಾಜನ ಕೆನ್ನೆಯಿಂದ ಕನ್ನೆಲೃದಿಲೆಗೆ ಸಮಾನವಾದ ರಕ್ತವು ಸುರಿಯಲಾರಂಭಿಸಿತು. ಆ ರಕ್ತಬಿಂದವು ಭೂಮಿಗೆ ಬೀಳದಹಾಗೆ ಧರ್ಮರಾಜನು ತನ್ನ ಕೈಗಳಿಂದ ಒತ್ತಿಹಿಡಿದು, ಪಕ್ಕದಲ್ಲಿದ್ದ ದ್ರೌಪದಿಯಕಡೆಗೆ ತಿರುಗಿ ನೋಡಿದನು. ಆಗ ದ್ರೌಪದಿಯು ತನ್ನ ಪತಿಗೆ ಬಹಳ ವೇದನೆಯುಂಟಾಗಿರುವುದನ್ನು ತಿಳಿದು, ದುಃಖದಿಂದಲೂ, ಕೋಪದಿಂದಲೂ, ಭಯದಿಂದಲೂ ಕಲಗಿದ ಮನಸ್ಸುಳ್ಳವಳಾಗಿ, ಆ ಮನೋವಿಕಾರಗಳೊಂದೂ ಹೊರಕ್ಕೆ ಕಾಣದ ಹಾಗೆ ಬಲಾತ್ಕಾರದಿಂದ ಕಣ್ಣೀರನ್ನು ತಡೆದುಕೊಂಡು, ಬೇಗನೆ ಮುಂದೆ ಬಂದು, ತೆಳುವಾದ ತನ್ನ ಸೀರೆಯ ಸೆರಗಿನಿಂದ ಆ ರಕ್ತವನ್ನು ಒತ್ತಿ ಹಿಡಿದಳು. ಆಮೇಲೆ ಒಂದು ಸುವರ್ಣದ ಬಟ್ಟಲನ್ನು ತರಿಸಿ ಧರ್ಮರಾಜನ ಹಣೆಯ ರಕ್ತವನ್ನೆಲ್ಲ ಒರೆಸಿ ತೊಳೆದಳು. ಆಗ ವಿರಾಟನು ಆಶ್ಚರ್ಯದಿಂದ "ಸೈರಂಧ್ರೀ! ಇದೇನು? ಇವನ ದೇಹದ ರಕ್ತವನ್ನು ನಿನ್ನ ಉತ್ತರೀಯ

ದಿಂದ ಗ್ರಹಿಸುವೆಯಲ್ಲ? ಕಾರಣವೇನು? ನಿಜವನ್ನು ತಿಳಿಸು" ಎಂದನು. ಅದಕ್ಕಾ ಸೈರಂಧ್ರಿಯು "ಓ ರಾಜಾ! ಈ ಕಂಕನ ದೇಹದಿಂದ ಎಷ್ಟು ರಕ್ತಬಿಂದುಗಳು ನೆಲಕ್ಕೆ ಬಿಳುವುವೋ, ಅಷ್ಟು ವರ್ಷಗಳವರೆಗೆ ನಿನ್ನ ದೇಶದಲ್ಲಿ ಅನಾವೃಷ್ಟಿಯುಂಟಾಗುವುದು. ನಿನಗೆ ಆ ಅನರ್ಥವಾಗಬಾರದೆಂದೇ ನಾನು ಇವನ ರಕ್ತವನ್ನು ನನ್ನ ಸೆರಗಿನಿಂದ ಗ್ರಹಿಸಿಕೊಂಡೆನು. ನಿನ್ನ ನಾಶವನ್ನು ತಪ್ಪಿಸುವುದೇ ನನ್ನ ಉದ್ದೇಶವು. ಈ ಯತಿಶ್ರೇಷ್ಠನನ್ನು ಯಾವನು ದುಃಖಪಡಿಸುವನೋ, ಅವನ ಆಯುಸ್ಸು ಕ್ಷೀಣಿಸುವುದು. ಇವನನ್ನು ಪೀಡಿಸಿದವನಿಗೆ ನರಕದಲ್ಲಿ ಸಾವಿರಾರು ಯಾತನೆಗಳುಂಟು. ಈ ಯತಿಯ ದೇಹದಿಂದ ಹೊರಟ ರಕ್ತವು ನೆಲಕ್ಕೆ ಬಿದ್ದು ಎಷ್ಟು ರಜಃಕಣಗಳನ್ನು ನೆನೆಸುವುದೋ, ಅದಕ್ಕೆ ಕಾರಣಭೂತನಾದವನ ಅಷ್ಟು ಮಂದಿ ಪಿತೃಗಳೂ ಪಿತೃಲೋಕದಿಂದ ಅಧೋಗತಿಗೆ ಬೀಳುವರು. ಇವೆಲ್ಲವನ್ನೂ ತಿಳಿದೇ ನಾನು ಈ ಸನ್ಯಾಸಿಯ ರಕ್ತವನ್ನು ಬಟ್ಟೆಯಿಂದ ಗ್ರಹಿಸಿದೆನು. ನಿನ್ನಲ್ಲಿ ನನಗಿರುವ ಅಭಿಮಾನದಿಂದ, ನಿನ್ನ ಹಿತಕ್ಕಾಗಿಯೇ ಈ ಕೆಲಸವನ್ನು ಮಾಡಿದೆನು" ಎಂದಳು.

ಇದು ಎಪ್ಪತ್ತನೆಯ ಅಧ್ಯಾಯವು.

ಯುದ್ಧವನ್ನು ನೋಡಬೇಕೆಂದು ಬಂದಿದ್ದ ದೇವತೆಗಳೆಲ್ಲರೂ ಅರ್ಜುನನನ್ನು ಸ್ತೋತ್ರಮಾಡುತ್ತಾ ಸ್ವರ್ಗಕ್ಕೆ ಹಿಂತಿರುಗಿದುದು. ಉತ್ತರನು ಮಹೋತ್ಸವದೊಡನೆ ಪುರಪ್ರವೇಶಮಾಡಿದುದು.

ಈ ನಡುವೆ ಜನಮೇಜಯರಾಜನು ವೈಶಂಪಾಯನನನ್ನು ಕುರಿತು, "ಓ ಮಹರ್ಷೀ! ಮನುಷ್ಯಲೋಕದಲ್ಲಿ ನಡೆಯುವ ಈ ಯುದ್ಧವನ್ನು ನೋಡುವುದಕ್ಕಾಗಿ ಬಂದಿದ್ದ ದೇವತೆಗಳೆಲ್ಲ, ಆಮೇಲೆ ಏನುಮಾಡಿದರೆಂಬುದನ್ನು ನನಗೆ ತಿಳಿಸಬೇಕು" ಎಂದನು. ಅದಕ್ಕಾ ವೈಶಂಪಾಯನನು, "ಓ ಜನಮೇಜಯರಾಜಾ! ಕೇಳು! ಇಂದ್ರಾದಿದೇವತೆಗಳೂ, ದೇವಋಷಿಗಳೂ, ಯಕ್ಷ ಗಂಧರ್ವರೂ, ಅಪ್ಸರೋಗಣಗಳೂ, ಅತ್ತಲಾಗಿ ಏಕಾ

ಕೆಯಾದ ಅರ್ಜುನನಿಗೂ, ಇತ್ತಲಾಗಿ ಬಹುಮಂದಿ ಕುರುಗಳಿಗೂ ನಡೆದ ಭಯಂಕರವಾದ ಯುದ್ಧವನ್ನೂ, ಅವರು ದಿವ್ಯಾಸ್ತ್ರಗಳನ್ನು ಪ್ರಯೋಗಿಸುವ ಮತ್ತು ಉಪಸಂಹಾರಮಾಡುವ ರೀತಿಗಳನ್ನೂ, ಅವರು ಆ ಯುದ್ಧದಲ್ಲಿ ಬಹಳ ವೇಗವಾಗಿಯೂ, ವಿಚಿತ್ರವಾಗಿಯೂ ಕೆಲಸಮಾಡುವ ರೀತಿಯನ್ನೂ ನೋಡಿ ಆಶ್ಚರ್ಯಭರಿತರಾದರು. ಆ ಅರ್ಜುನನೊಬ್ಬನೇ ಭೀಷ್ಮ, ದ್ರೋಣ, ಕೃಪ, ಕರ್ಣನೇ ಮೊದಲಾದ ಅನೇಕರಾಜರನ್ನು ಜಯಿಸಿದ ಅದ್ಭುತಪರಾಕ್ರಮವನ್ನು ನೋಡಿ, ಸಂತೋಷದಿಂದ ದೇವತೆಗಳು ಅರ್ಜುನನನ್ನು ಸ್ತೋತ್ರಮಾಡುತ್ತ, ನೇಗವತ್ತಾಗಿಯೂ, ಎಲ್ಲಿಯೂ ತಡೆಯಿಲ್ಲದುದಾಗಿಯೂ ಇರುವ ತಮ್ಮತಮ್ಮ ವಿಮಾನಗಳನ್ನೇರಿ ಸ್ವರ್ಗಕ್ಕೆ ಹಿಂತಿರುಗಿ ಹೋಗುತ್ತಿರುವಾಗ ದಾರಿಯಲ್ಲಿ "ಆಹಾ! ಭೀಷ್ಮ ದ್ರೋಣ ಕೃಪರು ಮೊದಲಾದ ಕೌರವವೀರರೋ ಇಂದ್ರಾದಿ ದೇವತೆಗಳಿಂದಲೂ ಜಯಿಸಲಸಾಧ್ಯರು. ಅಂಥವರು ಈ ಯುದ್ಧದಲ್ಲಿ ಒಬ್ಬನಾದ ಅರ್ಜುನನಿಂದಲೇ ಜಯಿಸಲ್ಪಟ್ಟರು. ಇದು ಆಶ್ಚರ್ಯಕರವಾಗಿದೆ. ಆಹಾ! ಆ ಅರ್ಜುನನೆಂಬ ಮಹಾತ್ಮನು ಯಾವ ಮುಹೂರ್ತದಲ್ಲಿ ಹುಟ್ಟಿದನೋ, ಆದು ಯಾವ ಧರ್ಮದ ಫಲವೋ ತಿಳಿಯಲಿಲ್ಲ. ಸಾಕ್ಷಾದ್ರುದ್ರನೊಡನೆ ಯುದ್ಧಮಾಡಿ, ಮೂವತ್ತು ಕೋಟಿ ಮಂದಿ ನಿವಾತಕವಚರನ್ನು ಯುದ್ಧದಲ್ಲಿ ಜಯಿಸಿದ ಆ ಫಲ್ಗುನನಿಗೆ ಇದೊಂದಾಶ್ಚರ್ಯವಲ್ಲ" ಎಂದು ಪ್ರಶಂಸಿಸುತ್ತಾ ಆಶ್ಚರ್ಯಭರಿತರಾಗಿ ಸ್ವರ್ಗವನ್ನು ಸೇರಿದರು. ಇತ್ತಲಾಗಿ ಯುದ್ಧದಲ್ಲಿ ಅರ್ಜುನನ ಬಾಣದಿಂದ ಗಾಯಪಟ್ಟ ಕುರುಗಳೂ ತಮ್ಮತಮ್ಮ ಸೈನ್ಯವಾಹನಗಳೊಡನೆ ತಮ್ಮ ದೇಶಗಳನ್ನು ಸೇರಿದರು. ಇಷ್ಟರಲ್ಲಿಯೇ ವಿರಾಟನಿಂದ ಉತ್ತರನನ್ನು ಇದಿರುಗೊಳ್ಳುವುದಕ್ಕಾಗಿ ಕಳುಹಿಸಲ್ಪಟ್ಟ ಸೈನ್ಯವೆಲ್ಲ, ನಗರದಿಂದ ಹೊರಟು ಬೇಗಬೇಗನೆ ಬರುತಿದ್ದಿತು. ಅಪರಿಮಿತವಾದ ಆನೆಗಳೂ, ಕುದುರೆಗಳೂ, ರಥಗಳೂ, ಬಲಾಢ್ಯರಾದ ಉತ್ತಮ ಕ್ಷತ್ರಿಯವಂಶದ ಯುದ್ಧವೀರರಿಂದ ನಡೆಸಲ್ಪಡುತ್ತ, ಸಾರಥಿಯಾದ ಬೃಹನ್ನಳೆಯೊಡನೆ ಬರುತಿದ್ದ ಉತ್ತರನನ್ನು ಸಂಧಿಸುವುದಕ್ಕಾಗಿ ಬಹಳ ಅಟ್ಟಹಾಸದೊಡನೆ ಇದಿರುಗೊಂಡು ಬರುತಿದ್ದುವು. ಅನೇಕ ವಾದ್ಯಧ್ವನಿಗಳಿಂದಲೂ, ಆನೆ ಕುದುರೆಗಳ ಮತ್ತು ರಥಗಳ ಸಮೂಹದಿಂದ

ಲೂ ಕೂಡಿದ ಆ ಗುಂಪಿನಲ್ಲಿ, ಸ್ತ್ರೀಯರ ಮತ್ತು ರಾಜಕುಮಾರರ ಸಂತೋಷ ಕೋಲಾಹಲವು ಮೇರೆಯಿಲ್ಲದೆ ಹೊರಟಿತು. ಇಷ್ಟರಲ್ಲಿಯೇ ಇತ್ತಲಾಗಿ ಉತ್ತರನಿಗೆ ಸಾರಥಿಯಾಗಿದ್ದ ಅರ್ಜುನನು, ತನ್ನಿದಿರಿಗೆ ದೊಡ್ಡ ಸೇನಾಧೂಳಿಯು ಮೇಲೆದ್ದುದನ್ನು ನೋಡಿ, ಸೈನ್ಯದ ಕೋಲಾಹಲವನ್ನೂ ಕೇಳಿ ಉತ್ತರನನ್ನು ಕುರಿತು, "ಕುಮಾರಾ! ಅದೋ! ಅಲ್ಲ ನೋಡು. ದೊಡ್ಡ ಸೇನಾಧೂಳಿಯು ಮೇಲೆದ್ದಿರುವುದು. ನಗರದ ಕಡೆಯಿಂದ ದೊಡ್ಡ ಕೂಗಾಟವು ಕೇಳಿಬರುತ್ತಿರುವುದು. ಇಲ್ಲಿಂದ ಓಡಿಹೋದ ಕುರುಗಳೇನಾದರೂ ತಿರುಗಿ ನಮ್ಮ ಪಟ್ಟಣವನ್ನು ಮುತ್ತುವುದಕ್ಕಾಗಿ ಹೋಗಿರಬಹುದೇನು? ಮಹಾಧನುರ್ಧಾರಿಗಳೂ, ಪರಾಕ್ರಮಿಗಳೂ ಆದ ಅವರೆಲ್ಲರೂ ನಮ್ಮಿಂದ ಪರಾಜಿತರಾಗಿ ಹೊರಟುಹೋದವರು. ಹೇಗಾದರೂ ಇರಲಿ. ನೀನು ಯುದ್ಧಕವಚವನ್ನು ಸರಿಯಾಗಿ ಬಿಗಿದುಕೊಂಡು, ಕುದುರೆಗಳನ್ನು ನಡೆಸು. ನಗರದ ಕಡೆಗೆ ಕುದುರೆಗಳನ್ನು ಬೇಗನೆ ಬಿಡು. (ನಾನು ತಿರುಗಿ ರಥಿಕನಾಗುವೆನು.) ಆದರೆ, ನನ್ನ ತಲಘೋಷವನ್ನಾಗಲಿ, ಗಾಂಡೀವವನ್ನಾಗಲಿ, ನನ್ನ ಧ್ವಜದ ಗುರುತನ್ನಾಗಲಿ ಈಗಲೇ ತೋರಿಸುವುದಿಲ್ಲ. ಒಂದುವೇಳೆ ಅವರು ನಮ್ಮ ಸ್ವಜನವೇ ಆಗಿದ್ದರೂ ಆಗಿರಬಹುದು" ಎಂದನು. ಅದಕ್ಕೆ ಉತ್ತರನು, "ಓ ಪಾರ್ಥಾ! ಇದು ನಮ್ಮ ಮತ್ಸ್ಯದೇಶದ ಸೈನ್ಯವು. ಒಳ್ಳೆಯ ಅಲಂಕೃತೆಯರಾದ ಗಣಿಕೆಯರು ಬರುತ್ತಿರುವರು. ರಥಗಳಲ್ಲಿ ಕನ್ಯೆಯರು ಕುಳಿತಿರುವರು. ನಾನಾತರದ ಉಡುಪುಗಳುಳ್ಳ ಯೋಧರು ಬರುತ್ತಿರುವರು. ನನ್ನ ತಂಗಿಯಾದ ಉತ್ತರೆಯೂ ಕೂಡ, ಅನೇಕ ಸಖಿಯರೊಡನೆ ಬರುತ್ತಿರುವಳು ನೋಡು. ಅದೋ! ಆ ಸೈನ್ಯದಲ್ಲಿ ಆನೆಗಳೂ, ಕುದುರೆಗಳೂ, ರಥಗಳೂ, ಪದಾತಿಗಳೂ, ಕವಚಾದಿಗಳಿಂದಲಂಕೃತರಾಗಿ ಬರುತ್ತಿರುವರೇ ಹೊರತು, ಅವರಲ್ಲಿ ಯಾರೂ ಶಸ್ತ್ರಧಾರಿಗಳಾಗಿಲ್ಲ. ನನ್ನ ತಂದೆಯ ಆಜ್ಞೆಯಮೇಲೆ ಅವರೆಲ್ಲರೂ ಸಂತೋಷದಿಂದಲೇ ಬರುವಹಾಗೆ ಕಾಣುತ್ತದೆ. ನನ್ನ ಮನಸ್ಸಿಗೆ ಇವರಲ್ಲಿ ಸ್ವಜನವೆಂಬ ಭಾವವೇ ಹುಟ್ಟುತ್ತಿದೆ" ಎಂದನು. ಇಷ್ಟರಲ್ಲಿಯೇ ಉತ್ತರನ ಬಂಧುಗಳನೇಕರು ಬೇಗನೆ ಬಂದು, ಅವನನ್ನು ಕಂಡು, ಒಬ್ಬೊಬ್ಬರೂ ಪ್ರೀತಿಯಿಂದಾಲಿಂಗಿಸಿದರು. ಆಗ ಆ ಜನರು ಉತ್ತರನನ್ನು ನೋಡಿ,

"ಉತ್ತರ ಕುಮಾರಾ! ನೀನು ನಮ್ಮಲ್ಲಿ ಪ್ರೇಮವುಳ್ಳವನು. ಪುರುಷರಲ್ಲಿ ಹುಲಿಯಂತೆ ಮೇಲೆನಿಸಿದವನು. ಸದಾ ಸಂತೋಷಚಿತ್ತನು. ದೈವವಶದಿಂದ ನೀನು ಜಯಶೀಲನಾದೆ. ನಿನಗೆ ಮಂಗಳವಾಗಲಿ! ಅದೃಷ್ಟದಿಂದ ಬೃಹನ್ನಳೆಯು ನಿನಗೆ ಸಾರಥ್ಯಕ್ಕೆ ಸಿಕ್ಕಿದಳು. ಅಂತಹ ಯುದ್ಧರಂಗಕ್ಕೆ ಹೋಗಿ ನೀನು ಸ್ವಲ್ಪವೂ ಭಯಪಡದಿದ್ದುದೂ ಭಾಗ್ಯವೇ" ಎಂದರು. ಅದಕ್ಕೆ ಉತ್ತರನು "ಓ ಪ್ರಿಯಜನರೇ! ಈ ಜಿಷ್ಣುವೇ (ಜಯಶೀಲನೇ) ಈ ಜಯಕ್ಕೆ ಮುಖ್ಯ ಕಾರಣಭೂತನು. ಇವನೇ ಏಕರಥನಾಗಿ ಆ ಕುರುಗಳೆಲ್ಲರನ್ನೂ ಯುದ್ಧದಲ್ಲಿ ಜಯಿಸಿದನು. ಇವನ ಬಾಹುವೀರ್ಯದಿಂದಲೇ ನಾನು ಗೋವುಗಳನ್ನು ಜಯಿಸಿ ತರುವಂತಾಯಿತು. ಅಮಿತ ಪರಾಕ್ರಮವುಳ್ಳ ಕುರುಗಳೂ, ಇವನ ಬಲದಿಂದಲೇ ಪರಾಜಿತರಾದರು. ದೇವಕುಮಾರನಿಗೆ ಸಾಟಿಯಾದ ಈ ತರುಣನೇ ಮಹಾಕಾರ್ಯವನ್ನು ನಡೆಸಿದವನು. ಈ ಪುರುಷವ್ಯಾಘ್ರನೇ ಕೌರವಸೇನೆಯನ್ನು ಕಲಗಿಸಿ, ನನ್ನನ್ನೂ ಕಾಪಾಡಿದವನು" ಎಂದನು. ಹೀಗೆ ಉತ್ತರನು ಅರ್ಜುನನನ್ನು ಪ್ರಶಂಸೆಮಾಡಿದುದನ್ನು ಕೇಳಿ, ಆ ಜನರೆಲ್ಲರೂ ರಾಜಪುತ್ರನಾದ ಆ ಉತ್ತರನ ಪ್ರೇರಣೆಯಿಂದ, ಬೃಹನ್ನಳೆಗೆ ಜಯಘೋಷದೊಡನೆ ಶುಭಾಶಂಸನವನ್ನು ಮಾಡಿದರು. ಕನ್ಯೆಯರು ಗಂಧ, ಪುಷ್ಪ, ಧೂಪಾದ್ಯುಪಚಾರಗಳಿಂದಲೂ, ಸುವರ್ಣಗಳಿಂದಲೂ ಅಲಂಕರಿಸಿದರು. ಆಗ ಅರ್ಜುನನು, ಗಂಧಾನುಲೇಪನಗಳ ಮತ್ತು ವಿವಿಧ ಪುಷ್ಪಮಾಲಿಕೆಗಳ ಭಾರದಿಂದ ಬಳಕುತ್ತ, ಎಲ್ಲರಿಂದಲೂ ಪೂಜಿಸಲ್ಪಟ್ಟು, ಪುರದ್ವಾರಕ್ಕೆ ಬಂದನು. ಎಲ್ಲೆಲ್ಲಿಯೂ ಭೇರಿಗಳೂ, ತೂರ್ಯಗಳೂ, ವೇಣುವಾದ್ಯಗಳೂ ಮೊಳಗುತ್ತಿದ್ದುವು. ಪುರಸ್ತ್ರೀಯರು ವಿಚಿತ್ರವೇಷಗಳಿಂದ ಅಲಂಕೃತರಾಗಿ ಬಂದರು. ಇವರೆಲ್ಲರೂ ಪಟ್ಟಣದಿಂದ ಬಂದು, ಭೂಮಿಂಜಯನನ್ನು (ಉತ್ತರನನ್ನು) ಇದಿರುಗೊಂಡು ಶ್ಲಾಘಿಸಿದರು. ಆ ಜನರೆಲ್ಲರೂ ತನ್ನ ಜಯವನ್ನು ಕೊಂಡಾಡುತ್ತಿರುವುದನ್ನು ಕೇಳಿದಷ್ಟೂ, ಉತ್ತರನಿಗೆ ಮನಸ್ಸಿನಲ್ಲಿ ಜಿಹಾಸೆಯೂ, ಲಜ್ಜೆಯೂ ಹೆಚ್ಚುತ್ತಿತ್ತು. ಆಗಾಗ ಅವನು ಅರ್ಜುನನ ಮುಖವನ್ನು ನೋಡುತಿದ್ದನು. ಆಮೇಲೆ ಅರ್ಜುನನು ವಿರಾಟಪುತ್ರಿಯಾದ ಉತ್ತರೆಗೂ, ಅವಳ ಸಖಿಯರಿಗೂ ಯುದ್ಧದಿಂದ ತಂದ ಕೆಲವು

ಉತ್ತಮವಸ್ತ್ರಗಳನ್ನು ಕೊಟ್ಟನು. ಆ ಕನ್ಯೆಯರೂ, ಮತ್ತು ವಿರಾಟನ ಸೈನ್ಯಗಳೂ ಜಯಶಬ್ದದೊಡನೆ ಉತ್ತರನನ್ನೂ, ಬೃಹನ್ನಳೆಯನ್ನೂ ಪೂಜಿಸಿ ಕರೆದುಕೊಂಡು ಹೋದರು.

ಇದು ಎಪ್ಪತ್ತೊಂದನೆಯ ಅಧ್ಯಾಯವು.

ಉತ್ತರನು ತಂದೆತಾಯಿಗಳನ್ನು ನಮಸ್ಕರಿಸಿದುದು. ಯುಧಿಷ್ಠಿರನ ಗಾಯವನ್ನು ನೋಡಿ ಭಯಪಟ್ಟ ಉತ್ತರನ ಪ್ರೇರಣೆಯಿಂದ, ವಿರಾಟನು ಧರ್ಮರಾಜನ ಮನ್ನಣೆಯನ್ನು ಬೇಡಿದುದು. ಉತ್ತರನೇ ಜಯಿಸಿದನೆಂದು ತಿಳಿದು, ವಿರಾಟನು ಅವನನ್ನು ಪ್ರಶಂಸೆಮಾಡಿದುದು. ಆದಕ್ಕೆ ಉತ್ತರನು ಹೇಳಿದ ಸಮಾಧಾನಗಳು.

ಓ ಜನಮೇಜಯರಾಜಾ! ಕೇಳು! ಉತ್ತರನು ಹೀಗೆ ಪುರಜನರಿಂದಲೂ, ಸ್ತ್ರೀಯರಿಂದಲೂ, ದೇಶದ ಜನರಿಂದಲೂ ಸನ್ಮಾನಿಸಲ್ಪಡುತ್ತ ಅಂತಃಪುರದ ಬಾಗಿಲಿಗೆ ಬಂದು, ತಂದೆಗೆ ತನ್ನ ಆಗಮನವನ್ನು ಹೇಳಿಕಳುಹಿಸಿದನು. ಒಡನೆಯೇ ದ್ವಾರಪಾಲಕನು ರಾಜನಬಳಿಗೆ ಬಂದು ನಮಸ್ಕರಿಸಿ, ಜಯಶಬ್ದಪೂರ್ವಕವಾಗಿ ಹೀಗೆಂದು ಹೇಳುವನು. "ಮಹಾರಾಜಾ! ನಿನ್ನ ಮಗನು ಶತ್ರುಗಳನ್ನು ಜಯಿಸಿ, ತನ್ನ ಸಾರಥಿಯೊಡನೆ ಬಂದು ಬಾಗಿಲಲ್ಲಿ ಕಾದಿರುವನು. ಪ್ರಧಾನ ಯೋಧರೂ, ಗಣಿಕೆಯರೂ, ಪುರಜನರೂ, ದೇಶಜನರೂ, ಅವನನ್ನು ಸುತ್ತಿಮುತ್ತಿ ಜಯಘೋಷಗಳನ್ನು ಮಾಡುತ್ತಿರುವರು. ಅವನು ಬಾಗಿಲಲ್ಲಿಯೇ ನಿಲ್ಲಲ್ಪಟ್ಟಿರುವನು" ಎಂದನು. ಈ ಮಾತನ್ನು ಕೇಳಿದೊಡನೆ ವಿರಾಟನಿಗೆ ಸಂತೋಷವು ಉಕ್ಕಿಬಂದಿತು. ಆಗ ವಿರಾಟನು, ಸಾರಥಿಯನ್ನು ನೋಡಿ "ಓ ಸಾರಥೀ! ನಾನೂ ಅವರನ್ನು ನೋಡಬೇಕೆಂದು ಬಹಳ ಆತುರಗೊಂಡಿರುವೆನು. ಒಡನೆಯೇ ಅವರಿಬ್ಬರನ್ನೂ ಬರಮಾಡು" ಎಂದನು. ಇಷ್ಟರಲ್ಲಿ ಸಮಾಪದಲ್ಲಿದ್ದ ಯುಧಿಷ್ಠಿರನು, ಆ ಸಾರಥಿಯು ಕಿವಿಯಲ್ಲಿ ಮೆಲ್ಲಗೆ "ಓ ಸಾರಥೀ!

ಉತ್ತರನೊಬ್ಬನೇ ಇಲ್ಲಿಗೆ ಬರಲಿ! ಬೃಹನ್ನಳೆಯನ್ನು ಈಗ ಒಳಕ್ಕೆ ಬಿಡ ಬಾರದು. ಏಕೆಂದರೆ, ಆ ಬೃಹನ್ನಳೆಗೆ ಒಂದು ವ್ರತವುಂಟು. ಯುದ್ಧ ಕಾಲದಲ್ಲಿಹೊರತು, ಬೇರೆಕಾಲದಲ್ಲಿ ಯಾವನು ನನ್ನ ಮೈಯಲ್ಲಿ ಗಾಯ ವನ್ನುಂಟುಮಾಡುವನೋ, ಅಥವಾ ರಕ್ತವನ್ನು ಕಾಣಿಸುವನೋ ಅವನು ಹೇಗೂ ಜೀವಿಸಿರಬಾರದೆಂದೇ ಮಹಾತ್ಮಳಾದ ಆ ಬೃಹನ್ನಳೆಯ ವ್ರತವು. ಹೀಗಿರುವುದರಿಂದ, ನನ್ನ ಮುಖದಲ್ಲಿ ರಕ್ತಮಿಶ್ರವಾದ ಘಾಯವು ಅವಳ ಕಣ್ಣಿಗೆ ಬಿದ್ದರೆ, ಈ ವಿರಾಟನನ್ನು ಅವನ ಮಂತ್ರಿಗಳೊಡನೆಯೂ, ಸೈನ್ಯ ವಾಹನಗಳೊಡನೆಯೂ ಅವಳು ತೀರಿಸಿಬಿಡುವುದೇ ನಿಶ್ಚಯವು. ನನ್ನ ಮೈಯಿಂದ ರಕ್ತವನ್ನು ಹೊರಡಿಸಿದವನು ಇಂದ್ರನಾಗಿರಲಿ, ಕುಬೇರನಾ ಗಿರಲಿ, ಯಮನಾಗಿರಲಿ, ವರುಣನಾಗಿರಲಿ, ಅವರನ್ನು ಅವಳು ತಿಕ್ಕಿ ಕೆಡಹದೆ ಬಿಡುವುದಿಲ್ಲ. ಹೀಗಿರುವಾಗ ಕೇವಲ ಮನುಷ್ಯಮಾತ್ರನಾದ ಈ ರಾಜನ ಪಾಡೇನು? ಆದುದರಿಂದ ಸಾರಥಿಯು ಸ್ವಲ್ಪ ಹೊತ್ತಿನವರೆಗೆ ಬಾಗಿಲಲ್ಲಿಯೇ ಇರಲಿ" ಎಂದನು. ದಯಾಸ್ವಭಾವವುಳ್ಳ ಧರ್ಮರಾಜನು ಈ ಮಾತನ್ನು ಗುಟ್ಟಾಗಿ ಹೇಳಿ, ವಿರಾಟನೊಡನೆ ಸಭೆಯಲ್ಲಿ ಸುಮ್ಮನೆ ಕುಳಿತಿದ್ದನು. ಇಷ್ಟರಲ್ಲಿ ರಾಜಕುಮಾರನಾದ ಉತ್ತರನು ಒಳಗೆ ಕರೆತರ ಲ್ಪಟ್ಟನು. ಆತನು ಮೊದಲು ತಂದೆಯ ಪಾದಗಳೆರಡನ್ನೂ ಹಿಡಿದು ನಮ ಸ್ಕರಿಸಿ, ಆಮೇಲೆ ಕಂಕನನ್ನು ಗೌರವಿಸಿದನು. ಇಷ್ಟರಲ್ಲಿಯೇ ಉತ್ತರನ ಓರೆನೋಟವು ಯುಧಿಷ್ಠಿರನ ಹಣೆಯಮೇಲೆ ಬಿದ್ದಿತು. ಅಲ್ಲಿ ರಕ್ತವು ಹರಿ ಯುವುದನ್ನು ಕಂಡು ಅವನ ಹೃದಯವು ನಡುಗಿತು. ಮೃತ್ಯುಗ್ರಸ್ತ ನಂತೆ ಮನಸ್ಸಿನಲ್ಲಿ ತಪಿಸುತ್ತ, ಧರ್ಮರಾಜನನ್ನು ನಟ್ಟಕಣ್ಣಿಂದ ನೋ ಡಿದನು. ಆ ಧರ್ಮರಾಜನ ಮೈಯಲ್ಲಿ ಅಲ್ಲಲ್ಲಿ ರಕ್ತದ ಗುರುತುಗಳು ಕಾ ಣಿಸಿದುವು. ಅವನ ಮನಸ್ಸು ಹೇಗೋ ವ್ಯಾಕುಲವಾಗಿರುವಂತೆ ತೋರಿತು. ಸೈರಂಧ್ರಿಯು ಅವನ ಪಕ್ಕದಲ್ಲಿ ನಿಂತು ಉಷಚರಿಸುತ್ತಿದ್ದಳು. ನಿರಪ ರಾಧಿಯಾದ ಆತನು ಹೀಗೆ ವ್ಯಾಕುಲನಾಗಿ ನೆಲದಮೇಲೆ ಕುಳಿತಿರು ವುದನ್ನು ನೋಡಿ, ಉತ್ತರನು ಆತುರದಿಂದ ತನ್ನ ತಂದೆಯನ್ನು ಕುರಿತು, "ಓ ಜನಕಾ! ಕಂಕನನ್ನು ಹೀಗೆ ಹೊಡೆದವರಾರು? ಇಂತಹ ಪಾಪಕಾ ರ್ಯಕ್ಕೆ ಕೈಯಿಕ್ಕಿದವನಾವನು? ಮೃತ್ಯುವಿಗೆ ಆಸೆಪಟ್ಟು ಕೃಷ್ಣಸರ್ಪ

ವನ್ನು ಕಾಲಿಂದ ಮೆಟ್ಟಿದವನಾವನು? ಅಪ್ಪಾ! ಇವನಾದರೋ ಶ್ರೋತ್ರಿಯನು. ಬ್ರಾಹ್ಮಣಶ್ರೇಷ್ಠನು. ಇಂದ್ರನ ಅರ್ಧಾಸನವನ್ನು ಏರುವುದಕ್ಕೆ ಯೋಗ್ಯನು. ಪರಮ ಪೂಜ್ಯನು. ನಮಸ್ಕಾರಯೋಗ್ಯನು. ಇಂತವನನ್ನು ಹೀಗೆ ನೋಯಿಸುವುದೆಂದರೇನು" ಎಂದನು. ಓ ಜನಮೇಜಯ ರಾಜಾ! ಮಗನು ಹೇಳಿದ ಮಾತನ್ನು ಕೇಳಿ ವಿರಾಟನು ಒಳಗೊಳಗೆ ಭಯದಿಂದ ಕದಲಿದ ಮನಸುಳ್ಳವನಾಗಿ, ಹೀಗೆಂದು ಹೇಳುವನು. "ಕುಮಾರಾ! ನಿನ್ನ ವಿಜಯವಾರ್ತೆಯನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಆ ಸಂತೋಷದಿಂದ ಪಗಡೆಯಾಟಕ್ಕಾಗಿ ಇವನನ್ನು ಕರೆದು ಕುಳ್ಳಿರಿಸಿಕೊಂಡು, ಅವನೊಡನೆ ಆಟವಾಡುತ್ತ ವಿನೋದವಾಗಿ ಕಾಲವನ್ನು ಕಳೆಯುತ್ತಿದ್ದೆನು. ಈ ನಡುವೆ ಕುರುಗಳೆಲ್ಲರನ್ನೂ ನನ್ನ ಮಗನಾದ ಉತ್ತರನು ಜಯಿಸಿದನೆಂದು ನಾನು ಹೇಳಿದೆನು. ಅದಕ್ಕೆ ಕಂಕನು, "ಹಾಗಲ್ಲ ಬೃಹನ್ನಳೆಯೇ ಕುರುಗಳನ್ನು ಜಯಿಸಿದ"ಳೆಂದು ಬಾರಿಬಾರಿಗೂ ಹಟ ಹಿಡಿದು ಹೇಳುತ್ತಿದ್ದನು. ನಾನು ನಿನ್ನ ವಿಜಯದ ವಿಷಯವಾಗಿ ಮಾತೆತ್ತಿದಾಗಲೆಲ್ಲ, ಇವನು ಬೃಹನ್ನಳೆಯನ್ನೇ ಸ್ತೋತ್ರಮಾಡುತ್ತ, ಅವಳ ವಿಜಯವನ್ನೇ ಕೊಂಡುತ್ತಿದ್ದನು ಕುಮಾರಾ! ನಾನು ನಿನ್ನನ್ನು ಸ್ತೋತ್ರಮಾಡುವಾಗ, ಆ ಷಂಡನನ್ನು ಇವನು ಹೊಗಳುವುದನ್ನು ಕೇಳಿ ನನಗೆ ಕೋಪವುಂಟಾಯಿತು. ವತ್ಸಾ! ದುರ್ಬುದ್ಧಿಯಿಂದ ಯಾವಾಗಲೂ ಬೇರೆ ಪಕ್ಷವನ್ನೇ ಹಿಡಿದು ವಾದಿಸುತ್ತಿದ್ದ ಈ ಸನ್ಯಾಸಿಯನ್ನು ನಾನೇ ಹೊಡೆದೆನು" ಎಂದನು. ಈ ಮಾತನ್ನು ಕೇಳಿದೊಡನೆಯೇ ಉತ್ತರನಿಗೆ ಮಹಾಕೋಪವುಂಟಾಯಿತು. ಆಗ ಅವನು ತಂದೆಯನ್ನು ಕುರಿತು "ರಾಜಾ! ನೀನು ಮಾಡಬಾರದ ಕಾರ್ಯವನ್ನು ಮಾಡಿದೆ. ಈಗಲೇ ಅವನಲ್ಲಿ ಮನ್ನಣೆಯನ್ನು ಬೇಡು. ಬ್ರಾಹ್ಮಣಕೋಪವೆಂಬ ಭಯಂಕರವಾದ ವಿಷವು ನಿನ್ನನ್ನು ನಿರ್ಮೂಲವಾಗಿ ನಾಶಮಾಡದಂತೆ ನೋಡು. ಸಮೃದ್ಧವಾದ ಮತ್ತು ಪುರಾತನವಾದ ಈ ಮತ್ಸ್ಯಕುಲವು ನಿಶ್ಶೇಷವಾಗಿ ನಾಶವಾಗುವುದಕ್ಕೆ ಮೊದಲೇ, ಇವನನ್ನು ಪ್ರಸನ್ನನನ್ನಾಗಿ ಮಾಡು. ಇವನಿಗೆ ದಂಡಪ್ರಣಾಮವನ್ನು ಮಾಡಿ, ಕೈಗಳಿಂದ ಅವನ ಪಾದಗಳೆರಡನ್ನೂ ಹಿಡಿದು, ಅವನ ಕ್ಷಮೆಯನ್ನು ಪ್ರಾರ್ಥಿಸು. ಜನಕಾ! ಈ ಕಂಕ

ಸನ್ಯಾಸಿಯು ತನ್ನ ಬಲಗೈಯಿಂದ ನಿನ್ನ ಕೈಯನ್ನು ತಟ್ಟಿ, 'ನಾನು ಕ್ಷಮಿಸಿದೆ'ನೆಂದು (ಕೈಮುಟ್ಟಿ) ಪ್ರತಿಜ್ಞೆಮಾಡುವವರೆಗೆ ನೀನು ಅವನ ಕಾಲುಗಳನ್ನು ಬಿಡದೆ ಪ್ರಾರ್ಥಿಸಿ, ಅವನ ಕ್ಷಮೆಯನ್ನು ಬೇಡಬೇಕು'' ಎಂದನು.

ಉತ್ತರನ ಮಾತನ್ನು ಕೇಳಿ ವಿರಾಟನು, ಭಯದಿಂದ ಧರ್ಮರಾಜನ ಕಾಲುಗಳನ್ನು ಹಿಡಿದು ಕ್ಷಮೆಯನ್ನು ಬೇಡಿದನು. ಆಗ ಧರ್ಮರಾಜನು ವಿರಾಟನನ್ನು ಕುರಿತು, ''ರಾಜಾ! ನಾನು ಕ್ಷಮಿಸಿದೆನು. ಎಂದೆಂದಿಗೂ ಕ್ಷಮಿಸಿರುವೆನು. ನನಗೆ ಸ್ವಲ್ಪಮಾತ್ರವೂ ಕೋಪವಿಲ್ಲ. ಆದರೆ, ನನ್ನ ಗಾಯದ ರಕ್ತದಲ್ಲಿ ಒಂದು ಬಿಂದುವಾದರೂ ಭೂಮಿಯಲ್ಲಿ ಬಿದ್ದಿದ್ದರೆ, ನಿನ್ನ ರಾಜ್ಯದೊಡನೆ ನೀನು ಕ್ಷಣವೇ ನಾಶಹೊಂದುತ್ತಿದ್ದೆ. ರಾಜೇಂದ್ರಾ! ಯಾರಿಗೂ ಕೆಡುಕನ್ನು ಮಾಡದ ನನ್ನ ವಿಷಯದಲ್ಲಿ ಬೇರೊಬ್ಬರು ಅಪರಾಧವನ್ನು ಮಾಡಿದರೂ, ನಾನಾಗಿ ಅವರನ್ನು ಕೆಡಿಸುವುದಿಲ್ಲ. ಆ ಪಾಪಕ್ಕೆ ತಕ್ಕ ಫಲವನ್ನು ಅವನು ತಾನಾಗಿಯೇ ಬಹುಶೀಘ್ರದಲ್ಲಿ ಅನುಭವಿಸುವನು'' ಎಂದನು. ಇಷ್ಟರಲ್ಲಿ ಧರ್ಮರಾಜನ ಗಾಯದ ರಕ್ತವೆಲ್ಲವೂ ಸಂಪೂರ್ಣವಾಗಿ ಅರಿಹೋಯಿತು. ಆಮೇಲೆ ಬೃಹನ್ನಳೆಯು ಒಳಗೆ ಬಂದು, ಮೊದಲು ವಿರಾಟನಿಗೆ, ಆಮೇಲೆ ಕಂಕನಿಗೆ ನಮಸ್ಕರಿಸಿ, ಪಕ್ಕದಲ್ಲಿ ನಿಂತಳು. ವಿರಾಟನು ಧರ್ಮರಾಜನ ಕ್ಷಮೆಯನ್ನು ಬೇಡಿ, ಆತನನ್ನು ಪ್ರಸನ್ನನನ್ನಾಗಿಮಾಡಿದಮೇಲೆ, ಯುದ್ಧಶ್ರಮಪಟ್ಟು ಬಂದ ಉತ್ತರನನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು, ಬೃಹನ್ನಳೆಯೊಡನೆ ಆತನನ್ನು ತನ್ನ ಆರಮನೆಗೆ ಕರೆದುಕೊಂಡು ಹೋಗಿ, ಅಲ್ಲಿ ಅರ್ಜುನನಿಗಿದಿರಾಗಿಯೇ ಅವನನ್ನು ಸ್ತೋತ್ರಮಾಡತೊಡಗಿದನು. ಕುಮಾರಾ! ನಿನ್ನಿಂದ ನಾನು ಒಳ್ಳೆಯ ಸುಪುತ್ರವಂತನಾದೆನು. ಕೇಕಯ ಪುತ್ರಿಯಾದ ಸುದೇಷ್ಣೆಗೂ ನೀನು ಆನಂದವರ್ಧಕನು. ನಿನಗೆ ಸಮಾನನಾದ ಪುತ್ರನು ಹಿಂದೆ ಹುಟ್ಟಿದುದೂ ಇಲ್ಲ! ಮುಂದೆ ಹುಟ್ಟುವುದೂ ಇಲ್ಲ! ಆಹಾ! ನಿನ್ನ ಪರಾಪರಾಕ್ರಮನ್ನೇನೆಂದು ಹೇಳಲಿ! ಅಪ್ಪಾ! ಯಾವನು ಸಾವಿರಾರು ಲಕ್ಷ್ಯಗಳನ್ನು ಒಂದೇ ಕಾಲದಲ್ಲಿ ಹೊಡೆಯುವುದಕ್ಕಾಗಿ, ರಣಾಂಗಣದಲ್ಲಿ ಅತ್ತಿತ್ತ

ಸಂಚರಿಸುತ್ತಿದ್ದರೂ, ಒಂದು ಗುರಿಯಾದರೂ ತಪ್ಪದಂತೆ ಸರಿಯಾಗಿ ಹೊಡೆಯುವನೋ ಅಂತಹ ಕರ್ಣನೊಡನೆ ನೀನು ಹೇಗೆ ಯುದ್ಧಮಾಡಿದೆ? ಯುದ್ಧದಲ್ಲಿ ಯಾವನ ಪರಾಕ್ರಮವನ್ನು ನೋಡಿದಮಾತ್ರದಲ್ಲಿಯೇ ಶತ್ರುಗಳ ವೀರ್ಯವೂ, ಪರಾಕ್ರಮವೂ ಅಡಗಿಹೋಗುವುದೋ, ಅಂತಹ ಕೃಪನೊಡನೆ ನೀನು ಹೇಗೆ ಯುದ್ಧದಲ್ಲಿ ಕೈಕಲೆತೆ? ಯಾವನ ಎಣೆಯಿಲ್ಲದ ಕಾರ್ಯವು ಲೋಕಪ್ರಸಿದ್ಧವಾದುದೋ, ಯಾವನು ತನ್ನ ತಂದೆಗಾಗಿ ಕಠಿನವಾದ ಬ್ರಹ್ಮಚರ್ಯವನ್ನು ಹಿಡಿದನೋ, ಯಾವನು ಸಾಕ್ಷಾತ್ ಪರಶುರಾಮನೊಡನೆ ಯುದ್ಧದಲ್ಲಿ ಹೋರಾಡಿದನೋ, ಯಾವನು ಯುದ್ಧದಲ್ಲಿ ಎಂದಿಗೂ ಪರಾಜಯವನ್ನು ಹೊಂದದವನೋ, ವಿದ್ವಾಂಸನೂ, ಶೂರನೂ, ಜಿತೇಂದ್ರಿಯನೂ, ದೃಢವಾಗಿ ಲಕ್ಷ್ಯವನ್ನು ಭೇದಿಸತಕ್ಕವನೂ, ಅತಿವೇಗವಾದ ಹಸ್ತಲಾಘವವುಳ್ಳವನೂ, ಸಮಸ್ತ ಕಾರ್ಯಗಳಲ್ಲಿ ಪ್ರಸಿದ್ಧನೂ ಆದ, ಕುರುವೃದ್ಧನಾದ, ಕೌರವರೆಲ್ಲರಿಗೂ ಪಿತಾಮಹನೆನಿಸಿದ ಆ ಭೀಷ್ಮನೊಡನೆ ನೀನು ಯುದ್ಧಮಾಡಿದ ಬಗೆ ಹೇಗೆ? ಕುಮಾರಾ! ಅವೆಲ್ಲವನ್ನೂ ನನಗೆ ತಿಳಿಸಬೇಕು. ಯಾವನು ತನ್ನ ಬಾಣಗಳಿಂದ ಪರ್ವತವನ್ನೂ ಭೇದಿಸಬಲ್ಲನೋ, ಅಂತಹ ದುರ್ಯೋಧನನನ್ನು ನೀನು ಹೇಗೆ ಇದಿರಿಸಿದೆ? ಯಾವನು ವೃಷ್ಣಿಗಳಿಗೂ, ಪಾಂಚಾಲರಿಗೂ, ಕೌರವ ಪಾಂಡವರಿಗೂ ಸಮಸ್ತ ಕ್ಷತ್ರಿಯಕುಲಕ್ಕೂ ವಿದ್ಯಾಗುರುವೋ, ಯಾವನು ಶಸ್ತ್ರಧಾರಿಗಳಲ್ಲಿ ಮೇಲೆನಿಸಿ, ಸಮಸ್ತಲೋಕದಲ್ಲಿಯೂ ಪ್ರಖ್ಯಾತಿಗೊಂಡಿರುವನೋ ಅಂತಹ ದ್ರೋಣಾಚಾರ್ಯನೊಡನೆ ನೀನು ಹೇಗೆ ಯುದ್ಧಮಾಡಿದೆ? ಯುದ್ಧದಲ್ಲಿ ಆ ದ್ರೋಣಾಚಾರ್ಯನಿಗೆ ಸಮಾನನಾಗಿ, ಆಚಾರ್ಯಪುತ್ರನೆನಿಸಿಕೊಂಡ ಆ ಅಶ್ವತ್ಥಾಮನೊಡನೆ ಹೇಗೆ ಕೈಕಲೆತೆ? ಆ ಧೃತರಾಷ್ಟ್ರಪುತ್ರರಾದರೋ ಒಬ್ಬೊಬ್ಬರೂ ಮಹಾವಿರ್ಯವುಳ್ಳವರು! ಒಬ್ಬೊಬ್ಬರೂ ಮಹಾರಥರು. ಅಂತವರೊಡನೆ ಹೇಗೆ ಯುದ್ಧಮಾಡಿದೆ?'' ಎಂದನು.

ಆದಕ್ಕೆ ಉತ್ತರನು, '' ಮಹಾರಾಜಾ! ನಾನು ಕೌರವರನ್ನು ಜಯಿಸಿದವನೂ ಅಲ್ಲ. ಗೋವುಗಳನ್ನು ಬಿಡಿಸಿತಂದವನೂ ನಾನಲ್ಲ. ದೇವಕುಮಾರನಾದ ಯಾವನೋ ಒಬ್ಬನಿಂದ ಈ ಕಾರ್ಯಗಳೆಲ್ಲವೂ ನಡೆಯಿ

ತು. ನಾನು ಯುದ್ಧಕ್ಕೆ ಹೋದೊಡನೆ, ಭೀಷ್ಮ ದ್ರೋಣರೇ ಮೊದಲಾದ ಕುರುಗಳನ್ನು ನೋಡಿ ಭಯಪಟ್ಟು ಓಡಲಾರಂಭಿಸಿದೆನು. ಆ ದೇವ ಪುತ್ರನೇ ಆಗ ನನ್ನನ್ನು ತಡೆದು ನಿಲ್ಲಿಸಿದನು. ಆ ದೇವಕುಮಾರನೇ ವಜ್ರಪಾಣಿಯಾದ ದೇವೇಂದ್ರನಂತೆ ರಥಮಧ್ಯದಲ್ಲಿ ಕುಳಿತು, ನಮ್ಮ ಗೋವುಗಳನ್ನು ಜಯಿಸಿ ತಂದನು. ಅವನಿಂದಲೇ ಕೌರವರು ಪರಾಜಿತರಾಗಿ ಓಡಿದರು. ಇವೆಲ್ಲವೂ ಆತನ ಕಾರ್ಯವೇ ಹೊರತು ಅಲ್ಲಿ ನಾನು ಮಾಡಿದುದೇನೂ ಇಲ್ಲವು. ಆತನೇ ಆ ಯುದ್ಧದಲ್ಲಿ ಕೃಪನನ್ನೂ, ದ್ರೋಣನನ್ನೂ, ಅಶ್ವತ್ಥಾಮನನ್ನೂ, ಕರ್ಣನನ್ನೂ, ಭೀಷ್ಮನನ್ನೂ ರಣರಂಗದಿಂದ ಓಡಿಸಿದವನು. ಮದದಾನೆಯಂತೆ ಕೊಬ್ಬಿದ ಆದು ರ್ಯೋಧನನನ್ನೂ ಯುದ್ಧದಲ್ಲಿ ಸೋಲಿಸಿದುದಲ್ಲದೆ, ಅವನು ಭಯದಿಂದ ಪಲಾಯನಮಾಡಿದಾಗ ಅವನನ್ನು ಕರೆದು, "ದುರ್ಯೋಧನಾ! ಹಸ್ತಿನಪುರಕ್ಕೆ ಹೋದರೂ ಅಲ್ಲಿಯೂ ನಿನಗೆ ರಕ್ಷಕರಿರುವಂತೆ ಕಾಣಲಿಲ್ಲ. ನೀನು ಓಡಿಹೋಗಿ ನಿನ್ನ ನಗರದಲ್ಲಿ ಅಡಗಿಕೊಂಡರೂ ಅಲ್ಲಿ ನೀನು ಭೋಗಗಳನ್ನೇನೂ ಅನುಭವಿಸಲಾರೆ. ಆದುದರಿಂದ ಓ ಕೌರವಾ! ನೀನು ಈ ಯುದ್ಧದಿಂದಲೇ ನಿನ್ನ ಜೀವವನ್ನು ಸಾರ್ಥಕಗೊಳಿಸು. ನೀನು ಓಡಿದರೂ ನಿನ್ನನ್ನು ಬಿಡುವವರಾಗಿಲ್ಲ. ಯುದ್ಧದಲ್ಲಿ ಮನಸ್ಸಿಡು. ಈ ಯುದ್ಧದಲ್ಲಿ ನೀನು ಜಯಿಸಿದರೆ, ರಾಜ್ಯಭೋಗವನ್ನನುಭವಿಸಬಹುದು. ಅಥವಾ ಸತ್ತರೆ ಸ್ವರ್ಗದಲ್ಲಿ ಸುಖವನ್ನನುಭವಿಸಬಹುದು. (ಯುದ್ಧದಿಂದೋಡಿಹೋಗಿ ಇಹಪರಗಳೆರಡನ್ನೂ ಕೆಡಿಸಿಕೊಳ್ಳಬೇಡ)" ಎಂದನು. ಈ ಮಾತನ್ನು ಕೇಳಿದೊಡನೆ ದುರ್ಯೋಧನನು ಕೋಪಗೊಂಡು, ವಜ್ರಸಮಾನಗಳಾದ ಬಾಣಗಳನ್ನು ಬಿಡುತ್ತ, ಭೀಷ್ಮ, ದ್ರೋಣ ಕೃಪಾದಿಗಳೊಡನೆ ಹಿಂತಿರುಗಿ ಬಿಟ್ಟನು. ಈ ಸಂಭವಗಳನ್ನು ನೋಡಿ ನನಗೆ ಭಯದಿಂದ ಮೈಯಲ್ಲಿ ರೋಮಾಂಚವೆದ್ದಿತು. ನನ್ನ ತೊಡೆಗಳೂ, ಕೈಕಾಲುಗಳೂ ಆಡದಂತೆ ಸ್ತಬ್ಧವಾದುವು. ಜನಕಾ! ಇಷ್ಟರಲ್ಲಿಯೇ ಸಿಂಹದಂತೆ ದರ್ಪವುಳ್ಳ ಆ ದೇವಕುಮಾರನು, ಮಹಾಮೇಘದಂತೆ ಬರುತಿದ್ದ ಸೈನ್ಯವನ್ನೆಲ್ಲ ಬಾಣಗಳಿಂದ ತೂರಿಬಿಟ್ಟನು. ರಥ ಸೈನ್ಯಗಳನ್ನೆಲ್ಲ ಓಡಿಸಿದನು. ಬುಸುಗುಟ್ಟುವ ಸರ್ಪದಂತೆ ಮೇಲೆಬಿದ್ದು ಕುರುಗಳನ್ನೂ ಓಡಿಸಿದನು. ಶೂರನಾದ ಅವನೊಬ್ಬನಿಂದಲೇ ಆರುಮಂದಿ

ರಥಿಕರೂ, ಕೊಬ್ಬಿದ ಹುಲಿಯಿಂದ ಜಿಂಕೆಗಳು ಹೇಗೋಹಾಗೆ ಪರಾಜಿತರಾದರು. ಕುದುರೆಗಳೂ, ಆನೆಗಳೂ, ಧನುರ್ಧಾರಿಗಳಾದ ವೀರರ ಸಮೂಹವೂ ಸಹಸ್ರಸಂಖ್ಯೆಯಿಂದ ಹತವಾದುವು. ಕುರುಸೈನ್ಯವೆಲ್ಲ ಭಗ್ನವಾಯಿತು. ಆ ದೇವಕುಮಾರನು ಕರ್ಣನನ್ನು ನೂರು ಬಾಣಗಳಿಂದ ಹೊಡೆದು, ಅವನ ಕುದುರೆಗಳನ್ನೆಲ್ಲ ಕೊಂದು, ಸಮ್ಮೋಹನಾಸ್ತ್ರದಿಂದ ಅವನನ್ನೂ ಮೋಹಗೊಳಿಸಿ, ಅವನ ಕೆಂಪುವಸ್ತ್ರವನ್ನು ಸೆಳೆದುತಂದನು. ಭೀಷ್ಮನನ್ನು ನಾಲ್ಕು ಬಾಣಗಳಿಂದ ನೋಯಿಸಿ, ಅವನ ಕುದುರೆಗಳನ್ನು ಕೊಂದನು. ಆದರೆ, ಅವನನೊಬ್ಬನ ವಸ್ತ್ರವನ್ನುಮಾತ್ರ ತೆಗೆದುಕೊಳ್ಳಲಿಲ್ಲ. ದುರ್ಯೋಧನನನ್ನು ಏಳು ಬಾಣಗಳಿಂದ ಹೊಡೆದು, ಅವನ ಕುದುರೆಗಳನ್ನೂ ಪ್ರಹರಿಸಿ, ಅವನ ಹೊಂಬಟ್ಟೆಯನ್ನು ತಂದನು. ಹಾಗೆಯೇ ಆದೇವಕುಮಾರನು, ದ್ರೋಣ, ಕೃಪ, ಸೋಮದತ್ತ, ಜಯದ್ರಥರನ್ನೂ, ಭೂರಿಶ್ರವಸ್ಸನ್ನೂ, ಶಕುನಿಯನ್ನೂ, ದುಶ್ಶಾಸನಾದಿಗಳನ್ನೂ ಮೂರುಮೂರು ಬಾಣಗಳಿಂದ ಹೊಡೆದು, ಅವರ ಮೈಮೇಲಿದ್ದ ಬೆಲೆಯುಳ್ಳ ವಿವಿಧವಸ್ತ್ರಗಳನ್ನು ತಂದನು. ಅಶ್ವತ್ಥಾಮನನ್ನು ಎರಡು ಬಾಣಗಳಿಂದ ಹೊಡೆದು, ವಿಕರ್ಣನ ಬಿಲ್ಲನ್ನೂ ಕತ್ತರಿಸಿ, ಅವರ ಮೈಮೇಲಿದ್ದ ಎರಡು ನೀಲವಸ್ತ್ರಗಳನ್ನು ತಂದನು'' ಎಂದನು. ಆಗ ವಿರಾಟನು ''ಕುಮಾರ! ನೀನು ಹೇಳಿದ ಆ ವೀರನೆಲ್ಲಿರುವನು? ಮಹಾಯಶಸ್ವಿಯಾದ ಆ ದೇವಕುಮಾರನು ಈಗ ಎಲ್ಲಿ ಹೋಗಿರುವನು? ಯುದ್ಧದಲ್ಲಿ ಕುರುಗಳ ಕೈಗೆ ಸಿಕ್ಕಿಬೀಳುತ್ತಿದ್ದ ನನ್ನ ಪುತ್ರನನ್ನು (ನಿನ್ನನ್ನು) ಕಾಪಾಡಿದ ಆ ಮಹಾಬಾಹುವೆಲ್ಲಿ? ಅವನನ್ನು ಈಗಲೇ ನೋಡಿ ಸತ್ಕರಿಸಬೇಕೆಂದು ನನ್ನ ಮನಸ್ಸು ಬಹಳವಾಗಿ ತವಕಿಸುತ್ತಿದೆ. ಯಾವ ದೇವಕುಮಾರನು ನನ್ನ ಮಗನನ್ನೂ, ನನ್ನ ಗೋವುಗಳನ್ನೂ ಶತ್ರುಗಳಿಂದ ಕಾಪಾಡಿದನೋ, ಅವನಿಗೆ ಈಗಲೇ ನನ್ನ ಮಗಳನ್ನೂ, ಅನೇಕಗ್ರಾಮಗಳನ್ನೂ, ಸುವರ್ಣಗಳನ್ನೂ, ಒಳ್ಳೇ ರತ್ನಖಚಿತವಾದ ಉಡೆದಾರವನ್ನೂ, ನೂರುಸಾವಿರಮಂದಿ ಸ್ತ್ರೀಯರನ್ನೂ ಕೊಡುವೆನು'' ಎಂದನು. ಅವಕ್ಕಾ ಉತ್ತರನು ''ಜನಕಾ! ಪ್ರತಾಪಶಾಲಿಯಾದ ಆ ದೇವಕುಮಾರನು ಆಗಲೇ ಕಣ್ಮರೆಯಾದನು.

ಆದರೆ ಈಗಲೋ, ನಾಳೆಯೋ, ತಪ್ಪಿದರೆ ನಾಡಿದ್ದೋ ಅವನು ತಿರುಗಿ ನಮಗೆ ಕಾಣಿಸಿಕೊಳ್ಳಬಹುದು'' ಎಂದನು.

ಓ ಜನಮೇಜಯರಾಜಾ! ಇಷ್ಟು ಹೇಳಿದರೂ, ತನ್ನ ಸಮಿಾಪದಲ್ಲಿಯೇ ವೇಷವನ್ನು ಮರೆಸಿಕೊಂಡು ನಿಂತಿದ್ದ ಅರ್ಜುನನನ್ನು ವಿರಾಟನು ತಿಳಿಯಲಾರದೆ ಹೋದನು. ಅಮೇಲೆ ಅರ್ಜುನನು ವಿರಾಟನ ಅನುಮತಿಯನ್ನು ಪಡೆದು, ಉತ್ತರನನ್ನು ಮಾತಾಡಿಸಿ, ''ನೀನು ರಾಜನಿಗೆ ಹೀಗೆಯೇ ಹೇಳುತ್ತಿರು'' ಎಂದು ಸೂಚಿಸಿ, ಅಲ್ಲಿಂದ ಅಂತಃಪುರಕ್ಕೆ ಬಂದನು. ಅಲ್ಲಿ ವಿರಾಟಪುತ್ರಿಯಾದ ಉತ್ತರೆಗೆ ತಾನು ತಂದಿದ್ದ ಬೆಲೆಯುಳ್ಳ ವಸ್ತ್ರಾಭರಣಗಳೆಲ್ಲವನ್ನೂ ತನ್ನ ಕೈಯಿಂದಲೇ ಕೊಟ್ಟನು. ಉತ್ತರೆಯು ಅವನ್ನೆಲ್ಲ ಸ್ವೀಕರಿಸಿ, ತನ್ನ ಸಖಿಯರೊಡನೆ ಸಂತೋಷದಿಂದಿದ್ದಳು.

ಇದು ಎಪ್ಪತ್ತೆರಡನೆಯ ಅಧ್ಯಾಯವು.

ಭೀಮಾರ್ಜುನಾದಿಗಳು ಆ ರಾತ್ರಿ ಧರ್ಮರಾಜನ ಬಳಿಗೆ ಬಂದುದು. ಯುಧಿಷ್ಠಿರನು ಎಂದಿನಂತೆ ಸಂತೋಷದಿಂದ ಮಾತಾಡಿಸದಿದ್ದುದನ್ನು ನೋಡಿ, ಅರ್ಜುನನು ಭೀಮನನ್ನು ಪ್ರಶ್ನೆಮಾಡಿದಾಗ, ಯುಧಿಷ್ಠಿರನು ಕಾರಣವನ್ನು ತಿಳಿಸಿದುದು. ಭೀಮಾರ್ಜುನರು ವಿರಾಟನನ್ನು ಕೊಲ್ಲುವುದಕ್ಕೆ ಯತ್ನಿಸಲು, ಧರ್ಮರಾಜನು ಅವರನ್ನು ತಡೆದುದು.

ಓ ಜನಮೇಜಯರಾಜಾ! ಹೀಗೆ ಅರ್ಜುನನು ಉತ್ತರೆಗೂ, ಅವಳ ಸಖಿಯರಿಗೂ ತಾನು ತಂದ ವಸ್ತ್ರಾಭರಣಾದಿಗಳನ್ನು ಕೊಟ್ಟು, ತಾನು ಯುದ್ಧದಲ್ಲಿ ದೊಡ್ಡ ಕಾರ್ಯವನ್ನು ನಡೆಸಿ ಬಂದನೆಂಬೆಲೆ, ಯುಧಿಷ್ಠಿರನನ್ನು ಏಕಾಂತವಾಗಿ ನೋಡುವುದಕ್ಕಾಗಿ ಅಣ್ಣನ ನಿವಾಸಕ್ಕೆ ಹೋದನು. ಅಲ್ಲಿ ಧರ್ಮರಾಜನ ಮುಖದಲ್ಲಿ ಎಂದಿನಂತೆ ಉಲ್ಲಾಸವಿಲ್ಲದುದನ್ನು ಕಂಡು, ಪಕ್ಕದಲ್ಲಿದ್ದ ಭೀಮನನ್ನು ಕುರಿತು, ''ಅಣ್ಣ ಭೀಮಸೇನಾ! ಇದೇನಿದು?

ನಮ್ಮ ಹಿರಿಯಣ್ಣನು ಎಂದಿನಂತೆ ಹರ್ಷಯುಕ್ತನಾಗಿ ನಮ್ಮನ್ನು ಮಾತಾಡಿಸದೆ ಮುಖವನ್ನು ಮುಚ್ಚಿಕೊಂಡಿರಲು ಕಾರಣವೇನು?'' ಎಂದು ಪ್ರಶ್ನೆ ಮಾಡಿದನು. ಹೀಗೆ ಶಂಕಿಸುತ್ತಿರುವ ಭೀಮಾರ್ಜುನರನ್ನು ನೋಡಿ ಧರ್ಮರಾಜನು, ತನ್ನ ಮುಖದಲ್ಲಿದ್ದ ರಕ್ತವನ್ನು (ಕೆಳಗೆ ಬಿಳದಂತೆ) ಚೆನ್ನಾಗಿ ಒರೆಸಿಕೊಂಡು, '' ಅರ್ಜುನಾ! ನಿನ್ನನ್ನು ನಾನು ಪ್ರಶಂಸೆಮಾಡುತ್ತಿದ್ದಾಗ, ಅದನ್ನು ಕೇಳಿ ಸಹಿಸಲಾರದೆ ಬುದ್ಧಿಹೀನನಾದ ವಿರಾಟನು ನನ್ನನ್ನು ದಾಳದಿಂದ ಹೊಡೆದನು. ಆ ಗಾಯದಿಂದ ರಕ್ತವು ಬರುವುದನ್ನು ಕಂಡು ಆ ರಕ್ತಬಿಂದುವು ಭೂಮಿಯಲ್ಲಿ ಬೀಳದಹಾಗೆ, ಮುಖಕ್ಕೆ ಬಟ್ಟೆಯನ್ನು ಒತ್ತಿ ಹಿಡಿದು ಕೋಪವನ್ನಡಗಿಸಿಕೊಂಡು ಕುಳಿತೆನು. ಓ ಶುಭಾರ್ಹನೆ! ನೀನಾದರೂ ಈಗ ಕೋಪಿಸಬಾರದು. ನಾವು ಇದುವರೆಗೆ ಸುಖವಾಗಿ ವಾಸಮಾಡಿದ ಈ ಮತ್ಸ್ಯರಾಷ್ಟ್ರವು ನಷ್ಟವಾಗದಂತೆ ನೀನು ತಾಳ್ಮೆಯನ್ನು ವಹಿಸು. ವೀರನಾದ ನೀನು ಕೋಪಿಸಿಕೊಂಡರೆ ವಿರಾಟನು ಸುಖದಿಂದ ಬದುಕಲಾರನು. ವತ್ಸ ಪಾರ್ಥ! ವೇಷವನ್ನು ಮರೆಸಿಕೊಂಡಿದ್ದ ನಿನ್ನ ಶೌರ್ಯವನ್ನೂ, ಬಲವನ್ನೂ, ತಿಳಿಯದ ಆ ವಿರಾಟನು ನನ್ನಲ್ಲಿ ಈ ಅಪರಾಧವನ್ನು ಮಾಡಿಬಿಟ್ಟನು. ಈಗ ನಿನ್ನನ್ನು ಕಂಡೂ ನಾನು ಸಂತೋಷದಿಂದ ಮಾತಾಡಿಸದಿದ್ದುದಕ್ಕೆ ಇದೇ ಕಾರಣವು'' ಎಂದನು,

ಅಪ್ರಮೇಯಪ್ರಭಾವವುಳ್ಳವನೂ, ಮಹಾಬಲಾಢ್ಯನೂ, ಕ್ಷಮಾಶೀಲನೂ ಆದ ಧರ್ಮರಾಜನು ಇಷ್ಟು ಸಮಾಧಾನದಿಂದ ಹೇಳಿದರೂ, ಕೋಪಸ್ವಭಾವವುಳ್ಳ ಭೀಮನು ಆಗ್ರಹವನ್ನು ತಡೆಯಲಾರದೆ, ತನ್ನಂತೆಯೇ ಕೋಪಗೊಂಡಿದ್ದ ಅರ್ಜುನನನ್ನು ನೋಡಿ '' ವತ್ಸ ಪಾರ್ಥ! ಜ್ಞಾನಿಗಳೊಳಗೆಲ್ಲ ಮೇಲೆನಿಸಿದ ಬೃಹಸ್ಪತಿಯು, 'ತಾಳ್ಮೆಯೆಂಬುದು ಯಾವಾಗಲೂ ಇರಬೇ'ಕೆಂದು ಹೇಳಲಿಲ್ಲ. ಅದಕ್ಕೂ ಕಾಲವುಂಟು. ಯಾವಾಗಲೂ ತಾಳ್ಮೆಯೇ ಸ್ವಭಾವವಾಗಿ ಉಳ್ಳವನು, ವಿಷವೇಗವಿಲ್ಲದ ಸರ್ಪದಂತೆ ಎಲ್ಲರಿಂದಲೂ ಪರಾಭವಿಸಲ್ಪಡುವನು. ಆದುದರಿಂದ, ಈಕ್ಷಣವೇ ನಾವು ಆ ವಿರಾಟನನ್ನು ಪುತ್ರಪೌತ್ರ ಸೈನ್ಯಾದಿಗಳೊಡನೆ ಕೊಂದು, ಅವನ ವಂಶವನ್ನೇ

ನಿರ್ಮೂಲಮಾಡಿ, ಈಗಲೇ ನಮ್ಮ ಅಣ್ಣನಾದ ಧರ್ಮರಾಜನನ್ನು ಈ ರಾಜ್ಯಕ್ಕೆ ಅಧಿಪತಿಯನ್ನಾಗಿ ಮಾಡುವೆವು. ಆ ಮಾತ್ಸ್ಯನು ನಮಗೆ ದೊಡ್ಡ ವೈರಿಯಾಗಿರುವನು. ಕೀಚಕನು ಪಾಂಚಾಲಪುತ್ರಿಯಾದ ಕೃಷ್ಣೆಯನ್ನು ಪರಾಭವಿಸುವುದಕ್ಕೆ ಬಂದಾಗಲೂ ಇವನು ಅವಳನ್ನು ರಕ್ಷಿಸದೆ ಉಪೇಕ್ಷಿಸಿದನಲ್ಲವೆ? ಆದುದರಿಂದ ಆ ವಿರಾಟನು 'ರಾಜ' ನೆನಿಸಿಕೊಳ್ಳುವುದಕ್ಕೇ ಅರ್ಹನಲ್ಲ! ಅಣ್ಣಾ! ಈ ಅರ್ಜುನನ ವೀರ್ಯಬಲದಿಂದ ಇಲ್ಲಿಗೆ ನೀನೇ ರಾಜನಾಗಿರು. ಅರ್ಜುನಾ! ಈ ಯುಧಿಷ್ಠಿರನು ಕುರುದೇಶಗಳಿಗೆ ರಾಜನಾಗುವಂತೆ ಮಾತ್ಸ್ಯದೇಶಗಳಿಗೂ ರಾಜನಾಗಲಿ! ತುಂಬಿದ ಮಡಕೆಯನ್ನು ಕಲ್ಲಿನಮೇಲೆ ಕುಕ್ಕಿ ಒಡೆಯುವಂತೆ, ಆ ವಿರಾಟನ ದೇಹವನ್ನು ನೂರಾರು ಶಕಲಗಳಾಗಿ ಭೇದಿಸುವೆನು" ಎಂದನು. ಆಗ ಅರ್ಜುನನು ಧರ್ಮರಾಜನನ್ನು ನೋಡಿ "ಅಣ್ಣಾ! ನಿನ್ನ ಈ ತಾಳ್ಮೆಯಿಂದಲೇ ನಮಗೆ ಈ ಎಲ್ಲಾ ಕಷ್ಟಗಳೂ ಬಂದುವು. ಈಗಲೇ ನಾನು ಆ ವಿರಾಟನನ್ನು ಪುತ್ರ, ಮಿತ್ರ, ಜ್ಞಾತಿ ಬಾಂಧವ ಸೈನ್ಯವಾಹನಗಳೊಡನೆ ಸಂಹರಿಸಿ, ಆಮೇಲೆ ಕೌರವರನ್ನು ಕೊಲ್ಲುವೆನು" ಎಂದನು. ಭೀಮಾದಿಗಳೆಲ್ಲರೂ "ಅದೇ ಸರಿ" ಎಂದರು. ಆಗ ಧರ್ಮರಾಜನು, "ಸಹೋದರರೆ! ಸ್ವಲ್ಪ ತಾಳಿರಿ! ಆ ವಿರಾಟನು ಈಗಲಾದರೂ ಪತ್ನೀಸಮೇತನಾಗಿ ಬಂದು ನಮ್ಮಲ್ಲಿ ಕ್ಷಮೆಯನ್ನು ಬೇಡದಿದ್ದರೆ, ಆಗ ಅವನು ವಧ್ಯನೇ! ಅರ್ಜುನಾ! ದುರಾತ್ಮನಾದರೂ ಈ ವಿರಾಟನನ್ನು ಈಗಲೇ ಕೊಲ್ಲಬಾರದು. ನಾವೆಲ್ಲರೂ ನಾಳೆ ಬೆಳಗ್ಗೆ ಈ ವೇಷಾಂತರವನ್ನೆಲ್ಲ ತೆಗೆದು, ರಾಜವೇಷದಿಂದ ಹೋಗಿ, ವಿರಾಟನ ಸಿಂಹಾಸನದಲ್ಲಿ ಕುಳಿತುಬಿಡುವೆವು. ವಿರಾಟನು ಆಗಲೂ ನಮ್ಮನಾಗದ ಪಕ್ಷದಲ್ಲಿ, ಅವನನ್ನು ತೀರಿಸಿಬಿಡುವೆವು" ಎಂದನು. ಹೀಗೆಂದು ನಿಶ್ಚಯ ಮಾಡಿಕೊಂಡು, ಆ ಪಾಂಡವರೆಲ್ಲರೂ ಆ ರಾತ್ರಿಯನ್ನು ಕಳೆದರು. ಅತ್ತ ಲಾಗಿ ವಿರಾಟನೂ ತನ್ನ ಕುಮಾರನೊಡನೆ ಸಂತೋಷದಿಂದ ರಾತ್ರಿಯನ್ನು ಕಳೆದನು. ಇದು ಎಪ್ಪತ್ತುಮೂರನೆಯ ಅಧ್ಯಾಯವು.

ಇಲ್ಲಿಗೆ ಗೋಗ್ರಹಣಪರ್ವವು ಮುಗಿದುದು.

ವೈವಾಹಿಕ ಪರ್ವವು.

ಯುದ್ಧವಾದ ಮರುದಿನದ ಬೆಳಗ್ಗೆ, ಪಾಂಡವರು ರಾಜಯೋಗ್ಯಗಳಾದ ಅಲಂಕಾರಗಳಿಂದ ವಿರಾಟನ ಸಿಂಹಾಸನವನ್ನೇರಿ ಕುಳಿತುದು. ವಿರಾಟನು ಬಂದು ನೋಡಿ ಅವರನ್ನು ಆಕ್ಷೇಪಿಸಿದುದು. ಅರ್ಜುನನು ಧರ್ಮರಾಜನ ಗುಣಾತಿಶಯವನ್ನು ಕೊಂಡಾಡಿ, ಅವನೇ ರಾಜಾಸನವನ್ನೇರುವುದಕ್ಕೆ ಅರ್ಹನೆಂದು ತಿಳಿಸಿದುದು.

ಓ ಜನಮೇಜಯರಾಜಾ! ಪಾಂಡವರು ನಿಶ್ಚಯಿಸಿಕೊಂಡಂತೆ, ಮಾರನೆಯ ದಿನದಲ್ಲಿ, ಆ ಐದು ಮಂದಿ ಸಹೋದರರೂ, ಸ್ನಾನಮಾಡಿ, ಬಿಳೀ ದುಕೂಲಗಳನ್ನುಟ್ಟು, ತಮ್ಮ ನಿತ್ಯವ್ರತಗಳನ್ನು ತೀರಿಸಿ ಆಮೇಲೆ, ಯುಧಿಷ್ಠಿರನನ್ನು ಮುಂದಿಟ್ಟುಕೊಂಡು ವಿರಾಟನ ಸಭೆಯನ್ನು ಪ್ರವೇಶಿಸಿ, ಸಿಂಹಾಸನಗಳನ್ನೇರಿ ಕುಳಿತು ಬಿಟ್ಟರು. ಮಹಾತ್ಮರೂ ಮಹಾರಥರೂ ಆದ ಆ ಪಾಂಡವರೈವರೂ, ಸರ್ವಾಲಂಕಾರಭೂಷಿತರಾಗಿ, ಯಾಗಾಗ್ನಿಗಳಂತೆ ತೇಜಸ್ಸಿನಿಂದ ಜ್ವಲಿಸುತ್ತಿದ್ದರು. ಇಷ್ಟರಲ್ಲಿ ವಿರಾಟನೂ ಕೂಡ ರಾತ್ರಿಯು ಕಳೆದು ಬೆಳಗಾದಮೇಲೆ, ಪ್ರಾತರಾಹ್ನಿಕಗಳನ್ನು ಮುಗಿಸಿಕೊಂಡು, ಬ್ರಾಹ್ಮಣರಿಗೆ ವಿಧ್ಯುಕ್ತವಾಗಿ ಗೋದಾನ ಹಿರಣ್ಯದಾನಾದಿಗಳನ್ನು ಮಾಡಿ, ತನ್ನ ಮಗನಾದ ಉತ್ತರನೊಡನೆ ರಾಜಸಭೆಗೆ ಬಂದನು. ಅಲ್ಲಿ ರಾಜಲಕ್ಷಣಯುಕ್ತರಾಗಿ ಅಗ್ನಿಯಂತೆ ದಿವ್ಯತೇಜಸ್ಸಿನಿಂದ ಜ್ವಲಿಸುತ್ತ ತಾನು ಕುಳಿತುಕೊಳ್ಳಬೇಕಾದ ಸಿಂಹಾಸನವನ್ನೇರಿ ಕುಳಿತಿದ್ದ ಆ ಹೊಸವ್ಯಕ್ತಿಗಳನ್ನು ನೋಡಿ, ಆಶ್ಚರ್ಯಪರವಶನಾದನು. ಅವನ ಮನಸ್ಸಿಗೆ ಭೀತಿಯೂ ಹುಟ್ಟಿತು. ತನಗುಂಟಾದ ಅವಮಾನಕ್ಕಾಗಿ ಸಂಕಟವೂ ಉಂಟಾಯಿತು. ಆಗ ವಿರಾಟನು "ಏನಿದು? ಎಂತಹ ಅಕಾರ್ಯವಿದು?" ಎಂದು ಚಿಂತಾಕುಲನಾಗಿ, ದೇವತೆಗಳಿಂದ ಪರಿವೃತನಾದ ದೇವರಾಜನಂತೆ ತನ್ನ ಸಹೋದರರಿಂದ ಪರಿವೃತನಾಗಿ ನಡುವೆ ಕುಳಿತಿದ್ದ

ಧರ್ಮರಾಜನನ್ನು ಕುರಿತು "ನನಗೆ ಸಭಾಸ್ತಾರನಾಗಿ, ನನ್ನೊಡನೆ ಪಗಡೆಯಾಡುತಿದ್ದ ಕಂಕನಲ್ಲವೇ ನೀನು? ಸನ್ಯಾಸಿಯಾದ ನೀನು ಹೀಗೆ ರಾಜಯೋಗ್ಯಗಳಾದ ಅಲಂಕಾರಗಳನ್ನು ಮಾಡಿಕೊಂಡು, ಹೀಗೆ ನನ್ನ ಸಿಂಹಾಸನವನ್ನೇರಿ ಕುಳಿತುಕೊಳ್ಳುವುದೆಂದರೇನು?" ಎಂದನು.

ಓ ಜನಮೇಜಯರಾಜಾ! ವಿರಾಟನು ಹೇಳಿದ ಈ ಮಾತನ್ನು ಕೇಳಿ ಅರ್ಜುನನು, ಅವನನ್ನು ಮತ್ತಷ್ಟು ಪರಿಹಾಸಮಾಡಬೇಕೆಂಬ ಉದ್ವೇಶದಿಂದ, ನಗುಮುಖದೊಡನೆ ಹೀಗೆಂದು ಹೇಳುವನು. "ಓ ರಾಜಾ! ಇವನು ಇಂದ್ರನ ಅರ್ಧಾಸನವನ್ನೇರುವುದಕ್ಕೂ ಅರ್ಹನೆಂದು ತಿಳಿ! ಇವನನ್ನು ಯಾರೆಂದು ಬಲ್ಲೆ! ಬ್ರಾಹ್ಮಣಪ್ರಿಯನು. ಶಾಸ್ತ್ರಜ್ಞನು. ತ್ಯಾಗಿಯು. ಸಮಸ್ತಲೋಕಗಳಿಂದಲೂ ಪೂಜಿಸಲ್ಪಡತಕ್ಕವನು. ಧರ್ಮವೇ ಮೂರ್ತೀಭವಿಸಿದಂತಿರುವನು. ವೀರ್ಯವಂತರಲ್ಲಿ ಶ್ರೇಷ್ಠನು. ಬುದ್ಧಿಯಲ್ಲಿಯೂ ಮೇಲೆನಿಸಿದನು. ತಪಸ್ಸುಗಳಿಗೆಲ್ಲ ಆಶ್ರಯಭೂತನು. ಚರಾಚರಾತ್ಮಕವಾದ ತ್ರೈಲೋಕ್ಯದಲ್ಲಿ ಯಾವಯಾವ ಅಸ್ತ್ರಗಳುಂಟೋ ಅಂತಹ ವಿವಿಧಾಸ್ತ್ರಗಳನ್ನೂ ಇವನು ಬಲ್ಲನು. ಇವನಂತೆ ಅಸ್ತ್ರಗಳನ್ನು ತಿಳಿದವನು ಬೇರೊಬ್ಬನಿಲ್ಲ. ಮುಂದೆ ಎಂದಾದರೂ ಇವನಂತೆ ತಿಳಿಯಬಲ್ಲವನೂ ಇರಲಾರನು. ದೇವಾಸುರ ಮನುಷ್ಯರಲ್ಲಿಯಾಗಲಿ, ಯಕ್ಷರಾಕ್ಷಸ ಗಂಧರ್ವ ನಾಗ ಕಿನ್ನರರಲ್ಲಿಯಾಗಲಿ, ಇವನಿಗೆ ಸಮಾನರಿಲ್ಲ. ಇವನು ಬಹಳ ದೂರದೃಷ್ಟಿಯುಳ್ಳವನು. ಮಹಾತೇಜಸ್ವಿಯು. ಪುರವಾಸಿಗಳಿಗೂ, ದೇಶವಾಸಿಗಳಿಗೂ ಪ್ರಿಯನಾದವನು. ಪಾಂಡವರಲ್ಲಿ ಅತಿರಥನು. ಯಜ್ಞಧರ್ಮಗಳಲ್ಲಿ ನಿತ್ಯನಿರತನು. ಜಿತೇಂದ್ರಿಯನು. ಮಹರ್ಷಿಗಳಿಗೆ ಸಮಾನನು. ರಾಜರ್ಷಿಯು. ಸರ್ವಲೋಕಗಳಲ್ಲಿ ಪ್ರಖ್ಯಾತವಾದ ಬಲವೂ, ಧೈರ್ಯವೂ, ಸಾಮರ್ಥ್ಯವೂ ಉಳ್ಳವನು. ಸತ್ಯವಾದಿಯು. ಐಶ್ವರ್ಯದಲ್ಲಿಯೂ, ಧನಸಮೃದ್ಧಿಯಲ್ಲಿಯೂ ಇಂದ್ರಕುಬೇರರಿಗೆ ಸಮಾನನು. ಮಹಾತೇಜಸ್ವಿಯಾದ ಮನುವು ಹೇಗೆ ಲೋಕರಕ್ಷಕನೆನಿಸಿದನೋ, ಹಾಗೆ ಇವನೂ ಪ್ರಜೆಗಳನ್ನು ಪ್ರೀತಿಯಿಂದ ಕಾಪಾಡತಕ್ಕವನು. ಓ ರಾಜಾ! ಕುರುಗಳಿಗೆಲ್ಲ ಉತ್ತಮನೆನಿಸಿದ ಕುಂತೀಪುತ್ರನಾದ ಆ ಯುಧಿಷ್ಠಿರನೇ

ಈತನು. ಉದಿಸುವ ಸೂರ್ಯನ ಪ್ರಭೆಯಂತೆ ಇವನ ಕೀರ್ತಿಯು ಸಮಸ್ತ ದಿಕ್ಕುಗಳನ್ನೂ ವ್ಯಾಪಿಸಿದೆ. ಎಲೈ ರಾಜನೇ! ಇವನು ಕುರುರಾಜ್ಯವನ್ನಾಳುತ್ತಿದ್ದಾಗ, ಉದಿಸುವ ಸೂರ್ಯನ ತೇಜಸ್ಸನ್ನು ಹಿಂಬಾಲಿಸುವ ಕಿರಣಗಳಂತೆ, ಒಳ್ಳೇಬಲವುಳ್ಳ ಮೂವತ್ತುಸಾವಿರಮಂದಿ ರಥಿಕರ ರಥಗಳೂ, ನೂರಾರುಲಕ್ಷಕುದುರೆಗಳೂ ಇವನನ್ನು ಯಾವಾಗಲೂ ಹಿಂಬಾಲಿಸಿ ಹೋಗುತ್ತಿದ್ದುವು. ಋಷಿಗಳು ದೇವೇಂದ್ರನನ್ನು ಹೇಗೋ ಹಾಗೆ, ಒಳ್ಳೇ ಕುಂಡಲಾಲಂಕೃತರಾದ ಎಂಟುನೂರು ಮಂದಿ ಸೂತರೂ, ಮಾಗಧರೂ ಇವನನ್ನು ಸ್ತೋತ್ರಮಾಡುತ್ತಿದ್ದರು. ದೇವತೆಗಳು ಧನಪತಿಯಾದ ಕುಬೇರನನ್ನು ಹೇಗೋಹಾಗೆ, ಕುರುಗಳೆಲ್ಲರೂ ಇವನಿಗೆ ಕಿಂಕರರಾಗಿ ನಿತ್ಯವೂ ಉಪಾಸಿಸುತ್ತಿದ್ದರು ಇವನು ತನಗೆ ಅಧೀನರಾಗಿದ್ದರೂ, ಅಧೀನರಲ್ಲದಿದ್ದರೂ, ಎಲ್ಲಾ ರಾಜರಿಂದಲೂ, ತನ್ನ ದೇಶದ ವೈಶ್ಯರಿಂದ ಹೇಗೋ ಹಾಗೆ ಕಪ್ಪವನ್ನು ತೆಗೆಯುತ್ತಿದ್ದವನು. ಒಳ್ಳೇ ವ್ರತಗಳನ್ನು ನಡೆಸಿದ ಮಹಾತ್ಮರಾದ ಎಂಭತ್ತೆಂಟುಸಾವಿರ ಮಂದಿ ಸ್ನಾತಕರು ಇವನನ್ನಾಶ್ರಯಿಸಿ ಜೀವಿಸುತ್ತಿದ್ದರು. ಓ ರಾಜಾ! ಇವನು ಧರ್ಮದಿಂದ ಪ್ರಜೆಗಳನ್ನು ಪಾಲಿಸುತ್ತಿದುದಲ್ಲದೆ, ವೃದ್ಧರನ್ನೂ, ಅನಾಥರನ್ನೂ, ಅಂಗಹೀನರನ್ನೂ, ಕುಂಟರನ್ನೂ, ಗುಜ್ಜಾರಿಗಳನ್ನೂ ತನ್ನ ಮಕ್ಕಳಂತೆ ಕಂಡು ಪೋಷಿಸುತ್ತಿದ್ದವನು. ಧರ್ಮ, ದಾನ, ಸತ್ಯ, ಶೌಚ, ದಮಾದಿ ಗುಣಗಳಲ್ಲಿ ಇವನು ನಿತ್ಯನಿರತನು. ಇವನು ಬ್ರಾಹ್ಮಣರಿಗೆ ಹಿತವನ್ನುಂಟುಮಾಡತಕ್ಕವನು. ಯಾವಾಗಲೂ ಸತ್ಯವನ್ನೇ ನುಡಿಯತಕ್ಕವನು. ಅನುಗ್ರಹಬುದ್ಧಿಯುಳ್ಳವನು. ರಾಜಾ! ಯಾವನ ಐಶ್ವರ್ಯಕ್ಕೂ, ಪ್ರಭಾವಕ್ಕೂ ಕರ್ಣಶಕುನಿಗಳೊಡನೆಯೂ, ತನ್ನ ಸಹೋದರರೊಡನೆಯೂ ದುರ್ಯೋಧನನು ಸದಾ ಮತ್ಸರಗೊಂಡು ಕುದಿಯುತ್ತಿರುವನೋ, ಆ ಧರ್ಮರಾಜನೇ ಈತನು. ಇನ್ನೂ ಇವನ ಗುಣಗಳನ್ನು ಎಣಿಸಲು ಸಾಧ್ಯವಿಲ್ಲ. ಇವನು ಸದಾ ಧರ್ಮಪರನು. ಕಠಿನ ಸ್ವಭಾವವಿಲ್ಲದವನು. ಸುಶೀಲನು. ಇಂತಹ ಗುಣಾತಿಶಯಗಳಿಂದ ಪುರುಷಶ್ರೇಷ್ಠನೆನಿಸಿದ ಈತನು ನಿನ್ನ ಸಿಂಹಾನವನ್ನೇರುವುದಕ್ಕೆ ಹೇಗೆ ತಾನೇ ಅರ್ಹನಾಗಲಾರನು?'' ಎಂದನು.

ಇದು ಎಪ್ಪತ್ತುನಾಲ್ಕನೆಯ ಅಧ್ಯಾಯವು.

ವಿರಾಟನು ಪ್ರಶ್ನೆ ಮಾಡಿದುದರರ ಮೇಲೆ ಅರ್ಜುನನು ವಲಲ ಮೊದಲಾದವರೇ ಭಿಮಾದಿಗಳೆಂದು ಹೇಳಿದುದು. ಉತ್ತರನು ಪಾಂಡವರ ಹೆಸರುಗಳನ್ನೂ ಲಕ್ಷಣಗಳನ್ನೂ ತಂದೆಗೆ ತಿಳಿಸಿ, ಅರ್ಜುನನ ಪರಾಕ್ರಮವನ್ನು ವರ್ಣಿಸಿದುದು. ವಿರಾಟನು ಪ್ರಣಾಮ ಪೂರ್ವಕವಾಗಿ ಅಪರಾಧಕ್ಷಾಪಣವನ್ನು ಬೇಡಿದುದು.

ಜನಮೇಜಯರಾಜಾ! ಆಮೇಲೆ ವಿರಾಟನು ಅರ್ಜುನನ್ನು ಕುರಿತು "ಬೃಹನ್ನಳೇ! ಇವನೇ ಕುಂತೀಪುತ್ರನಾದ ಆ ಯುಧಿಷ್ಠಿರನಾಗಿದ್ದ ಪಕ್ಷದಲ್ಲಿ, ಇವನ ತಮ್ಮನಾದ ಅರ್ಜುನನೆಲ್ಲಿ? ಬಲಶಾಲಿಯಾದ ಆ ಭೀಮನ ಸಂಗತಿಯೇನು? ನಕುಲಸಹದೇವರೆಲ್ಲಿರುವರು? ಯಶಸ್ವಿನಿಯಾದ ಆ ದ್ರೌಪದಿಯೇನಾಗಿರುವಳು? ಈ ಯುಧಿಷ್ಠಿರನು ಅವರನ್ನೆಲ್ಲ ಪಗಡೆಯಾಟದಲ್ಲಿ ಸೋತನಷ್ಟೆ? ಅದರಿಂದಾಚೆಗೆ ಅವರ ಸುದ್ದಿಯೇ ಕಿವಿಗೆ ಬೀಳಲಿಲ್ಲ" ಎಂದನು. ಅದಕ್ಕೆ ಅರ್ಜುನನು "ರಾಜಾ! ವಲಲನೆಂಬ ಹೆಸರಿನಿಂದ ನಿನಗೆ ಅಡಿಗೆಯವನಾಗಿದ್ದ ಈತನೇ ಭೀಮಸೇನನು. ಇವನು ಹಿಂದೆ ಗಂಧಮಾನಪರ್ವತದಲ್ಲಿ ಕೋಪವಶರಾಗಿದ್ದ ಯಕ್ಷರನ್ನು ಕೊಂದು, ದ್ರೌಪದಿಗಾಗಿ ಸೌಗಂಧಿಕಪುಷ್ಪಗಳನ್ನು ತಂದವನು. ಮತ್ತು ದುರಾತ್ಮರಾದ ಕೀಚಕರನ್ನು ಕೊಂದ ಗಂಧರ್ವನೂ ಇವನೇ! ನಿನ್ನ ನಗರದಲ್ಲಿ ಹುಲಿ, ಕರಡಿ, ಸಿಂಹ, ಆನೆ ಮುಂತಾದ ಮೃಗಗಳನ್ನು ಕೊಂದ ಈ ಜಟ್ಟಿಯೇ ಭೀಮಸೇನನು. ಹಿಡಿಂಬನನ್ನೂ, ಬಕನನ್ನೂ, ಕಿಮ್ಮೀರನನ್ನೂ, ಜಟಾಸುರನನ್ನೂ ಕೊಂದು, ಅರಣ್ಯವನ್ನು ನಿಷ್ಕಂಟಕವಾಗಿ ಮಾಡಿದವನೂ ಇವನೇ! ಓ ರಾಜಾ! ನಿನಗೆ ಕುದುರೆಯಾಳಾಗಿಯೂ, ಗೋರಕ್ಷಕನಾಗಿಯೂ ಇದ್ದವರಿಬ್ಬರೂ ಮಾದ್ರೀದೇವಿಯ ಮಕ್ಕಳಾದ ನಕುಲಸಹದೇವರು. ಅವರಿಬ್ಬರೂ ಮಹಾಬಲಾಢ್ಯರು. ಶೃಂಗಾರೋದ್ದೀಪಕಗಳಾದ ವೇಷಾಭರಣವುಳ್ಳವರೂ, ರೂಪವಂತರೂ, ಉದಾರಮನಸ್ಕರೂ, ಭರತಕುಲಶ್ರೇಷ್ಠರೂ ಆದ ಇವರಿಬ್ಬರೂ, ನಾನಾತರದ ಸಾವಿರಾರು ರಥಿಕರನ್ನಡಗಿಸುವ ಸಾಮರ್ಥ್ಯವುಳ್ಳವರು. ರಾಜಾ! ಯಾವಳ ದೆಸೆಯಿಂದ ಕೀಚಕರು ಹತ

ರಾದರೋ, ಸೈರಂಧ್ರಿಯೆನಿಸಿದ ಆಕೆಯೇ ದ್ರೌಪದಿ. ದ್ರುಪದನ ಪ್ರಿಯ ಪುತ್ರಿ. ಧೃಷ್ಟದ್ಯುಮ್ನನ ಸಹೋದರಿ. ಅಗ್ನಿಕುಂಡದಿಂದ ಹುಟ್ಟಿದವಳು" ಎಂದನು. ಆಮೇಲೆ ಭೀಮನು ವಿರಾಟನನ್ನು ಕುರಿತು, "ರಾಜಾ! ಈ ಬೃಹನ್ನಳೆ ಯಾರೆಂಬುದನ್ನು ನಾನು ತಿಳಿಸುವೆನು ಕೇಳು. ಇವನೇ ಧನಂಜಯನೆನಿಸಿದ ಆ ಅರ್ಜುನನು. ಭೂಮಿಯನ್ನೆಲ್ಲಾ ಸುತ್ತಿದರೂ, ಇವನಂತೆ ಅಸ್ತ್ರಜ್ಞನು ಬೇರೊಬ್ಬನು ಸಿಕ್ಕಲಾರನು. ಕುಂತೀಕುಮಾರನಾದ ಈತನೇ ಹಿಂದೆ ನಾಗವನವೆನಿಸಿಕೊಂಡಿದ್ದ ಇಂದ್ರನ ಖಾಂಡವವನವನ್ನು ಅಲ್ಲಿನ ಸಮಸ್ತ ನಾಗಗಳೊಡನೆ ಅಗ್ನಿಗೆ ಆಹುತಿಯಾಗಿ ಮಾಡಿ, ಆಗ ಇಂದ್ರನು ಸುರಿಸಿದ ಮಹಾವೃಷ್ಟಿಯನ್ನು ತನ್ನ ಬಾಣವರ್ಷದಿಂದ ತಡೆದನು. ಇವನೇ ಧರ್ಮರಾಜನ ರಾಜಸೂಯಕ್ಕಾಗಿ ಭೂಮಿಯಲ್ಲಿ ಅನೇಕರಾಜರಿಂದ ಕಪ್ಪವನ್ನು ತರಿಸಿಕೊಟ್ಟವನು. ನಿನ್ನ ಅಂತಪುರದಲ್ಲಿ ಬೃಹನ್ನಳೆಯೆಂಬ ಹೆಸರಿನಿಂದ ಸ್ತ್ರೀವೇಷವನ್ನು ಧರಿಸಿಕೊಂಡು, ಇದುವರೆಗೂ ಇದ್ದ ಇವನೇ ನನ್ನ ತಮ್ಮನಾದ ಅರ್ಜುನನು. ಓ ರಾಜೇಂದ್ರಾ! ನಾವೆಲ್ಲರೂ ಅಜ್ಞಾತವಾಸಕ್ಕಾಗಿ ಇಲ್ಲಿ ಬಂದು ಸೇರಿ, ಗರ್ಭವಾಸದಲ್ಲಿ ಶಿಶುಗಳು ಹೇಗೋಹಾಗೆ, ನಿನ್ನನ್ನಾಶ್ರಯಿಸಿ, ಸುಖದಿಂದಿರುತಿದ್ದೆವು" ಎಂದನು. ಹೀಗೆ ಭೀಮಾರ್ಜುನರಿಬ್ಬರೂ ತಮ್ಮ ನಿಜಸ್ಥಿತಿಯನ್ನು ವಿರಾಟನಿಗೆ ಸೂಚಿಸಿದಮೇಲೆ, ಉತ್ತರನು ತಿರುಗಿ ತನ್ನ ತಂದೆಗೆ ಅವರೊಬ್ಬೊಬ್ಬರನ್ನೂ ತೋರಿಸುತ್ತ ಹೀಗೆಂದು ಹೇಳತೊಡಗಿದನು. "ಜನಕಾ! ಇಲ್ಲಿ ಯಾವನು ಹೊಂಬಣ್ಣದ ಮೈಯುಳ್ಳವನಾಗಿ, ಕೊಬ್ಬಿದ ಸಿಂಹದಂತೆ ದೊಡ್ಡ ಆಕಾರದಿಂದಲೂ, ಎತ್ತರವಾದ ಮೂಗಿನಿಂದಲೂ, ಉಬ್ಬಿ ಅಗಲವಾದ ಕಣ್ಣುಗಳಿಂದಲೂ, ಕೆಂಪಾದ ಕಡೆಗಣ್ಣುಗಳಿಂದಲೂ ಶೋಭಿಸುತ್ತಿರುವನೋ, ಅವನೇ ಕುರುರಾಜನಾದ ಯುಧಿಷ್ಠಿರನು. ಯಾವನು ಪುಟಹಾಕಿದ ಚಿನ್ನದಂತೆ ಮೈಬಣ್ಣವುಳ್ಳವನಾಗಿ, ಆನೆಯಂತೆ ಗಂಭೀರವಾದ ನಡೆಯಿಂದಲೂ, ಉಬ್ಬಿ ವಿಶಾಲವಾದ ಭುಜದಿಂದಲೂ, ದುಂಡಗೆ ನೀಡಿದ ತೋಳುಗಳಿಂದಲೂ, ಶೋಭಿಸುವನೋ, ಅವನೇ ವೃಕೋದರನು. ಅವನನ್ನು ನೋಡು! ಎಲ್ಲರೂ ನೋಡಿರಿ! ಅವನ ಪಕ್ಕದಲ್ಲಿ ಯಾವನು ಶ್ಯಾಮಲದೇಹವುಳ್ಳವನಾಗಿ, ಯುವಕನಾಗಿ, ಆನೆಯ ಸಲಗಕ್ಕೆ ಸಮಾನನಾಗಿ, ಸಿಂಹದಂತೆ ಉಬ್ಬಿದ ಹೆಗಲಿ

ನಿಂದಲೂ, ಆನೆಯಂತೆ ನಡೆಯಿಂದಲೂ, ಕಮಲದಂತೆ ವಿಸ್ತಾರವಾದ ಕಣ್ಣು ಗಳಿಂದಲೂ ಶೋಭಿಸುವನೋ, ಅವನೇ ವೀರನಾದ ಮಹಾಧನುಷ್ಮಂತನಾ ದ ಅರ್ಜುನನು. ಧರ್ಮರಾಜನ ಸಭಾಪದಲ್ಲಿ ವಿಷ್ಣು ಮಹೇಂದ್ರರಂತೆ ಕುಳಿ ತಿರುವ ಪುರುಷಶ್ರೇಷ್ಠರಾದ ಆ ಅವಳಿಮಕ್ಕಳಿಬ್ಬರೂ ನಕುಲಸಹದೇವರು. ಇವರಿಗೆ ರೂಪದಲ್ಲಿಯೂ, ಬಲದಲ್ಲಿಯೂ, ಶೀಲದಲ್ಲಿಯೂ ಸಾಟಿಯಾದ ವರು ಮನುಷ್ಯಲೋಕದಲ್ಲಿಯೇ ಇಲ್ಲವು. ಅಯ್ಯೋ ! ಆವರಿಬ್ಬರ ಪಕ್ಕದಲ್ಲಿ ಚಿನ್ನದಂತೆ ದೇಹಲಾವಣ್ಯದಿಂದೊಪ್ಪುತ್ತ, ಮೂರ್ತಿಗೊಂಡ ಪ್ರಭೆಯಂತೆ ಯೂ, ಸಾಕ್ಷಾದ್ಧಾರೀದೇವಿಯಂತೆಯೂ, ದೇವತಾ ಸ್ತ್ರೀಯಂತೆಯೂ, ಮೂರ್ತಿಮತಿಯಾದ ಲಕ್ಷ್ಮೀದೇವಿಯಂತೆಯೂ ಒಪ್ಪುತ್ತ, ನೀಲೋತ್ಪಲ ದಂತಿರುವ ದೇಹಛಾಯೆಯುಳ್ಳ ಹೆಂಗಸೇ ಕೃಷ್ಣೆಯೆಂದು ಹೆಸರುಗೊಂಡ ದ್ರೌಪದಿ'' ಎಂದನು. ಉತ್ತರನು ಹೀಗೆಂದು ಪಂಚಪಾಂಡವರ ಗುರುತು ಗಳನ್ನು ತಂದೆಗೆ ತಿಳಿಸಿ, ಅರ್ಜುನನ ಪರಾಕ್ರಮವನ್ನು ಪ್ರತ್ಯೇಕವಾಗಿ ವರ್ಣಿಸತೊಡಗಿದನು. '' ಜನಕಾ ! ಈ ಅರ್ಜುನನು ಮೃಗಗಳ ಗುಂಪಿ ನಲ್ಲಿ ಸಿಂಹವು ಹೇಗೋ ಹಾಗೆ' ಶತ್ರುಗಳ ರಥಸೈನ್ಯದ ನಡುವೆ ಪ್ರವೇಶಿಸಿ, ಅವನ್ನೆಲ್ಲ ಕೊಲ್ಲುತ್ತ ಯಥೇಚ್ಛವಾಗಿ ಸಂಚರಿಸಿದನು. ಮಹಾಮೇಘ ಗಳಂತಿರುವ ಎಷ್ಟೋ ಆನೆಗಳು ಯುದ್ಧದಲ್ಲಿ ಇವನಿಂದ ಹತವಾಗಿ, ದಂತ ಗಳು ಭೂಮಿಯಲ್ಲಿ ನಾಟುವಂತೆ ಮುಗ್ಗರಿಸಿಬಿದ್ದು ಸತ್ತುವು. ಇವನೇ ಕೌರವರನ್ನೋಡಿಸಿ ನಮ್ಮ ಗೋವುಗಳನ್ನು ಹಿಂತಿರುಗಿಸಿದವನು. ಇವನ ಶಂಖಧ್ವನಿಯಿಂದ ನನ್ನ ಕಿವಿಗಳು ಕಿವುಡುಬಿದ್ದುವು. ಇವನ ಬಿಲ್ಲಿನ ಧ್ವನಿಯನ್ನು ನೆನೆಸಿಕೊಂಡರೆ ಈಗಲೂ ನನಗೆ ರೋಮಾಂಚವೇಳುವುದು. ಇವನ ಧ್ವಜದಲ್ಲಿದ್ದ ವಾನರನ ಮತ್ತು ಭೂತಗಳ ಕೂಗಾಟವು ನನ್ನನ್ನು ಈಗಲೂ ನಡುಗಿಸುತ್ತಿದೆ. ಇವನು ಹೇಗೆ ಬಾಣಗಳನ್ನು ತೆಗೆಯುತ್ತಿ ದ್ದನೋ, ಹೇಗೆ ಬಿಲ್ಲನ್ನೆಳೆಯುತ್ತಿದ್ದನೋ, ಹೇಗೆ ಬಾಣಗಳನ್ನು ಪ್ರಯೋ ಗಿಸುತ್ತಿದ್ದನೋ ಅದನ್ನು ಕೂಡ ನೋಡಿ ತಿಳಿಯಲು ನನಗೆ ಸಾಧ್ಯವಾಗ ಲಿಲ್ಲ. ಇವನ ಬಿಲ್ಲಿನಿಂದ ಪ್ರಯೋಗಿಸಲ್ಪಟ್ಟ ಬಾಣಗಳು ಪುಂಖಾನು ಪುಂಖವಾಗಿ ಹೊರಡುತ್ತಿದ್ದುವು. ಇವನ ಒಂದು ಬಾಣವಾದರೂ ಗುರಿ ತಪ್ಪಿ ಬೇರೆಕಡೆಗೆ ಬಿದ್ದುದಿಲ್ಲ. ಇವನ ತೀಕ್ಷ್ಣಬಾಣಗಳಿಂದ ಕತ್ತರಿಸ

ಲ್ಪಟ್ಟ ಯೋಧರ ಕೈ, ಕಾಲು, ತೋಳು, ತೊಡೆ, ಎದೆ ಮುಂತಾದ ದೇಹಾವಯವಗಳು ರಣರಂಗದ ಎಲ್ಲಾ ಕಡೆಯಲ್ಲಿಯೂ ಹರಡಿದ್ದುವು. ಇವನು ಆ ಯುದ್ಧರಂಗದಲ್ಲಿ ಹರಿಸಿದ ದೊಡ್ಡ ರಕ್ತನದಿಯನ್ನು ನೆನೆಸಿಕೊಂಡು ಈಗಲೂ ನನ್ನ ಎದೆಯು ಬಿರುಗಾಳಿಗಿದಿರಾದ ಬಾಳೆಯ ಗಿಡದಂತೆ ಕಂಪಿಸುತ್ತಿದೆ. ಮಹಾರಾಜಾ! ಭಯಂಕರಾಕಾರವುಳ್ಳ ಈತನೇ ದುರ್ಯೋಧನನೊಡನೆ ನೇರಿಸಿ ಭೀಷ್ಮದ್ರೋಣಾದಿ ಮಹಾರಥರನ್ನೆಲ್ಲ ಜಯಿಸಿದವನು. ಇವನು ಭಯಪಟ್ಟು ಓಡಿಹೋಗುತ್ತಿದ್ದ ನನ್ನನ್ನೂ ತಡೆದು ನಿಲ್ಲಿಸಿದನು. ಇವನ ಬಾಹುಬಲದಿಂದಲೇ ನಾನು ತಿರುಗಿ ಬದುಕಿ ಬಂದೆನು'' ಎಂದನು.

ಈ ಮಾತನ್ನು ಕೇಳಿದೊಡನೆ ವಿರಾಟನು, ಅರ್ಜುನನನ್ನೂ, ಆಮೇಲೆ ಇತರ ಪಾಂಡವರನ್ನೂ ಪ್ರೀತಿಯಿಂದಾಲಿಂಗಿಸಿದನು. ಧರ್ಮರಾಜನಿಗೆ ಕಾಲುಹಿಡಿದು ನಮಸ್ಕರಿಸಿದನು. ಅವರನ್ನು ಎಷ್ಟು ಹೊತ್ತು ನೋಡಿದರೂ ವಿರಾಟನಿಗೆ ತೃಪ್ತಿಯಿಲ್ಲದಂತಾಯಿತು. ಆಮೇಲೆ ಅನನು ಪ್ರೇಮದಿಂದ ಧರ್ಮರಾಜನನ್ನು ಕುರಿತು ''ಭಾಗ್ಯವಶದಿಂದ ನೀವೆಲ್ಲರೂ ಕ್ಷೇಮದಿಂದ ಇಲ್ಲಿಗೆ ಬಂದಿರಿ. ದುರಾತ್ಮರಾದ ಕೌರವರಿಗೆ ತಿಳಿಯದಂತೆ ನೀವು ಕಷ್ಟತರವಾದ ಅಜ್ಞಾತವಾಸವನ್ನೂ ದೈವವಶದಿಂದ ಕೊನೆಮುಟ್ಟಿಸಿದಿರಿ. ಧರ್ಮರಾಜಾ! ಇನ್ನುಮೇಲೆ ನನ್ನ ರಾಜ್ಯವೆಲ್ಲವೂ ನಿಮ್ಮದು. ನನ್ನಲ್ಲಿರುವ ದ್ರವ್ಯವೆಲ್ಲವೂ ನಿಮ್ಮದು. ಇವನ್ನೆಲ್ಲ ನಿಮಗೇ ಹಂಚಿಕೊಟ್ಟಿರುವೆನು. ನೀವು ನಿಶ್ಚಿಂತರಾಗಿ ಇಲ್ಲಿಯೇ ಇರಬಹುದು. ನೀವೂ, ನಾವೂ ಭೇದವಿಲ್ಲದಂತೆಯೇ ಇದನ್ನನುಭವಿಸುವೆವು. ಇದರಲ್ಲಿಸಂದೇಹವಿಲ್ಲ'' ಎಂದನು.

ಇದು ಎಪ್ಪತ್ತೈದನೆಯ ಅಧ್ಯಾಯವು.

ಉತ್ತರನು ಯುಧಿಷ್ಠಿರಾದಿಗಳಿಂದ ತಮಗಾದ ಉಪಕಾರಗಳನ್ನು ತಿಳಿಸಿ, ಆ ಕೃತಜ್ಞತೆಗಾಗಿ ಉತ್ತರೆಯನ್ನು ಅರ್ಜುನನಿಗೆ ವಿವಾಹಮಾಡಿಕೊಡಬೇಕೆಂದು ತಂದೆಗೆ ಹೇಳಿದುದು. ವಿರಾಟನು ಕ್ಷಮೆಯನ್ನು ಬೇಡಿದಮೇಲೆ ಧರ್ಮರಾಜನು ಅಭಯವನ್ನು ಕೊಟ್ಟುದು.

ಓ ಜನಮೇಜಯರಾಜಾ! ಕೇಳು! ವಿರಾಟನು ಹೇಳಿದ ಮಾತನ್ನು ಕೇಳಿ ಧರ್ಮರಾಜನಲ್ಲಿ ಅಪರಾಧಕ್ಷಾಪಣಕ್ಕಾಗಿ ಉತ್ತರನು ತಂದೆಯನ್ನು ಕುರಿತು ಹೀಗೆಂದು ಹೇಳುವನು. "ಜನಕಾ! ಈಗ ನಾವು ಪಾಂಡುಪುತ್ರನಾದ ಈ ಧರ್ಮರಾಜನನ್ನು ಹೇಗಾದರೂ ಪ್ರಸನ್ನನನ್ನಾಗಿ ಮಾಡಿಕೊಳ್ಳಬೇಕಾದುದು ಅವಶ್ಯವೆಂದು ನನಗೆ ತೋರಿದೆ. ಆತನು ಮಹಾತೇಜಸ್ವಿ! ಬಲವಂತನು! ಶೂರನು! ರಾಜಾಧಿರಾಜರಿಗೂ ಮೇಲೆನಿಸಿದ ಪ್ರಭುವು! ಆದುದರಿಂದ ಅಪರಾಧಕ್ಷಾಪಣರೂಪವಾಗಿ ನಿನ್ನ ತಂಗಿಯಾದ ಉತ್ತರೆಯನ್ನು ಅರ್ಜುನನಿಗೆ ಕೊಟ್ಟು, ಅವನ ಕಾಲಮೇಲೆ ಬಿದ್ದು ಪ್ರಾರ್ಥಿಸುವೆವು. ಆಗಲೇ ನಾವು ನಿರಪರಾಧಿಗಳೆನಿಸಿಕೊಂಡು ಒಳ್ಳೆಯವರಾಗುವೆವು. ನಾವೆಲ್ಲರೂ, ನಮ್ಮ ಮಂತ್ರಿವರ್ಗದೊಡನೆ ಧರ್ಮರಾಜನಲ್ಲಿ ಕ್ಷಮೆಯನ್ನು ಬೇಡಿ, ಅವನನ್ನು ಸ್ತೋತ್ರಮಾಡುವೆವು. ನಾವು ಅವರ ಉಪಕಾರಕ್ಕೆ ತಕ್ಕಂತೆ ಬೇರೇನು ಮಾಡಬಲ್ಲೆವು? ಜನಕಾ! ಯುದ್ಧದಲ್ಲಿ ಶತ್ರುಗಳ ಕೈಗೆ ಸಿಕ್ಕಿಬಿದ್ದಾಗ, ಈ ಧರ್ಮರಾಜನಲ್ಲವೇ ನಿನ್ನನ್ನು ಶತ್ರುಗಳ ಕೈಯಿಂದ ಬಿಡಿಸಿ ಕಾಪಾಡಿದನು. ಈ ಪಾಂಡವರ ಬಾಹುವೀರ್ಯದಿಂದಲೇ ನಮ್ಮ ಗೋವುಗಳನ್ನು ನಾವು ಜಯಿಸಿಕೊಂಡು ಬಂದೆವು. ಕೌರವರೂ ಯುದ್ಧದಲ್ಲಿ ಸೋಲಿಸಲ್ಪಟ್ಟರು. ಇದೆಲ್ಲಾ ಈ ಯುಧಿಷ್ಠಿರನಿಂದಲ್ಲವೇ ನಡೆಯಿತು? ಆದುದರಿಂದ ಈ ಪಾಂಡವರನ್ನು ನಾವು ಭಕ್ತಿಯಿಂದ ಅರ್ಚಿಸಬೇಕು. ಇವರು ನಮಗೆ ಪೂಜ್ಯರು. ಮಾನ್ಯರು! ಇದಿರುಗೊಂಡು ಮರ್ಯಾದೆಮಾಡಿ ಕರೆತರುವುದಕ್ಕೆ ಯೋಗ್ಯರು. ನಮಗೆ ಇವರು ಸನ್ಮಾನಾರ್ಹರು. ನಮಸ್ಕಾರಾರ್ಹರು. ಈ ಕಾರ್ಯಗಳಿಗೆಲ್ಲ ಇದೇ ತಕ್ಕ ಸಮಯವೆಂದೂ ನನಗೆ ತೋರಿದೆ. ಆದುದರಿಂದ ಮಹಾಪ್ರಭಾವವುಳ್ಳ ಇವ

ರನ್ನು ನಾವು ಪೂಜಿಸುವೆವು. ಇವರು ಕೋಪಗೊಂಡರೆ ವಿಷಸರ್ಪಗಳಂತೆ ನಮ್ಮನ್ನು ಉಳಿಸಲಾರರು. ಈಗಲೇ ನಾವು ಈ ಧರ್ಮರಾಜನಲ್ಲಿ ಶರಣಾಗತರಾಗುವುದು ಮೇಲು. ಈಗಲೇ ನಾನು ತಂಗಿಯಾದ ಉತ್ತರೆಗೆ ಸ್ನಾನ ಮಾಡಿಸಿ ಕರೆತಂದು, ಅವರ ಮುಂದೆ ನಿಲ್ಲಿಸಿ, ಕೈ ಮುಗಿದು ಅವರ ಮನ್ನಣೆಯನ್ನು ಬೇಡುವೆನು. ಇವರ ಬಲ ಪೌರುಷಗಳನ್ನು ನಾನು ಚೆನ್ನಾಗಿ ಬಲ್ಲೆನು. ಅರ್ಜುನನ ಪರಾಕ್ರಮವನ್ನೂ ಬಲ್ಲೆನು'' ಎಂದನು.

ಓ ಜನಮೇಜಯರಾಜಾ! ಉತ್ತರನ ಮುಖದಿಂದ ಪಾಂಡವರ ಪ್ರಭಾವವನ್ನು ಕೇಳಿ ವಿರಾಟನು, ಉತ್ತರನನ್ನು ದೃಷ್ಟಿಸಿ ನೋಡಿ, ಆ ಕಾಲಕ್ಕೆ ಉಚಿತವೇನೆಂಬುದನ್ನು ತನ್ನಲ್ಲಿಯೂ ಆಲೋಚಿಸಿ ನಿಶ್ಚಯಿಸಿಕೊಂಡನು. ಒಡನೆಯೇ ಉತ್ತರೆಗೆ ಸ್ನಾನಮಾಡಿಸಿ, ತನ್ನ ಮಂತ್ರಿಗಳೊಡನೆಯೂ, ಪುತ್ರರೊಡನೆಯೂ, ಬಂಧುವರ್ಗದೊಡನೆಯೂ ಸೇರಿ, ಉತ್ತರೆಯನ್ನು ಮುಂದಿಟ್ಟುಕೊಂಡು ಬಂದು, ಧರ್ಮರಾಜನ ಮುಂದೆ ಸಾಷ್ಟಾಂಗವಾಗಿ ಬಿದ್ದು ನಮಸ್ಕರಿಸಿ '' ಧರ್ಮಪುತ್ರನಾದ ನೀನು ನನ್ನಲ್ಲಿ ಪ್ರಸನ್ನನಾಗಬೇಕು. ಹುಲ್ಲಿನಲ್ಲಿ ಅಡಗಿದ ಬೆಂಕಿಯಂತೆ, ವೇಷವನ್ನು ಮರೆಸಿಕೊಂಡಿದ್ದ ನಿಮ್ಮ ನಿಜಸ್ಥಿತಿಯನ್ನು ನಾನು ತಿಳಿಯದೆ ಹೋದೆನು. ನನ್ನ ಪುತ್ರ ಮಿತ್ರ ಪರಿವಾರಗಳೊಡನೆ ತಲೆಬಗ್ಗಿ ಬೇಡುವೆನು. ನಿಜಾಂಶವನ್ನು ತಿಳಿಯದ ನಾವು ಮಹಾರಾಜನಾದ ನಿನ್ನನ್ನು ಧಿಕ್ಕರಿಸಿದೆವು. ಅಜ್ಞಾನದಿಂದ ನಿಮ್ಮಲ್ಲಿ ನಾವು ಸಾಮಾನ್ಯನಾದ ಒಬ್ಬ ಪ್ರಾಕೃತ ಮನುಷ್ಯನಲ್ಲಿ ಹೇಗೋ ಹಾಗೆ ತಿರಸ್ಕಾರಭಾವದಿಂದ ನಡೆದೆವು. ಅವೆಲ್ಲವನ್ನೂ ಧರ್ಮಜ್ಞನೂ, ಧರ್ಮವತ್ಸಲನೂ ಆದ ನೀನು ಕ್ಷಮಿಸಬೇಕು. ಈ ನನ್ನ ರಾಜ್ಯವಾವುದುಂಟೋ, ಎಲ್ಲವನ್ನೂ ತಮಗಾಗಿ ಬಿಟ್ಟುಕೊಡುವೆನು. ನಾನು ತಮಗೆ ಅಧೀನನಾಗಿ ನಡೆಯುವೆನು. ನಾನು ಎಲ್ಲಾ ಮಂತ್ರಿಗಳೊಡನೆ ನಿನ್ನಲ್ಲಿ ಶರಣಾಗತನಾಗಿರುವೆನು'' ಎಂದನು.

ಓ ಜನಮೇಜಯರಾಜಾ! ಹೀಗೆ ಬಂಧುವರ್ಗದೊಡನೆ ಉದ್ದಕ್ಕೆ ನೆಲದಲ್ಲಿ ಬಿದ್ದು ಬೇಡುತ್ತಿರುವ ವಿರಾಟನನ್ನು ನೋಡಿ ಧರ್ಮರಾಜನು, ಅವನ ವಿಷಯದಲ್ಲಿ ದುಃಖ, ಕೋಪ, ಮಾತ್ಸರ್ಯಗಳೆಲ್ಲವನ್ನೂ ಬಿಟ್ಟು,

ಪರಲೋಕನಾಧಕವಾದ ಧರ್ಮದಲ್ಲಿಯೇ ದೃಷ್ಟಿಯುಳ್ಳವನಾಗಿ, ಹೀಗೆಂದು ಹೇಳುವನು. "ಓ ರಾಜಾ! ನನ್ನ ವಿಷಯದಲ್ಲಿ ನೀನೇನೂ ಭಯಪಡ ಬೇಕಾಗಿಲ್ಲ. ನಿನ್ನ ಮನೋಭಾವವು ಎಂತದೆಂಬುದನ್ನು ತಿಳಿದು ನಾನು ಬಹಳ ಸಂತೋಷಗೊಂಡೆನು. ಈಗ ನೀನೂ, ಬ್ರಾಹ್ಮಣರೂ ಪಂಡಿ ತರೂ ಆದ ನಿನ್ನ ಈ ಮಂತ್ರಿಗಳೂ, ಮಾಡಿದ ಕೆಲಸವು ಒಳ್ಳೆಯದಾ ಯಿತು. ಅಲಂಕೃತೆಯಾದ ಈ ನಿನ್ನ ಮಗಳನ್ನು ನೋಡಿ ನಾನು ಬಹಳ ಸಂತೋಷಪಟ್ಟೆನು. ಓ ಮಹಾಬಾಹೂ! ನೀನು ಇಷ್ಟು ಹೇಳಿದಮೇಲೆ ನಾನು ಸಂಪೂರ್ಣವಾಗಿ ಮನ್ನಿಸಿದೆನು. ನಿನ್ನ ಮನಸ್ಸಿನಲ್ಲಿ ಕಪಟವಿಲ್ಲ ವೆಂಬುದನ್ನೂ ನಾನು ಚೆನ್ನಾಗಿ ತಿಳಿದೆನು" ಎಂದನು. ಇದನ್ನು ಕೇಳಿ ವಿರಾಟನಿಗೆ ಪರಮಸಂತೋಷವಾಯಿತು. ಧರ್ಮರಾಜನೊಡನೆ ನಿರ್ಣಯ ಮಾಡಿಕೊಂಡು, ತನ್ನ ಅಧಿಕಾರವನ್ನೂ, ಭಂಡಾರವನ್ನೂ, ಪುರವನ್ನೂ, ಸಮಸ್ತರಾಜ್ಯವನ್ನೂ ಅವನಿಗೆ ಒಪ್ಪಿಸಿದನು.

ಇದು ಎಪ್ಪತ್ತಾರನೆಯ ಅಧ್ಯಾಯವು.

ವಿರಾಟನು ತನ್ನ ಮಗಳಾದ ಉತ್ತರೆಯನ್ನು ಅರ್ಜುನನಿಗೆ ಕೊಡಲುದ್ಯೋಗಿಸಿದಾಗ ಅರ್ಜುನನು ತನ್ನ ಸೊಸೆಯನ್ನಾಗಿ ಅವಳನ್ನು ಪರಿಗ್ರಹಿಸುವಂತೆ ಹೇಳಿದುದು. ದುರ್ಯೋ ಧನನು ಪಾಂಡವರಿಗೆ ದೂತಮುಖವಾಗಿ ಅಜ್ಞಾತ ವಾಸಕ್ಕೆ ಮೊದಲೇ ತಮ್ಮ ಕಣ್ಣಿಗೆ ಬಿದ್ದುದ ರಿಂದ ತಿರುಗಿ ಕಾಡಿಗೆ ಹೋಗಬೇಕೆಂದು ಹೇ ಳಿಕಳುಹಿಸಿದುದು. ಭೀಷ್ಮನು ಈ ಸಂದೇ ಶವನ್ನು ಪರಿಪರಿಸುವನೆಂದು ಧರ್ಮ ರಾಜನು ಹೇಳಿಕಳುಹಿಸಿದುದು.

ಓ ಜನಮೇಜಯರಾಜಾ! ಆಗ ವಿರಾಟನು ಯುಧಿಷ್ಠಿರನನ್ನು ಕು ರಿತು "ಓ ಮಹಾತ್ಮಾ! ಈಗ ನಾನು ಹೇಳುವ ಮಾತನ್ನು ಕುರಿತು ನೀನು ಸ್ವಲ್ಪವೂ ಶಂಕಿಸಬೇಕಾದುದಿಲ್ಲ. ಇದೋ! ನನ್ನ ನಗರವನ್ನೂ, ರಾಷ್ಟ್ರ

ವನ್ನೂ ಇಲ್ಲಿನ ಜನರೊಡನೆ (ಸಮಸ್ತ ಸ್ತ್ರೀಜನರೊಡನೆ) ನಿಮ್ಮಲ್ಲಿಗೆ ಒಪ್ಪಿಸಿರುವೆನು. ನೀನು ಅನುಭವಿಸಿ ಮಿಕ್ಕುದನ್ನು ನಾನು ಅನುಭವಿಸುವೆನು. ನಾನೋ ವೃದ್ಧನು. ಬಹುಕಾಲದಿಂದ ರಾಜ್ಯಭೋಗಗಳನ್ನು ಸುಖವಾಗಿ ಅನುಭವಿಸಿದವನು. ಈಗ ನಿಮಗೆ ರಾಜ್ಯವನ್ನೊಪ್ಪಿಸಿ, ನಾನು ಕಾಡಿಗೆ ಹೋಗುವೆನು. ಸವ್ಯಸಾಚಿಯಾದ ಈ ಧನಂಜಯನು ನನ್ನ ಮಗಳಾದ ಉತ್ತರೆಯನ್ನು ಪರಿಗ್ರಹಿಸಲಿ. ಪುರುಷಶ್ರೇಷ್ಠನಾದ ಈತನೇ ಅವಳಿಗೆ ತಕ್ಕ ವರನು'' ಎಂದನು. ವಿರಾಟನ ಈ ಮಾತನ್ನು ಕೇಳಿ ಧರ್ಮರಾಜನು ಅರ್ಜುನನ್ನು ನೋಡಲು, ಅರ್ಜುನನು ಆ ನೋಟದ ಅಭಿಪ್ರಾಯವನ್ನು ತಿಳಿದುಕೊಂಡು ವಿರಾಟನೊಡನೆ, ''ಓ ಮಹಾರಾಜಾ! ನಾವು ಕಾಡಿನಿಂದ ಬಂದವರು. ನಿಮ್ಮ ರಾಜ್ಯವನ್ನು ಗ್ರಹಿಸುವವರಲ್ಲ. ನಮಗೆ ಬರಬೇಕಾದ ರಾಜ್ಯವೇ ಬೇರೆ! ದುರ್ಯೋಧನಾದಿಗಳ ರಾಜ್ಯವನ್ನು ನಾವು ಪಡೆಯುವೆವು. ಓ ರಾಜಾ! ನೀನು ಉತ್ತರೆಯನ್ನು ನನಗೆ ಕೊಡುವುದಾಗಿ ಹೇಳಿದೆಯಲ್ಲವೆ? ಅವಳನ್ನು ನಾನು ಸೊಸೆಯನ್ನಾಗಿ ಪರಿಗ್ರಹಿಸುವೆನು. ಮತ್ಸ್ಯ ಭರತವಂಶಗಳಿಗೆ ಸೇರಿದ ನಮ್ಮಿಬ್ಬರಿಗೂ ಈ ವೈವಾಹಿಕ ಸಂಬಂಧವೇನೋ ಬಹಳ ಯುಕ್ತವಾದುದೇ'' ಎಂದನು. ಆಗ ವಿರಾಟನು ''ಓ ಪಾಂಡವೋತ್ತಮಾ! ನಾನಾಗಿ ಕೊಡುವಾಗ ಈ ನನ್ನ ಮಗಳನ್ನು ನೀನು ಪತ್ನಿಯನ್ನಾಗಿ ಪರಿಗ್ರಹಿಸುವುದಕ್ಕೆ ಸಮ್ಮತಿಸದಿರಲು ಕಾರಣವೇನು? '' ಎಂದನು. ಅದಕ್ಕಾ ಅರ್ಜುನನು 'ಓ ರಾಜೇಂದ್ರಾ! ನಾನು ಇದುವರೆಗೆ ಅಂತಃಪುರದಲ್ಲಿಯೇ ಇದ್ದು, ನಿನ್ನ ಮಗಳನ್ನು ಯಾವಾಗಲೂ ನೋಡುತ್ತಿದ್ದವನು. ಅಂತರಂಗದಲ್ಲಿಯೂ, ಬಹಿರಂಗದಲ್ಲಿಯೂ ಅವಳು ನನ್ನಲ್ಲಿ ತಂದೆಯಂತೆ ವಿಶ್ವಾಸವನ್ನು ತೋರಿಸುತ್ತಿದ್ದವಳು. ಅವಳಿಗೆ ನನ್ನಲ್ಲಿ ವಿಶೇಷಪ್ರೀತಿಗೌರವಗಳುಂಟು. ಗೀತವಾದ್ಯಗಳನ್ನೂ, ನರ್ತನಗಳನ್ನೂ ಕಲಿಯುವುದರಲ್ಲಿ, ನನ್ನನ್ನು ಅವಳು ಆಚಾರ್ಯನಂತೆ ಭಾವಿಸಿದ್ದಳು. ಅವಳನ್ನು ಸ್ನೇಹಭಾವದಿಂದ ನೋಡುತ್ತ, ಕಳೆದ ಒಂದು ವರ್ಷದಿಂದ ನಾನು ಅವಳೊಡನೆ ವಾಸಮಾಡುತಿದ್ದೆನು. ಹೀಗೆ ನಾವಿಬ್ಬರೂ ರಹಸ್ಯವಾಗಿಯೂ, ಬಹಿರಂಗವಾಗಿಯೂ ಕಲೆತಿದ್ದುದರಿಂದ, ನಿಮಗೂ ಲೋಕದ ಜನಗಳಿಗೂ ನಮ್ಮಲ್ಲಿ ಸಂದೇಹಕ್ಕೆ ಅವಕಾಶವುಂಟು. ಈ ಸಂದೇಹವನ್ನು

ನಿಶ್ಶೇಷವಾಗಿ ನೀಗಿಸುವುದಕ್ಕಾಗಿಯೇ, ನಾನು ಈಕೆಯನ್ನು ನನ್ನ ಸೊಸೆಯನ್ನಾಗಿ ಸ್ವೀಕರಿಸುವೆನು. ಇದಕ್ಕೆ ನೀನು ಸಮ್ಮತಿಸಿ, ನನ್ನ ಮಗನಿಗೆ ಅವಳನ್ನು ಕೊಡಬೇಕು. ಹೀಗೆ ಮಾಡಿದಾಗಲೇ ನಾನು ಶುದ್ಧನೂ, ಜಿತೇಂದ್ರಿಯನೂ ಆಗಿರುವೆನೆಂದು ಜನಗಳಿಗೆ ನಂಬಿಕೆ ಹುಟ್ಟುವುದು. ಆಗ ಉತ್ತರೆಗೂ ಶುದ್ಧಿಯು ಏರ್ಪಟ್ಟಂತಾಗುವುದು. ನಿನ್ನ ಮಗಳನ್ನು ನಾನು ಸೊಸೆಯನ್ನಾಗಿ ಮಾಡಿಕೊಂಡರೆ, ಅವಳಲ್ಲಿಯೂ, ನನ್ನಲ್ಲಿಯೂ, ನನ್ನ ಪುತ್ರನಲ್ಲಿಯೂ ಯಾರಿಗೂ ಸಂದೇಹವುಂಟಾಗದು. ಇದರಿಂದ ಎಲ್ಲರಿಗೂ ಲೋಕಾಪವಾದದಿಂದ ಶುದ್ಧಿಯುಂಟು. ಓ ರಾಜೇಂದ್ರ! ನಾನು ಲೋಕಾಪವಾದಕ್ಕೂ, ಮಿಥ್ಯಾಚಾರಕ್ಕೂ ಭಯಪಡತಕ್ಕವನು. ಆದುದರಿಂದ ನಿನ್ನ ಮಗಳು ನನಗೆ ಸೊಸೆಯಾಗಿರಲಿ. ನನ್ನ ಮಗನಾದ ಅಭಿಮನ್ಯುವಾದರೂ ಸಾಮಾನ್ಯನಲ್ಲ. ಅವನು ಸಾಕ್ಷಾತ್ ವಾಸುದೇವನ ಸೋದರಳಿಯನು. ದೇವಕುಮಾರನಿಗೆ ಸಮಾನನು. ಚಕ್ರಪಾಣಿಯಾದ ಶ್ರೀಕೃಷ್ಣನಿಗೆ ಬಹಳ ಪ್ರೇಮಪಾತ್ರನು. ಬಲಾಢ್ಯನು. ಅಸ್ತ್ರಗಳನ್ನೆಲ್ಲ ಬಲ್ಲವನು. ಆದುದರಿಂದ ನನ್ನ ಪುತ್ರನಾದ ಈ ಅಭಿಮನ್ಯುವೇ ನಿನಗೆ ತಕ್ಕ ಅಳಿಯನು. ನಿನ್ನ ಮಗಳಿಗೆ ತಕ್ಕ ವರನೂ ಅವನೇ'' ಎಂದನು.

ಈ ಮಾತನ್ನು ಕೇಳಿದಮೇಲೆ ವಿರಾಟನು ''ಕೌರವಶ್ರೇಷ್ಠನೆನಿಸಿ ಧನಂಜಯನೆಂಬ ಬಿರುದುಳ್ಳ ನಿನ್ನಲ್ಲಿ ಈ ಮಾತು ಯುಕ್ತವಾದುದೇ. ಪಾಂಡುಪುತ್ರನಾದ ಧರ್ಮರಾಜನು ಯಾವಾಗಲೂ ಧರ್ಮದಲ್ಲಿಯೇ ನೆಲೆಗೊಂಡವನು. ತಿಳಿಯಬೇಕಾದ ವಿಷಯಗಳನ್ನೆಲ್ಲ ತಿಳಿದವನು. ಓ ಪಾರ್ಥ! ಹೇಗೆ ಮಾಡಬೇಕೆಂದು ನಿನಗೆ ತೋರುವುದೋ ಹಾಗೆಯೇ ನಡೆಸಬಹುದು. ಮಹಾತ್ಮನಾದ ಅರ್ಜುನನು ನನಗೆ ಬೀಗನಾದಮೇಲೆ, ನನ್ನ ಕೋರಿಕೆಗಳೆಲ್ಲವೂ ಪೂರ್ಣವಾದಂತೆಯೇ!'' ಎಂದನು. ವಿರಾಟನು ಹೀಗೆ ಹೇಳಿದಮೇಲೆ, ಯುಧಿಷ್ಠಿರನೂಕೂಡ ವಿರಾಟಾರ್ಜುನರ ಸಂಬಂಧವನ್ನು ಅನುಮೋದಿಸಿದನು. ಒಡನೆಯೇ ವಿರಾಟನೂ, ಅರ್ಜುನನೂ ತಮ್ಮ ತಮ್ಮ ಎಲ್ಲಾ ಮಿತ್ರರಿಗೂ, ಶ್ರೀಕೃಷ್ಣನಿಗೂ ದೂತರ ಮೂಲಕವಾಗಿ ಆಹ್ವಾನವನ್ನು ಕಳುಹಿಸಿದನು. ಹೀಗೆ ಅರ್ಜುನನು ಉತ್ತರೆಯನ್ನು ತನಗೆ

ಸೊಸೆಯನ್ನಾಗಿ ಸ್ವೀಕರಿಸಿ, ತನ್ನ ವ್ರತವನ್ನು ಮುಗಿಸಿ, ತನ್ನ ಶೀಲವನ್ನೂ, ಶುದ್ಧವಾದ ನಡತೆಯನ್ನೂ, ಆಚಾರವನ್ನೂ ಲೋಕಕ್ಕೆ ಪ್ರಕಾಶಗೊಳಿಸಿದನು. ಇದರಿಂದ ಅವನ ಮಹಿಮೆಯೂ, ಕೀರ್ತಿಯೂ ಲೋಕಪ್ರಖ್ಯಾತವಾಯಿತು. ಆಗ ಅರ್ಜುನನು, ಇದರಿಂದ ತಾನು ಕೃತಾರ್ಥನೂ, ಶುದ್ಧನೂ ಆದೆನೆಂದು ತಿಳಿದು ನಿಶ್ಚಿಂತನಾಗಿ ಸಂತೋಷದಿಂದಿದ್ದನು. ಆಗ ಯುಧಿಷ್ಠಿರನು ವಿರಾಟನನ್ನು ನೋಡಿ, "ಮಹಾರಾಜಾ! ನಿನ್ನಲ್ಲಿ ನಾನು ಪ್ರೀತಿಗೊಂಡೆನು. ನಿನಗೆ ಮಂಗಳವಾಗಲಿ. ಈಗ ನೀನು ನನಗೆ ಪರಮಸ್ನೇಹಿತನಾಗಿರುವೆ! ನಾವು ಯಾರಿಗೂ ತಿಳಿಯದಂತೆ ನಿನ್ನ ಆಶ್ರಯದಲ್ಲಿ ಸುಖವಾಗಿ ವಾಸಮಾಡಿದೆವು" ಎಂದನು. ಓ ಜನಮೇಜಯರಾಜಾ! ಧರ್ಮಾತ್ಮನೂ, ಕಠಿನವ್ರತವುಳ್ಳವನೂ ಆದ ಆ ಯುಧಿಷ್ಠಿರನು, ವಿರಾಟನಗರದಲ್ಲಿ ವಿಶೇಷವಾಗಿ ಸತ್ಕರಿಸಲ್ಪಟ್ಟನು. ಅವನಿಗೆ ವಿರಾಟನು ಅಭಿಷೇಕವನ್ನು ಮಾಡಿ, ರತ್ನಗಳಿಂದಲೇ ಅರ್ಚಿಸಿದನು. ಧರ್ಮರಾಜನ ಮಾತನ್ನು ಕೇಳಿ ವಿರಾಟನು ಬಹಳ ಸಂತೋಷಗೊಂಡು, ಅವನನ್ನು ಬಹಳ ಪ್ರೀತಿಯಿಂದ ತೋಳುಗಳನ್ನು ನೀಡಿ ಆಲಿಂಗಿಸಿಕೊಂಡನು. ಪಾಂಡವರಿಗೆ ಬೇಕಾದಹಾಗೆ ಧನವನ್ನೂ ಕೊಟ್ಟನು.

ಓ ಜನಮೇಜಯರಾಜಾ! ಕೇಳು! ಇಪ್ಪತ್ತರಲ್ಲಿ ಯುದ್ಧದಿಂದ ಪರಾಜಿತರಾದ ಕೌರವರೆಲ್ಲರೂ, ದಾರಿಯಲ್ಲಿ ಒಂದಾಗಿ ಸೇರಿ, ಮುಂದೆ ತಮಗೆ ಹಿತವಾದ ಆಲೋಚನೆಯನ್ನು ಮಾಡತೊಡಗಿದರು. ಅಶ್ವತ್ಥಾಮನೂ, ಶಕುನಿಯೂ, ದುರ್ಯೋಧನನೂ, ಕರ್ಣನೂ ಒಂದಾಗಿ ಕಲೆತು, ಧರ್ಮರಾಜನಬಳಿಗೆ ಒಂದು ಸಂದೇಶದೊಡನೆ ಒಬ್ಬ ದೂತನನ್ನು ಕಳುಹಿಸಿಕೊಟ್ಟರು. ಆ ದುರ್ಯೋಧನನ ಕಡೆಯಿಂದ ಬಂದ ಆ ದೂತನು ಧರ್ಮರಾಜನ ಮುಂದೆ ನಿಂತು "ಓ ಪಾರ್ಥಾ! ಈ ಧನಂಜಯನಿಂದ ತಿರುಗಿ ಹನ್ನೆರಡು ವರ್ಷಗಳವರೆಗೆ ಕಾಡಿಗೆ ಹೋಗಬೇಕಾಗಿ ಬಂದಿತು. ಮಾಡುವುದೇನು ನಿನ್ನ ಪ್ರತಿಜ್ಞೆಗೆ ನೀನು ಬದ್ಧನಾಗಿರು. ಏಕೆಂದರೆ, ನಿನ್ನ ತಮ್ಮನಾದ ಕಿರೀಟಿಯು, ಹದಿಮೂರನೆಯ ವರ್ಷದೊಳಗಾಗಿಯೇ ಕೌರವರ ಕಣ್ಣಿಗೆ ಬಿದ್ದುಬಿಟ್ಟನು" ಎಂದನು. ಈ ಮಾತನ್ನು ಕೇಳಿ ಧರ್ಮರಾಜನು ಘಟ್ಟಯಾಗಿ

ನಕ್ಕು, 'ಎಲೈ ದೂತನೆ! ನೀನು ಬೇಗನೆ ಹೋಗಿ ದುರ್ಯೋಧನನಿಗೆ ನನ್ನ ಮಾತಿನಿಂದ ಹೀಗೆಂದು ತಿಳಿಸು. ಶಂತನುಪುತ್ರನೂ, ನಮ್ಮ ಪಿತಾಮಹನೂ ಆದ ಭೀಷ್ಮನು ಇದರ ನಿರ್ಣಯವನ್ನು ಬಲ್ಲನು. ನಮಗೆ ಹದಿಮೂರನೆಯವರ್ಷವು ಮುಗಿದಮೇಲೆಯೇ ಧನಂಜಯನು ಯುದ್ಧಮಧ್ಯದಲ್ಲಿ ತನ್ನ ಧನುಸ್ಸಿನ ಟಂಕಾರಧ್ವನಿಯನ್ನು ತೋರಿಸಿರುವನು. ಅದು ಹೇಗಿದ್ದರೂ, ಹದಿಮೂರನೆಯ ವರ್ಷವು ತುಂಬಿತೋ ಇಲ್ಲವೋ, ಎಂಬುದನ್ನು ಪಿತಾಮಹನು ಹೇಳಲಿ. ಅವನಿಗೆ ಯಾವುದು ನಿಜವೋ, ಅದೇ ನಮಗೂ ಪ್ರಮಾಣವು'' ಎಂದನು. ಒಡನೆಯೇ ದೂತನು ದುರ್ಯೋಧನನ ಬಳಿಗೆ ಬಂದು ನಿಜಾಂಶವನ್ನು ದುರ್ಯೋಧನನಿಗೆ ತಿಳಿಸಿದನು. ಆಗ ದುರ್ಯೋಧನನು ಆ ದೂತನೊಡಗೂಡಿ, ಭೀಷ್ಮ, ದ್ರೋಣ, ಕೃಪ, ಕರ್ಣಾದಿಗಳೊಡನೆಯೂ ಭೂರಿಶ್ರವಸ್ಸಿನೊಡನೆಯೂ, ಇನ್ನೂ ಅನೇಕಮಿತ್ರರೊಡನೆಯೂ ಕೂಡಿತು, ರಾತ್ರಿಯೆಲ್ಲಾ ಮಂತ್ರಾಲೋಚನೆಯನ್ನು ನಡೆಸಿದನು. ಆಗ ಮಹಾತ್ಮನಾದ ಭೀಷ್ಮನು ದುರ್ಯೋಧನನನ್ನು ಕುರಿತು '' ಓ ಕೌರವೇಂದ್ರಾ! ಪಾಂಡವರ ಪ್ರತಿಜ್ಞಾಕಾಲವು ಆಗಲೇ ತೀರಿಹೋಯಿತು. ಆ ಪ್ರತಿಜ್ಞೆಯನ್ನು ಪೂರೈಸಿದಮೇಲೆಯೇ ಅರ್ಜುನನು ಯುದ್ಧದಲ್ಲಿ ತನ್ನ ಗಾಂಡೀವಧ್ವನಿಯನ್ನು ತೋರಿಸಿರುವನು. ಓ ದುರ್ಯೋಧನಾ! ಆ ಪಾಂಡುಕುಮಾರರು ಇಂದ್ರಲೋಕವನ್ನಾದರೂ ಅಸತ್ಯದಿಂದ ಅಪೇಕ್ಷಿಸುವವರಲ್ಲ ಸತ್ಯಕ್ಕೆ ತಪ್ಪಿ ಬ್ರಹ್ಮಲೋಕವನ್ನೂ ಅವರು ಆಶಿಸುವುದಿಲ್ಲ. ನಿನಗೆ ಹಿತವಾಗಿಯೂ, ಸತ್ಯವಾಗಿಯೂ ಇರುವ ಮಾತನ್ನು ನಾನು ಹೇಳುವೆನು. ನಿನಗೆ ಯಶಸ್ಕರವೂ, ಪರಲೋಕದಲ್ಲಿ ಸದ್ಗತಿಗೂ ಕಾರಣವಾದ ನನ್ನ ಮಾತನ್ನು ಕೇಳು. ಕುಂತೀಪುತ್ರರಾದ ಪಾಂಡವರೊಡನೆ ಈಗಲೂ ಸಂಧಿಯನ್ನು ಮಾಡಿಕೊಂಡು, ಅವರೊಡನೆ ಕೂಡತೇ ನೀನು ರಾಜ್ಯಭೋಗವನ್ನು ಅನುಭವಿಸು. ಹಾಗಿಲ್ಲದೆ, ಸಮಸ್ತರಾಜ್ಯವನ್ನೂ ನೀನೇ ಅನುಭವಿಸಬೇಕೆಂಬ ಆಸೆಯಿದ್ದು, ಯುದ್ಧವನ್ನೇ ಮಾಡಬೇಕೆಂಬ ಹಠವಿದ್ದರೆ, ಯುದ್ಧಕ್ಕಾದರೂ ಸಿದ್ಧನಾಗು. ಮಹಾತ್ಮರೂ, ಬಲಶಾಲಿಗಳೂ ಆದ ಆ ನಿನ್ನ ಶತ್ರುಗಳ ರಾಜ್ಯವನ್ನು ನೀನು ಕೊನೆಯವರೆಗೆ ಇಂತಹ ಕಪಟದಿಂದಲೇ ಅನುಭವಿಸಬೇಕೆಂದರೆ ಎಂದಿಗೂ ನಿನಗೆ ಸಾಧ್ಯವಾಗದು. ನಿನಗೆ ಶಕ್ತಿಯಿದ್ದರೆ ನಿನ್ನ

ಪರಾಕ್ರಮದಿಂದ ಅವರನ್ನು ಜಯಿಸಿ, ಅಖಂಡವಾದ ರಾಜ್ಯವನ್ನನುಭವಿಸು. ಇಲ್ಲವೇ, ಯುದ್ಧದಲ್ಲಿ ನೀನು ಅವರಿಂದ ಹತನಾಗಿ ಸ್ವರ್ಗಸುಖವನ್ನನುಭವಿಸು'' ಎಂದನು.

ಓ ಜನಮೇಜಯರಾಜಾ! ಗಂಗಾಪುತ್ರನಾದ ಭೀಷ್ಮನು ಹೇಳಿದ ಈ ಮಾತನ್ನು ಕೇಳಿ ದುರ್ಯೋಧನನು ತನ್ನ ತಾಯಿತಂದೆಗಳಿಗಿದಿರಾಗಿಯೇ ಅವನನ್ನು ಕುರಿತು 'ತಾತಾ! ನಾನು ಆ ಪಾಂಡವರಿಗೆ ರಾಜ್ಯದಲ್ಲಿ ಅಣುಮಾತ್ರವನ್ನಾದರೂ ಕೊಡುವವನಲ್ಲ. ಯುದ್ಧದಲ್ಲಿ ಆ ಪಾಂಡವರೆಲ್ಲರನ್ನೂ ನಾನು ಕೊಲ್ಲುವೆನು. ಇಲ್ಲವೇ, ಅವರಿಂದ ನಾನೇ ಹತನಾಗಿ ಸ್ವರ್ಗಲೋಕವನ್ನು ಸೇರುವೆನು' ಎಂದನು. ಹೀಗೆ ಆ ಧೃತರಾಷ್ಟ್ರಪುತ್ರರೆಲ್ಲರೂ ಅರ್ಜುನನು ತನ್ನ ಪ್ರತಿಜ್ಞೆಯನ್ನು ಪೂರೈಸಿದನೆಂಬುದನ್ನು ತಿಳಿದು, ತನ್ನ ಮಿತ್ರರೊಡನೆ ವಿಧವಿಧವಾದ ಆಲೋಚನೆಗಳನ್ನು ಮಾಡುತಿದ್ದು, ಕೊನೆಗೆ ಎಲ್ಲರೂ ತಮ್ಮತಮ್ಮ ಮನೆಗಳಿಗೆ ಹೋಗಿ ಸೇರಿದರು.

ಇದು ಎಪ್ಪತ್ತೇಳನೆಯ ಅಧ್ಯಾಯವು.

ಅಜ್ಞಾತವಾಸವು ಮುಗಿದಮೇಲೆ ಪಾಂಡವರು ಉಪಪ್ಲಾವ್ಯನಗರಕ್ಕೆ ಬಂದುದು. ಪಾಂಡವರ ಆಹ್ವಾನದಮೇಲೆ ಬಲರಾಮಕೃಷ್ಣರಿಬ್ಬರೂ ಸುಭದ್ರೆಯನ್ನೂ, ಅಭಿಮನ್ಯುವನ್ನೂ ಕರೆದುಕೊಂಡು, ಉಪಪ್ಲಾವ್ಯಕ್ಕೆ ಬಂದುದು. ದ್ರುಪದಾದಿಗಳು ಉಪಪಾಂಡವರೊಡನೆ ಬಂದು ಸೇರಿದುದು. ಅಭಿಮನ್ಯುವಿಗೂ ಉತ್ತರೆಗೂ ವಿವಾಹವು.

ಓ ಜನಮೇಜಯರಾಜಾ! ಕೇಳು! ಆ ಐದುಮಂದಿ ಪಾಂಡವರೂ ಅಜ್ಞಾತವಾಸದಿಂದ ಹದಿಮೂರನೆಯ ವರ್ಷವನ್ನು ಕಳೆದಮೇಲೆ, ಆ ವಿರಾಟನ ರಾಜಧಾನಿಯನ್ನು ಬಿಟ್ಟು, ಆದೇ ರಾಜನಿಗೆ ಸೇರಿದ ಉಪಪ್ಲಾವ್ಯವೆಂಬ ಪುರದಲ್ಲಿ ವಾಸಿಸುತ್ತಿದ್ದರು. ಉತ್ತರೆಗೂ, ಅಭಿಮನ್ಯುವಿಗೂ ವಿವಾಹವು ನಿಶ್ಚಿತವಾದ ಕೂಡಲೆ, ಧರ್ಮರಾಜನು ಬಂಧುಮಿತ್ರರು ಮೊದಲಾಗಿ

ತನ್ನ ಕಡೆಯವರೆಲ್ಲರಿಗೂ ದೂತರ ಮೂಲವಾಗಿ ಆಹ್ವಾನವನ್ನು ಕಳುಹಿಸಿದನು. ವಿರಾಟರಾಜನೂ ತನ್ನ ಬಂಧುಮಿತ್ರವರ್ಗಗಳಿಗೆಲ್ಲ ದೂತರಮೂಲಕವಾಗಿ ಆಹ್ವಾನವನ್ನು ಕಳುಹಿಸಿದನು. ಪಾಂಡವರು ಉಪಪ್ಲಾವ್ಯದಲ್ಲಿದ್ದುಕೊಂಡು, ಅಲ್ಲಲ್ಲಿಗೆ ದೂತರನ್ನು ಕಳುಹಿಸಿದಮೇಲೆ, ವನಮಾಲಿಯಾದ ಶ್ರೀಕೃಷ್ಣನು, ಆ ದೂತವಾಕ್ಯವನ್ನು ಕೇಳಿದಕ್ಷಣವೇ, ಸುಭದ್ರೆಗೆ ಪ್ರಿಯಪುತ್ರನೂ, ತನ್ನ ಸೋದರಳಿಯನೂ ಆದ ಅಭಿಮನ್ಯುವನ್ನೂ, ಅಣ್ಣನಾದ ಬಲರಾಮನನ್ನೂ ಸಂಗಡ ಕರೆದುಕೊಂಡು, ಎಲ್ಲಾ ಯಾದವಪ್ರಧಾನರೊಡಗೂಡಿ, ಶಂಖ, ದುಂದುಭಿ ಮೊದಲಾದ ಮಂಗಳವಾದ್ಯಘೋಷಗಳೊಡನೆ ವಿರಾಟನಗರಕ್ಕೆ ಹೊರಟನು. ಹೃದೀಕಪುತ್ರನಾದ ಕೃತವರ್ಮನು, ಯುಯುಧಾನನು, ಸಾತ್ಯಕಿ, ಅನಾಧೃಷ್ಟಿ, ಅಕ್ರೂರನು, ಸಾಂಬನು, ನಿಶಠನು, ಮಹಾಬಾಹುವಾದ ಪ್ರದ್ಯುಮ್ನನು, ಬಲಾಢ್ಯನಾದ ಉಲ್ಮುಕನು, ಈ ಮೊದಲಾದ ಯಾದವರೆಲ್ಲರೂ, ಅಭಿಮನ್ಯುವನ್ನೂ, ಅವನ ತಾಯಿಯಾದ ಸುಭದ್ರೆಯನ್ನೂ ಮುಂದಿಟ್ಟು, ಶ್ರೀಕೃಷ್ಣ ಬಲರಾಮರೊಡಗೂಡಿ, ಪಾಂಡವರನ್ನು ನೋಡಬೇಕೆಂಬ ಮಹೋತ್ಸಾಹದಿಂದ ಹೊರಟು ಬಂದರು. ಬಹು ಕಾಲದವರೆಗೆ ಕಾಡಿನಲ್ಲಿ ಪಾಂಡವರೊಡನೆಯೇ ಇದ್ದು, ಕಳೆದ ಒಂದು ವರ್ಷದಿಂದ ಅಜ್ಞಾತವಾಸಕಾಲದಲ್ಲಿ ಅವರನ್ನಗಲಿದ್ದ ಇಂದ್ರಸೇನಾದಿಗಳು, ಒಳ್ಳೇ ಅಲಂಕೃತಗಳಾದ ಅನೇಕ ರಥಸದೂಹಗಳೊಡನೆ ಹೊರಟುಬಂದರು. ಹತ್ತುಸಾವಿರ ಆನೆಗಳೂ, ಅದಕ್ಕೆ ದ್ವಿಗುಣವಾಗಿ ಕುದುರೆಗಳೂ, ನಿಯುತಸಂಖ್ಯಾಕಗಳಾದ ರಥಗಳೂ, ನಿಖರ್ವಸಂಖ್ಯೆಯುಳ್ಳ ಪದಾತಿಗಳೂ ಅವರೊಡನೆ ಹೊರಟುವು. ಶ್ರೀಕೃಷ್ಣನು ಹೊರಟಾಗ, ವೃಷ್ಣಿಗಳೂ, ಅಂಧಕರೂ, ಭೋಜರೂ ನೂರಾರು ಸಂಖ್ಯೆಯಿಂದ ಅವನನ್ನು ಹಿಂಬಾಲಿಸಿದರು. ಹೀಗೆ ಕೃಷ್ಣನು ಸಮಸ್ತಯಾದವರೊಡನೆ ಹೊರಟುಬರುವ ವೃತ್ತಾಂತವನ್ನು ಕೇಳಿ, ಇತ್ತಲಾಗಿ ಪಾಂಡವರೆಲ್ಲರೂ ಅತ್ಯಂತ ಸಂತೋಷದಿಂದ ವಿರಾಟರಾಜನೊಡಗೂಡಿ, ಶಂಖ, ದುಂದುಭಿ ಮೊದಲಾದ ಮಂಗಳವಾದ್ಯಗಳೊಡನೆ ಕೃಷ್ಣನನ್ನು ಇದಿರುಗೊಳ್ಳುವುದಕ್ಕಾಗಿ ಹೊರಟರು. ಶ್ರೀಕೃಷ್ಣನನ್ನು ಕಂಡೊಡನೆ ಪಾಂಡವರಿಗೆ ಮಿತಿಮೀರಿದ ಸಂತೋಷದಿಂದ ಕಣ್ಣುಗಳಲ್ಲಿ ಆನಂದಬಾಷ್ಪಗಳು ತುಳುಕುತಿದ್ದುವು. ಆಗ ಪಾಂಡವರು

ಶ್ರೀಕೃಷ್ಣನ ಪಾದಗಳನ್ನು ಹಿಡಿದು ನಮಸ್ಕರಿಸಿ "ಓ ಜನಾರ್ದನಾ! ನಿನ್ನ ಅನುಗ್ರಹದಿಂದ ನಾವು ಕಳೆದ ಹದಿಮೂರುವರ್ಷಗಳನ್ನೂ, ನಿರಪಾಯವಾಗಿ ಕಳೆದು, ನಮ್ಮ ಪ್ರತಿಜ್ಞೆಯನ್ನು ನೆರವೇರಿಸಿದೆವು. ಮುಂದೆಯೂ ನೀನೇ ನಮ್ಮನ್ನು ರಕ್ಷಿಸಬೇಕು. ಓ ದೇವದೇವೇಶಾ! ನಿನ್ನಲ್ಲಿ ಮರೆಹೊಕ್ಕಿರುವೆವು" ಎಂದರು.

ಓ ಜನಮೇಜಯರಾಜಾ! ಹೀಗೆಂದು ಹೇಳಿ, ನಮಸ್ಕಾರಮಾಡಿದ ಆ ಪಾಂಡವರನ್ನು ಕೃಷ್ಣನು ಪ್ರೀತಿಯಿಂದ ಕೈಹಿಡಿದು ಮೇಲಕ್ಕೆತ್ತಿ ಆಲಿಂಗಿಸಿದನು. ಯಾದವರೆಲ್ಲರೂ ಅವರನ್ನು ಯಥೋಚಿತವಾಗಿ ಆದರಿಸಿದರು. ವೃಷ್ಣಿವೀರರೂ ಪಾಂಡವರನ್ನು ಪ್ರೀತಿಯಿಂದ ಸತ್ಕರಿಸಿದರು. ದ್ರೌಪದಿಯು ದೇವಕೀಪುತ್ರನಾದ ಶ್ರೀಕೃಷ್ಣನ ಪಾದಗಳನ್ನು ಹಿಡಿದು ನಮಸ್ಕರಿಸಿದಳು. ದೇವದೇವನಾದ ಕೃಷ್ಣನು ಆವಳನ್ನು ಕೈಹಿಡಿದು ಮೇಲಕ್ಕೆತ್ತಿ, ಆವಳ ಕಣ್ಣುಗಳನ್ನು ತನ್ನ ಸೆರಗಿನಿಂದ ಒರೆಸುತ್ತ, ಸಮಸ್ತ ಯಾದವರ ಮುಂದೆ ಹೀಗೆಂದು ಹೇಳುವನು. "ಎಲೌ ಕಲ್ಯಾಣಿ! ಇನ್ನು ನಿನ್ನ ದುಃಖವನ್ನು ಬಿಡು! ಶೀಘ್ರದಲ್ಲಿಯೇ ನಾನು ಅರ್ಜುನನೊಡನೆ ಸೇರಿ, ಕೌರವರೆಲ್ಲರನ್ನೂ ಕೊಲ್ಲಿಸಿ, ಯುಧಿಷ್ಠಿರನಿಗೆ ರಾಜ್ಯವನ್ನೊಪ್ಪಿಸುವೆನು. ನಿನ್ನ ಮನಸ್ಸಿನ ಚಿಂತೆಯನ್ನು ಬಿಡು! ಇದೋ! ನನ್ನ ಸೋದರಳಿಯನಾದ ಅಭಿಮನ್ಯುವಿನಮೇಲೆಯೂ, ಅರ್ಜುನನಮೇಲೆಯೂ, ನನ್ನ ಮಗನಾದ ಪ್ರದ್ಯುಮ್ನನಮೇಲೆಯೂ ಆಣೆಯಿಟ್ಟು ಹೇಳುವೆನು. ನನ್ನ ಮಾತನ್ನು ಸತ್ಯವೆಂದು ನಂಬು" ಎಂದು ಹೇಳಿ, ಆ ದ್ರೌಪದಿಯನ್ನು ಕಳುಹಿಸಿಕೊಟ್ಟು, ಆಮೇಲೆ ವೃಷ್ಣಿಗಳೊಡನೆಯೂ, ಅಂಧಕರೊಡನೆಯೂ ಸೇರಿ, ಧರ್ಮರಾಜನನ್ನು ಸಂತೋಷಗೊಳಿಸುತ್ತ, ಅವನೊಡನೆ ವಾಸಮಾಡುತಿದ್ದನು. ಇಷ್ಟರಲ್ಲಿಯೇ ಕಾಶೀರಾಜನೂ, ಶೈಬ್ಯನೂ ಒಂದೊಂದು ಅಕ್ಷೌಹಿಣೀ ಸೈನ್ಯಗಳೊಡನೆ ಧರ್ಮರಾಜನಲ್ಲಿಗೆ ಬಂದು ಸೇರಿದರು. ಮಹಾಬಲಾಢ್ಯನಾದ ದ್ರುಪದನು ಮೂರುಅಕ್ಷೌಹಿಣೀ ಸೇನೆಗಳನ್ನು ಸೇರಿಸಿಕೊಂಡು, ದ್ರೌಪದಿಯ ಮಕ್ಕಳಾದ ಉಪಪಾಂಡವರೊಡನೆಯೂ, ತನ್ನ ಮಕ್ಕಳಾದ ಶಿಖಂಡಿ, ಧೃಷ್ಟದ್ಯುಮ್ನರೊಡನೆಯೂ ಉಪಪ್ಲಾವ್ಯಕ್ಕೆ ಬಂದು ಸೇರಿದನು.

ಆಗ ಯುಧಿಷ್ಠಿರನ ಕಡೆಯ ಸೇನಾಪರಿವಾರಗಳಲ್ಲಿ, ನೂರು, ಸಾವಿರ, ಲಕ್ಷ ದಶಲಕ್ಷ, ಕೋಟಿ, ಶತಕೋಟಿಸಂಖ್ಯೆಯ ಯೋಧರು ಕಲೆತಿದ್ದರು. ವರ್ಷಾಕಾಲದಲ್ಲಿ ತುಂಬಿದ ಮಹಾನದೀ ಪ್ರವಾಹಗಳು ಬೇರೆಬೇರೆಯಾಗಿ ಬಂದು ಸಮುದ್ರದಲ್ಲಿ ಒಂದಾಗಿ ಸೇರುವಂತೆ, ಅನೇಕರಾಜರು ತಮ್ಮತಮ್ಮ ಸೈನ್ಯಗಳೊಡನೆ ಧರ್ಮರಾಜನಿದ್ದಲ್ಲಿಗೆ ಬಂದು ಸೇರಿದರು. ಆ ರಾಜರಲ್ಲಿ ಯೋ ಅನೇಕರು ಭೂರಿದಕ್ಷಿಣೆಗಳುಳ್ಳ ಅನೇಕಯಾಗಗಳನ್ನು ಮಾಡಿದವರು. ವೇದಾಧ್ಯಯನವನ್ನು ಮಾಡಿ ಅವಭೃತವನ್ನು ಮುಗಿಸಿದವರು! ಮಹಾಶೂರರು! ಧರ್ಮರಾಜನಿಗಾಗಿ ತಮ್ಮ ಪ್ರಾಣಗಳನ್ನಾದರೂ ಒಪ್ಪಿಸಲು ಸಿದ್ಧರಾದವರು. ಇಂತಹ ರಾಜರೆಲ್ಲರೂ ತನ್ನಲ್ಲಿ ವಿಶ್ವಾಸದಿಂದ ಬಂದುದನ್ನು ನೋಡಿ, ಜ್ಞಾನಿಗಳಲ್ಲಿ ಮೇಲೆನಿಸಿದ ಧರ್ಮರಾಜನು ಅವರೆಲ್ಲರನ್ನೂ ಯಥೋಚಿತವಾಗಿ ಸಮ್ಮಾನಿಸಿದನು. ಆಮೇಲೆ ಶ್ರೀಕೃಷ್ಣನು ತಾನು ಉಡುಗೊರೆಯಾಗಿ ತಂದಿದ್ದ ಅನೇಕ ರತ್ನಗಳನ್ನೂ, ವಸ್ತ್ರಗಳನ್ನೂ ಸ್ತ್ರೀಯರನ್ನೂ ಪಾಂಡವರಿಗೆ ಬೇರೆಬೇರೆಯಾಗಿ ಕೊಟ್ಟನು. ಪಾಂಡವರಿಂದ ಸತ್ಕೃತರಾದ ಇತರರಾಜರೆಲ್ಲರೂ ಕೂಡ, ಅವರಿಗೆ ತಾವುತಾವು ತಂದಿದ್ದ ಬಹುಮಾನಗಳನ್ನೆಲ್ಲ ಒಪ್ಪಿಸಿ ಆ ಪಾಂಡವರು ತಮ್ಮ ಪ್ರತಿಜ್ಞೆಯನ್ನು ಪೂರ್ತಿಗೊಳಿಸಿ ಬಂದುದಕ್ಕಾಗಿ ಬಹಳ ಸಂತೋಷಗೊಂಡಿದ್ದರು. ಹೀಗೆ ಸಮಸ್ತರಾಜರೂ, ವೃಷ್ಣಿಗಳೂ ನೆರೆದಿದ್ದಾಗ, ಅಭಿಮನ್ಯುವಿಗೂ, ಉತ್ತರೆಗೂ ಅತಿ ವೈಭವದಿಂದ ಶಾಸ್ತ್ರೋಕ್ತವಾಗಿ ವಿವಾಹವು ಜರುಗಿತು. ಶಂಖ, ಮೃದಂಗ, ಗೋಮುಖ, ಡಿಂಡಿಮಾದಿ ಮಂಗಳವಾದ್ಯಗಳ ಘೋಷವು ವಿರಾಟನ ಅರಮನೆಯನ್ನೆಲ್ಲ ತುಂಬಿತು. ಪರಿಶುದ್ಧಗಳಾದ ನಾನಾತರದ ಮೃಗಗಳನ್ನು ನೂರಾರು ಲೆಕ್ಕದಿಂದ ಕೊಂದು, ಮಾಂಸಾಹಾರಗಳು ಸಿದ್ಧಮಾಡಲ್ಪಟ್ಟುವು. ಅನ್ನ ಪಾನ ಭಕ್ಷ್ಯ ಭೋಜ್ಯಾದಿಗಳೆಲ್ಲವೂ ಸಿದ್ಧವಾದುವು. ಅತಿಥಿಗಳಿಗೆ ತೃಪ್ತಿಯಾಗಿ ಭೋಜನವು ನಡೆಸಲ್ಪಟ್ಟಿತು. ಹಾಡುವವರೂ, ನಟರೂ ಗಾನನರ್ತನಗಳನ್ನು ಮಾಡುತಿದ್ದರು. ಐತಿಹಾಸಿಕರು ಅಲ್ಲಲ್ಲಿ ಇತಿಹಾಸಗಳನ್ನು ಹೇಳುತ್ತಿದ್ದರು. ವೈತಾಳಿಕರೂ, ಸೂತರೂ ಮಾಗಧರೂ ಅಲ್ಲಲ್ಲಿ ಸ್ತೋತ್ರಮಾಡುತ್ತಿದ್ದರು. ಮಂಗಳಕರವಾದ ಆ ವಿವಾಹೋತ್ಸವದಲ್ಲಿ, ದ್ರೌಪದಿಯ ಅಂತಃಪುರದಲ್ಲಿಯೂ, ವಿರಾಟನ ಅರಮನೆಯ

ಲ್ಲಿಯೂ ಇದ್ದ ವೃದ್ಧ ಸುಮಂಗಲಿಯರೂ, ತರುಣಿಯರೂ, ರಾಜಸ್ತ್ರೀಯರೂ ರಾಣಿಯಾದ ಸುದೇಷ್ಣೆಯನ್ನು ಮುಂದಿಟ್ಟುಕೊಂಡು, ಆಂದವಾದ ರೂಪಲಾವಣ್ಯಗಳಿಂದಲೂ ವೇಷಭೂಷಣಗಳಿಂದಲೂ ಒಪ್ಪುತ್ತ ವಿವಾಹಮಂಟಪಕ್ಕೆ ಬಂದು ನೆರೆದರು. ಆ ಸ್ತ್ರೀಯರ ನಡುವೆದ್ರೌಪದಿಯು ಸರ್ವಾತಿಶಯವಾದ ರೂಪದಿಂದಲೂ, ಮೈಕಟ್ಟಿನಿಂದಲೂ ಎಲ್ಲರನ್ನೂ ಮೀರಿಸಿದ್ದಳು. ಸ್ತ್ರೀಯರೆಲ್ಲರೂ ಸರ್ವಾಭರಣಭೂಷಿತೆಯರಾಗಿ, ಮಹೇಂದ್ರಕುಮಾರಿಯಂತೆ ಶೋಭಿಸುತಿದ್ದ ಉತ್ತರೆಯನ್ನು ಮುಂದಿಟ್ಟುಕೊಂಡು ವಿವಾಹಮಂಟಪದಲ್ಲಿ ನಿಂತರು. ಆಮೇಲೆ ವಿರಾಟನು ಸುವರ್ಣಮಯವಾದ ಮತ್ತು ಜಲಪೂರ್ಣವಾದ ಕಲಶವನ್ನು ತೆಗೆದುಕೊಂಡು, ತನ್ನ ಮಗಳನ್ನು ಸೊಸೆಯನ್ನಾಗಿ ಸರಿಗ್ರಹಿಸಬೇಕೆಂದು ಮೊದಲು ಅರ್ಜುನನ ಕೈಗೆ ನೀರನ್ನು ಬಿಟ್ಟನು. ಅರ್ಜುನನೂ ಕೂಡ ತನ್ನ ಮಗನಿಗಾಗಿ ಉತ್ತರೆಯನ್ನು ಪರಿಗ್ರಹಿಸುವಂತೆ ಒಪ್ಪಿಕೊಂಡನು. ಆಗ ಸುಭದ್ರಾಪುತ್ರನಾದ ಅಭಿಮನ್ಯುವು, ಇಂದ್ರನಂತೆ ರೂಪದಿಂದ ಶೋಭಿಸುತ್ತ, ಉತ್ತರೆಯ ಕೈಯನ್ನು ತನ್ನ ಕೈಯಿಂದ ಹಿಡಿದು ನಿಂತನು. ಯುಧಿಷ್ಠಿರನೂ ಉತ್ತರೆಯನ್ನು ತನ್ನ ಸೊಸೆಯನ್ನಾಗಿ ಅಂಗೀಕರಿಸಿದನು. ಶಾಸ್ತ್ರೋಕ್ತವಾಗಿ ಯಾಗಗಳನ್ನು ಮಾಡಿದವರೂ, ಅಕ್ಷೌಹಿಣೀ ಸೈನ್ಯಕ್ಕೆ ಅಧಿಪತಿಗಳೂ ಆದ ದ್ರುಪದನೂ, ವಿರಾಟನೂ ಶಿಖಂಡಿಯೂ, ಯುಯುಧಾನನೂ, ಶೈಬ್ಯನೂ, ಧೃಷ್ಟದ್ಯುಮ್ನನೂ, ಸಾತ್ಯಕಿಯೂ ಈ ಏಳುಮಂದಿಯೂ ಧರ್ಮರಾಜನನ್ನು ಸುತ್ತಿ ನಿಂತು, ಸಂಭ್ರಮದಿಂದ ವಿವಾಹಕಾರ್ಯಗಳನ್ನು ನಡೆಸಿದರು. ವಿರಾಟನ ಸಮಸ್ತ ಸೈನ್ಯವೂ ವಿವಾಹಮಂಟಪದ ಮುಂದೆ ಸಿದ್ಧವಾಗಿ ನಿಲ್ಲಲು, ವಿರಾಟನು ತನ್ನ ಮಗಳನ್ನು ಅಭಿಮನ್ಯುವಿಗೆ ಸಂತೋಷದಿಂದ ಧಾರೆಯೆರೆದುಕೊಟ್ಟನು. ಅರ್ಜುನನು ಶ್ರೀಕೃಷ್ಣನನ್ನು ಮುಂದಿಟ್ಟುಕೊಂಡು, ತನ್ನ ಮಗನಾದ ಅಭಿಮನ್ಯುವಿಗಾಗಿ ಉತ್ತರೆಯನ್ನು ಪರಿಗ್ರಹಿಸಿ, ವಿವಾಹಕಾರ್ಯಗಳನ್ನೆಲ್ಲ ನಡೆಸಿದನು.

ಓ ಜನಮೇಜಯರಾಜಾ! ನಿನ್ನ ತಂದೆಗೆ ತಂದೆಯಾದ ಆ ಅಭಿಮನ್ಯುವಿನ ವಿವಾಹವು, ಸಮಸ್ತ ವೈಭವಗಳಿಂದ ಆಶ್ಚರ್ಯಕರವಾಗಿ ನಡೆಯಿತು. ಮಹಾತ್ಮನಾದ ಧೌಮ್ಯನು ತನ್ನ ಶಿಷ್ಯರೊಡನೆ ಪುರೋಹಿತನಾಗಿದ್ದು ಹೋಮಕಾರ್ಯಗಳನ್ನು ನಡೆಸಿದನು. ಅಭಿಮನ್ಯುವು ಉತ್ತರೆಯ ಕೈಯ

ನ್ನು ಹಿಡಿದುಕೊಂಡು ಅಗ್ನಿಯನ್ನು ಪ್ರದಕ್ಷಿಣೆ ಮಾಡಿದನು. ಆಮೇಲೆ ವಿರಾಟನು ಸಂತೋಷದಿಂದ ಅಭಿಮನ್ಯುವಿಗೆ ಬೇಕಾದಷ್ಟು ಧನವನ್ನೂ, ಒಳ್ಳೆಯ ವೇಗವುಳ್ಳ ಕುದುರೆಗಳನ್ನೂ, ಇನ್ನೂರು ಉತ್ತಮ ಗಜಗಳನ್ನೂ ಬಹುವಿಧವಾದ ಧನರಾಶಿಯನ್ನೂ ತನ್ನ ಮಗಳಿಗೆ ಬಳುವಳಿಯಾಗಿ ಕೊಟ್ಟನು. ಆಗ ಧರ್ಮರಾಜನು ಕೃಷ್ಣನನ್ನು ಮುಂದಿಟ್ಟುಕೊಂಡು, ಅವನ್ನೆಲ್ಲ ಪ್ರೀತಿಯಿಂದ ಪರಿಗ್ರಹಿಸಿದನು. ವಿವಾಹವು ಮುಗಿದಮೇಲೆ ಧರ್ಮಪುತ್ರನು, ಶ್ರೀಕೃಷ್ಣನು ತನಗೆ ತಂದುಕೊಟ್ಟಿದ್ದ ಧನವನ್ನೆಲ್ಲ ಬ್ರಾಹ್ಮಣರಿಗೆ ದಾನಮಾಡಿದನು. ಸಾವಿರಾರು ಗೋವುಗಳೂ, ವಸ್ತ್ರಗಳೂ, ವಿವಿಧ ರತ್ನಗಳೂ ಎಲ್ಲಾ ಭೂಷಣಗಳೂ, ವಾಹನಗಳೂ, ಶಯನಗಳೂ ಅವರವರಿಗೆ ಬೇರೆಬೇರೆಯಾಗಿ ಕೊಡಲ್ಪಟ್ಟುವು. ವಿರಾಟನು ತನ್ನ ನಗರವಾಸಿಗಳೆಲ್ಲರನ್ನೂ ದಿವ್ಯವಸ್ತ್ರಗಳಿಂದ ತೃಪ್ತಿಗೊಳಿಸಿದನು. ಮಹೋತ್ಸವಗಳಿಗೆಲ್ಲ ಆದರ್ಶಭೂತವಾದ ಈ ಉತ್ಸವದಲ್ಲಿ, ವಿರಾಟನಗರವು ಒಂದು ಅಪೂರ್ವ ಶೋಭೆಯಿಂದ ಬೆಳಗುತಿತ್ತು. ಅಲ್ಲಿನ ಜನರೆಲ್ಲರೂ ತುಷ್ಟರಾಗಿಯೂ, ಪುಷ್ಟರಾಗಿಯೂ ನಲಿಯುತ್ತಿದ್ದರು. ಹೀಗೆ ವಿರಾಟರಾಜನು ಸುಭದ್ರೆಯ ಮಗನಾದ ಅಭಿಮನ್ಯುವಿಗೆ ತನ್ನ ಮಗಳಾದ ಉತ್ತರೆಯನ್ನು ಕೊಟ್ಟು, ಮಂತ್ರಿಗಳೊಡನೆಯೂ, ಪುರಜನದೊಡನೆಯೂ, ದೇಶಜನದೊಡನೆಯೂ ಪರಮಸಂತೋಷದಿಂದಿದ್ದನು" ಎಂದನು. ಆಗ ಜನಮೇಜಯರಾಜನು ವೈಶಂಪಾಯನನನ್ನು ಕುರಿತು "ಓ ಮಹರ್ಷೀ! ಈ ಅಭಿಮನ್ಯುವಿನ ವಿವಾಹವಾದಮೇಲೆ ಯುಧಿಷ್ಠಿರನು ಹೇಳಿದುದೇನು? ಮುಂದೆ ಪಾಂಡವರೇನು ಮಾಡಿದರು? ಈ ಅಂಶವನ್ನೆಲ್ಲ ವಿಸ್ತಾರವಾಗಿ ನನಗೆ ತಿಳಿಸಬೇಕು" ಎಂದನು.

ಇದು ಎಪ್ಪತ್ತೆಂಟನೆಯ ಅಧ್ಯಾಯವು.

ಇಲ್ಲಿಗೆ ವೈವಾಹಿಕಪರ್ವವು ಮುಗಿದುದು.

ವಿರಾಟಪರ್ವವು ಸಮಾಪ್ತವು.

[ಇದರ ಮುಂದಿನದು ಉದ್ಯೋಗಪರ್ವವು:—ಆ ಪರ್ವದ ಮೊದಲನೆಯ ಶ್ಲೋಕಾರ್ಥವೇನೆಂದರೆ, ಪಾಂಡವರೆಲ್ಲರೂ ಹೀಗೆ ಅಭಿಮನ್ಯುವಿಗೆ ವಿವಾಹವನ್ನು ಮಾಡಿ, ತಮ್ಮ ಕಡೆಯವರೊಡನೆ ಸಂತೋಷದಿಂದ ಆ ರಾತ್ರಿಯನ್ನು ಕಳೆದು, ಬೆಳಗಾದಮೇಲೆ ವಿರಾಟನ ಸಭೆಗೆ ಬಂದರು.]

ಮುದ್ರಣ

ಪೀಪಲ್ಸ್ ಪ್ರಿಂಟಿಂಗ್ ಎಂಡ್ ಪಬ್ಲಿಷಿಂಗ್ ಹೌಸ್, ಲಿಮಿಟೆಡ್‌ನಲ್ಲಿ
ಮುದ್ರಿಸಲ್ಪಟ್ಟಿತು.